Wishing You A Happy New Year!

BALAJI TALKIES, MANGALORE.

EXHIBITORS OF HIGH CLASS
PICTURES:
LATEST INDIAN FILMS
GREATEST OF HOLLYWOOD'S
TO PLEASE YOU!
ALWAYS KEEPING PACE WITH
PROGRESS

BALAJI

THE MODERN SHOW—HOUSE.



SITUATED IN THE
CENTRE OF THE TOWN
(Mission High School Road)
SEATING COMFORTS

SPACIOUS—AIRY—COOL
AUDITORIUM

BALAJI

THE PLEASURE HOUSE
OF THE ELITE

'THE BEST THEATRE ON THE WEST COAST' "Says Mr. P. K. BHANDARKAR of R. K. O. Radio Pictures.

BALAJI — to give you the utmost the filmdom can give — **BALAJI**

STEP IN TODAY,—INTO THIS TEMPLE OF ART

AND FEEL THAT NEW JOY. THAT NEW PLEASURE!

ಬಾಲಾಜಿ ಟೋಕಿಸ್— ಮಂಗಳೂರಿನ ಹೊಸ ಸಿನೆಮಾ ಗೃಹ!

ಹಿಂದೂದೇಶದ ಹಾಗೂ ವಿದೇಶೀಯ ಅತ್ಯುತ್ತಮ ಚಿತ್ರಗಳನ್ನು ಪ್ರದರ್ಶಿಸುವ

— ಕಲಾಮಂದಿರ —

ತಂಪಾದ ಭವನ! ಸ್ಥಳ ಸೌಕರ್ಯ! ನಗರದ ಕೇಂದ್ರ!

ನವವರ್ಷವು ಸರ್ವರಿಗೂ ಸುಖಸಂಪತ್ಸಮೃದ್ಧಿಗಳನ್ನು ತರಲೆಂದು ಹಾರೈಸಿ,
ನಿಮ್ಮನ್ನು ಈ ಕಲಾಮಂದಿರಕ್ಕೆ ಆಹ್ವಾನಿಸುವೆವು.

ನಿಮಗೆ
ಸಕಲ ಸೌಕರ್ಯಗಳನ್ನೂ
ಉತ್ಕೃಷ್ಟ ಚಿತ್ರಗಳನ್ನೂ ಕೊಡುವುದೇ
ನಮ್ಮ ಧ್ಯೇಯ

ಬಾಲಾಜಿ

ಕಲೆಗಾಗಿ ನೀವು ವ್ಯಯಿಸುವ ಹಣವು
ಸದ್ವಿನಿಯೋಗವಾಯಿತೆಂಬ
ತೃಪ್ತಿಯನ್ನು ನಿಮಗೆ ಕೊಡಬೇಕೆಂದೇ
ನಮ್ಮ ಉತ್ಕಟೇಚ್ಛೆ

JOYOUS VISIT!

Merry Christmas! Make it merrier by a visit,--Joyous, economicl!

Buy the best at moderate rates

Toys, Toiletry, Perfumes, Flex Shoe, Ladies Hat, Suit Cases, Glassware, Chinaware, everything Household. Etc. Etc.

PRESENTATION ARTICLES A SPECIALITY!

Varieties to choose! Plentiful to pick!

SRI KRISHNA NOVELTY HOUSE
MARKET ROAD, MANGALORE.
The house for the Elite!
Wishing all a Happy New Year.

ನವವರ್ಷವು ಸರ್ವರಿಗೂ ಸುಖದಾಯಕವಾಗಲಿ!
ನಿಮ್ಮ ಹೊಸ ವರುಷದ ಸಂತೋಷವನ್ನು ವರ್ಧಿಸಿಕೊಳ್ಳಿ.
ಕ್ರಿಸ್‌ಮಸ್, ಹೊಸವರ್ಷ ಅಥವಾ ನಿತ್ಯೋಪಯೋಗ
ಮೊದಲಾದುವುಗಳಿಗೆ ನಿಮಗೆ ಬೇಕಾಗುವ
ಯಾವತ್ತೂ ತರದ ಸರಕುಗಳು!

ಗೊಂಬೆಗಳು, ಸುಗಂಧ ದ್ರವ್ಯಗಳು, ಹಣ್ಣುಗಳು, ಸೂಟ್ ಕೇಝುಗಳು. ಪಿಂಗಾಣಿ ಸಾಮಾನುಗಳು, ಫೌಂಟನ್‌ಪೇನುಗಳು, ಸ್ಟೇಷನರಿ, ಕಟ್ಲೆರಿ, ಇನ್ನೂ ನೂರಾರು ಬಗೆ, ನಿಮಗೆ ಬೇಕಾದಷ್ಟು ಹೇರಳವಾಗಿ ಇಲ್ಲಿವೆ!

ಉಡುಗೊರೆಯ ಬಗ್ಗೆ ನಾನಾ ಬಗೆಯ ಸಾಮಾನುಗಳು!

ಶ್ರೀ ಕೃಷ್ಣಾ ನೊವೆಲ್ಟಿ ಹೌಸ್
ಮಾರ್ಕೆಟ್ ರಸ್ತೆ, ಮಂಗಳೂರು.
ಸರ್ವರಿಗೂ ಭರವಸೆಯಿಂದ ವ್ಯಾಪಾರವಾಡುವ ಸಂಸ್ಥೆ.

The New Guardian of India Life Insurance Co. Ltd.

(HEAD OFFICE—**MADRAS**)

The Hon'ble Mr. M. Ct. M. CHIDAMBARAM CHETTYAR, Avl.

(CHAIRMAN.)

MEMBER: COUNCIL OF STATE.

CHAIRMAN: The United India Life Ass. Co. Ltd. Madras.
The United India Fire & General Insurance Co. Ltd., Madras.
The Indian Overseas Bank, Ltd. Madras.

WAR OR NO WAR

A POLICY IN NEW GUARDIAN IS AN EXCELLENT ASSET and ITS RFPRESENTATION, A TURNING POINT IN LIFE.

For Agency particulars apply to:

1. Sri. K. Narayan Rao, Senior Inspector, Karkal.
2. Sri. Janardhana Kamath, B. Sc., (Hons). Supdt. of Agencies, C/o Messrs. M. A. Krishna Nayak & Sons, Mangalore.
3. Sri F. P. Lobo, Supdt. of Agencies, Hubli.
4. Sri. M. T. Kordale Organiser, North Kanara.
5. Sri. S. S. Seetharamiah. Organiser. Virajpet

There are a few Openings for Special Agents, Organisers and Inspectors in Hubli, Belgaum, South and North Kanara, Malabar and full particulars can be had from:

The Branch Secretary,
Hampankatta, Mangalore.

VARIETY STORES

Market Road, MANGALORE

A SHOP THAT WILL CATER TO ALL YOUR NEEDS IN

EVERYTHING THAT IS FANCY

Prabhu's **INK** – *Prabhu's* **FRENCH POLISH** – *Prabhu's* **SOAPS**

For your Fount Pens — For your Furniture — To suit your Taste

ARE THE BEST! HAVE YOU TRIED THEM?

K. B. PRABHU & Co. (INDIA) LTD., CALICUT.

AGENTS:—M. A. Krishna Nayak & Sons, Bunder, Mangalore.

Bhuvanendra Products, Ltd.,

Katapady, South Kanara.

Branch: KUMTA, North Kanara Depot: HUBLI

Life without ailment
will bring you the real happiness.

BHUVANENDRA
CHYAVANPRASH
WITH GOLD

Will make you free from Consumption,
Coughs, and other Lung affections

IT IS AN IDEAL HEART TONIC

Also very useful in all sorts of debiliating deseases.

ಆರೋಗ್ಯವೇ ಮಿಗಿಲಾದ ಸಂಪತ್ತು

ಭುವನೇಂದ್ರ

ಸ್ವರ್ಣಮಿಶ್ರಿತ ಚ್ಯವನಪ್ರಾಶ

ಕ್ಷಯ, ಕೆಮ್ಮು, ಉಬ್ಬಸ ಮುಂತಾದ ಶ್ವಾಸೋಚ್ಛ್ವಾಸ ಅಂಗಗಳ
ಪೀಡೆಗಳಿಂದ ನಿಮ್ಮನ್ನು ರಕ್ಷಿಸುವ ಕವಚ!

ದೇಹದಲ್ಲಿ ಹೊಸ ಶಕ್ತಿಯನ್ನು ಹುಟ್ಟಿಸುವ, ಧಾತು ವೃದ್ಧಿ
— ಮಾಡುವ ಬಲವರ್ಧಕ ರಸಾಯನ. —

ಬ್ರಾಂಚ್: ಕುಮಟಾ, ಉ. ಕನ್ನಡ. ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್, ಲಿಮಿಟೆಡ್,
ಕಟಪಾಡಿ, ದಕ್ಷಿಣ ಕನ್ನಡ.

For your Life Assurance-

Consult

KOCHIKAR BROTHERS, LTD.,

Applications for agencies from honest, hardworking young gentlemen will be considered.

For particulars apply to:—

KOCHIKAR BROTHERS, LTD.,

Madras Branch Secretaries,

BOMBAY LIFE ASSURANCE CO., LTD.

Bombay Life Building

UDIPI.

Or to our Offices at:

MANGALORE, CALICUT, MADRAS, BANGALORE,
BOMBAY & TRIVANDRUM.

The Southern India Confectionery Factory,

MANUFACTURERS OF SUPERIOR CONFECTIONERY,

Props V. S. & SONS. **KUMBAKONAM.**

High Class Confectionery, etc. Support Indian Industry

ALL VARIETIES OF BOILED GOODS —PAN GOODS— LOZENGE GOODS

Wholesale Stockists: **M/s. K. ANNAPPA SHANBHOGUE & BROS.,**

General Merchants, Market Road, MANGALORE.

ಸದರ್ನ್ ಇಂಡಿಯಾ ಕನ್ಫೆಕ್ಷನರಿ ಫೆಕ್ಟರಿ, ಕುಂಭಕೋಣಂ

ಶುದ್ಧ ಸ್ವದೇಶಿ ಕೈಗಾರಿಕೆ! ಇವರ ಅತ್ಯುತ್ತಮ ಪೆಪ್ಪರ್‌ಮಿಠಾಯಿಗಳು! ಅತ್ಯುತ್ತಮ ತಯಾರಿ!

ಸ್ಟಾಕಿಸ್ಟ್ಸ್: ಮೆಸರ್ಸ್ ಕೆ. ಅಣ್ಣಪ್ಪ ಶ್ಯಾನಭಾಗ ಎಂಡ್ ಬ್ರದರ್ಸ್, ಮಾರ್ಕೆಟ್ ರಸ್ತೆ, ಮಂಗಳೂರು.

KUDVA & CO.,

(The De-Lux Shop of Mangalore)

C. P. C. Buildings,

Hampankatta, MANGALORE.

Invites the kind attention of General Public at their Wonderous Show of:—

Glassware — Toilet requisites — Headwear — Chinaware
Oilman Stores — Sweaters — Lampwear — Provisions
Footwear—Suit Cases—Toffees & Biscuits—etc., etc.

Presentation articles, novel, sensational!
Step in today & save while you Shop!

Wishing you a Happy New Year!

ಕುಡ್ವಾ ಎಂಡ್ ಕೋ

[ಮಂಗಳೂರಿನ ಅತ್ಯಾಧುನಿಕ, ನೂತನ ವ್ಯಾಪಾರಿ ಸಂಸ್ಥೆ.]

ಸಿ. ಪಿ. ಸಿ. ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಹಾಜನರು ಇತ್ತ ಗಮನಿಸಬೇಕಾಗಿ ನಮ್ಮ ಸವಿನಯ ಸೂಚನೆ:
ಈಗಾಗಲೇ ಬಂದ—

ಗಾಜಿನ ಸಾಮಾನುಗಳು—ಅಲಂಕಾರ ದ್ರವ್ಯಗಳು—ಹ್ಯಾಟ್ ಮೊದಲಾದುವು—ಪಿಂಗಾಣಿ ಸಾಮಾನುಗಳು—ಸುಗಂಧ ತೈಲಗಳು— ಸ್ವೆಟ್ಟರುಗಳು—ಲ್ಯಾಂಪುಗಳು—ಬಿಸ್ಕೂಟು, ಡಬ್ಬಿಹಾಲು— ಪಾದರಕ್ಷೆಗಳು—ಸ್ಯೂಟ್‌ಕೇಸುಗಳು ಚೊಕಲೇಟುಗಳು— ಇತ್ಯಾದಿ, ಇತ್ಯಾದಿ.

ಉಡುಗೊರೆಯ ನವನವೀನ ನೂರಾರು ಬಗೆಯ ಸಾಮಾನುಗಳು.



SRI. T. T. KRISHNAMACHAR, M. L. A.,
President: Merchants' Holiday Annual, Mangalore,
ಶ್ರೀ। ಟಿ. ಟಿ. ಕೃಷ್ಣಮಾಚಾರ್, ಎಮ್. ಎಲ್. ಎ.,
ಮರ್ಚಂಟ್ಸ್ ಹೊಲಿಡೇ ಮರ್ಕಂತಿಯ ಅಧ್ಯಕ್ಷರು.

ಪೊಡವಿಸಿರಿ ಜಯಪಡೆದು ಓಲಗಕೆ
ಬಹಕಾಲ
ವಮರಿಹುದು ಮುಂಜಾನೆ
ಯೆಂಬ ತನಿಬೆಳಗಂ
ರವಿಪಿಡಿದು ಬಹನೆಂದು ದೂತ್ಯ
ಪೇಳ್ವೊಲು, ಸು–ಪ್ರ–
ಭಾ–ತ–ವಾಣಿಯದಿದೋ
ಸಾರ್ದಪುದು ಮುನ್ನಂ

ಪ್ರಭಾತ

1940

ಜನಕೆ ಜಾಗೃತಿಯುದಯವಿದುವೆ,
ತಾಮಸ ಜಡತೆ–
ಗಳೆವ ವಿಜಯವ ಸಾರ್ವ
ಮೊದಲ ತೂರ್ಯಂ
ಬಗೆಗೆ ಬಾಹ್ಯಜ್ಞಾನವೀವಾದ್ಯ
ಶಕ್ತಿಯಿದು,
ಸದಮಲಾಂತಃಕರಣ ತರುಣ
ಪ್ರಭಾತಂ.

ಪ್ರಭಾತ ವಾಣಿಜ್ಯ ಸಂಚಿಕೆ **PRABHATH** **Holiday Annual**



ಸಾಹುಕಾರರಲ್ಲಿ ಪ್ರಭಾತದ ನಿವೇದನೆ.

ಜಿಲ್ಲೆಯ ಸಾಹುಕಾರರು ಆನಂದದಿಂದ, ತಮ್ಮ ರಜಾದಿನದ ಪ್ರಥಮ ವರ್ಧಂತಿಯನ್ನು ಆಚರಿಸುವ ಈ ಶುಭ ಸಂದರ್ಭದಲ್ಲಿ ಪ್ರಭಾತವು ಈ ವಿಶೇಷಾಂಕವನ್ನು ಅವರಿಗೆ ತನ್ನ ಅಲ್ಪ ಕಾಣಿಕೆಯಾಗಿ ಅರ್ಪಿಸುತ್ತದೆ. ವಿಶೇಷಾಂಕಗಳು ಹೊರಡಲು ವರುಷದಲ್ಲಿ ಅನೇಕ ಸಂದರ್ಭಗಳಿವೆಯಾದರೂ, ರಜಾದಿನದ ವರ್ಧಂತಿಯ ಈ ಕಾಲವನ್ನು ಪ್ರಭಾತವು ಇಂತಹ ವಿಶೇಷಾಂಕವು ಇದೇ ಮೊದಲನೆಯದೆಂಬ ಗೌರವದ ನೆನಹಿನಿಂದ, ಅತ್ಯಂತ ಮಹತ್ವದ ಕಾಲವೆಂದು ತಿಳಿದು ಇದನ್ನು ಪ್ರಕಟಿಸುವ ಸಾಹಸಕ್ಕೆ ಕೈಹಚ್ಚಿದುದಾಗಿದೆ. ಈ ವಿಶೇಷಾಂಕವು, ಪ್ರಪಂಚ ಯುದ್ಧದ ವಿಷಮ ಕಾಲದಲ್ಲಾದರೂ, ನಮ್ಮ ನಿರೀಕ್ಷೆಗೆ ಮಿಗಿಲೆನಿಸುವಂತೆ ಹೊರಡಲು ಸಾಹುಕಾರರ ಬೆಂಬಲವೂ ಸತ್ಸಹಾಯವೂ ಕಾರಣವಾಗಿದೆ.

ಸಾಹುಕಾರರಿಗೆ ಪರ್ವಕಾಲದಲ್ಲಿ ಹೊರತು ಮಿಕ್ಕ ಸಮಯದಲ್ಲಿ ರಜೆಯೆಂಬುದಿರಲಿಲ್ಲ. ತಿಂಗಳಿನ ಎಲ್ಲ ರವಿವಾರಗಳನ್ನು ರಜಾದಿನಗಳಾಗಿ ಆಚರಿಸುವ ಪಾಶ್ಚಾತ್ಯ ಪದ್ಧತಿಯು ಕ್ರೈಸ್ತ ಸಂಸ್ಥೆಗಳಲ್ಲೂ ಮತ್ತು ರಿಜಿಸ್ಟರ್ಡ್ ಸಂಸ್ಥೆಗಳಲ್ಲೂ ಮಾತ್ರ ಇರುತ್ತದೆ. ಆದರೆ, ಕೆಲವು ವರ್ಷಗಳಿಂದ ಗುಜರಾಥಿ ಸಾಹುಕಾರರು ಗುಜರಾಥದಲ್ಲಿರಲಿ—ಬೊಂಬಾಯಿಯಲ್ಲಿರಲಿ—ದೇಶದ ಮತ್ತಾವುದೇ ಭಾಗದಲ್ಲಿರಲಿ—ಪ್ರತಿಯೊಂದು ಅಮಾವಾಸ್ಯೆಯನ್ನು ರಜಾದಿನವಾಗಿ ಆಚರಿಸುತ್ತಿರುವರು. ಇತರ ಸಾಹುಕಾರರಿಗೆ ರಜಾದಿನವೆಂಬುದು ಇರಲಿಲ್ಲ. ಸಾಹುಕಾರರಿಗೂ ನೌಕರರಿಗೂ, ತಿಂಗಳಲ್ಲಿ ಒಂದು ದಿನವಾದರೂ ವ್ಯಾಪಾರ ವಹಿವಾಟುಗಳನ್ನು ಮರೆತು ಆರಾಮ ಹೊಂದಲು, ಅಥವಾ ಅವಿಶ್ರಾಂತವಾಗಿ ಶ್ರಮಿಸಿ ಉಂಟಾದ ದಣುವನ್ನು ವಿಹಾರಸುಖದಿಂದ ನೀಗಿಸಿ ಮನಸ್ಸನ್ನು ಪುನರ್ಚೇತನಗೊಳಿಸಲು ರಜೆಯು ಅವಶ್ಯವಿತ್ತು. ತಿಂಗಳಲ್ಲಾವುದಾದರೂ ದಿನವನ್ನು ರಜಾದಿನವನ್ನಾಗಿ ಆಚರಿಸಬೇಕೆಂಬ ಬಗ್ಗೆ ಕೆಲವು ವರ್ಷಗಳ ಹಿಂದೆ ಇಲ್ಲಿ ಯತ್ನಗಳು ನಡೆದಿದ್ದುವೆಂದೂ, ಆದರೂ ಪೂರ್ಣ ಸಹಕಾರ ದೊರೆಯದೆ ಅವು ವಿಫಲವಾದುವೆಂದೂ ಕೇಳಿರುವೆವು. ಆದರೆ, ಶ್ರೀ। ಮಣೇಲ ಅಣ್ಣಪ್ಪ ನಾಯ್ಕರೇ ಮೊದಲಾದ ಕೆಲವು ಮಹನೀಯರುಗಳು, ಕಳೆದ ವರ್ಷ ಈ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಿ, ಸಹಬಂಧುಗಳ ಸಹಕಾರ ಪಡೆದು, ತಿಂಗಳಿನ ಕೊನೆಯ ರವಿವಾರವನ್ನು ರಜಾದಿನವಾಗಿ ಆಚರಿಸುವಂತೆ ಸಾಧಿಸುವುದರಲ್ಲಿ ಸಫಲರಾದರು. ಆರಂಭದಲ್ಲಿ ಎಲ್ಲ ಶುಭಕಾರ್ಯಗಳಿಗೂ ಎದುರಾಗುವ ತೊಡಕುಗಳಂತೆ ಈ ನ್ಯಾಯವಾದ ರಜಾದಿನದ ಯತ್ನಕ್ಕೂ ಪೂರ್ಣ ಒಪ್ಪಿಗೆ ದೊರೆಯಲಿಲ್ಲವಾದರೂ, ಕೆಲವು ತಿಂಗಳುಗಳಲ್ಲಿ ಎಲ್ಲ ಸಾಹುಕಾರರು ಇದರ ಮಹತ್ವವನ್ನು ಚೆನ್ನಾಗಿ ಮನಗಂಡರು. ಇಂದು ಪ್ರತಿಯೊಂದು ಅಂಗಡಿಯೆಂಬಂತೆ ಈ ರವಿವಾರದ ರಜೆಯನ್ನು ಆಚರಿಸುತ್ತಿದೆ. ಯತ್ನವು ಸಫಲಗೊಂಡಿದೆ. ಈ ರಜಾದಿನದ ಪ್ರಥಮ ವರ್ಧಂತಿಯನ್ನಿಂದು (ತಾ. 29-12-1940) ಆಚರಿಸಲ್ಪಡುತ್ತಿರುವುದು ಪ್ರಚಾರ ದೃಷ್ಟಿಯಿಂದಲೂ, ಸಾಹುಕಾರರ ವಿಶೇಷ ಉತ್ಸವವೆಂಬ ದೃಷ್ಟಿಯಿಂದಲೂ ಯೋಗ್ಯವಾದುದಾಗಿದೆ.

ಸಾಹುಕಾರರು ರಾಜ್ಯದ ಆಧಾರ ಸ್ತಂಭಗಳು. ದೇಶದ ಸಂಪದಭ್ಯುದಯವು ಸರಕಾರದ ಮೇಲೆ ಹೇಗೆ ಅವಲಂಬಿಸಿದೆಯೋ ಹಾಗೇ ಸಾಹುಕಾರರನ್ನೂ ಅವಲಂಬಿಸಿದೆ. ಸಾಹುಕಾರರು ಒಗ್ಗಟ್ಟಾದರೆ ಏನನ್ನೂ ಸಾಧಿಸಬಲ್ಲರು. ದೇಶದ ಧರ್ಮಸಂಸ್ಥೆಗಳು, ಅನಾಥಾಲಯಗಳು, ವಿದ್ಯಾನಿಲಯಗಳು,–ಅದೇಕೆ, ಸರಕಾರವು ಕೂಡ—ಸಾಹುಕಾರರನ್ನೇ ಆಧರಿಸಿದೆ. ಆದರೆ, ಎಲ್ಲ ಸಾಹುಕಾರರು ತಮ್ಮ ಯೋಗ್ಯತೆಯನ್ನೂ ಗೌರವವನ್ನೂ ತಾವೇ ತಿಳಿದುಕೊಂಡಿರುವರೋ ಹೇಳಬರುವುದಿಲ್ಲ. ಅವರಿಗೆ ತಿಳಿಯದೆನೇ—ಅವರು ಯತ್ನಿಸದೆನೇ ಅವರ ಶಕ್ತಿಯು ಅಪ್ರತ್ಯಕ್ಷವಾಗಿ ಅದ್ಭುತಗಳನ್ನು ಸಾಧಿಸುತ್ತಿದೆ.

ಸಾಹುಕಾರರನ್ನವಲಂಬಿಸಿ ದೇಶದ ಲಕ್ಷೋಪಲಕ್ಷ ಕುಟುಂಬಗಳು ಜೀವಧಾರಣೆಮಾಡಿಕೊಂಡಿರುತ್ತವೆ. ಆಧರಿತ ಕುಟುಂಬಗಳೆಂದಾಗ ನಾವು ನೌಕರರನ್ನು ಕುರಿತು ಹೇಳಿದುದಾಗಿದೆ. ನೌಕರರ ಪೋಷಣೆಯ ಭಾರದ ಗೌರವವು ಸಾಹುಕಾರರಿಗೆ ಸಲ್ಲುವಾಗ ಅವರು (ಸಾಹುಕಾರರು) ತಮ್ಮ ಮೇಲ್ಮೆಗೆ ನೌಕರರ ಶ್ರಮವೂ ಒಂದು ಕಾರಣವೆಂದು ತಿಳಿವಂತಾಗಬೇಕು. ನೌಕರರಿಗೆ ಯೋಗ್ಯತಾನುಸಾರ ತಲಬು ಕೊಡುವ ಕ್ರಮವೊಂದಿರುವಾಗ, ಯಾರಿಗೂ ಜೀವನಕ್ಕೆ ಕಡಿಮೆಯಾಗದಷ್ಟು ಸಲ್ಲಬೇಕೆಂಬುದನ್ನೂ ಮರೆಯಬಾರದು. ಈ ರಜಾದಿನವಾದರೂ ಸಾಹುಕಾರರಿಗಿಂತ ಹೆಚ್ಚಾಗಿ ನೌಕರರಿಗೆ ಆನಂದವನ್ನುಂಟುಮಾಡುವುದು. ಅಲ್ಪ ಔದಾರ್ಯದಿಂದಲೇ ಆನಂದಪಡುವಂತಹ ನೌಕರರಿಗೆ ಈ ರಜಾದಿನದ ಸುಖವಷ್ಟೇಯಲ್ಲ, ನೌಕರನು ಹೊಸಬನೂ ಅನನುಭವಿಯೂ ಇದ್ದು ಕೆಲಸಕ್ಕೆ ಅಂಗೀಕರಿಸಲ್ಪಡುವಲ್ಲಿ ಜೀವನಕ್ಕೆ ಬೇಕಾಗುವಷ್ಟು ತಲಬನ್ನು (living wages) ಅವರಿಗೆ ಸಲಿಸಲೇ ಬೇಕು.

ಸಾಹುಕಾರರು ತಿಂಗಳಲ್ಲಿ ಒಂದೆರಡು ದಿನಗಳನ್ನಾದರೂ ರಜಾದಿನಗಳನ್ನಾಗಿ ಆಚರಿಸುವಂತೆ ಸರಕಾರದವರು ಒಂದು ಕಾನೂನನ್ನು ರಚಿಸಲಿರುವರೆಂದು ಕೇಳಿಬರುತ್ತದೆ. ಇದು ನಿಜವಿದ್ದು, ಯಾವ ಕಾಲದಲ್ಲಿ ಜ್ಯಾರಿಗೆ ಬರುವುದಿದ್ದರೂ, ಮಂಗಳೂರು ಸಾಹುಕಾರರು ಈ ಮೊದಲೇ ಅದರ ಅವಶ್ಯಕತೆಯನ್ನು ಕಂಡು ಅದನ್ನು ಆಚರಿಸುತ್ತಿರುವುದು ಅವರ ಗುಣ ವೈಶಿಷ್ಟ್ಯವನ್ನೂ, ಉದಾರತನವನ್ನೂ ವ್ಯಕ್ತಗೊಳಿಸುತ್ತದೆ. ಜಿಲ್ಲೆಯ ಎಲ್ಲ ಕಡೆಗಳಲ್ಲೂ ಇಂತಹ ರಜಾ ದಿನಗಳು ಜ್ಯಾರಿಗೆ ಬರುವ ಸುದಿನವನ್ನು ನಾವು ಎದುರು ನೋಡುತ್ತಿರುವೆವು. ಈ ವರ್ಧಂತಿಯ ಆಚರಣೆಯು ಜಿಲ್ಲೆಯ ಇತರ ಊರುಗಳವರಿಗೆ ಒಂದು ಪ್ರೇರಣೆಯಾಗಿ ಪರಿಣಮಿಸದಿರಲಾರದೆಂದು ನಮ್ಮ ಭರವಸೆ. ಈ ಸಂದರ್ಭದಲ್ಲಿ ಮಂಗಳೂರು "ಮರ್ಚಂಟ್ಸ್ ಹೋಲಿಡೇ ಕಮಿಟಿ"ಯವರೇ ಮುಂದಾಗಿ ಜಿಲ್ಲೆಯ ಇತರ ಕಡೆಗಳಿಂದ ಆಹ್ವಾನಿತರಾಗಿರುವ ಸಾಹುಕಾರರಿಗೆ ಈ ಬಗ್ಗೆ ಸೂಚನೆಕೊಟ್ಟು ಸಾಧಿಸುವುದೂ ಉಚಿತವಾಗಿದೆ. ರವಿವಾರವನ್ನು ಸಾಹುಕಾರರು ರಜಾದಿನವಾಗಿ ಆಚರಿಸಿದ ಔಚಿತ್ಯವನ್ನು ನಾವು ಈ ಮೊದಲಿನ ನಮ್ಮ ಸಂಚಿಕೆಗಳಲ್ಲಿ ವಿವರಿಸಿರುತ್ತೇವೆ. ರವಿವಾರದಂದು ಸಾಹುಕಾರರಿಗೆ ಸಂಬಂಧವಿರುವ ಬ್ಯಾಂಕುಗಳೂ

ಇತರ ಕಚೇರಿಗಳೂ ಮುಚ್ಚಲ್ಪಟ್ಟಿರುವ ಕಾರಣ, ತಾವೂ ರಜೆಯನ್ನಾಚರಿಸಿದರೆ ವಿಶೇಷ ತೊಂದರೆ ತೊಡಕುಗಳಾವುವೂ ಕಂಡುಬರುವುದಿಲ್ಲ. ಮಾತ್ರವಲ್ಲ, ನಮ್ಮ ಜಿಲ್ಲೆಯಲ್ಲಿ ಬೊಂಬಾಯಿ ಕಡೆಗೆ ಹೋಗುವ ಯಾ ಬರುವ ಸ್ಟೀಮರುಗಳೂ ರವಿವಾರ ತಲಪುವುದೂ ಹೊರಡುವುದೂ ಇಲ್ಲ. ಆರೋಗ್ಯ ದೃಷ್ಟಿಯಿಂದಂತು ಈ ರಜೆಯು ಅವಶ್ಯವೇ ಇದೆಯೆಂಬುದನ್ನು ಪ್ರತ್ಯೇಕ ಇಲ್ಲಿ ಹೇಳಬೇಕಾಗಿಲ್ಲ. ಕಾರಣ ದೈಹಿಕ ಹಾಗೂ ಮಾನಸಿಕ ಆರಾಮಕ್ಕಾಗಿಯೇ ಈ ರಜೆಯೆಂಬುದನು ನಿಶ್ಚಯಿಸಲಾಗಿದೆ.

ಸಾಹುಕಾರರಿಗೆ "ಧನಲಕ್ಷ್ಮಿ" ಪೂಜೆಯ ಹೊರತು ಅವರದೆಂದು ಪ್ರತ್ಯೇಕವಾಗಿ ಹೇಳಬಹುದಾದ ಹಬ್ಬ ಯಾ ವಿಶೇಷ ಸಮಾರಂಭಗಳಾವುವೂ ಇರಲಿಲ್ಲ. ಈ ರಜಾದಿನದ ವರ್ಧಂತಿಯಾಗ ಸಾಹುಕಾರೀ ಸಮಾರಂಭ ಅಥವಾ ವಣಿಜೋತ್ಸವವಾಗಿ ರೂಢಿಗೆ ಬರುವಂತಿದೆ. ಸಾಹುಕಾರರೆಲ್ಲ ಭ್ರಾತೃಭಾವದಿಂದ ಒಟ್ಟಾಗಿ ಕಲೆತು, ತಮಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಿ, ವಿಚಾರ ವಿನಿಮಯದಿಂದ ಭಾವೀ ಅಭ್ಯುದಯ ಸಾಧಕ ಗೊತ್ತುವಳಿಗಳನ್ನೂ ಮಾಡಬರುಮಂತಿದೆ. ಸಾಹುಕಾರರಿಗೂ ನೌಕರರಿಗೂ ಮಹೋತ್ಸಾಹದಿಂದ ಈ ಸಮಾರಂಭದಲ್ಲಿ ತಮ್ಮ ಉತ್ಸವವೆಂಬ ಗೌರವದಿಂದ ಬೆರೆತು ಆನಂದಿಸಲೂ ಇಂತಹ ಸಮಾರಂಭವು ಅವಶ್ಯವಿದ್ದುದು ಈಗಲೀಗ ಫಲಿತಕ್ಕೆ ಬಂದಿದೆ. ವರ್ಷ ವರ್ಷವೂ ಜರಗುವ ಇಂತಹ ಸಮಾರಂಭಗಳು ಸಾಹುಕಾರರಲ್ಲೂ ನೌಕರ ವರ್ಗದಲ್ಲೂ ಮಾತ್ರವಲ್ಲ, ಸಾರ್ವಜನಿಕರಲ್ಲೂ ತಮ್ಮ ಉತ್ಸಾಹವನ್ನು ಅಪ್ರತ್ಯಕ್ಷವಾಗಿಯಾದರೂ ಉಂಟುಮಾಡುವುವು.

ಸಾಹುಕಾರರು ಈ ಮಹತ್ವದ ದಿನವೆಂದು ಚರ್ಚಿಸಬೇಕಾದ ವಿಷಯಗಳೇನು? ಮಾಡಬೇಕಾದ ಠರಾವುಗಳೇನು, ಈ ವಿಷಯವಾಗಿ ನಾವು ಸವಿವರವಾಗಿ ಸೂಚನೆಕೊಡಲು ಸಮರ್ಥರಿಲ್ಲ. ಅವರ ಸಮಸ್ಯೆಗಳನ್ನು ಪತ್ರಿಕಾಕರ್ತರು ಸ್ಥೂಲವಾಗಿ ಮಾತ್ರ ತಿಳಕೊಳ್ಳಬಲ್ಲರು. ಭ್ರಾತೃಭಾವ ಸಾಧನೆ—ಸಾಹುಕಾರರ ಆರೋಗ್ಯ ವರ್ಧನೆಯ ವಿಷಯದಲ್ಲಿ ಚರ್ಚೆ–ಸರಕಾರದಿಂದ ದೊರೆಯಬೇಕಾದ ರಿಯಾಯತಿಯ ಸೌಕರ್ಯಗಳು–ಇವುಗಳೇ ಮೊದಲಾದ ವಿಷಯಗಳನ್ನು ಅವರೇ ಸೂಕ್ಷ್ಮವಾಗಿ ಚರ್ಚಿಸಿ, ನಿರ್ಧರಿಸಬಲ್ಲರು. ಆದರೆ, ನೌಕರರ ಪರವಾಗಿ ನಾವು ಸಾಹುಕಾರರಿಗೆ ಒಂದು ಸೂಚನೆ ಮಾಡಲೆಳಸುತ್ತೇವೆ. ಸಾಹುಕಾರರು ತಾವು ಬಡವರಿಗೆ ಸಹಾಯವೀವ, ಶಕ್ತಿಯುತ ಯಜಮಾನರೆಂಬ ಅಭಿಮಾನ ತಾಳಿ, ಅದರಂತೇ ವರ್ತಿಸುವ ಮನೋಭಾವವುಳ್ಳವರಾದರೆ, ಈ ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಅವರಿಗೆ ಹೆಚ್ಚಿನ ಕಷ್ಟವಿರದು.

ಅನೇಕರಲ್ಲಿ ನೌಕರರಾಗಿದ್ದ ಹಲವರು, ವೃದ್ಧಾಪ್ಯವೊದಗುವ ವರೆಗೆ ನೌಕರ ಸ್ಥಾನದಲ್ಲೇ ಇರುತ್ತಾರೆ. ವೃದ್ಧಾಪ್ಯವೊದಗಿದಾಗ ಆ ನೌಕರರು ಸಾಹುಕಾರರಿಗೆ ಪ್ರಯೋಜನವಿಲ್ಲದೆ ಸಹಜವಾಗಿ ನಿವೃತ್ತಿಹೊಂದಬೇಕಾಗುತ್ತದೆ. ಹೀಗೆ ನಿವೃತ್ತಿಹೊಂದುವ ಕಾಲದಲ್ಲಿ ಅವರೊಡನೆ (ನೌಕರರೊಡನೆ) ಆಪದ್ಧನವೆನಿಸುವಂಥದ್ದೇನೂ ಉಳಿಯುವುದಿಲ್ಲ. ಹಲವು ನೌಕರರು ನಿವೃತ್ತರಾಗುವಾಗ ಕೇವಲ 25 ಅಥವಾ 30 ರೂಪಾಯಿ ತಲಬಿನ ಮಟ್ಟದಲ್ಲೇ ನಿವೃತ್ತರಾಗುವರು. ನೌಕರಿಯಲ್ಲಿದ್ದಾಗ ಕಷ್ಟದಿಂದೆಂಬಂತೆ (ಅನೇಕ ಸಂದರ್ಭಗಳಲ್ಲಿ ಅರೆಹೊಟ್ಟೆಯಿಂದ) ಅವರ ದುಡಿತವೆಲ್ಲ ವ್ಯಯವಾಗುವುದು. ವೃದ್ಧಾಪ್ಯವೊದಗಿ ನಿವೃತ್ತರಾದ ನಂತರ ಅವರ ಪಾಡು ಏನಾಗಬಹುದೆಂಬುದನ್ನು ಊಹಿಸಿಯೇ ತಿಳಿಯಬೇಕಲ್ಲದೆ ವಿವರಿಸಲು ಸಾಧ್ಯವಿಲ್ಲ. ನೌಕರಿ ಮಾಡಲು ಯೋಗ್ಯನಿಲ್ಲ, ಆಹಾರ ಭುಂಜಿಸದೆ ಇರಲೂ ಸಾಧ್ಯವಿಲ್ಲವಷ್ಟೆ? ಮೇಲಾಗಿ, ಅವನನ್ನು ಹೊಂದಿಕೊಂಡಿರುವ ಕುಟುಂಬವೂ ದಾರಿದ್ರ್ಯವನ್ನನುಭವಿಸುವುದು. ನಮ್ಮ ದೇಶದಲ್ಲಿ ಇಂತಹ ಕುಟುಂಬಗಳೆಷ್ಟು ಲಕ್ಷವಿರುವುವೊ, ಅವುಗಳನ್ನು ಲೆಕ್ಕಹಾಕಿದವರಾರು? ಇಂತಹ ವೃದ್ಧ ನೌಕರರ ಗತಿಯೇನು? ಅವರು ಚಿಂತೆಯಿಂದಲೂ ದಾರಿದ್ರ್ಯದಿಂದಲೂ ಬೇಗನೆ ನಶಿಸಿಬರುವುದೊಂದೇವಿನಾ, ಜೀವವಿದ್ದು ಇರಲು ಉಪಾಯಗಳಿಲ್ಲ. ಇಂತಹ ನೌಕರರ ವೃದ್ಧಾಪ್ಯದ ದಿನಗಳನ್ನು ಚಿಂತಾವಿಹೀನವಾಗಿ ಮಾರ್ಪಡಿಸುವುದೂ, ತನ್ಮೂಲಕ ಅವರನ್ನಾಧರಿಸಿರುವವರಿಗೆ ಜೀವದಾನ ಮಾಡುವುದೂ ಸಾಹುಕಾರರನ್ನು ಹೊಂದಿಕೊಂಡಿದೆ; ಸಾಹುಕಾರರು ಯತ್ನಿಸಿದರೆ ಸುಲಭಸಾಧ್ಯವೂ ಇದೆ. ಈ ಬಗ್ಗೆ ಒಂದು ವಿಧದ "ಪ್ರೊವಿಡೆಂಟ್ ಫಂಡ್" ಯೋಜನೆಯನ್ನು ಜ್ಯಾರಿಗೆ ತರಬಹುದಾಗಿದೆ.


"ಪ್ರೊವಿಡೆಂಟ್ ಫಂಡ್" ಎಂದಾಗ ನಾವು, ಸರಕಾರೀ ಇಲಾಖೆಗಳಲ್ಲೂ ಇತರ ಕೆಲವು ಸಂಸ್ಥೆಗಳಲ್ಲೂ ಜ್ಯಾರಿಯಲ್ಲಿರುವ (ಅಂದರೆ ನೌಕರರ ತಲಬಿಗೆ ರೂಪಾಯಿಗೊಂದಾಣೆಯಂತೆ ಕೂಡಿಸಿ ಠೇವಣಾತಿಯಾಗಿಡುವ) ಪ್ರೊವಿಡೆಂಟ್ ಪದ್ಧತಿಯನ್ನೇ ನಮ್ಮ ಸಾಹುಕಾರರೂ ಅನುಸರಿಸಬೇಕೆಂದು ಹೇಳುತ್ತಿಲ್ಲ. ಅದಕ್ಕಿಂತಲೂ ಸುಲಭವಾಗಿ ಅವರು, ತಾವು "ಧರ್ಮಾರ್ಥವು" ಎಂದು ಹೆಸ ರೂಪಾಯಿಗೊಂದು ಪೈಯಂತೆಯೋ ಅಥವಾ ದಿನಕ್ಕೆ ಕೆಲವು ಬಿಡಿಕಾ ಗಳಂತೆಯೋ ಪ್ರತ್ಯೇಕಿಸಿಡುವ ಹಣದಂತೆ ಆಯಾ ದಿನದ ವ್ಯಾಪಾರದ ಮೊತ್ತ ಮೇಲೆ, ಕೆಲವು ಆಣೆಗಳನ್ನು ಪ್ರತ್ಯೇಕಿಸಿ ಯಾವುದಾದರೊಂದು ಪ್ರಾಮು ಬೇಂಕಿನಲ್ಲಿ ಠೇವಣಾತಿಯಾಗಿಡಬೇಕು. ಮತ್ತು ಆ ನಿಧಿಯನ್ನು "ನೌಕ ನಿವೃತ್ತಿ ನಿಧಿ" ಅಥವಾ "ಪ್ರೊವಿಡೆಂಟ್ ಫಂಡ್" ಎಂದು ಹೆಸರಿಸಬೇಕು. ನಿಧಿಯು ಬಡ್ಡಿಸಹಿತ ಬೆಳೆಯುತ್ತ ಹೋಗುವುದಷ್ಟೆ? ಈ ನಿಧಿಯ ಯೋಜನ ಸೇರಿದ ಸಾಹುಕಾರರಲ್ಲಿಂದ ಅಂಗಮಾನ. ಅಥವಾ ವೃದ್ಧಾಪ್ಯದಿಂದ ನಿವೃ ರಾಗುವ ನೌಕರರಿಗೆ ಪೆನ್ಶನ್ ಕ್ರಮದಂತೆ ಅವನವನ ಜೀವನಾಂಶ ಸಲುವಂತಾ ಬೇಕು. ಇಲ್ಲವೇ ನಿವೃತ್ತನಾಗುವ ಸಮಯ ಒಂದು ನಿರ್ದಿಷ್ಟ ಮೊತ್ತವನ ಕೊಡಬೇಕು. ಇದರಿಂದ ನೌಕರರೆಲ್ಲರೂ ಯಾವ ಕಾಲದಲ್ಲೂ ವೃದ್ಧಾಪ್ ಯೋಚನೆಯಿಲ್ಲದೆ, "ಧನಿ"ಯ ಮೇಲೆ ಮಮತೆಯಿಂದ, ಉತ್ಸಾಹದಿಂದ ಕೆಲ ಮಾಡುವಂತಾಗುವುದಲ್ಲದೆ, ಎಷ್ಟೋ ಕುಟುಂಬಗಳನ್ನು ದಾರಿದ್ರ್ಯರಾಕ್ಷಸನ ದವ ಯಿಂದ ರಕ್ಷಿಸಲ್ಪಟ್ಟಂತಾಗುವುದು. ಇಂತಹ ಯೋಜನೆಗೆ ಸೇರಿದ ಸಾಹುಕಾ ರಲ್ಲಿ ನೌಕರಿ ಎಂದರೆ ನೌಕರಿ ಮಾಡುವವರಿಗೆ ಒಂದು ವಿಧದ ಉತ್ಸಾಹವೂ ಗೌ ವವೂ ಸಹಜವಾಗಿ ಉಂಟಾಗುವುದು. ಇಂತಹ ಯೋಜನೆಗೆ ಸಾಮಾನ್ಯವಾ ಎಲ್ಲ ಸಾಹುಕಾರರು ಸೇರಬಹುದಾಗಿದೆ. ಇದರಲ್ಲಿ ಕಡಿಮೆ ಅಥವಾ ಹೆಚ "ವಂತಿಗೆ" ಎಂಬ ಪ್ರಶ್ನೆ ಬರುವುದಿಲ್ಲ. ಅವರವರ ವ್ಯಾಪಾರದ ಮೊತ್ತವನ ಅವಲಂಬಿಸಿ ಈ "ವಂತಿಗೆ" ಇರುತ್ತದೆ. ಇದರ ಉಪಯೋಗವು ನೌಕರರಿ ಮಾತ್ರ ಸಲ್ಲುತ್ತಿದೆ.

ನೌಕರರು ಮನುಷ್ಯರು, ಅವರೂ ಬಾಳಿರಬೇಕು ಎಂಬ ಸದ್ಭಾವನೆಯ ಎಲ್ಲ ಸಾಹುಕಾರರಲ್ಲಿರುವುದೆಂದು ನಾವು ಭಾವಿಸುತ್ತೇವೆ. ನೂರು ರೂಪಾಯಿ ಗಳಿಗೆ ಒಂದಾಣೆಯಂತೆ ಈ 'ವಂತಿಗೆ'ಯನ್ನು ನಿಶ್ಚಯಿಸಿದರೂ ಆಗಬಹುದು ಈ ರೀತಿ ವಂತಿಗೆ ತೆರುವುದು ಸಾಹುಕಾರರಿಗೆ ದೊಡ್ಡ ಹೊರೆಯಾಗುವುದಿ ಆದರೆ, ಇದು ಅವರು ಮಾಡುವ ಮಹಾಕಾರ್ಯವಾಗುವುದು. ರಜಾದಿನ ಆಚರಣೆಯಿಂದ ದಕ್ಷಿಣಭಾರತದಲ್ಲೇ ಎಂಬಂತೆ ಮೇಲ್ಪಂಕ್ತಿ ಹಾಕಿಕೊಟ್ಟಿರು ನಮ್ಮ ಸಾಹುಕಾರರು ಈ "ನೌಕರರ ಆಪದ್ಧನ"ದ ಕುರಿತು ಆಲೋಚಿಸಿ, ನಿರ್ಧ ರಿಸಿ, ಅದನ್ನು ಸಾಧಿಸಿ ತಮ್ಮ ಕೀರ್ತಿಧ್ವಜವನ್ನು ಎತ್ತಿಹಿಡಿವರೇ? ಸಾವಿರಾರ ಬಡ ನೌಕರರ ಹಾಗೂ ಸಾರ್ವಜನಿಕರ ಪ್ರೇಮ–ಭಕ್ತಿ–ಗೌರವಗಳನ್ನು ತಮ ಪರವಾಗಿ ಇತ್ಯೋಪ್ಯತಿಶಯವಾಗಿ ವರ್ಧಿಸಿಕೊಳ್ಳುವರೇ?–ಅಹುದೆಂದು ನಾ ಭರವಸೆಪಡುವೆವು.

ಕೊನೆಯದಾಗಿ ಈ ಸಂಚಿಕೆಯ ಕುರಿತು ಒಂದು ಮಾತು: ಸಾಹುಕಾರ ಪತ್ರಿಕೆಯೆಂದೇ ಪ್ರತ್ಯೇಕವಾಗಿ ಒಂದು ಪತ್ರಿಕೆಯಿಲ್ಲದ ಕಾಲದಲ್ಲಿ ನಾವು ಸಾಹುಕಾರರ ಈ ಪ್ರಥಮ ಮಹೋತ್ಸವಕ್ಕಾಗಿ ಉತ್ಸಾಹತಾಳಿ, ಅದರ ಶೋಭೆ ನಮ್ಮದೊಂದು ಅಲ್ಪ ಅಂಶದಾನವೆಂದು ಈ ವಿಶೇಷಾಂಕವನ್ನು ಹೊರಡಿಸಲ ಮುಂದಾದೆವು. ಸಾಹುಕಾರರು ಇತರ ವರ್ಗೀಯರಂತೇ ನಮ್ಮನ್ನು ಬಹು ವಿಧ ಪ್ರೋತ್ಸಾಹಿಸಿರುವರು. ಈ ವಿಶೇಷಾಂಕದ ಯತ್ನದಲ್ಲಾದರೂ ನಮಗೆ ಅವ ರಿತ್ತ ಸಹಾಯವನ್ನು ನಾವು "ಮಹಾ" ಎಂದೇ ಸ್ವೀಕರಿಸಿರುವೆವು. "ವಾಣಿಜ್ಯ ಸಂಚಿಕೆ"ಯಲ್ಲೂ ವಾಣಿಜ್ಯ ಸೇವಾದೃಷ್ಟಿಯಂತೆ "ವಾಣಿಜ್ಯ ದೃಷ್ಟಿ" ಕೂಡ ಇರ ಲಿಲ್ಲವೇ ಎಂದರೆ, ಇತ್ತು ಎನ್ನುವೆವು. ಸಂಚಿಕೆಯ ಹೊರನೋಟ–ಒಳನೋಟಗಳ ವಿಷಯವಾಗಿ ನಮಗೆ, ನಮ್ಮ ಶಕ್ತಿಮೀರಿ ಯತ್ನಿಸಿರುವೆವೆಂಬ ತೃಪ್ತಿಯಿದೆ. ಆದರೆ, ಧನಲಾಭರೂಪದಿಂದ ನಾವು ಯಶಸ್ವಿಯಾಗಿಲ್ಲ. ಈ ಸಂಚಿಕೆಯು ಉಪ ಯುಕ್ತ ಲೇಖನ ಮತ್ತು ಅಂಕೆಸಂಖ್ಯೆಗಳ ಮಾಹಿತಿಯನ್ನೊಳಗೊಂಡು ಸರ್ವಾಂಗ ಸುಂದರವಾಗಿ (ಸ್ವಪ್ರಶಂಸೆಯಾಗಿ ಈ ಗುಣವಾಚಕವನ್ನು ಉಪಯೋಗಿಸಿದು ದಕ್ಕೆ ಕ್ಷಮೆಯಿರಲಿ!) ಹೊರಡುವಂತೆ ಸಹಾಯಮಾಡಿದ ಲೇಖಕರಿಗೂ ಸಾಹು ಕಾರರಿಗೂ, ಮುದ್ರಣಕಾರ್ಯದಲ್ಲಿ ವಿಶೇಷ ಶ್ರದ್ಧೆಯಿರಿಸಿ ಅಲ್ಪಕಾಲದಲ್ಲಿ ಅಂದ ವಾಗಿ ಮುದ್ರಿಸಿಕೊಟ್ಟ ಮಂಗಳೂರು ಪ್ರೆಸ್ಸಿನ ಮಾಲಕರಾದ ಶ್ರೀ ಎಮ್. ನಾರಾಯಣ ಪ್ರಭುಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.


ಮುಂದಿನ ವರ್ಷ "ಪ್ರಭಾತ"ವು ಇದಕ್ಕಿಂತಲೂ ಮಿಗಿಲೆನಿಸುವಂತಹ ವಿಶೇಷಾಂಕವನ್ನು ಹೊರಡಿಸಿ ಅವರಿಗೆ ಅರ್ಪಿಸುವಂತೆ ಸಾಧಿಸಿಕೊಡುವ ಕಾರ್ಯ ಭಾರವು ಸಾಹುಕಾರರದು.

ಸಂಪಾದಕ.



ಔದ್ಯೋಗೀಕರಣದಿಂದ ಭಾರತದ ಉನ್ನತಿಯಾಗಬಲ್ಲುದೇ?

(ಶ್ರೀ ಗೋಪಾಲ ಪೈ, ಜಿ. ಮೂಡುಬಿದ್ರೆ)



ಭಾರತ ವರ್ಷದ ಸಾಂಪತ್ತಿಕ ಬೆಳವಣಿಗೆಯಾಗಬೇಕಾದರೆ, ದೇಶವು ಔದ್ಯೋಗಿಕೃತವಾಗಬೇಕಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಶಿಕ್ಷಣ ಪಡೆದಿರುವ ಅನೇಕ ತಜ್ಞರು ಪ್ರತಿಪಾದಿಸುವುದನ್ನು ಕೇಳುತ್ತಿದ್ದೇವೆ. ನಿಜವಾಗಿಯೂ ಯಾಂತ್ರಿಕರಣದಿಂದ ಭಾರತದ ಉನ್ನತಿಯಾಗಬಲ್ಲುದೆ? ಪ್ರಪಂಚದ ಅನೇಕ ರಾಷ್ಟ್ರಗಳು ಯಾಂತ್ರಿಕರಣದ ದೆಸೆಯಿಂದ ಶಾಶ್ವತ ಶಾಂತತೆಯನ್ನು ಪಡೆದಿರುವುವೇ? ಇಂದು ಪ್ರಪಂಚದಲ್ಲಿ ಔದ್ಯೋಗಿಕರಣದ ಪರಿಪೂರ್ಣತೆ ಪಡೆದಿರುವಂತಹ ರಾಜ್ಯವೆಂದರೆ ಅದು ಅಮೇರಿಕ. ಅಲ್ಲಿಯ ಉತ್ಪಾದಕ ಶಕ್ತಿ (Productive Capacity) ಪ್ರಪಂಚದ ಇತರ ರಾಜ್ಯಗಳಿಗಿಂತ ಅನೇಕ ಪಾಲು ಅಧಿಕವಿದೆ. ಅಲ್ಲಿಯ ಒಬ್ಬಾತನ ಉತ್ಪನ್ನವು ಭಾರತದ ಜನತೆಯ 25 ಪಾಲು ಅಧಿಕವಿದೆ. ಯಂತ್ರಗಳನ್ನು ಅಧಿಕ ಮಾಡಿ ಪರಿಶ್ರಮ (Labour) ಕಡಿಮೆ ಮಾಡುವ ಭರದಲ್ಲಿ ಜನತೆಗೆ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗುವುದು. ಪ್ರತಿಯೊಂದಕ್ಕೆ ಯಂತ್ರಗಳ ನಿರ್ಮಾಣವಾಗಿರುವುದರಿಂದ ಇಂದು ಅಲ್ಲಿಯ ಜನತೆಗೆ ಕೈಗೆಲಸವೇನೆಂಬುದರ ಅರಿವಿಲ್ಲ. ಪರಿಣಾಮವಾಗಿ 1930ರಲ್ಲಿ ನೂರು ಜನರು ಮಾಡುವಂತಹ ಕೆಲಸವು ಇಂದು 60 ಮಂದಿಯಿಂದ ಆಗುತ್ತಿದೆ. ಇದರಿಂದ 60 ಮಿಲಿಯ ಜನರು ನಿರುದ್ಯೋಗಿಗಳಾಗಿರುವರು. ಯಂತ್ರವು ಪ್ರತಿಕ್ಷಣಕ್ಕೂ ಕೆಲಸ ಮಾಡುತ್ತಿರಬೇಕಷ್ಟೆ! ತನ್ನ ರಾಷ್ಟ್ರಕ್ಕೆ ಬೇಕಿರುವುದಕ್ಕಿಂತ ಹೆಚ್ಚಾಗಿ ತಯಾರಾದುದನ್ನು ಪರ ವಾಣಿಜ್ಯ ಕ್ಷೇತ್ರಗಳಲ್ಲಿ ಕಳುಹಿಸಿ ಮಾರಾಟ ಮಾಡದೆ ಗತ್ಯಂತರವಿಲ್ಲ. ಪಾಶ್ಚಿಮಾತ್ಯ ರಾಜ್ಯಗಳೆಲ್ಲವೂ ಉದ್ಯೋಗಕೃತವಾಗಿರುವುದರಿಂದ ಇತರ ವಾಣಿಜ್ಯ ಕ್ಷೇತ್ರಗಳು ಸುಲಭವಾಗಿ ಸಿಗಲೊಲ್ಲವು. ಹೆಚ್ಚಾಗಿ ಅಮೇರಿಕವು ತನ್ನಲ್ಲಿಯೇ ತೃಪ್ತಿಪಡಬೇಕು. ದೇಶದಲ್ಲಿ ನಿರುದ್ಯೋಗ ಅಧಿಕವಾಗುತ್ತಿದೆ. ಒಂದತ್ತ ಅತೀವ ಧನಾಢ್ಯ ಭಂಡವಾಳಗಾರರು, ಇನ್ನೊಂದತ್ತ ಬಡತನದಲ್ಲಿ ಬೆಂಡಾಗುತ್ತಿರುವ ಜನಸಮುದಾಯವಿದೆ. ಆದ್ದರಿಂದ ಅಮೇರಿಕಾ ಜನಸಮುದಾಯ ಪುಂಜಪತಿತ್ವ ಔದ್ಯೋಗಿಕರಣದಿಂದ ಏಳಿಗೆಯಾಗಿರುವುದೆ?

ಇಂಗ್ಲೆಂಡು

ಪ್ರಪಂಚದ ವಸ್ತ್ರದ ಕೇಂದ್ರವೆಂದರೆ ಇಂದದು ಇಂಗ್ಲೆಂಡು. ಯಂತ್ರೋಪಕರಣದಿಂದ ಪ್ರಪಂಚಕ್ಕೆ ಅನೇಕ ವರುಷಗಳ ತನಕ ಬೇಕಾಗುವಷ್ಟು ವಸ್ತ್ರದ ತಯಾರಿ ಮಾಡುವ ಶಕ್ತಿ ಅದಕ್ಕಿದೆ. ಅದರಿಂದಾಗಿ ಇಂಗ್ಲೆಂಡು ಅನೇಕ ವಾಣಿಜ್ಯ ಕ್ಷೇತ್ರಗಳನ್ನು ಕೈವಶಮಾಡಿಕೊಂಡಿರುವುದು. ಇಂದು ಭಾರತವು ಇಂಗ್ಲೆಂಡು ವಸ್ತ್ರವನ್ನು ಕೊಂಡುಕೊಳ್ಳುವ ಪ್ರಾಮುಖ್ಯ ಗಿರಾಕಿಯಾಗಿರುವುದು. ನಾಳೆ ಭಾರತವು ತನಗೆ ಬೇಕಾಗುವಷ್ಟು ವಸ್ತ್ರವನ್ನು ತಾನೇ ತಯಾರಿಸಿತೆನ್ನೋಣ! ಪ್ರಪಂಚದ ಅನೇಕ ರಾಷ್ಟ್ರಗಳು ತಮಗೆ ಬೇಕಾಗುವಷ್ಟಕ್ಕಿಂತ ಅಧಿಕವಾಗಿಯೇ ತಯಾರಿಸುತ್ತಿವೆಯಷ್ಟೆ! ಅಂದ ಮೇಲೆ ಇಂಗ್ಲೆಂಡು ಮತ್ತಾವ ಕ್ಷೇತ್ರವನ್ನು ಹುಡುಕಬಲ್ಲುದು. ತನ್ನಲ್ಲಿ ಉತ್ಪನ್ನವಾದ ವಸ್ತ್ರ ತನ್ನ ಜನತೆಯೇ ಉಡಬೇಕಾಯಿತು. ತನ್ನ 45 ಮಿಲಿಯ ಆಂಗ್ಲೇಯರಿಗೆ ಬೇಕಾಗುವಷ್ಟು ಮಾತ್ರ ವಸ್ತ್ರದ ತಯಾರಿ ಮಾಡಬೇಕೆಂದಾಯಿತು. ಅಂತೆಂದರೆ ಉತ್ಪನ್ನ (Production) ಕ್ಕೊಂದು ತಡೆ. ಪರಿಣಾಮವಾಗಿ ನಿರುದ್ಯೋಗ ಸಮಸ್ಯೆಯು ಇಂಗ್ಲೆಂಡಿನಲ್ಲಿ ಉಗ್ರ ಸ್ವರೂಪ ತಾಳಿರುವುದು. ಔದ್ಯೋಗಿಕೃತವಾಗಿ ಇಂಗ್ಲೆಂಡಿನ ಏಳಿಗೆಯಾಗಿರುವುದೆ?

ಫೆಸಿಸ್ಟ್ ರಾಷ್ಟ್ರಗಳು

ಕಳೆದ ಮಹಾಯುದ್ಧದ ನಂತರ ಇಟಲಿಯು ಮುಸಲಿನಿಯ ಅಧಿಕಾರದಲ್ಲಿ ಒಂದೇ ಸವನೆ ಔದ್ಯೋಗಿಕೃತವಾಯಿತು. ತನಗೆ ಬೇಕಾಗಿರುವುದಕ್ಕಿಂತ ಅಧಿಕವಾಗಿ ವಸ್ತು ತಯಾರಾಗಹತ್ತಿತು. ತಯಾರಾದ ಮಾಲನ್ನು ಮಾರಾಟ ಮಾಡಲು ವಾಣಿಜ್ಯ ಕ್ಷೇತ್ರಗಳು ಸುಲಭವಾಗಿ ಸಿಗಬಲ್ಲುವೆ? ಸ್ವತಂತ್ರವಾಗಿ ಮೆರೆಯುತ್ತಿದ್ದ ಅಬಿಸೀನಿಯದ ಸ್ವಾತಂತ್ರ್ಯ ಅಪಹರಣ ಮಾಡಿತು. ಅಮಾನುಷ ಹಿಂಸೆಯಿಂದ ಲಕ್ಷೋಪಲಕ್ಷ ಜನತೆಯ ನಿರ್ಮೂಲ ಮಾಡಿತು. ಅಂತೂ ತನ್ನಲ್ಲಿ ಅತಿರೇಕ ಉತ್ಪನ್ನವಾದ ಮಾಲುಗಳಿಗೆ ಬೇಕಾಗುವ ಕ್ಷೇತ್ರದ ರಾಜ್ಯಾಧಿಕಾರವನ್ನೇ ತನ್ನ ಕೈಯಲ್ಲಿಟ್ಟುಕೊಂಡಿತು.


ಜಪಾನಿನ ವಿಚಾರ ತುಸು ವಿವೇಚಿಸೋಣ! ಪ್ರಾರಂಭದಲ್ಲಿ ಯಂತ್ರೋಪಕರಣದಿಂದ ಅತಿರೇಕವಾಗಿ ತನ್ನಲ್ಲಿ ಉತ್ಪನ್ನವಾದ ಮಾಲುಗಳನ್ನು ಸ್ಪರ್ಧೆಯಿಂದ ಇಡೀ ಪ್ರಪಂಚದಲ್ಲಿ ಮಾರಾಟಮಾಡಲುದ್ಯುಕ್ತವಾಯಿತು. ಸಂಪೂರ್ಣ ಯಶಸ್ವಿಯಾಗಲಾರದಾಯಿತು. ಇಂದದು ಬಲಾತ್ಕಾರದಿಂದ ಚೈನದಂತಹ ಸ್ವತಂತ್ರ ರಾಷ್ಟ್ರವನ್ನು ತನ್ನ ಕೈವಶಮಾಡಿಕೊಳ್ಳಲು ಪ್ರತ್ಯಕ್ಷ ಯುದ್ಧ ಹೂಡಿರುವುದು. ಭಾರತದ ಮೇಲೂ ತನ್ನ ಕೈವಾಡ ತೋರಿಸುವ ಪ್ರಯತ್ನ ಪಡುತ್ತಿದೆ.

ಜರ್ಮನಿಯತ್ತ ತುಸು ಪರಿಶೀಲಿಸೋಣ! ಕಳೆದ ಮಹಾಯುದ್ಧದಲ್ಲಿ ಸಂಪೂರ್ಣ ಅಳಿದುಹೋದಂತಹ ರಾಷ್ಟ್ರವದು. ರಾಷ್ಟ್ರವನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಲ್ಲಿ ಔದ್ಯೋಗಿಕೃತವಾಯಿತು. ಬಹಳ ರಭಸದಲ್ಲಿ ಮಾಲುಗಳ ಉತ್ಪನ್ನವಾಗಹತ್ತಿತು. ಇತರ ವಾಣಿಜ್ಯ ಕ್ಷೇತ್ರಗಳು ಸುಲಭವಾಗಿ ಸಿಗಲೊಲ್ಲವು. ಬಲಾತ್ಕಾರದಿಂದಲಾದರೂ ವಾಣಿಜ್ಯ ಕ್ಷೇತ್ರಗಳಿಗಾಗಿ ರಾಷ್ಟ್ರಗಳನ್ನು ವಸಾಹತುಗಳನ್ನು ಕೈವಶಪಡಿಸಿಕೊಳ್ಳಬೇಕೆಂಬ ಹಂಬಲ ಉತ್ಪನ್ನವಾಯಿತು. ದುರುದ್ದೇಶವು ಫಲಕಾರಿಯಾಗುವಂತೆ, ಜನತೆಗೆ ಪ್ರಾರಂಭದಲ್ಲಿಯೇ ಯುದ್ಧೋನ್ಮತ್ತರಾಗುವಂತಹ ಶಿಕ್ಷಣ ಕೊಡಲಾಯಿತು. ಯುದ್ಧಸಾಮಗ್ರಿಗಳನ್ನು ಒಂದೇಸವನೆ ತಯಾರಿಸಿತು. ಬಲಾತ್ಕಾರದಿಂದ ಸ್ವತಂತ್ರ ರಾಷ್ಟ್ರಗಳ ಸ್ವಾತಂತ್ರ್ಯ ಅಪಹರಿಸಿತು. ಆಸ್ಟ್ರಿಯಾ ಬಲಿಯಾಯಿತು. ಜೆಕೊಸ್ಲೊವೇಕಿಯಾ ತನ್ನ ರಾಷ್ಟ್ರದ ಪ್ರಾಮುಖ್ಯ ಅಂಗವನ್ನೇ ಕಳಕೊಂಡಿತು. ಪೋಲೆಂಡಿನ ಅಧೋಗತಿಯಾಯಿತು. ಅದನ್ನು ಅನುಸರಿಸಿ ಚಿಕ್ಕ ಪುಟ್ಟ ಪಾಶ್ಚಿಮಾತ್ಯ ಇತರ ರಾಷ್ಟ್ರಗಳ ಅಧಃಪತನವಾಯಿತು. ಜರ್ಮನಿಯ ದುರಾಭಿಲಾಷೆಯು ಪ್ರಪಂಚದ ಶಾಂತತೆಯ ಮೂಲವನ್ನೇ ಕದಲಿಸುವ ಪ್ರಯತ್ನಪಡುತ್ತಿದೆ. ಜರ್ಮನಿಯ ಇಷ್ಟೆಲ್ಲಾ ರಾಜ್ಯಾಭಿಲಾಷೆ, ವಸಾಹತುಗಳ ಅಪೇಕ್ಷೆ, ಅದಕ್ಕಾಗಿ ಜರ್ಮನಿಯು ಹೂಡಿರುವ ಕ್ರೂರಯುದ್ಧ, ಇವೆಲ್ಲವಕ್ಕೂ ಹಿನ್ನೆಲೆಯು, ಅದು ಔದ್ಯೋಗಿಕೃತವಾಗಿರುವುದರಿಂದೆಂದು ದೃಢವಾಗಿ ಕಾಣುತ್ತಿದೆ. ಹೀಗಿರುತ್ತ, ಔದ್ಯೋಗಿಕೃತವಾಗಿರುವುದರಿಂದ ಫೆಸಿಸ್ಟ್ ರಾಷ್ಟ್ರಗಳು ಶಾಶ್ವತ ಶಾಂತತೆಯನ್ನು ಪಡೆದಿರುವವೆ?

ರಷ್ಯಾ

ಇಂದು ಪ್ರಪಂಚದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಬಡತನವನ್ನು ಗಡೀಪಾರು ಮಾಡಿರುವ ಅದೊಂದು ರಾಷ್ಟ್ರವೆಂದರೆ ರಷ್ಯಾ. ಇಲ್ಲಿ ಸಂಪದುತ್ಪಾದನೋಪಕರಣಗಳ ಒಡೆತನವು ವ್ಯಕ್ತಿಗಳ ವಶವಿಲ್ಲ; ಬದಲಾಗಿ ಅದು ಸಮಾಜದ ಕೈಯಲ್ಲಿರುವುದು. ಅಂದರೆ ಅಲ್ಲಿ ಸಾಂಪತ್ತಿಕ ಸುಲಿಗೆಯ ನಿರ್ಮೂಲವಾಗಿದೆ. ಆರ್ಥಿಕ ಭೇದಗಳು ಅಡಗಿವೆ. ಉತ್ಪನ್ನ ಮತ್ತು ವಿತರಣವು ಸರಕಾರದ ಅಧಿಕಾರದಲ್ಲಿರುವುದು. ಇಡೀ ದೇಶವೇ ಔದ್ಯೋಗಿಕೃತವಾಗಿರುವುದು. ಪ್ರತಿಯೊಬ್ಬರೂ ಸರಕಾರಕ್ಕಾಗಿ, ತಾನು ಬೆಳಗೊಂಡಿರುವ ಸಮಾಜಕ್ಕಾಗಿ ದುಡಿಯಬೇಕು. ಸಮಾಜದ ಹಿತದೃಷ್ಟಿಯ ತನ್ನ ಆಚರಣೆಯನ್ನಿಟ್ಟಿರಬೇಕು. ಒಬ್ಬಾತ ಆ ಪದ್ಧತಿಗೆ ವ್ಯತಿರಿಕ್ತ ನಡೆದನೆಂದರೆ ಅಂತಹನ ಅಧಃಪತನವಾಗುತ್ತಿದೆ. ಲಾಭೋದ್ದೇಶ (Profit Motive) ವಿಲ್ಲದೆ ಸಂಪದುತ್ಪಾದನಾ ಕಾರ್ಯದಲ್ಲಿ ಪುಂಜಪತಿತ್ವ ಪದ್ಧತಿಯ ಪ್ರತ್ಯಕ್ಷ ವಿರುದ್ಧ ಪದ್ಧತಿಯು ರಷ್ಯಾದಲ್ಲಿದ್ದು, ನಿರುದ್ಯೋಗ ಸಮಸ್ಯೆಯನ್ನೂ, ಬಡತನದ ಪ್ರಶ್ನೆಯನ್ನೂ ರಷ್ಯವು ನಿವಾರಿಸಿರುತ್ತದೆ. ಮಾತ್ರವಲ್ಲ ಮಾನವ ಸಮಾಜಕ್ಕೆ ನಿಜವಾದ ಆರ್ಥಿಕ ನ್ಯಾಯ–ದುಡಿದುದನ್ನು ಉಣ್ಣುವ ಅಧಿಕಾರ–ಒದಗಿಸಿಕೊಟ್ಟಿದೆ. ಎಲ್ಲವೂ ರಾಷ್ಟ್ರಾಧಿಕಾರಕ್ಕೊಳಪಟ್ಟು, ಆ ಅಧಿಕಾರವು ಸಂಪೂರ್ಣ ಪ್ರಜಾಪ್ರಭುತ್ವ ಪದ್ಧತಿಗನುಸಾರವಾಗಿ ಮಹಾಜನರಿಂದಲೇ ಅವರ ಹಿತಕ್ಕೆ ಬೇಕಾದಂತೆ ಚಲಾಯಿಸಲ್ಪಡುವ ನಿಜವಾದ ಶಾಂತಿದಾಯಕ ಸ್ವಾತಂತ್ರ್ಯವು ರಷ್ಯದಲ್ಲಿ ಬಲುಪಾಲು ಸ್ಥಾಪಿಸಲಾಗಿದೆಯೆಂದು ಹೇಳಬಹುದು.

ಪ್ರಪಂಚ ಔದ್ಯೋಗಿಕ್ಯತವಾಗಿ ಅವ್ಯವಸ್ಥಾನುಸಾರ ನಡೆಯುತ್ತಿರುವ ಹೆಚ್ಚಿನ ರಾಷ್ಟ್ರಗಳಲ್ಲಿ ಈ ಅನಾಹುತಗಳಿಂದಾಗಿ ಪ್ರಪಂಚದ ಶಾಂತಿ ಹಾಳಾಗಿದೆ. ಹಾಗಾಗಿ ಪ್ರಪಂಚದ ಅಂತಹ ಪದ್ಧತಿಗಳಿಂದ ನಮ್ಮ ದೇಶಕ್ಕೆ ಆರ್ಥಿಕ ಸಾಮಾಜಿಕ ಬೆಳವಣಿಗೆಗೆ ಬೇಕಾಗುವ ಯಾವತ್ತೂ ವಿಷಯ ಸಿಗುವುದು ದುರ್ಲಭ. ಮಾತ್ರವಲ್ಲ, ಹಿತವೆಂದು ಕಂಡುಬರುವ ಕ್ರಮವನ್ನು ಕೂಡ ಪುನಃ ಹೊಸತಾಗಿ ನೆಟ್ಟು ಕಷ್ಟ ಸಹಿಸಿ ಫಲಕ್ಕಾಗಿ ಕಾಯುತ್ತ ಕುಳಿತುಕೊಳ್ಳುವುದರ ಬದಲು ನಮ್ಮ ದೇಶದ ಪ್ರಾಚೀನ ಹಾಗೂ ಪ್ರಚಲಿತ ಕಟ್ಟಡದ ಮೇಲೆಯೇ ಕಟ್ಟಲ್ಪಡತಕ್ಕಂತ ಪದ್ಧತಿಯು ಬೇಕಾಗಿದೆ. ಅಂತೆಂದ ಮೇಲೆ ಭಾರತದ ಆರ್ಥಿಕ ಬೆಳವಣಿಗೆಯ ಸಮಸ್ಯೆಯ ಪರಿಹಾರವೆಂತು?



ಸುಯೇಝ್ ಕಾಲುವೆ

ಕಾಲುವೆಯನ್ನು ತೋಡಿ, ಹಿಂದೂದೇಶವನ್ನು ಮತ್ತೂ ಸಮೀಪಗೊಳಿಸಿ ಬ್ರಿಟಿಷರು ತಮ್ಮ ವ್ಯಾಪಾರವನ್ನು ವೃದ್ಧಿಗೊಳಿಸಿದರು.

ಅಜಗಜಾಂತರವಿದೆ.


ಭಾರತ ವರ್ಷದ ಸ್ಥಿತಿಗೂ ಪಾಶ್ಚಿಮಾತ್ಯ ರಾಷ್ಟ್ರಗಳ ಸ್ಥಿತಿಗೂ ಅಜಗಜಾಂತರವಿದೆ. ಪಾಶ್ಚಿಮಾತ್ಯ ರಾಜ್ಯದಂತೆ ನಮ್ಮಲ್ಲಿ ಔದ್ಯೋಗಿಕರಣವಿನ್ನೂ ಆಗಿಲ್ಲ. ಕೈಗಾರಿಕೆಯ ಮತ್ತಿನ್ನಿತರ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಜೂರರ ಸಂಖ್ಯೆಯು ಬರೇ 3 ಮಿಲಿಯ. ಸೇಕಡಾ 80ರಷ್ಟು ಮಂದಿ ಬೇಸಾಯಗಾರರಿದ್ದಾರೆ. ಒಂದೆರಡು ಶತಮಾನಗಳಿಂದ ವ್ಯವಸ್ಥಾನುಸಾರ ನಮ್ಮ ಹಳ್ಳಿಯ ಕೈಗಾರಿಕೆಗಳ ನಿರ್ಮೂಲವಾಗುತ್ತಿದ್ದರೂ, ಅದರ ಮೂಲ ಕಿತ್ತೊಗೆಯಲು ಇನ್ನೂ ಸಾಧ್ಯವಾಗಿಲ್ಲ. ಭಾರತ ವರ್ಷದ ಸಾಮಾಜಿಕ ಆರ್ಥಿಕ ಪದ್ಧತಿ ಅತೀ ಪ್ರಾಚೀನವಾಗಿದ್ದು, ಅದರ ಕಟ್ಟಡವು ಸ್ಥಿರವಾಗಿ ಬೇರೂರಿದೆ. ಎಷ್ಟೋ ಪರಕೀಯರು ದಾಳಿಯಿಟ್ಟಿರಬಹುದು; ಅದೆಷ್ಟೊ ಕ್ಷಾಮಗಳು ಬಂದಿರಬಹುದಾದರೂ ನಮ್ಮ ಆರ್ಥಿಕ ಸಾಮಾಜಿಕ ಪದ್ಧತಿಗೆ ಧಕ್ಕೆ ಬಡೆವಷ್ಟು ಏನೂ ಆಗಿಲ್ಲ. ಹಿಂದಕ್ಕೆ ಭಾರತ ವರ್ಷದಲ್ಲಿಯೂ ದ್ರವ್ಯದ ಕೋಡಿ ಹರಿಯುವ ದೊಡ್ಡ ನಗರಗಳು ಇದ್ದುವು. ಇಂದಿನ ನಗರಗಳಂತೆ, ದ್ರವ್ಯವನ್ನು ಪರದೇಶಕ್ಕೆ ಕಳುಹಿಸುವ ಹೆಬ್ಬಾಗಿಲುಗಳಾಗಿರದೆ, ನಮ್ಮ ದೇಶದ ದ್ರವ್ಯವನ್ನು ನಮ್ಮಲ್ಲಿಯೇ ಇರಗೊಟ್ಟು ಪರದೇಶದ ದ್ರವ್ಯವನ್ನು ಕೂಡಾ ಸುರಿಸುವಂತವುಗಳಾಗಿದ್ದುವು. ಇಷ್ಟಾಗಿದ್ದರೂ ಭಾರತ ವರ್ಷವು ಹಳ್ಳಿಯ ರಾಜ್ಯ. ನಮ್ಮ ದೇಶದ ಏಳು ಲಕ್ಷ ಹಳ್ಳಿಗಳು ಛಿನ್ನವಿಛಿನ್ನವಾಗಿಲ್ಲ. ಒಂದಕ್ಕೊಂದು ನಿಕಟ ಸಂಬಂಧವಿದ್ದು, ತನ್ನ ಹಳ್ಳಿಗೆ ಬೇಕಾದುದನ್ನು ತಾನೇ ತಯಾರಿಸುವ ಸ್ವಾವಲಂಬಿಯಾಗಿದ್ದುವು ಮಾನವನ ದಿನನಿತ್ಯದ ಉಪಯೋಗಗಳಲ್ಲಿ ಸಹಾಯಕರಾಗಿರಬೇಕಿರುವ ಕಮ್ಮಾರ ಬಡಗಿ, ಕ್ಷೌರಿಕ, ಕುಂಬಾರ, ಮಡಿವಾಳ, ಅರ್ಚಕ, ಬೇಸಾಯಗಾರ, ನೂಲುವವ, ಜೇಡರವ, ಮೊದಲಾದವರು ಆಯಾ ಹಳ್ಳಿಗಳಲ್ಲಿ ಇರುತ್ತಿದ್ದರು. ನೆರೆ ಬಂದು ಒಂದು ಹಳ್ಳಿಗೆ ಮತ್ತು ನೆರೆಹಳ್ಳಿಯ ಸಂಬಂಧ ಕಡಿದು ಹೋಗಲಿ, ಮತ್ತಿನ್ನಾವ ಗಂಡಾಂತರ ಬಂದೊದಗಲಿ, ಹಳ್ಳಿಗಳು ಸ್ವಾವಲಂಬಿ (Self supporting)ಯಾಗಿದ್ದುದರಿಂದ ಏನೂ ಹಾನಿತಟ್ಟುತ್ತಿದ್ದಿಲ್ಲ. ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಿದ್ದು ರಾಷ್ಟ್ರ ಯತ್ನದ ಸಂಘವಾಗಿತ್ತು. ನಮ್ಮ ಸಾಮಾಜಿಕ–ಆರ್ಥಿಕ ಪದ್ಧತಿಯು ಅಖಂಡವಾಗಿತ್ತು. ಇಂದಿನ ತನಕವೂ ಪಾಶ್ಚಿಮಾ[...] ರಾಜ್ಯಗಳಿಂದ ಸಾಧ್ಯವಾಗದ ಪದ್ಧತಿಯು ನಮ್ಮ ದೇಶದಲ್ಲಿ ಪ್ರಾಚೀನದಿಂದಲ[...] ಬಳಕೆಯಲ್ಲಿದೆ. ಈ ಪದ್ಧತಿಯಲ್ಲಿ ಪ್ರತಿಯೊಬ್ಬನಿಗೂ ದುಡಿಯಲು ಅನುಕೂ[...] ಅಂದರೆ ಊಟ, ಸಂತೃಪ್ತಿ, ಉದ್ಯೋಗ ಮತ್ತು ಹಸಿವಿನ ಪ್ರಶ್ನೆ ನಿವಾರ[...] ಯಾಯಿತೆಂದರೆ ಆತನಿಗೆ ತುಂಬಾ ಬಿಡು ಸಿಗುವುದು. ಅದು ಆತನ ಮಾನಸಿ[...] ಬೆಳವಣಿಗೆಗೆ ಸಾಧಕವಾಗುವುದು. ಪ್ರತಿಯೊಂದು ಉದ್ಯೋಗವೂ ಅನುವಂಶಿ[...] ವಾಗಿದೆ. ತಂದೆಗೆ ಅರಿವಿದ್ದ ಕೈಗಾರಿಕೆಯನ್ನು ಮಗನು ಕಲಿತು ಅಭ್ಯಾಸಿಸ[...] ವನು. ಅಂತಹ ಬೆಳವಣಿಗೆಗೆ ಸರಕಾರವು ಬೆಂಬಲ ನೀಡುವುದು. ಅಂತ[...] ಪ್ರತಿಯೊಂದು ಹಳ್ಳಿಯೂ ಸಹಕಾರ "ಕೊಮನ್‌ವೆಲ್ತ್" ಆಗಿದ್ದುವು.

ಯಂತ್ರೋಪಕರಣವು ಫಲಕಾರಿಯಾದೀತು, ಕೆಲಸಮಾಡುವ ಕೈಗಳ[...] ಕಮ್ಮಿ ಇದ್ದಲ್ಲಿ, ಭಾರತದಲ್ಲಿ ಜನಸಂಖ್ಯೆಯು ಮಿತಿಮೀರಿದೆ. ಅಂತಹ ರಾಜ್ಯದ[...] ಯಂತ್ರೋಪಕರಣದಿಂದ ಪ್ರಯೋಜನವಿಲ್ಲ. ಇಂದು ಹಳ್ಳಿಯವನಿಗೆ ವಿರಾ[...] (Leisure) ಬೇಕಾಗಿರುವ ಪ್ರಶ್ನೆ ಅಲ್ಲ; ವರುಷದ ಏಳು ತಿಂಗಳು ನಿರುದ್ಯೋ[...] ದಿಂದ ಅಲೆದಾಡಬೇಕಾಗಿರುವ ಹಳ್ಳಿಗನಿಗೆ ಉಪವೃತ್ತಿಯು ಅದೆಂತಹುದಾ[...] ಬೇಕೆನ್ನುವ ಪ್ರಶ್ನೆ. ಕೈಗೆಲಸಗಳನ್ನು ಕಳಿಸಿಬಿಟ್ಟಲ್ಲಿ, ಯಂತ್ರೋಪಕರಣ[...] ಪ್ರತಿಯೊಂದು ಗುಡಿಸಲಿನಲ್ಲಿ ಸ್ಥಾಪಿತವಾದಂತೆ ಸರಿ. ಇಂದು ಮಹಾತ್ಮಾಜಿಯ[...] ವರ ಯೋಜನೆಯು ಅದೇ ಇದೆ. ಅವರು ಔದ್ಯೋಗಿಕರಣಕ್ಕೆ ವಿರುದ್ಧವಿಲ್ಲ[...] ಎಂತಹ ಯಂತ್ರೋಪಕರಣವು ಮಾನವನ ಅನುವಂಶಿಕ ಕೌಶಲ್ಯದ ಸಾಮಾ[...] ಶೇಷಮಾಡುತ್ತಿದೆ, ಅಂತಹ ಕೌಶಲ್ಯದ ಸದುಪಯೋಗಕ್ಕೆ ಧಕ್ಕೆ ಬಡೆಯುತ್ತಿದೆ[...] ಅಂತಹ ಯಂತ್ರೋಪಕರಣಕ್ಕೆ ಅವರು ವಿರುದ್ಧವಿದ್ದಾರೆ. 'ಯಂತ್ರವು ಮಾನ[...] ವನ ಆಳಾಗಿರಬೇಕು, ಮಾನವನನ್ನು ಆಳುವಂತಹದಾಗಿರಬಾರದು.'

ಭಾರತದ ತತ್ವ ಅಹಿಂಸೆಯಿದೆ

ನಮ್ಮ ದೇಶದ ಧರ್ಮ, ತತ್ವ, ಅಹಿಂಸಾತ್ಮಕವಿದೆ ಪಾಶ್ಚಿಮಾತ್ಯ ಔದ್ಯೋ[...] ಗಿಕರಣವು ಹಿಂಸೆಯ ಮೇಲೆ ಕಟ್ಟಲ್ಪಟ್ಟಿರುವುದು. ಔದ್ಯೋಗಿಕ ರಾಜ್ಯವು ನಿಶ್ಯಸ್ತ್ರ[...] ವಾಗಿರಲು ಎಂದಿಗೂ ಸಾಧ್ಯವಿಲ್ಲ. ಸೈನ್ಯಬಲಬೇಕು, ನೌಕಾಬಲಬೇಕು; ಫಿರಂಗಿ[...] ಬೋಂಬುಗಳು ತಯಾರಾಗಬೇಕು. ಯಾಂತ್ರಿಕರಣವನ್ನು ಕಾಪಾಡಿಕೊಳ್ಳ[...] ಬೇಕಾದರೆ ಇಷ್ಟೆಲ್ಲಾ ಬೇಕು. ಅದೊಂದು ಕಾಲವಿತ್ತು; ಯುದ್ಧಗಳೆಲ್ಲಾ ಮಾನವನ ಸ್ವಾರ್ಥಪೂರ್ತಿಗಾಗಿದ್ದುವು. ಇಂದಿನ ಯುದ್ಧಗಳು ಆರ್ಥಿಕ ಯುದ್ಧಗಳು; ಔದ್ಯೋಗಿಕರಣದೆಸೆಯಿಂದ ಉತ್ಪಾದನವು ಅಧಿಕವಾಗಿ, ಪರರಾಜ್ಯಾರ್ಜನೆ ವಾಣಿಜ್ಯ ಕ್ಷೇತ್ರಗಳನ್ನು ಅಪಹರಿಸದೆ ಗತ್ಯಂತರವಿಲ್ಲ. ಸ್ಪರ್ಧೆಬೀಳುವುದು, ಈ ರೀತಿ ಆಧುನಿಕ ಯುದ್ಧಗಳು ಪ್ರಾರಂಭವಾಗಿವೆ. ಸುಸಜ್ಜಿತ ದಂಗೆಖೋರರು ಪ್ರಪಂಚದಲ್ಲಿ ಪ್ರಾಮುಖ್ಯ ಸ್ಥಾನ ಪಡೆದಿರುವರು.

ಅತಿಪ್ರಾಚೀನವಿದ್ದು, ನಮ್ಮದೇ ಆಗಿರುವ ಆರ್ಥಿಕ ಸಾಮಾಜಿಕ ಕಟ್ಟಡದ ಮೇಲೆ ಆಧುನಿಕ ಪರಿಸ್ಥಿತಿಗೆ ಹೊಂದಿಕೊಂಡಿರುವಂಥ ಪದ್ಧತಿಯೇ ನಮ್ಮ ದೇಶಕ್ಕೆ ಶಾಸ್ವತಶಾಂತಿಯನ್ನು ಕೊಡಬಲ್ಲುದು. ಅದನ್ನೇ ಇಂದು ಮಹಾತ್ಮಾಜಿಯವರು ಪ್ರತಿಪಾದಿಸುತ್ತ ಇದ್ದಾರೆ. ಯಾವುದೊಂದು ರಾಷ್ಟ್ರದಲ್ಲಿ ಇತ್ತಿತ್ತ ಕೆಲವು ಶತಮಾನಗಳಿಂದ ಭೇದಭಾವಗಳು ಉತ್ಪನ್ನವಾಗಿ, ಸೌಹಾರ್ದ ಲೋಪವಾಗಿದೆ, ಅಲ್ಲಿಂದು ಪ್ರೇಮ ಮತ್ತು ಸೇವೆಯ ಹಿನ್ನಲೆಯಿಂದ ತಮ್ಮ ಯೋಜನೆಯನ್ನು ದೇಶದ ಮುಂದಿಟ್ಟಿದ್ದಾರೆ. ಅವರ ತತ್ವದಂತೇ, ಯಾವುದೊಂದು ಮಾನವನ ದಿನನಿತ್ಯದ ಜೀವನಕ್ಕೆ ಅವಶ್ಯಸಾಧಕವಾಗಿರುವುದು, ಅಂತಹ, ಊಟ ಮತ್ತು ಉಡುಪು ಮಾನವನಿಗೆ ಸ್ವಾವಲಂಬಿಯಾಗಿರಬೇಕು.. ಅಂತೆಂದರೆ ಹಳ್ಳಿಯೇ ಸ್ವಾವಲಂಬಿಯಾಗುವುದು, ಪೇಟೆ ಸ್ವಾವಲಂಬಿಯಾಗುವುದು, ಇಡೀ ದೇಶವೇ ಸ್ವಾವಲಂಬಿಯಾಗುವುದು. ಇದು ಹಿಂಸೆಯಿಂದಲ್ಲ; ಪ್ರೇಮದಿಂದ; ರಕ್ತಪಾತದಿಂದಲ್ಲ, ಸೌಹಾರ್ದದಿಂದ, ಇಂತಹ ಉದಾತ್ತ ಮಾನವೀ ಧೈರ್ಯದಿಂದ ಮಹಾತ್ಮಾಜಿಯವರು ನಮ್ಮ ಪುರಾತನವಾಗಿರುವಂತಹ ಸಾಮಾಜಿಕ ಆರ್ಥಿಕ ಪದ್ಧತಿಯ (Socio—Economic Structure) ಕಟ್ಟಡದ ಪುನರುಜ್ಜೀವನಗೊಳಿಸಲು ಅಹಿರ್ನಿಶಿ ಶ್ರಮ ವಹಿಸುತ್ತಿದ್ದಾರೆ. ಇದರಿಂದಲೇ ಭಾರತವರ್ಷದ ಉದ್ಧಾರ— ಅದೇಕೆ, ಭಾವಿ ಪ್ರಪಂಚದ ಉದ್ಧಾರ.





ವಾಣಿಜ್ಯ ದೃಷ್ಟಿಯಿಂದ ಚಲಚ್ಚಿತ್ರ ಕೈಗಾರಿಕೆ

(ಶ್ರೀ। ಕೆ. ವಿ. ಭಟ್.)



ಪ್ರಪಂಚದಲ್ಲಿರುವ ವಸ್ತುಗಳನ್ನು ನಾವು ದೃಷ್ಟಿದ್ವಯಗಳಿಂದ ನೋಡಬಹುದು. ಒಂದು ಅಂತರಿಕದೃಷ್ಟಿ: ಮತ್ತೊಂದು ಬಾಹ್ಯದೃಷ್ಟಿ. ಹಾಗೆಯೇ ಚಲನಚಿತ್ರಗಳನ್ನೂ ಎರಡು ಬಗೆಯಿಂದ ನೋಡಬಹುದು: ಒಂದು ಕಲೆಯ ಕಣ್ಣಿನಿಂದ; ಇನ್ನೊಂದು ವ್ಯಾಪಾರೀ ದೃಷ್ಟಿಯಿಂದ. ಕಲೆಯೆಂಬುದು ಚಲನ ಚಿತ್ರಗಳ ಹೃದಯ, ಅಥವಾ ಜೀವ.; ವಾಣಿಜ್ಯವೆಂಬುದು ಅದರ ಹೊರಗಿನ ಮೈ. ದೇಹಕ್ಕೂ ಮನಸ್ಸಿಗೂ ಪರಸ್ಪರ ಸಂಬಂಧವಿರುವಂತೆ, ಚಲನಚಿತ್ರಗಳ ಒಳಮೈಯಾದ ಕಲೆಗೂ, ಅದರ ಬಾಹ್ಯಾಂಗವಾದ ವ್ಯಾಪಾರಕ್ಕೂ ಅನ್ಯೋನ್ಯ ಮೈತ್ರಿಯಿದೆ; ಒಂದರಿಂದ ಮತ್ತೊಂದು ಜೀವಿಸಬೇಕಾಗಿದೆ. ಎರಡೂ ಅದರ ಪ್ರಗತಿಗೆ, ಬಾಳುವೆಗೆ ಬೇಕಾದವುಗಳೇ ಆಗಿವೆ.

ನಾವು ಇಲ್ಲಿ ಚಿತ್ರ ಕೈಗಾರಿಕೆಯ ಹೊರಮೈಯಾದ ವ್ಯಾಪಾರ ದೃಷ್ಟಿಯಿಂದ ನೋಡುವ.

ಭಾರತ ದೇಶದಲ್ಲಿ ರಚಿಸಲಾದ ಚಲನಚಿತ್ರಗಳ ಉತ್ಕೃಷ್ಟತೆ—ನಿಕೃಷ್ಟತೆಗಳ, ಗುಣಾವಗುಣಗಳ ಅಥವಾ ಅವುಗಳ ಮನೋರಂಜನೆಯ ಮತ್ತು ಬೋಧಕ ಶಕ್ತಿಯ ಕುರಿತು ಜನರಲ್ಲಿ ಇರುವ ಅಭಿಪ್ರಾಯವು ಏನೇ ಇರಲಿ, ಭಾರತ ರಾಷ್ಟ್ರದ ಆರ್ಥಿಕ ಜೀವನದಲ್ಲಿ ಅದರ ಪ್ರಾಮುಖ್ಯತೆಯನ್ನು ಯಾರೂ ಅಲ್ಲಗಳೆಯಲಾರರು.

1913ನೆಯ ಇಸವಿಯಲ್ಲಿ ನಮ್ಮ ದೇಶದಲ್ಲಿ ಪ್ರಥಮ ಚಲನಚಿತ್ರವು ರಚಿಸಲ್ಪಟ್ಟಿತು. ಆಗ ಅದಕ್ಕೆ ಸಿಕ್ಕಿದ ಪ್ರೋತ್ಸಾಹವು ಅಷ್ಟೇನೂ ಅಧಿಕವಲ್ಲದಿದ್ದರೂ, ಎದೆಗುಂದಿಸುವಂಥದ್ದಿಲ್ಲ. ಆದರೆ ಚಲನಚಿತ್ರ ಕೈಗಾರಿಕೆಯ ಬೆಳವಣಿಗೆಯು ಆದುದು ನಮ್ಮಲ್ಲಿ ಪ್ರಥಮ ವಾಕ್ಚಿತ್ರವಾದ "ಆಲಂ ಅರಾ" ರಚಿಸಲ್ಪಟ್ಟ ನಂತರ. ವಾಕ್ಚಿತ್ರದ ಶೋಧನೆಯೊಂದಿಗೆ ನಮ್ಮ ಚಲಚ್ಚಿತ್ರ ರಂಗ ಪುಷ್ಟಿಗೊಂಡು, ನಡೆಯಲಾರಂಭಿಸಿತು. ಅಂದಿನಿಂದ ಹಲವು ಧನಿಕರ ಗಮನವು ಈ ಕೈಗಾರಿಕೆಯತ್ತ ಎಳೆಯಲ್ಪಟ್ಟು, ಅನೇಕ ಚಿತ್ರರಚನಾ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು.

ಈ ಕೈಗಾರಿಕೆಯನ್ನು ನಾವು ಒಂದು ಸುಂದರವಾದ ವೃಕ್ಷದಂತೆ ಭಾವಿಸಬಹುದು. ವೃಕ್ಷವು ತನ್ನ ಎಲೆಗಳಿಂದ ತಂಪಾದ ಗಾಳಿಯನ್ನು ಬೀಸಿ, ಮನೋಲ್ಲಾಸವನ್ನುಂಟುಮಾಡುವಾಗಲೇ ನೆರಳನ್ನು ಕೊಡುತ್ತದೆ. ಅಂತೆಯೇ ಈ ಕೈಗಾರಿಕಾ ವೃಕ್ಷವೂ ನಮಗೆ ಮನೋರಂಜನೆಯನ್ನು ಮಾಡುವುದಲ್ಲದೆ ಅನೇಕ ಜನರಿಗೆ ಆಶ್ರಯಸ್ಥಾನವೂ ಆಗಿರುತ್ತದೆ.

ಚಲಚ್ಚಿತ್ರ ಕೈಗಾರಿಕೆಯನ್ನು ನಾವು ಮೂರು ಮುಖ್ಯ ಭಾಗವಾಗಿ ಮಾಡಬಹುದು. (೧) ಮರಕ್ಕೆ ಬೇರಿನಂತೆ ಅಥವಾ ಕಾಂಡದಂತೆ ಇದಕ್ಕೆ ರಚನಾ ಶಾಖೆಯಿರುವುದು. (೨) ವಾಕ್ಚಿತ್ರ ವೃಕ್ಷದ ಗೆಲ್ಲುಗಳಂತೆ ಚಿತ್ರ ಒದಗಿಸುವವರು (Distributors) (೩) ಪ್ರದರ್ಶನಕಾರರೇ ಈ ಮರದ ಎಲೆಗಳಂತಿರುವರು. ಎಲೆ, ಗೆಲ್ಲು, ಬೇರುಗಳೊಳಗೆ ಹೇಗೆ ಸಂಬಂಧವಿರುವುದೋ ಅದೇ ರೀತಿಯಲ್ಲಿ ಈ ಮೂರು ಶಾಖೆಗಳಿಗೂ ಅನ್ಯೋನ್ಯ ಸಂಬಂಧ ಇದೆ. ಆ ಸಂಬಂಧವು ಎಷ್ಟು ಬಲವತ್ತರವಾಗಿದೆ ಎಂದರೆ ಒಂದನ್ನುಳಿದು ಬಾಕಿ ಎರಡು ಉಳಿಯುವುವೋ ಎಂದು ಹೇಳಲು ಬಾರದು.



ನ್ಯೂ ಥಿಯೇಟರ್ಸಿನ ಶ್ರೀ। ಬರ್ವಾ ಮತ್ತು ಜಮ್ನಾ.

ಚಿತ್ರರಚನಾ ಸಂಸ್ಥೆಗಳಲ್ಲಿ ಎರಡು ತೆರ. ಒಂದು ತಮ್ಮದೇ ಆದ ಸ್ಟುಡಿಯೋಗಳಿದ್ದು, ಸ್ವತಃ ನಿರ್ದೇಶಕರು, ನಟನಟಿಯರು, ಮೊದಲಾದ ಉದ್ಯೋಗಿಯರನ್ನು ಇಟ್ಟುಕೊಂಡು ಕೆಲಸಮಾಡುವುದು ಮತ್ತೊಂದು ಬೇಕಾದಾಗ ಬೇರೆಯವರ ಸ್ಟುಡಿಯೋಗಳನ್ನು ಬಾಡಿಗೆಗೆ ಕೊಂಡುಕೊಂಡು ಒಂದೆರಡು ಚಿತ್ರಗಳನ್ನು ಆಗಿಂದಾಗ್ಯೆ ಮಾಡುತ್ತಾ ಇರುವುದು. ಇವುಗಳಿಗೆ ಹಣದ ಅಭಾವವು ಹೆಚ್ಚು.

ನಮ್ಮ ದೇಶದಲ್ಲಿ ಒಂದು ಚಿತ್ರವನ್ನು ನಿರ್ಮಿಸಲು ಸಾಧಾರಣ ಸರಾಸರಿ ನಾಲ್ಕು ತಿಂಗಳಿಂದ ಆರು ತಿಂಗಳ ಸಮಯವು ಬೇಕಾಗುತ್ತದೆ. ಒಂದು ಚಿತ್ರಕ್ಕೆ ತಗಲುವ ಮೊಬಲಗನ್ನು ಸರಾಸರಿ ಐವತ್ತು ಸಾವಿರದಿಂದ ಎಪ್ಪತ್ತೈದು ಸಾವಿರ ರೂಪಾಯಿ ಎಂದು ಅಂದಾಜುಮಾಡಲಾಗಿದೆ. ಈ ಹಣವನ್ನು ಚಿತ್ರರಚನಕಾರರು ಸ್ವಲ್ಪ ಭಾಗವನ್ನು ತಮ್ಮ "ಡಿಸ್ಟ್ರಿಬ್ಯೂಟರ"ರಿಂದ ಕನಿಷ್ಠ ಜವಾಬುದಾರಿ ಧನವೆಂದಾಗಿಯೂ (Minimum Guarantee) ಸ್ವಲ್ಪ ಭಾಗವನ್ನು ತಮ್ಮ ಸಾಮಗ್ರಿಗಳನ್ನು ಒತ್ತೆಯಿಟ್ಟು ಅಥವಾ ಬೇರೆ ವಿಧಾನಗಳಿಂದ ಪಡೆಕೊಳ್ಳುವರು. ಆದರೆ ಇವರು ಕೊಡುವ ಬಡ್ಡಿಯು ಸ್ವಲ್ಪವಲ್ಲ: ಹಣವನ್ನು ಪಡೆಯಲು ಅಧಿಕವಾದ ಬಡ್ಡಿಯನ್ನು ಇವರು ಕೊಡಬೇಕಾಗಿದೆ. ಏಕೆಂದರೆ ಈ ಕೈಗಾರಿಕೆಗೆ ಆರ್ಥಿಕ ಸಹಾಯಕೊಡುವವರು ಅಲ್ಪಮಂದಿ. ಕೆಲವರಂತೂ ಬೇರೆ ದೃಷ್ಟಿಯಿಂದಲೇ, ಅಂದರೆ ಸ್ವಾರ್ಥಪರತೆಯಿಂದ ಸಹಾಯಮಾಡುವರು. ಅಂಥವರು ಚಲಚ್ಚಿತ್ರ ರಚನೆಯ ಮುಖ್ಯ ಕಾರ್ಯದಲ್ಲಿಯೂ ತಮ್ಮ ಕೈಯನ್ನು ತೋರಿಸುವರು: ತಮಗೆ ಬೇಕಾದ ನಟನಟಿಯರನ್ನು ಕೂಡಿಸುವಂತೆಯೂ ಕೆಲವು ದೃಶ್ಯ, ಕಥಾಭಾಗ ಮೊದಲಾದ ವಿಷಯಗಳಲ್ಲಿಯೂ ಅಡ್ಡಬರುವರು. ಇದರಿಂದ ಕೈಗಾರಿಕೆಯು ನಾಶವಲ್ಲದೆ, ಮುನ್ನಡೆಯಾಗದೆಂದು ಅಂಥವರು ತಿಳಿಯತಕ್ಕದು.

ಎರಡನೆಯದಾಗಿ ಡಿಸ್ಟ್ರಿಬ್ಯೂಟರರ ಕಾರ್ಯ:—ಡಿಸ್ಟ್ರಿಬ್ಯೂಟರರು ಬೇರೆ ವ್ಯಾಪಾರ ಉದ್ಯೋಗಗಳಲ್ಲಿದ್ದ "ದಲಾಲಿ"ಗಳಂತೆನ್ನಬಹುದು. ಆದರೆ ಚಲಚ್ಚಿತ್ರ ಕೈಗಾರಿಕೆಯಲ್ಲಿ ಇವರ ಮಹತ್ವವು ವಿಶೇಷವಿದೆ. ಹೊಳೆಯ ಆಚೆ ದಡವನ್ನೂ ಈಚೆಯ ತೀರವನ್ನೂ ಸೇರಿಸಲು ಮಧ್ಯದಲ್ಲಿ ಸೇತುವೆ ಇರುವಂತೆ ಇವರು ಪ್ರದರ್ಶನಕಾರರಿಗೂ, ರಚನಕಾರರಿಗೂ ಮಧ್ಯದಲ್ಲಿದ್ದು ತಮ್ಮ ಕಾರ್ಯವನ್ನು ಮಾಡುತ್ತಿರುವರು. ಚಿತ್ರರಚನೆಯ ಕಾರ್ಖಾನೆಯಲ್ಲಿ ಚಿತ್ರವು ತಯಾರಾಗುತ್ತಿರುವಾಗಲೇ ಇವರು ರಚನಕಾರರನ್ನು ಕಂಡು, ಆ ಚಿತ್ರವನ್ನು ಹಂಚುವ ಹಕ್ಕನ್ನು ಪಡೆಯಲು ಪ್ರಯತ್ನಮಾಡುತ್ತಾರೆ. ಈ ಪ್ರಯತ್ನದಲ್ಲಿ ಪೋಟಾಪೋಟಿಯು ನಡೆಯುವುದೂ ಉಂಟು. ಇದು ಚಿತ್ರ ಕೈಗಾರಿಕೆಯ ಮುನ್ನಡೆಯ ದೃಷ್ಟಿಯಿಂದ ಒಳ್ಳೆಯದಲ್ಲ. ರಚಯಿತರು ತಮ್ಮ ಮೇಲೆ ಹೊರಿಸಿದ ಕನಿಷ್ಠ ಧನವನ್ನು (M. G.) ಇವರು ತಮ್ಮ ಪ್ರದರ್ಶನಕಾರರ ಮೇಲೆ ಹೊರಿಸುವರು. ಅಥವಾ ತಮ್ಮ ಆಫೀಸಿನ ಉಪಶಾಖೆಗಳನ್ನು ಅಲ್ಲಲ್ಲಿ ಸ್ಥಾಪಿಸಿ, ಅಲ್ಲಿಂದ ತಮ್ಮ ಪ್ರತಿನಿಧಿಗಳನ್ನು ಊರೂರಿಗೆ ಕಳುಹಿಸಿ ಅಲ್ಲಿಯ ಪ್ರದರ್ಶನಾಲಯಗಳಲ್ಲಿ ತಮ್ಮ ಚಿತ್ರಗಳನ್ನು ಪಾಲುಗಾರಿಕೆ ಶರ್ತದಲ್ಲಿ ತೋರಿಸುವರು. ಅಂಥಾ ಸಮಯದಲ್ಲಿ ಇವರ ಪ್ರತಿನಿಧಿಗಳು ಹೋಗಿಬರುವ ಖರ್ಚು, ಇತ್ಯಾದಿಯೂ, ಅವರಿಂದ ತರಿಸುವ ಜಾಹೀರಾತು ಚಿತ್ರಗಳಿಗೂ (Poster) ಇವರು ಹಣವನ್ನು ತೆರಬೇಕು ಈಗ ಸಾಧಾ

ರಣವಾಗಿ ಡಿಸ್ಟ್ರಿಬ್ಯೂಟರರು ಶೇಕಡಾ 60%ರಂತೆ ಅಂದರೆ ಒಂದು ದಿನದ ಚಿತ್ರಪ್ರದರ್ಶನದಿಂದ ಬಂದ ಹಣದಲ್ಲಿ 100 ರೂಪಾಯಿಗೆ 60ರಂತೆ ತೆಗೆಯುವರು. ಬಾಕಿ ಉಳಿದ ನಾಲ್ವತ್ತು ಪ್ರದರ್ಶನಕಾರರಿಗೆ ಸಲ್ಲುವುದು. ಈ ನಾಲ್ವತ್ತು ರೂಪಾಯಿಯಲ್ಲಿ ಪ್ರದರ್ಶನಕಾರರು ತಮ್ಮ ಖರ್ಚನ್ನೂ, ಜಾಹೀರಾತು ಇತ್ಯಾದಿಯನ್ನೂ, ಹಂಚುಗಾರರ ಪ್ರತಿನಿಧಿಯ ಖರ್ಚನ್ನೂ ನೋಡಬೇಕಾಗುತ್ತದೆ. ಇದರಿಂದ ಇವರಿಗೆ ಲಾಭವು ಸ್ವಲ್ಪ ಕಡಮೆಯಾಗುವುದು. ಆದುದರಿಂದಲೇ ಕಳೆದ ವರುಷ ಬೊಂಬಾಯಿಯಲ್ಲಿ ನಡೆದ ಅಖಿಲ ಹಿಂದೂದೇಶದ ಪ್ರದರ್ಶನಕಾರರ ಸಮ್ಮೇಳನದಲ್ಲಿ ಇದನ್ನು 50% ಮಾಡಬೇಕೆಂದು ಠರಾವು ಮಂಜೂರು ಮಾಡಲಾಯಿತು. ಇನ್ನು ಕೆಲವು ಹಂಚುಗಾರರು, ಚಿತ್ರಗಳ ಮೇಲೆ ತಮಗಿರುವ ಅದೊಂದು ಬಲದಿಂದ, ಪಟ್ಟಣದಲ್ಲಿರುವ ಪ್ರದರ್ಶನಾಲಯಗಳನ್ನು ಲಾಭದಲ್ಲಿ ಪಾಲುಗಾರಿಕೆಮಾಡುವ ಕರಾರಿನ ಮೇಲೆ ನಡೆಸಿಕೊಂಡು ಬರುತ್ತಾರೆ. ಇಲ್ಲಿ ತೋರಿಸುವುದೆಲ್ಲ ಅವರಿಗೆ ಹಂಚಲಿಕ್ಕೆ ಸಿಗುವ ಚಿತ್ರಗಳೇ; ಆದುದರಿಂದ ಪ್ರದರ್ಶನಕಾರರಿಗೆ ಸಿಗುವ ಸ್ವಲ್ಪ ಲಾಭವು ಇಲ್ಲಿ ಇವರಿಗೆ ಸಲ್ಲುತ್ತದೆ. ಇದರಿಂದ, ಡಿಸ್ಟ್ರಿಬ್ಯೂಟರರು ಈ ರೀತಿ ವರ್ತಿಸಿದರೆ, ಚಲಚ್ಚಿತ್ರ ಕೈಗಾರಿಕೆಯ ಒಂದು ಶಾಖೆಯಾದ ಪ್ರದರ್ಶನ ಶಾಖೆಯು ಬೆಳೆಯದೆ ಹೋಗುವುದು. ಈಗಲೀಗ ಕನಿಷ್ಠ ಧನವನ್ನು ನಿಲ್ಲಿಸಿ, ಈ ಕೈಗಾರಿಕೆಯು ಸರ್ವತೋಮುಖವಾಗಿ ಬೆಳೆಯುವಂತೆ ಏಜೆನ್ಸಿ ಕರಾರಿನಲ್ಲಿ (Agency Contract) ಚಿತ್ರ ಹಂಚಗಾರಿಕೆಯು ನಡೆಯುವಂತೆ ಮಾಡಬೇಕೆಂದು ಎಣಿಸಲಾಗಿದೆ.

ಇನ್ನುಳಿಯುವವರು ಪ್ರದರ್ಶನಕಾರರು. ಇವರು ಹೆಚ್ಚಾಗಿ ಸಾರ್ವಜನಿಕರ ಪ್ರೋತ್ಸಾಹದ ಮೇಲೆ ಹೊಂದಿಕೊಂಡಿರುತ್ತಾರೆ. ತಮ್ಮ ಮಂದಿರಗಳನ್ನು ಆದಷ್ಟು ಮಟ್ಟಿಗೆ ಆಧುನಿಕ ಕಾಲಕ್ಕೆ ಸರಿಯಾಗುವಂತೆ, ಆಸನಾದಿಗಳಿಂದ ಶುಚಿಯಾಗಿಡುವುದೂ, ಉತ್ತಮ ತರದ ಯಂತ್ರಾದಿಗಳನ್ನು ಉಪಯೋಗಿಸುವುದೂ ಯೋಗ್ಯ ತರದ ಚಿತ್ರಗಳನ್ನು ತರಿಸಿ ಪ್ರದರ್ಶಿಸುವುದೂ. ಸಾರ್ವಜನಿಕರ ಅನುಕೂಲಕ್ಕನುಸಾರವಾಗಿ ದರಗಳನ್ನು ನಿಯಮಿಸುವುದೂ—ಇದೆಲ್ಲ ಇವರು ನೋಡಬೇಕಾದ ಪ್ರಮುಖ್ಯ ವಿಷಯಗಳು. ಇವರಿಗೂ, ಚಿತ್ರರಚನಗಾರರಿಗೂ ಅಷ್ಟೊಂದು ಪರಿಚಯವಿಲ್ಲವಾದರೂ ಸಾಮಾಜಿಕರ ರುಚಿಯನ್ನು ಬಲ್ಲವರಿವರು.

ವಾಣಿಜ್ಯ ದೃಷ್ಟಿಯಿಂದ ಈ ಮೂವರೂ ಅನ್ಯೋನ್ಯ ಸಹಾನುಭೂತಿಯನ್ನು ತೋರಿಸಿದರೇನೇ ಚಲಚ್ಚಿತ್ರಗಳು ಕಲಾದೃಷ್ಟಿಯಿಂದ ತುಂಬಾ ಮುನ್ನಡೆಯಬಹುದು. ಹಾಗೂ ಮೂವರೂ ತಮಗೆ ಸಿಗತಕ್ಕ ಲಾಭವನ್ನು ಅನಾಯಾಸವಾಗಿ ಪಡೆಯಬಹುದು.

ಈ ಕೈಗಾರಿಕೆಯು ನಮ್ಮ ದೇಶದಲ್ಲಿ ಇರುವ ಮುಖ್ಯ ಕೈಗಾರಿಕೆಗಳಲ್ಲಿ ಎಂಟನೆಯ ಸ್ಥಾನವನ್ನು ಪಡೆದಿರುತ್ತದೆ. ಇದು ಕೆಳಗೆ ಕೊಟ್ಟ ಅಂಕೆ ಸಂಖ್ಯೆಗಳಿಂದ ಇನ್ನಿಷ್ಟೂ ಸ್ಪಷ್ಟವಾಗಬಹುದು.

ಹಿಂದೂದೇಶದಲ್ಲಿ ಈ ಕೈಗಾರಿಕೆಗೋಸ್ಕರ ಹಾಕಲಾದ ಮೂಲಧನವು ಹದಿನೇಳು ಲಕ್ಷ ರೂಪಾಯಿ. ನಮ್ಮಲ್ಲಿ ಸಾಧಾರಣ ಐವತ್ತು ಫಿಲ್ಮ್ ಸ್ಟುಡಿಯೋಗಳೂ ಸ್ಟುಡಿಯೋ ಇಲ್ಲದ ಇತರ 150 ಚಿತ್ರರಚನ ಸಂಘಗಳೂ ಇವೆ.

ಸಾಧಾರಣ 1,200 ಚಿತ್ರ ಪ್ರದರ್ಶನಾಲಯಗಳಿವೆ.

ಸಾಧಾರಣ 100 ಚಿತ್ರಕಲಾ ಪತ್ರಿಕೆಗಳಿವೆ.

ಸಾಧಾರಣ ವರುಷಕ್ಕೆ ಸರಾಸರಿ 250 ಪೂರ್ಣ ಚಿತ್ರಗಳೂ, 100 ಸಣ್ಣ ಚಿತ್ರಗಳೂ ರಚಿಸಲ್ಪಡುತ್ತವೆ.

ಸಾಧಾರಣ 40,000 ಜನರು ಕೈಗಾರಿಕೆಯಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕೆಲಸಮಾಡಿ ಜೀವನ ನಡೆಯಿಸುತ್ತಿದ್ದಾರೆ.

ಸರಾಸರಿ ವಾರಕ್ಕೆ ಮೂರು ಮಿಲಿಯ ಜನರು ಸಿನೇಮಾಕ್ಕೆ ಹೋಗುತ್ತಾರೆ.

ಫಿಲ್ಮ್ ಕಂಪೆನಿಗಳಿಂದ ರೈಲು ಸಂಸ್ಥೆಗಳಿಗೆ ವರುಷಕ್ಕೆ ಸರಾಸರಿ 35 ಲಕ್ಷ ರೂಪಾಯಿಗಳು ದೊರೆಯುತ್ತದೆ.

ತಮಗೆ ಬಂದ ಆದಾಯದ ಮೇಲೆ ಹಿಂದೂದೇಶದ ಫಿಲ್ಮ್ ಕಂಪೆನಿಗಳು, ಮುನ್ಸಿಪಲ್, ಪ್ರಾಂತಿಕ ಹಾಗೂ ಕೇಂದ್ರ ಇತ್ಯಾದಿ ತೆರಿಗೆಗಳನ್ನು ಶೇಕಡಾ 25ರಂತೆ ಕೊಡುತ್ತಿದ್ದಾರೆ.

ನಮ್ಮಲ್ಲಿ ರಚಿಸಲಾಗುವ ಚಿತ್ರಗಳಲ್ಲದೆ ನಾವು ಪ್ರತಿ ವರುಷವೂ ವಿದೇಶಗಳಿಂದ ತುಂಬಾ ಚಿತ್ರಗಳನ್ನು ಆಮದು ಮಾಡುತ್ತೇವೆ. ಅವುಗಳ ಸಂಖ್ಯೆಗಳನ್ನು ಈ ಕೆಳಗೆ ನೋಡಬಹುದು.

ವರ್ಷ	ಚಿತ್ರಗಳು	ವಾರ್ತಾಚಿತ್ರಗಳು	ಅವುಗಳ ಮೇಲೆ ತೆತ್ತ ಸುಂಕ
1935	397	1416	9,65,926
1936	399	1425	9,24,498
1937	395	1181	10,22,931

ಪರದೇಶದ ಒಂಭತ್ತು ಚಿತ್ರರಚನಾ ಸಂಸ್ಥೆಗಳು ನಮ್ಮಲ್ಲಿ ಅವರ ಶಾಖೆಗಳನ್ನು ಇಟ್ಟುಕೊಂಡು ಇಲ್ಲಿ ವ್ಯಾಪಾರ ಮಾಡಿ ಪ್ರತಿ ವರುಷವೂ ಲಕ್ಷ ಗಟ್ಟಲೆ ರೂಪಾಯಿಗಳನ್ನು ತಮ್ಮ ಸಂಸ್ಥೆಗಳಿಗೆ ಕಳುಹಿಸುತ್ತಾರೆ:—


ಪರದೇಶಿ ಕಂಪೆನಿಗಳು.	ಲಾಭ. ರೂ. ಗಳು
1. M. G. M.	12 ಲಕ್ಷ.
2. Paramount.	8 „
3. Universal.	3 „
4. United Artistes	10 „
5. Warner Bros.	6 „
6. 20th Century Fox.	14 „
7. Columbia.	4 „
8. R K. O. Radio.	9 „
9. Humayun.	4 „
ಜುಮ್ಲಾ ರೂ.	70 ಲಕ್ಷ

ಮದ್ರಾಸು ಪ್ರಾಂತದ ಸಿನೇಮಾ ಕೈಗಾರಿಕೆಯ ಅಂಕೆ ಸಂಖ್ಯೆಗಳು

	ವರುಷ 1939
ಚಿತ್ರ ತೋರಿಸುವ ಕಂಪೆನಿಗಳು (Permanent & touring)	460
ಚಿತ್ರ ರಚನೆ ಮಾಡುವ ಕಂಪೆನಿಗಳು	40
ಚಿತ್ರ ಹಂಚುವ ಕಂಪೆನಿಗಳು	28
ಫಿಲ್ಮ್ ಸ್ಟುಡಿಯೊಗಳು	14
ವರ್ಷಕ್ಕೆ ತಯಾರಿಸಲಾಗುವ ತಮಿಳು ಮತ್ತು ತೆಲುಗು ಚಿತ್ರಗಳು	47
ವರ್ಷಕ್ಕೆ ಇದರಲ್ಲಿ ಹಾಕಲಾಗುವ ದ್ರವ್ಯ	4 ಕೋಟಿ ರೂ.
ಒಂದು ಚಿತ್ರವನ್ನು ಮಾಡಲು ಸರಾಸರಿ ಖರ್ಚು	75,000 ರೂಪಾಯಿ.

ಮೇಲೆ ತೋರಿಸಿದ ಪಟ್ಟಿಯಿಂದ ನಮ್ಮ ಚಲಚಿತ್ರ ಕೈಗಾರಿಕೆಯು ಅಷ್ಟೇನೂ ಸಣ್ಣದಲ್ಲವೆಂತಲೂ, ಅದು ಹಿಂದೆ ಬೀಳಬೇಕಾದುದಿಲ್ಲವೆಂತಲೂ ಮನಗಾಣಬಹುದು. ಆದರೂ ಧನಿಕರು, ಬೇಂಕುಗಳು ಈ ಕೈಗಾರಿಕೆಗೆ ಸಹಾಯಮಾಡಬೇಕಾಗಿದೆ. ವ್ಯಾಪಾರಿ ದೃಷ್ಟಿಯಿಂದ ಇದು ಅವರ ಮೇಲೆ ಹೊಂದಿಕೊಂಡಿರುತ್ತದೆ. ಧನಿಕರಾದವರು ಹಣ ಸಹಾಯಮಾಡಬೇಕು. ಬಡ್ಡಿಯನ್ನು ಆದಷ್ಟು ಕಮ್ಮಿ ಮಾಡಬೇಕು. ಬೇಂಕುಗಳು ಫಿಲ್ಮ್ ಸಾಮಾನುಗಳ ಮೇಲೂ, ಮತ್ತು ಈಗ ಅವರು, ಬೆಳೆಯಿಸುವ ಪೈರುಗಳ ಮೇಲೆ (Hypothication of crops loan) ಕೊಡುವಂತೆ ತಯಾರಿಸುವ ಚಿತ್ರಗಳ ಮೇಲೂ ಹಣವನ್ನು ಕೊಡುವುದಾದರೆ, ಈ ಕೈಗಾರಿಕೆಯು ಇನ್ನಷ್ಟು ಮುಂದಕ್ಕೆ ಬರಬಹುದು. ಅದರಿಂದ ನಮ್ಮಲ್ಲಿ ಇದರಲ್ಲಿ ಆಸಕ್ತರಾಗಿರುವ, ಸಂಗೀತ, ನೃತ್ಯಾದಿ ಕಲೆಗಳೂ ಸುಧಾರಣೆಗೆ ಬರಬಹುದು. ಈಗ ಈ ಕೈಗಾರಿಕೆಗೋಸ್ಕರವೇ ಸಹಾಯಮಾಡುವ ಬೇಂಕು ಬೊಂಬಾಯಿಯಲ್ಲಿ ಒಂದೇ ಒಂದು ಇರುವುದು. ಅದನ್ನು The Cine Industrial and Banking Corporaton of India Ltd. ಎನ್ನುವರು. ಇನ್ನು ರೈಲು ಕಂಪೆನಿಯವರೂ, ಸುಂಕದ ಅಧಿಕಾರಿಗಳೂ, ಇತರ ಕಂದಾಯಗಳನ್ನು ಹೊರಿಸುವವರೂ ಆದಷ್ಟು ಕಡಮೆಯಾಗಿ ತಮ್ಮ ತೆರಿಗೆಗಳನ್ನು ಹೊರಿಸಬೇಕು.

ಯುದ್ಧದಿಂದಾಗಿ ನಮ್ಮ ಬೇರೆ ಕೈಗಾರಿಕೆಗಳಿಗೆ 'ಪೆಟ್ಟು' ತಗಲಿದಂತೆ ಇದಕ್ಕೆ ತಗಲದೆ ಹೋಗಲಿಲ್ಲ. ಚಿತ್ರ ತಯಾರಿಕೆಗೆ ಬೇಕಾದ ಸಾಮಾನುಗಳು ನಮಗೆ ಹೆಚ್ಚಾಗಿ ವಿದೇಶದಿಂದ ಬರಬೇಕು. ಈಗ ಅವು ಸುರಕ್ಷಿತವಾಗಿ ಬರುವುದು ತುಸು ಕಷ್ಟವಾಗಿದೆ. ಇದರಿಂದ ಒಂದು ಒಳ್ಳೆಯದೇ ಆಯಿತೆನ್ನಬೇಕು. ಏಕೆಂದರೆ ನಮ್ಮಲ್ಲಿಯೇ ಆ ಕುರಿತು ಶೋಧನೆಗಳು ನಡೆಯುವಂತಾಗುತ್ತಿವೆ. ಬಂಗಾಳದ ಜಾಮದಾಸ ಎಂಬವನು ಒಂದು "ಸ್ವದೇಶಿ ಪ್ರದರ್ಶಕ"ವನ್ನು ಕಂಡುಹಿಡಿದಿರುವನೆಂದೂ, ಮತ್ತು ಇನ್ನು ಅನೇಕ ಶೋಧನೆಗಳೂ, ಪ್ರಯತ್ನಗಳೂ ನಡೆಯುತ್ತವೆಂದೂ ಕೇಳುತ್ತೇವೆ. ಇದರಿಂದ ನಮ್ಮ ಚಲಚ್ಚಿತ್ರ ಕೈಗಾರಿಕೆಗಾಗಿ ಹೆದರಬೇಕಾಗಿಲ್ಲ; ಹಿಂಜರಿದು ಹಿಂದೆ ಬೀಳಬೇಕಾಗಿಲ್ಲ.



ಮಹಾತ್ಮಾಜಿಯವರು
ಖಾದಿಯೇ ಸ್ವರಾಜ್ಯದ ಹಾದಿಯೆನ್ನುವರು. ಗಿರಣಿಗಳು ನಿರುದ್ಯೋಗವನ್ನು ಹೆಚ್ಚಿಸುವುವೆಂದು ಇವರೆನ್ನುತ್ತಾರೆ.

ಬಟ್ಟೆಬರೆಗಳು: ಹತ್ತಿ, ಉಣ್ಣೆ, ರೇಶ್ಮೆ

ನಮ್ಮ ದೇಶದಲ್ಲಿ ತಯಾರಾಗುವ ಬಟ್ಟೆಯ ಅಂಕೆ ಸಂಖ್ಯೆಗಳು

ಪರದೇಶಕ್ಕೆ ಹರಿಯುವ ಧನ ಪ್ರವಾಹವನ್ನು ತಡೆಯಲು ವಿನಂತಿ.

ಕೊಂಡುಕೊಳ್ಳುವ ಮೊದಲು "ನಮ್ಮ ದೇಶದಲ್ಲಿ ತಯಾರಾದುದೇ?" ಎಂದು ಪ್ರಶ್ನಿಸಿರಿ.

ಯಂತ್ರದ ಬಟ್ಟೆ, ಮಗ್ಗದ ಬಟ್ಟೆ ಮತ್ತು ಖಾದಿ



ಶ್ರೀ ಸಿ. ರಾಜಗೋಪಾಲಾಚಾರ್ಯರು,
ಮದರಾಸಿನ ಮಾಜಿ ಪ್ರಧಾನ ಸಚಿವರು. ತ್ರಿಚಂಗೋಡಿನಲ್ಲಿ ಇವರ ನೇತೃತ್ವದಲ್ಲಿ ನಡೆಯುವ ಖಾದಿ ಆಶ್ರಮವು ದೇಶದಲ್ಲೆಲ್ಲಾ ಪ್ರಸಿದ್ಧವಾಗಿದೆ.

ಹತ್ತಿ, ಹತ್ತಿಯ ಬಟ್ಟೆ ಬರೆಗಳ ವ್ಯಾಪಾರವು ಹಿಂದೂದೇಶದ ಐತಿಹಾಸಿಕ ಕೈಗಾರಿಕೆಯಾಗಿದೆ. ಹೊರದೇಶಗಳ ರಾಜರಾಣಿಯರು ಹಿಂದೂದೇಶದ ಉಡುಪುಗಳನ್ನು ತೊಡುವುದಕ್ಕೆ ಹೆಮ್ಮೆ ಪಡುತ್ತಿದ್ದರು. ಈ ಕೈಗಾರಿಕೆಯ ಅವಸಾನದ ಕತೆಯು ಪ್ರತಿಯೊಬ್ಬ ಶಾಲಾಬಾಲಕನಿಗೂ ಗೊತ್ತಿರುವುದು. ಆದರೆ ಹಿಂದಿನ ಹಿರಿಯಸ್ಥಾನಕ್ಕೆ ಈ ವ್ಯಾಪಾರವನ್ನು ಏರಿಸಲು ನಮಗೆಲ್ಲರಿಗೂ ಶಕ್ತಿ ಇದೆ. ಗಿರಣಿಗಳೂ, ಮಗ್ಗಗಳೂ ತಮ್ಮ ಪಾಲಿನ ಕೆಲಸವನ್ನು ಮಾಡುತ್ತಿವೆ.

ನಿಮ್ಮ ಕೆಲಸ ನೀವು ಮಾಡುವಿರಾ?

ಕೈಮಗ್ಗದಲ್ಲಿ ನೇಯುವವರು ಊರಲ್ಲೆಲ್ಲಾ ತುಂಬಿರುವರು. ಗಿರಣಿಗಳಲ್ಲಿ ತಯಾರಾಗದಂತಹ ಬಟ್ಟೆಗಳು ಈ ಮಗ್ಗದಲ್ಲಿ ತಯಾರಾಗುತ್ತವೆ. ಬಣ್ಣದಲ್ಲಿಯೂ ಅಲಂಕಾರದಲ್ಲಿಯೂ ಇವು ಮಿಗಿಲಾಗಿರುವುವು. ಪೈಕಾರದಲ್ಲಿ ವಿದ್ಯುಚ್ಛಕ್ತಿ ತಯಾರಿಸಿದಂದಿನಿಂದ ಕೊಯಮುತ್ತೂರಿನಲ್ಲಿ ಬಟ್ಟೆಯ ಗಿರಣಿಗಳು ಹೆಚ್ಚಾಗುತ್ತಲಿವೆ. ನಮ್ಮ ಆಧಿಪತ್ಯದಲ್ಲಿ 1937ರಲ್ಲಿ 39 ಗಿರಣಿಗಳಿದ್ದುವು—39 ಗಿರಣಿಗಳು 71,980 ಜನರಿಗೆ ಕೆಲಸ ಒದಗಿಸಿ ಕೊಟ್ಟಿವೆ. ಇವರೆಲ್ಲರ ಸಂಬಳದ ಮತ್ತು ಕೂಲಿಯ ಹಣವು ಈ ಊರಿನಲ್ಲಿಯೇ ಚಲಾವಣೆಯಲ್ಲಿರುವುದು. 1937-38 ರಲ್ಲಿ ನಮ್ಮ ಸಂಸ್ಥಾನದಲ್ಲಿ 86,000,000 ಗಜ ಗಿರಣಿ ಬಟ್ಟೆಯೂ, 303 ಮಿಲಿಯ ಗಜ ಮಗ್ಗದ ಬಟ್ಟೆಯೂ ತಯಾರಾಗಿದೆ. ಇದರ ಉತ್ಪತ್ತಿಯು ರೂ. 1802 ಲಕ್ಷ ಆಗುತ್ತದೆ. ನಾವಿನ್ನೂ ಪರದೇಶದಿಂದ ನಮ್ಮ ಸಂಸ್ಥಾನಕ್ಕೆ 166 ಲಕ್ಷ ರೂಪಾಯಿ ಬೆಲೆಬಾಳುವ ಬಟ್ಟೆಗಳನ್ನು ತರಿಸುತ್ತೇವೆ.



ಬದನವಾಳ ಖಾದಿ ಕೇಂದ್ರ

ನೀವು ತೊಟ್ಟುಕೊಂಡಿರುವ ರೇಶ್ಮೆ ಬಟ್ಟೆಯು ಸ್ವದೇಶಿಯೇ?

ಅದಲ್ಲವಿದ್ದರೆ, ಸ್ವದೇಶಿ ರೇಶ್ಮೆ ಕೈಗಾರಿಕೆಯು ಹಿಂದೂದೇಶದ ಪ್ರಾಚೀನ ಕೈಗಾರಿಕೆಯಾಗಿದ್ದು ಕೆಲವೇ ವರುಷಗಳ ಹಿಂದೆ ಅಳಿದು ಈಗ ಪುನಃ ತನ್ನ ಪೂರ್ವದ ಸ್ಥಾನಕ್ಕೆ ಬರುತ್ತಿದೆ—ಎಂಬುದನ್ನು ನಾವು ನಿಮಗೆ ಹೇಳಲೆ? ನಿಮ್ಮ ಬೆಂಬಲವೊಂದಿದ್ದರೆ ಈ ಕೈಗಾರಿಕೆಯು ಇನ್ನು ಮುಂದಕ್ಕೆ ಪ್ರಾಮುಖ್ಯತೆಗೆ ಬರುವುದು. ಇನ್ನು ಮುಂದಕ್ಕೆ ಮಾತ್ರ ಸ್ವದೇಶಿ ರೇಶ್ಮೆಯನ್ನೇ ಕೊಂಡುಕೊಳ್ಳಿರಿ. ಬೇರಾವುದನ್ನೂ ಕೊಂಡುಕೊಳ್ಳಬೇಡಿರಿ. ಏಕೆಂದರೆ, ಹಿಂದೂದೇಶಕ್ಕೆ ಪ್ರತಿ ವರ್ಷ 3 ಕೋಟಿ ರೂಪಾಯಿಯ ರೇಶ್ಮೆ ಮತ್ತು ರೇಶ್ಮೆಯ ಬಟ್ಟೆಗಳು ಹೊರದೇಶಗಳಿಂದ ಬರುತ್ತವೆ. ಇದರಲ್ಲಿ ರೇಶ್ಮೆಯ ಬಟ್ಟೆಯು 2 ಕೋಟಿ ರೂಪಾಯಿದ್ದಾಗಿರುತ್ತದೆ. ಮದ್ರಾಸ್ ಸಂಸ್ಥಾನವು ಸಾಧಾರಣ 10 ಲಕ್ಷ ರೂಪಾಯಿಯ ರೇಶ್ಮೆಯ ಬಟ್ಟೆಯನ್ನು ತರಿಸುತ್ತದೆ. ಈ ಹಣವನ್ನು ಹೊರಗೆ ಹೋಗದಂತೆ ನೋಡಿರಿ.

ನಮ್ಮ ಸಂಸ್ಥಾದದಲ್ಲಿ ರೇಶ್ಮೆಯ ಕೈಗಾರಿಕೆಯನ್ನು ಸುಧಾರಿಸಲಿಕ್ಕೂ ವಿಸ್ತರಿಸಲಿಕ್ಕೂ ಅನುಕೂಲವಾದ ಸ್ಥಿತಿಗತಿಗಳಿವೆ. ರೇಶ್ಮೆ ಹುಳುಗಳನ್ನು ಹಳ್ಳಿಗಳಲ್ಲಿ ಸಾಕಿ ನಿರುದ್ಯೋಗಿ ತರುಣರಿಗೆ ಉದ್ಯೋಗವನ್ನು ದೊರಕಿಸಬಹುದು. ಹಳ್ಳಿಗಳಲ್ಲಿ ಸುಲಭವಾಗಿ ಈ ಕೆಲಸವನ್ನು ನಡೆಸಬಹುದು. ಕೊಳ್ಳೆಗಾಲದಲ್ಲಿ ಬೆಳೆಸುವ "ಮಲ್ಬರಿ" ಎಂಬ ವನಸ್ಪತಿಯನ್ನು, ಈಗ 7000 ಎಕರೆಗಳಲ್ಲಿ ಬೆಳೆಸುವುದನ್ನು ಮುಂದಕ್ಕೆ 25,000 ಎಕರೆಗಳಲ್ಲಿ ಬೆಳೆಸಬಹುದು. ಹಾಗಾದರೆ ಈಗ ದೊರೆಯುವ 111,000 ರಾತಲು ರೇಶ್ಮೆಯನ್ನು 500,000 ರಾತಲುಗಳಿಗೆ ಹೆಚ್ಚಿಸಬಹುದು.

ಮದ್ರಾಸ್ ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಖಾತೆಯು (Department of Industries and Commerce) ರೇಶ್ಮೆ ಹುಳುಗಳನ್ನು ಸಾಕುವ ಹರಳೆ (Castor leaf) ಗಳಿಂದ ಸಾಕುವ ರೀತಿಯನ್ನು ಕಲಿಸಿ ಕೊಟ್ಟಿದೆ. ಈ ರೇಶ್ಮೆ ಹುಳುಗಳನ್ನು ಮನೆಗಳಲ್ಲಿಯೇ ಸಾಕಬಹುದು. ರೇಶ್ಮೆ ಹುಳುಗಳನ್ನು ಸಾಕಿ ರೇಶ್ಮೆಯನ್ನು ತಯಾರಿಸುವುದು—ಮಲ್ಬರಿ ಹುಳುಗಳಿಂದ ತಯಾರಿಸುವ ರೀತಿಗಿಂತ ಸುಲಭವಾಗಿದೆ. ಹರಳೆ ಎಲೆಯಲ್ಲಿ ಸಾಕುವ ಹುಳುಗಳನ್ನು ಕೊಲ್ಲುವ ಅವಶ್ಯಕತೆಯಿಲ್ಲ. ನಮ್ಮ ಸಂಸ್ಥಾನದಲ್ಲಿ ಈಗ 250,000 ಎಕರೆಗಳಲ್ಲಿ ಹರಳೆ ಗಿಡಗಳನ್ನು ಬೆಳೆಸಿದ್ದಾರೆ. ಇದು ಬರೀ ಬೀಜವನ್ನು ತಯಾರಿಸುವುದಕ್ಕೆ ಮಾತ್ರವಾಗಿದೆ. ಈಗ ದುರುಪಯೋಗಗೊಳಿಸುವ ಹರಳೆ ಎಲೆಗಳಲ್ಲಿ "ಎರಿ" ಎಂಬ ಹುಳಗಳನ್ನು ಸಾಕಿದರೆ ಒಂದು ದೊಡ್ಡ ಕೈಗಾರಿಕೆಯನ್ನೇ ಉದ್ಧರಿಸಬಹುದು. ಈ ಎರಿ ಎಂಬ ಹುಳುಗಳನ್ನು ಸಾಕಿ ಅವುಗಳಿಂದ ರೇಶ್ಮೆ ತಯಾರಿಸುವ ಕೆಲಸವನ್ನು ಹಳ್ಳಿಯಲ್ಲಿ ರೈತರು ತಮ್ಮ ಬಿಡುವಿನ ಸಮಯದಲ್ಲಿ ನಡೆಸಬಹುದು. ಇದನ್ನು ಉಪ ಕೈಗಾರಿಕೆಯನ್ನಾಗಿ ಮಾಡಿಕೊಳ್ಳಬಹುದು. ಇದಕ್ಕೆ ಹೆಚ್ಚು ಖರ್ಚಿಲ್ಲ. ನಮ್ಮ ಪ್ರಾಂತ್ಯದ ಹಲವು ಕಡೆಗಳಲ್ಲಿ ಈ ಕೈಗಾರಿಕೆಯ ಪ್ರದರ್ಶನಗಳು ಬಯಲಾಗಿವೆ. ದಕ್ಷಿಣ ಹಿಂದೂಸ್ಥಾನದಲ್ಲಿ—ಇದರ ತಯಾರಿಸುವ ಬಟ್ಟೆಗೆ ಗಿರಾಕಿಗಳು ಕಡಿಮೆಯಾದುದರಿಂದ ಈ ಕೈಗಾರಿಕೆಯು ಮುಂದುವರಿಯಲಿಲ್ಲ. ಇಂಥಹ ನೀವು ಅದಕ್ಕೆ ಗಿರಾಕಿಗಳಾಗಿ ಬೆಂಬಲ ಕೊಡಿರಿ.

ನಿಮ್ಮ ದೇಶದ ರೇಶ್ಮೆ ಹುಳಗಳೇ ದೇಶಪ್ರೇಮಿಗಳಾಗಿ ನಿಮ್ಮ ದೇಶಕ್ಕೆ ಬೇಕಾದಷ್ಟು ರೇಶ್ಮೆ ತಯಾರಿಸುವುವು. ಆದರೆ ನೀವು ಪರದೇಶದ ರೇಶ್ಮೆಯನ್ನೂ ಕೃತಕ ರೇಶ್ಮೆಯನ್ನೂ ಕೊಂಡುಕೊಳ್ಳುತ್ತೀರಿ. ವಿಚಾರಶೀಲರೇ, ಸ್ವಲ್ಪ ವಿಚಾರಿಸಿರಿ.

ಉಣ್ಣೆಯ ಬಟ್ಟೆಗಳ ತಯಾರಿ

ಕಂಬಳಿ ಮತ್ತು ಜಮಖಾನು ತಯಾರಿಸುವ ಉಣ್ಣೆ ಕೈಗಾರಿಕೆಗಳು ಪ್ರಾಚೀನ ಕಾಲದವು, ಅಲ್ಲದೆ ಒಂದಾನೊಂದು ಕಾಲದಲ್ಲಿ ಪ್ರಖ್ಯಾತ ಕೈಗಾರಿಕೆಗಳಾಗಿದ್ದುವು. ಮಹಾಜನರ ಬೆಂಬಲ ಮತ್ತು ಪ್ರೋತ್ಸಾಹ ದೊರೆಯದೆ ಈ ಕೈಗಾರಿಕೆಗಳು ಅಳಿಯುತ್ತಿವೆ. ಈ ಪ್ರಾಂತ್ಯದ ಹಲವು ಭಾಗಗಳಲ್ಲಿರುವ ನೇಯ್ಗೆಯವರಿಗೆ ಮುಖ್ಯವಾಗಿ ಕುರುಬರಿಗೆ ಕಂಬಳಿ ಮತ್ತು ಜಮಖಾನ ನೇಯುವುದು ಪ್ರಾಮುಖ್ಯವಾದ ಒಂದು ಮನೆ ಕೈಗಾರಿಕೆಯಾಗಿದೆ. ಅನಂತರ ತಿರುಚಿನಾಪಳ್ಳಿ, ಸೇಲಂ, ಉತ್ತರ ಆರ್ಕಾಟ್ ಜಿಲ್ಲೆಗಳಲ್ಲಿರುವ ಮಹಮ್ಮದೀಯರು ಈ ಕೈಗಾರಿಕೆಯಲ್ಲಿ ಪ್ರಾಮುಖ್ಯರಾಗಿರುವರು. 18 ಲಕ್ಷ ರಾತ್ತಲು ಅಥವಾ 6 ಲಕ್ಷ ತುಂಡುಗಳಷ್ಟು ಕಂಬಳಿಗಳು ತಯಾರಾಗುತ್ತಿವೆ, ಎಂದು ನಿರ್ಣಯಿಸಲ್ಪಟ್ಟಿದೆ. ಕೆಲವು ಕಡೆಗಳಲ್ಲಿ ಜಮಖಾನಗಳನ್ನು ಗಿರಣಿಗಳಲ್ಲಿ ಉತ್ತಮ ರೀತಿಯಿಂದ ತಯಾರು ಮಾಡುತ್ತಾರೆ. ಆದರೆ ಅವುಗಳಿಗೆ ಬೇಕಾಗುವಷ್ಟು ಗಿರಾಕಿಗಳು ದೊರೆಯುವುದಿಲ್ಲ. ಆದ್ದರಿಂದ ಇವು ಹೆಚ್ಚು ಜಮಖಾನುಗಳನ್ನು ತಯಾರಿಸುವುದಿಲ್ಲ. ಈ ಪ್ರಾಂತ್ಯದಲ್ಲಿ 150,000 ಚದರ ಗಜ ವಿಸ್ತೀರ್ಣದ ಅಥವಾ 670 ಲಕ ರಾತ್ತಲು ಭಾರದ ಜಮಖಾನವು ಒಂದು ವರ್ಷದಲ್ಲಿ ತಯಾರಾಗುತ್ತಿದೆ.

ಇದು ಎಲ್ಲೋರಾ, ವಾಲಾಜಾಪೇಟಾ ಮಛಲೀಪಟ್ನ ಈ ಸ್ಥಳಗಳಲ್ಲಿ ಹೆಚ್ಚಾಗಿ ತಯಾರಾಗುತ್ತಿದೆ. ಇಂಗ್ಲಾಂಡಿನ ಪ್ರಾಮುಖ್ಯವಾದ ಒಂದು ವ್ಯಾಪಾರಿ ಸಂಸ್ಥೆಯು ಎಲ್ಲೋರದ ಜಮಖಾನುಗಳ ಏಜನ್ಸಿಯನ್ನು ತೆಗೆದುಕೊಳ್ಳಲು ಒಪ್ಪಿದೆ. ಆಸ್ಟ್ರೇಲಿಯವೂ ಹಿಂದೂದೇಶದಿಂದ ಜಮಖಾನುಗಳನ್ನು ತರಿಸುತ್ತಿದೆ.



ಬಳ್ಳಾರಿ ಸ್ವದೇಶೀ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಟ್ಟ (1933) ಉಷ್ಟ್ರಪಕ್ಷಿಯ ಗರಿಗಳ ಶಾಲು. ಇದನ್ನು ಕೈಯಿಂದಲೇ ನೂಲು ತೆಗೆದು, ಕೈಮಗ್ಗದಲ್ಲಿ ನೇಯಲಾಯಿತು. 56 ಇಂಚು ಅಗಲವಿರುವ ಈ ಶಾಲನ್ನು ಒಂದು ಕೈಉಂಗುರದೊಳಗಿಂದ ಸುಲಭವಾಗಿ ಎಳೆಯಬಹುದು.

ಆದರೆ ಹಿಂದೂದೇಶವು ಪ್ರತಿ ವರುಷವೂ ಕಂಬಳಿಗಳನ್ನು ಪರದೇಶದಿಂದ ತರಿಸುತ್ತದೆ. 40 ಲಕ್ಷ ರೂಪಾಯಿಯ, ಬ್ಲೇಂಕೆಟ್ ರಗ್ಗುಗಳೂ 4 ಲಕ್ಷದ ಜಮಖಾನು ಮತ್ತು ನೆಲಕ್ಕೆ ಹಾಸುವ ಕಂಬಳಿಗಳೂ, ಹಿಂದೂದೇಶಕ್ಕೆ ಹೊರಗಿನಿಂದ ಪ್ರತಿವರುಷ ಬರುತ್ತವೆ. ನಮ್ಮ ಸಂಸ್ಥಾನವು 10 ಸಾವಿರ ರೂಪಾಯಿ ಬ್ಲೇಂಕೆಟ್ ಮತ್ತು ರಗ್ಗುಗಳನ್ನೂ—16 ಸಾವಿರ ರೂಪಾಯಿಯ ಜಮಖಾನು ಮತ್ತು ನೆಲಕ್ಕೆ ಹಾಸುವ ಕಂಬಳಿಯನ್ನೂ ಹೊರಗಿನಿಂದ ತರಿಸುತ್ತಿದೆ. ಹೊರಗೆ ಹೋಗುವ ಇಷ್ಟು ಹಣವನ್ನೂ ನಿಲ್ಲಿಸಿರಿ!

ಈ ಸಂಸ್ಥಾನದಲ್ಲಿ 5141 ಲಕ್ಷ ರಾತಲುಗಳಷ್ಟು ಉಣ್ಣೆಯು ಉತ್ಪತ್ತಿಯಾಗುತ್ತಿದೆ. 1409 ಲಕ್ಷ ರಾತಲುಗಳಷ್ಟು ಉಣ್ಣೆಯು ಪರದೇಶದಿಂದ ಬರುತ್ತದೆ. 40·82 ಲಕ್ಷ ರಾತಲುಗಳಷ್ಟು ಉಣ್ಣೆಯನ್ನು ನಾವು ಹೊರದೇಶಗಳಿಗೆ ಕಳುಹಿಸುತ್ತೇವೆ. ಅಂತೂ ನಮಗೆ 24·68 ಲಕ್ಷ ರಾತಲುಗಳಷ್ಟು ಉಣ್ಣೆಯು ಕೊನೆಗೆ ಉಳಿಯುತ್ತದೆ.

ಈ ಪ್ರಾಂತ್ಯದ ಉಣ್ಣೆಯ ಕೈಗಾರಿಕೆಯು ಅಭಿವೃದ್ಧಿಯಾಗಬೇಕಾದರೆ,—

1. ಹೊರದೇಶದಿಂದ ಉಣ್ಣೆಯ ಯಾವ ಉಡಿಗೆಯನ್ನೂ ತರಿಸಬಾರದು.
2. 4 ಲಕ್ಷ ರಾತಲು ಉಣ್ಣೆಯನ್ನು ಹೊರಗೆ ರಫ್ತು ಮಾಡದೆ ಉಣ್ಣೆಯ [illegible]ಗಕ್ಕೆ [illegible].
3. [illegible]
4. ನಮಗೆ ಸಾಕಾಗುವಷ್ಟು ಉಣ್ಣೆಯ ಬಟ್ಟೆಯನ್ನು ನಾವು [illegible].

ಆದ್ದರಿಂದ ನಿಮ್ಮ ಕೆಲಸವನ್ನು ನೀವು ಇಂದಿನಿಂದಲೇ ಮಾಡಿರಿ. ಆದರೆ ಯಾವುದನ್ನಾದರೂ ಕೊಂಡುಕೊಳ್ಳುವ ಮೊದಲು "ಇದು ಸ್ವದೇಶಿಯೇ?" ಎಂದು ಕೇಳಿರಿ. ಬಳ್ಳಾರಿಯ ಅಂದವಾದ ಕಂಬಳಿಗಳನ್ನು ಪ್ರೋತ್ಸಾಹಿಸಿರಿ.

ಕೈಮಗ್ಗದಿಂದ ನೇಯುವ ಮತ್ತು ಕೈಯಿಂದ ನೂಲುವ ಕೈಗಾರಿಕೆಗಳು

ನಮ್ಮ ಪ್ರಾಂತ್ಯದಲ್ಲಿಯ ಕೈಮಗ್ಗದ ಕೈಗಾರಿಕೆಯೂ, ಒಟ್ಟಿನಲ್ಲಿ ಹಿಂದೂದೇಶದಲ್ಲಿ ಎಲ್ಲೆಲ್ಲಿಯೂ ಇರುವ ಈ ಮನೆ ಕೈಗಾರಿಕೆಯೂ—ವ್ಯವಸಾಯದ ನಂತರ—ಪ್ರಾಮುಖ್ಯವಾದ ವೃತ್ತಿ ಆಗಿರುತ್ತದೆ. ಹಳ್ಳಿಯಲ್ಲಿ ಕೊಯ್ಲಾದ ನಂತರ-ಬೇರೆ ಕೆಲಸವಿಲ್ಲದಿರುವುದರಿಂದಲೂ, ಇತರ ಚಿಲ್ಲರೆ ಖರ್ಚುಗಳಿಗೆ ಹಣ ಸಂಗ್ರಹಿಸಲು ಬೇರೆ ದಾರಿಯಿಲ್ಲದ್ದರಿಂದಲೂ ಈ ಕೈಗಾರಿಕೆಗೆ ಜನರು ಅಂಟಿಕೊಂಡು ಅಷ್ಟೊಂದು ಪ್ರಾಮುಖ್ಯತೆಯನ್ನು ತಂದಿರುವರು. ಹಳ್ಳಿಯಲ್ಲಿ ಬಿಡುವಿನ ಸಮಯದಲ್ಲೆಲ್ಲ ಈ ವೃತ್ತಿಯನ್ನು ಸಾಗಿಸಲು ಅನುಕೂಲವಾಗುತ್ತದೆ.

ಒಂದು ನಿಯಮಿತ ಪ್ರಮಾಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಈ ಕೈಗಾರಿಕೆಗೆ ಪ್ರಾಮುಖ್ಯತೆ ಇಲ್ಲ. ಕೈಯಿಂದಲೇ ತಯಾರಿಸಿದ ಒಂದು ಗಜ ಬಟ್ಟೆಯನ್ನು ಕೊಂಡುಕೊಳ್ಳುವುದು ಬರೇ ದೇಶಪ್ರೇಮ ಒಂದನ್ನು ತೋರಿಸಿದಂತಾಯಿತು ಮಾತ್ರವಲ್ಲದೆ ನಮ್ಮ ದೇಶದ ನೂರಾರು ಗರೀಬರನ್ನೂ ದಿಕ್ಕಿಲ್ಲದವರನ್ನೂ ತನ್ನ ಬಂಧುಗಳೆಂದು ತಿಳಿದು ಅವರಿಗೆ ಸಹಾಯಮಾಡಿದಂತಾಗುತ್ತದೆ. ಅವರಿಗೆ ಸಹಾನುಭೂತಿಯನ್ನು ತೋರಿಸಿದಂತಾಗುತ್ತದೆ. ಈ ಕೈಗಾರಿಕೆಯಲ್ಲಿ ವ್ಯಯವಾದ ಪ್ರತಿಯೊಂದು ರೂಪಾಯಿಯ ಹೆಚ್ಚಿನ ಭಾಗವು ಹಳ್ಳಿಯ ಬಡ ನೇಯಿಗೆಯವರಿಗೆ ಮತ್ತು ನೂಲುವವರಿಗೆ ಸೇರುವುದು. ಶೇರುಗಳಿಗಾಗಿಯೂ ಡಿಬೆಂಚರುಗಳಿಗಾಗಿಯೂ, ಬಡ್ಡಿಯ ರೂಪದಲ್ಲಿ ಹಣ ವ್ಯಯವಾಗುವುದಿಲ್ಲ. ಕೈಯಿಂ[ದ] ತಯಾರಿಸಿದ ಬಟ್ಟೆಯು ತಯಾರಾದಲ್ಲಿಂದ ಮಾರಾಟವಾಗುವಲ್ಲಿಗೆ ಹೋಗ[ಲು] ಹೆಚ್ಚು ದೂರವನ್ನು ನಡೆಯಬೇಕಾಗಿಲ್ಲ. ಆದ್ದರಿಂದ ಮೂರನೇಯವರಿಗೆ ಹೆಚ್ಚಿ[ನ] ಲಾಭವಿಲ್ಲ. ಮಾರಾಟ ಮಾಡುವಲ್ಲಿ ಅನಿರೀಕ್ಷಿತವಾಗಿ ಬೆಲೆಯು ಏರು ತಗ್ಗಾಗ[ಲು] ಸಂಭವವಿಲ್ಲ. ಆದ್ದರಿಂದ ವ್ಯಾಪಾರಿಗಳಿಗೆ ನಷ್ಟವನ್ನು ಹೊರಿಸಲಾರದು. ಬ[ಟ್ಟೆ]ಯನ್ನು ತಯಾರಿಸುವಾಗ ವ್ಯವಸ್ಥೆ ಮತ್ತು ಮೇಲ್ವಿಚಾರಣೆಯ ಬಗ್ಗೆ ಹಣ ಸಾಮಾನ್ಯ ಪ್ರಮಾಣದಲ್ಲಿಯೇ ಖರ್ಚಾಗುವುದು.

ನೀವು ಇನ್ನೊಮ್ಮೆ ಬಟ್ಟೆಬರೆಗಳನ್ನು ಕೊಂಡುಕೊಳ್ಳುವಾಗ "ಇದು ಖಾ[ದಿ]ಯೇ?" ಎಂದು ಪ್ರಶ್ನಿಸಿರಿ. ಅಥವಾ "ಇದು ಕೈಯಿಂದ ನೂತು ನೇ[ಯ್ದ] ಬಟ್ಟೆಯೇ?" ಎಂದು ಕೇಳಿರಿ. ಅದಲ್ಲದಿದ್ದರೆ "ಇದು ಸ್ವದೇಶಿಯೇ?" ಎಂ[ದು] ಕೇಳಿರಿ.

ಖಾದಿ

ಹಸಿದವರಿಗೆ ಅನ್ನ ಕೊಡಬೇಕೆಂದಿದ್ದರೆ, ದಿಗಂಬರರಿಗೆ ಬಟ್ಟೆಯನ್ನು ಕೊ[ಡ]ಬೇಕೆಂದಿದ್ದರೆ, ತಿರುಕರಿಗೆ ಮನೆಗಳನ್ನು ಕೊಡಿಸಬೇಕೆಂದಿದ್ದರೆ—ಖಾದಿಯನ್ನು ಖಾದಿಯನ್ನು ಮಾತ್ರ—ಕೊಂಡುಕೊಳ್ಳಿರಿ. ಏಕೆಂದರೆ:—

ಖಾದಿ ಕೈಗಾರಿಕೆಯಲ್ಲಿ ವ್ಯಯಿಸಿದ ಹಣವು ಪೂರ್ಣವಾಗಿ ದೇಶ[ದ] ಹಸಿದವರ ಕೈ ಸೇರುವುದು.

ಎಷ್ಟು ಗಜ ಖಾದಿಯು ಮಾರಾಟವಾಯಿತೋ ಅಷ್ಟು ಜನ ಉಪವಾ[ಸ]ದಿಂದಿದ್ದ ನಿರುದ್ಯೋಗಿಗಳಿಗೆ ಕೆಲಸ ಕೊಟ್ಟಂತಾಯಿತು. ನಮ್ಮ ನಾಡಿ[ನ] ನಿರ್ಭಾಗ್ಯರ ಮೇಲೆ ನಮ್ಮ ಕರುಣೆಯು ಇದ್ದರೆ, ಆ ಕರುಣೆಯ ಲಾಂಛನವೆ [ಖಾದಿಯು]. ಪಟ್ಟಣಗಳಲ್ಲಿದ್ದ ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇ[ವೆ] ಎಂದು ತೋರಿಸುವುದೇ ಈ ಖಾದಿಯಾಗಿದೆ. ಸಾವಿರಾರು ಜನರು—ಗಂಡ[ಸ]ರು, ಹೆಂಗಸರು, ತರುಣರು, ಮುದುಕರು, ಸಬಲರು, ನಿರ್ಬಲರು, ಹಿಂದ[ೂ]ಗಳು, ಹರಿಜನರು, ಮುಸ್ಲಿಮರು, ಕ್ರೈಸ್ತರು—[illegible] ಕಾಲದಲ್ಲಿ ಉ[ಪ]ವಾಸ ಮತ್ತು ಬಡತನದಿಂದ ಮುಳುಗಿದ್ದ ಹಳ್ಳಿಗಳಲ್ಲಿ, ಈಗ ಚರಕಗಳ[ಲ್ಲಿ]



ಚಿಕ್ಕ ಬಾಲಕರು ತಯಾರಿಸಿದ ಒಂದು ರಥ.

ನೂಲುತ್ತಾ[ರೆ]. ತಮಿಳುನಾ[ಡಿ]ನಲ್ಲಿ ತಯಾ[ರಾ]ದ ಖಾ[ದಿ]ಯು ಅರೆವಾ[...] ಗಿಂತ ಹೆಚ್ಚು [...] [illegible] ಹಳ್ಳಿಗಳಿಂದ ಬಡತನ ಮತ್ತು ನಿರುದ್ಯೋಗಗಳನ್ನು ಹೊರದಬ್ಬಲು ಬೇಕಾದ ಶಕ್ತಿಯು ಖಾದಿ[ಯಲ್ಲಿ]ಗಿದೆ. ಖಾದಿಯನ್ನು ಕೊಂಡುಕೊಂಡು ಹಳ್ಳಿಯವರಿಗೆ ನಮ್ಮ ಬೆಂಬಲವನ್ನು ಕೊಡುವುದು ನಮ್ಮ ಕರ್ತವ್ಯವಲ್ಲವೇ?

ಅಖಿಲ ಭಾರತ ಚರಖಾ ಸಂಘ (All India Spinners' Association)ದ ತಮಿಳುನಾಡು ಮತ್ತು ಆಂಧ್ರ ದೇಶದ, ಶಾಖೆಗಳ ಆಶ್ರಯದಲ್ಲಿ, ಖಾದಿಯು ನಮ್ಮ ಪ್ರಾಂತ್ಯದಲ್ಲಿ ತಯಾರಾಗುತ್ತಿದೆ. 1938–39ರಲ್ಲಿ ಆಂಧ್ರ ದೇಶದಲ್ಲಿ ಸಾಧಾರಣ 4,51,529 ರೂಪಾಯಿ ಬೆಲೆಯ 19,03,518 ಚದರ ಗಜ ವಿಸ್ತೀರ್ಣದ, 2,51,105 ರಾತಲು ಭಾರದ ಖಾದಿಯು ತಯಾರಾಗಿದೆ. 1938ರಲ್ಲಿ ತಮಿಳುನಾಡಿನಲ್ಲಿ ತಯಾರಾದ ಖಾದಿಯ ಅಂಕಸಂಖ್ಯೆಗಳು ಈ ಕೆಳಗಿನಂತಿವೆ.

ಖಾದಿ ಕೆಲಸಗಾರರ ಸಂಖ್ಯೆ	60,017
ಕೊಟ್ಟ ಕೂಲಿ	ರೂ. 11,37,020
ನೂಲುವುದಕ್ಕೆ	ರೂ. ,77,527
ಬಟ್ಟೆಯ ವಿಸ್ತೀರ್ಣ (ಚ. ಗಜಗಳಲ್ಲಿ)	33,04,073
ಬಟ್ಟೆಯ ಬೆಲೆ	ರೂ. 16,57,472

ಖಾದಿಯನ್ನು ಕೊಂಡುಕೊಳ್ಳಿರಿ, ಹಿಂದೂದೇಶದ ಹಳ್ಳಿಗಳನ್ನು ಉದ್ಧರಿಸಿರಿ!

ಭಾರತ ಮತ್ತು ಪರರಾಷ್ಟ್ರಗ[ಳು]

ಆಮದು ರಫ್ತುಗಳು—	ತೆರಿಗೆಗಳು
ಆಯ-ವ್ಯಯಗಳು	ಬಜೇಟುಗಳು
ಕೈಗಾರಿಕೆಗಳು	ಮಿಲಿಟರಿ ವೆಚ್ಚ
ಸಂಪಾದನೆ	ಜನಾಂಗಾಭಿವೃದ್ಧಿ ಕಾರ್ಯಗಳು
ಮಜೂರರು	ಶಿಕ್ಷಣದ ಸಂಖ್ಯೆಗಳು
ಸಂಸ್ಥಾನಗಳು	ದವಸಧಾನ್ಯಗಳು

ಈ ವಿಭಾಗದಲ್ಲಿ ಕೊಡಲ್ಪಟ್ಟಿರುವ ಅಂಕೆ ಸಂಖ್ಯೆಗಳು ವ್ಯಾಪಾರಸ್ಥರಿಗೆ ಮಾತ್ರವಲ್ಲ, ಇತರರಿಗೂ ಮ[illegible] ದ್ದಂತೆ, ಟೀಕೆಗಳೇನೂ ಇಲ್ಲದೆ ಈ ವಿಭಾಗದಲ್ಲಿ ಪ್ರಸಿದ್ಧಿಸಲಾಗಿದೆ. ಅರ್ಥ ವಿಚಾರದಲ್ಲೂ, [illegible] ದೇಶಗಳಿಗಿಂತ ಎಷ್ಟು ಹಿಂದೆ ಉಳಿದಿದೆ ಎಂಬುದು ಈ ಅಂಕೆಸಂಖ್ಯೆಗಳನ್ನು ಮನನಮಾಡಿ[illegible] ತಾತ್ಕಾಲಿಕ ಮೌಲ್ಯವಿರದೆ, ಯಾವ ಕಾಲಕ್ಕೂ ಇವು ಆಧಾರಗ್ರಂಥದ[illegible]

...ಳು ಮತ್ತು ಅವು ತಯಾರಿಸಲು ...ವ ರಸಾಯನ	ರೂ.	27,83	ಸಾವಿರ	0·17
Bristles)	„	26,32	„	0·16
	„	24,18	„	0·15
(ಒಡಪ ...ರಿಸುವ	„	23,71	„	0 15
...ಗಳು	„	23·66	„	0·15
ತಯಾರಿ ...ಜೀಳುವ	„	15·71	„	0·09
ಕಟ್ಟುವುದಕ್ಕೆ ...ಮಾನು				
ರೈಲ್ವೆ ಕಾಮುಗಾರಿ ...ರೋಪ				
ಜನರಲ್ ಇಂಜಿನಿ... ...ಣ,				
ಹಡಗು ತಯಾರಿ ...ರ				
ಬಟ್ಟೆಯ ಗಿರಣಿಗಳು				
ನೇಯಿಗೆ ವೃತ್ತಿಗಳು	„	14,75	„	0·09
(ಹೊಸೆರಿ)	„	12,62	„	0·08
ಸಣಬಿನ ಗಿರಣಿಗಳು				
ಗೋಣಿ ನಾರಿನ ಇತರ	„	10,89	„	0·07
ತಯಾರಿಗಳು (Jute Press)		8,96	„	0·05
ರೇಶ್ಮೆಯ ಗಿರಣಿಗಳು		8,23	„	0·05
ಉಣ್ಣೆಯ ಶಾಲುಗಳನ್ನೂ		8,12	„	0·05
ಕಂಬಳಿಗಳನ್ನೂ ತಯಾರಿಸುವಿಕೆ		15 [illegible]6	„	0·03

ರಾಷ್ಟ್ರಗಳ ಸಂಪತ್ತು ಮತ್ತು ಉತ್ಪತ್ತಿಗಳು

[National income and wealth compared with other countries of the world]

(ಸರ್ ಎಮ್. ವಿಶ್ವೇಶ್ವರಯ್ಯನವರ "Planned Economy for India" ಎಂಬ ಗ್ರಂಥದ ಆಧಾರದಿಂದ)

ರಾಷ್ಟ್ರಗಳು	ಜನಸಂಖ್ಯೆ	ಪ್ರತಿಯೊಬ್ಬನ ವರುಷದ ಉತ್ಪತ್ತಿ	ಪ್ರತಿಯೊಬ್ಬನ ಸಂಪತ್ತು
ಯು. ಯಸ್. ಎ.	122,77 ಮಿಲಿಯ	ರೂ. 2,053	ರೂ. 9,356
ಕೆನಡಾ	10,37 „	„ 1,268 „	„ 8,023
ಸಂಯುಕ್ತ ರಾಷ್ಟ್ರಗಳು	46,18 „	„ 1,092	„ 6,371
ಜಪಾನ್	62,36 „	„ 271	„ 2,308
ಭಾರತ	271,73 „	„ 82 „	441

ಇಂಡಿಯದ ಪ್ರಾಮುಖ್ಯವಾದ ಕೈಗಾರಿಕೆಗಳು

(ಹೆಚ್ಚು ಪ್ರಮಾಣದಲ್ಲಿ ತಯಾರಿಮಾಡುವಂಥವುಗಳು)

ಕೈಗಾರಿಕೆಗಳು	ಒಟ್ಟು ಹಿಂದುಸ್ಥಾನದಲ್ಲಿರುವ ಕರ್ಮಶಾಲೆಗಳ ಸಂಖ್ಯೆ	ಬೊಂಬಾಯಿ	ಬಂಗಾಳ	ಮದ್ರಾಸ್
ಅಕ್ಕಿಯ ಗಿರಣಿಗಳು	1009	2	351	405
ಕಾಫಿ ಕಾರ್ಖಾನೆಗಳು	32	1	—	25
ಸಕ್ಕರೆಯ ಗಿರಣಿಗಳು	175	10	11	14
ಚಾ ತಯಾರಿಯ ಕಾರ್ಖಾನೆಗಳು	991	—	271	70
ತಂಬಾಕು ಸಿದ್ಧತೆ	30	7	2	8
ಮೂಳೆಯ ಗೊಬ್ಬರದ ತಯಾರಿ	29	—	7	9
ಬೆಂಕಿಪೆಟ್ಟಿಗೆಯ ಕಾರ್ಖಾನೆಗಳು	118	6	13	67
ಎಣ್ಣೆಯ ಗಿರಣಿಗಳು	265	65	30	8
ಸಾಬೂನು ತಯಾರಿ	22	14	11	20
ವಾರ್ನಿಸುಗಳ ಸಿದ್ಧತೆ	10	8	7	2
ಕಾಗದ ತಯಾರಿ	12	4	3	2
ಬುಕ್ ಬೈಂಡಿಂಗ್ ಮತ್ತು ಛಾಪಖಾನೆ ಕೆಲಸಗಳು	452	108	99	76
ಕಬ್ಬಿಣ ತಯಾರಿ ಕಾರ್ಖಾನೆಗಳು	7 8	15	—	9
ಉಕ್ಕು ಮತ್ತು ಕಬ್ಬಿಣ ಸಿದ್ಧತೆಯ ಕಾರ್ಖಾನೆಗಳು	13	—	5	2
ಹಂಚು ಮತ್ತು ಇಟ್ಟಿಗೆಗಳ ಕಾರ್ಖಾನೆಗಳು	142	6	2	99
ಸಿಮೆಂಟು ಸುಣ್ಣ ಮತ್ತು ಆವೆಮಣ್ಣಿನ ವೃತ್ತಿಗಳು	40	1	9	1
ಗಾಜಿನ ತಯಾರಿ	63	7	14	1
ಮರ ಸಿಗಿಯುವ ಕಾರ್ಖಾನೆಗಳು	50	6	10	12
ಮರದ ಸಾಮಾನುಗಳನ್ನು ತಯಾರಿಸುವಿಕೆ	58	6	9	6
ಉಕ್ಕಿನ ಟ್ರಂಕುಗಳನ್ನೂ ಇತರ ಕಟ್ಲೇರಿಗಳನ್ನೂ ತಯಾರಿಸುವಿಕೆ	14	10	—	—
ಉಣ್ಣೆಯನ್ನು ಸಿದ್ಧತೆಗೊಳಿಸುವ ಗಿರಣಿಗಳು	18	4		
ಚರ್ಮ ಹದಗೊಳಿಸುವ ವೃತ್ತಿಗಳು	25	9	6	6
ಚರ್ಮದ ಸಾಮಾನುಗಳನ್ನೂ ಮೊಚ್ಚೆಗಳನ್ನೂ ತಯಾರಿಸುವಿಕೆ	12	2	2	5
ಹತ್ತಿಯನ್ನು ಸಿದ್ಧಗೊಳಿಸುವುದು ಮತ್ತು ಅದನ್ನು ಬೇಲುಗಳನ್ನಾಗಿ ಮಾಡುವ ವೃತ್ತಿ	2526	668	11	289
ರಬ್ಬರ್	30	4	16	6
ಹಗ್ಗ ತಯಾರಿಸುವಿಕೆ	47	—	5	41
ವಿದ್ಯುಚ್ಛಕ್ತಿಯ ತಯಾರಿಕೆಯ ಕ್ಷೇತ್ರಗಳು	57	6	22	4
ಬ್ರೆಡ್ಡು, ಬಿಸ್ಕಿಟು ಮತ್ತು ಪೆಪ್ಪರುಮಿಂಟುಗಳ ಕಾಮಗಾರಿಕೆಗಳು	31	10	6	4
ರಸಾಯನಿಕ ಪದಾರ್ಥಗಳ ತಯಾರಿಕೆಗಳು (Chemicals)	28	2	15	—

ಹಿಂದೂದೇಶದ ಪ್ರಾಮುಖ್ಯ ಕೈಗಾರಿಕೆ ಕೇಂದ್ರಗಳಲ್ಲಿ ದಿನಂಪ್ರತಿ ದುಡಿಯುತ್ತಿರುವವರ ಸಂಖ್ಯೆಗಳು

(1937ರಲ್ಲಿ ನಿರ್ಣಯಿಸಿದ ಮೊರೆಗೆ)

ಕೈಗಾರಿಕೆಗಳು	ಇಂಡಿಯದಲ್ಲಿ ಒಟ್ಟು ದಿನಂಪ್ರತಿ ದುಡಿಯುವರು	ಮದ್ರಾಸ್ ಸಂಸ್ಥಾನದಲ್ಲಿ ದುಡಿಯುತ್ತಿರುವರು
ಹತ್ತಿಯನ್ನು ನೂಲುವ ಮತ್ತು ಅದನ್ನು ನೇಯುವುದರಲ್ಲಿ	569,000	64,000
ಸಣಬಿನ ಗಿರಣಿಗಳು	309,000	5,000
ಹತ್ತಿಯನ್ನು ಶುಚಿಗೊಳಿಸಿ ಬೇಲು ಮಾಡುವ ವೃತ್ತಿಯಲ್ಲಿ	182,000	24,000

ಇದು ಎಲ್ಲೋರಾ, ವಾಲಾಜಾಪೇಟಾ ಮಛಲೀಪಟ್ನ ಈ ಸ್ಥಳಗಳಲ್ಲಿ
ತಯಾರಾಗುತ್ತಿದೆ. ಇಂಗ್ಲಾಂಡಿನ ಪ್ರಾಮುಖ್ಯವಾದ ಒಂದು)0
ಸಂಸ್ಥೆಯು ಎಲ್ಲೋರದ ಜಮಖಾನುಗಳ ಏಜನ್ಸಿಯನ್ನು ತೆಗೆ
ಒಪ್ಪಿದೆ. ಆಸ್ಟ್ರೇಲಿಯವೂ ಹಿಂದೂದೇಶದಿಂದ ಜಮಖಾನುಗಳನ್ನು,)00



4,000
3,000
6,000
5,000
—
1,000
1,000

[illegible] ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಟ್ಟ (1933) [illegible] ಶಾಲು. ಇದನ್ನು ಕೈಯಿಂದಲೇ ನೂಲು ತೆಗೆದು ಕೈಮಗ್ಗದಲ್ಲಿ ನೇಯಲಾಯಿತು. 56 ಇಂಚು ಅಗಲವಿರುವ ಈ ಶಾಲ ಒಂದು ಕೈಉಂಗುರದೊಳಗಿಂದ ಸುಲಭವಾಗಿ ಎಳೆಯಬಹುದು.

200

ನಿಂದ ಪ್ರತಿವರುಷ ಬರುತ್ತವೆ. ನಮ್ಮ ಸಂಸ್ಥಾನವು 3,000
ಬ್ಲೇಂಕೆಟ್ ಮತ್ತು ರಗ್ಗುಗಳನ್ನೂ—16 ಸಾವಿರ ರ 2,000
ಮತ್ತು ನೆಲಕ್ಕೆ ಹಾಸುವ ಕಂಬಳಿಯನ್ನೂ ಹೊರಗ
ಹೋಗುವ ಇಷ್ಟು ಹಣವನ್ನೂ ನಿಲ್ಲಿಸಿರಿ! 6,000

ಈ ಸಂಸ್ಥಾನದಲ್ಲಿ 5141 ಲಕ್ಷ ರಾ 3,000
ಯಾಗುತ್ತಿದೆ. 1409 ಲಕ್ಷ ರಾತಲುಗಳಷ್ಟು500 500
ತ್ತದೆ. 40·82 ಲಕ್ಷ ರಾತಲುಗಳಷ್ಟು
ಕಳುಹಿಸುತ್ತೇವೆ. ಅಂತೂ ನಮಗೆ 11,000 4,000
ಕೊನೆಗೆ ಉಳಿಯುತ್ತದೆ.

ಈ ಪ್ರಾಂತ್ಯದ ಉಣ್ಣೆ	10,000	—
1. ಹೊರ	8,000	1,000
ನೆಗಳಲ್ಲಿ	8,000	8,000
ಕಾಗದದ ಗಿರಣಿಗಳಲ್ಲಿ	8,000	500
ಗಾಜಿನ ಫೇಕ್ಟರಿಗಳಲ್ಲಿ	8,000	1,000
ಕಲ್ಲಿನ ಕೆಲಸದಲ್ಲಿ	8,000	—
ರಬ್ಬರು ಕಾಮಗಾರಿಕೆಯಲ್ಲಿ	8,000	500
ಹೊಸೆರಿ ಕೆಲಸದಲ್ಲಿ (ನೇಯಿಗೆಯಲ್ಲಿ)	8,000	1,800
ರೇಶ್ಮೆಯ ಕೆಲಸಗಳಲ್ಲಿ	7,000	500
ಮೋಟಾರು ಕೆಲಸಗಳಲ್ಲಿ	7,000	1,500
ಧಾನ್ಯದ ಹುಡಿ ತಯಾರಿಸುವ ಗಿರಣಿಗಳಲ್ಲಿ	6,000	—

1938ರಿಂದ 1939ರ ವರೆಗೆ ಹಿಂದೂ ದೇಶಕ್ಕೆ ಪರದೇಶದಿಂದ ತರಿಸಿದ ಪ್ರಾಮುಖ್ಯವಾದ ಪದಾರ್ಥಗಳ ವಿವರ

(1938—1939ರ ರಿವ್ಯೂ ಓಫ್ ದಿ ಟ್ರೇಡ್ ಓಫ್ ಇಂಡಿಯಾ ಎಂಬ ಪುಸಕದ ಆಧಾರದಿಂದ)

ವಿವರ		ಮೊಬಲಗು		ಒಟ್ಟು ತರಿಸಿದ ಸಾಮುಗ್ರಿಗಳ ಸೇಕಡಾಂಶ
ಹತ್ತಿ ಮತ್ತು ಬಟ್ಟೆಗಳು	ರೂ.	22,66,20	ಸಾವಿರ	14·88
ಯಂತ್ರಗಳ ಮತ್ತು ಗಿರಣಿಯ ಸಾಮುಗ್ರಿಗಳು	,,	19,04,78	,,	12·50
ಎಣ್ಣೆಗಳು	,,	15.62,41	,,	10·26
ಧಾನ್ಯಗಳು ಮತ್ತು ಧಾನ್ಯದ ಹುಡಿ	,,	13,76,46	,,	9·04
ಲೋಹಗಳು ಮತ್ತು ಲೋಹದ ಅದುರುಗಳು	,,	10,86,52	,,	7·13
ವಾಹನಗಳು	,,	6,68,26	,,	4·39
ಹತ್ಯಾರುಗಳು ಮತ್ತು ಉಪಕರಣಗಳು	,,	5,85,27	,,	3·84
ಕಾಗದ ಮತ್ತು ರಟ್ಟುಗಳು	,,	3,22,93	,,	2·12
ಚರ್ಮವನ್ನು ಹದಗೊಳಿಸುವ ಮತ್ತು ಬಣ್ಣಕೊಡುವ ಪದಾರ್ಥಗಳು	,,	3,11,20	,,	3·05
ರಸಾಯನಿಕ ಪದಾರ್ಥಗಳು	ರೂ.	3,05,29	,, ಸಾವಿರ	2·01
ಮರ ಮೋಪುಗಳು	,,	2,86,69	,,	1·88
ಉಣ್ಣೆ (ಸಿದ್ಧ ಮತ್ತು ಅಸಿದ್ಧ)	,,	2,81,90		1·85
ಸಾಂಬಾರಿನ ಪದಾರ್ಥಗಳು	,,	2,63,43	,,	1·73
ಲೋಹದ ಪಾತ್ರೆಗಳು (HardWare)	,,	2,57,27	,,	1·69
ಆಹಾರ ಸಾಮುಗ್ರಿಗಳು ಮತ್ತು ಎಣ್ಣೆ ತಯಾರಿಗೆ ಬೇಕಾದ ಉಪಕರಣಗಳು	,,	2,48,41	,,	1·63
ಕೃತಕ ರೇಶ್ಮೆ	,,	2,23,62	,,	1.47
ಔಷಧಿಗಳು	,,	2,20,53	,,	1·45
ಶರಾಬುಗಳು	,,	2,10,83	,,	1·38
ರೇಶ್ಮೆ (ಸಿದ್ಧ ಮತ್ತು ಅಸಿದ್ಧ)	,,	1,94,15	,,	1·27
ಬಳಕೆಗೆ ತಯಾರಾದ ರಬ್ಬರು	,,	1,40,56,	,,	0·92
ಹಣ್ಣುಗಳು ಮತ್ತು ತರಕಾರಿಗಳು	,,	1,34,43	,,	0·88
ಗಾಜು ಮತ್ತು ಗಾಜಿನ ಒಡವೆಗಳು	,,	1,25,12	,,	0·82
ಗೊಬ್ಬರಗಳು	,,	1,05,17	,,	0·69
ತಂಬಾಕು	,,	1,04,55	,,	0·69
ಟೀ ಪೆಟ್ಟಿಗೆಗಳು (Tea chests)	,,	90,30	,,	0·59
ವಾರ್ನಿಸುಗಳು ಮತ್ತು ಅದಕ್ಕೆ ಅಗತ್ಯವಿರುವ ಇತರ ಸಾಮುಗ್ರಿಗಳು	,,	88,99	,,	0·58
ಸ್ಟೇಶನರಿ ಸಾಮಾನುಗಳು	,,	67,04	,,	1·44
ಅಲಂಕಾರ ಸಾಮುಗ್ರಿಗಳು (Toilets)	,,	66,06	,,	0 43
ಕಟ್ಟೋಣಗಳನ್ನು ಕಟ್ಟಲಿಕ್ಕೆ ಬೇಕಾದ ಸಾಮಾನುಗಳು ಮತ್ತು ಯಂತ್ರ ಉಪಕರಣಗಳು	,,	62,18	,,	0·41
ಪುಸ್ತಕಗಳು	,,	58,92	,,	0·39
ಆಯುಧಗಳು, ಜಾರೂದುಗಳು ಮತ್ತು ಯುದ್ಧೋಪಕರಣಗಳು (Military stores)	,,	50,17	,,	0·33
ಯಂತ್ರಗಳಿಗೆ ಉಪಯೋಗಿಸಲ್ಪಡುವ ಬೆಲ್ಟುಗಳು	,,	49,11	,,	0·32
ಉಡಿಗೆತೊಡಿಗೆ ಅಲಂಕಾರಗಳು (Apparel)	,,	47,50	,,	0·31
ಸಕ್ಕರೆ	,,	45,58	,,	0·30
ಗಡಿಯಾರಗಳು, ವಾಚುಗಳು ಮತ್ತು ಇತರ ಭಾಗಗಳು	,,	42,63	,,	0·28
ಪಿಂಗಾಣಿ ಮತ್ತು ಮಣ್ಣಿನ ಪಾತ್ರೆಗಳು	,,	39,19	,,	0·26
ಬೋಬಿನ್‌ಗಳು (Bobbins)	,,	37,92	,,	0·24
ಉಪ್ಪು	,,	37.80	,,	0·25
ಗೊಂಬೆಗಳು ಮತ್ತು ಆಟದ ಸಾಮಾನುಗಳು	,,	37,30	,,	0·24
ಗೋಂದುಗಳು ಮತ್ತು ಧೂಪಗಳು	,,	30,13	,,	0·20
ಕಟ್ಲೇರಿ ಸಾಮಾನುಗಳು	,,	25,64	,,	0·17
ಬೆಂಕಿಪೆಟ್ಟಿಗೆ	,,	23,52	,,	0·15
ಸಾಬೂನುಗಳು	,,	22,44	,,	0·15
ಮರದ ಒಡವೆಗಳು (Furniture)	,,	15,95	,,	0·10
ಟೀ	,,	15,73	,,	0·10
ಮೊಜ್ಜೆಗಳು ಮತ್ತು ಬೂಟ್ಸುಗಳು	,,	15,45	,,	0·10

ಕೊಡೆಗಳು ಮತ್ತು ಇತರ ಉಪಕರಣಗಳು	ರೂ. 14,87 ಸಾವಿರ	0·10
ಕಲ್ಲಿದ್ದಲು ಮತ್ತು ಇದ್ದಲು	„ 8,05 „	0·05
ಮಿಾನು (ಕ್ಯಾನಿಂಗ್ ಮಾಡದೆ ಇದ್ದುದು)	„ 6,89 „	0·05
ಸಣಬು ಮತ್ತು ಸಣಬಿನ ಒಡವೆಗಳು	„ 5,93 „	0·04
ಜಮಾ ಮೊಬಲಗು	„ 153,32,77 „	100

1938 ರಿಂದ 1939ರ ವರೆಗೆ ಹಿಂದೂದೇಶದಿಂದ ರಫ್ತುಮಾಡಿದ ಮುಖ್ಯವಾದ ಸಾಮಾನುಗಳ ವಿವರಗಳು

(1938—1939 ರ "ರಿವ್ಯೂ ಓಫ್ ದಿ ಟ್ರೇಡ್ ಓಫ್ ಇಂಡಿಯಾ ಎಂಬ" ಪುಸ್ತಕದ ಆಧಾರದಿಂದ)

ಸಾಮಾನುಗಳ ವಿವರ	ಕಳುಹಿಸಿದ ಸಾಮಾಗ್ರಿಗಳ ಮೌಲ್ಯ	ಕಳುಹಿಸಿದ ಸಾಮುಗ್ರಿಗಳು
ಸಣಬು (ಅಸಿದ್ಧ)	ರೂ. 13,39,67 ಸಾವಿರ	8·22
ಸಣಬಿನಿಂದ ತಯಾರಾದ ಸಾಮಾನುಗಳು	„ 26,26,11 „	16·12
ಹತ್ತಿ (ಅಸಿದ್ಧ ಮತ್ತು ನೂಲುವುದಕ್ಕೆ ಅಯೋಗ್ಯವಾದುದು)	„ 24,66.65 „	15·14
ಹತ್ತಿಯಿಂದ ತಯಾರಾದ ಸಾಮಾನುಗಳು	„ 7,11,79 „	4·37
ಚಾ	„ 23.42,47 „	14·18
ಕಾಳುಗಳು	„ 15,09,22 „	9·26
ಧಾನ್ಯಗಳು ಬೀಜಗಳು ಮತ್ತು ಧಾನ್ಯದ ಹುಡಿಗಳು	„ 7,74,12 „	4·75
ಚರ್ಮದ ಒಡವೆಗಳು	„ 5,27.58 „	3·24
ಲೋಹಗಳು ಮತ್ತು ಲೋಹದ ಅದುರುಗಳು	„ 4,91,02 „	3·01
ಅಸಿದ್ಧ ಉಣ್ಣೆ ಮತ್ತು ಉಣ್ಣೆಯ ಬಟ್ಟೆಗಳು	„ 3,84,95 „	2·36
ಚರ್ಮ	„ 3,84,67 „	2·36
ಹಿಂಡಿಗಳು	„ 3,01,20 „	1·85
ತಂಬಾಕು	„ 2,75,63 „	1·63
ಹಣ್ಣುಗಳು ಮತ್ತು ತರಕಾರಿಗಳು	„ 2,26,86 „	1·39
ಕಲ್ಲಿದ್ದಲು ಮತ್ತು ಎಣ್ಣೆ ತೆಗೆದ ಇದ್ದಲು	„ 1,36,25 „	0·84
ಅರಗು (Lac)	„ 1,26,65 „	0 78
ಅಭ್ರಕ (Mica)	„ 1,14,12 „	0·70
ಎಣ್ಣೆಗಳು	„ 1,03,39 „	0·63
ಕೊಯರ್ (Coir)	„ 96,01 „	0·59
ಸಾಂಬಾರಿನ ಜೀನಸುಗಳು (Spices)	„ 78,66 „	0·48
ಕಾಫಿ	„ 75,11 „	0·46
ನಾರು (Hmp) ಅಸಿದ್ಧ	„ 71,98 „	0·44
ರಬ್ಬರು (ಅಸಿದ್ಧ)	„ 71·58 „	0·44
ಮಿಾನು (ಕೇಸ್‌ಮಾಡದಿದ್ದುದು)	„ 69,29 „	0·43
ಆಹಾರ ಸಾಮುಗ್ರಿಗಳು ಮತ್ತು ಎಣ್ಣೆ ತಯಾರಿಸಲು ಬೇಕಾಗುವ ಸಾಮಾನುಗಳು	„ 59,32 „	0·36
ಚರ್ಮ ಹದಮಾಡುವ ಮತ್ತು ಬಣ್ಣ ಕೊಡುವ ಸಾಮಾನುಗಳು	„ 59,11 „	0·36
ಗೊಬ್ಬರಗಳು	„ 37.22 „	0·23
ಪೆರೆಫಿನ್ ಮಯಣ (Paraffin wax)	„ 36,25 „	0·22
ಔಷಧಿಗಳು ಮತ್ತು ಅವುಗಳನ್ನು ತಯಾರಿಸಲು ಬೇಕಾಗುವ ರಸಾಯನಗಳು	ರೂ. 27,83 ಸಾವಿರ	0·17
ಬ್ರಿಸ್ಲ್‌ಗಳು (Bristles)	„ 26,32 „	0·16
ಸಕ್ಕರೆ	„ 24,18 „	0·15
ಎಲುಬುಗಳು (ಒಡವೆಗಳನ್ನು ತಯಾರಿಸುವ ಬಗ್ಗೆ)	„ 23,71 „	0 15
ಮರ ಮೋಪುಗಳು	„ 23·66 „	0·15
ಕುಂಚಗಳನ್ನು ತಯಾರಿಸಲು ಅಗತ್ಯಬೀಳುವ ನಾರುಗಳು	„ 15·71 „	0·09
ಕಟ್ಟೋಣಗಳನ್ನು ಕಟ್ಟುವುದಕ್ಕೆ ಬೇಕಾಗುವ ಸಾಮಾನುಗಳು ಮತ್ತು ಯಂತ್ರೋಪಕರಣಗಳು (ಕಬ್ಬಿಣ, ಉಕ್ಕು, ಮತ್ತು ಮರ ಇವನ್ನು ಬಿಟ್ಟು)	„ 14,75 „	0·09
ಪೋಷಾಕು (Apparel)	„ 12,62 „	0·08
ಸೊಲ್ಟ್ ಪೀಟರ್ (Salt-petre)	„ 10,89 „	0·07
Fodder bran and Pollands)	„ 8,96 „	0·05
ಪ್ರಾಣಿಗಳು (ಸಜೀವ)	„ 8,23 „	0·05
ಹಗ್ಗಗಳು	„ 8,12 „	0·05
ಅಸಿದ್ಧ ರೇಶ್ಮೆ ಮತ್ತು ರೇಶ್ಮೆಯ ಬಟ್ಟೆಗಳು	„ 4,26 „	0·03
ಹುಲ್ಲುಗಳು, ಸ್ಟಿಯರಿನ್ ಮತ್ತು ಮೇಣಗಳು (Tallow, Stearine and Wax)	„ 3,27 „	0·02
ಕೊಂಬುಗಳು (Horn s and Hips) ಮತ್ತು ಗೊರಸುಗಳು	„ 2,36 „	0·01
ಮೇಣದ ಬತ್ತಿಗಳು	„ 2 „	—
ಅಫೀಮು (Opium)	„ 1 „	—
ಇತರ ಸಾಮಾನುಗಳು	„ 580,77 „	3·57
ಜುಮ್ಲಾ	„ 162,92,55 „	100

1938ರಿಂದ 1939ರ ವರೆಗೆ ಪರದೇಶಗಳಲ್ಲಿ ನಡೆದ ಆಮದು ರಫ್ತುಗಳ ವಿವರ.

(1938—1939ರ ರಿವ್ಯೂ ಓಫ್ ದಿ ಟ್ರೇಡ್ ಓಫ್ ಇಂಡಿಯಾ ಎಂಬ ಪುಸ್ತಕದ ಆಧಾರದಿಂದ)

ರಾಷ್ಟ್ರಗಳು.	ತರಿಸಿದ ಸಾಮಾನಿನ ಶೇಕಡಾ ಅಂಶ.	ಕಳುಹಿಸಿದ ಸಾಮಾನಿನ ಶೇಕಡಾ ಅಂಶ
ಯುನೈಟೆಡ್ ಕಿಂಗ್‌ಡಮ್	30·5	34·0
ಬರ್ಮಾ	16·0	6·2
ಜಪಾನು	10·1	9·0
ಜರ್ಮನಿ	8·5	5·1
ಯು. ಯಸ್. ಎ.	6·4	8·5
ಕೆನ್ಯಾ ಮತ್ತು ಜಂಜಿಬಾರ್(Zanzibar)	3·4	. . .
ಇರಾನ್, ಅರೇಬಿಯಾ, ಇರಾಕ್, ಏಶಿಯಾಟಿಕ್, ಟರ್ಕಿ ಮತ್ತು ಸುಮಾತ್ರಾ	2·9	1·6
ಸ್ಟ್ರೇಯಿಟ್ಸ್ ಸೆಟ್ಲಮೆಂಟ್ (Straits Settlements)	2·7	1·3
ಬೆಲ್ಜಿಯಮ್	1 9	2·6
ಇಟಲಿ	1·8	1·6
ಆಸ್ಟ್ರೇಲಿಯಾ	1·6	1·8
ಸ್ವಿಜರ್‌ಲೇಂಡ್	1·1	. . .

ಚೀನಾ	1·1	1·5
ಫ್ರಾನ್ಸ್	0·9	3·8
ನೆದರ್‌ಲೇಂಡ್ಸ್	0·9	2·3
ಸಿಲೋನ್	0·8	3·1
ಕೆನಡಾ	0·6	1·3
ಜಾವಾ	0·3	. . .
ದಕ್ಷಿಣ ಆಫ್ರಿಕಾ	0·2	0·9
ಸ್ಪೈನ್	....	0·1
ಅರ್ಜೆಂಟ್ಯಾನ್	....	1·8

ಇಂಡಿಯಾದಲ್ಲಿ ಪ್ರತಿಯೊಬ್ಬನ ವರ್ಷಾವಧಿಯ ಅಂದಾಜು ಉತ್ಪತ್ತಿ

ಅಂದಾಜು ಸೂಚಿಸಿದವರು.	ವರ್ಷ.	ಪ್ರತಿಯೊಬ್ಬನ ವರ್ಷಾವಧಿ ಉತ್ಪತ್ತಿ
ದಾದಾಬಾಯಿ ನವರೋಜಿ	1870	ರೂ. 20—0—0
ಸರ್. ಡಿ. ಬಾರ್ಬರ್ ಮತ್ತು ಮೇಜರ್ ಇ. ಬಾರಿಂಗ್	1882	,, 27—0—0
ಡಿಗ್ಬಿ	1898—9	,, 18—9—0
ಲಾರ್ಡ್ ಕರ್ಜನ್	1900	,, 30—0—0
ದಿಗ್ಬಿ	1900	,, 17—4—0
ಎಟ್ಕಿನ್‌ಸನ್	1875	,, 25—0—0
ಎಟ್ಕಿನ್‌ಸನ್	1895	,, 34—0—0
ವಾಡಿಯಾ ಮತ್ತು ಜೋಶಿ	1913—4	,, 44—5—6
ಷಾ ಮತ್ತು ಖಂಭಟ್ಟಾ	1921—2	,, 67—0—6
ಫಿಂಡ್ಲೆ ಷಿರಾಸ್	1921	,, 107—0—0
,, ,,	1922	,, 116—0—0

ಹಿಂದೂದೇಶದಲ್ಲಿಯೂ ಇತರ ರಾಷ್ಟ್ರಗಳಲ್ಲಿಯೂ ಪ್ರತಿಯೊಬ್ಬ ಪ್ರಜೆಯು ತೆರಬೇಕಾದ ತೆರಿಗೆ

ರಾಷ್ಟ್ರಗಳು	ವರುಷ	ಮೌಲ್ಯ
ಹಿಂದೂದೇಶ	1931—2	0·42 ಪೌಂಡುಗಳು (ರೂ. 5·7)
ಫ್ರಾನ್ಸ್	1931	10·9 ಪೌಂಡುಗಳು
ಜರ್ಮನಿ	1932—3	7·8 ,,
ಇಟಲಿ	,,	7·3 ,,
ಜಪಾನ	,,	1·7 ,,
ಯುನೈಟೆಡ್ ಕಿಂಗ್‌ಡಮ್	,,	19·3 ,,
ಯು. ಎಸ್. ಎ.	,,	17·3 ,,

ಪ್ರಾಂತೀಯ ಬಜೆಟುಗಳು ಮತ್ತು ಆದಾಯ ವೆಚ್ಚಗಳು

(ರೂಪಾಯಿಗಳ ಸಂಖ್ಯೆಗಳನ್ನು ಅಷ್ಟು ಲಕ್ಷಗಳೆಂದು ಓದತಕ್ಕದ್ದು.)

ಪ್ರಾಂತ್ಯಗಳು	1937—38ರ ವೆಚ್ಚ ಮತ್ತು ಆದಾಯ	1938—39ಕ್ಕೆ ಪುನಃ ನಿರ್ಣಯಿಸಿದ ಬಜೇಟ್	1939—40ರ ಬಜೇಟು
ಮದ್ರಾಸ್	ಆಯ—16,01	16,23	16,41
	ವ್ಯಯ—15,83	16,21	16,41
ಮುಂಬಾಯಿ (ಕಂದಾಯದಿಂದ)	ಆಯ—12,44	12,34	12,90
	ವ್ಯಯ—12,14	12,96	12,94
ಬಂಗಾಳ	ಆಯ—13,01	12,71	13,78
	ವ್ಯಯ—11,83	12,93	14,65
ಸಂಯುಕ್ತ-	ಆಯ—12,34	13,09	13,27
ಪ್ರಾಂತ್ಯ	ವ್ಯಯ—12,34	13,10	14,01
ಪಂಚಾಬ	ಆಯ—11,98	11,64	12,02
	ವ್ಯಯ—11.47	11,70	11,96
ಮಧ್ಯಪ್ರಾಂತ್ಯ	ಆಯ— 4,54	4,40	8,85
	ವ್ಯಯ— 4,66	4,75	4,83
ಅಸ್ಸಾಂ	ಆಯ— 2,74	2,62	2,84
	ವ್ಯಯ— 2,78	3,00	3,02
ಬಿಹಾರ್	ಆಯ— 5,03	5,19	5,38
	ವ್ಯಯ— 4,95	5,04	5,38
ಒರಿಸ್ಸಾ	ಆಯ— 1,85	1,91	1,84
	ವ್ಯಯ— 1,76	1,93	2,03
ಸಿಂಧ್	ಆಯ— 3,92	3,66	3,83
	ವ್ಯಯ— 3,55	3,51	3,76

ಪ್ರಾಂತೀಯ ಸರಕಾರಗಳು ಜನಾಂಗ ಅಭಿವೃದ್ಧಿಗಾಗಿ ಮಾಡಿದ ವೆಚ್ಚಗಳು

[Expenditure on Nation Building Services in Provinces]

(ಮದ್ರಾಸ್ ವಿಶ್ವವಿದ್ಯಾನಿಲಯದ ಪ್ರೊಫೆಸರರಾದ ಐ. ಜೆ. ಥೋಮಸರು ಬರೆದ "ಫೆಡರಲ್ ಫೈನೆನ್ಸ್ ಇನ್ ಇಂಡಿಯಾ" ಎಂಬ ಪುಸ್ತಕದ ಆಧಾರದಿಂದ)

ಪ್ರಾಂತಗಳು	1931ನೇ ಖಾನೇಶುಮಾರಿಯು ಪ್ರಕಾರ ಜನಸಂಖ್ಯೆ ಮಿಲಿಯಗಟ್ಲೆಯಲ್ಲಿ	1937-38ರಲ್ಲಿ ಆದಮ್ಯಯಗಳು ಲಕ್ಷಗಟ್ಲೆಯಲ್ಲಿ	ಜಮಾ ಖರ್ಚಿನ ಶೇಕಡಾ ಅಂಶ	1939-40ರ ಬಜೇಟಿನ ಮೇರೆಗೆ ಪ್ರತಿ 1000 ಜನರ ಮೇಲೆ ಬೀಳುವ ವೆಚ್ಚ
		ರೂಪಾಯಿಗಳು		ರೂಪಾಯಿಗಳು
ಮದ್ರಾಸ್	44·5	4,52	30·12	10,49
ಮುಂಬಾಯಿ	18·0	2,54	20·75	18,28
ಬಂಗಾಳ	50·1	2,65	22·47	669
ಸಂಯುಕ್ತ ಪ್ರಾಂತ	48·4	3,16	25·72	824
ಪಂಜಾಬ	23·6	3,09	26·98	14,58
ಮಧ್ಯಪ್ರಾಂತ	15·5	95	20·44	658
ಬಿಹಾರ	32·4	1,31	27·23	460
ಒರಿಸ್ಸಾ	8·3	42	24·30	566
ಅಸ್ಸಾಂ	8·6	69	24·99	849
ಸಿಂಧ್	3·9	50	14·21	14,10
ಗಡಿನಾಡು ಪ್ರಾಂತ	2·4	35	19·84	16,67

ಹಿಂದೂದೇಶದ ಮತ್ತು ಇತರ ರಾಷ್ಟ್ರಗಳ ಮಿಲಿಟರಿ ಬಗ್ಗೆ ತಗಲುವ ವೆಚ್ಚಗಳ ಹೋಲಿಕೆ

("1938ನೇ ವರುಷದ ಹಿಂದೂಸ್ಥಾನ ಇಯರ್ ಬುಕ್" ಎಂಬುದರ ಆಧಾರದಿಂದ)

ಇಂಗ್ಲಾಂಡ್	ಕಂದಾಯದ	14%
ಫ್ರಾನ್ಸ್	,,	10%
ಇಟಲಿ	,,	10%
ಜಪಾನ್	,,	10½%
ಜರ್ಮನಿ	,,	5%
ಹಿಂದೂದೇಶ	,,	42% *

* (ಕೇಂದ್ರ ಸರಕಾರಕ್ಕೆ ಹೋಗುವ ಕಂದಾಯದ ಅಂಶಮಾತ್ರ)

1933—34ರಲ್ಲಿ ರಾಷ್ಟ್ರರಕ್ಷಣೆಯ ಬಗ್ಗೆ ತಗಲಿದ ವೆಚ್ಚ ಮತ್ತು ಇತರ ವ್ಯಯಗಳ ಹೋಲಿಕೆ

ರಾಷ್ಟ್ರಗಳು.	ಸರಕಾರಕ್ಕೆ ಒಟ್ಟು ತಗಲಿದ ವ್ಯಯಗಳ 100 ಭಾಗಗಳಲ್ಲಿ ದೇಶರಕ್ಷಣೆಯ ಬಗ್ಗೆ ತಗಲಿದ ವೆಚ್ಚಗಳ ಅಂಶಗಳು.	ಪ್ರತಿಯೊಬ್ಬ ಪ್ರಜೆಯ ಮೇಲೆ ಸಾಮಾಶಯದ ಮೇರೆಗೆ ಬೀಳುವ ವೆಚ್ಚ.
		ರೂ. ಆ. ಪೈ.
ಯುನೈಟೆಡ್ ಕಿಂಗ್‌ಡಮ್ (United Kingdom)	13·8	30—12—8
ಫ್ರಾನ್ಸ್	20·4	26— 2—1
ಜರ್ಮನಿ	12·0	7— 5—4
ಆಸ್ಟ್ರೇಲಿಯಾ	34·9	45— 1—0
ಕೆನಡಾ	3·0	3— 9—7
ಇಂಡಿಯಾ	21·5	1—10—1

1933—34ರಲ್ಲಿ ವಿದ್ಯೆಗಾಗಿ ಮತ್ತು ಸಮಾಜದ ಅಭಿವೃದ್ಧಿ (Social welfare) ಗಾಗಿ ಬೇರೆ ಬೇರೆ ರಾಷ್ಟ್ರಗಳು ಮಾಡಿದ ವೆಚ್ಚಗಳು

ರಾಷ್ಟ್ರಗಳು	ಸರಕಾರಕ್ಕೆ ಒಟ್ಟು ತಗಲಿದ ವೆಚ್ಚದ 100 ಭಾಗಗಳಲ್ಲಿ	ಪ್ರತಿಯೊಬ್ಬನಿಗಾಗಿ ಮಾಡಿದ ವೆಚ್ಚ
		ರೂ. ಆ. ಪೈ.
ಯುನೈಟೆಡ್ ಕಿಂಗ್‌ಡಮ್	25·9	57—15—10
ಫ್ರಾನ್ಸ್	13·3	16—14—11
ಜರ್ಮನಿ	22·2	13— 9— 7
ಆಸ್ಟ್ರೇಲಿಯಾ	7·5	22— 8— 6
ಕೆನಡಾ	11·1	13— 3— 2
ಇಂಡಿಯಾ	8·5	0—10— 5

ಇಂಡಿಯಾದಲ್ಲಿ ಬಡವರೂ ಶ್ರೀಮಂತರೂ ತೆರಬೇಕಾದ ತೆರಿಗೆಯ ಹೊರೆಗಳು*

ತೆರಿಗೆಗಳು	ಶ್ರೀಮಂತರು ತೆರಬೇಕಾದ ರೂಪಾಯಿಗಳು! ಕೋಟಿ	ಬಡವರು ತೆರಬೇಕಾದ ರೂಪಾಯಿಗಳು! ಕೋಟಿ
ವ್ಯಾಪಾರ ತೆರಿಗೆಗಳು (Customs)	20	21
ಭೂಕಂದಾಯ ಮತ್ತು ನೀರಾವರಿ ಯೋಜನೆಗಳ ಬಾಬ್ತು ಕಂದಾಯ	20½	21½
ಆದಾಯ ತೆರಿಗೆ (Income tax)	20	—
ಮಾದಕ ಪದಾರ್ಥಗಳ ಮೇಲಿನ ತೆರಿಗೆ (Excise)	—	20
ಉಪ್ಪಿನ ತೆರಿಗೆ	1¼	7½
ರಿಜಿಸ್ಟ್ರಿಗಳಿಂದ ಮತ್ತು ಕಾಡುಗಳಿಂದ ದೊರೆಯುವ ಆದಾಯ	2	5
ಸ್ಟೇಂಪುಗಳಿಂದ	6½	6½
ರೈಲ್ವೆಗಳಿಂದ	33	60
ಪೋಸ್ಟಾ ಫೀಸುಗಳಿಂದ	5	5½
ಮುನ್ಸಿಪಲ್ ತೆರಿಗೆಗಳಿಂದ	3	10
ಡಿಸ್ಟ್ರಿಕ್ಟ್ ಬೋರ್ಡುಗಳ ತೆರಿಗೆಗಳಿಂದ	—	10
ಜಮಾ	111¼	167

[* ಕೆ. ಟಿ. ಷಾ ಅವರು ಬರೆದ "ಸಿಕ್ಸ್ಟಿ ಇಯರ್ಸ್ ಆಫ್ ಇಂಡಿಯನ್ ಫೈನಾನ್ಸ್"ದಿಂದ]

ಪ್ರತಿ ಪ್ರಾಂತ್ಯಗಳು ಹೊರಿಸುವ ಭೂಕಂದಾಯದ ಹೊರೆಗಳು

(1935-36ರ ಎಗ್ರಿಕಲ್ಚರಲ್ ಸ್ಟ್ಯಾಟಿಸ್ಟಿಕ್ಸ್ ಆಫ್ ಇಂಡಿಯಾ ಎಂಬ ಪುಸ್ತಕದ ಆಧಾರದಿಂದ)

ಪ್ರಾಂತಗಳು	1931ರ ಜನಗಣತಿಯ ಪ್ರಕಾರ ಪ್ರತಿಯೊಬ್ಬನು ಕೊಡತಕ್ಕ ಭೂಕಂದಾಯ ರೂ. ಆ. ಪೈ.	ವ್ಯವಸಾಯ ಮಾಡುವ ಜಮೀನಿನ ಪ್ರತಿಯೊಂದು ಎಕ್ರೆಗೆ ಬೀಳುವ ಭೂಕಂದಾಯದ ಹೊರೆ ರೂ. ಆ. ಪೈ.
ಅಜಮೀರ ಮತ್ತು ಮೇವಾರ	0-15-10	1—1—8
ಅಸ್ಸಾಂ	7—9—8	1—4—3
ಬಂಗಾಳ.	0-10—2	1—3—6
ಬಿಹಾರ್ ಮತ್ತು ಒರಿಸ್ಸಾ	0—7—3	0-10—4
ಬೊಂಬಾಯಿ	2—3-11	1—8—4
ಬರ್ಮಾ	4—3—0	2—2—7
ಮಧ್ಯಪ್ರಾಂತ್ಯ	1—8—6	1—0—7
ಮದ್ರಾಸ್	1-10—5	2—4-11
ಗಡಿನಾಡು ಪ್ರಾಂತ್ಯ(1935-36)	1—2—0	1—4—9
ಪಂಜಾಬ	2—4—4	1-14—7
ಸಿಂಧ್	4—7—5	3—8—7
ಸಂಯುಕ್ತ ಸಂಸ್ಥಾನ(1931-32)	1—7—7	1-13—4

ಕೈಗಾರಿಕೆಯಿಂದ ಮತ್ತು ಕೃಷಿಯಿಂದ ಪ್ರತಿಯೊಬ್ಬ ವ್ಯಕ್ತಿಯ ವರುಷಾವಧಿಯ ಉತ್ಪತ್ತಿ

(ಝಡ್. ಎ. ಅಹಮ್ಮದ್—ಇವರು ಬರೆದ "ಸಮ್ ಇಕೊನೊಮಿಕ್ ಎಂಡ್ ಫ್ಯಾನೆನ್ಸಿಯಲ್ ಯೇಸ್‌ಪೆಕ್ಟ್ಸ್ ಒಫ್ ಬ್ರಿಟಿಷ್ ರೂಲ್ ಇನ್ ಇಂಡಿಯಾ"—ಎಂಬ ಪುಸ್ತಕದ ಆಧಾರದಿಂದ)

ರಾಷ್ಟ್ರಗಳು	ಪ್ರತಿಯೊಬ್ಬನಿಗೆ ಕೈಗಾರಿಕೆಯಿಂದ ಉತ್ಪತ್ತಿ: ರೂಪಾಯಿಗಳು	ಪ್ರತಿಯೊಬ್ಬನಿಗೆ ಕೃಷಿಯಿಂದ ಉತ್ಪತ್ತಿ: ರೂಪಾಯಿಗಳು
ಹಿಂದೂದೇಶ	12	59
ಜಪಾನ್	158	57
ಸ್ವೀಡನ್	384	129
ಯುನೈಟೆಡ್ ಕಿಂಗ್‌ಡಮ್	412	62
ಕೆನಡಾ	470	213
ಯು. ಯಸ್. ಎ.	721	175

ಆಡಳಿತೆಯ (Administration) ಬಗ್ಗೆ ಹಿಂದೂದೇಶದಲ್ಲಿಯೂ ಇತರ ರಾಷ್ಟ್ರಗಳಲ್ಲಿಯೂ ಮಾಡುವ ವೆಚ್ಚಗಳ ಹೋಲಿಕೆ

(1937ರಲ್ಲಿ—ಓಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರು ಬರೆದ "ಸೆಲರಿ ಒಫ್ ಪಬ್ಲಿಕ್ ಸರ್ವೆಂಟ್ಸ್" ಎಂಬ ಲೇಖನದ ಆಧಾರದಿಂದ)

ಹಿಂದೂದೇಶದಲ್ಲಿ ಪ್ರತಿ ತಿಂಗಳಲ್ಲಿ ಕೊಡುವ ಸಂಬಳ	ರೂ. ಆ. ಪೈ.
ಗವರ್ನರ್ ಜನರಲ್	21,333—5—4
ಕಮಾಂಡರ್-ಇನ್-ಚೀಫ್	8,333—0—0
ಅಸ್ಸಾಮಿನ ಗವರ್ನರ್	5,500—0—0
ಬಂಗಾಳದ "	10,000—0—0
ಬಿಹಾರದ "	8,333—5—4
ಬೊಂಬಾಯಿ "	10,000—0—0
ಮಧ್ಯಪ್ರಾಂತ್ಯದ "	6,000—0—0
ಮದ್ರಾಸ್ "	10,000—0—0
ಗಡಿನಾಡಿನ "	5,500—0—0
ಒರಿಸ್ಸಾ "	5,500—0—0
ಪಂಜಾಬ "	8,333—5—4
ಸಂಯುಕ್ತ ಪ್ರಾಂತದ "	10,000—0—0
ಸಿಂಧ್ "	5,500—0—0
ಬರ್ಮಾ "	10,000—9—0

ಗ್ರೇಟ್ ಬ್ರಿಟನಿನಲ್ಲಿ ಪ್ರತಿ ತಿಂಗಳಲ್ಲಿ ಕೊಡುವ ಸಂಬಳ (1 ಪೌಂಡ್ ಅಂದರೆ ರೂ. 13⅓)	ರೂ. ಆ. ಪೈ.
ಪ್ರಯ್ಮ್ ಮಿನಿಸ್ಟರ್ (ಪ್ರಧಾನ ಸಚಿವ)	11,111—1—9⅓
ಕೌನ್ಸಿಲು ಪ್ರೆಸಿಡೆಂಟ್ (President of Council)	5,558—8-10⅔
ಚಾನ್ಸಲರ್ ಓಫ್, ಯಕ್ಸ್‌ಚಕ್ಕರ್	5,555—8-10⅔
ಲಾರ್ಡ್ ಚಾನ್ಸಲ್ಲರ್	11,111—1—3⅓
ಪ್ರತಿ ಸ್ಟೇಟ್ ಸೆಕ್ರೆಟರಿಗಳಿಗೆ (ಇಂಡಿಯಾ ಓರ್ ಕಾಲನಿಸ್)	5,555—8-10⅔

ಜಪಾನಿನಲ್ಲಿ ಪ್ರತಿ ತಿಂಗಳಲ್ಲಿ ಕೊಡುವ ಸಂಬಳ (1 ಯನ್=ರೂ. 311/400)	ರೂ. ಆ. ಪೈ
ಪ್ರಯ್ಮ್ ಮಿನಿಸ್ಟರ್	622—0—0
ಇತರ ಮಂತ್ರಿಗಳು	440—9—4
ಸೆಕ್ರೆಟರಿಗಳು	375-12—8
ಕೊರಿಯಾದ ಗವರ್ನರ್ ಜನರಲ್	440—9—4
ಪ್ರಿವಿ ಕೌನ್ಸಿಲಿನ ಚಾನ್ಸಲ್ಲರ್	427-10—0

ಯು. ಯಸ್. ಎ. ಯಲ್ಲಿ ಪ್ರತಿ ತಿಂಗಳಲ್ಲಿ ಕೊಡುವ ಸಂಬಳ

(1 ಡಾಲರ್ ರೂ. 2·73)

	ರೂ. ಆ. ಪೈ.
ಪ್ರೆಸಿಡೆಂಟ್	17,062—8—0
ವ್ಹಾಯ್ಸ್ ಪ್ರೆಸಿಡೆಂಟ್	3,412—8—0
ಪ್ರೆಸಿಡೆಂಟರ ಕೆಬಿನೆಟಿನ ಮೆಂಬರರು (Members of President's Cabinet)	3,412—8—0
ಪ್ರಧಾನ ನ್ಯಾಯಾಧೀಶರು (Chief Justice)	4,550—0—0
ಸುಪ್ರಿಮ್ ಕೋರ್ಟಿನ ಅಸೋಸಿಯೇಟ್ ಜಸ್ಟೀಸ್ (Associate Justice of Supreme Court)	4,550—0—0
ಸೆನೆಟ್ ಮೆಂಬರರು ಮತ್ತು ಪ್ರತಿನಿಧಿಗಳು (Members of Senate and House of Representatices)	2,275—0—0
ಮಂತ್ರಿಗಳು	2,275—0—0
ನ್ಯೂಯಾರ್ಕ್ ಗವರ್ನರ್	5,687—8—0
ರಾಯಭಾರಿಗಳು	3,981—4—0

ಹಿಂದೂದೇಶದ ಗ್ರಾಮಗಳಿಗಿರುವ ಸಾಲಗಳು

(Rural Indebtness in India)

("1930ರ ಎಸ್ಟಿಮೇಟ್ ಒಫ್ ಪ್ರೊವಿನ್ಸಿಯಲ್ ಬೇಂಕಿಂಗ್ ಎನ್ಕ್ವಾಯರ್ ಕಮಿಟಿ" ಎಂಬ ಪುಸ್ತಕದ ಆಧಾರದಿಂದ)

ಪ್ರಾಂತಗಳು	ಗ್ರಾಮಗಳು ತೆರೆಯಲಿರುವ ಸಾಲಗಳು ಕೆಳಗೆ ಬರೆದಷ್ಟು ಕೋಟಿ ರೂಪಾಯಿಗಳು
ಬೊಂಬಾಯಿ ಮತ್ತು ಸಿಂಧ	81
ಮದ್ರಾಸ್	150
ಬಂಗಾಳ	100
ಸಂಯುಕ್ತ ಪ್ರಾಂತ	124
ಪಂಜಾಬ	135
ಮಧ್ಯಪ್ರಾಂತ ಮತ್ತು ಬರಾರ್	36½
ಬಿಹಾರ್ ಮತ್ತು ಒರಿಸ್ಸಾ	155
ಅಸ್ಸಾಮ್	22
ಬರ್ಮ	50/60 ಲಕ್ಷಗಳು

(ಮೇಲೆ ಸೂಚಿಸಿದ ಕಮಿಟಿಯವರು ನಿರ್ಣಯಿಸಿದ ಪ್ರಕಾರ ಬ್ರಿಟಿಷ್ ಇಂಡಿಯಾದ ಗ್ರಾಮಗಳಿಗೆ ಒಟ್ಟು ರೂ. 900 ಕೋಟಿಯ ಸಾಲವಿದೆ.)

ಹಿಂದೂದೇಶದ ಉಪಯೋಗಕ್ಕೆ ಪರದೇಶಗಳಿಂದ ತರಿಸಿದ ವಿದ್ಯುದ್ದೀಪಗಳು

ರಾಷ್ಟ್ರಗಳು	ಮೌಲ್ಯವು ರೂಪಾಯಿಗಳಲ್ಲಿ		
	1936—37	1937—38	1938—39
ಯುನೈಟೆಡ್ ಕಿಂಗ್‌ಡಮ್	16,78,531	16,31,913	12,40,440
ನೆದರ್‌ಲೆಂಡ್ಸ್	3,48,438	6,46,305	4,49,951
ಆಸ್ಟ್ರಿಯಾ	87,489	1,49,214	82,536
ಇಟಲಿ	—	—	—
ಜರ್ಮನಿ	66,267	1,24,598	71,370
ಜಪಾನ	2,59,839	4,29,768	1,73,952
ಇತರ ರಾಷ್ಟ್ರಗಳು	4,11,546	5,91,251	4,31,951
ಜುಮ್ಲಾ ರೂಪಾಯಿ	28,88,110	35,71,049	24,50,200

ರೈಲ್ವೆಗಳಲ್ಲಿರುವ ವಿಧಗಳು (Classes of Railways)

[1938ನೇ ಹಿಂದುಸ್ಥಾನ ಇಯರ್ ಬುಕ್—ಎಂಬುದರ ಆಧಾರದಿಂದ]

	ಸರಕಾರದ ಸ್ವಾಧೀನವಿದ್ದುವು	ಆಡಳಿತ ವಿವರ
ಅಸ್ಸಾಮು ಬಂಗಾಳ ರೈಲ್ವೆ	,,	ಕಂಪೆನಿಯಿಂದ
ಬಿ. ಯನ್. ಡಬ್ಲ್ಯು. ಆರ್	,,	,,
ಬಿ. ಯನ್. ಆರ್.	,,	,,
ಬಿ. ಬಿ. ಸಿ. ಐ.	,,	,,
ಬರ್ಮಾ ರೈಲ್ವೆ	,,	ಸರಕಾರದ ಆಡಳಿತ
ಈ. ಬಿ. ರೈಲ್ವೆ	,,	,,
ಈ. ಐ. ಆರ್.	,,	,,
ಜಿ. ಐ. ಐ. ಆರ್.	,,	,,
ಜೋಧಪುರ	,,	ಸಂಸ್ಥಾನದ ಆಡಳಿತ
ಯಮ್. ಎಂಡ್ ಯಸ್. ಯಮ್	,,	ಕಂಪೆನಿಯ ಆಡಳಿತ
ನಿಜಾಮ್ಸ್ ಸ್ಟೇಟ್ ರೈಲ್ವೆ	,,	ನಿಜಾಮ್ಸ್ ಸ್ಟೇಟ್ ರೈಲ್ವೆ ಆಡಳಿತ
ಯನ್. ಡಬ್ಲ್ಯು. ಆರ್.	,,	ಸರಕಾರದ ಆಡಳಿತ
ರೂಹಿಲ್‌ಕಾಂಡ್ ಮತ್ತು ಕುಮಾನ್	,,	ಕಂಪೆನಿ ಆಡಳಿತ
ಯಸ್. ಐ. ಆರ್.	,,	,,

ಹಿಂದೂದೇಶದ ಪ್ರಾಮುಖ್ಯ ಆಶ್ರಿತ ಸಂಸ್ಥಾನಗಳು

(1938ನೇ ಹಿಂದೂಸ್ಥಾನ್ ಇಯರ್ ಬುಕ್—ಎಂಬುದರ ಆಧಾರದಿಂದ)

ಸಂಸ್ಥಾನಗಳು	ವಿಸ್ತೀರ್ಣ ಚದರ ಮೈಲು ಗಳಲ್ಲಿ	1931ನೇ ಖಾನೇಶುಮಾರಿ ಪ್ರಕಾರ ಜನ ಸಂಖ್ಯೆ	ಸರಾಸರಿ ವರುಷಾವಧಿ ಉತ್ಪತ್ತಿ ರೂ.	ಗವರ್ನಮೆಂಟಿಗೆ ಕೊಡತಕ್ಕ ಮೊಬಲಗು ರೂ.
ಭೋಪಾಲ	6,902	729,955	80,00,000	1,61,290
ಇಂದೋರ್	9,518	1,318,237	1,24,21,000	,,
ಬರೋಡಾ	8,164	2,443,007	2,60,09,000	,,
ಗ್ವಾಲಿಯರ್	26,367	3,523,070	2,41,79,000	,,
ಹೈದರಾಬಾದು	82,698	14,436,148	7,98,90,000	,,
ಕಾಶ್ಮೀರ ಮತ್ತು ಜಮ್ಮು	84,516	3,646,243	2,23,29,0002	ಕಾಶ್ಮೀರಿ ಶಾಲುಗಳು ಮತ್ತು 3 ರುಮಾಲುಗಳು "ರೂ.
ಕೊಚ್ಚಿ	1,480	1,205,016	90,09,000	2,00,000
ಪುದುಕೋಟೆ	1,179	400,694	22,88,000	—
ಟ್ರಾವಂಕೂರು	7,635	5,095,973	2,44.02,000	7,96,430
ಮೈಸೂರು	29,326	6,557,302	3,45,27,000	24,50,000
ಭಿಕಾನಿರ್	23,317	936,218	1,21,00,000	—
ಬೆನಾರಿಸ್	870	391,272	17,98,771	2,19,000
ಜಯಪುರ	15,579	2,631,775	1,20,00,000	4,00,000

ಭೂಲೋಕದ ಉತ್ಪತ್ತಿಯಲ್ಲಿ ಹಿಂದೂದೇಶದ ಸ್ಥಾನ

ಗೋದಿ

	1938-39ರಲ್ಲಿ ಉತ್ಪತ್ತಿ (ಟನ್ನುಗಳಲ್ಲಿ)	1937-38ರಲ್ಲಿ ಭೂಲೋಕದ ಉತ್ಪತ್ತಿಯ ಶೇಕಡಾ ಭಾಗಗಳು	1938-39ರಲ್ಲಿಎಕ್ಕರೆಯಲ್ಲಿ ಸಿಕ್ಕಿದ ಬೆಳೆ (ರಾತಲುಗಳಲ್ಲಿ)
ಇಡೀ ಭೂಲೋಕ	120,910,176	10.0	972
ಯು. ಯಸ್. ಯಸ್. ಆರ್. (ರಶಿಯಾ)	43,541,443	30·0	954 (1937
ಯು. ಯಸ್. ಎ.	24,932,692	14·2	794
ಚೀನಾ	17,047,990	11·7	892 (1937)
ಹಿಂದೂಸ್ಥಾನ	10,794,026	6·7	678
ಮದ್ರಾಸ್	—	—	—
ಕೆನಡಾ	9,375,484	3·3	812
ಫ್ರಾನ್ಸ್	9,251,572	4·7	1,659
ಆರ್ಜೆಂಟೈನ್	9,005,520	3·4	1,052
ಜರ್ಮನಿ (1937)	4,387,000	—	—
ಇಟಲಿ (1937)	7,912,000	—	1,392

ಅಕ್ಕಿ

	1938-39ರಲ್ಲಿ ಉತ್ಪತ್ತಿ (ಟನ್ನುಗಳಲ್ಲಿ)	ಭೂಲೋಕದ ಉತ್ಪತ್ತಿಯ ಶೇಕಡಾ ವಿಭಾಗಗಳು	ಎಕ್ಕರೆಯಲ್ಲಿ ದೊರೆಯುವ ಬೆಳೆ (ರಾತಲುಗಳಲ್ಲಿ)
ಭೂಲೋಕ (ಚೀನಾವನ್ನು ಬಿಟ್ಟು)	89,956,778	10·0	1,356
ಹಿಂದೂದೇಶ	35,401,043	39·0	1,088
ಮದ್ರಾಸ್	4,850,000 (1937-38)	5·2 (1937-38)	1,071
ಜಪಾನ್	12,031,965	13·3	3,417
ಬರ್ಮಾ	8,044,044	8·9	1,436
ಯು. ಯಸ್. ಎ. (1937)	1,063,000	1·2	2,203
ಇಟಲಿ (1937)	727,000	·9	4,880
ಇಜಿಪ್ಟ್ (1937)	364,000	·4	3,006
ಸಯಾಮ್	4,859,438	5·4	1,418
ಚೀನಾ (ಅಂದಾಜು ಮೇರೆಗೆ)	46,718,945 (1936-37)	51·2	2,453
ಫ್ರೆಂಚ್ ಇಂಡೊಚೀನಾ (ಅಂದಾಜು ಮೇರೆಗೆ)	6,208,888 (1937-38)	6·7	999

ಮುಸುಕಿನ ಜೋಳ (Maize)

[ಯು. ಯಸ್. ಯಸ್. ಆರ್. ಮತ್ತು ಚೀನಾ ಇವುಗಳ ಉತ್ಪತ್ತಿ ಬಿಟ್ಟು]

	1938ರ ಉತ್ಪತ್ತಿ (ಟನ್ನುಗಳಲ್ಲಿ)	1938ರ ಭೂಲೋಕ ಉತ್ಪತ್ತಿಯ ಶೇಕಡಾ ವಿಭಾಗಗಳು	1938ರಲ್ಲಿ ಎಕ್ಕರೆಯಲ್ಲಿ ದೊರಕಿದ ಬೆಳೆ (ರಾತಲುಗಳಲ್ಲಿ)
ಭೂಲೋಕ	111,510,972	100	1,312
ಯು. ಯಸ್, ಎ.	63,555,743	57	1,552
ಅರ್ಜೆಂಟೈನಾ, ಚೀನಾ ಮತ್ತು ಬ್ರೆಜಿಲ್	5,068,680	4·5	1,338
ರುಮಾನಿಯಾ	5,036,595	4·2	910
ಯುಗೊಸ್ಲೇವಿಯಾ	4,680,804	4·2	1,543
ಹಿಂದೂದೇಶ	·2,121,000 (1937-38)	1·8 (1937-38)	713 (1936)
ಮದ್ರಾಸ್	31,000 (1937-38)	·2 (1937-38)	— —
ಚೀನಾ (1936-37)	6,631;161	—	1,177
ಬ್ರೆಜಿಲ್ (1936-37)	6,526,882	—	1,609

ಚಹಾ (Tea)

	1938ರ ಉತ್ಪತ್ತಿ (ರಾತಲುಗಳಲ್ಲಿ)	1938ರಲ್ಲಿ ಭೂಲೋಕದ ಉತ್ಪತ್ತಿಯ ಶೇಕಡಾ ವಿಭಾಗಗಳು	1937ರಲ್ಲಿ ಎಕ್ಕರೆಯಲ್ಲಿ ಸಿಕ್ಕಿದ ಬೆಳೆ (ರಾತಲುಗಳಲ್ಲಿ)
ಭೂಲೋಕ (ಚೀನಾವನ್ನು ಬಿಟ್ಟು)	1,093,496,480	100	450
ಇಂಡಿಯಾ	456,358,410	41·7	517
ಮದ್ರಾಸ್	35,415,000	3·3	456
ಸಿಲೋನ್	235,738,881 (ರಫ್ತು ಮಾಡಿದ್ದು ಮಾತ್ರ)	21·5	—
ಜಪಾನ್	120,630,739	11·0	1,209
ಚೀನಾ	91,765,519 (ರಫ್ತಾದುದು ಮಾತ್ರ)	8·3	—

ಕಾಫಿ

	1938–'39ರ ಉತ್ಪತ್ತಿ (ಟನ್ನುಗಳಲ್ಲಿ)	1938–39ರಲ್ಲಿ ಭೂಲೋಕದ ಉತ್ಪತ್ತಿಯ ಶೇಕಡಾ ವಿಭಾಗಗಳು	ಎಕ್ಕರೆಯಲ್ಲಿ ದೊರೆಯುವ ಬೆಳೆ (ರಾತಲುಗಳಲ್ಲಿ)
ಭೂಲೋಕ	2,234,156	100	—
ಬ್ರೆಜಿಲ್	1,377,893	61·7	383 (1938–39)
ಕೊಲುಂಬಿಯಾ	250,983	11·2	—
ಡಚ್ ಈಸ್ಟ್ ಇಂಡೀಸ್	102,259	4·6	562 (1937–38)
ಮಡಗಾಸ್ಕರ್	29,304	1·3	223 (1939)
ಇಂಡಿಯಾ	16,731	·7	178 (1936–37)
ಮದ್ರಾಸ್	16,731	·7	178 (1936)

ತಂಬಾಕು (Tobacco)

	1938ರಲ್ಲಿ ಆದ ಉತ್ಪತ್ತಿ (ಟನ್ನುಗಳಲ್ಲಿ)	ಭೂಲೋಕದ ಬೆಳೆಯು ಶೇಕಡಾ ವಿಭಾಗಗಳು	ಎಕರೆ ವಿಸ್ತೀರ್ಣದಲ್ಲಿ ದೊರೆಯುವ ಬೆಳೆ (ರಾತಲುಗಳಲ್ಲಿ)
ಭೂಲೋಕ (ಚೀನಾವನ್ನು ಬಿಟ್ಟು)	2,037,314	100	796
ಯು. ಎಸ್. ಎ.	649,985	31·9	895
ಹಿಂದೂದೇಶ	502,002	24·6	910
ಮದ್ರಾಸ್	125,000	6·2	—
ಚೀನಾ (1936)	62,184,899	—	1,027
ರಷ್ಯ (1936)	271,641	—	1,214

ನೆಲಗಡಲೆ ಮತ್ತು ಅದೇ ರೀತಿಯ ಕಾಳುಗಳು (Ground-nuts) (ಚೀನಾವನ್ನು ಬಿಟ್ಟು)

	1938–1939ರ ಬೆಳೆ (ಟನ್ನುಗಳಲ್ಲಿ)	ಭೂಲೋಕದ ಬೆಳೆಯು ಶೇಕಡಾ ವಿಭಾಗಗಳು	ಎಕರೆಯಲ್ಲಿ ಬೆಳೆಯುವ ಬೆಳೆ (ರಾತಲುಗಳಲ್ಲಿ)
ಭೂಲೋಕ	5,590,312	100	6·8
ಇಂಡಿಯಾ	3,036,976	54·3	802
ಯು. ಎಸ್. ಎ.	636,095	11·4	758
ಡಚ್ ಈಸ್ಟ್ ಇಂಡೀಸ್ ಜಾವಾ ಮತ್ತು ಮದ್ರಾಸ್	27,793	5·0	669
ಚೀನಾ	2,589,594	46·8	1,668
ಸೆನಿಗಲ್ (Senigal)	509,525	8·0	740

ಹತ್ತಿ (ಬೀಜ ತೆಗೆದು ಶುಚಿಮಾಡಿದ್ದು)

	1938–39ರ ಬೆಳೆ (400 ರಾತ್ಲುಗಳ ಬೇಲುಗಳು)	ಭೂಲೋಕದ ಶೇಕಡಾ ವಿಭಾಗಗಳು	ಎಕರೆ ವಿಸ್ತೀರ್ಣದಲ್ಲಿಯ ಬೆಳೆ (ರಾತಲುಗಳಲ್ಲಿ)
ಭೂಲೋಕ (ಚೀನಾವನ್ನು ಬಿಟ್ಟು)	33,510,376	100	178
ಯು. ಎಸ್. ಎ.	14,273,325	42·6	232
ಇಂಡಿಯಾ	5,120,253	15·3	89
ಯು. ಎಸ್. ಎಸ್. ಆರ್. (ರಷಿಯಾ)	4,602,165	13·8	356
ಬ್ರೆಜಿಲ್	2,242,659	6·7	151
ಇಜಿಪ್ಟ್	2,065,187	6·1	446
ಮದ್ರಾಸ್	—	—	—
ಚೀನಾ (1937–38)	3,516,208	7·7	146

ಸಣಬು (Jute)

	1938–39ರ ಬೆಳೆ. 400 ರಾತಲಿನ ಬೇಲುಗಳಲ್ಲಿ	ಭೂಲೋಕದ ಬೆಳೆಯು ಶೇಕಡಾ ವಿಭಾಗಗಳು	ಎಕರೆಯಲ್ಲಿ ದೊರಕುವ ಬೆಳೆ–(ರಾತಲುಗಳಲ್ಲಿ)
ಭೂಲೋಕ (1938)	6,729,633	100	874
ಇಂಡಿಯಾ, ಬಂಗಾಳ ಮತ್ತು ಅಸ್ಸಾಮ್	6,669,159	99·1	865
ಮದ್ರಾಸ್	—	—	—

ಸಕ್ಕರೆ

	1938–39ರ ಉತ್ಪತ್ತಿ (ಟನ್ನುಗಳಲ್ಲಿ)	ಭೂಲೋಕದ ಉತ್ಪತ್ತಿಯ ಶೇಕಡಾ ವಿಭಾಗಗಳು
ಭೂಲೋಕ (ಫಿಲಿಪ್ಪೈನ್‌ಗಳನ್ನು ಬಿಟ್ಟು)	17,033,171	100
ಕ್ಯೂಬಾ	2,595,361	14·8
ಇಂಡಿಯಾ	2,509.735	14·5
ಡಚ್ ಈಸ್ಟ್ ಇಂಡೀಸ್	1,525,686	8·8
ಫೊರ್ಮೋಸಾ	1,437,950	8·2
ಬ್ರೆಜಿಲ್	1,172,223	6·8
ಫಿಲಿಪ್ಪೈನ್ಸ್	—	—
ಹವಾಯ್ (Hawii)	822,279	4·7
ಪೋರ್ಟೊರಿಕೊ (Porto-Rico)	813,941	4·6
ಆಸ್ಟ್ರೇಲಿಯಾ	771,279	4·1

ರೇಪ್ ಎಂಬ ಎಣ್ಣೆಯ ಬೀಜ (1938) (Rape Seeds)

	1938ರ ಬೆಳೆ (ರಾತಲುಗಳಲ್ಲಿ)	ಭೂಲೋಕದ ಬೆಳೆಯು ಶೇಕಡಾ ವಿಭಾಗಗಳು	ಎಕರೆಯಲ್ಲಿ ಬೆಳೆಯುವ ಬೆಳೆ ರಾತಲುಗಳ ಲ್ಲಿ
ಭೂಲೋಕ (ಚೀನಾವನ್ನು ಬಿಟ್ಟು)	1,460.389	100	508
ಇಂಡಿಯಾ	1,021,019	70	419
ಜಪಾನ್	114,660	7	936
ಚೀನಾ (1937)	1,455,920	—	472

ರಬ್ಬರು

	ಬೆಳೆ–ಟನ್ನುಗಳಲ್ಲಿ	ಭೂಲೋಕದ ಬೆಳೆಯು ಶೇಕಡಾ ವಿಭಾಗಗಳು	ಎಕರೆಯುವ ಬೆಳೆಯುವ ಬೆಳೆ ರಾತಲುಗಳಲ್ಲಿ
ಬ್ರಿಟಿಷ್ ಮಲಯಾ	862,168	41·8	
ಡಚ್ ಈಸ್ಟ್ ಇಂಡೀಸ್	359.636		
ಇಂಡೋಚೈನಾ	56,996	34·5	
ಸಿಲೋನ್	51,171	5·2	
ಇಂಡಿಯಾ	16,900	1·6	

ಲಿನ್‌ಸೀಡು (Linseed)

	ಬೆಳೆ–(ಟನ್ನುಗಳಲ್ಲಿ)	ಭೂಲೋಕದ ಬೆಳೆಯು ಶೇಕಡಾ ವಿಭಾಗಗಳು	ಎಕರೆಯಲ್ಲಿ ಬೆಳೆಯುವ ಬೆಳೆ ರಾತಲುಗಳಲ್ಲಿ
ಭೂಲೋಕ (ರಷಿಯಾವನ್ನು ಬಿಟ್ಟು)	2,448,114	—	428
ಅರ್ಜೆಂಟೈನ್	1,387,7·6	56·7	544
ಇಂಡಿಯಾ	456,568	18·7	312
ಯು. ಎಸ್. ಎ.	204,322	8·3	481

ನಿರುದ್ಯೋಗ ಮತ್ತು ಬಡತನ

ಈ ದೇಶದಲ್ಲಿ ನಿರುದ್ಯೋಗದ ದೆಸೆಯಿಂದ ಮಿಲಿಯಗಟ್ಟಲೆ ಜನರು ಊಟಕ್ಕಿಲ್ಲದೆ ನಿರಾಶರಾಗಿರುವರೆಂಬುದು ನಿಮಗೆ ಗೊತ್ತಿದೆಯೇ? ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ದೇಶಗಳಲ್ಲಾಗಲೀ ಪೌರಾತ್ಯ ರಾಷ್ಟ್ರಗಳಲ್ಲಾಗಲೀ ಪ್ರತಿಯೊಬ್ಬ ವ್ಯಕ್ತಿಯ ವರುಷಾವಧಿ ಉತ್ಪತ್ತಿಯು ನಮ್ಮ ದೇಶದಲ್ಲಿಯ ಉತ್ಪತ್ತಿಗಿಂತ ಎಷ್ಟೋ

(22ನೇ ಪುಟಕ್ಕೆ ಮುಂದುವರಿಸಿಯದೆ.)

ನಮ್ಮ ಕೃಷಿಯ ವಿಷಯದಲ್ಲಿ ಕೆಲವು ವಿಚಾರಗಳು

ಕೃಷಿ:—1937-38ರಲ್ಲಿ ಮದ್ರಾಸ್ ಸಂಸ್ಥಾನದಲ್ಲಿ ಆದ ಬೆಳೆಯ ಉತ್ಪತ್ತಿ ರೂ. 1444 ಮಿಲಿಯ ಎಂದು ನಿರ್ಣಯವಾಗಿದೆ.

ಕಾಳುಗಳು, ಬೀಜಗಳು, ಮತ್ತು ಹುಡಿಗಳು;—ರೂ. 5,16,73,000 ಮೌಲ್ಯದ ಅಕ್ಕಿಯನ್ನು ನಾವು ಹೊರಗಿನಿಂದ ತರಿಸುತ್ತೇವೆ. ಅದೇ ರೀತಿಯಲ್ಲಿ 17,98,000 ರೂಪಾಯಿಯ ಭತ್ತ; 48,00,000 ರೂಪಾಯಿಯ ಬೀಜಗಳನ್ನು ತರಿಸುತ್ತೇವೆ. ನಮ್ಮ ಸಂಸ್ಥಾನದವರು ಮುಖ್ಯವಾಗಿ ಜೀವಿಸುವುದು ಕೃಷಿಯಿಂದ. ಅಂತಹದರಲ್ಲಿ 5,82,71,000 ರೂಪಾಯಿ ಮೌಲ್ಯದ ಕಾಳುಗಳನ್ನೂ ಬೀಜಗಳನ್ನೂ, ಹುಡಿಗಳನ್ನೂ ಹೊರಗಿನಿಂದ ನಮ್ಮ ಸಂಸ್ಥಾನಕ್ಕೆ ತರಿಸುವುದೆಂದರೆ ಸ್ವಲ್ಪ ಗಮನಕೊಡತಕ್ಕ ವಿಷಯವಾಗಿದೆ.

ಸಾಂಬಾರಗಳು:—ಮೆಣಸು ಮತ್ತು ಅಡಿಕೆ ಇವು ಮುಖ್ಯವಾದುವು. 1937-38ರಲ್ಲಿ 45,96,000 ರೂಪಾಯಿಯ ಸಾಂಬಾರ ಸಾಮಗ್ರಿಗಳನ್ನು ತರಿಸಿರುತ್ತೇವೆ. ಇವುಗಳನ್ನು ನಮ್ಮ ಸಂಸ್ಥಾನದಲ್ಲಿಯೆ [illegible]

ಹಣ್ಣುಗಳು ಮತ್ತು ತರಕಾರಿಗಳು:—[illegible] ಗೇರುಬೀಜ ಹಣ್ಣುಹಂಪಲು, ತರಕಾರಿಗಳನ್ನು [illegible] ನಮ್ಮ ಸಂಸ್ಥಾನದಲ್ಲಿಯೇ ಬೆಳೆಸಿ, ನಮ್ಮ ಹಣವನ್ನು ನಮ್ಮಲ್ಲಿಯೇ ಉಳಿಸಬಾರದೇಕೆ?

ಹತ್ತಿ:—ನಾವು 50,49,000 ರೂಪಾಯಿಯ ಹತ್ತಿಯನ್ನು ತರಿಸುತ್ತೇವೆ. ಹತ್ತಿಯ ಬೆಳೆಯನ್ನು ಇನ್ನೂ ಹೆಚ್ಚಿಸಲು ಎಡೆಯಿದೆ.

ತೆಂಗಿನಕಾಯಿ ಮತ್ತು ಕೊಬ್ಬರಿ:—ಪಶ್ಚಿಮ ಕರಾವಳಿಯವರು ತೆಂಗಿನಕಾಯಿಯ ವ್ಯಾಪಾರವು ಹಿಂದೆ ಬಿದ್ದು ಹೋಯಿತೆಂದು ಚೊಬ್ಬಿಡುವಾಗ, ನಾವು ಪರದೇಶದಿಂದ 10,32,000 ರೂಪಾಯಿಯ ತೆಂಗಿನಕಾಯಿ ಮತ್ತು ಕೊಬ್ಬರಿಯನ್ನು ತರಿಸುತ್ತೇವೆ. ನಮ್ಮಲ್ಲಿ ತೆಂಗಿನ ಬೆಳೆಯು ಧಾರಾಳವಿದ್ದೂ, ಹೀಗಾಗಿದೆ.

ತಂಬಾಕು:—ನಮ್ಮ ಪ್ರಾಂತದ ತಂಬಾಕು ಲಂಡನಿನಲ್ಲಿ [illegible] ಬಿದ್ದಿರುತ್ತದೆ. ಆದರೂ ನಾವು 14.57,000 ರೂಪಾಯಿಯ ತಂಬಾಕನ್ನು ಪರದೇಶದಿಂದ ನಮ್ಮ ಸಂಸ್ಥಾನಕ್ಕೆ ತರಿಸುತ್ತೇವೆ.

ಮೋಪು:—ನಮ್ಮಲ್ಲಿ ವಿಶಾಲವಾದ ಕಾಡುಗಳಿದ್ದರೂ, [illegible] ರೂಪಾಯಿಯ ಮರ–ಮೋಪುಗಳನ್ನು ಹೊರಗಿನಿಂದ ತರಿಸುತ್ತೇವೆ. [illegible] ಮುಖ್ಯವಾಗಿ ಸಾಗುವಾನಿ ಮರವಾಗಿದೆ. ಇದರ ಬೆಳೆ ಹೆಚ್ಚಿಸಲು ಪ್ರಯತ್ನಪಡಬೇಕು. ಸುಧಾರಿಸಿದ ವ್ಯವಸಾಯ ಕ್ರಮಗಳಿಗನುಸಾರವಾಗಿ ಕೃಷಿಯನ್ನು ಮಾಡಿದರೆ, ನಮ್ಮಲ್ಲಿಯ ಕೃಷಿಕರಿಗೆ ಉದ್ಯೋಗ ಸಿಗುವುದು ಮತ್ತು ಅವರಿಗೆ ದಾರಿದ್ರ್ಯವಿಲ್ಲದ [illegible] ಸಾಧ್ಯವಾಗುವುದು. ಅವಶ್ಯವಿರುವ ಯಂತ್ರಗಳನ್ನೂ ಗೊಬ್ಬರಗಳನ್ನೂ ಬಳಕೆಗೆ ತಂದರೆ ಈ ಉಪಯೋಗವು ಶೀಘ್ರವಾಗಿ ಫಲಕ್ಕೆ ಬರುವುದು. ಇದರಿಂದ ಇವುಗಳನ್ನು ತಯಾರು ಮಾಡುವವರಿಗೂ ಲಾಭ ದೊರೆಯುವುದು.

ಹಿಂದೂದೇಶದಲ್ಲಿ ಕೃಷಿಮಾಡಲು ಸಾಧ್ಯವಿರುವುದನ್ನೆಲ್ಲ ಮಾಡಿದರೆ, ಇಲ್ಲಿಗೆ ಹೊರಗಿನಿಂದ ತರಿಸುವ ಸುಮಾರು 31,13,52,000 ರೂಪಾಯಿಯ ಸಾಮಗ್ರಿಗಳ ಆಮದನ್ನು ನಿಲ್ಲಿಸಬಹುದು. ನಮ್ಮ ಮದ್ರಾಸ್ ಸಂಸ್ಥಾನಕ್ಕೆ [illegible] ರೂಪಾಯಿಯ ಸಾಮಗ್ರಿಗಳು ಹೊರಗಿನಿಂದ ಬರುತ್ತವೆ. ಅವುಗಳನ್ನು ನಿಲ್ಲಿಸಬಹುದು. ಈಗ ನಮ್ಮ ಸಂಸ್ಥಾನದಿಂದ, ನಮ್ಮ ದೇಶದಿಂದ ಹರಿಯುತ್ತಿರುವ ಹಣದ ಪ್ರವಾಹವನ್ನು ತಡೆಯಬೇಕಾಗಿದೆ

(21ನೇ ಪುಟದಿಂದ ಮುಂದುವರಿದುದು.)

ಪಾಲು ಹೆಚ್ಚಿದೆ ಎಂಬುದು ನಿಮಗೆ ಗೊತ್ತಿದೆಯೇ! ಈ ಕೆಳಗಿನ ಅಂಕೆ ಸಂಖ್ಯೆಗಳು ಅದನ್ನು ತೋರಿಸುವವು.

ರಾಷ್ಟ್ರದ ಉತ್ಪತ್ತಿ ಮತ್ತು ಸಂಪತ್ತು

ರಾಷ್ಟ್ರಗಳು	ಜನಸಂಖ್ಯೆ (ಮಿಲಿಯಗಳಲ್ಲಿ)	ಪ್ರತಿಯೊಬ್ಬನ ಕೀಯ ವರುಷಾವಧಿ ಉತ್ಪತ್ತಿ	ಪ್ರತಿಯೊಬ್ಬನ ಸಂಪತ್ತು
		([illegible])	([illegible])
ಯು. ಯಸ್. ಎ.	122·77	2,053	9,356
ಕೆನಡಾ	10·37	1,268	8,023
ಯುನೈಟೆಡ್ ಕಿಂಗ್ ಡಮ್	46·18	1,092	6,371
ಜಪಾನ್	65·36	271	2,308
ಬ್ರಿಟಿಷ್ ಇಂಡಿಯಾ	374·20	82	441

ವೃತ್ತಿಯಿಲ್ಲದೆ ತಿರುಗುವವರಿಗೆ ಕೆಲಸವನ್ನು ಉಂಟುಮಾಡಿ ಕೊಡುವ ಶಕ್ತಿಯು ನಿಮ್ಮಲ್ಲಿದೆ. ನೀವೇನೂ ಅದಕ್ಕೆ ಖರ್ಚುಮಾಡುವ ಅವಶ್ಯಕತೆಯಿಲ್ಲ. ಆ ಕೆಲಸವನ್ನು ಕೆಲವೇ ವಾರಗಳಲ್ಲಿ ಯಾ ಕೆಲವೇ ತಿಂಗಳುಗಳಲ್ಲಿ ನೀವು ಮಾಡಬಹುದು. ನೀವು ಆ ಕೆಲಸವನ್ನು ಮಾಡುವುದಿದ್ದರೆ ಇಂದಿನಿಂದಲೇ ಹಿಂದೂದೇಶದಲ್ಲಿ ಬೆಳೆಯದ ಯಾ ತಯಾರಾಗದ ಯಾವುದೇ ವಸ್ತುವನ್ನಾಗಲೀ ತಿಂಡಿಯನ್ನಾಗಲೀ ಬಟ್ಟೆಯನ್ನಾಗಲೀ ಕೊಂಡುಕೊಳ್ಳುವುದಿಲ್ಲನೆಂದು ದೃಢಮಾಡಿರಿ. ಪೆಟ್ರೋಲು, ಚಿಮಿಣಿಎಣ್ಣೆ ಮತ್ತು ಕೆಲವು ಕ್ಷಾರಗಳು ಇಷ್ಟನ್ನು ಬಿಟ್ಟರೆ ಉಳಿದ ಯಾವತ್ತೂ ಬೆಳೆಗಳೂ, ವಸ್ತುಗಳೂ ನಮಗೆ ಹಿಂದೂದೇಶದಲ್ಲಿ ಸಿಗುವವು. ಹಿಂದೂದೇಶದಲ್ಲಿ ಬೆಳೆಗಳು ಚೆನ್ನಾಗಿ ಬೆಳೆಯುತ್ತವೆ.

ಅತೀ ಅಲ್ಪ ಬೆಲೆಗೆ ಅತೀ ಒಳ್ಳೆಯ ಮಹಾಲನ್ನು ನೀವು ಹಿಂದೂದೇಶದಲ್ಲಿಯೇ ಪಡೆಯಬಹುದೆಂದು ಮುಂದಿನ ವಿಷಯಗಳನ್ನು ನೀವು ಓದುವಾಗ ನಿಮಗೆ ಖಚಿತವಾಗುವುದು. ಪರದೇಶದಿಂದ ತರಿಸಿದ ಮಹಾಲುಗಳಿಗಿಂತಲೂ ತೃಪ್ತಿಕರವಾದ ಮಹಾಲುಗಳು ಹಿಂದೂದೇಶದಲ್ಲಿ ದೊರಕುತ್ತವೆ.

[illegible] 57 [illegible]

1937—38 ರಲ್ಲಿ ಮದ್ರಾಸ್ ಸಂಸ್ಥಾನಕ್ಕೆ ಪರದೇಶದಿಂದ ತರಿಸಿದ ಕೃಷಿ ಸಂಬಂಧ ಮಹಾಲುಗಳು——ಮೌಲ್ಯಗಳು (ರೂಪಾಯಿಗಳು)

	[illegible]
ಅಕ್ಕಿ	5,16,73,000
ಮರಮೋಪು	69,00,000
ಹತ್ತಿ ([illegible])	50,49,000
ಬೀಜಗಳು	48,00,000
ಅಡಿಕೆ	37,99,000
ಹಣ್ಣುಗಳು ಮತ್ತು ತರಕಾರಿಗಳು	28,53,000
ಭತ್ತ	17,98,000
ತಂಬಾಕು	14,57,000
ಕೊಬ್ಬರಿ	10,32,000
ಮೆಣಸು	5,04,000
ಬಟ್ಟೆಗೆ ಗಂಜಿಹಾಕುವ ಅಂಟು (Starch), ಮತ್ತು ಧಾನ್ಯದ ಹುಡಿ (Farina)	3,26,000
ಇತರ ಸಾಂಬಾರಗಳು	2,93,000
ರಬ್ಬರು (ಅಸಿದ್ಧ)	2,26,000
ಕಾಫಿ	33,000
ಸಕ್ಕರೆ	25,000



ಗ್ರಾಮಾಭ್ಯುದಯ ಮತ್ತು ವ್ಯಾಪಾರ

(ಲೇಖಕರು: ಶ್ರೀ. ಕೆ. ವಾಸುದೇವ ಕಿಣಿ, ಬಿ. ಎ., ಎಲ್. ಟಿ.)

ರಾಜಕೀಯ ವಿಷಯಗಳು ಈಗ ನಮ್ಮ ಜನರ ಮನಸ್ಸುಗಳನ್ನು ಸೆಳೆದು ಕೊಂಡಿರುವುದರಿಂದ ನಾವು ನಮ್ಮ ಅಭ್ಯುದಯದ ಮಿಕ್ಕ ಅನೇಕ ವಿಷಯಗಳನ್ನು ಮರೆತಿರುವೆವು. ಪ್ರಕೃತಿಯು ಹಿಂದುಸ್ಥಾನವನ್ನು ವ್ಯವಸಾಯದ ಮತ್ತು ಹಳ್ಳಿಯ ದೇಶವಾಗಿ ಮಾಡಿದೆ. ಸಾಮ್ರಾಜ್ಯ ರಾಜನೀತಿಯು ಹಿಂದಿನ ಈ ಸ್ಥಿತಿಯನ್ನು ಬಲಗೊಳಿಸಿದೆ. ನಮ್ಮ ದೇಶದಲ್ಲಿ 6,85,665 ಹಳ್ಳಿಗಳಿವೆ. ಇವುಗಳ ಪುನರ್ಘಟನೆಯಾಗದೆ ದೇಶವು ಪ್ರಗತಿಯನ್ನು ಹೊಂದಿ ಅಭಿವೃದ್ಧಿ ಹೊಂದ ಲಾರದು. ಗ್ರಾಮದ ಜನರ ಬಡತನವನ್ನು ತೊಲಗಿಸಿ ಅವರನ್ನು ಸಾಲದಿಂದ ಮುಕ್ತರನ್ನಾಗಿ ಮಾಡಬೇಕು. ವ್ಯವಸಾಯ ಅಭಿವೃದ್ಧಿಗೆ ಅನುಕೂಲತೆಗಳನ್ನು ಒದಗಿಸಬೇಕು: ಅಲ್ಲಿಯ ಜನರಿಗೆ ಉತ್ಪತ್ತಿಗಳನ್ನು ಕಲಿಸಬೇಕು: ಅವರ ಆರೋಗ್ಯ ರಕ್ಷಣೆಗೆ ವ್ಯವಸ್ಥೆ ಮಾಡಬೇಕು: ಅವರಲ್ಲಿ ವಿದ್ಯಾಪ್ರಚಾರ ಮಾಡ ಬೇಕು.

ನಮ್ಮ ಹಳ್ಳಿಗಳ ಉದ್ಧಾರದ ವಿಚಾರದಲ್ಲಿ ವ್ಯಾಪಾರ ಸೌಕರ್ಯಗಳ ಸಮಸ್ಯೆಯು ವಿಚಾರಾರ್ಹವಾಗಿದೆ. ರೈತರು ಬೆಳೆಸುವ ದವಸಧಾನ್ಯಗಳನ್ನೂ, ತಯಾರಿಸುವ ಸಾಮಾನುಗಳನ್ನೂ ಸುಲಭವಾಗಿ ಪಂತೆಗೆ ಸಾಗಿಸಿ ಒಳ್ಳೆ ಬೆಲೆ ಬರುವಂತೆ ಮಾರಾಟ ಮಾಡುವುದಕ್ಕೆ ಸೌಕರ್ಯಗಳಿಲ್ಲದ್ದರಿಂದ, ಅವರ ಶ್ರಮವು ವ್ಯರ್ಥವಾಗುವುದು. ನಮ್ಮ ದೇಶದಲ್ಲಿ ವ್ಯಾಪಾರ ಸೌಕರ್ಯಗಳು ಸಮರ್ಪಕ ವಾಗಿಲ್ಲವೆಂದೇ ಹೇಳಬಹುದು. ಇತ್ತೀಚೆಗೆ ಪ್ರಯಾಣ ಸೌಕರ್ಯಗಳು ಹೆಚ್ಚಿರು ವುದು ನಿಜ. ರೈಲು ಮಾರ್ಗಗಳು, ಬಂಡಿಯ ಮಾರ್ಗಗಳು, ಹೆದ್ದಾರಿಗಳು ಇವು ಈಚೆಗೆ ಹೆಚ್ಚುತ್ತ ಬಂದಿವೆ. ಅದೇ ರೀತಿಯಲ್ಲಿ ರೈಲು, ಮೋಟಾರು ಇವುಗಳ ಸಂಚಾರವೂ ಹೆಚ್ಚಿದೆ. ಟಪ್ಪಾಲು, ಟೆಲಿಗ್ರಾಫ್, ಟೆಲಿಫೋನ್, ಆಕಾಶವಾಣಿ ಮೊದಲಾದುವುಗಳ ಅನುಕೂಲತೆಯಿಂದ ವ್ಯವಹಾರ ಸೌಕರ್ಯಗಳ ವಿಷಯದಲ್ಲಿ ಪ್ರಗತಿಯುಂಟಾಗಿದೆ. ಆದಿದ್ದರೂ ವೃದ್ಧಿ ಹೊಂದುತ್ತಿರುವ ವ್ಯವಸಾಯದ ಅನು ಕೂಲತೆಗಳು ರೈತರ ದವಸಗಳ ಮಾರಾಟಕ್ಕೆ ಸಹಾಯಕವಾಗುವಂತೆ ಅಳವಟ್ಟಿರು ವುದಿಲ್ಲ. ಮುಖ್ಯವಾಗಿ ರೈತನ ಸಾಮಾನುಗಳಿಗೆ ನ್ಯಾಯವಾಗಿ ದೊರೆಯತಕ್ಕ ಪ್ರತಿಫಲವು ಅವನ ಕೈಗೆ ಬರುವುದಿಲ್ಲವೆಂದು ಹೇಳಬಹುದು.

ವ್ಯವಸಾಯದ ಪದಾರ್ಥಗಳಿಗೆ ದೊರೆಯುವ ಬೆಲೆಯಲ್ಲಿ ಶೇಕಡಾ 15ರಷ್ಟು ಅವುಗಳನ್ನು ಮಾರಾಟ ಮಾಡುವವರ, ದಲ್ಲಾಳಿಗಳ ಕೈಗೆ ಸೇರುತ್ತಿರುವು ದೆಂದು ತಿಳಿದುಬಂದಿದೆ. ಆದುದರಿಂದ ರೈತರಿಗುಂಟಾಗುವ ಈ ಬಗೆಯ ನಷ್ಟ ವನ್ನು ಹೋಗಲಾಡಿಸುವುದು ದೇಶಹಿತವನ್ನು ಬಯಸುವವರ ಕರ್ತವ್ಯವಾಗಿದೆ. ಅಕ್ಕಿ, ಗೋಧಿ, ಮೊದಲಾದ ಧಾನ್ಯಗಳನ್ನೂ—ಎಣ್ಣೆಯ ಬೀಜ, ಹತ್ತಿ, ನಾರು, ಮೊದಲಾದ ಪದಾರ್ಥಗಳನ್ನೂ ಉಪಯೋಗಮಾಡುವ ಗಿರಾಕಿಗಳು ಕೂಡ ಈ ಬಗೆಯಲ್ಲಿ ರೈತರಿಗೂ ತಮಗೂ ಉಂಟಾಗುವ ಆರ್ಥಿಕ ನಷ್ಟವನ್ನು ಹೋಗ ಲಾಡಿಸುವುದಕ್ಕೆ ಸಹಾಯ ಮಾಡಬೇಕು. ಗಿರಾಕಿಗಳು ರೈತರಿಂದಲೇ ನೆಟ್ಟಗೆ ಸಾಮಾನುಗಳನ್ನು ಪಡೆಯುವಂತೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಿಸಿದರೆ ಸಾಮಾನುಗಳನ್ನು ಅಗ್ಗವಾಗಿಯೂ ಪಡೆಯಬಹುದು. ಮಾರಾಟ ವ್ಯವಸ್ಥೆ ಯನ್ನು ಕ್ರಮಪಡಿಸುವುದು ಸರಕಾರದ ಕರ್ತವ್ಯ. ವರ್ತಕರು ತಮ್ಮ ಉದ್ಯೋಗವನ್ನು ನ್ಯಾಯವಾದ ರೀತಿಯಲ್ಲಿ ನಡಿಸುತ್ತ ಸರಕಾರದ ಉದ್ದೇಶ ವನ್ನು ಸಫಲಗೊಳಿಸಬಹುದು.

ನಮ್ಮ ಬಡ ರೈತರು ಹಲವು ವಿಧಗಳಲ್ಲಿ ವರ್ತಕರ ಹಿಡಿತದಲ್ಲಿರುತ್ತಾರೆ. ಮೊದಲನೆಯದಾಗಿ ತಮ್ಮ ದವಸಗಳನ್ನು ಕೊಡಲೊಪ್ಪಿಕೊಂಡು ವರ್ತಕ ಅಥವಾ ಸಾಹುಕಾರರಿಂದ ಮುಂಗಡವಾಗಿ ಸಾಲ ಪಡೆಯುತ್ತಾರೆ. ಬಳಿಕ ಅವರು ಹೇಳಿದಾಗ ದವಸಗಳನ್ನು ಅವರ ಬಾಗಿಲಿಗೆ ತಲಪಿಸಲೇ ಬೇಕಾಗುತ್ತದೆ. ವರ್ತಕರು ನಮೂದಿಸಿದ ಬೆಳೆಯ ದರವನ್ನು ಚರ್ಚೆ ಮಾಡದೆ ಒಪ್ಪಿಕೊಳ್ಳದೆ ನಿರ್ವಾಹವಿರುವುದಿಲ್ಲ. ಅಂತೂ ಅವರು ಕೊಟ್ಟುದನ್ನು ತೆಗೆದುಕೊಳ್ಳಬೇಕಾಗು ತ್ತದೆ. ಸಾಮಾನ್ಯವಾಗಿ ರೈತರಿಗೆ ಬೇಕಾಗುವ ಸಾಮಾನುಗಳನ್ನೂ ಅವರಿಂದಲೇ ಕೊಳ್ಳುತ್ತಾರೆ. ಅವುಗಳಿಗೆ ಕೂಡ ವರ್ತಕರು ಹೇಳಿದ ಬೆಲೆ. ಬೆಲೆಯನ್ನು ಇಂತಿಷ್ಟೇ ಎಂದು ಹೇಳುವುದೂ ಕಡಿಮೆ. ಪುಸ್ತಕದ ಲೆಕ್ಕದಲ್ಲಿ ಲೇವಾದೇವಿ ನಡೆದುಹೋಗುವುದು. ಈ ಪದ್ಧತಿಯಿಂದ ರೈತರಿಗೆ ಎರಡು ವಿಧವಾಗಿ ನಷ್ಟ ವಾಗುವುದಲ್ಲ!

ನ್ಯಾಯವಾದ ಬೆಲೆಯಲ್ಲಿ ಕಡಮೆ ಮಾಡುವುದು ಬೇರೆ; ಸೋಡಿ, ರುಸುಂ, ದಲ್ಲಾಳಿ, ಪಡಿತರ, ಧರ್ಮ, ಮಜೂರಿ ಮೊದಲಾದ ನಾನಾ ರೀತಿಗಳಿಂದ ಸುಲಿಗೆ ಮಾಡುವುದು ಬೇರೆ. ರೈತರನ್ನು ಹೀಗೆ ತೊಂದರೆಪಡಿಸುವುದು ಮಾತ್ರವಲ್ಲದೆ ಸಾಮಾನುಗಳನ್ನು ಯೋಗ್ಯತೆಗೆ ಅನುಸಾರವಾಗಿ ವಿಂಗಡಿಸದೆ ಒಟ್ಟಿಗೆ ಸೇರಿಸಿ ಅಳತೆಮಾಡಿ ತೆಗೆದುಕೊಳ್ಳುವ ಪದ್ಧತಿಯಿಂದ ರೈತರಿಗೆ ನಷ್ಟವಾಗುತ್ತದೆ. ಸಾಮಾನ್ಯವಾಗಿ ಕೀಳು ಸಾಮಾನಿನ ದರವೇ ಒಳ್ಳೆ ಸಾಮಾನಿಗೂ ದೊರೆಯು ವಂತಾಗುತ್ತದೆ. ಇದಕ್ಕೆ ಅನೇಕಸಲ್ಲಿಯೂ ರೈತರು ಸಾಲಿಗೆ ಗುರಿಯಾ ಗುತ್ತಾರೆ. ಸಾಮಾನ್ಯವಾಗಿ ವರ್ತಕರಲ್ಲಿ ಕೊಳ್ಳುವುದಕ್ಕೊಂದು ಬಗೆಯ, ಕೊಡುವುದಕ್ಕೆ ಬೇರೊಂದು ಬಗೆಯ ಸೇರು, ತಕ್ಕಡಿ [illegible].

ನಮ್ಮ ದೇಶದ ವ್ಯವಸಾಯದ ಉತ್ಪತ್ತಿಗಳೆಲ್ಲ ನಮ್ಮ ದೇಶದೊಳಗೇ ಉಪ ಯೋಗವಾಗುವುದಿಲ್ಲ. ಇಲ್ಲಿಯ ಹೆಚ್ಚು ಪದಾರ್ಥಗಳು ಪರದೇಶಗಳಿಗೆ ರಫ್ತಾ ಗುತ್ತವೆ. 1938–39ರಲ್ಲಿ 16,39,255 ಸಾವಿರ ರೂಪಾಯಿ ಬೆಲೆಯ ರಫ್ತು ವ್ಯಾಪಾರವು ಭೂಲೋಕದ ಹಲವು ರಾಜ್ಯಗಳೊಡನೆ ನಡೆಯಿತು. ನೆಲಗಡಲೆ, ಹತ್ತಿ, ಅಕ್ಕಿ, ಗೋಧಿ, ಎಣ್ಣೆ ಬೀಜಗಳು, ಚಾ, ಹೊಗೆಸೊಪ್ಪು, ಸಣಬು ಮೊದ ಲಾದ ಅನೇಕ ಪದಾರ್ಥಗಳು ಇಲ್ಲಿಂದ ರಫ್ತಾಗುತ್ತವೆ. ಇದರಿಂದ ರಫ್ತಾಗುವ ವಸ್ತುಗಳ ಮಾರಾಟದ ಮಹತ್ವವನ್ನು ತಿಳಿದುಕೊಳ್ಳಬಹುದು. ಒಳ್ಳೆಯ ಮಾರಾಟ ವ್ಯವಸ್ಥೆ ಇದ್ದ ಪಕ್ಷದಲ್ಲಿ ಈ ದವಸಗಳನ್ನು ಬೆಳೆಸುವ ಹಳ್ಳಿಯ ರೈತರ ಆದಾಯವು ಹೆಚ್ಚುವುದಕ್ಕೆ ಅವಕಾಶವಿದೆ. ರೈತರು ಶ್ರಮಪಟ್ಟು ಬೆಳೆಸುವ ದವಸಗಳಿಗೆ ಒಳ್ಳೆಯ ಬೆಲೆ ಬರುವಂತೆ ಮಾರಾಟ ಮಾಡುವುದು ಪ್ರಭುತ್ವಕ್ಕೆ ಸೇರಿದ ಹೊಣೆಗಾರಿಕೆಯಾಗಿದೆ. ಮುಖ್ಯವಾಗಿ ಒಳದೇಶದ ವ್ಯಾಪಾರ ವಹಿ ವಾಟಿನ ಕುಂದು ಕೊರತೆಗಳನ್ನು ಹೋಗಲಾಡಿಸುವಂತೆಯೇ ಹೊರದೇಶದ ವ್ಯಾಪಾರ ವ್ಯವಸ್ಥೆಯನ್ನೂ ಕ್ರಮಪಡಿಸುವುದು ಅವಶ್ಯಕವಾಗಿದೆ.

ಇತ್ತೀಚೆಗೆ ನಮ್ಮ ದೇಶದ ವ್ಯಾಪಾರ ಸೌಕರ್ಯಗಳ ಅಭಿವೃದ್ಧಿಯ ವಿಚಾರವು ಸರಕಾರದವರ ಗಮನಕ್ಕೆ ವಿಶೇಷವಾಗಿ ಬಂದಿರುವುದು ಶುಭ ಸೂಚನೆಯೆಂದು ಹೇಳಬಹುದು. ಪ್ರತಿಯೊಂದು ಪ್ರಾಂತ್ಯದಲ್ಲಿಯೂ ವ್ಯಾಪಾರ ವ್ಯವಸ್ಥೆಯ ಅಭಿವೃದ್ಧಿ ಮಾರ್ಗವನ್ನು ಪರಿಶೀಲಿಸುವ ಸಲುವಾಗಿ ಮಾರ್ಕೆಟಿಂಗ್ ಸಿಬಂಧಿಯು ಏರ್ಪಾಡಾಗಿದೆ. ಈ ಅಧಿಕಾರಿಗಳು ವ್ಯವಸಾಯ ಪದಾರ್ಥಗಳ ಮಾರಾಟ ವ್ಯವಸ್ಥೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ವರೆಗೆ ಸುಮಾರು ಮೂವತ್ತು ಬಗೆಯ ದವಸಗಳ ವಿಷಯದಲ್ಲಿ ಮಾಹಿತಿ ಯನ್ನು ಸಂಗ್ರಹಿಸಿರುವರು. ಗೋಧಿ, ಎಳ್ಳು, ಹೊಗೆಸೊಪ್ಪು, ಮೊಟ್ಟೆ, ಚರ್ಮ ಮೊದಲಾದ ಮುಖ್ಯ ಪದಾರ್ಥಗಳ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಿಸಿಯೂ ಇರುವರು.

ವ್ಯವಸಾಯ ಪದಾರ್ಥಗಳನ್ನು ತರಗತಿಗೆ ಅನುಸಾರವಾಗಿ ವಿಂಗಡಿಸದೆ ಮಾರಾಟ ಮಾಡುವುದರಿಂದ ದವಸಗಳ ಬೆಲೆಯಲ್ಲಿ ರೈತರಿಗೆ ನಷ್ಟವುಂಟಾಗು ತ್ತದೆ. ಇದನ್ನು ಹೋಗಲಾಡಿಸುವುದಕ್ಕೆ 'ಎಗ್ರಿಕಲ್ಚರಲ್ ಪ್ರೊಡ್ಯೂಸ್ ಆಕ್ಟ್' ಎಂಬ ತರಗತಿಗೆ ತಕ್ಕಂತೆ ವಿಂಗಡಿಸಿ ಮಾರಾಟ ಮಾಡುವ ವ್ಯವಸ್ಥೆಯ ಕಾನೂನು ತಯಾರಾಗಿದೆ. ಇದಕ್ಕನುಸಾರವಾಗಿ ಹಣ್ಣು ಹಂಪಲು, ಮೊಟ್ಟೆ, ಹೊಗೆ ಸೊಪ್ಪು, ಕಾಫಿ, ಚರ್ಮ ಮೊದಲಾದ ಪದಾರ್ಥಗಳನ್ನು ತರಗತಿಗೆ ಅನುಸರಿಸಿ, ವಿಂಗಡಿಸಿ ಮಾರಾಟ ಮಾಡುವ ಅನುಕೂಲತೆಗಳು ಒದಗಿಸಲ್ಪಟ್ಟಿವೆ. ಈ ಕಾನೂನಿನಂತೆ ಆಗ್ಮಾರ್ಕ್‌ವುಳ್ಳ ವಿಂಗಡಿಸಿದ ಪದಾರ್ಥಗಳಿಗೆ ಒಳ್ಳೆಯ ಬೆಲೆ ದೊರೆಯುವುದು. ತರಗತಿಗೆ ತಕ್ಕಂತೆ ವಿಂಗಡಿಸುವ ವ್ಯವಸ್ಥೆಯಿರುವ ಸುಮಾರು 50 ಕೇಂದ್ರಗಳು ಸ್ಥಾಪಿತವಾಗಿರುವುವು. ಇವುಗಳ ಮೂಲಕ ಈ ವರೆಗೆ 15,000 ಪವನು ಬೆಲೆ ಬಾಳುವ ದವಸಗಳು ಮಾರಾಟವಾಗಿವೆಯೆಂದು ಗೊತ್ತಾ

ಗಿದೆ. ಮುಖ್ಯವಾಗಿ ಮಾರ್ಕೆಟಿಂಗ್ ಸರ್ವೆ ಇಲಾಖೆಯವರು ನಮ್ಮ ದೇಶಗಳಲ್ಲಿ ಈಚೆಗೆ ವ್ಯವಸಾಯ ಉತ್ಪತ್ತಿಗಳ ಮಾರಾಟ ಸಂಬಂಧವಾಗಿ ಉತ್ತಮ ಕಾರ್ಯಗಳನ್ನು ನಡೆಸುತ್ತಿರುವರೆಂದು ಹೇಳಬಹುದು.

ನಮ್ಮ ದೇಶದ ನೆಮ್ಮದಿಯು ಗ್ರಾಮಾಂತರದ ರೈತರ ಸಂಪದಭಿವೃದ್ಧಿಯನ್ನು ಅವಲಂಬಿಸಿಕೊಂಡಿದೆ. ಗ್ರಾಮಾಭ್ಯುದಯ ಕಾರ್ಯವು ಪ್ರಾಂತೀಯ ಸರಕಾರಗಳ ಪಾಲಿಗೆ ಸೇರಿದುದು. ಆದುದರಿಂದ ಪ್ರಾಂತೀಯ ಸರಕಾರಗಳು ವ್ಯಾಪಾರ ಸೌಕರ್ಯಕ್ಕಿರುವ ಕುಂದುಕೊರತೆಗಳನ್ನು ನಿವಾರಿಸುವುದಕ್ಕೆ ತಕ್ಕುದಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಈ ವಿಷಯದಲ್ಲಿ ಕೇವಲ ಪ್ರಚಾರಮಾಡುವುದರಿಂದಾಗಲಿ ಐಚ್ಛಿಕವಾಗಿ ಅನುಸರಿಸಬಹುದಾದ ಸಲಹೆಗಳನ್ನು ಕೊಡುವುದರಿಂದಾಗಲಿ ಪ್ರಯೋಜನವಿಲ್ಲ. ಏನಾದರೂ ಪ್ರಯೋಜನವಾಗತಕ್ಕ ಕೆಲಸವಾಗಬೇಕಾದರೆ ನಿಬಂಧ ಕಾನೂನು ಜ್ಯಾರಿಯಾಗಬೇಕು. ನಮ್ಮ ದೇಶದ ಅನುಭವದಿಂದ ಇದು ವಿದಿತವಾಗುವುದು. ರೈತರ ಸಾಲ ನಿವಾರಣೆಯ ಮಸೂದೆ, ಸಾರ್ವಜನಿಕ ಆರೋಗ್ಯ ರಕ್ಷಣೆಯ ಮಸೂದೆ ಮೊದಲಾದ ನಮ್ಮ ಪ್ರಾಂತೀಯ ಕಾನೂನುಗಳು ಜ್ಯಾರಿಗೆ ಬಾರದಿರುತ್ತಿದ್ದರೆ ಅವುಗಳ ಉದ್ದೇಶಗಳೊಂದೂ ಸಾಧಿಸುವಂತಿರಲಿಲ್ಲ. ಮುಖ್ಯವಾಗಿ ಮಾರಾಟ ಸೌಕರ್ಯಕ್ಕೆ ಬೇಕಾದ ಕಾನೂನುಗಳನ್ನು ಪ್ರಾಂತೀಯ ಸರಕಾರಗಳು ವಿಳಂಬವಿಲ್ಲದೆ ಜ್ಯಾರಿ ಮಾಡಬೇಕು. ಬೊಂಬಾಯಿ ಪ್ರಾಂತ್ಯದಲ್ಲಿ ಜ್ಯಾರಿಯಲ್ಲಿರುವ 'ಸ್ಟೆಂಡಾರ್ಡ್ ವೈಟ್ ಎಂಡ್ ಮೇಜರ್ಸ್ ಆಕ್ಟ್'ನಂತಹ ನಿಶ್ಚಿತವಾದ ತೂಕ ಅಳತೆಗಳನ್ನು ಕ್ರಮಪಡಿಸುವ ಕಾನೂನನ್ನು ಇತರ ಪ್ರಾಂತೀಯ ಸರಕಾರಗಳು ಜಾರಿಗೆ ತರಬೇಕು. ವ್ಯವಸಾಯ ದವಸಗಳ ತೂಕ ಅಳತೆಗಳನ್ನು ಕ್ರಮಪಡಿಸಿ ಅವುಗಳನ್ನು ಉಲ್ಲಂಘಿಸುವವರಿಗೆ ದಂಡನೆ ನಿರ್ಬಂಧವಿರಬೇಕು. ಇಡೀ ದೇಶದಲ್ಲಿ ಒಂದೇ ವಿಧವಾದ ಪ್ರಮಾಣಗಳುಳ್ಳ ತೂಕ ಅಳತೆಗಳನ್ನು ಕಾನೂನಿನ ಮೂಲಕ ಜಾರಿಗೆ ತರುವ ಅವಶ್ಯಕತೆಯನ್ನು ವ್ಯವಸಾಯ ಸಮಿತಿಯವರು ಸೂಚಿಸಿರುವರು.


ರೈತರ ಲಾಭವೃಷ್ಟಿಯಿಂದ ವ್ಯವಸ್ಥಿತವಾದ ಮಾರ್ಕೆಟುಗಳನ್ನು ಸ್ಥಾಪಿಸಿ ವ್ಯಾಪಾರ ನಿಯಮಗಳನ್ನು ನಿರ್ಣಯಿಸಬೇಕು. ಅಂತಹ ಮಾರ್ಕೆಟು ಅಧಿಕಾರಿಗಳು ದವಸಗಳನ್ನು ದಾಸ್ತಾನುಮಾಡುವ ಮಳಿಗೆಗಳನ್ನು ಅವಶ್ಯವಿದ್ದಲ್ಲಿ ಏರ್ಪಡಿಸುವಂತೆ ಅಧಿಕೃತರಾಗಬೇಕು. ತರಗತಿಗನುಸಾರವಾಗಿ ದವಸಗಳನ್ನು ವಿಂಗಡಿಸಿ ಮಾರಾಟಮಾಡುವುದಕ್ಕೆ ಕಡ್ಡಾಯವಾದ ಕಾನೂನುಗಳನ್ನು ಜ್ಯಾರಿಗೆ ತರಬಹುದು. ಅಂತಹ ಕಾನೂನುಗಳನ್ನು ಆಚರಣೆಯಲ್ಲಿ ಪಾಲಿಸುವಂತೆ ಪ್ರಬಲವಾದ ಶಿಸ್ತನ್ನು ಜ್ಯಾರಿಮಾಡಬೇಕು. ರೈತರಿಗೆ ಬಾಧಕವಾಗುವ ಅನ್ಯಾಯದ ಸುಲಿಗೆಗಳನ್ನು ನಿಲ್ಲಿಸುವುದಕ್ಕೂ, ಅಳತೆತೂಕಗಳಲ್ಲಿ ಮೋಸವಾಗದಂತೆ ಕಾಪಾಡುವುದಕ್ಕೂ, ತರಗತಿಗೆ ತಕ್ಕಂತೆ ವಿಂಗಡಿಸಿಕೊಂಡೇ ಮಾರಾಟ ಮಾಡುವುದಕ್ಕೂ ಕಾನೂನುಗಳಾಗಬೇಕಾದುದು ಆವಶ್ಯಕ. ನಾನಾಮಾಲುಗಳನ್ನು ಬೆರಕೆಮಾಡಿ ಠಕ್ಕು ಮ್ಯಾಲುಗಳನ್ನು ಮಾರದಂತೆ ಈಗಾಗಲೆ ಕಾನೂನುಗಳಿವೆ. ಅವುಗಳಲ್ಲಿಯೂ ಆವಶ್ಯವಾದ ಇನ್ನಷ್ಟು ನಿರ್ಬಂಧದ ನಿಯಮಗಳಿರಬೇಕು. ಮುಖ್ಯವಾಗಿ ಯಾವ ವಿಧದಲ್ಲಿ ರೈತರ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅನುಕೂಲವಾಗಬಹುದೋ ಅಂತಹ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿದರೆ ರೈತರ ಉದ್ಧಾರವನ್ನು ಸಾಧಿಸಿದಂತಾಗಬಹುದು.

ಮಾರಾಟವ್ಯವಸ್ಥೆಗೆ ಸಹಾಯಕವಾಗುವಂತೆ ವ್ಯವಹಾರಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯವೂ ಸರಕಾರದವರ ಪಾಲಿಗೆ ಸೇರಿದುದಾಗಿದೆ. ಈಚೆಗೆ ನಮ್ಮ ದೇಶದಲ್ಲಿ ರೈಲು ಮೋಟಾರುಗಳ ಚಲಾವಣೆಯು ಹೆಚ್ಚಿರುವುದಾದರೂ ಮೂಲೆಮೂಲೆಯಲ್ಲಿರುವ ನೂರಾರು ಹಳ್ಳಿಗಳು ಇನ್ನೂ ಬಹಳ ಹಿಂದುಳಿದಿವೆ. ನಮ್ಮ ದೇಶದ ಪ್ರಜಾಸಂಖ್ಯೆ ವಿಸ್ತಾರವನ್ನು ಗಮನಿಸಿದರೆ ಈಗಿರುವ ರೈಲು ಮಾರ್ಗಗಳಾಗಲಿ ಗಾಡಿ ರಸ್ತೆಗಳಾಗಲಿ ಸಾಕಷ್ಟು ವೃದ್ಧಿಗೊಂಡಿರುವುದಿಲ್ಲವೆಂದು ವ್ಯಕ್ತವಾಗದಿರದು. ಟಪ್ಪಾಲು, ಟೆಲಿಗ್ರಾಫ್, ಮುಂತಾದ ವ್ಯವಹಾರ ಸೌಕರ್ಯಗಳೂ ಪ್ರಯಾಣ ಅನುಕೂಲತೆಗಳೂ ಈಗ ಎಷ್ಟು ಹೆಚ್ಚಿರುವುದಾದರೂ ಅವು ನಗರವಾಸಿಗಳಿಗೆ ಹೆಚ್ಚು ಅನುಕೂಲವಾಗಿರುವುವೇ ಹೊರತು ಗ್ರಾಮವಾಸಿಗಳಿಗಲ್ಲ. ರೈಲುಬಂಡಿಯನ್ನು ಕಂಡಿರದ ಹಳ್ಳಿಗರೆಷ್ಟೋ ಮಂದಿ ನಮ್ಮ ದೇಶದಲ್ಲಿರುವರು. ವಾರ್ತಾಪತ್ರಿಕೆಗಳೆಂದರೇನೆಂದು ಅರಿಯ[illegible] ಹಳ್ಳಿಗರ ಸಂಖ್ಯೆಯೂ ಕಡಮೆಯಲ್ಲ. ಗ್ರಾಮಾಂತರಗಳಲ್ಲಿ ಅಂಚೆಕಟ್ಟೆ[illegible] ಸೌಕರ್ಯಗಳನ್ನು ಪಡೆಯುವವರು ತೀರಾ ವಿರಳ. ಹೀಗಿರುವಲ್ಲಿ ತಂತಿ, ಆಕ[illegible] ವಾಣಿಗಳ ಮಾತಂತೂ ಬಹು ದೂರ ಉಳಿಯಿತು. ವ್ಯವಹಾರ ಸೌಕರ್ಯ[illegible] ವಿಷಯದಲ್ಲಿ ನಮ್ಮ ದೇಶವು ಪಾಶ್ಚಾತ್ಯ ರಾಷ್ಟ್ರಗಳ ಮಟ್ಟವನ್ನು ಸಮೀಪಿಸ[illegible]ದಕ್ಕೆ ಇನ್ನೆಷ್ಟು ಕಾಲ ಬೇಕಾಗುವುದೆಂದು ಹೇಳುವುದು ಸುಲಭವಾಗಿಲ್ಲ.

ಉತ್ತಮವಾದ ಸಂಚಾರ ವ್ಯವಹಾರದ ಅನುಕೂಲತೆಗಳು ರೈತರ ಬ[illegible] ಮುಖ್ಯವಾದ ಅಭ್ಯುದಯಕ್ಕೆ ಸಹಾಯ ಮಾಡುತ್ತದೆ. ಅವು ಅಭಿವೃದ್ಧಿಗೊಂ[illegible] ದವಸಗಳನ್ನು ಸುಲಭವಾಗಿ ಸಂತೆಗೆ ಸಾಗಿಸಿ ಮಾರಾಟ ಮಾಡುವುದಕ್ಕೆ ಅ[illegible]ಕೂಲವಾಗುವುದು. ದವಸಗಳನ್ನು ಸಾಗಿಸುವುದಕ್ಕೆ ತೊಂದರೆಗಳಿದ್ದರೆ ರೈತ[illegible] ತೊಂದರೆಗೆ ಗುರಿಯಾಗುತ್ತಾರೆ. ಬೇರೆ ಬೇರೆ ಕಡೆಗಳಲ್ಲಿ ದೊರೆಯುವ ಗಿರಾ[illegible]ಗಳು, ಬೆಲೆ ಮೊದಲಾದುವನ್ನು ವಿಳಂಬವಿಲ್ಲದೆ ತಿಳಿದುಕೊಳ್ಳುವುದಕ್ಕೆ ರೈತ[illegible] ಅನುಕೂಲತೆಗಳಿರಬೇಕು. ಆರ್ಥಿಕ ದೃಷ್ಟಿಯಿಂದ ಮಾತ್ರವಲ್ಲ ಇತರ [illegible]ದಲ್ಲಿಯೂ ವ್ಯವಹಾರ ಸೌಕರ್ಯಗಳು ಹೆಚ್ಚಾಗಬೇಕಾದುದು ಆವಶ್ಯಕ. [illegible] ಜೀವನದ ಎಲ್ಲಾ ಭಾಗಗಳಲ್ಲಿ ವ್ಯವಹಾರ ಸೌಕರ್ಯಗಳ ಉಪಯೋಗವು [illegible]ಣಾಮವನ್ನುಂಟುಮಾಡುವುದಿಲ್ಲ. ಹಳ್ಳಿಗರಿಗೂ ಪಟ್ಟಣದವರಿಗೂ ಇ[illegible] ಪ್ರಾಂತದವರಿಗೂ ಹೆಚ್ಚೇಕೆ ಅನ್ಯ ದೇಶೀಯರಿಗೂ ಅನ್ಯೋನ್ಯ ಸಂಪರ್ಕ ಬೆಳೆ[illegible]ಬೇಕು. ಇದರಿಂದ ಜನರ ಮನೋವೈಶಾಲ್ಯವು ಬೆಳೆಯುವುದು; ಸಂಕುಚ[illegible] ಭಾವನೆ ಹೋಗುವುದು; ಜೀವನದ ಅಂತಸ್ತು ಸುಧಾರಿಸುವುದು; ತಿಳುವಳಿ[illegible] ಹೆಚ್ಚುವುದು; ಆರ್ಥಿಕ ಸ್ಥಿತಿಯು ಉತ್ತಮವಾಗುವುದು. ಮುಖ್ಯ[illegible] ವ್ಯವಹಾರ ಸೌಕರ್ಯಗಳು ವ್ಯಾಪಾರ ಸೌಕರ್ಯಗಳು ವ್ಯವಹಾರ ಸೌಕರ್ಯ[illegible] ಮಾತ್ರ ತಳಹದಿಯಾಗಿರುವುದಷ್ಟೇ ಅಲ್ಲ, ಜನತೆಯ ಸಾರ್ವತ್ರಿಕ ಅಭಿವೃದ್ಧಿಗ[illegible] ಮೂಲಾಧಾರವಾಗಿರುವುದೆನ್ನಬಹುದು.

ಯುರೋಪಿನ ಯುದ್ಧಾರಂಭದಿಂದ ಇಂಡಿಯದ ರಫ್ತು[illegible] ವ್ಯಾಪಾರಕ್ಕೆ ತುಂಬ ಹಾನಿಯಾಗಿದೆ. ಇಂಡಿಯಾ ಸರಕಾರದವರು [illegible] ರಾಷ್ಟ್ರಗಳೊಡನೆ ವ್ಯಾಪಾರವನ್ನು ನಿಲ್ಲಿಸಿರುವರು. ಆದರೂ ಇಂಡಿಯಾ[illegible] ಕಚ್ಚಾ ಸಾಮಗ್ರಿಗಳಿಗೆ ಹೊಸ ಮಾರ್ಕೆಟುಗಳನ್ನು [illegible] ಏರ್ಪಾಡು ಆಗುತ್ತಿದೆ. ರಫ್ತು ಸಾಮಗ್ರಿಗಳ [illegible] ಸಮಿತಿಗಳನ್ನು[illegible] ಮದ್ರಾಸು, ಬೊಂಬಾಯಿ, ಕರಾಚಿ ಮತ್ತು ಕಲ್ಕತ್ತಾ ಬಂದರುಗಳಲ್ಲಿ ಏರ್ಪಡಿ[illegible]ರುವರು. ಇಷ್ಟಲ್ಲದೆ ವ್ಯಾಪಾರ ಏಜಂಟರನ್ನು ತಟಸ್ಥ ರಾಷ್ಟ್ರಗಳಿಗೆ ಕಳುಹಿ[illegible] ನಮ್ಮ ಸರಕುಗಳ ಮಾರಾಟಕ್ಕೆ ಏರ್ಪಾಡಾಗುವಂತೆ ಮಾಡಿರುವರು. ಆಸ್ಟ್ರೇ[illegible]ಲಿಯದಲ್ಲಿ ಒಬ್ಬ ಟ್ರೇಡ್ ಕಮಿಷನರ ನೇಮಕವಾಗಿದೆ. ಗ್ರಿಗರಿಮಿಾಕ್ ಕಮಿ[illegible]ರನ್ನು ಸಂಯುಕ್ತ ರಾಷ್ಟ್ರಗಳಿಗೆ ಸರಕಾರದವರು ಕಳುಹಿಸಿರುವರು. ರ[illegible]ಗಳಲ್ಲಿ ಸೇಕಡಾ ಎಣ್ಣೆಕಾಳು 56, ಸೆಣಬು ನಾರು 54, ಹತ್ತಿ 49·25, ಕಾ[illegible] 37, ಹಿಂಡಿ 41, ಚರ್ಮ 33, ಹುರಿಹಗ್ಗ 38, ಕಚ್ಚಾ ರಬ್ಬರು 24, ಮತ್ತ[illegible] ಗೊಬ್ಬರಗಳು ಹೆಚ್ಚಾಗಿ ಯುರೋಪಿಗೆ ಹೋಗುವುದು ಈಗ ನಿಂತಿದೆ. ಇವುಗ[illegible] ಮಾರ್ಕೆಟು ನಷ್ಟವಾದರೂ ಮುಂದಕ್ಕೆ ಇಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪಿ[illegible] ಕಚ್ಚಾ ಸಾಮಾನನ್ನು ಉಪಯೋಗಿಸುವ ಯೋಜನೆಗಳಿವೆ. ಯುದ್ಧೋಪಕರ[illegible]ಗಳ ಕೈಗಾರಿಕೆಯು ಅಮೇರಿಕದಲ್ಲಿ ಸ್ಥಾಪಿತವಾದುದರಿಂದ ಇಂಡಿಯದ ಲೋ[illegible]ಗಳಿಗೂ ಒಳ್ಳೆ ಗಿರಾಕಿ ಸಿಕ್ಕುವ ಸಂದರ್ಭವಿರುವುದು.

ಸರಕಾರವು ಕಾನೂನುಗಳನ್ನು ಮಾಡಬಹುದು; ಸೌಕರ್ಯಗಳನ[illegible] ಒದಗಿಸಿಕೊಡಬಹುದು; ಆದರೆ ಅವುಗಳನ್ನು ಪಾಲಿಸುವುದಕ್ಕೂ ಉಪಯೋಗಿ[illegible] ಕೊಳ್ಳುವುದಕ್ಕೂ ಜನರು ಉತ್ಸಾಹಗೊಂಡು ಸಿದ್ಧರಾಗಿರಬೇಕು. ವ್ಯವಸಾಯ[illegible]ದಿಂದಾಗಲಿ ಕೈಗಾರಿಕೆಗಳಿಂದಾಗಲಿ ರೈತರು ಪಡೆಯುವ ದವಸಗಳನ್ನೂ ಸಾಮಾನುಗಳನ್ನೂ ಲಾಭಕರವಾಗುವಂತೆ ಮಾರಾಟ ಮಾಡುವುದಕ್ಕೆ ಹಾಗ[illegible] ಅವುಗಳಿಗೆ ಸಂಬಂಧಿಸಿದ ಸೌಕರ್ಯಗಳನ್ನೊದಗಿಸುವುದಕ್ಕೆ ರೈತರು ತಾವಾ[illegible] ಉತ್ಸಾಹದಿಂದ ಪ್ರಯತ್ನಿಸುವ ಅಂಶವು ಮುಖ್ಯವಾಗಿದೆ.





"ರಜೆ"

(ಶ್ರೀ| ಎಮ್. ವಿ. ಪ್ರಭು, ಎಮ್. ಎ. ಎಲ್. ಟಿ.)

ವಾಣಿಜ್ಯದ ವಿಷಯ ಲೇಖನವನ್ನು ಬರೆಯುವ ಕಷ್ಟಗಳನ್ನು ಚೆನ್ನಾಗಿ ತಿಳಿದೇ ನಾನಾ ವ್ಯಾಪಾರಕ್ಕೆ ಕೈಹಾಕಲಿಲ್ಲ. ವ್ಯಾಪಾರಸ್ಥರು ತಿಂಗಳಿಗೊಮ್ಮೆ ತಮ್ಮ ಕೆಲಸಕ್ಕೆ ಹೇಗೆ ರಜೆ ಕೊಡುವರೋ, ಹಾಗೆಯೇ ನಾವು ವಾಣಿಜ್ಯಕ್ಕಿಂದು ರಜೆ ಕೊಟ್ಟಿರುತ್ತೇವೆ. ಈ ರಜೆಯನ್ನು ಸಂಪಾದಕರು ಸ್ವೀಕರಿಸಿದರೆ ಒಳ್ಳೆಯದು. ಇಲ್ಲದಿದ್ದರೆ ನಮ್ಮ 'ರಜೆ'ಗೂ ರಜೆ ದೊರಕಿದಂತಾಯಿತು.

ಲೇಖನಗಳಿಗೂ ರಜೆಯಿದೆಯೆ? ಇದೆ. ನಾವೊಂದು ಪ್ರಸಿದ್ಧ ಪತ್ರಿಕೆಗೆ ಉದ್ದವಾದ ಲೇಖನವನ್ನು ಸಂಪಾದಕರು ಹೇಳಿದಂತೆ ಬರೆದು ಕಳುಹಿಸಿದೆವು. ಲೇಖನವು ಜನಿವಾರದ ವಿಷಯ. ಆದರೆ ನಾವು ಕಳುಹಿಸಿದ ಜನಿವಾರವು ಅತಿ ಉದ್ದವಾಯಿತೆಂದೊ ಮತ್ತಿತರ ಯಾವ ಕಾರಣದಿಂದಲೊ ನಮ್ಮ ಜನಿವಾರಕ್ಕೆ ಸಂಪಾದಕರು ರಜೆ ಕೊಟ್ಟರು. ಪತ್ರಿಕೆಯೂ ರಜೆ ಪಡೆಕೊಂಡು ಪತ್ರಿಕೆಗಳ ಕ್ಷೇತ್ರದಿಂದ ರಿಟಾಯರ್ ಆಯಿತು.

ಇದೊಂದು ಆಶ್ಚರ್ಯಕರವಾದ ಸಂಗತಿಯಲ್ಲ. ಜನಿವಾರಕ್ಕೆ ರಜೆ ಕೊಡುವುದು ಸಾಧಾರಣ ಲೋಕರೂಢಿಯೆ ಆಗಿದೆ. ಊಟಮಾಡುವಾಗ ಹಾಕಿದ ಶರ್ಟ್ ತೆಗೆಯದೆ ಊಟಕ್ಕೆ ಕುಳಿತುಕೊಳ್ಳುವ ಮುಕ್ಕಾಲಂಶ ಜನರಲ್ಲಿ ಜನಿವಾರವು ಮಾಯವಾಗಿದೆ. ಹಾಗೆ ಕೆಲವರಲ್ಲಿ ಅದು ಇದ್ದರೂ, ಅದಕ್ಕೆ ಏರ್ಪಾಡಾಗಿರುವ ಸ್ಥಳದಲ್ಲದು ಇರುವುದಿಲ್ಲ. ಅದು ಹೆಚ್ಚಾಗಿ ಸಣ್ಣದೊಂದು ಸರದ ಸ್ವರೂಪವನ್ನು ತಾಳಿ ಕುತ್ತಿಗೆಯ ಸುತ್ತಲೂ ಸುತ್ತಿಕೊಂಡಿರುತ್ತದೆ. ಕೆಲವು ಜನರಲ್ಲಿ ಅದು ಕುತ್ತಿಗೆಯಿಂದ ಸಾಧ್ಯವಾದಷ್ಟು ಕೆಳಗಿಳಿದು ಸೊಂಟಕ್ಕಿಂತ ಸ್ವಲ್ಪ ಕೆಳಗಿರುವ ಸ್ಥಳವನ್ನು ಅಲಂಕರಿಸುತ್ತದೆ. ಇಂತಹ ಜನಿವಾರವು ಯಾರಿಗೆ ಬೇಕು? ಆದುದರಿಂದ ನಮ್ಮ ಜನಿವಾರಕ್ಕೆ ಸಂಪಾದಕರು ರಜೆ ಕೊಟ್ಟದ್ದು ನಮ್ಮಲ್ಲಿ ಲೇಶಮಾತ್ರ ಆಶ್ಚರ್ಯವನ್ನು ಹುಟ್ಟಿಸಲಿಲ್ಲ.

ನಮ್ಮಲ್ಲೊಂದು ಅಜ್ಜನಕಾಲದ ಕ್ಲಾಕ್ ಇತ್ತು. ಇದು ಅಜ್ಜನಕಾಲದಲ್ಲಿ ಸರಿಯಾಗಿ ನಡಿಯುತ್ತ, ಅಪ್ಪನಕಾಲದಲ್ಲಿ ಅಡ್ಡವಾಗಿ ನಿಂತು ನಡಿಯುತ್ತ, ಮೊಮ್ಮಗನ ಕಾಲದಲ್ಲಿ ಅತಿ ಕಷ್ಟದಿಂದ, ಸಂಕಟದಿಂದ ನರಳುತ್ತ ನಡಿಯುತ್ತಿತ್ತು. ಕೊನೆಗೆ ಅದಕ್ಕೆ ದೀರ್ಘಕಾಲದ ರಜೆ ಪಡೆಯಬೇಕೆಂದು ಮನಸ್ಸಾಯಿತು. ಎಷ್ಟು ಪ್ರಯತ್ನಿಸಿದರೂ ಅದನ್ನು ಮುನ್ನಡೆಸಲು ನಮ್ಮಿಂದ ಸಾಧ್ಯವಾಗಲಿಲ್ಲ. ಡಾಕ್ಟರರನ್ನು ಕರೆದು ಪರೀಕ್ಷೆಮಾಡಿಸಿದೆವು. ಅವರು ಇಪ್ಪತ್ತು ನಿಮಿಷದ ಪರೀಕ್ಷೆಯನ್ನು ನಡೆಯಿಸಿ "ಇದಕ್ಕೆ ಕಾಲುಮೋಟಾಗಿದೆ; ಇನ್ನು ಇದು ನಡೆಯುವುದು ಬಹುಮಟ್ಟಿಗೆ ಅಸಾಧ್ಯವು" ಎಂಬ ಜಡ್ಜ್‌ಮೆಂಟ್ ಕೊಟ್ಟರು. ಆದರ ಮುಖ್ಯಾಧಾರವಾದ ಚಕ್ರವು ಸಂಪೂರ್ಣವಾಗಿ ಸವೆದು ಹೋಗಿತ್ತಂತೆ. ಅದನ್ನು ವಿಲಾಯತಿಯಿಂದಲೇ ತರಿಸಬೇಕಾಗುವುದೆಂದರು. "ನೀವೇ ತರಿಸಿಕೊಟ್ಟರೆ ಖರ್ಚೆಲ್ಲ ಕೊಡುತ್ತೇವೆ" ಎಂದು ನಾವು ಹೇಳಿದೆವು. ಆಗಬಹುದೆಂದು ಡಾಕ್ಟರರು ಕ್ಲಾಕನ್ನು ಎತ್ತಿಕೊಂಡು ಮನೆಗೆ ನಡೆದರು. ಕ್ಲಾಕೂ ಅವರೊಡನೆಯೇ ನಡೆಯಿತು. ಡಾಕ್ಟರರು ಅಂದಿನಿಂದ ಇಂದಿನ ವರೆಗೂ ನಮಗೆ ದರ್ಶನಕೊಡಲಿಲ್ಲ ಎಂದರೆ ಅವರು ಕ್ಲಾಕಿಗೂ ತಮಗೂ ರಜೆಯನ್ನು ದೊರಕಿಸಿದಂತಾಯಿತು.

ಉಪಾಧ್ಯಾಯರ ರಜೆಯೆಂಬುದು ಎಲ್ಲರ ಕಣ್ಣನ್ನು ಕುಕ್ಕುವಂತಹುದು. ವರ್ಷದಲ್ಲಿ ಆರು ತಿಂಗಳ ರಜೆಯು ಅವರದು. ಸಾಕಾಗದೆ ಇನ್ನೂ ಹತ್ತು ಹದಿನೈದು ದಿವಸಗಳನ್ನು ಉಪಾಧ್ಯಾಯರು ಈ ರಜೆಯ ಮೊತ್ತಕ್ಕೆ ಸೇರಿಸುವುದುಂಟು. ಒಟ್ಟಾರೆ ಕೆಲಸ ಕಮ್ಮಿ. ಉದ್ದವಾದ ಉಪನ್ಯಾಸಗಳನ್ನು ಬರೆಯುವುದಕ್ಕೆ ಇವರಿಗೆ ಹೆಚ್ಚು ಸಮಯವಿದೆ ಎಂದು ಜನರು ಎಣಿಸುತ್ತಾರೆ. ಇದು ತಪ್ಪೆಣಿಕೆಯೆಂದು ನಾವು ಸ್ಪಷ್ಟಗೊಳಿಸಲಿಕ್ಕಿದ್ದೇವೆ. ಹಲವು ಉಪಾಧ್ಯಾಯರಿಗೆ ಕೆಲಸದ ಭಾರದಿಂದ ತಲೆಯೆತ್ತಿ ಬೇರೆಯವರನ್ನು ನೋಡುವಷ್ಟು ಸಮಯವು ಕೂಡ ಅವರ ಕೈಯಲ್ಲಿರುವುದಿಲ್ಲ. ಕೆಲಸದ ಆಧಿಕ್ಯದಿಂದ ಇನ್ನು ಕೆಲವರಿಗೆ ನಿದ್ರೆಮಾಡುವಷ್ಟು ಸಮಯವು ಕೂಡ ಸಿಗುವುದಿಲ್ಲ. ಹಲವರಿಗೆ ಸಾಲೆಯನ್ನು ಬಿಟ್ಟು ಮನೆಯೂಟವನ್ನು ಪರೀಕ್ಷಿಸುವಷ್ಟು ಸಮಯವಿರುವುದಿಲ್ಲ. ಹೀಗಿರುವಾಗ ಆರು ತಿಂಗಳ ರಜೆಯು ನಿಜವಾಗಿ ಇಂತಹವರಿಗೆ ಸಾಲದು. ಇವರ ರಜೆಯು ಸುಳ್ಳು ರಜೆ. ಕೆಲಸದಿಂದ ತುಂಬಿದ ರಜೆಯು ಎಂದೂ ರಜೆಯೆಂದೆಣಿಸದು. ಮತ್ತು ಸಾಲೆಯೆಂಬ ಸ್ಥಳಕ್ಕೆ ರಜೆಯಿಲ್ಲವೇ ಇಲ್ಲ. ಸೆಖೆಕಾಲದ ಎರಡು ತಿಂಗಳುಗಳಲ್ಲಿ ಕೇಲೆಂಡರಿನ ಪ್ರಕಾರ ಸಾಲೆಗೆ ರಜೆ. ಈ ರಜೆಯೂ ನಿಜವಾದ ರಜೆಯಲ್ಲ. ದೊಡ್ಡವರ ಮದುವೆಗಳು, ಯಕ್ಷಗಾನ ಕೂಟಗಳು, ಹಲವು ಊಟಗಳು, ಗಾಯನ ಕಚೇರಿಗಳು, ನಾಟಕಗಳು, ಪ್ರದರ್ಶನಗಳು, ಉಪನ್ಯಾಸಗಳು—ಇವುಗಳೆಲ್ಲ ಒಟ್ಟುಗೂಡಿ ಸಾಲೆಗೆ ಇರುವ ರಜೆಯನ್ನೆಲ್ಲಾ ನುಂಗುವುವು. ಇಷ್ಟೆಲ್ಲ ಕಾರ್ಯಗಳು ಬಹಳ ಸಂಭ್ರಮದಿಂದ ಸಾಲೆಯಲ್ಲಿಯೇ ನಡೆಯುತ್ತಿರುವಾಗ ಸಾಲೆಗೆ ರಜೆಯು ದೊರಕುವ ಸಂಭವವುಂಟೇ?

ಇನ್ನು ನಮ್ಮ ಸಾಹುಕಾರರ ಹೊಸ ರಜೆಯ ವಿಷಯ ಒಂದು ಮಾತು. ತಿಂಗಳಿಗೊಮ್ಮೆ ತಮಗೂ ರಜೆಯು ಇರಬೇಕೆಂಬ ಸದುದ್ದೇಶದಿಂದ ಈಗ ಪ್ರತಿ ತಿಂಗಳ ಕಡೆಯ ಆದಿತ್ಯವಾರ ರಜಾದಿನವೆಂದು ಪ್ರಕಟಗೊಳಿಸಿ ನಮ್ಮ ಸಾಹುಕಾರರೆಲ್ಲ ಆ ದಿನ ಮನೆಯಲ್ಲೇ ಕುಳಿತುಕೊಳ್ಳಲು ಪ್ರಯತ್ನಿಸುತ್ತಾರೆ. ಈ ರಜೆಯು ಸಾಹುಕಾರರಿಗೆ ಮಾತ್ರವೋ, ಜನರಿಗೂ ಅದರ ಪ್ರಯೋಜನವಿದೆಯೋ, ಎಂಬುದನ್ನು ನಾವಿಂದು ಆಲೋಚಿಸತಕ್ಕ ವಿಷಯ. ನಮ್ಮ ದೃಷ್ಟಿಯಲ್ಲಿ ಇದು ಜನರಿಗೆ ರಜೆಯೆಂದು ತೋರುತ್ತದೆ. ಸಾಮಾನುಗಳನ್ನು ತೆಗೆದುಕೊಳ್ಳುವವರಿಗೆ ರಜೆ. ಆ ರಜಾದಿನದಲ್ಲಿ ಅವಶ್ಯವಾದ ಸಾಮಾನುಗಳಾವುವೂ ದೊರಕಲಿಕ್ಕಿಲ್ಲ.

ದೇವರ ದಯೆಯಿಂದ ಒಂದೆರಡು ಹೊಟೆಲುಗಳಲ್ಲಾದರೂ ಕಾಫಿಯ ಸರಬರಾಯಿ ಹಿಂದಿನ ಬಾಗಿಲಿನಿಂದಾದರೂ ನಡೆಯುತ್ತಲೆ ಇರುತ್ತದೆ. ಅಂಗಡಿಯ ಸಾಹುಕಾರರಿಗೆ ಇದು ಬಹಳ ಅನುಕೂಲ. ಆ ದಿವಸದ ಸೂರ್ಯನು ಮುಳುಗುತ್ತಲೆ ಬೀಡಿ ಬೀಡಾ ಅಂಗಡಿಗಳು ಬಾಗಿಲನ್ನು ತೆರೆದು ವ್ಯಾಪಾರವನ್ನು ನಡೆಸುತ್ತವೆ. ಇದರಿಂದ ಬಹಳ ಉಪಕಾರವಿದೆ. ಆದುದರಿಂದ ಅವಶ್ಯವಾದ ಸಾಮಾನುಗಳಾದರೂ ಸೂರ್ಯನು ಮುಳುಗಿದ ಮೇಲೆ ಲಭಿಸುವುವು. ಇಲ್ಲದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತಿತ್ತು.

ಸಾಹುಕಾರರಿಗೆ ರಜೆಯ ಸಂಪೂರ್ಣ ಪ್ರಯೋಜನವು ಸಿಗುವುದೋ ಎಂಬುದನ್ನು ಅವರೇ ನಮಗೆ ತಿಳಿಸಬೇಕಾದ ವಿಷಯ. ನಮ್ಮೆಣಿಕೆಯಲ್ಲಿ ರಜಾದಿನಗಳೆಂದರೆ ಸಾಧಾರಣವಾಗಿ ಪ್ರತಿ ದಿನ ಮಾಡುವ ಕೆಲಸದ ಎರಡರಷ್ಟು ಕೆಲಸ ಮಾಡುವ ದಿನಗಳು. ಇಷ್ಟನ್ನು ಧೈರ್ಯದಿಂದ ಹೇಳಬಹುದು. ಅಂಗಡಿಗಳಿಗೆ ರಜೆಯಿಲ್ಲ. ಸಾಹುಕಾರರು ಅಂಗಡಿಗೆ ಬೀಗ ಹಾಕಿದ ನಿಮಿಷದಿಂದ, ಜಗುಲಿಯ ಯಜಮಾನಿಕೆಯು ಮನೆಯಿಲ್ಲದವರ ಕೈಸೇರುವುದು. ಹೀಗೆಯೇ ಹೊಸತಾಗಿ ಕಟ್ಟಿಸಿದ ಅಂಗಡಿಗಳ ಸ್ಥಿತಿ. ಬಾಡಿಗೆ ಕೊಡುವ ಸಾಹುಕಾರರು ಅವುಗಳಲ್ಲಿ ಕಾಲಿಡುವ ಮುಂಚೆ ಅವುಗಳ ಮೇಲೆ ಅಧಿಕಾರವು ಒದಗಿರದು. ರಾತ್ರಿಯ ಕಾಲದಲ್ಲೆಲ್ಲ 'ಈ ರಾಜ್ಯಕ್ಕಾರೆಂದು ಕೇಳಿಬಲ್ಲೆ'? ಎಂಬ ಪ್ರಶ್ನೆಯನ್ನು ಕೇಳುವವರೂ ಇಂತಹ ಬಡಜನರೇ. ಆದುದರಿಂದ ಅಂಗಡಿಗಳಿಗೆ ನಿಜವಾಗಿಯೂ ರಜೆಯಿಲ್ಲ.

ನಾನಾ ದಿನಗಳಲ್ಲಿ ಮಾಡುವ ಕೆಲಸಕ್ಕಿಂತ ಇಪ್ಪತ್ತರಷ್ಟು ಹೆಚ್ಚು ಕೆಲಸವನ್ನು ಮಾಡಿ ನಮಗಿಂದು ರಜೆಯೆಂದು ರಜೆಯೆಂಬ ಶಬ್ದದ ಅರ್ಥವು ಅಳಿದು ಹೋಗುವುದು. ಏನೂ ಕೆಲಸಮಾಡದೆ ಇರುವುದೇ ರಜಾದಿನದ ಮುಖ್ಯ ಲಕ್ಷಣ. ಇಂತಹ ಸಂಪೂರ್ಣ ರಜೆ ಯಾವುದೆಂದರೆ ನಮ್ಮ ಗೃಹಿಣಿಯರದು. ಮನೆಯ ಯಜಮಾನರಿಗೆ ಪಾಕಶಾಸ್ತ್ರದಲ್ಲಿ ಪಾಂಡಿತ್ಯವನ್ನೊದಗಿಸಲಿಕ್ಕೆ ಅವರು ತಿಂಗಳಲ್ಲಿ ನಾಲ್ಕು ದಿವಸಗಳ ರಜೆಯನ್ನು ಸಂಪಾದಿಸುವರು. ಆಗ ಅವರು ಯಾವ ಕೆಲಸಕ್ಕೂ ಕೈಹಾಕಬಾರದು. ಯಾರನ್ನೂ ಮುಟ್ಟಬಾರದು. ಇದು ನಿಜವಾಗಿಯೂ ರಜೆ.

ಬ್ಯಾಂಕುಗಳಿಗೆ ರಜೆ ಇರುತ್ತದೆ: ಕ್ಲಾರ್ಕರು ಮಾತ್ರ ಪಂಜರದಲ್ಲಿ ಕುಳಿತುಕೊಂಡ ಗಿಳಿಗಳಂತೆ ಒಳಗೆ ಕೆಲಸಮಾಡುತ್ತಾ ಇರುತ್ತಾರೆ. ಕೋರ್ಟು ಕಚೇರಿಯ ಕ್ಲಾರ್ಕರಿಗೂ ರಜೆಯೆಂದರೆ ಇಂತಹದೇ.

ಗೃಹಿಣಿಯರನ್ನು ಹಿಡಿದು ಗೃಹಸ್ಥರನ್ನು ಬಿಡಲಾಗುವುದಿಲ್ಲ. ನಮ್ಮಲ್ಲೊಬ್ಬ ಗೃಹಸ್ಥರು ಪ್ರತಿವರ್ಷ ಹೆರುವ ಹೆಂಡತಿಗೆ ರಜೆಕೊಟ್ಟು ಪ್ರವಾಸವನ್ನು ಕೈಕೊಂಡು ಎರಡು ವರುಷಗಳು ಕಳೆದ ನಂತರವೆ ಊರಿಗೆ ಮರಳಿದರು. ಆ ವರುಷ ಲೆಕ್ಕಕ್ಕೆ ಕಡಿಮೆಯಾಗದಂತೆ ಹೆಂಡತಿ ಹೆತ್ತ ಮಕ್ಕಳು ಎರಡು; ಎಂದರೆ ಅವಳಿಜವಳಿ ಮಕ್ಕಳು. ರಜೆಯಿಂದ ಪ್ರಯೋಜನವಿದೆಯೆಂಬುದಕ್ಕೆ ಇದೊಂದು ನಿದರ್ಶನ.

ಜನರು ತಿಂಗಳಿಗೆ ಎರಡು ಸಲ ಹೊಟ್ಟೆಗಾದರೂ ರಜೆಯನ್ನು ಕೊಡಲೆಂದು ಪೂರ್ವಜರು ಏಕಾದಶೀ ವ್ರತವನ್ನು ಸ್ಥಾಪಿಸಿದರು. ಆ ಎರಡು ದಿನಗಳಲ್ಲಾದರೂ ಹೊಟ್ಟೆಗೆ ಆರೋಗ್ಯದೃಷ್ಟಿಯಿಂದ ಅತ್ಯಾವಶ್ಯಕವಾದ ರಜೆಯನ್ನು ಜನರು ಕೊಡಬಹುದೆಂದು ಎಣಿಸಿ ಈ ವ್ರತದ ನಿರ್ಧಾರವಾಯಿತು. ಆದರೆ ಏಕಾದಶೀ ದಿನವೆಂದರೆ ಉಪವಾಸದ ದಿನವಲ್ಲ. ಯಾವಾಗಲೂ ತಿನ್ನುವುದಕ್ಕಿಂತ ಎರಡರಷ್ಟು ತಿನ್ನುವುದು ಆ ದಿವಸಗಳಲ್ಲಿಯೇ. ಜನರು ಆ ದಿವಸಗಳಲ್ಲಿ ಹೊಟೆಲುಗಳಲ್ಲಿಯೂ ಮನೆಗಳಲ್ಲಿಯೂ ಏಕರೀತಿಯಾಗಿ ತಿನ್ನುವರು. ಹೊಟೆಲುಗಳಿಗೆ ಆ ದಿನಗಳಲ್ಲಿ ರಜೆಯಿದ್ದರೆ ಜನರಿಗೆ ಅರ್ಧ ಉಪವಾಸದ ವ್ರತವಾದರೂ ಸಾಧ್ಯವಾಗಬಹುದು. ಹೊಟ್ಟೆಗೂ ಹೊಟೆಲಿಗೂ ಹತ್ತಿರದ ಸಂಬಂಧವಿದೆ, ಎಂದರೆ ಹೊಟೆಲನ್ನು ಹೊಟ್ಟೆಯಿರುವ ಜನರೆಲ್ಲ ಹತ್ತುವರೆಂದರ್ಥ. ಹೊಟೆಲಿಲ್ಲದಿದ್ದರೆ ಹೊಟ್ಟೆಯಲ್ಲಿರುವುದು ಇಲಿಯೆ.

ಇನ್ನೊಬ್ಬ ಗೃಹಸ್ಥರು ಮನೆಯಲ್ಲಿ ಯಾವಾಗಲೂ ಊಟಕ್ಕೆ ಸಿದ್ಧವಾಗುವ ಹುಳಿಸಾರವನ್ನು ತಿಂದು ಬೇಸರಹುಟ್ಟಿ ಒಂದು ದಿನಕ್ಕಾದರೂ ಈ ಸಾರಿಗೆ ರಜೆ ಕೊಡಬೇಕೆಂದು ನಿಶ್ಚಯಿಸಿ ನೆಟ್ಟಗೆ ಮಾವಯ್ಯನವರ ಮನೆಗೆ



ಲೇಖಕರು: ಆರ್. ಎಸ್. ಚೂರ್ಯ.

ಸ್ವದೇಶಿ ವಸ್ತುಗಳ ಬಳಕೆ

ಚರ್ಮದ ಸರಕುಗಳು-ಕಾಗದ-ಆಟದ ಸಾಮಾನುಗಳು

ಕಾಗದಕ್ಕೆ ಪರದೇಶಗಳಿಗೆ ರೂ. 270 ಲಕ್ಷ! ಆಟದ ಸಾಮಾನುಗಳಿಗೆ ರೂ. 30 ಲಕ್ಷ!

("ಇರ್ರು ಇಟ್ ಇಂಡಿಯಾ" ಗ್ರಂಥದ ಆಧಾರದಿಂದ)

"ಶಿರಿಯಿಂದ ಮುಡಿಯ ವರೆಗೆ ದೇಶೀಯರಾಗಿರಿ—ಪಾದಗಳಿಗೆ ದೇಶೀಯ ಪಾದುಕೆಗಳನ್ನೇ ತೊಡಿರಿ."

ಇನ್ನೊಮ್ಮೆ ನಾವು ಪಾದರಕ್ಷೆಗಳನ್ನು ಕೊಂಡುಕೊಳ್ಳಲು ಅಂಗಡಿಗೆ ಹೋದಾಗ ಈ ವಿಷಯಗಳು ನಮ್ಮ ಮನಸ್ಸಿನಲ್ಲಿರಬೇಕಾಗಿವೆ. ನಮ್ಮ ಪ್ರಾಂತಕ್ಕೆ ಪರದೇಶದಿಂದ ಸಾಧಾರಣ ೨ ಲಕ್ಷ ರೂಪಾಯಿ ಬೆಲೆಯ ಬೂಟ್ಸುಗಳೂ ಜೋಡುಗಳೂ, ಬೆಲ್ಟ್‌ಗಳೂ, ಬೇಗುಗಳೂ, ಜೀನುಗಳೂ, ಚರ್ಮದಿಂದ ತಯಾರಿಸಲ್ಪಡುವ ಇತರ ಸಾಮಾನುಗಳೂ ಬರುತ್ತವೆ. ಹರಿದುಹೋಗುತ್ತಿರುವ ಹಣದ ಈ ಪ್ರವಾಹವನ್ನು ನಾವು ನಿಲ್ಲಿಸಬೇಕು.

ಹಿಂದೂದೇಶದಲ್ಲಿ, ವ್ಯವಸಾಯವನ್ನು ಬಿಟ್ಟರೆ, ಚರ್ಮ ಹದಗೊಳಿಸುವ ಕೈಗಾರಿಕೆಯು ಅತೀ ಪ್ರಾಚೀನ ಕೈಗಾರಿಕೆಗಳಲ್ಲಿ ಒಂದಾಗಿತ್ತು. ಹಿಂದಿನ ದಿನಗಳಲ್ಲಿ ಒಂದು ಗ್ರಾಮಕ್ಕೆ ಬೇಕಾಗುವಷ್ಟು ಜೋಡುಗಳನ್ನೂ ಚರ್ಮದ ಇತರ ಸಾಮಾನುಗಳನ್ನೂ ಗ್ರಾಮದ ಸಮಗಾರನು ಮಾಡಬೇಕಿತ್ತು. ಅವನು ಅತೀ ಅಗತ್ಯದವನಾಗಿದ್ದನು. ಪ್ರಕೃತದಲ್ಲಿ ಮದರಾಸಿನಲ್ಲಿ ಚರ್ಮ ಕೈಗಾರಿಕೆಯು ಪ್ರಾಮುಖ್ಯ ಕೈಗಾರಿಕೆಗಳಲ್ಲಿ ಒಂದಾಗಿದೆ. ಯೋಗ್ಯತೆಯಲ್ಲಿಯೂ ತಯಾರಿಸುವ ಪ್ರಮಾಣದಲ್ಲಿಯೂ ಪರದೇಶಕ್ಕೆ ಕಳುಹಿಸುವ ಪ್ರಮಾಣದಲ್ಲಿಯೂ, ಮದ್ರಾಸಿನ ಮುಖ್ಯ ಕೈಗಾರಿಕೆಗಳಲ್ಲಿ ಇದು ಒಂದೆಂದು ಈ ವರೆಗೆ ನಿರ್ಣಯಿಸಿದ್ದಾರೆ. [illegible] ಪಾದರಕ್ಷೆಗಳನ್ನು [illegible] ಕೈಗಾರಿಕೆಯು [illegible] ಸಂದೇಹವಿಲ್ಲ. [illegible] ಕೊಂಡುಕೊಳ್ಳುವ ಮೂಲಕ ಹಸಿದಿರುವ ಹಳ್ಳಿಯಗಟ್ಟಲೆ ಸಮಗಾರರಿಗೆ ಸಹಾಯ ಮಾಡಬಹುದಾಗಿದೆ.

ಸ್ವದೇಶಿ ಕಾಗದದ ಉಪಯೋಗ

ಹಿಂದೂದೇಶವು ರೂ. 270 ಲಕ್ಷ ಬೆಲೆಬಾಳುವ ಕಾಗದವನ್ನೂ, ಕಾಗದದಿಂದ ತಯಾರಿಸಿದ ಇತರ ಸಾಮಾನುಗಳನ್ನೂ ಪರದೇಶದಿಂದ ತರಿಸುವುದು. ಮದ್ರಾಸ್ ಸಂಸ್ಥಾನವು 44 ಲಕ್ಷ ರೂಪಾಯಿ ಬೆಲೆಯ ಕಾಗದವನ್ನೂ ಕಾಗದದಿಂದ ತಯಾರಿಸಿದ ಒಡವೆಗಳನ್ನೂ ತರಿಸುತ್ತಿದೆ. ಹೊರಗೆ ಹರಿದು ಹೋಗುವ ಇಷ್ಟು ಧನವನ್ನು ನಿಲ್ಲಿಸಲು ಸಮಯ ಕಳೆಯಬಾರದು. ನಾವು ನಮ್ಮ ಪಾಲಿನ ಕಾರ್ಯವನ್ನು ಇಂದಿನಿಂದಲೇ ಮಾಡಬೇಕು. ಸ್ವದೇಶೀಯ ಕಾಗದವನ್ನೂ ಕಾಗದದಿಂದ ತಯಾರಿಸಿದ ಇತರ ಸಾಮಾನುಗಳನ್ನೂ ಮಾತ್ರ ಕೊಂಡುಕೊಳ್ಳತಕ್ಕದ್ದು. ಕಾಗದ ಕೈಗಾರಿಕೆಗೆ ನಮ್ಮಿಂದ ಕೂಡಿದಷ್ಟು ಶೇರುಗಳ ರೂಪದಲ್ಲಿ ಧನ ಸಹಾಯ ಮಾಡಬೇಕು. ಬಂಗಾಳದಲ್ಲಿ ತಿತಾಘರ್ ಕಾಗದ ಗಿರಣಿ (Titaghar Paper Mills)ಗಳು ಮಾಡುವ ವ್ಯಾಪಾರವು ನಮ್ಮೆಲ್ಲರಿಗೆ ಅಂತಹ ವ್ಯಾಪಾರವನ್ನು ಮಾಡಲು ಧೈರ್ಯ ಕೊಡುತ್ತಿದೆ. ಹೀಗಾದರೆ, ನಮ್ಮ ದೇಶಕ್ಕೆ ಬೇಕಾಗುವಷ್ಟು ಕಾಗದವು ನಮ್ಮ ದೇಶದಲ್ಲೇ ತಯಾರಾಗುವುದು. ವೃದ್ಧಿ ಹೊಂದುತ್ತಲಿರುವ ಮೈಸೂರು ಸಂಸ್ಥಾನವೂ ಕಾಗದ ಕೈಗಾರಿಕೆಯನ್ನು ಸ್ಥಾಪಿಸಿದೆ. ಮೈಸೂರನ್ನು ಅನುಕರಿಸಿ ನಾವು ಮದ್ರಾಸ್ ಸಂಸ್ಥಾನಕ್ಕೆ ಸಹಾಯ ಮಾಡಲಾರೆವೇಕೆ? ತಯಾರಿಸಲು ಬೇಕಾಗುವ ಸಾಮಗ್ರಿಗಳು ಧಾರಾಳವಾಗಿ ನಮ್ಮ ದೇಶದಲ್ಲೇ ದೊರೆಯುತ್ತಿವೆ.

ಕೈಯಿಂದ, ನಮ್ಮ ಪ್ರಾಂತ್ಯದ ಯಾವುದೋ ಒಂದು ಭಾಗದಲ್ಲಿ ಕಾಗದವನ್ನು ತಯಾರಿಸುತ್ತಾರೆ. ಬೋತಾ (Cympogau Colaratus) [illegible] ಹುಲ್ಲುಗಳಿಂದಲೂ. ಕೆಲವು ಜಾತಿಯ ಸಸ್ಯಗಳ ಎಲೆಗಳಿಂದಲೂ ಈ ಕಾಗದವನ್ನು ತಯಾರಿಸುವುದರಿಂದ ಮುಂದಕ್ಕೆ [illegible] ಕೂಡಾ ಇಲ್ಲಿಯೇ ದೊರಕಿಸಿಕೊಳ್ಳಬಹುದೆಂದು ತೋರುತ್ತದೆ. ಕೈಯಿಂದಲೇ ಕಾಗದ ತಯಾರಿಸಿ, ಮನೆಕೈಗಾರಿಕೆಯ ಸ್ಥಾನದಲ್ಲಿ ಈ ಕೈಗಾರಿಕೆಯನ್ನು ತಂದಿಟ್ಟರೆ ಹಿಂದೂದೇಶದ ಹಳ್ಳಿಗಳು ಪುನ ಜೀವಕಳೆಯನ್ನು ಪಡೆಯುವವು.

ಈ ಕೈಗಾರಿಕೆಯನ್ನು [illegible] ಹುಲ್ಲು. ಇತ್ಯಾದಿ ಸಾಮಗ್ರಿಗಳು ನಮ್ಮ ಸಂಸ್ಥಾನದಲ್ಲಿ ಧಾರಾಳ ದೊರೆಯುವುವು.

ನೀವು ದೇಶಭಕ್ತರಾದರೆ ಇನ್ನು ಮುಂದಕ್ಕೆ ಸ್ವದೇಶಿ ಕಾಗದವನ್ನು ಕೊಂಡುಕೊಳ್ಳಿರಿ. ನೀವು ಕೊಂಡುಕೊಳ್ಳುವ ಮೊದಲು [illegible] ಎಂದು ಕೇಳಿರಿ. [illegible] "[illegible] ಕೈಯಿಂದ ತಯಾರಿಸಿದ್ದೇ" ಎಂದು ಪ್ರಶ್ನಿಸಿ.

ಆಟದ ಸಾಮಾನುಗಳು (Toys)

ನಮ್ಮನ್ನು ಹಿಂದೀಯರೆಂದು ಕರೆಯಬೇಕಾದರೆ ಸ್ವದೇಶಿ ವಸ್ತುಗಳನ್ನು ಮಾತ್ರ ಕೊಂಡುಕೊಳ್ಳಬೇಕು. [illegible] ಸಾಮಾನುಗಳೊಡನೇ ಆಡಲಿ. ಪ್ರತಿ ವರುಷವೂ ಆಟದ [illegible] ಬಗ್ಗೆ, ಹಿಂದೂದೇಶದಿಂದ ೩೦ ಲಕ್ಷ ರೂಪಾಯಿಗಳು ಪರದೇಶಗಳಿಗೆ ಹಾರಿ ಹೋಗುತ್ತಿವೆ. ಮದರಾಸಿನಿಂದ ಎರಡು ಲಕ್ಷ ರೂಪಾಯಿಗಳು ಹಾರುತ್ತಿವೆ.

ಪರದೇಶದಿಂದ ಆಟದ ಸಾಮಾನುಗಳು ಈ ದೇಶಕ್ಕೆ ಬಂದು ಬೆಲೆಯಲ್ಲಿ ಬಹಳ ಪೈಪೋಟಿ ನಡಿಸಿ, ಅತೀ ಅಗ್ಗಕ್ಕೆ ದೊರೆಯುವುವಾದರೂ ದೇಶೀಯ ಆಟದ ಸಾಮಾನು ತಯಾರಿಸುವ ಕೈಗಾರಿಕೆಯು ಇನ್ನೂ ಜೀವಿಸುತ್ತಿದೆ. ಇದು ದೇಶೀಯ ಕೈಗಾರಿಕೆಯ ಯೋಗ್ಯತೆಗೆ ಒಂದು ಶಿಫಾರಸಾಗಿದೆ. ತಂಜಾವೂರು, ಪಾಂಡಿಚೇರಿ, ಪಾನ್‌ರೂತಿ ಮುಂತಾದ ಸ್ಥಳಗಳಲ್ಲಿ ಮರದ ಮೆತ್ತಗಿನ ಬೆಂಡಿನಿಂದಲೂ, ಜೇಡಿಮಣ್ಣಿನಿಂದಲೂ ತಯಾರಿಸಿದ ಬೊಂಬೆಗಳನ್ನು ತಿಳಿಯದವರು ನಮ್ಮ ಪ್ರಾಂತದಲ್ಲಿ ಯಾರೂ ಇರಲಾರರು. ಅದರಂತೆ, ಕೊಂಡಪಲ್ಲಿ, ಚನ್ನಪಟ್ಣ ಮತ್ತು ತಿರುಪತಿಗಳಲ್ಲಿ ತಯಾರು ಮಾಡುವ ಮರದ ಆಟದ ಸಾಮಾನುಗಳನ್ನು ನೋಡದವರಿಲ್ಲ.

(೨೫ನೇ ಪುಟದಿಂದ ಮುಂದುವರಿದುದು)

ಸವಾರಿಮಾಡಿದರು. ಆದರೆ ಅಲ್ಲಿಯೂ ಹುಳಿಸಾರು ಅವರ ಬೆನ್ನನ್ನು ಅಥವಾ ಹೊಟ್ಟೆಯನ್ನು ಬಿಡಲಿಲ್ಲ. ಮಾವನ ಮನೆಯ ಮೆಟ್ಟಲನ್ನು ಹತ್ತುವಾಗಲೇ ಹುಳಿಸಾರಿನ ಪರಿಮಳವು ಇವರ ಮೂಗನ್ನು ಸೇರಿತು. ಗೃಹಸ್ಥರು ಇದಕ್ಕೊಂದು ಉಪಾಯವನ್ನು ಕೂಡಲೇ ಕಂಡುಹಿಡಿದರು. ಊಟಕ್ಕೆ ಸಮಯವಾಗುವ ಮುಂಚೆಯೇ ನೀರು ಕುಡಿಯುವ ನೆಪದಿಂದ ಇವರು ಅಡಿಗೆಕೋಣೆಯನ್ನು ಪ್ರವೇಶಿಸಿ ಸಾರಿನ ಪಾತ್ರೆಯನ್ನೆಲ್ಲಾ ಹೊಟ್ಟೆಗೆ ಸುರಿದುಕೊಂಡರು. ಬೇರೆ ಸಾರು ಈಗಲಾದರೂ ತಯಾರಾಗಲಿ ಎಂಬುದು ಅವರ ಆಸೆ. ಮನೆಯವರು ಊಟಕ್ಕಿಂತ ಸ್ವಲ್ಪ ಮುಂಚೆ ಹೋಗಿ ಇನ್‌ಸ್ಪೆಕ್ಷನ್ ಮಾಡಿದಾಗ ಪಾತ್ರೆಯು ಖಾಲಿಯಾದುದು ಅವರ ದೃಷ್ಟಿಗೆ ಬೀಳದಿರಲಿಲ್ಲ. ಸ್ವಲ್ಪ ತನಿಖೆ ಮಾಡಿ ಕಾರಣವನ್ನು ತಿಳಿದುಕೊಂಡು, ಅಳಿಯನಿಗೆ ಸಾರಿನಲ್ಲಿ ಅತಿ ಹೆಚ್ಚು ಪ್ರೀತಿಯೆಂಬುದನ್ನು ಸಹಜವಾಗಿ ಊಹಿಸಿ ತಿರುಗಿ ಇನ್ನೊಂದು ದೊಡ್ಡ ಪಾತ್ರೆಯಲ್ಲಿ ಅದೇ ಹುಳಿಸಾರು ತಯಾರಾಯಿತು.

ಹೀಗೆ ರಜೆಯಿಲ್ಲದ ಸಾಧನಗಳೇ ನಮ್ಮಲ್ಲಿ ಹೆಚ್ಚು. ತಲೆಗೆ ರಜೆಯಿಲ್ಲ; ಕೈಕಾಲು ಬಾಯಿಗಳಿಗೂ ರಜೆಯಿಲ್ಲ. ಮನುಷ್ಯರ ಹೃದಯಕ್ಕೆ ಒಂದು ನಿಮಿಷದ ರಜೆಯಾದರೂ ಇಲ್ಲವೇ ಇಲ್ಲ. ಹೃದಯಕ್ಕೆ ರಜೆಯು ದೊರಕಿದರೆ ಜೀವನದ ಎಲ್ಲಾ ಬಗೆಯ ವ್ಯಾಪಾರಗಳಿಗೂ ಸಂಪೂರ್ಣ ರಜೆ. ಈ ರಜೆ ಯಾರಿಗೂ ಬೇಕೆಂದಿಲ್ಲ.

ನಮ್ಮ ಜಿಲ್ಲೆಯ
ಪ್ರಾಚೀನ ವ್ಯಾಪಾರ ಪರಿಸ್ಥಿತಿ

ನಾವೀಗ ದಕ್ಷಿಣ ಕನ್ನಡವೆಂದು ಕರೆಯುವ ಈ ತುಳು ನಾಡು, ಇತಿಹಾಸದ ಆರಂಭಕಾಲದಿಂದಲೇ ಪ್ರಸಿದ್ಧವಾದ ವ್ಯಾಪಾರದ ಸ್ಥಳವಾಗಿತ್ತು. ಹಿಂದಿನ ಕಾಲದ ಇತಿಹಾಸವನ್ನು ಸ್ಪಷ್ಟವಾಗಿ, ವಿವರವಾಗಿ ತಿಳಿಸುವ ಗ್ರಂಥಗಳು, ಲೇಖನಗಳು ನಮಗೆ ಸಿಗದಿರುವ ಕಾರಣ ಮತ್ತು ಹಿಂದಿನ ಕಾಲದಲ್ಲಿ ಚಾರಿತ್ರಿಕ, ಭೌಗೋಲಿಕ ವಿಷಯಗಳನ್ನು ತಿಳಿಸುವ ಗ್ರಂಥಗಳನ್ನು ಬರೆಯುವುದೇ ಬಹಳ ಅಪರೂಪವಾಗಿದ್ದುದರಿಂದ, ನಾವು ಹಲವು ವಿಚಾರಗಳನ್ನು ಅನಿಶ್ಚಯದ ತಳಹದಿಯ ಮೇಲೆಯೇ ಕಟ್ಟಬೇಕಾಗಿದೆ. ಹೀಗಿದ್ದರೂ, ತುಳುನಾಡು ಸಮುದ್ರಕರಾವಳಿಯಲ್ಲಿರುವ ಪ್ರದೇಶವಾಗಿ, ಇಲ್ಲಿ ನೈಸರ್ಗಿಕ ಬಂದರುಗಳು ಇರುವುದರಿಂದ, ಕರಾವಳಿಯ ದಂಡೆಗಳಲ್ಲಿ ಹಡಗಗಳನ್ನಿಳಿಸಿ, ವ್ಯಾಪಾರಸ್ಥರು ದೂರದ ಬಲುದೂರದ—ದೇಶಗಳಿಗೆ ಹೋಗಿ ವ್ಯವಹಾರ ನಡೆಸುತ್ತಿದ್ದರೆಂದು ತಿಳಿಯಲು ನಮಗೆ ಸಾಕಷ್ಟು ಆಧಾರ, ಇತಿಹಾಸ, ಕಥಾವಳಿಗಳು ದೊರಕುತ್ತವೆ.

ದೇವಪಾಂಡ್ಯನ ಇತಿಹಾಸ

ಕೇರಳ ತುಳುನಾಡುಗಳಲ್ಲಿ ಬಹಳ ಮಟ್ಟಿಗೆ ಪ್ರಬಲವೂ ಪ್ರಸಿದ್ಧವೂ ಆಗಿರುವ "ಅಳಿಯ ಕಟ್ಟು" ಎನ್ನುವ ಕೌಟುಂಬಿಕ ಸಂಪ್ರದಾಯವನ್ನು ಪ್ರಚಾರಕ್ಕೆ ತಂದವನೆಂದು ಕಥೆಗಳಲ್ಲಿ ಪ್ರಸಿದ್ಧನಾದ "ಭೂತಾಳ ಪಾಂಡ್ಯ"ನು ಬಾರಕೂರಿನ ದೊರೆಯಾಗಿದ್ದನು. ಈತನ ಮನೆತನದವರು-ಪಾಂಡ್ಯದೇಶದವರು: ವ್ಯಾಪಾರಸ್ಥರು. ಭೂತಾಳ ಪಾಂಡ್ಯ'ನ ಕತೆಯೇ ಹಡಗವನ್ನು ನೀರಿಗಿಳಿಸುವ ಘಟನೆಯಿಂದ ಆರಂಭವಾಗುತ್ತದೆ. ಪಾಂಡ್ಯದೇಶಕ್ಕೂ ತುಳುನಾಡಿಗೂ ಬೇಕಾದಷ್ಟು ವ್ಯಾಪಾರವು ಹಡಗದ ಮೂಲಕ ನಡೆಯುತಿತ್ತು ಎಂಬುದಕ್ಕೆ ಏನೇನೂ ವಿವಾದವಿಲ್ಲ. ಭೂತಾಳ ಪಾಂಡ್ಯನ ಕತೆಯು ಇಂದೂ ಪ್ರಚಾರದಲ್ಲಿರುವಂತೆ, ಕೇವಲ ಅಳಿಯಕಟ್ಟಿನ ಮೂಲಮಹತ್ವಗಳನ್ನು ತಿಳಿಸುವುದಾದರೂ, ಆ ಕತೆಯು ನಡೆಯಲು ಒದಗಿದ ಮೂಲ ಕಾರಣವು ವ್ಯಾಪಾರವೇ ಆಗಿದೆ. ದೇವಪಾಂಡ್ಯನು (ಭೂತಾಳ ಪಾಂಡ್ಯನ ಮಾವ) ಕ್ರಿಸ್ತಶಕ ಒಂದನೆಯ ಶತಮಾನದಲ್ಲಿದ್ದ ಪಾಂಡ್ಯದೇಶದ ಸುಪ್ರಸಿದ್ಧ ವ್ಯಾಪಾರಿಯೆಂದು ಚರಿತ್ರೆಕಾರರು ಅಭಿಪ್ರಾಯಪಡುತ್ತಾರೆ. ಸಾಧಾರಣ ಎರಡು ಸಾವಿರ ವರ್ಷಗಳ ಹಿಂದೆ ಈ ದೇಶದಲ್ಲಿ ಅಷ್ಟು ಪ್ರಬಲವಾಗಿ ಇತರ ದೇಶದವರಿಗೂ ಆಕರ್ಷವಾಗಿರುವಂತೆ ವಹಿವಾಟುಗಳು ನಡೆಯುತ್ತಿರಬೇಕೆಂದು ನಾವಿದರಿಂದ ತಿಳಿದುಕೊಳ್ಳಬಹುದು. ಆಗ ವ್ಯಾಪಾರವು ರೆಡ್ ಸೀ ಮತ್ತು ಆಫ್ರಿಕದ ಪೂರ್ವ ಕರಾವಳಿಯೊಡನೆಯೂ ಹೆಚ್ಚಾಗಿ ಈಜಿಪ್ತ್ ದೇಶದೊಡನೆಯೂ ನಡೆಯುತ್ತಿದ್ದಿತೆಂದು ಇತಿಹಾಸಗಾರರು ನಿರ್ಧರಿಸಿದ್ದಾರೆ.

ದೇವಪಾಂಡ್ಯನು ತುಳುನಾಡಿಗೆ ಬಂದು, ಬಾರ್ಕೂರಿನಲ್ಲಿ ನೆಲಸಿ, ಅಲ್ಲಿಂದ ಸಮುದ್ರದಲ್ಲಿ ಹಡಗುಗಳನ್ನಿಳಿಸಿ, ಕೆಂಪು ಸಮುದ್ರವನ್ನು ದಾಟಿ ಉತ್ತರ ಭಾಗದಲ್ಲಿರುವ ಈಜಿಪ್ತಿಗೆ ಪ್ರಯಾಣ ಮಾಡಿದನೆಂದು ತಿಳಿದುಬರುತ್ತದೆ. ಈಜಿಪ್ಟಿನ ಬಂದರವಾದ ಬರನಿಸಿನಲ್ಲಿ ಆತನ ಹಡಗಗಳು ಲಂಗರ ಹಾಕಿದುವೆಂದೂ, ರೇವಿನಲ್ಲಿ ನಿಂತಿರುವ ಹಡಗಗಳು ಒಮ್ಮೆ ಸುಂಟರ ಗಾಳಿಯಿಂದ ಆಘಾತಗೊಂಡು ಹಾರಾದುವೆಂದೂ, ಆ ಮೇಲೆ ಪ್ರಕೃತಿಯು ಶಾಂತವಾಗಲು, ಅಲ್ಲಿಂದ ಬೇಕಾದ ಸಾಮಗ್ರಿಗಳನ್ನು ತಮ್ಮ ಹಡಗಗಳಲ್ಲಿ ತುಂಬಿಸಿಕೊಂಡು, ಹಲವು "ಅಮೂಲ್ಯ ಶಿಲೆ"ಗಳನ್ನು ಕೊಂಡುಕೊಂಡು, ಅಲ್ಲಿನ ಜನರಿಂದ ಬಂಗಾರವನ್ನು ತಯಾರಿಸುವ "ಸಿದ್ಧರಸ" ವನ್ನು ಪಡಕೊಂಡು ಮರಳಿ ತುಳುನಾಡಿಗೆ ಬಂದರೆಂದೂ ಐತಿಹ್ಯವಿದೆ. ಈಜಿಪ್ಟ್ ದೇಶದ ಪ್ರಾಚೀನ ಚರಿತ್ರೆಯಲ್ಲಿಯೂ ಈ ಐತಿಹ್ಯಕ್ಕೆ ಆಧಾರಭೂತವಾದ ಅಂಶಗಳು ತೋರಿಬರುವುದರಿಂದ, ಈ ಸಂಗತಿಗಳು ಬರಿಯ ಕಟ್ಟುಕತೆಗಳೆಂದು ನಿರಾಕರಿಸಲು ಸಾಧ್ಯವಿಲ್ಲ.



ಬಾರಕೂರು ಬಂದರ

ಬಾರಕೂರು ಹಿಂದಕ್ಕೆ ತುಳುನಾಡಿನಲ್ಲಿ ಬಹಳ ವಿಭವೋನ್ನತಿಯಿಂದ ಬೆಳಗಿದ ಸ್ಥಳವಾಗಿದೆ. ಅಲ್ಲಿ ಅರಸರು ಸಿರಿಪಟ್ಟವನ್ನೇರಿದ್ದರು. ಅಲ್ಲಿ ಸೈನಿಕರು ತಳವೂರಿದ್ದರು; ಅಲ್ಲಿ ನಾಗರಿಕರು ನೆಲಸಿದ್ದರು; ಅಲ್ಲಿ ವ್ಯಾಪಾರಿಗಳು ಬಂದು ತಂಗಿದ್ದರು; ಅಲ್ಲಿ ಕಲಾವಂತರು ಕೂಡಿದ್ದರು; ಬಾರಕೂರು ಹೀಗೆ ಸರ್ವ ಸಂಪತ್ ಸೌಖ್ಯ ಸಮೃದ್ಧವಾಗಿತ್ತು. ಇಂದು ದೊಡ್ಡ ದೊಡ್ಡ ನಗರಗಳಲ್ಲಿ ಒಂದೊಂದು ಬೀದಿಗಳಿಗೆ ಒಂದೊಂದು ಹೆಸರಿರುವಂತೆ, ಅಲ್ಲಿನ ಕೇರಿಗಳೂ ಜನವಾಸದಿಂದ ನಿಬಿಡವಾಗಿದ್ದು, ಒಂದೊಂದು ವ್ಯವಸಾಯದ ಜನರಿಂದ ಅಲಂಕೃತವಾಗಿತ್ತು. ಈಗಲೂ, ಭಗ್ನವಾದ ಬಾರಕೂರಲ್ಲಿ ವಿಶಾಲವಾದ ರಾಜ ಮಾರ್ಗಗಳನ್ನು ನಾವು ಕಾಣಬಹುದು. ಅಂತಹ ಹಲವು ಕೇರಿಗಳಿಗೆ ವ್ಯಾಪಾರ ಮಾಡುವ ಜನರ ಕೇರಿಗಳೆಂದು ಹೆಸರಿದೆ. ಹೀಗೆ ಮಂಗಳೂರು, ಉಳ್ಳಾಲ, ಕಾಸರಕೋಡು, ಮಂಜೇಶ್ವರ ಇವುಗಳೂ ವ್ಯಾಪಾರದ ಬಂದರಗಳಾಗಿದ್ದುವು.

ಮುಸಲ್ಮಾನರ ಕಾಲದಲ್ಲಿ

ಭಾರತಕ್ಕೆ ಮುಸಲ್ಮಾನರು ಪರ್ಶಿಯಾ ಅರೇಬಿಯಾ ದೇಶಗಳಿಂದ ಬಂದರು; ಬಂದು ಸುಮಾರು ಕ್ರಿಸ್ತ ಶಕದ ಆರನೆಯ ಶತಮಾನದ ಮೇಲೆ ಬಂದನರೆಂದು ತಿಳಿದು ಬರುತ್ತದೆ. ಅವರೂ ಇಲ್ಲಿ ಸುಪ್ರಸಿದ್ಧವಾದ ಬಂದರಗಳಲ್ಲಿ ನೆಲಸಿಕೊಂಡುದ್ದು ಪರದೇಶಗಳೊಡನೆ ವ್ಯಾಪಾರ ನಡೆಸಿದರು. ಆ ಮೇಲೆ ಕೇರಳ ಮತ್ತು ತುಳುನಾಡುಗಳಲ್ಲಿ ಅವರು ಮತಾಂತರ ಕಾರ್ಯವನ್ನು ಪ್ರಾರಂಭಿಸಿ ಅಲ್ಲಲ್ಲಿ ಕೆಲವು ಮಸೀದಿಗಳನ್ನು ಕಟ್ಟಿಸಿದರು. ಹೀಗೆ ಈ ಊರಿನಲ್ಲಿ ಮುಸಲ್ಮಾನರು ಇಲ್ಲಿನ ಜನರಿಂದಲೇ ಮತಾಂತರ ಹೊಂದಿ ಹೆಚ್ಚಾದರು. ಅವರೆಲ್ಲರೂ ಮುಖ್ಯವಾಗಿ ವ್ಯಾಪಾರವನ್ನೇ ತಮ್ಮ ಜೀವನವೃತ್ತಿಯಾಗಿ ಮಾಡಿಕೊಂಡರು. ಹೀಗಾಗಿ ಅವರಿಗೆ ಬೇರ (ವ್ಯಾಪಾರ) ಮಾಡುವವರಾದುದರಿಂದ 'ಬ್ಯಾರಿ'ಗಳು ಎಂಬ ಹೆಸರು ಬಂತೆಂದು ಹಲವರು ಹೇಳುತ್ತಾರೆ. ಬ್ಯಾರಿಗಳು ಎಂದರೆ ತುಳುನಾಡಿನಲ್ಲಿ ಮುಸಲ್ಮಾನರಿಗೆ ಇರುವ ಹೆಸರು.

ಕ್ರಿಸ್ತಶಕ ಹದಿನಾಲ್ಕನೆಯ ಶತಮಾನದಲ್ಲಿ ಇಬನ್ ಬತೂತನೆಂಬವನು ಇಲ್ಲಿಗೆ ಬಂದಿದ್ದನು. ಅವನು ತನ್ನ ಬರಹದಲ್ಲಿ, ಆತನು ಬಂದಾಗ, ಇಲ್ಲಿ ಪರ್ಶಿಯಾ ಮತ್ತು ಅರಬಿಸ್ತಾನದ ಹಲವು ಮಂದಿ (4000) ವ್ಯಾಪಾರಸ್ಥರಾದ ಮುಸಲ್ಮಾನರು ಇದ್ದರೆಂದು ಬರೆದಿರುವನು. ಆ ಮೇಲೆ 16ನೆಯ ಶತಮಾನದಲ್ಲಿ ಈ ದೇಶಕ್ಕೆ ಬಂದಿದ್ದ ಬಾರಬೋಸನು, ಏಡನ್ ಮೊದಲಾದ ಕಡೆಯ ವ್ಯಾಪಾರಿಗಳಾದ ಹಲವು ಮಂದಿ ಮುಸಲ್ಮಾನರು ಇಲ್ಲಿದ್ದರೆಂದೂ ಬರೆದಿರುವನು. ಈ ಮುಸಲ್ಮಾನರು ಮೈಸೂರಿನ ಹೈದರಾಲಿ ಟಿಪ್ಪುಸುಲ್ತಾನರ ಕಾಲದಲ್ಲಿ ಬಹಳ ಪ್ರಬಲರಾದ ವ್ಯಾಪಾರಸ್ಥರಾದರು. ಹೀಗೆ ಈ ಊರಿಗೆ ಬಂದ ಮುಸಲ್ಮಾನರು ಮತ್ತು ಮತಾಂತರ ಹೊಂದಿದವರು ಇಲ್ಲಿ ಬಹಳ ಜೋರಾಗಿ ವ್ಯಾಪಾರ ನಡೆಸಿ ನಮ್ಮ ಜಿಲ್ಲೆಯಲ್ಲಿ ಇಂದೂ ವ್ಯಾಪಾರದಲ್ಲಿ ಬಹಳ ಪ್ರಸಿದ್ಧರಾಗಿರುವರು. ಈ ನಾಡಿನಲ್ಲಿಯೇ ಹುಟ್ಟಿ ಬೆಳೆದವರು ಕೃಷಿಕರೇ ಆಗಿ ಇಂದೂ ಇರುವರು. ಇಲ್ಲಿಗೆ ಹೊರಗಿಂದ ಬಂದವರು, ಹೆಚ್ಚಾಗಿ ವ್ಯಾಪಾರಿಗಳಾಗಿಯೇ ಪ್ರಸಿದ್ಧರಾದರು. ಹೀಗೆ ಅನ್ಯೋನ್ಯ ಸಹಕಾರದಿಂದ ಜೀವನ ಸೌಕರ್ಯವು ಬೆಳೆಯಿತು.

ಪೋರ್ಚುಗೀಸರ ಕಾಲದಲ್ಲಿ

ಆ ಮೇಲೆ ಪಾಶ್ಚಿಮಾತ್ಯ ವ್ಯಾಪಾರಸ್ಥರ ದಂಡು, ಅಖಿಲಭಾರತವನ್ನು ಮುತ್ತಿ ಬಂದಂತೆ ಈ ನಾಡನ್ನೂ ಬಿಡಲಿಲ್ಲ. ಅವರಲ್ಲಿ ಮೊಟ್ಟಮೊದಲು ಇಲ್ಲಿಗೆ ಬಂದವರು ಸುಮಾರು ಕ್ರಿ. ಶ. ಹದಿನೈದನೆಯ ಶತಮಾನದಲ್ಲಿ ಪೋರ್ಚುಗೀಸರು. ಅವರು ಕೇವಲ ವ್ಯಾಪಾರವನ್ನು ಮಾತ್ರ ಮಾಡಿ ಹಣ ಕೂಡಿಸುವುದರಲ್ಲಿಯೇ ತೃಪ್ತರಾಗದೆ, ಊರನ್ನೇ ತಮ್ಮ ಸ್ವಾಧೀನಮಾಡಲು ಹವಣಿಸಿದರು. ಬಾರಕೂರು ತುಳುನಾಡಿನ ಪ್ರಮುಖ ಪಟ್ಟಣವಾಗಿರುವುದರಿಂದ ಮೊದಲಾಗಿ ಅದನ್ನೆ ತಮ್ಮ ಕೈವಶ ಮಾಡಿಕೊಳ್ಳಲು ಅವರು ಕಾದಾಡಿದರು.

(೨೧ನೇ ಪುಟಕ್ಕೆ ಮುಂದುವರಿಸಿಯದೆ.)



ಸಕ್ಕರೆ ಮಿಠಾಯಿಗಳು ಮತ್ತು ಇತರ ತಿಂಡಿಗಳು

ನಮ್ಮ ದೇಶದಲ್ಲೇ ತಯಾರಾದ ಬಿಸ್ಕೂಟುಗಳನ್ನು ಉಪಯೋಗಿಸಿರಿ

(ಲೇಖಕರು:—ಶ್ರೀ. ಕೆ. ರಾಧಾಕೃಷ್ಣ ಭಟ್)

ಇನ್ನು ಮುಂದಕ್ಕೆ ನಾವು ಸಕ್ಕರೆ, ಸಕ್ಕರೆ ಮಿಠಾಯಿ, ಪೆಪ್ಪರಮಿಂಟು ಮುಂತಾದುವುಗಳನ್ನು ಸ್ವದೇಶದವುಗಳನ್ನೇ ಕೊಂಡುಕೊಂಡು ಸಕ್ಕರೆ ಕೈಗಾರಿಕೆಗೆ ಎಷ್ಟು ಬೆಂಬಲವು ಅವಶ್ಯವಿದೆಯೋ, ಅಷ್ಟು ಬೆಂಬಲವನ್ನು ನಾವು ಕೊಟ್ಟರೆ ನಮ್ಮ ಸಂಸ್ಥಾನಕ್ಕೆ ಬೇಕಾಗುವಷ್ಟು ಸಕ್ಕರೆಯನ್ನೂ, ಮಿಠಾಯಿಗಳನ್ನೂ, ನಮ್ಮಲ್ಲೇ ತಯಾರು ಮಾಡಬಹುದು.

ಪ್ರತಿ ವರುಷ ನಮ್ಮ ದೇಶದಿಂದ ಸಕ್ಕರೆ ಮತ್ತು ಸಕ್ಕರೆಯಿಂದ ತಯಾರಾದ ಇತರ ತಿಂಡಿಗಳಿಗಾಗಿ, 58 ಲಕ್ಷಕ್ಕಿಂತ ಹೆಚ್ಚು ರೂಪಾಯಿ ಪರದೇಶಕ್ಕೆ ಹೋಗುತ್ತಿದೆ. ಇದರಲ್ಲಿ ನಮ್ಮ ಪ್ರಾಂತ್ಯದ ಭಾಗವು ಸಾಧಾರಣ 6 ಲಕ್ಷವಾಗುತ್ತದೆ. ದೇಶೀಯ ಕೈಗಾರಿಕೆಯಲ್ಲಿಯೇ ಈ ಅಪಾರ ಹಣವು ವ್ಯಯವಾಗುತ್ತಿದ್ದರೆ, ಈಗ ಕೆಲಸ ಇಲ್ಲದೆ ಅಥವಾ ಕೆಲಸ ಇದ್ದು ಜೀವನಕ್ಕೆ ಸಾಕಾಗದೆ ಇಂದೋ ನಾಳೆಯೋ ಎರಡನೆಯವನ ಇಚ್ಛೆಗೆ ಸರಿಯಾಗಿ ಕೆಲಸ ಕಳಕೊಳ್ಳುವ ಎಷ್ಟು ಮಂದಿಗೆ ಉದ್ಯೋಗ ದೊರೆಯುತ್ತಿತ್ತು! ಇದರ ಬದಲು ನಾವು ಅವರ ಗೊಡವೆಗೆ ಹೋಗದೆ, ಪರದೇಶದ ಜನರ ಕಿಸೆಗೆ ದುಡ್ಡನ್ನು ಸುರಿಯುತ್ತೇವೆ. ಸ್ವದೇಶಿ ಮಹಾಲುಗಳ ಮೇಲೆ ವ್ಯಯಮಾಡಿದ ಹಣವು ನಮ್ಮ ಜನರ ಕೈಯಲ್ಲೇ ಉಳಿಯುವುದು. ನಮ್ಮ ನಾಡಿನಲ್ಲೇ ಚಲಾವಣೆಯಾಗುವುದು. ನಮ್ಮ ಜನರ ಉಪಯೋಗಕ್ಕೆ ಬೀಳುವುದು. ದೇಶದ ಸಂಪತ್ತು ಹೆಚ್ಚುವುದು.

ಸಕ್ಕರೆ ಮತ್ತು ಸಕ್ಕರೆಮಿಠಾಯಿ ತಯಾರಿಸುವ ಕೈಗಾರಿಕೆಗಳನ್ನು ನಮ್ಮ ಶೈಶವಾವಸ್ಥೆಯಲ್ಲಿಯೇ ಇವೆ. ನಮ್ಮೆಲ್ಲರ ಬೆಂಬಲ ಮತ್ತು ಆಧಾರವಿದ್ದರೆ, ಈ ಕೈಗಾರಿಕೆಗಳು ತ್ವರಿತದಿಂದ ವೃದ್ಧಿ ಹೊಂದುವುವು. ನಮ್ಮ ಪ್ರಾಂತದಲ್ಲಿ ಈ ಕೈಗಾರಿಕೆಗಳಿಂದ ಸಾವಿರಕ್ಕಿಂತ ಹೆಚ್ಚು ಜನರಿಗೆ ವರುಷದ ಎಲ್ಲಾ ದಿನಗಳಲ್ಲಿ ಕೆಲಸ ದೊರೆಯುತ್ತದೆ. ಇತರ ಸಮಯದಲ್ಲಿ ಕೆಲಸ ಹೆಚ್ಚು ಇರುವಾಗ 2500 ರಕ್ಕಿಂತಲೂ ಹೆಚ್ಚು ಜನರಿಗೆ ವೃತ್ತಿ ದೊರೆಯುತ್ತದೆ. ನಮ್ಮೆಲ್ಲರ ಆಧಾರವು ಈ ಕೈಗಾರಿಕೆಗೆ ಸದಾ ಇದ್ದರೆ ಇನ್ನಷ್ಟು ಸಾವಿರ ಜನರಿಗೆ ಸುಖಜೀವನವನ್ನೂ ಉಪಯೋಗದ ಜೀವನವನ್ನೂ ಒದಗಿಸಿಕೊಡಬಹುದು. ನಾವೆಲ್ಲರೂ ಉದಾರ ಮನಸ್ಸು ಮಾಡಬೇಕು. ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಸಾಧಾರಣ 60 ಲಕ್ಷ ರೂಪಾಯಿಯನ್ನು ಈ ದೇಶದಲ್ಲಿ ಉಳಿಸಿ. ದೇಶವನ್ನು ಶ್ರೀಮಂತಿಕೆಯಿಂದ ತುಂಬಿಸಿರಿ. ನೆಲ್ಲಿಕುಪ್ಪಮ್, ಸಾಮಲ್‌ಕೋಟ್, ಮತ್ತು ಕುಂಭಕೋಣಮ್ ಈ ಸ್ಥಳಗಳಲ್ಲಿ—ಈ ಕೈಗಾರಿಕೆಯ ಕಾರ್ಖಾನೆಗಳಿವೆ.

(೨೭ನೇ ಪುಟದಿಂದ ಮುಂದುವರಿದುದು.)

ಬಿಸ್ಕಿಟುಗಳು

ನಮ್ಮ ದೇಶದ ಎಲ್ಲ ಪ್ರಾಂತ್ಯಗಳಲ್ಲಿನ ಬಿಸ್ಕಿಟ್ ಕಾರ್ಖಾನೆಗಳಲ್ಲಿ ಬಿಸ್ಕಿಟುಗಳೂ ರೊಟ್ಟಿಗಳೂ ರಬ್ಬಾಗಿ ತಯಾರಾಗುತ್ತವೆ. ಇತರ ಕಡೆಗಳಲ್ಲಿ ಚಿಲ್ಲರೆಯಾಗಿ ತಯಾರು ಮಾಡುತ್ತಾರೆ. ಇದನ್ನು ಒಂದು ಮನೆ ಕೈಗಾರಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ನಮ್ಮ ಪ್ರಾಂತದಲ್ಲಿ ಇದನ್ನು ತಯಾರಿಸಲು ಬೇಕಾದ ಸಾಮಗ್ರಿಗಳೆಲ್ಲಾ ದೊರೆಯುತ್ತವೆ. ಈ ಕೈಗಾರಿಕೆಯನ್ನು ವೃದ್ಧಿಸಬಹುದು. [illegible] ನಮ್ಮೆಲ್ಲರ ಆಧಾರವೂ, ಪ್ರೋತ್ಸಾಹವೂ ಬೇಕಾಗಿದೆ. ನಮ್ಮ ದೇಶ 27 ಲಕ್ಷ ರೂಪಾಯಿಗಿಂತಲೂ ಹೆಚ್ಚು ಬೆಲೆ ಬಾಳುವ ಬಿಸ್ಕಿಟುಗಳನ್ನು ರೊಟ್ಟಿಗಳನ್ನೂ ಹೊರದೇಶದಿಂದ ಪ್ರತಿ ವರುಷ ತರುತ್ತಾರೆ. ಇದರಲ್ಲಿ ನಮ್ಮ ಸಂಸ್ಥಾನವು [illegible] ಲಕ್ಷ ರೂಪಾಯಿ ಬೆಲೆಬಾಳುವಷ್ಟು ರೊಟ್ಟಿಯನ್ನು ಬಿಸ್ಕಿಟುಗಳನ್ನು ತರಿಸುತ್ತಿದೆ. ಸ್ವದೇಶಿ ಬಿಸ್ಕಿಟುಗಳನ್ನೂ ರೊಟ್ಟಿಯನ್ನೂ ಕೊಂಡುಕೊಂಡು ಇಷ್ಟು ಹಣವನ್ನು ನಮ್ಮ ದೇಶದಲ್ಲಿಯೇ ಉಳಿಸಬಹುದು.

ಶಿಶು ಆಹಾರ (Malted foods)

ಕೊಯಮುತ್ತೂರಿನ ಕೃಷಿ ಸಂಶೋಧನಾಲಯ (Agricultural Research Institute)ವು ಅತೀ ಅಗ್ಗ ಮತ್ತು ಅನುಕೂಲತೆಯ ರೀತಿಯಲ್ಲಿ ಜೋಳದಿಂದ ಚಿಕ್ಕ ಮಕ್ಕಳಿಗೆ ಬೇಕಾಗುವ ಆಹಾರವನ್ನು ತಯಾರಿಸುವ ವಿಧಾನವನ್ನು ಕಂಡು ಹಿಡಿದಿದೆ. ಮನೆಯಲ್ಲಿ ಹೆಂಗಸರು ಕೂಡಾ ಅತಿ ಸುಲಭದಲ್ಲಿ ಈ ಆಹಾರವನ್ನು ತಯಾರಿಸಬಹುದು. ರಬ್ಬ ಕಟ್ಟಲೆಯಲ್ಲಿ ತಯಾರಿಸಬೇಕಾದರೆ ಫೆಕ್ಟರಿಯಲ್ಲಿ ಅದೇ ಕ್ರಮದಲ್ಲಿ ತಯಾರಿಸಬಹುದು. ಜೋಳದಿಂದ ಅತೀ ಸುಲಭದಲ್ಲಿ ಈ ಆಹಾರವನ್ನು ತಯಾರಿಸಬಹುದು. ಈ ಪ್ರಾಂತವು ಪ್ರತಿ ವರುಷ 13 ಲಕ್ಷ ರೂಪಾಯಿ ಬೆಲೆ ಬಾಳುವ ಇಂತಹ ಆಹಾರಗಳನ್ನೂ ರೋಗಿಗಳಿಗೆ ಕೊಡುವ ಆಹಾರವನ್ನೂ ಪರದೇಶದಿಂದ ತರಿಸುವುದೆಂದು ನಿಮಗೆ ಗೊತ್ತಿದೆಯೇ? ನೀವು ತಿಳಿದಿದ್ದರೆ ಈ ಕೈಗಾರಿಕೆಯನ್ನು ಪ್ರಾರಂಭಿಸಲು ಪ್ರಯತ್ನಿಸಿರಿ. ಇದು ನಿಮ್ಮ ಕರ್ತವ್ಯ. ನಿಮ್ಮ ಶಿಶುಗಳನ್ನು ಪೋಷಿಸಲು [illegible] ಈ ಆಹಾರವನ್ನು ತಯಾರಿಸಿರಿ. ಮನೆಯಲ್ಲಿ ತಯಾರಿಸಿದ ಆಹಾರವು ಪರದೇಶದಿಂದ ತರಿಸಿದ ಆಹಾರದಷ್ಟೇ ಉತ್ತಮವಾಗಿದೆ. ಅಲ್ಲದೆ ಅಗ್ಗವೂ ಆಗುತ್ತದೆ.

ಆ ಕಾಲದಲ್ಲಿ ನಮ್ಮ ಈ ನಾಡಿನ ಸಮುದ್ರ ಕರಾವಳಿಯು ಮುಸಲ್ಮಾನ ವ್ಯಾಪಾರಿಗಳಾದ ಅರಬೀಮೂರರ ಸ್ವಾಧೀನವಿದ್ದುದರಿಂದ, ಹೊಸತಾಗಿ ವ್ಯಾಪಾರಕ್ಕೆ ಬಂದ ಪೋರ್ಚುಗೀಸರಿಗೂ ಅರಬಿಮೂರರಿಗೂ ಅನ್ಯೋನ್ಯ ವೈಷಮ್ಯವು ಹುಟ್ಟಿತು. ಪೋರ್ಚುಗೀಸರು ಆಗ ಈ ರಾಜ್ಯವನ್ನು ಆಳುತ್ತಿದ್ದ ವಿಜಯನಗರದ ಇಮ್ಮಡಿ ನರಸಿಂಹನಿಂದ, ಒಂದೊಂದು ಬಂದರದಲ್ಲಿ ಒಂದೊಂದು ಭಂಡಸಾಲೆಯನ್ನು ಕಟ್ಟಿಸಲು ಅನುಮತಿ ಪಡೆದುಕೊಂಡರು. ಅಂತೂ ಅವರು ಕ್ರಮೇಣ ಪ್ರಬಲರಾಗಿ, ಈ ಜಿಲ್ಲೆಯಲ್ಲಿ ಪ್ರಬಲರಾಗಿ ವ್ಯಾಪಾರ ನಡೆಸುತ್ತಿದ್ದ ಮುಸಲ್ಮಾನರನ್ನು ಹಿಂದಕ್ಕೆ ದೂಡಿದರು.

ಮತ್ತೆ ಪೋರ್ಚುಗೀಸರು 16ನೇ ಶತಮಾನದ ಪ್ರಾರಂಭದಲ್ಲಿ ಮಂಗಳೂರು ಬಂದರವನ್ನು ಸ್ವಾಧೀನಪಡಿಸಿಕೊಂಡರು. ಆ ಸಮಯದಲ್ಲಿ ಮುಸಲ್ಮಾನರು ಕಾದಾಡಿ ಸೋತುಹೋದರು. ಪೋರ್ಚುಗೀಸರು ವ್ಯಾಪಾರದ ಪ್ರಾಮುಖ್ಯತೆಯನ್ನು ಪಡೆದು, ಬಂದರು ಬಂದರುಗಳನ್ನು ವಶಮಾಡಿ ಅವುಗಳಲ್ಲಿ ಸುಂಕಗಳನ್ನು ವಸೂಲು ಮಾಡಿಕೊಂಡರು. ಇಲ್ಲಿನ ರಾಜರೂ ಅರಸು ಸಾಮಂತರೂ ಅವರಿಗೆ ವರ್ಷಂಪ್ರತಿ ಇಂತಿಷ್ಟು ಮುಡಿ ಅಕ್ಕಿಯನ್ನು ಕೊಡಬೇಕೆಂದು ವಿಧಿಸಲಾಗಿತ್ತು.

ಆದರೆ ಪೋರ್ಚುಗೀಸರಿಗೆ ಇಲ್ಲಿ ಸ್ವಸ್ಥವಾಗಿ ಇರುವುದಾಗಲಿಲ್ಲ. ಅಲ್ಲಲ್ಲಿನ ಅರಸು ಸಾಮಂತರು ಆಗಾಗ ಉಪಟಳ ಕೊಡುತ್ತಿದ್ದರು. ಅರಬಿಮೂರರು ಇವರಿಗೆ ಸಹಾಯ ಕೊಡುತ್ತಿದ್ದರು. ನೆರೆಕರೆಯ ಮಲಬಾರಿನ ರಾಜರೂ ಈ ಸಂದರ್ಭದಲ್ಲಿ ತಮ್ಮ ಶಕ್ತಿಯನ್ನು ತೋರಿಸದೆ ಬಿಡಲಿಲ್ಲ. ಕೊನೆಗೆ 1671ರಲ್ಲಿ ಇಕ್ಕೇರಿಯವರಿಗೂ ಪೋರ್ಚುಗೀಸರಿಗೂ ಒಂದು ಕರಾರು ನಡೆದು ಕೆಲಕಾಲ ಸುವ್ಯವಸ್ಥೆ ನೆಲಸಿತು. ಪೋರ್ಚುಗೀಸರೇ ವ್ಯಾಪಾರದ ಸರ್ವಾಧಿಪತಿಗಳಾದರು. ಆದರೆ ಮುಂದೆ ಕೆಲವು ಸಮಯಗಳಲ್ಲಿ ಫ್ರೆಂಚರು ಮತ್ತು ಆಂಗ್ಲೇಯರು ಪೋರ್ಚುಗೀಸರಂತೆ ವ್ಯಾಪಾರಕ್ಕಾಗಿ ಈ ನಾಡಿಗೆ ಕಾಲಿಡಲು, ಪೋರ್ಚುಗೀಸರ ಭದ್ರತೆಯು ನಡಿಯುತ್ತ ಬಂತು. ಕೊನೆಗೆ ಪೋರ್ಚುಗೀಸರಿಗೆ ಇಲ್ಲಿ ಯಾವದೊಂದೂ ಸ್ಥಳವಿಲ್ಲದೆ ಅವರು ಇಲ್ಲಿಂದ ತಳಕಿತ್ತು ಓಡಿಹೋಗಬೇಕಾಗಿ ಬಂತು.

ಆಂಗ್ಲೇಯರ ಅಧಿಕಾರ

ಟಿಪ್ಪುವನ್ನು ಗೆದ್ದ ಮೇಲೆ ಆಂಗ್ಲೇಯರೇ ಈ ಜಿಲ್ಲೆಯ ಸರ್ವಸ್ವವನ್ನೂ ಸ್ವಾಧೀನಪಡಿಸಿಕೊಂಡರು. ಆ ಮೇಲೆ ಈ ಜಿಲ್ಲೆಯಲ್ಲಿ ನಡೆದ ವ್ಯಾಪಾರ ಮತ್ತು ಇತರ ಸಂಗತಿಗಳಿಗೆ ಸಾಕಷ್ಟು ಚಾರಿತ್ರಿಕ ಆಧಾರಗಳು ದೊರಕುತ್ತಿವೆ. ಇದಕ್ಕೆ ಹಿಂದಿನ ಕಾಲದಲ್ಲಿಯೇ ಈ ನಾಡಿನಲ್ಲಿ ಅಕ್ಕಿ, ಒಳ್ಳೆಯಮೆಣಸು, ಏಲಕ್ಕಿ, ಗಂಧ ಇವುಗಳ ಧಾರಾಳ ವ್ಯಾಪಾರವು ದೇಶ ವಿದೇಶಗಳೊಡನೆ ನಡೆದುಬರುತ್ತಿತ್ತು. ಅಡಿಕೆಯ ವ್ಯಾಪಾರವು ಬಹುಕಾಲದ ಹಿಂದಿನಿಂದಲೇ ಇರಬೇಕೆಂದು ತಿಳಿದರೂ ಅದರ ವಿಶೇಷ ಅಭಿವೃದ್ಧಿಯು ಇತ್ತೀಚೆಗೇ ಆದುದು. ಇಂದು ಪ್ರಸಿದ್ಧವಾಗಿರುವ ಹಂಚಿನ ಕೈಗಾರಿಕೆಯೂ ಇತ್ತೀಚೆಗೆ ಅಭಿವೃದ್ಧಿ ಹೊಂದಿದ ಕೈಗಾರಿಕೆಯಾಗಿದೆ. ಇಲ್ಲಿ ಖನಿಜಗಳೂ, ರತ್ನಗಳೂ ದೊರಕುತ್ತಿದ್ದುವೆಂದು ಇತಿಹಾಸಕಾರರು ಉಲ್ಲೇಖಿಸಿರುವರು. ಹೀಗೆ ಬಹುಕಾಲದಿಂದಲೇ ಈ ನಾಡು ಸಂಪತ್ಸಮೃದ್ಧವಾದ ಒಳ್ಳೆಯ ವ್ಯಾಪಾರ ಕೇಂದ್ರವಾಗಿತ್ತು.

—Rai.

ತಮ್ಮ ಹಾನಿಗೆ ತಾವೇ ಕಾರಣ ರಾಗುತ್ತಿರುವ ಕರ್ಣಾಟಕದ ವರ್ತಕರು

(ಲೇಖಕರು:—ಶಂ. ಭಾ. ಜೋಶಿ)



ವಾಣಿಜ್ಯವೇ ರಾಜ್ಯದ ತಳಹದಿ. ಈಗಿನ ಯುದ್ಧ-ಒಪ್ಪಂದಗಳು ನಡೆದುದು ರಾಜ್ಯ ವಿಸ್ತಾರಕ್ಕಲ್ಲ; ಮುಖ್ಯವಾಗಿ ವ್ಯಾಪಾರದ ಅಭಿವೃದ್ಧಿಗಾಗಿ. ಬ್ರಿಟಿಷರಿಗೆ ಹಿಂದುಸ್ತಾನವು ಬೇಕಾದುದು ಬರಿ ರಾಜ್ಯವಿಸ್ತಾರದ ಹಂಬಲಕ್ಕಾಗಿಯಲ್ಲ; ವಾಣಿಜ್ಯ ವ್ಯವಹಾರದ ಬಲದಿಂದ ತಮ್ಮ ನಾಡಿಗೆ ಹಿಂದೂದೇಶದ ಹೊನ್ನಿನ ಹೊಳೆಯನ್ನು ಹರಿಸಿಕೊಳ್ಳುವುದಕ್ಕಾಗಿ.

ಇಂದೆಯಾಗಲಿ, ಹಿಂದೆಯಾಗಲಿ, ಎಂದೆಂದೂ ದುಡ್ಡಿದ್ದವನೇ ದೊಡ್ಡಪ್ಪ. ದುಡ್ಡಿನ ಹಿರಿಮೆಯನ್ನು ಹೇಳುವ ಗಾದೆಗಳೂ ಸಲ್ಲಾಪು (ಸುಭಾಷಿತ)ಗಳೂ ಎಲ್ಲ ಭಾಷೆಗಳಲ್ಲೂ ಉಂಟು. ಆದರೂ ಕನ್ನಡದಲ್ಲಿ ಸಾಹುಕಾರಿಕೆಯನ್ನು ಮಾಡುವವರಿಗೆ, ಚಿನ್ನವಳರಿಗೆ 'ನಾಯಕ'ರು ಎಂದಿರುವ ಹೆಸರು ಬಹಳ ಅರ್ಥಪೂರ್ಣವಾಗಿದೆ. ಸಮಾಜದ ನೇತಾರರು ಯಾರು? ದುಡ್ಡಿದ್ದವರು; ಇವರೇ 'ನಾಯಕರು'!

ಹಿಂದೂದೇಶದ ನಾಯಕತ್ವವು ಬಂಗಾಳಿಗಳು, ಗುರ್ಜ್ಜರರು ಸಂಯುಕ್ತಪ್ರಾಂತೀಯರುಗಳ ಕಡೆಗೇ ಪ್ರಾಮುಖ್ಯದಿಂದಿರುವುದಕ್ಕೆ ಕಾರಣವೇನು? ಪ್ರಾಂತೀಯರು ಪಡೆದ ಶ್ರೀ ಮಹಾಲಕ್ಷ್ಮಿಯ ಪ್ರಸನ್ನತೆಯೇ ಅವರ ಮುಂದಾಳುತನಕ್ಕೆ ಮುಖ್ಯವಾದ ತಳಹದಿಯಾಗಿದೆ.

ಕರ್ಣಾಟಕವು ಒಂದು ಕಾಲಕ್ಕೆ ಲಕ್ಷ್ಮಿಯ ತವರುಮನೆಯಾಗಿದ್ದರೂ ಇಂದು ಇದು ಬಡತನದ ಬೀಡು ಆಗಿದೆ. ಹಂಪಿಯ ವರ್ಣನೆಯಂತೆ ಆಗಿನ ಕರ್ಣಾಟಕದ ವರ್ತಕರ ಉಪ್ಪರಿಗೆಗಳು (ಪರದರ ಮನೆಗಳವು ಧನದನ ಮನೆಯನು ಏಳಿಪವು) ಕುಬೇರನ ಮಂದಿರವನ್ನೂ ಹೀಯಾಳಿಸುತ್ತಿದ್ದುವು! ಗ್ರೀಸ ದೇಶದೊಡನೆ ಕನ್ನಡ ವರ್ತಕರು ತುಂಬ ವ್ಯಾಪಾರ ವ್ಯವಹಾರಗಳನ್ನು ನಡೆಸುತ್ತಿದ್ದರೆಂಬುದು ಕ್ರಿ. ಶ ೨ನೆಯ ಶತಮಾನದ ಒಂದು ಗ್ರೀಕ ಪ್ರಹಸನದಿಂದಲೇ ಸಿದ್ಧವಾಗುತ್ತದೆ. ಅಲೆಕ್ಸಾಂಡ್ರಿಯಾದಲ್ಲಿ ಕನ್ನಡ ಜನರ ಒಂದು ವಸಾಹತು ಇರಲಿಕ್ಕೂ ಸಾಕು ಎಂದು ಸುಪ್ರಸಿದ್ಧ ಸಂಶೋಧಕರಾದ ಶ್ರೀಮಾನ್ ಗೋವಿಂದ ಪೈಗಳವರು ಧೈರ್ಯದಿಂದ ಹೇಳುತ್ತಿರುವುದು ತುಂಬ ವಿಶ್ವಾಸಾರ್ಹವಾಗಿದೆ.

ಈ ಬಗೆಯ ಸಾಹಸಿಕರಾದ ವರ್ತಕರು ಈ ನಾಡಿನಲ್ಲಿದ್ದುದರಿಂದಲೇ ಕನ್ನಾಡ ವೈಭವವು ಆಸೇತು ಹಿಮಾಚಲವನ್ನು ಒಂದು ಕಾಲಕ್ಕೆ ಬೆರಗುಗೊಳಿಸಿತು. ಲಕ್ಷ್ಮಿಯಿರುವಲ್ಲಿಯೇ ಶ್ರೀ ವಿಷ್ಣುವೂ ನೆಲಸಲು ಬಂದುಬಿಡುವನೆಂದು ನಮ್ಮ ಪುರಾತನರು ಹೇಳುವ ಮಾತು ಅತ್ಯಂತ ಸತ್ಯವಾಗಿದೆ. ಸಂಪತ್ತು ಇರುವಲ್ಲಿಯೇ ಸ್ವಾಮಿತ್ವವು ಬರುವುದು. ಸ್ವಾಮಿತ್ವವೆಂದರೇ ಅರಸುತನ, ಪಟ್ಟ.

ಹಿಂದೂದೇಶದಲ್ಲಿ ತಾವೂ ಮಾನವಂತರಾಗಿ ಮೇಲ್ಮೆಯಿಂದ ಬಾಳಿ ಬದುಕಬೇಕೆಂಬ ಹಂಬಲವುಳ್ಳ ಈ ನಾಡಿಗರು ಲಕ್ಷ್ಮಿಯನ್ನು ಒಲಿಸಿಕೊಳ್ಳುವುದು ಮೊದಲ ಕೆಲಸವಾಗಿದೆ. ಲಕ್ಷ್ಮಿಯು ಹೆದ್ದಾರಿ ಉದ್ಯೋಗ—ವ್ಯಾಪಾರ. ನಮ್ಮ ವರ್ತಕರು ತಮ್ಮ ವ್ಯಾಪಾರದ ಅಭಿವೃದ್ಧಿಮಾಡಬೇಕಾಗಿರುವ ಅನೇಕ ಪೂರ್ವಸಿದ್ಧತೆಗಳಲ್ಲಿ ಕರ್ಣಾಟಕತ್ವದ ಭಾವನೆಯುಳ್ಳವರಾಗುವುದು ಆದ್ಯ ಕರ್ತವ್ಯವಾಗಿದೆ. ಬಂಗಾಳ ವಣಿಕ್ ಸಂಘ, ಗುಜರಾತಿ ವರ್ತಕ ಸಂಘಗಳು ತಮ್ಮ ಭಾಗದ ವರ್ತಕ ರಅಭ್ಯುದಯಕ್ಕಾಗಿ ಅಖಂಡವಾಗಿ ಹೋರಾಡುತ್ತವೆ. ಆದರೆ ಕರ್ಣಾಟಕದಲ್ಲೇನಿದೆ? ಇಲ್ಲಿಯ ವರ್ತಕರು ಅನಾಥರೇ ಈ ವಿಷಯದಲ್ಲಿ!

ಕರ್ಣಾಟಕಕ್ಕೆ ಪರ ಪ್ರಾಂತೀಯ ವರ್ತಕರು ಬಂದು ಇಲ್ಲಿಯ ಸಂಪತ್ತನ್ನು ತಮ್ಮ ನಾಡಿಗೆ ಒಯ್ಯುವರು. ಅವರ ಧನವಂತಿಕೆಯ ಲಾಭವು ಈ ನಾಡಿನ ಜನಗಳಿಗಾಗಲಿ, ಸಂಸ್ಥೆಗಳಿಗಾಗಲಿ ಏನೂ ದೊರೆಯುವುದಿಲ್ಲ. ಮಾರವಾಡಿಗಳೂ, ಕಚ್ಚಿಗಳೂ ಈ ಮಾತಿಗೆ ಸಾಕ್ಷಿ.

ಕರ್ಣಾಟಕಸ್ಥರು ಸಂಯೋಜನೆಯ ಕಾರ್ಯದಲ್ಲಿ, ಸಂಘಟನೆಯ ಕೆಲಸದಲ್ಲಿ ಯಾವ ಪ್ರಾಂತ್ಯಕ್ಕಿಂತಲೂ ಹಿಂದೆ ಇರುವರೆಂಬುದು ನಾನು ಎಂದೂ ಒಪ್ಪಲಾರೆ. ಅಖಿಲ ಭರತಖಂಡದ ಸಂಘಟನೆಯನ್ನು ಮಾಡಿ ಹಿಂದುಸ್ಥಾನೀ ಸೇವಾದಲವನ್ನು ನಿರ್ಮಾಣ ಮಾಡಿದ ಶ್ರೇಯಸ್ಸು ನಮ್ಮ ಡಾ. ಹರಡೀಕರರಿಗೆ ಇದೆ. ಎಲ್ಲ ಪ್ರಯಾಣಿಕರನ್ನೂ ಬೆರಗುಗೊಳಿಸುವಂತೆ ಒಳ್ಳೆ ಶಿಸ್ತಿನಿಂದಲೂ ಪ್ರಾಮಾಣಿಕ ರೀತಿಯಿಂದಲೂ ಸಿ. ಪಿ. ಸಿ. ಕಂಪೆನಿಯನ್ನು ಸೈಲಿನವರಿಗಿಂತಲೂ ಹೆಚ್ಚು ದಕ್ಷತೆಯಿಂದ ನಡಿಸಿರುವ ಕರ್ತೃತ್ವಶಾಲಿಗಳು ನಮ್ಮಲ್ಲಿದ್ದಾರೆ. ಹಾಗಾದರೆ ನಮ್ಮಲ್ಲಿರುವ ಕೊರತೆ ಅದಾವುದು?

ಇನ್ನೂ ರೂಪುಗೊಳ್ಳಲಿರುವ ನವಭಾರತವು ಬಂಗಾಲ, ಬಿಹಾರ, ಮಹಾರಾಷ್ಟ್ರ, ಆಂಧ್ರ, ತಮಿಳು ಈ ಬಗೆಯಾದ ಹೊಸ ಬಗೆಯ ಪ್ರಾಂತಗಳ ಅಡಿಗಲ್ಲ ಮೇಲೆ ನಿಲ್ಲತಕ್ಕುದಿದೆ. ಬಂಗಾಲ, ಮಹಾರಾಷ್ಟ್ರಗಳಂತಹ ಪ್ರಾಂತಗಳು ನವಭಾರತದ ಈ ಗತಿಯ ಮಾರ್ಗವನ್ನು ಮುಂಗಂಡು ತಮ್ಮ ಪ್ರಾಂತಗಳು ಭಾರತದ ಹಿತಕ್ಕೆ ಪೋಷಕವಾಗುವಂತೆ ಸ್ವಯಂಪರಿಪೂರ್ಣವಾಗಲು ಹೆಣಗುತ್ತಲಿವೆ. ಈ ಕಾರ್ಯಕ್ಕೆ ಅಲ್ಲಿಯ ವರ್ತಕರೂ ತಮ್ಮ ಧನಸಹಾಯವನ್ನು ಬಹುಗ್ಗಿಯಿಂದ ಮಾಡುತ್ತಲಿದ್ದಾರೆ. ಮತ್ತು ಅಲ್ಲಿಯ ಮುಖಂಡರು ಆಯಾ ಪ್ರಾಂತ್ಯದ ವಾಣಿಜ್ಯ ವ್ಯವಹಾರಗಳಿಗೆ ಉತ್ತೇಜನ ದೊರೆಯುವಂತೆ ತಮ್ಮ ವರ್ಚಸ್ಸನ್ನು ಉಪಯೋಗಿಸುತ್ತಿದ್ದಾರೆ.

ಸರ್. ಪಿ. ಸಿ. ರೇ ಅವರು ಖಾದೀಕೊಂಡರೆ ಬಂಗಾರದ ಖಾದೀಕೊಳ್ಳಿರಿ. ಅದು ದೊರೆಯದಿದರೆ ನಮ್ಮ ನೇಕಾರರು ನೆಯ್ದ ಗಿರಣಿನೂಲಿನ ಬಟ್ಟೆಕೊಳ್ಳಿರಿ—ಆದರೆ ಮುಂಬೈ ಬಟ್ಟೆ ಅಗ್ಗ ಸಿಕ್ಕಿದರೂ ಅದನ್ನು ಕೊಳ್ಳಬೇಡಿರೆಂದು ಉಪದೇಶಿಸುತ್ತಾರೆ!

ಶ್ರೀ ನರಸಿಂಹ ಚಿಂತಾಮಣಿ ಕೇಳಕರಂತಹ ರಾಜಕೀಯ ಮುಂದಾಳು ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆ, ಮಹಾರಾಷ್ಟ್ರದ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ, ಮಹಾರಾಷ್ಟ್ರದ ವನಿತಾ ಸಭೆಗಳಿಗೆ ಡೈರೆಕ್ಟರರಾಗಿ ಕೆಲಸ ಮಾಡುತ್ತಾರೆ. ನಮ್ಮ ರಾಜಕೀಯ ಮುಖಂಡರಿಗೆ-ಸಂಕುಚಿತ ರಾಜಕಾರಣ, ಲೋ. ಬೋ. ಚುನಾವಣೆಗಳ ಹೊರತು ಹೊರಗಿನ ಕ್ಷೇತ್ರವೇ ಗೊತ್ತಿಲ್ಲ! ನಮ್ಮ ವರ್ತಕರಲ್ಲಿ 10ರಲ್ಲಿನ ಒಬ್ಬನಿಗೆ ಕರ್ಣಾಟಕ—ಏಕೀಕರಣ ಎಂದರೆ ಏನು ಎಂಬ ಅರಿವಿಲ್ಲ! ನಮ್ಮ ಕಾರವಾರಕ್ಕೆ ಒಂದು ಕಾಗದದ ಕಾರ್ಖಾನೆ ತೆರೆಯಬೇಕೆಂದರೆ ಮಹಾರಾಷ್ಟ್ರೀಯರು ತಮ್ಮ ದುಡ್ಡು ಹಾಕಲು ಮುಂದೆ ಬಂದರು; ಆದರೆ ಕನ್ನಡಿಗರು ಜಡಭರತರಾಗಿ ಕೈಲಾಗದೆ ಸುಮ್ಮನೆ ಕುಳಿತರು!

ಕರ್ಣಾಟಕದಲ್ಲಿ ಪರ ಪ್ರಾಂತೀಯರ ದುಡ್ಡುಬಂದು ಸೇರಿದರೆ ಇಲ್ಲಿಯವರು ಬರಿ ಅವರ ಕೂಲಿಗಳಾಗಿ ಬಾಳಬೇಕಾಗುವುದೆಂಬ ಎಚ್ಚರವೂ ನಮ್ಮವರಿಗೆ ಇರಲಾರದೇ?

ಇದಕ್ಕಾಗಿ ನಮ್ಮ ವರ್ತಕರು ಬೇಗನೆ ಕಣ್ತೆರೆದು ತಮ್ಮಲ್ಲಿ ಪರಪ್ರಾಂತೀಯ ಬಂಡವಾಳಗಾರರು ಕೈಸೇರಿಸದಂತೆ ಈಗಿನಿಂದಲೇ ಎಚ್ಚರದಿಂದಿರುವುದು ಕರ್ತವ್ಯವಾಗಿದೆ.

ಕನ್ನಡ ಜನಸಾಮಾನ್ಯರಲ್ಲಿ ಕರ್ಣಾಟಕದ ಅಭಿಮಾನವನ್ನು ಹುಟ್ಟಿಸುವದಕ್ಕೆ—ಏಕೀಕರಣ ಚಳವಳಿಯ ಕಡೆಗೆ ವರ್ತಕರು ತಮ್ಮ ಬೆಂಬಲವನ್ನಿತ್ತರೆ ಅದರಿಂದ ನಮ್ಮ ವರ್ತಕರಿಗೇ ಲಾಭವಿದೆ

ಈಗ 'ಪ್ಲಾಯ್'ವುಡ್ಡಿ'ನ ಒಂದು ಕಂಪೆನಿ ಹೊರಡಲಿದೆ: ಕಾಗದದ ಕಾರಖಾನೆ, ಸಕ್ಕರೆ ಕಾರಖಾನೆ ಮುಂತಾದುವುಗಳು ದೊಡ್ಡ ಪ್ರಮಾಣದಲ್ಲಿ ಹೊರಡುವತಿವೆ. ಅವುಗಳಿಗೆಲ್ಲ ಜನಸಾಮಾನ್ಯರು ಮನಮುಟ್ಟಿ ನೆರವಾಗಬೇಕಾಗಿದ್ದರೆ—ನಮ್ಮ ನಾಡಿನ ಜನಸಾಮಾನ್ಯರ ಬೆಂಬಲದಿಂದ ತಮ್ಮ ಕಾರಖಾನೆಗಳನ್ನು ಊರ್ಜಿತ ಸ್ಥಿತಿಗೆ ತರಬೇಕಾಗಿದ್ದರೆ, ನಮ್ಮ ವರ್ತಕರೂ ಭಂಡವಾಳಗಾರರೂ ಕರ್ಣಾಟಕದ ಅಭಿಮಾನಿಗಳಾಗಬೇಕು. ಜನರಲ್ಲಿ ಈ ಅಭಿಮಾನವು ಭಾರತಹಿತಕ್ಕೆ ಪೋಷಕವಾಗುವ ರೀತಿಯಲ್ಲಿ ಬೇರೂರುವುದಕ್ಕೆ ನೆರವಾಗಬೇಕು. ಇಲ್ಲವಾದರೆ ನಮ್ಮ ವರ್ತಕರು ನಮ್ಮ ಹಾನಿಗೆ ತಾವೇ ಕಾರಣರಾಗದೆ ಇರಲಾರರು.

ಮುಂಬೈ, ಮದರಾಸಿನ ಅನುಭವವಿದ್ದ ದೂರದರ್ಶಿ ವರ್ತಕರಿಗೆ ಈ ಮಾತಿನ ಅನುಭವವು ಬಂದಿರಲಿಕ್ಕೆ ಸಾಕು. ಮದರಾಸಿನಲ್ಲಿ ತಮಿಳರೂ, ಆಂಧ್ರರೂ ಪ್ರಬಲರಾಗಿ ಕರ್ಣಾಟಕದ ವರ್ತಕರ ಹಿತಸಂಬಂಧಗಳ ಸಂರಕ್ಷಣೆಗಳನ್ನು ದುರ್ಲಕ್ಷಿಸುವವರು. ಮುಂಬೈಯಲ್ಲಿ ಗುಜರಾತಿ, ಮರಾಠಿಗಳು ಕರ್ಣಾಟಕದವರಿಗೆ ಮುಂದಡಿಯಿಡಲು ನೆರವಾಗರು.

ಆದುದರಿಂದ ನಮ್ಮಲ್ಲಿಯವರು ತಾವು ಮುಂದಕ್ಕೆ ಬರಬೇಕೆಂದು ಹಂಬಲಿಸುತ್ತಿದ್ದರೆ ತಮ್ಮ ಏಳ್ಗೆಯನ್ನು ತಾವೇ ಮಾಡಬೇಕು. ನಾವು ನೆಲಸಿನಿಂತ ಈ ಕರ್ಣಾಟಕದ ಅಭಿಮಾನದ ಬೀಜಮಂತ್ರವನ್ನು ಜಪಿಸಿ ತಮ್ಮ ಉನ್ನತಿಯನ್ನು ತಾವು ಮಾಡಿಕೊಳ್ಳುವುದೇ ಲೇಸಲ್ಲವೇ?



ಬುಂದಿಯ ಅರಮನೆಯ ಹೊರನೋಟ.

ಹರ ನೃಪತಿಗಳ ಮಹಾನಗರ
ಬುಂದಿ ಸಂಸ್ಥಾನದ ಪರಿಚಯ
'ವೀರರ ತವರುಮನೆ'

ರಜಪುತಾನದ ಬುಂದಿ ಸಂಸ್ಥಾನವನ್ನು ಕುರಿತು ಬಲ್ಲವರು ತೀರ ವಿರಳ. ಪ್ರತಾಪಿಗಳಾದ ರಜಪೂತ ಅರಸರು ಇಲ್ಲಿ ಆಳಿರುವರು. ಅವರ ಪೂರ್ವ ಚರಿತ್ರವು ಅನೇಕ ವೀರಕಥೆಗಳನ್ನು ತಿಳಿಸಬಲ್ಲುದು. ಆ ಸಂಸ್ಥಾನದ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

ಬುಂದಿ ಸಂಸ್ಥಾನ ಎಂದೊಡನೆ ಮೈಯು ಜುಮ್ಮೆನಿಸಿ, ವೀರಾವೇಶವು ನಮ್ಮ ನರನಾಡಿಗಳಲ್ಲಿ ಹೊಮ್ಮುವುದು. ಹಿಂದೆ ಅಲ್ಲಿ ಆಳಿದ ಹರವಂಶದ ರಜಪೂತರ ನೆನಪು ಮಿಂಚಿನಂತೆ ನಮ್ಮ ಮನಸ್ಸಿಗೆ ಎರಗಿಬಿಡುವುದು. ಇಲ್ಲಿ ನಿಂತಿರುವ ಕೋಟೆಕೊತ್ತಳಗಳು, ಗುಡಿಗೋಪುರಗಳು, ಅರಮನೆ ಮಂಟಪಗಳು ಪ್ರಾಚೀನ ವೈಭವವನ್ನು ಸಾರಿ ಹೇಳುತ್ತವೋ ಎಂಬಂತೆ ತೋರುತ್ತದೆ. ತಾರಾಘಡ್ ಎಂಬ ಬೆಟ್ಟದ ಮೇಲಿನ ಕೋಟೆ—ಪಟ್ಟಣದ ಆವರಣಗಳು-ಹಳೆಯ ಕಟ್ಟಡಗಳು. ಇವುಗಳೆಲ್ಲಾ—ಮೀನಾ ಎಂಬ ದರೋಡೆಕಾರರ—ಕುಲೀನ ವಂಶದ ರಜಪೂತರ, ಸೂರೆಗೊಳ್ಳುವುದರಲ್ಲಿ ನಿಪುಣರಾದ ಮರಾಠರ—ಚರಿತ್ರೆಯನ್ನು ನಮಗೆ ಹೇಳುವಂತೆ ತೋರುತ್ತದೆ.

ಬುಂದಿ ರಾಜಧಾನಿಯು ಯಾರ ಶೃಂಗಾರಕ್ಕೂ ಎಡೆಗೊಡಲು ಕಟ್ಟಲ್ಪಟ್ಟಂತಿದೆ. ಈ ರಾಜಧಾನಿಯಲ್ಲಿ ಆಳಿದ ಮಹಾಪುರುಷರು ತಮ್ಮ ಹೆಸರು ಚಿರಸ್ಥಾಯಿಯಾಗಿ ನಿಲ್ಲಲೆಂದು, ಎಷ್ಟೋ ಅರಮನೆಗಳನ್ನೂ, ದೇಗುಲಗಳನ್ನೂ, ಗೋಪುರಗಳನ್ನೂ ನಿರ್ಮಿಸಿರುತ್ತಾರೆ. ಇವರೆಲ್ಲ ಶಿಲ್ಪಕಲಾದೇವತೆಯ ಅದ್ವಿತೀಯ ಭಕ್ತರಾಗಿದ್ದರೆನ್ನಬಹುದು.

ಬುಂದಿಯ ಶಿಲ್ಪಮಯ ಲೋಕದಲ್ಲಿ, ಸಮುದ್ರಮಟ್ಟದಿಂದ 1400 ಅಡಿ ಎತ್ತರವಿರುವ ಬೆಟ್ಟದ ಮೇಲೆ ನಿಂತಿರುವ ಅರಮನೆಯೇ ಅತೀ ಸುಂದರವಾದುದು. ಬುಂದಿಯ ಅರಸರಿಗೆ ಶಿಲ್ಪಕಲೆಯಲ್ಲಿರುವ ಅಭಿರುಚಿಯು ಈ ನಿರ್ಮಾಣದಲ್ಲಿ ಪೂರ್ಣತೆಯನ್ನು ಹೊಂದಿದೆ. ಈ ಅರಮನೆಯು ಬುಂದಿ ರಾಜಧಾನಿಯ ರಕ್ಷಣೆಯ ಹೊರೆಯನ್ನು ಹೊತ್ತ ಕೊತವಾಲನಂತಿದೆ.

ಬುಂದಿಯು, ಬುಂದಿ ಸಂಸ್ಥಾನದ ರಾಜಧಾನಿಯಾಗಿದೆ; 600 ವರ್ಷಗಳ ಹಿಂದೆ ಹರವಂಶದ ರಾಜನಾದ ರಾವ್‌ದೇವನು ಈ ರಾಜಧಾನಿಯನ್ನು ಸ್ಥಾಪಿಸಿದನು. ಅಜಮೀರದಿಂದ ಇಲ್ಲಿಗೆ 100 ಮೈಲು ದೂರವಿದೆ; ಕೋಟಾದಿಂದ ಬರೇ 20 ಮೈಲು ದೂರವಿದೆ. ಸುತ್ತುಮುತ್ತಲು ಎತ್ತರವಾದ ಗುಡ್ಡಗಳಿವೆ. ಅಲ್ಲಿ ಮರಗಳು ಧಾರಾಳವಾಗಿ ಬೆಳೆದಿವೆ. ಈ ಪ್ರದೇಶಕ್ಕೆ ಒಂದು ಕಣಿವೆಯಿಂದಲೇ ಬರಬೇಕಾಗುತ್ತದೆ. ರಾಜಧಾನಿಯ ಹೆಬ್ಬಾಗಿಲಿನ ಹತ್ತಿರ ಬರುವ ವರೆಗೆ ಯಾವ ದೃಶ್ಯಗಳೂ ಕಣ್ಣಿಗೆ ಬೀಳುವುದಿಲ್ಲ. ಇಲ್ಲಿಗೆ ಬಂದ ಕೂಡಲೇ ಯಾವುದೋ ಒಂದು ಹೊಸ ಸೃಷ್ಟಿಯು ಪ್ರೇಕ್ಷಕರ ಮುಂದೆ ಬಂದು ನಿಂತಂತೆ ಕಾಣುತ್ತದೆ.

ಕಿಪ್ಲಿಂಗ್ ಕವಿಯು ಅತ್ತ ಸಂಚರಿಸಿ ಬಂದಾಗ, "ಬುಂದಿಯ ಅರಮನೆಯು, ಸೆಮಿರಾಮಿಸ್‌ನ ತೂಗು ತೋಟದಂತಿದೆ" ಎಂದು ಹೊಗಳಿದ್ದಾನೆ.

ಈ ಅರಮನೆಯ ಬಳಿಯಲ್ಲಿ ನವಾಲ್ ಸಾಗರ ಎಂಬ ಸರೋವರವಿದೆ. ಒಂದು ಅಂತಸ್ತಿನ ಮೇಲೆ ಮತ್ತೊಂದು ಅಂತಸ್ತು, ಕಟ್ಟೋಣದ ಮೇಲೆ ಕಟ್ಟೋಣ, ಮಾಳಿಗೆಯ ಮೇಲೆ ಮಾಳಿಗೆ—ಈ ರೀತಿಯಲ್ಲಿ ಅದೇ ಮನೆಯು ಬಹಳ ಎತ್ತರವಾಗಿದೆ.

ಕಡಿದಾಗಿ ಅಂಕುಡೊಂಕಾದ ಒಂದು ದಾರಿಯು ಅರಮನೆಯ ಹೆಬ್ಬಾಗಿಲಿಗೆ ಬಂದು ಮುಟ್ಟಿದೆ. "ತಾಂಜಾನ್" ಎಂಬ ವಾಹನದಲ್ಲಿ ಕೂತುಕೊಂಡು ಪ್ರವಾಸಿಗಳು ಮೇಲಕ್ಕೇರಬಹುದು. ಇದನ್ನು ಮನುಷ್ಯರೇ ಹೊತ್ತುಕೊಂಡು ಹೋಗುತ್ತಾರೆ.

ಹೀಗೆ ಮೇಲಕ್ಕೆ-ಆನೆ ಬಾಗಿಲು (Elephant gateway) ಇರುವಲ್ಲಿ ವರೆಗೆ ಹೋಗಬಹುದು. ಪ್ರಾಚೀನ ಕಾಲದಲ್ಲಿ ಜಲಯಂತ್ರವು (water clock) ಇದ್ದ ಸ್ಥಳ ಇದೇ ಆಗಿರುತ್ತದೆ.

ರಜಪುತಾನದಲ್ಲಿ, ಇಲ್ಲಿಯ ಯುದ್ಧಸಾಮಗ್ರಿಗಳೇ ಅತೀ ಶ್ರೇಷ್ಠ ತರಗತಿಯವೆಂದು ಜನರು ಹೇಳುತ್ತಾರೆ. ಆಧುನಿಕ ಮತ್ತು ಪ್ರಾಚೀನ ಕಾಲದ ಹಲವು ತರದ ಆಯುಧಗಳನ್ನು ಇಲ್ಲಿ ಸಂಗ್ರಹಿಸಿ ಇಟ್ಟಿದ್ದಾರೆ. ಭಯಂಕರ ಮೀಸೆಗಳನ್ನು ಇರಿಸಿದ, ದೊಡ್ಡ ದೊಡ್ಡ ಅಂಗಿಗಳನ್ನು ತೊಟ್ಟ' ಹಳದಿ ಬಣ್ಣದ ಮುಂಡಾಸುಗಳನ್ನು ಹೊತ್ತ, ರಜಪೂತರು ಇದರ ರಕ್ಷಣೆಯನ್ನು ಮಾಡುತ್ತಾರೆ.

ಮತ್ತೊಂದು ಅಂಗಣದಲ್ಲಿ ಖಗೋಳ ವಿಜ್ಞಾನ (Astronomy)ಕ್ಕೆ ಸಂಬಂಧಿಸಿದ ಉಪಕರಣಗಳ ಸಂಗ್ರಹವಿದೆ. ಮತ್ತೊಂದು ಕೋಣೆಯಲ್ಲಿ ಬೆಳ್ಳಿಯ ಕುರ್ಚಿಗಳಿವೆ. ಈ ಕೋಣೆಯ ಗೋಡೆಗಳಲ್ಲಿ ಉತ್ತಮ ಚಿತ್ರಗಳಿವೆ.

ಮಾಳಿಗೆಗಳ ಅಂತಸ್ತುಗಳನ್ನು ಏರುತ್ತಾ ಹೋದ ಮೇಲೆ ಕೊನೆಗೆ ಒಂದು ಬೋಳು ಮಾಳಿಗೆ (Terrace) ಗೆ ಬರಬೇಕಾಗುತ್ತದೆ. ಇಲ್ಲಿ ಒಂದು ಹೂವನ ಇದೆ. ಬಳಿಯಲ್ಲೇ ಒಂದು ಮಂಟಪವಿದೆ. "ಚಿತ್ರಶಾಲೆ" ಎಂದು ಇದನ್ನು ಕರೆಯುತ್ತಾರೆ. ಈ ಮಂಟಪದ ಗೋಡೆಗಳ ಮೇಲೆ ಶ್ರೀ ಕೃಷ್ಣನ ಜೀವನ ಚಿತ್ರಗಳಿವೆ; ಹರವಂಶದ ಅರಸರ ಚರಿತ್ರೆಗೆ ಸಂಬಂಧಪಟ್ಟ ಚಿತ್ರಗಳಿವೆ.

ಈ ಉದ್ಯಾನವನದ ಸುತ್ತಲಿರುವ ಆವರಣದ ಹತ್ತಿರ ನಿಂತು ಕೆಳಗೆ ನೋಡಿದರೆ, ಅಂಕುಡೊಂಕಾದ ದಾರಿಯೂ, ಕೆಳಗಿರುವ ನವಾಲ್ ಸಾಗರ ಎಂಬ ಸರೋವರವೂ ಪಟ್ಟಣವೂ ಕಾಣುವುದು. ಆದರೆ ಧೈರ್ಯವಿದ್ದವರು ಮಾತ್ರ ಇದನ್ನು ನೋಡಬಹುದು.

ಪಟ್ಟಣದಿಂದ ಸಾಧಾರಣ ೩ ಮೈಲು ದೂರದಲ್ಲಿರುವ "ಶಿಕಾರ್ ಬುರ್ಜ್" ಎಂಬ ಸ್ಥಳವು ನೋಡತಕ್ಕದಾಗಿದೆ. ಇದರ ಕಟ್ಟೋಣವನ್ನು 1748ರಲ್ಲಿ ಬುಂದಿ ಸಂಸ್ಥಾನದ ರಾಜರಲ್ಲಿ ಧೀರನಾದ ಉಮೇದ ಸಿಂಗನು ಕಟ್ಟಿಸಿದನು. ಉತ್ತಮವಾದ ಕಲ್ಲುಗಳಿಂದಲೇ ಇದು ಕಟ್ಟಲ್ಪಟ್ಟಿದೆ. ಉಮೇದ ಸಿಂಗನು ಧ್ಯಾನಕ್ಕೆ ಕುಳಿತುಕೊಳ್ಳಲು ಈ ಕಟ್ಟಡವನ್ನು ರಚಿಸಿದ್ದನು. ಇಲ್ಲಿಯೂ ಒಂದು ಹೂವಿನ ತೋಟವಿದೆ. ಇಲ್ಲಿಯೊಂದು ಹನುಮಂತನ ದೊಡ್ಡ ವಿಗ್ರಹವಿದೆ. ಪ್ರವಾಸಿಗಳ ಹೆದರಿಕೆಯಿಲ್ಲದೆ, ಮಂಗಗಳು ಇಲ್ಲಿ ಹಾರುತ್ತ, ಆಡುತ್ತ ಇರುತ್ತವೆ. ಪ್ರವಾಸಿಗಳು ಕೊಟ್ಟ ತಿಂಡಿ ತಿಂದು ಈ ಮಂಗಗಳು ಬಹಳ ಸೊಕ್ಕುತ್ತವೆ.

ಇನ್ನೂ ಕೆಲವು ಮುಖ್ಯ ಸ್ಥಳಗಳಿವೆ. 2½ ಶತಮಾನದ ಹಿಂದೆ ನತವತ್‌ಜಿ ರಾಣಿಯು ಕಟ್ಟಿಸಿದ ಮೆಟ್ಟಲ ಬಾವಿ-ರಾಜಮನೆತನದ ಸ್ಮಶಾನ, ಅಲ್ಲಿ ರಾಜಮನೆತನದವರ ಸ್ಮಾರಕಾರ್ಥವಾಗಿ ಕಟ್ಟಿಸಿದ ಛತ್ರಗಳು—ಚಂಬಾಲ ನದಿಯ ದಡದಲ್ಲಿರುವ ದೇವಸ್ಥಾನ—ಕಾಶಿಯ ಘಾಟಿಗಳಂತಿರುವ ಇಲ್ಲಿಯ ಘಾಟಿಗಳು—ಫೂಲ್‌ಸಾಗರ್ ಮತ್ತು ಹಿಂಡೊಲಿಯಲ್ಲಿರುವ ಅರಮನೆಗಳು—ಉಮೇದ ಸಿಂಗನ ಹೆಸರುವಾಸಿಯಾದ ಕುದುರೆ ಹುಂಜಾದ ಪ್ರತಿಮೆ—ಇವುಗಳನ್ನೆಲ್ಲಾ ನೋಡಬೇಕಾದುದು ಅಗತ್ಯವಾಗಿದೆ.

ಇಲ್ಲಿ ಆಳಿದ ಹರವಂಶದ ಅರಸರು ರಜಪೂತ ವಂಶಕ್ಕೆ ಸೇರಿದವರು; ವೀರವಂಶದವರು. 1342ರ ವರೆಗೆ ಮೀನಾ ಎಂಬ ದಂಗೆಕೋರರು ಇಲ್ಲಿ ಆಳುತ್ತಿದ್ದರು. ಬುಂದನೆಂಬುದು ಅವರ ಮುಖಂಡನ ಹೆಸರು. ಅವನ ಹೆಸರಲ್ಲೇ ಈ ಪಟ್ಟಣವು ಬುಂದಿ ಪಟ್ಟಣವಾಯಿತು.

ಅನಂತರ ರಾವ್‌ದೇವನೆಂಬ ಹರವಂಶದ ರಾಜಕುಮಾರನು ಇವರನ್ನು ಗೆದ್ದು, ತಾನು ರಾಜ್ಯವಾಳಿದನು. 1554ರಲ್ಲಿ ಚಕ್ರವರ್ತಿಯಾದ ಅಕ್ಬರನು ಬುಂದಿ ಸಂಸ್ಥಾನದೊಡನೆ ಬಂದು ಒಪ್ಪಂದ ಮಾಡಿಕೊಂಡನು. ಅಂದಿನಿಂದ ಬುಂದಿಯ ರಾಜರು ಚಕ್ರವರ್ತಿಗಳಿಗೆ ವಿಧೇಯರಾಗಿ ನಡೆಯುತ್ತಿದ್ದರು. ಮರಾಠರೂ ಇದಕ್ಕೆ ಹಾವಳಿ ಮಾಡಿದ್ದಾರೆ. ಮೇವಾರ ಸಂಸ್ಥಾನವೂ ಹಗೆತನದಿಂದ ಇದರೊಂದಿಗೆ ಕಾದಿದೆ. ಅಂತೂ ಯುದ್ಧಗಳೆಂದರೆ ಆಗಿನ ದಿನನಿತ್ಯದ ಘಟನೆಗಳಾಗಿದ್ದುವು.

ಬುಂದಿ ಅರಸನಾದ ರಾವ್ ಬುದ್ ಸಿಂಗನನ್ನು ಉದಯಪುರದ ಅರಸನಾದ ರಾಜಾ ಜಯಸಿಂಗನು ಓಡಿಸಿಬಿಟ್ಟಿದ್ದನು. ಆದರೆ ಬುದ್‌ಸಿಂಗನ ಮಗನಾದ



ನಾಸಿಕ ಕ್ಷೇತ್ರದ ಬಳಿ ಗೋದಾವರಿಯ ದೃಶ್ಯ.

ಪುಣ್ಯನದಿ ಗೋದಾವರಿ

ಶ್ರದ್ಧಾವಂತರಿಗೆ ಪುಣ್ಯ ತೀರ್ಥ. ಕೃಷಿಕರಿಗೆ ಜೀವದಾಯಿನಿ.

ಭಾರತದ ಒಂದು ಮಹಾನದಿಯ ಮಹಾತ್ಮೆ.

> ಗೋದಾವರಿಯು ಭಾವಿಕರಿಗೆ ತೀರ್ಥವೆಂತೋ ಅಂತೆಯೇ ಲಕ್ಷೋಪಲಕ್ಷ ಕೃಷಿಕರಿಗೆ, ಬೆಳೆಗೆ ನೀರನ್ನೊದಗಿಸುವ ಜೀವದಾಯಿನಿಯೂ ಆಗಿರುವಳು. 112,000 ಚದರ ಮೈಲುಗಳ ನೀರನ್ನು ಈ ನದಿಯು ಸಮುದ್ರಕ್ಕೊಯ್ಯುವಾಗ ದಾರಿಯುದ್ದಕ್ಕೂ ನೂರಾರು ನಗರಗಳನ್ನೂ, ಗ್ರಾಮಗಳನ್ನೂ ರಚಿಸಿ, ಲಕ್ಷೋಪಲಕ್ಷ ಜನರಿಗೆ ತನ್ನ ಉಪಯೋಗವನ್ನಿತ್ತಿದೆ.

ತ್ರಯಂಬಕವು ನಾಸಿಕದಿಂದ ಬರೇ 17 ಮೈಲು ದೂರದಲ್ಲಿದೆ. ಇದು ಮುಂಬಾಯಿ ಸಂಸ್ಥಾನಕ್ಕೆ ಸೇರಿದುದು. ಅರಬಿಸಮುದ್ರದಿಂದ ಇಲ್ಲಿಗೆ 50 ಮೈಲುಗಳಿಗಿಂತ ಹೆಚ್ಚು ದೂರವಿರಲಾರದು. ತ್ರಯಂಬಕವು ದೊಡ್ಡ ಬೆಟ್ಟದ ಮೇಲಿದೆ. ಎಲ್ಲಿ ನೋಡಿದರೂ, ಕಲ್ಲುಗಳೇ ಕಣ್ಣಿಗೆ ಕಾಣುವುವು. ಇಲ್ಲಿಯೇ ಗೋದಾವರಿ ನದಿಯ ಉಗಮಸ್ಥಾನವಾಗಿದೆ. ಶಿಲಾಪ್ರತಿಮೆಯೊಂದರ ಬಾಯಿಯಿಂದ ನೀರು ತಟುಕು ತಟುಕಾಗಿ ಬೀಳುತ್ತಿದೆ. ಯುಗಯುಗಾಂತರಗಳಿಂದ ಈ ತಟುಕುಗಳು ಒಂದೇ ಸಮನಾಗಿ ಜಿನುಗುತ್ತಿವೆ.

ಮದ್ರಾಸ್ ಪ್ರಾಂತದ ಕೋಕನಾಡು ಎಂಬಲ್ಲಿ—ಈ ತಟುಕುಗಳೇ ದೊಡ್ಡ ನದಿಯಾಗಿ, ಬಂಗಾಳಾಕೊಲ್ಲಿಯಲ್ಲಿ ಮಿಲನವಾಗಿವೆ. ತ್ರಿಯಂಬಕದಿಂದ ಇಲ್ಲಿಗೆ 900 ಮೈಲು ದೂರವಾಗುತ್ತದೆ. ಆದರೂ ಗೋದಾವರಿ ನದಿಯು ತಾನು ತಂದ ಜಲವನ್ನು ತನ್ನ [illegible] ಶಾಖೆಗಳಿಂದ ಸಮುದ್ರಕ್ಕೆ ಅರ್ಪಿಸುತ್ತದೆ. ಹಿಂದುಸ್ಥಾನದ 112,000 ಚದರ ಮೈಲುಗಳಲ್ಲಿ [illegible] ನೀರನ್ನು ಈ ನದಿಯು ಸಮುದ್ರಕ್ಕೆ [illegible].

ಗೋದಾವರಿಯು ತ್ರಯಂಬಕದಿಂದ ಸ್ವಲ್ಪ ದೂರದಲ್ಲಿಯೇ ಇತರ ಉಪನದಿಗಳ ನೀರನ್ನೂ ಸಂಗ್ರಹಿಸಿ ಮೊದಲು ಹಳ್ಳವಾಗಿದ್ದು, ಅನಂತರ [illegible]ಯಾಗಿ— ಕೊನೆಗೆ ನದಿಯಾಗಿ ಸಮುದ್ರಕ್ಕೆ ಸೇರುತ್ತದೆ. ಕೆಲವು ಕಡೆಗಳಲ್ಲಿ ಇದು ಒಂದು ಮೈಲು ಅಗಲವಾಗಿದೆ. ಗೋದಾವರಿ ನದಿಯು ಉಗಮದಿಂದ ಸಂಗಮಕ್ಕೆ ಹರಿಯುವಾಗ ಮಧ್ಯದಲ್ಲಿ—ಹೈದರಾಬಾದು ಸಂಸ್ಥಾನವನ್ನು ಹಾದೇ ಹೋಗುತ್ತದೆ. ಮದ್ರಾಸ್ ಸಂಸ್ಥಾನವನ್ನು ಸೇರುವಾಗ ಸಾಧಾರಣ 200 ಅಡಿ ಅಗಲದ ಕಣಿವೆಯಿಂದ ಇದು ಅತೀ ವೇಗದಿಂದ ಧುಮುಕುತ್ತದೆ.

ಸಾವಿರಾರು ಜನರು ಈ ನದಿಯ ಉಪಯೋಗವನ್ನು ಪಡೆದು ಜೀವಿಸುತ್ತಾರೆ. ಹೆಂಗಸರು, ಮಕ್ಕಳು, ಹಿರಿಯರು, ಕಿರಿಯರು ಎಂಬ ಭೇದವಿಲ್ಲದೆ ಒಂದೇ ಸಮನಾಗಿ ಉಪಯೋಗ ಪಡೆಯುತ್ತಾರೆ. ಉಗಮಸ್ಥಾನದಲ್ಲಿಯೂ ಕೂಡ ನಸುಕಿನಲ್ಲಿ, ಹೆಂಗುಸರು ಮನೆಯ ಪಾತ್ರೆಗಳನ್ನು ತೊಳೆಯುತ್ತಾರೆ. ದಿನನಿತ್ಯ ಸಾವಿರಾರು ಜನರು ನದಿನೀರಲ್ಲಿ ಸ್ನಾನಮಾಡುತ್ತಾರೆ. ನಾಸಿಕದಲ್ಲಿ, ಕಾಶಿಯಿಂದ ಬಂದವರು ಭಕ್ತಿಯಿಂದ ಸ್ನಾನಮಾಡಿ, ಧ್ಯಾನಮಾಡುತ್ತ ಕುಳಿತುಕೊಳ್ಳುವರು. ಬೇಸಾಯಗಾರರು, ಸೂರ್ಯನು ಮರೆಯಾದ ಕೂಡಲೇ ಬಟಾಟೆಯನ್ನು ಬೆಳೆಸುವ ಹೊಲಗಳಿಗೆ ನೀರನ್ನು ಸಾಗಿಸುತ್ತಾರೆ. ಹೈದರಾಬಾದಿನಲ್ಲಿ ಈ ನದಿಯ ನೀರಿನಿಂದ ಕಬ್ಬನ್ನು ಬೆಳೆಸುತ್ತಾರೆ; ಅಲ್ಲಿ ಕುಡಿಯುವುದಕ್ಕೂ ನದಿಯ ನೀರನ್ನು ಉಪಯೋಗಿಸುತ್ತಾರೆ. ಎಷ್ಟು ಜನರು ಈ ನದಿಯ ನೀರಿನಿಂದ ಜೀವಿಸುತ್ತಾರೆಂಬುದು ಹೇಳಲು ಅಸಾಧ್ಯವಾಗಿದೆ. ಕೋಟಿ ಜನರಿಗೆ ಈ ನದಿಯು ಜೀವದಾನಮಾಡಿದೆ. ದಕ್ಷಿಣ ಪ್ರದೇಶವು, ಈ ನದಿಯಿಲ್ಲದಿರುತ್ತಿದ್ದರೆ ಮರಳುಭೂಮಿಯಾಗಿರುತ್ತಿತ್ತು. [illegible] ಜನರು ಈ ನದಿಯನ್ನು ಪೂಜಿಸುತ್ತಾರೆ. ಹಿಂದೂಸ್ಥಾನದ [illegible] ಪವಿತ್ರ ನದಿಗಳಲ್ಲಿ— ಗೋದಾವರಿ ನದಿಯೂ ಒಂದಾಗಿದೆ. ಈ ನದಿಯನ್ನು ಗಂಗಾನದಿಯ [illegible] ಜನರಲ್ಲಿ [illegible].

ಗೋದಾವರಿ ನದಿಯ ಉಗಮಸ್ಥಾನದಲ್ಲಿ ಒಂದು ಚಿಕ್ಕ ಗುಡಿಯಿದೆ. ಇದು ನೂರಾರು ಶತಮಾನಗಳ ಹಿಂದಿನ ಗುಡಿ. ಇದರೊಳಗೆ ಗೋದಾವರಿಯ ವಿಗ್ರಹವಿದೆ. ಇದರ ಬಾಯಿಯಿಂದಲೇ ನೀರು ಜಿನುಗುತ್ತಿದೆ. ಹಿಂದೂಸ್ಥಾನದ ದೂರದೂರದ ಪ್ರದೇಶದಿಂದಲೂ, ಗೋದಾವರಿಯ ಪೂಜೆ ಮಾಡಲು ಯಾತ್ರಿಕರು ಇಲ್ಲಿಗೆ ಬರುತ್ತಾರೆ.

ನೈವೇದ್ಯ, ಹಣ್ಣುಕಾಯಿ, ಹಣಕಾಸು ಇತ್ಯಾದಿಗಳನ್ನು ಯಾತ್ರಿಕರು ದೇವಿಗೆ ಅರ್ಪಿಸುತ್ತಾರೆ. ತಲಾಂತರಗಳಿಂದ ಈ ದೇವಿಯ ಪೂಜೆಯನ್ನು ವಹಿಸಿಕೊಂಡ ತ್ರಯಂಬಕದ ಬ್ರಾಹ್ಮಣರ ಕುಟುಂಬದವನೊಬ್ಬನು ಹಗಲೆಲ್ಲಾ ಒಂದು ಪೀಠದ ಮೇಲೆ ಕುಳಿತುಕೊಂಡಿರುತ್ತಾನೆ. [illegible] ಕಲ್ಲನ್ನು ಒಡೆದು ಒಂದು ಗುಹೆಯನ್ನು ಮಾಡಿದ್ದಾರೆ. ಅನಂತರ ಚೌಕಾಕಾರವಾದ ಒಂದು [illegible]. ಗೋದಾವರಿ ನದಿಯು [illegible] ತ್ರಿಯಂಬಕದಲ್ಲಿ [illegible] ಒಂದು [illegible] ಜನರಲ್ಲಿ [illegible]. [illegible] ಪುರಾಣ ಕಥೆಗಳು [illegible]. ಗಂಗಾ, ಗೋದಾವರಿ ನದಿಗಳೆರಡೂ ಇಲ್ಲಿ ಒಂದೇ ಸ್ಥಳದಲ್ಲಿ ಹುಟ್ಟಿ, ಅನಂತರ ಗಂಗೆಯು ಮಾತ್ರ ಗುಪ್ತಗಾಮಿನಿಯಾಗಿ ಹಿಮಾಲಯದಲ್ಲಿ [illegible] ಕಥೆಯಲ್ಲಿದೆ.

ಗೋದಾವರಿಯ ಪೂಜೆಮಾಡಲು ಉಗಮಕ್ಕೆ ಹೋಗುವುದು ಬಲೂ ಕಷ್ಟದ ಕೆಲಸವಾಗಿದೆ. ತ್ರಿಯಂಬಕದಿಂದ ಇಲ್ಲಿಗೆ ಬರುವುದಕ್ಕೆ ಕಡಿದಾದ ಒಂದು ಹಾದಿಯಿದೆ. ಆದರೆ ಕಡಿಮೆಯೆಂದರೆ 690 ಮೆಟ್ಟಲುಗಳನ್ನು ಹತ್ತಬೇಕಾಗುವುದು. ಅಭ್ಯಾಸವಿದ್ದವರು ಬರೇ $\frac{1}{4}$ ಗಂಟೆಯಲ್ಲಿ 690 ಮೆಟ್ಟಲುಗಳನ್ನು ಮುಗಿಸಬಹುದು. ದಾರಿಯಲ್ಲೆಲ್ಲಾ ಸಾಧುಗಳು ಭಿಕ್ಷೆಯನ್ನು ಬೇಡುತ್ತಾ ಕುಳಿತಿರುತ್ತಾರೆ. ಯಾತ್ರಿಕರ ಪೂರ್ವಜರು ಇಲ್ಲಿಗೆ ಯಾತ್ರೆಗೆ ಬಂದ ಕುರುಹುಗಳ ವಿಚಾರಗಳನ್ನು ಈ ಸಾಧುಗಳು ಹೇಳುತ್ತಾರೆಂದು ಜನರು ಹೇಳುತ್ತಾರೆ. ಈ ಬೆಟ್ಟದಲ್ಲೆಲ್ಲಾ ಮಂಗಗಳು ಹಾರುತ್ತಾ ಕುಣಿಯುತ್ತಾ, ಕಾಲಕಳೆಯುತ್ತಿವೆ. ಇವುಗಳಿಗೆ ಯಾತ್ರಿಕರು ತಿಂಡಿಗಳನ್ನು ಹಾಕುತ್ತಾರೆ.

ಈ ಪ್ರದೇಶಕ್ಕೆ ಕಾಲಿಟ್ಟೊಡನೆ, ಹಿಂದುಗಳಲ್ಲದವರಿಗೂ ಬಹಳ ಸ್ಫೂರ್ತಿಯು ಬರುತ್ತದೆ. ಬೆಟ್ಟದಿಂದ ಕೆಳಗೆ ವಿಶಾಲವಾದ ಬಯಲುಗಳು ಕಣ್ಣಿಗೆ ಸೊಗಸಾಗಿ ತೋರುತ್ತವೆ. ಬಂಗಾಳ ಅಖಾತದ ವರೆಗಿನ ಪ್ರದೇಶವೆಲ್ಲ ಬಲು ರಮ್ಯವಾಗಿ ತೋರುತ್ತದೆ.



ಉಮೇದಸಿಂಗನು 1749ರಲ್ಲಿ ಆ ಸಂಸ್ಥಾನವನ್ನು ಪುನಃ ಗೆದ್ದುಕೊಂಡನು. ಅವನ ಧೀರತೆಯ ಕುರುಹಾಗಿ ಅವನ ಪಾದರಕ್ಷೆಗಳನ್ನು ಅರಮನೆಯಲ್ಲಿಟ್ಟಿರುತ್ತಾರೆ.

ಬುಂದಿ ಪಟ್ಟಣದ ಬೀದಿಗಳು ಬಹಳ ಅಂಕುಡೊಂಕಾಗಿವೆ. ಮುಖ್ಯ ಬೀದಿಯು ಸಾಕಷ್ಟು ವಿಶಾಲವಾಗಿದೆ. ಬೀದಿಯಲ್ಲಿ ಸಾಲುಸಾಲಾಗಿರುವ ಅಂಗಡಿಗಳಲ್ಲಿ ಬಣ್ಣ ಬಣ್ಣದ ಬಟ್ಟೆಗಳು ಕಾಣುತ್ತವೆ.

ಇಲ್ಲಿಯ ರಜಪೂತರಿಗೆ ಕಿತ್ತಳೆ ಬಣ್ಣದಲ್ಲಿ ಬಹಳ ಮೆಚ್ಚುಗೆಯಿದೆ. ಎಲ್ಲೆಲ್ಲೂ ದೇಗುಲಗಳೇ ಇಲ್ಲಿ ಕಣ್ಣಿಗೆ ಕಾಣಿಸುವುವು. ಎಲ್ಲೆಲ್ಲೂ ಅಂತಸ್ತಿನ ಕಟ್ಟಡಗಳು; ಗೋಡೆಗಳ ಮೇಲೆಲ್ಲಾ ಚಿತ್ರಗಳು, ಬಳ್ಳಿಗಳು: ಕುದುರೆ ಚಿತ್ರಗಳು ಆನೆಗಳ ಚಿತ್ರಗಳು—ರಜಪೂತರಿಗೆ ಕುದುರೆ ಮತ್ತು ಆನೆಗಳಲ್ಲಿರುವ ಪ್ರೀತಿಯು ಇದರಲ್ಲಿ ಒಡೆದು ಕಾಣುತ್ತಿದೆ.

ಪಟ್ಟಣದ ಬೀದಿಗಳನ್ನು ದಾಟಿ ಮುಂದಕ್ಕೆ ಬಂದರೆ ವಿಶಾಲ ಸ್ಥಳವು ಕಣ್ಣಿಗೆ ಬೀಳುವುದು. ಅಲ್ಲಿಂದ ಸ್ವಲ್ಪ ದೂರದಲ್ಲೇ ಅತಿಥಿ ಗೃಹ (Guest House) ಇದೆ. ಅಲ್ಲಿ ವಿಶ್ರಮಿಸಬಹುದು. ಅಲ್ಲಿ ಯಾವತ್ತೂ ಅನುಕೂಲತೆಗಳಿವೆ.

ಚಹಾ ಸಮಾರಂಭ

ಜಾಪಾನಿನ ಧಾರ್ಮಿಕ ಆಚರಣೆ

ಕೆಲವು ವಿಚಿತ್ರ ರೂಢಿಗಳು

> ಜಾಪಾನಿನಲ್ಲಿ ಚಹಾ ಭಕ್ತಿಯು ಧಾರ್ಮಿಕ ಜೀವನದಲ್ಲಿ ಪೋಣಿಸಿ ಹೋಗಿದೆ. ಅತಿಥಿಗಳಿಗೆ ಚಹಾ ಕೊಡುವುದು ಕೇವಲ ಉಪಚಾರವಲ್ಲ, ಧರ್ಮವೆನಿಸಿದೆ. ಚಹಾ ಸಂಬಂಧವಾಗಿ ಜಾಪಾನಿನಲ್ಲಿ ಕೆಲವು ನಡತೆಗಳು ವಿಚಿತ್ರವಾಗಿವೆ. ಚಹಾ ಸಮಾರಂಭದ ಕೆಲವು ಕೌತುಕಮಯ ವಿಷಯಗಳನ್ನಿಲ್ಲಿ ವಿವರಿಸಲಾಗಿದೆ.



ಜಪಾನಿನಲ್ಲಿ: ಅತಿಥಿತಿಗಳಿಗೆ ಚಹಾ ಸತ್ಕಾರವಾಯಿತು. "ಬರುವೆವು ಅಕ್ಕಾ" ಎನ್ನುತ್ತ ಅತಿಥಿಗಳು ವಂದಿಸಿ ಹೊರಟರು.

ಚಹಾವನ್ನು ತಯಾರಿಸುವುದು ಜಪಾನಿಯರ ಒಂದು ವಿಚಿತ್ರ ವಿನೋದವಾಗಿದೆ. ಕಾಫಿಯನ್ನು ಕುಡಿಯುವುದು ಅದರ ರುಚಿಗಾಗಿ ಮತ್ತು ಸುವಾಸನೆಗಾಗಿ. ಇದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಅದಕ್ಕಿಲ್ಲ. ಆದರೆ ಚಾವನ್ನು ತಯಾರಿಸುವುದು "ಜೀವನ ಕಲೆಯ ಒಂದು ಮತವಾಗಿ" ಹೋಗಿದೆ. ಚಾ ಹುಡಿಯಿಂದ ಮನಸ್ಸಿಗೆ ಉಲ್ಲಾಸವನ್ನು ಶಾಂತಿಯನ್ನು ಉಂಟುಮಾಡಲು ಹೊರಡುವ ಸುವಾಸನೆಯಲ್ಲಿ ವ್ಯಾಪಿಸಿರುವ ಕಲಾ ವಾತಾವರಣವನ್ನು ಮೆಚ್ಚುವುದೇ ಈ ಮತವಾಗಿದೆ. ಜಪಾನಿಯರ ಚಾ ತಯಾರಿಯ ಸಂಭ್ರಮವು, ಅವರಿಗೆ ಸರಳ ಜೀವನದಲ್ಲಿರುವ ಮೆಚ್ಚುಗೆಯನ್ನು ತೋರಿಸುವುದು. ಹಲವು ಶತಮಾನಗಳಿಂದ ಆಚಾರದಲ್ಲಿರುವ ಪವಿತ್ರ ರೀತಿನೀತಿಗಳೂ, ಪದ್ಧತಿಗಳೂ, ಪಾಶ್ಚಿಮಾತ್ಯ ರೀತಿನೀತಿಗಳಿಗೆ ತಲೆಬಾಗಿಸಲಿಲ್ಲ. ಅವುಗಳಿಗಿನ್ನೂ ಬೆಲೆಯಿದೆ.

ಚಾವನ್ನು ತಯಾರಿಸುವ ಪದ್ಧತಿಯು ಪ್ರಾರಂಭದಲ್ಲಿ ಚೀನಾದಲ್ಲಿ ಪ್ರಚಾರದಲ್ಲಿತ್ತು. ಬೌದ್ಧ ಮತ ವಿಚಾರಗಳನ್ನು ವ್ಯಾಸಂಗ ಮಾಡಲು ಹೋದ ಜಪಾನಿಯರು ಅದನ್ನು ಕಲಿತರು. ಆದರೆ ಜಪಾನಿನಲ್ಲಿ ಈ ಪದ್ಧತಿಯು ಬೆಳೆಯಿತು [illegible]. ಈ ಪದ್ಧತಿಯು ಎಲ್ಲಿ ಜನ್ಮವೆತ್ತಿತೋ ಅಲ್ಲಿ ಅದು ಮರೆಯಾಗುತ್ತಿದೆ: ಆದರೆ ಜಪಾನಿನಲ್ಲಿ ಇನ್ನು ಜೀವಿಸುತ್ತಿದೆ. ಜಪಾನಿನ ಶ್ರೀಮಂತರೂ, ಯೋಧರೂ, ಈ ಚಹಾವನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಅವರೆಲ್ಲರೂ ಭಕ್ತಿಯಿಂದ ಅದನ್ನು ಸೇವಿಸುತ್ತಿದ್ದರು. ಅವರೆಲ್ಲರೂ ಝೆನ್ ಬೌದ್ಧ ಮತದ ಅನುಯಾಯಿಗಳಾಗಿದ್ದರು.

ಕ್ಯೋಟೋದಲ್ಲಿರುವ ಪ್ರಖ್ಯಾತ ಕಿಂಕಾಕುಜಿ ಮತ್ತು ಗಿಂಕಾಕುಜಿಯ ದೇವಸ್ಥಾನಗಳು ಬರೇ ಚಾ ಕುಡಿಯುವ ಮಂದಿರಗಳಾಗಿದ್ದುವು. ಪ್ರಾಚೀನ ಶ್ರೀಮಂತರು (Lords) ಇವುಗಳನ್ನು ಕಟ್ಟಿಸಿದ್ದರು.

ಝೆನ್ ಬೌದ್ಧಮತ ಪ್ರಕಾರ ಜೀವನ ಮತ್ತು ಕಲೆಯ ತತ್ವವೇ ಪ್ರಾಚೀನ ಜಪಾನಿಯರ ಜ್ಞಾನಾಹಾರವಾಗಿತ್ತು. ಚಾವನ್ನು ತಯಾರಿಸುವ ಈ ಪದ್ಧತಿಯು ಮತದಿಂದಲೇ ಹುಟ್ಟಿದುದರಿಂದ, ಯಾವನೊಬ್ಬ ಜಪಾನಿಯನೂ, ಈ ಪದ್ಧತಿಯಿಂದ ಹೊರಗಿಲ್ಲ.

ಜಪಾನಿಯರಿಗೆ ಚಾ ಕುಡಿಯುವ ಕೋಣೆಗಳೇ ಪ್ರತ್ಯೇಕ ಇರುತ್ತವೆ. ಅವುಗಳಿಗೆ "ತ್ಯಾಸಿತು" ಎಂದು ಹೆಸರು. ಹೆಚ್ಚಾಗಿ ಹೂವಿನ ತೋಟದ ಒಂದು ಭಾಗದಲ್ಲೇ ಈ ಕೊಠಡಿಯಿರುತ್ತದೆ. ಅದರೊಳಗೆ ಬಂಡೆಕಲ್ಲುಗಳೂ, ಕಲ್ಲಿನ ದೀವಿಗೆಗಳೂ, ಮರಗಳೂ ಇರುತ್ತವೆ. ಮನಸ್ಸಿಗೆ ಶಾಂತಿಯೂ, ಏಕಾಗ್ರತೆಯೂ ಸಿಗಬೇಕೆಂಬುದೇ—ಈ ಕೊಠಡಿಯನ್ನು ಈ ರೀತಿಯಲ್ಲಿ ಕಟ್ಟಿದ ಉದ್ದೇಶವಾಗಿರುತ್ತದೆ.

ಈ ಚಾ ಕೋಣೆಗೆ ಚಿಕ್ಕದಾದ ಕಿಟಕಿಯಂತಹ ಬಾಗಿಲು ಇರುತ್ತದೆ. ಅತಿಥಿಗಳು ಇದರೊಳಗೆ ಹರಿದುಕೊಂಡೇ ಬರಬೇಕಾಗುತ್ತದೆ.

ಅತಿಥಿಗಳು ಬಂದ ಕೂಡಲೇ ಮನೆಯ ಯಜಮಾನಿಯರು ಯಾ ಯಜಮಾನರು ಶಿಷ್ಟ ಸಾಂಪ್ರದಾಯ ಪ್ರಕಾರ ವಂದನೆಗಳನ್ನು ಮಾಡಿ, ಅತಿಥಿಗಳಿಗೆ ಉತ್ತಮವಾದ "ಟೊಕೊನೋಮಾ" ಎಂಬ ಆಸನವನ್ನು ಕೊಡುವರು.

ಇಂತಹ ಸಮಾರಂಭದಲ್ಲಿ ಮಡಚುವ ಬೀಸಣಿಗೆಯು ಅತೀ ಅಗತ್ಯವಾಗಿದೆ. ಚಾ ಸಂಭ್ರಮದಲ್ಲಿರುವ ಪದ್ಧತಿಗಳಂತೆ, ಪರಸ್ಪರ ವಂದನೆಗಳನ್ನು ಮಾಡುವಾಗ ಬೀಸಣಿಗೆಯನ್ನು ಯಾವ ರೀತಿಯಲ್ಲಿ ಹಿಡಿಯಬೇಕೆಂಬುದೂ, ಒಂದು ಶಿಷ್ಟ ಸಾಂಪ್ರದಾಯವಾಗಿದೆ.

ಬಂದ ಪ್ರತಿಯೊಬ್ಬ ಅತಿಥಿಯೂ, ಆ ಆಸನದ ಮುಂದೆ ತಲೆ ಬಾಗಿಸುತ್ತಾನೆ. ಅನಂತರ ಅಲ್ಲಿಯ ಬಟ್ಟೆಯ ಸುರುಳಿಯನ್ನು ಪರೀಕ್ಷಿಸುತ್ತ ನಿಲ್ಲುವನು. ಈ ಕೋಣೆಯಲ್ಲಿ ಅಂದಚಂದವಾದ ಯಾವ ವಸ್ತುವೂ ಇರುವುದಿಲ್ಲ. ಆದರೆ ಇಲ್ಲಿ ಸರಳತನವು ವ್ಯಾಪಿಸಿರುತ್ತದೆ ಇದು ಮನಸ್ಸಿಗೆ ಏಕಾಗ್ರತೆಯನ್ನು ಕೊಡುತ್ತದೆ.

ಚಾ ಸಂಭ್ರಮದ ಪದ್ಧತಿಯು [illegible]. ಯಾ [illegible] ಸಂದರ್ಭದಲ್ಲಿ ಹೂವುಗಳನ್ನು ಅತಿಥಿಗಳ [illegible] ಅಲಂಕರಿಸಬೇಕೆಂದು ಯಾವ ಸಂದರ್ಭಗಳಲ್ಲಿ ಅಲಂಕರಿಸಬಾರದೆಂಬುದು [illegible].

ಕೋಣೆಯ ಒಂದು ಕೊನೆಯಲ್ಲಿ [illegible] ಒಂದು ಒಲೆ [illegible]. ಅದರಲ್ಲಿ [illegible] ಬೆಂಕಿ ಮಾಡುತ್ತಾರೆ. ಈ [illegible] "[illegible]" ಎನ್ನುತ್ತಾರೆ. ಬೆಂಕಿಯನ್ನು [illegible] ಒಲೆಯ [illegible] ಹೋಗುತ್ತಾರೆ. ಪದ್ಧತಿಗನುಸಾರವಾಗಿ ಮನೆಯ ಯಜಮಾನಿಯರು ಯಾ ಯಜಮಾನರು ಒಲೆಯನ್ನು [illegible]. [illegible] ಅವರು ಯಾವ ರೀತಿಯಲ್ಲಿ ಒಲೆಯನ್ನು [illegible] ಸೂಕ್ಷ್ಮ ರೀತಿಯಿಂದ [illegible] ಅತಿಥಿಗಳ ಕರ್ತವ್ಯವಾಗಿದೆ.

[illegible] ಒಂದು [illegible] ಕೊಂಡು ಹೋಗಿ [illegible] ಒಲೆಯಲ್ಲೇ ಈ ಚಾವನ್ನು ತಯಾರಿಸುತ್ತಾರೆ. [illegible] ಅತಿಥಿಗಳನ್ನು ಕ್ರಮವಾದ ರೀತಿಯಲ್ಲಿ ಕರೆಯುತ್ತಾರೆ. ಹತ್ತಿರದ ಕೋಣೆಯಿಂದ, ಪದ್ಧತಿಗನುಸಾರವಾಗಿ. ಬೇಕಾದ ಪದಾರ್ಥಗಳನ್ನು ಮನೆಯವರು ತರುತ್ತಾರೆ ಅನಂತರ ರೇಶ್ಮೆಯ ಚಿಕ್ಕ ವಸ್ತ್ರದಿಂದ ತಟ್ಟೆಗಳನ್ನು [illegible].

ಈ ಚಿಕ್ಕ ರೇಶ್ಮೆಯ ವಸ್ತ್ರದ [illegible] ಕಸ್ತು [illegible]. ಈ ಕ್ರಮಕ್ಕೆ "[illegible]" ಎಂದು ಹೆಸರಿದೆ.

ಈ ಸಾಂಪ್ರದಾಯಗಳು ನೆರವೇರಿದ ಮೇಲೆ ಒಲೆಯ ಮೇಲಿನ ಬಿಸಿ ನೀರನ್ನು ಮತ್ತೊಂದು ಪಾತ್ರೆಗೆ ಹೊಯ್ಯುತ್ತಾರೆ. ಕೂಡಲೇ ಅದನ್ನು ಚೆನ್ನಾಗಿ ಕದಡುತ್ತಾರೆ. ಅನಂತರ ಚಾ ಹುಡಿಯನ್ನು ಹಾಕುತ್ತಾರೆ. ಪುನಃ ಬಿಸಿ ನೀರನ್ನು ಅದರ ಮೇಲೆ ಹೊಯ್ಯುತ್ತಾರೆ. ಅನಂತರ ಅದನ್ನು ಚೆನ್ನಾಗಿ ಕದಡುತ್ತಾರೆ.

ಈ ಚಾವನ್ನು ಅತಿಥಿಗಳ ಗೌರವಾರ್ಥವಾಗಿ ಅವರ ಮುಂದಿಡುತ್ತಾರೆ. ಮುಖ್ಯ ಅತಿಥಿಯು ತನ್ನ ಲೋಟದಲ್ಲಿ ಟೀಯನ್ನು ತೆಗೆದುಕೊಂಡು ತನ್ನ ಬಳಿಯ ಅತಿಥಿಗೆ ವಂದನೆಮಾಡುತ್ತಾನೆ. ಅನಂತರ ಅದನ್ನು ತನ್ನ ಎಡ ಅಂಗೈಯಲ್ಲಿರಿಸುತ್ತಾನೆ. ಅತಿಥಿಯು ಅದನ್ನು ಬಲಗೈಯಿಂದ ಆದರಿಸುತ್ತಾನೆ. ಅದರ ರುಚಿಯನ್ನು ಮೆಚ್ಚುತ್ತ ಅತಿಥಿಯು ಮನೆಯವರಿಗೆ ವಂದಿಸುತ್ತಾನೆ. ಒಂದೆರಡು ಗುಟುಕು ಕುಡಿದ ನಂತರ ಆ ಲೋಟಾವನ್ನು ತನ್ನ ಬಳಿಯ ಅತಿಥಿಗೆ ಅವನು ಕೊಡುತ್ತಾನೆ. ಅದೇ ರೀತಿಯಲ್ಲಿ ಎರಡನೆಯ ಅತಿಥಿಯು ಮೂರನೆಯವನಿಗೆ ತಾನು ಒಂದೆರಡು ಗುಟುಕು ಕುಡಿದು ಕೊಡುವನು (ಇದು ಇಂಗ್ಲಿಷರ ಪದ್ಧತಿಯಂತೆಯೇ ಇದೆ!)

ಮುಖ್ಯ ಅತಿಥಿಯು ಟೀ ಮಾಡಿದ ಪಾತ್ರೆಯನ್ನೂ, ಸೌಟನ್ನೂ ಪರೀಕ್ಷಿಸಲು ಮರೆಯಲಾರನು. ಈ ಪಾತ್ರೆಗಳಿಗೆ ಹೆಚ್ಚಿನ ಬೆಲೆಯನ್ನು ಕಟ್ಟುತ್ತಾರೆ.

ಈ ಎಲ್ಲಾ ಸಂಭ್ರಮಗಳಾದ ಕೂಡಲೇ ಅತಿಥಿಗಳು ಮನೆಯವರಿಗೆ ವಂದನೆಗಳನ್ನು ಮಾಡುತ್ತಾರೆ. ಇದೆಲ್ಲ ಬಹಳ ವಿನಯದಿಂದ ನಡೆಯುತ್ತದೆ. ಈ ಎಲ್ಲಾ ಸಂಭ್ರಮಗಳು ಬಹಳ ಗಂಭೀರವಾಗಿಯೂ ನಿಧಾನವಾಗಿಯೂ ಆಚರಿಸಲ್ಪಡುತ್ತವೆ. ಅತಿಥಿಗಳು ಮರಳಿದ ಮೇಲೆ ಚಾದ ಸಮಾರಂಭವು ಮುಗಿಯುವುದು. ಆದರೆ ಅದರ ನೈತಿಕ ಪರಿಣಾಮವು ಉಳಿಯುವುದು. ಮನೆ ಯಜಮಾನಿಯು ಚಾ ಕೋಣೆಗೆ ಹಿಂತಿರುಗಿ ಚಾ ಪಾತ್ರೆಯ ಮುಂದೆ ಕುಳಿತುಕೊಳ್ಳುವಳು. ಚಾ ಪಾತ್ರೆಯೊಂದೇ ಅವಳ ಸಂಗಾತಿಯಾಗಿರುತ್ತದೆ. ಚಾ ಪಾತ್ರೆಯ ನೀರು ಕುದಿಯುವಾಗ ಉಂಟಾಗುವ ಶಬ್ದವನ್ನು ಆಲಿಸುತ್ತ ಅವಳು ಆತ್ಮಧ್ಯಾನದಲ್ಲಿ ತಲ್ಲೀನಳಾಗುವಳು.

ಅಳಿದುಳಿದ "ರೆಡ್" ಇಂಡಿಯಾನರು

ಸ್ವತಂತ್ರ ಜೀವಿಯ ಜೀವನದಲ್ಲಿ ಪರಿವರ್ತನ



ರೆಡ್ ಇಂಡಿಯನ್ಸ್ ನಾಯಕ
ರೆಡ್ ಇಂಡಿಯಾನರಿಗೆ ಇವನು ಸರ್ವಾಧಿಕಾರಿ ಎನ್ನಬಹುದು.

[illegible] ರಿಸಿದನು. ಆಧುನಿಕ ಶಸ್ತ್ರಾಸ್ತ್ರಗಳು ರೆಡ್ ಇಂಡಿಯಾನರನ್ನು ನಾಶಪಡಿಸಿದುವು. ಇಂದು ರೆಡ್ ಇಂಡಿಯಾನರು ತೀರ ಅಲ್ಪ ಮಂದಿ ಮಾತ್ರ ಉಳಿದಿರುವರು. ಅಳಿದುಳಿದ ಇವರನ್ನು ಆಧುನಿಕ ರೀತಿ–ನೀತಿ–ಪದ್ಧತಿಗಳು ಪರಿವರ್ತಿಸುತ್ತಿವೆ; ಅವನ ಸಹಜತೆ ಮಾಯವಾಗುತ್ತಿದೆ. ರೆಡ್ ಇಂಡಿಯಾನನ ಚರಿತ್ರವು ಒಂದು ಕರು[illegible] ಕಥೆ.



[illegible] ಇವರನ್ನು "ರೆಡ್ ಇಂಡಿಯಾನ"ರೆಂದರು. ಈ ಚಿತ್ರದಲ್ಲಿ ತೋರುವವನು ರೆಡ್ ಇಂಡಿಯಾನ್ ವೈದ್ಯನೊಬ್ಬನು.

ದೊಡ್ಡ ಕಾಡು; ಫಕ್ಕನೆ ಬೆಂಕಿಯೊಂದು ಕಾಣುವುದು; ಆ ಪ್ರಕಾಶದಲ್ಲಿ ಸುತ್ತಮುತ್ತಲಿರುವ ಗುಡಿಸಲುಗಳು ಗೋಚರಿಸುವುವು. ಒಡನೆಯೇ ಕೈಯ್ಯಲ್ಲೊಂದು ಆಯುಧವನ್ನು ಹಿಡಿದ ವ್ಯಕ್ತಿಯು ಗುಡಿಸಲಿಂದ ಹೊರಗೆ ಹಾರಿ ಕುಣಿಯುವುದು. ಬೆಂಕಿಯ ಪ್ರಕಾಶಕ್ಕೆ ವ್ಯಕ್ತಿಯ ನೆರಳು ಬೇತಾಳಗಳಂತೆ ನಿಂತಿರುವ ಮರಗಳ ಮೇಲೆ ಹಾಯುವುದು. ಅರೆ ಬತ್ತಲೆಯಿರುವ ಹಲವು ವ್ಯಕ್ತಿಗಳು ಬಂದು ಕುಣಿಯುವುವು. [illegible]ವೆಲ್ಲಾ ರಣಗೀತೆಯಿಂದ ಪ್ರತಿಧ್ವನಿಸುವುದು. ಇವರೇ ಅಮೇರಿಕದ ರೆಡ್ ಇಂಡಿಯಾನರು. ಬೆಂಕಿ ಆರುವ ವರೆಗೆ ಕುಣಿತವನ್ನು ನಡೆಸುವರು.

ಹೆಚ್ಚು ಕಡಿಮೆ 100 ವರುಷಗಳ ಹಿಂದೆ ಇಂತಹ ದೃಶ್ಯವು ಕೆನಡಾದ ಅರಣ್ಯಗಳಲ್ಲಿ ಸಾಮಾನ್ಯವಾಗಿತ್ತು, ಆದರೆ ಇಂದು ಅವರ ಮರಿಮಕ್ಕಳು ಅಂತಹ ಕೂಟಗಳನ್ನು ಪುನಃ ನಿರ್ಮಾಣ ಮಾಡಿ ತೋರಿಸಬೇಕಷ್ಟೆ. ಜೋರ್ಜ ಅರಸರು, ಕೆನಡಾವನ್ನು ಸಂದರ್ಶಿಸಿದಾಗ, ರೆಡ್ ಇಂಡಿಯಾನರು ತಮ್ಮ ಹಬ್ಬಗಳ ಸಂದರ್ಭಗಳಲ್ಲಿ ನರ್ತಿಸುವ ನರ್ತನವನ್ನು ಪ್ರದರ್ಶಿಸಿದರು.

ರೆಡ್ ಇಂಡಿಯಾನರು ಕ್ರಮೇಣ ಅಳಿಯುತ್ತಿರುವುದರಿಂದ ಇಂತಹ ಕೂಟಗಳು ಅಪರೂಪವಾಗಿವೆ. ಈಗ ಕೆನಡಾದಲ್ಲಿ ಸಾಧಾರಣ, 100,000 ಜನ ರೆಡ್ ಇಂಡಿಯಾನರಿರುವರು. ಇವರಲ್ಲಿ ಬರೇ 4,900 ಜನರು ದೇವರನ್ನು ನಂಬುತ್ತಾರೆ; ತಮ್ಮ ಪೂರ್ವಜರ ನಿವಾಸಸ್ಥಳಗಳನ್ನು ನೆನಸುತ್ತಾರೆ.

ಬ್ರಿಟಿಷ್ ಕೊಲಂಬಿಯಾದಲ್ಲಿರುವ ರೆಡ್ ಇಂಡಿಯನ್ ರಿಸರ್ವ್[illegible]— ಎಂಬಂತಹ ಕೆಲವು ಸ್ಥಳಗಳಲ್ಲಿ ಮಾತ್ರ ಈ ರೆಡ್ ಇಂಡಿಯಾನರ ಕಳೆದ ಕಾಲದ ಸ್ಮರಣೆಯನ್ನು ಮನಸ್ಸಿಗೆ ತರಲು ಸಾಧ್ಯವಾಗುವುದು.

ಈಗ ಸರಕಾರದವರು ಇವರಿಗೆ ಫ್ರೆಂಚನ್ನೂ ಇಂಗ್ಲಿಷನ್ನೂ ಕಲಿಸುತ್ತಾರೆ. ಅವರ ಮಾತೃ ಭಾಷೆಯ ಅರಿವಾಸಿಯು ಮಾಯವಾಗಿ ಹೋಗಿದೆ. ಇವರ ಅತೀ ಪ್ರಾಚೀನ ಶಾಲೆ ಇರುವುದು ಒಂಟೇರಿಯದ ಬ್ರೆಂಟ್ ಫೋರ್ಡ್ ಎಂಬಲ್ಲಿ. ಇಲ್ಲಿ ಸಾಧಾರಣ 350 ಶಾಲೆಗಳಿವೆ. ಇವರು ಜ್ಞಾನವನ್ನು ಬೆಳೆಸಬೇಕೆಂದು ಬಹಳ ಅಭಿರುಚಿಯನ್ನು ತೋರಿಸುವರು. ಹತ್ತು ವರುಷಗಳ ಹಿಂದೆ ಇರುವ ಶಾಲಾ ಹಾಜರಿಗಿಂತ ಈಗ ಶೇಕಡಾ 50 ಹೆಚ್ಚಾಗಿದೆ.

ಆಧುನಿಕ ಯಂತ್ರಯುಗವು ರೆಡ್ ಇಂಡಿಯಾನರ ಕೈಗಾರಿಕೆಯನ್ನು ಅಳಿಸಿಬಿಟ್ಟಿದೆ. ಇವರು ಈಗ ಪಾದರಕ್ಷೆಗಳನ್ನೂ ಕುಕ್ಕೆಗಳನ್ನೂ ಮಾತ್ರ ಮಾಡುತ್ತಾರೆ. ತಮ್ಮ ಹಿರಿಯರ ವೃತ್ತಿಯನ್ನು ಬಿಟ್ಟು ಇವರು ಬ್ರಿಟಿಷ್ ಫೇಕ್ಟರಿಯಲ್ಲಿ ಗೇಯುತ್ತಾರೆ.

ಕೆಲವು ಸ್ಥಳಗಳಲ್ಲಿ ಮಾತ್ರ ಮುಖಕ್ಕೆ ಬಣ್ಣಗಳನ್ನು ತೊಟ್ಟು ತಲೆಗೆ ಗರಿಗಳನ್ನು ಕಟ್ಟಿದ, ಹಿಂದಿನ ಯುಗದ, ನೆನಪನ್ನು ತರುವ ರೆಡ್ ಇಂಡಿಯಾನರು ಕಾಣುವರು.

ಹಲವು ವರುಷಗಳ ಹಿಂದೆ, ರೆಡ್ ಇಂಡಿಯಾನರ "ಇರೋಕ್ವ್ಯೋಸ್" ಎಂಬ ಪಂಗಡದವರು—ತಮ್ಮ ದೊಡ್ಡ ಸಭೆಯನ್ನು ಕರೆದರು. "ಗ್ರೆಂಡ್ ರೀವರ್ ಕೌನ್ಸಿಲ್" ಎಂದು ಇದು ಪ್ರಚಾರವಾಗಿದೆ.

ಸ್ವಾತಂತ್ರ್ಯದ ಹಕ್ಕನ್ನು ಜನಾಂಗ ಸಂಘ (Leage of Nations) ದಲ್ಲಿ ಕೇಳುವುದಕ್ಕೋಸ್ಕರ ಇವರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಿದರು. ಈ ಪ್ರತಿನಿಧಿಗಳು ಅಲ್ಲಿಗೆ ಹೋದಾಗ ಪ್ರಾಚೀನ ಕಾಲದ ರೀತಿಯಲ್ಲಿ ಮುಖಕ್ಕೆ ಬಣ್ಣವನ್ನು ಬಳಿದು ತಲೆಗೆ ಗರಿಯನ್ನು ಕಟ್ಟಿಕೊಂಡಿದ್ದರು. ಆದರೆ ಈ ಗರಿಗಳನ್ನು ಬೇರೆಯವರಿಂದ ಎರವಾಗಿ ಅವರು ಕೊಂಡುಕೊಂಡಿದ್ದರು. ಅಲ್ಬರ್ಟದಲ್ಲಿರುವ 'ಕರಿಜನರು (Black feet) ಇವರಿಗೆ ಇವನ್ನು ಒದಗಿಸಿಕೊಟ್ಟಿದ್ದರಿಂದ ಈ ಪ್ರಾಂತದಲ್ಲೂ ಕೂಡಾ, ಪ್ರದರ್ಶನಕ್ಕೆ ಮಾತ್ರ ಈ ಉಡಿಗೆ ತೊ[illegible]ಗಳನ್ನು ತೊಟ್ಟುಕೊಳ್ಳುತ್ತಾರೆಂಬ ಸಂಶಯ ಹುಟ್ಟುತ್ತಿದೆ.

ಬ್ರಿಟಿಷ್ ಕೊಲಂಬಿಯಾದಲ್ಲಿರುವ "ಹೈಡಾ" ಎಂಬ ಜಾತಿಯ ರೆಡ್ ಇಂಡಿಯಾನರು ಪ್ರಗತಿ ಹೊಂದುವ ಪಂಗಡಗಳಲ್ಲಿ ಒಂದು ಪಂಗಡದವರು. ಇವರು ಬೆಸ್ತರು. ನೂರು ವರುಷಗಳ ಹಿಂದೆ ಇವರು 30,000ಕ್ಕೂ ಮಿಕ್ಕಿದ್ದರು. ಆದರೆ ಈಗ ಸಾಧಾರಣ 800 ಜೀವಿಗಳು ಉಳಿದಿವೆ. ಕೆನಡಾದ ರೆಡ್ ಇಂಡಿಯಾನರ ಪಂಗಡವು ಈ ರೀತಿ ಅಳಿಯುತ್ತಿರುವುದು ಬಹಳ ವಿಷಾದದ ಸಂಗತಿಯಾಗಿದೆ.

1534ರಲ್ಲಿ ಜಾಕ್ವಿಸ್ ಕಾರ್ಟಿಯರ್ (Jacques Carter) ಎಂಬ ಫ್ರೆಂಚನು ಕೆನಡಕ್ಕೆ ಕಾಲಿಟ್ಟೊಡನೆ, ರೆಡ್ ಇಂಡಿಯಾನರ, ಅವನತಿಯು ಪ್ರಾರಂಭವಾಯಿತು. ಇವನು ಎರಡು ಪಂಗಡದ ಜನರನ್ನು ಕಾಡುವುದಕ್ಕೆ ತೊಡಗಿದನು.

ಮನೆಯಿಲ್ಲದೆ ಕಾಡಿನಲ್ಲಿ ತಿರುಗುತ್ತಿರುವವರನ್ನು ಮತ್ತು ಹಳ್ಳಿಗಳಲ್ಲಿ ಬೇಸಾಯ ಮಾಡುತ್ತಿರುವವರನ್ನು—ಇವನು ಬೇಟೆಯಾಡಲು ತೊಡಗಿದನು. ಮೊದಲನೆ ಪಂಗಡದವರನ್ನು ಅಲ್ಗೊಂಕಿನ್ಸ್ (Algonkins) ಎಂದು ಕರೆಯುತ್ತಾರೆ. ಎರಡನೆ ಪಂಗಡದವರನ್ನು ಇರೊಕ್ವ್ಯೋಸ್ ಮತ್ತು ವ್ಯೆಂಡ್ಸ್ (Wyndots) ಎಂದು ಕರೆಯುತ್ತಾರೆ. ಇವರೇ ಇಲ್ಲಿಯ ಮೂಲನಿವಾಸಿಗಳು. ಇವರೇ ಕೆನಡಿಯಾನರು. ಆದ್ದರಿಂದಲೇ ಇಲ್ಲಿಯ ಪಟ್ಟಣದ ಹೆಸರು ಕೆನಡಾ ಎಂದಾಯಿತು.

ಅನಂತರ 125 ವರುಷಗಳಲ್ಲಿ ರಶಿಯಾನರು ಬಂದು ಅಲಾಸ್ಕದಲ್ಲಿ— ಮಂಗೋಲಿಯಾನರಂತಿರುವ ಕೆನಡಿಯಾನರೊಡನೆ ನೆಲಸಿದರು. ಅಲಾಸ್ಕವು ಯುನೈಟೆಡ್ ಸ್ಟೇಟ್ಸಿಗೆ ಹೋಗುವಲ್ಲಿ ವರೆಗೆ ಇವರು ಇಲ್ಲಿ ವಾಸವಾಗಿದ್ದರು.

ಬಿಳಿ ಮುಖದವರು ಇಲ್ಲಿ ಕಾಲಿಟ್ಟೊಡನೆ ರೆಡ್ ಇಂಡಿಯಾನರ ಸ್ವಾತಂತ್ರ್ಯವು ನೆಲಸಮವಾಯಿತು. ಇವರಿಗೆ ನಿರಾತಂಕವಾಗಿ ಕಾಡುಕೋಣಗಳನ್ನು ಬೇಟೆಯಾಡಲುಎಡೆಸಿಗಲಿಲ್ಲ.

ಇವರು ಸುತ್ತಾಡುತ್ತಿದ್ದ ಕಾಡುಗಳನ್ನು ಕಡಿದು ಬಿಳಿ ಜನರು ಬಯಲುಗಳನ್ನಾಗಿ ಮಾಡಿದರು; ಅವರು ಅದನ್ನು ಉತ್ತು ಬಿತ್ತಿದರು.

ಯುರೋಪಿಯಾನರಿಗೆ ನಿಲ್ಲಲು ಇವರು ನೆಲೆಕೊಟ್ಟರು. ಈಗ ಯುರೋಪಿಯಾನರ ಸಾವಿರಾರು ಗಿರಣಿಗಳು ಕೆನಡದಲ್ಲಿ ಸ್ಥಿರವಾಗಿ ನಿಂತಿವೆ.

ಈ ತರದ ಪರಿವರ್ತನೆಗಳು ಸಂಭವಿಸಿದ್ದು ಸರಿಯೆಂದು ರೆಡ್ ಇಂಡಿಯಾನರು ಒಪ್ಪಲಾರರು. ಆದರೆ ಅವರು ವೇದಾಂತಿಗಳಾದ್ದರಿಂದ ದೇವರು ಕರುಣಿಸಿದ್ದನ್ನು ಕೈನೀಡಿ ತೆಗೆದುಕೊಳ್ಳಲು ಸಿದ್ಧರಿರುವರು.

ಯುರೋಪಿಯಾನರು, ರೆಡ್ ಇಂಡಿಯಾನರು ಕೂಲಿಗಳೆಂದೂ, ಅಸಂಸ್ಕೃತರೆಂದೂ, ಅವರ ಕುಲಗಳ ಬುಡಕ್ಕೆ ಕೊಡಲಿಯಿಟ್ಟರು. ತಮ್ಮನ್ನು ಎದುರಿಸಿದವರೆಲ್ಲಾ ಕಾಡುಜನರು, ಕ್ರೂರಿಗಳು, ಅಸಂಸ್ಕೃತರೆಂದು ಭ್ರಮಿಸಿ ಇಂತಹ ವೀರ ದಂಡಾಳುಗಳ ತಂಡವನ್ನೇ ಯುರೋಪಿಯಾನರು ಮಣ್ಣುಗೂಡಿಸಿದರು.

ಸ್ವಾತಂತ್ರ್ಯದಿಂದ, ನಿರಾತಂಕವಾಗಿ ಜೀವಿಸುತ್ತಿದ್ದ ವೀರ, ರೆಡ್ ಇಂಡಿಯಾನರು, ಯುರೋಪಿಯಾನರ ಬೇಟೆಯ ಮೃಗಗಳಾಗಿ ಹೋದರು.

ರೆಡ್ ಇಂಡಿಯಾನರ ಅವನತಿಯಿಂದ ವೀರ ಯುಗವೊಂದು ಮುಳುಗಿದಂತಾಯಿತು.



ಯಾರು ವ್ಯಾಪಾರವನ್ನು ಮಾಡಬೇಕು ಮತ್ತು ಲಾಭದ ಬಗೆ ಹೇಗೆ?

ಲೇಖಕರು:— ಎಮ್. ಸುಬ್ರಾಯನ್.

ಮಾನವ ಜೀವನಕ್ಕೆ ಸಂಬಂಧಿಸಿದ ಗ್ರಹಗಳು, ಸಹಜವಾಗಿ ವ್ಯಾಪಾರ, ಉದ್ಯೋಗಗಳಲ್ಲಿಯೂ ತಮ್ಮ ಪ್ರಭಾವ ತೋರಿಸುವುವು. ಗ್ರಹಗಳು ಹೇಗೆ ಸಹಾಯ ಮಾಡುವುವು ಎಂಬುದನ್ನು ಬರೆವಾಗ ಯಾವ ವ್ಯಾಪಾರಿಗಳೂ ತಮ್ಮ ಯತ್ನವನ್ನು ನಿರಾಶೆಯಿಂದ ಬಿಡಲಾಗದೆಂಬುದನ್ನು ಸೂಚಿಸುವೆವು. ಗ್ರಹಗಳ ದೃಷ್ಟ್ಯಾ ಯಾರಿಗೆ ಯಾವ ವ್ಯಾಪಾರಗಳು ಒಪ್ಪುವುವೆಂಬುದನ್ನೂ ಯಾವುದರಿಂದ ಉನ್ನತಿ—[illegible]ನತಿಗಳೆಂಬುದನ್ನೂ ಇಲ್ಲಿ ವಿವೇಚಿಸಲಾಗಿದೆ. ಯತ್ನ, ದೃಢತೆ, ಸಿದ್ಧಾಂತಗಳನ್ನು ಮೀರಿಸುವಂಥದ್ದಿಲ್ಲವೆಂಬುದನ್ನೂ ವಾಚಕರು ಮನಸ್ಸಿನಲ್ಲಿಡತಕ್ಕದ್ದು.

ಜನನ ಕುಂಡಲಿಯ ದಶಮಸ್ಥಾನವು ಮಾನವನ ವೃತ್ತಿಯನ್ನು ನಿರ್ದೇಶಿಸುವುದಾಗಿದೆ. ಪುರುಷನ ಇಲ್ಲವೆ ಸ್ತ್ರೀಯ ಮುಂದಿನ ನೆಲೆ, ಸಂಪತ್ತು, ಯೋಗ್ಯತೆಗಳು ಕರ್ಮರಾಶಿಯನ್ನು ಹೊಂದಿವೆ. ಹತ್ತನೆಯ ಮನೆಯಲ್ಲಿರುವ ಗ್ರಹರ ಪರಿಣಾಮವು ಮನುಷ್ಯನ ನಡತೆಯ ಮೇಲೆ ಬೀಳುವುದು. ದಶಮ ಸ್ಥಾನಕ್ಕೆ ಖಸ್ವಸ್ತಿಕವೆಂದು ಹೇಳುವೆವು. ಅದೇ ಆಕಾಶದ ಮಧ್ಯ ಬಿಂದು. ಆಕಾಶದ ಮಧ್ಯ ಬಿಂದುವಿನಲ್ಲಿ ನೆಲೆಸಿದ ಗ್ರಹನ ಪರಿಣಾಮವು ಅತಿಶಯವಾಗಿ ಉಂಟಾಗುತ್ತದೆಂಬುದಕ್ಕೆ ಮಧ್ಯಾಹ್ನದ ಬೆಂಗದಿರನೇ ನಮಗೆ ದೃಷ್ಟಾಂತನಾಗುವನು.

ನಮ್ಮ ಮನಸ್ಸಿನ ನಿಲವು ಕರ್ಮವನ್ನು ಹೊಂದಿದೆ. ಇಚ್ಛೆ, ವಿಚಾರಗಳೆಲ್ಲಾ ಈ ಕರ್ಮಕ್ಕಾಗಿಯೇ ನಡೆಯುತ್ತವೆ. ಆದುದರಿಂದ ಕರ್ಮಾನುಕೂಲತೆಯನ್ನು ಮಾಡದ ವಿನಾ ಶಾಂತಿಯು ಮನುಜನಿಗೆ ಉಂಟಾಗುವಂತಿಲ್ಲ. ಕರ್ಮಾನುಕೂಲತೆಯನ್ನು ಮಾಡುವುದು ಅವರವರ ಕರ್ತವ್ಯ. ಈ ವಿಷಯದಲ್ಲಿ ನಮಗೆ ಜನ್ಮ ಪತ್ರಿಕೆಯು ಸಹಾಯಕವಾಗುತ್ತದೆ. ಜನ್ಮ ಪತ್ರಿಕೆಯ ಗ್ರಹಗಳೇ ಇದನ್ನು ಸೂಚಿಸುವವು. ಆದುದರಿಂದ ಈ ಲೇಖನದಲ್ಲಿ ಯಾವ ವ್ಯಾಪಾರವನ್ನು ಹಿಡಿಯಬಹುದೆಂಬುದನ್ನು ತಿಳಿಯುವಂತೆ ಮಾಡಲಿರುವೆವು.

ಮೇಷ, ಸಿಂಹ, ಧನುಗಳು ರವಿಗೆ ಉತ್ತಮ ರಾಶಿಗಳು. ಈ ರಾಶಿಗಳಲ್ಲಿ ರವಿಯು ಇದ್ದು ಅದು ದಶಮವಾದರೆ ಮಾನವನು ಉತ್ತಮ ದರ್ಜೆಯವನೂ ಸರ್ವ ಜನರ ಆದರಣೆಗೆ ಅರ್ಹನೂ, ದೊಡ್ಡ ಸತ್ತೆಯನ್ನು ನಡೆಸುವವನೂ ಜನಪ್ರಿಯನೂ ಎನಿಸುವನು. ಈ ರವಿಯು ಆಯುಸ್ಸಿನ ಮಧ್ಯಮ ಭಾಗದಲ್ಲೇ ಉತ್ಕರ್ಷ ಸ್ಥಿತಿಯನ್ನುಂಟುಮಾಡುತ್ತಾನೆ. ಸಾಮಾನ್ಯವಾಗಿ ದಶಮದ ರವಿಯು ಆಯುರ್ಭಾಗದ ಮಧ್ಯಕಾಲದಲ್ಲಿ ಫಲವನ್ನು ಕೊಡುವವನಾಗಿರುವನು.

ಇಂತಹನು ಸ್ವತಂತ್ರ ವೃತ್ತಿಯನ್ನು ಅವಲಂಬಿಸಬಹುದು. ಅದರಿಂದ ಯಶಸ್ಸೇ ಉಂಟಾಗುತ್ತದೆ. ಈ ಶನಿಯು ರವಿ ಕುಜರಿಂದ ದೂಷಿತನಾಗಕೂಡದು. ದೂಷಿತನಾದರೆ ಉದ್ಧುರುಟುತನ ಅಹಂಭಾವಗಳುಳ್ಳವನೆನಿಸುತ್ತಾನೆ. ಹೀಗಿದ್ದರೆ ತಾನೇ ತನ್ನ ವೃತ್ತಿಗೆ ಕೆಡುಕನ್ನು ತುಂದುಕೊಳ್ಳಬಲ್ಲನು.

ದಶಮದ ರವಿಗೆ ಹರ್ಷಲ್ ಗುರು ಚಂದ್ರ ಶುಕ್ರರ ತ್ರಿಕೋಣ ಸ್ಥಿತಿಯು ಇರುವುದಾದರೆ ಆ ಮನುಷ್ಯನು ಸಂದೇಹದ ವಿನಾ ಉನ್ನತಾಧಿಕಾರವನ್ನು ಹೊಂದುವನು. ಸರಕಾರಿ ನೌಕರರ ಕುಂಡಲಿಯಲ್ಲಿ ದಶಮದಲ್ಲಿ ಕಾಣಬರುತ್ತಾನೆ. ದೊಡ್ಡ ಸರಕಾರಿ ನೌಕರರ ಕುಂಡಲಿಯಲ್ಲಿ ಮೇಷ, ಕರ್ಕಟಕ, ಸಿಂಹ, ವೃಶ್ಚಿಕ, ಧನುಗಳ ರವಿಯು ದಶಮದಲ್ಲಿ ಕಾಣಬರುವನು.

ಕನ್ಯಾ ತುಲಾ ರಾಶಿಗಳ ರವಿಯು ಸಂಪತ್ತಿನಿಂದ ಉನ್ನತ ಸ್ಥಿತಿಯನ್ನೇ ಮಾಡುತ್ತಾನೆ. ಹೆಚ್ಚಿನ ಜನರೂ ವ್ಯಾಪಾರ ವೃತ್ತಿಯಿಂದಲೇ ಮುಂದೆ ಬಂದಿರುತ್ತಾರೆ.

ದಶಮದ ರವಿಯು ಪ್ರಶಂಸನೀಯನು. ಈ ರವಿಯು ಮನುಷ್ಯನಿಗೆ ಜೀವನಶಕ್ತಿಯನ್ನು ಅನೇಕ ವಿಧದಿಂದ ಉಂಟುಮಾಡುತ್ತಾನೆ. ತುಂಬಾ ಮಾನ್ಯತೆಯು ಇಂತಹರಿಗೆ ಸಮಾಜದಿಂದ ಸಲ್ಲುವುದು. ಇದಕ್ಕೆ ಅವನು ರಾಜಗ್ರಹನಾದುದೇ ಕಾರಣ. ಆದರೆ ಅಸ್ಥಿರ ವಶವರ್ತಿಯಾಗಿರಲು ಇಂತಹರಿಗೆ ಮನಸ್ಸು ಒಪ್ಪದು. ಸಾವಿರಾರು ಉದ್ಯೋಗಗಳನ್ನು ಕೈಕೊಳ್ಳುವರು. ಒಂದರಲ್ಲೂ ಮನಸ್ಸಮಾಧಾನ ಉಂಟಾಗುವುದಿಲ್ಲ. ಸಮಾಜದ ಪ್ರೀತಿಯನ್ನು ಗಳಿಸಲು ದಶಮದ ಚಂದ್ರನೇ ಸಹಾಯಕನಾಗುವನು. ಚಂದ್ರನಿಗೆ ಶನಿ ಮತ್ತು ರಾಹುಗಳ ಸಂಪರ್ಕ ದೋಷವು ಉಂಟಾದರೆ ಅಪಕೀರ್ತಿಯು ಉಂಟಾಗುತ್ತದೆ. ವ್ಯಾಪಾರಸ್ಥರು ದಿವಾಳಿಖೋರರಾಗುವುದೂ ಇದೆ. ವೃಶ್ಚಿಕ, ಮಕರ, ಕುಂಭ ರಾಶಿಗಳ ಚಂದ್ರನು ನಿಂದ್ಯನು. ಕರ್ಕಟಕ, ಸಿಂಹ, ಧನು, ಮೀನ ರಾಶಿಗಳ ಚಂದ್ರನು ಶುಭನು. ಉಳಿದ ರಾಶಿಗಳ ಚಂದ್ರನು ಅಷ್ಟು ಉತ್ತಮನಲ್ಲ.

ಚರ ರಾಶಿಯ ಚಂದ್ರನು ಚಂಚಲ ಮನಸ್ಸನ್ನುಂಟುಮಾಡುತ್ತಾನೆ. ಸ್ಥಿರ ರಾಶಿಯ ಚಂದ್ರನು ದೃಢ ನಿಶ್ಚಲತೆಯನ್ನು ಕೊಡುವನು. ಸ್ವೈರ ವೃತ್ತಿಯ ಉದ್ಯೋಗದಲ್ಲಿ ಮನಸ್ಸು ಬರುವುದಿಲ್ಲ.

ದಶಮದಲ್ಲಿ ಚಂದ್ರನಿದ್ದು, ಕುಜನು ಅನಿಷ್ಟ ರಾಶಿಯಲ್ಲಿ [illegible] ಮಾನವು ಉಂಟಾಗುವುದು. ಜನರು ಮಾನ್ಯತೆಯನ್ನು ಕೊಡಲಾರರು. ದ್ವಿಸ್ವಭಾವ ರಾಶಿಯಲ್ಲಿ ಚಂದ್ರನಿರುವನಾದರೆ ಬುದ್ಧಿಶಕ್ತಿಯು ಚೆನ್ನಾಗಿರುವುದು. ಆದರೆ ಅನುಕೂಲ ಪರಿಸ್ಥಿತಿಯು ಕಡಿಮೆ.

ಶನಿ ಚಂದ್ರರು ದಶಮದಲ್ಲಿರುವರಾದರೆ ವ್ಯಾಪಾರದಿಂದ ಲಾಭ ಉಂಟಾಗುವುದಿಲ್ಲ. ನೌಕರಿಯಲ್ಲೂ ಅಪಯಶಸ್ಸು ಉಂಟಾಗುತ್ತದೆ. ದಶಮಸ್ಥಾನದಲ್ಲಿ ಚಂದ್ರ ಗುರು ಯೋಗವು ಶುಭವಾಗಿದೆ. ದಶಮದ ಚಂದ್ರನಿರುವವನಿಗೆ ಅವನ ವಾತಾವರಣವು ಅನುಕೂಲವಾಗಿ ಹೆಚ್ಚಾಗಿರುವುದಿಲ್ಲ.

ಕುಜನು ದಶಮದಲ್ಲಿರುವನಾದರೆ ಪ್ರತಿಷ್ಠೆಯನ್ನು ಜಯಿಸುವವನೆಂದರೂ ತಪ್ಪೆನಿಸದು. ಪೋಲಿಸ್ ಮಿಲಿಟರಿ, ಕಪ್ಪಣ. ಆಯುಧ, ಇಂಜಿನುಗಳ ಕೆಲಸಗಳನ್ನು ಹಿಡಿದರೆ ಮುಂದಕ್ಕೆ ಬರುವರು. ಆಜ್ಞಾ ಮತ್ತು ಸತ್ಕಾರ ಹಿತವೃತ್ತಿಗಳಿಂದ ಮುಂದಕ್ಕೆ ಬರುವುದಿಲ್ಲ. ಕಠಿಣ ವೃತ್ತಿಯ ವ್ಯವಸಾಯಗಳು ಹಿಡಿದು ಬರುತ್ತವೆ. ಕರ್ಕಟಕ, ತುಲಾ, ಕುಂಭಗಳ ಕುಜನು ದಶಮದಲ್ಲಿ ಒಳ್ಳೆಯ ಫಲವನ್ನು ಕೊಡುವುದಿಲ್ಲ. ನೈತಿಕ ಆಚರಣೆಯು ಉತ್ತಮವಾಗಿರುವುದಿಲ್ಲ. ದಶಮದ ಕುಜನಿಗೆ ಹರ್ಷಲಿನ ಪಾಪದೃಷ್ಟಿಯು ಇರುವುದಾದರೆ ನೀತಿಭ್ರಷ್ಟನೂ ಅವಿಚಾರಿಯೂ, ತಾಮಸಿಯೂ ಆಗಿರುವನು. ಯಾವ ಕೆಲಸದಲ್ಲೂ ವಿಶ್ವಾಸವಿರುವುದಿಲ್ಲ. ನೌಕರಿಯಲ್ಲಿ ಆಕಸ್ಮಿಕವಾಗಿ ನಷ್ಟ ಉಂಟಾಗುತ್ತದೆ. ಒಂದಲ್ಲ ಒಂದು ವಿಧದಿಂದ ಸರ್ವನಾಶ ಉಂಟಾಗುವುದು. ದಶಮದ ಕುಜನಿಗೆ ಶನಿಯ ಅಶುಭ ದೃಷ್ಟಿಯು ಇರುವುದಾದರೆ ತಾಮಸಿಯೂ, ಸ್ವೈರ ವೃತ್ತಿಯವನೂ, ಕ್ಷಮಾಹೀನನೂ ಎನಿಸುವನು. ಅನ್ಯರನ್ನು [illegible] ನಿಂದೆಯೇ ಬರುವುದು. ಗುರುವಿನಿಂದ ದೂಷಿತನಾದರೆ [illegible] ಅವಿಚಾರಿಯೂ, ಉದಾರಿಯೂ, [illegible] ಗುರುವಿನ ಶುಭದೃಷ್ಟಿಯು ಇದ್ದರೆ ಉಚ್ಚ ಅಧಿಕಾರಿಯಾಗುವನು.

ದಶಮದ ಬುಧನು ವಿಶೇಷ ಮಹತ್ವದ ಫಲವನ್ನು ಕೊಡುವುದಿಲ್ಲ. ರವಿಯ ಸಂಪರ್ಕದಿಂದ ಬುಧನ ಶುಭದ ಪರಿಣಾಮವು ಕುಂದುತ್ತದೆ. ಬುಧನು ಒಬ್ಬನೇ ದಶಮದಲ್ಲಿರುವನಾದರೆ ಕಾರಖಾನೆಯ ನೌಕರನು ಎನಿಸುವನು. ರೈಲ್ ಪೋಸ್ಟ್ ಮೊದಲಾದ ಸಂಸ್ಥೆಗಳಿಂದ ಲಾಭ ಉಂಟಾಗುತ್ತದೆ. ಅಧಿಕಾರಿ ಪುರುಷನಾಗಿರುವುದಿಲ್ಲ. ದಲಾಲಿ, ಬುಕ್ ಡಿಪೋ, ಸ್ಟೇಶನರಿ, ಕಮಿಶನ್ ಏಜಂಟ್ ಈ ವೃತ್ತಿಗಳಿಂದ ಮುಂದಕ್ಕೆ ಬರುವನು

ದಶಮದಲ್ಲಿ ಗುರು ಇದ್ದವನು ಬೇಗನೆ ಉನ್ನತಿಗೆ ಬರುತ್ತಾನೆ. ನಡತೆ, ವರ್ತನೆಗಳೆಲ್ಲಾ ಉತ್ತಮಗಳಾಗಿರುವವು. ಯಶಸ್ವಿ ಎನಿಸುತ್ತಾನೆ. ಗುರು ದಶಮದಲ್ಲಿದ್ದರೆ ನ್ಯಾಯಾಧೀಶರೂ, ಪ್ರಸಿದ್ಧ ವಕೀಲರೂ, ಪ್ರಧಾನಾಧ್ಯಾಪಕರೂ ಎನಿಸುತ್ತಾರೆ. ಗುರು ಕುಜರ ಅಶುಭ ದೃಷ್ಟಿ ಇರುವುದಾದರೆ ವ್ಯಾಪಾರದಲ್ಲಿ ನಷ್ಟ ಪರಿಸ್ಥಿತಿಯೇ ಉಂಟಾಗುವುದು. ಜರ ರವಿಚಂದ್ರರ ಅಶುಭ ದೃಷ್ಟಿಯು ಗುರುವಿಗೆ ಇದ್ದರೆ ಸಮಾಜದಲ್ಲಿ ಯಶಸ್ಸು ಉಂಟಾಗುವುದಿಲ್ಲ. ರವಿ ಚಂದ್ರರ ಶುಭ ದೃಷ್ಟಿಯು ಉತ್ತಮ ಫಲವನ್ನು ಕೊಡುವುದಾಗಿದೆ. ಹೀಗಿದ್ದರೆ ಮಹತ್ಕುಲ ಪುರುಷರೆನಿಸುತ್ತಾರೆ. ಅದಲ್ಲದೆ ಬಂಧುಗಳು ದೊಡ್ಡ ಮನುಷ್ಯರಿದ್ದು ಅವರಿಂದ ಮುಂದಕ್ಕೆ ಬರುತ್ತಾರೆ. ಕರ್ಕಟಕ, ಧನುರಾಶಿಗಳ ಗುರುವು ಬಹಳ ಶುಭನು. ಮೇಷ, ವೃಶ್ಚಿಕ, ಸಿಂಹ, ಮೀನಗಳನ್ನುಳಿದ ರಾಶಿಗಳಲ್ಲಿ ಗುರುವು ಉತ್ತಮನಲ್ಲ.

ದಶಮದ ಶುಕ್ರನು ಉನ್ನತಿಯನ್ನು ಉಂಟುಮಾಡುತ್ತಾನೆ. ಯಶಸ್ವಿಯಾಗಿರುತ್ತಾನೆ. ಸ್ಥಿತಿಯು ಚೆನ್ನಾಗಿರುತ್ತದೆ. ವ್ಯಾಪಾರಿಗಳಿಗೆ ಈ ಶುಕ್ರನು ಪ್ರಶಂಸನೀಯನು. ಆಯುಸ್ಸಿನ ಮಧ್ಯಭಾಗವು ಉತ್ತಮವಾಗಿರುವುದು.

ಯಾವ ವೃತ್ತಿಯನ್ನೇ ಹಿಡಿಯಲಿ ಅದರಿಂದ ಮುಂದಕ್ಕೆ ಬರುತ್ತಾನೆ. ಶುಭರಾಶಿಯಲ್ಲಿರುವುದು ಮುಖ್ಯ. ಅಶುಭರಾಶಿಯಲ್ಲಿದ್ದು ಅಶುಭದೃಷ್ಟಿಯು ಅವನಿಗೆ ಇದ್ದರೆ ನೈತಿಕ ಆಚರಣೆಯು ಉತ್ತಮವಾಗಿರದು. ಪಾಪಗ್ರಹರ ದೃಷ್ಟಿಯಿಂದ ಗರ್ವಿಯೂ ಸ್ವೈರಿಯೂ ಆಗುತ್ತಾನೆ. ವೃಷಭ ತುಲಾ ಮೀನಗಳಲ್ಲಿ ಇರುವ ಶುಕ್ರನಿಂದ ಕೆಡುಕು ಉಂಟಾಗುವುದಿಲ್ಲ. ಚಂದ್ರನ ಶುಭದೃಷ್ಟಿಯೋಗವು ಶುಕ್ರನ ಶುಭಫಲವನ್ನು ಹೆಚ್ಚಿಸುವುದು. ದಶಮದ ಶುಕ್ರನು ಕಲಾಕುಶಲತೆಯಿಂದ ಯಶಸ್ಸನ್ನುಂಟುಮಾಡುತ್ತಾನೆ. ಸಟ್ಟಿ, ಚಿನ್ನ ಬೆಳ್ಳಿಯ ವ್ಯಾಪಾರ, ಹತ್ತಿ, ಜಿಳೀ ವಸ್ತುಗಳ ವ್ಯಾಪಾರದಿಂದ ಯಶಸ್ಸನ್ನು ಶುಕ್ರನುಂಟುಮಾಡುವನಿರುವನು. ಶನಿಯ ಸಂಬಂಧ ಉಂಟಾದರೆ ನೌಕರಿಯಲ್ಲಿ ಸಂದೇಹವನ್ನೇ ಕೊಡುವನು. ಮಕರ, ಕುಂಭ, ತುಲಾ ರಾಶಿಗಳಲ್ಲಿ ಶನಿ ಇರುವುದಾದರೆ ಕೆಲಸ ಸಿಗುವುದು. ಐಹಿಕ ಸುಖಸಾಧನೆಗಾಗಿ ತುಂಬಾ ಅವ್ಯವಸ್ಥಿತ ವರ್ತನೆಯನ್ನು ಮಾಡುವನು. ಗರ್ವಿಯೂ ಮಹತ್ವಾಕಾಂಕ್ಷಿಯೂ ಎನಿಸುವನು. ಶನಿಯು ದಶಮದಲ್ಲಿದ್ದರೆ ಕೆಲಸವನ್ನು ಮಾಡುತ್ತಾನೆ. ಆತನಿಗೆ ಸದಾಕಾಲ ಕೆಲಸವಿದ್ದರೂ ಆದಾಯವಿರುವುದಿಲ್ಲ. ಶನಿ ಹರ್ಷಲ್, ಕುಜರವಿ, ಗುರು, ಇವರ ಅಶುಭ ದೃಷ್ಟಿಯು ಇರುವುದಾದರೆ ಯಾವ ನಿಯಮವನ್ನೂ ಅವಲಂಬಿಸದ ಅವ್ಯವಸ್ಥಿತ ವೃತ್ತಿಯವನು ಎನ್ನಬಹುದು. ತುಂಬಾ ಕೆಲಸವನ್ನು ಮಾಡುತ್ತಾರೆ. ಲಾಭವಿರುವುದಿಲ್ಲ. ಶನಿ, ಚಂದ್ರ, ರವಿಗಳ ಕೇಂದ್ರಯೋಗವೂ ಉತ್ತಮವಲ್ಲ. ಅಪಯಶಸ್ಸನ್ನುಂಟುಮಾಡುತ್ತಾರೆ. ರವಿಚಂದ್ರರ ಶುಭದೃಷ್ಟಿಯು ಉತ್ತಮ. ಒಳ್ಳೆಯ ನಡತೆಯವರಾಗಿರುತ್ತಾರೆ. ಮೆಲ್ಲನೆ ಉತ್ಕರ್ಷ ಸ್ಥಿತಿಯುಂಟಾಗುವುದು. ಮೇಷ, ವೃಶ್ಚಿಕ ಮೀನ, ಕರ್ಕಟಕ, ಸಿಂಹ ರಾಶಿಗಳಲ್ಲಿ ಶನಿಯು ನಿರ್ಬಲನೆನಿಸಿರುವನು. ಅಶುಭ ಪರಿಣಾಮವು ಹೆಚ್ಚಿರುತ್ತದೆ.

ಹರ್ಷಲ್ ದಶಮದಲ್ಲಿರುವನಾದರೆ ಉತ್ಕರ್ಷಾಪಕರ್ಷಗಳೆರಡೂ ಇವೆ. ಕನ್ಯಾ ತುಲಾ ಕುಂಭ ರಾಶಿಗಳು ಹರ್ಷಲಿಗೆ ರವಿ ಮತ್ತು ಚಂದ್ರರ ಅಶುಭ ದೃಷ್ಟಿಯು ಇರುವುದಾದರೆ ಅಶುಭ ಪರಿಣಾಮವೇ ಹೆಚ್ಚಾಗಿ ಕಾಣಬರುತ್ತದೆ. ಹರ್ಷಲ್ ದಶಮದಲ್ಲಿರುವವರ ಸ್ವಭಾವವು ಆಶ್ಚರ್ಯ ಮತ್ತು ಚಮತ್ಕಾರ ಜನಕವಾಗಿರುವುದು. ಮೇಷ, ಕರ್ಕಟಕ, ವೃಶ್ಚಿಕ, ಮೀನ ರಾಶಿಗಳಲ್ಲಿ ಹರ್ಷಲಿದ್ದು ಚಂದ್ರನ ಅಶುಭದೃಷ್ಟಿಯು ಇರುವುದಾದರೆ ಯಾವ ಕೆಲಸಗಳನ್ನು ಹಿಡಿದರೂ ದುರ್ಭಾಗ್ಯನೇ ಎಣಿಸುತ್ತಾನೆ.

ದಶಮದ ನೆಪ್ಚೂನಿನ ಪರಿಣಾಮವು ಹೆಚ್ಚಾಗಿ ಉಂಟಾಗುವುದಿಲ್ಲ.

ರಾಹುವಿನ ಫಲವು ಶನಿಯಂತೆ ಚಿಂತಿಸತಕ್ಕದಾಗಿದೆ. ರಾಹು ದಶಮದಲ್ಲಿದ್ದರೆ ತಾಮಸ ವೃತ್ತಿಯ ನೌಕರಿಯನ್ನು ಅವಲಂಬಿಸಬೇಕು. ದಶಮ ಸ್ಥಾನವು ನೌಕರಿಯ ಸ್ಥಾನವಾಗಿದೆ. ನೌಕರಿಯ ವಿಷಯವಾಗಿ ಈ ಮೊದಲೇ ವಿಸ್ತೃತ ಲೇಖನವನ್ನು ಪ್ರಭಾತದ ವಾಚಕರು ಓದಿರುವಿರಿ. ಆದುದರಿಂದ ಈ ವಿಷಯದಲ್ಲಿ ಚರ್ವಿತಚರ್ವಣವನ್ನು ಮಾಡಲಿಳಸುವುದಿಲ್ಲ.

ಮೇಷ ಸಿಂಹ ಧನುರಾಶಿಗಳು ಅಗ್ನಿರಾಶಿಗಳು. ಈ ರಾಶಿಗಳು ದಶಮವಾದರೆ ಕಲ್ಪನಾಶಕ್ತಿ, ಉತ್ಸಾಹಶಕ್ತಿ, ಶೋಧನಾಶಕ್ತಿ, ಯಂತ್ರಸಾಹಿತ್ಯ ವಿಜ್ಞಾನ ಇವುಗಳಲ್ಲಿ ಶಕ್ತಿಯು ಹೆಚ್ಚುತ್ತದೆ.

ಮಿಥುನ ತುಲಾ ಕುಂಭಗಳು ವಾಯುರಾಶಿಗಳು. ಶಾಸ್ತ್ರಾಧ್ಯಯನ, ಭಾಷಾಜ್ಞಾನ, ಬುದ್ಧಿವಿಚಾರ ಕಾರ್ಯಗಳಲ್ಲಿ ಅಭಿಲಾಷೆಯು ಹೆಚ್ಚಿರುತ್ತದೆ. ಉತ್ತಮ ಲೇಖಕರೂ, ಗಣಿತಜ್ಞರೂ, ಇಂಜಿನಿಯರರೂ, ಚಿತ್ರಕಾರರೂ, ರಿಪೋರ್ಟರರೂ, ಶಿಕ್ಷಕರೂ, ಕಾದಂಬರೀಕಾರರೂ, ಕವಿಗಳೂ ಈ ರಾಶಿಗಳು ದಶಮವಾಗಿದ್ದವರು ಎನಿಸುತ್ತಾರೆ.

ಕರ್ಕಟಕ, ವೃಶ್ಚಿಕ, ಮೀನ ರಾಶಿಗಳು ಜಲರಾಶಿಗಳು. ದ್ರವದ್ರವ್ಯಗಳ ವ್ಯಾಪಾರದಿಂದ ಮುಂದಕ್ಕೆ ಬರುತ್ತಾರೆ. ನಾಟಕ, ಸಿನೆಮಾ, ಮೊದಲಾದುವುಗಳ ವೃತ್ತಿಯೂ ಹಿಡಿಯುತ್ತದೆ.

ವೃಷಭ ಕನ್ಯಾ ಮಕರ ರಾಶಿಗಳು ಭೂರಾಶಿಗಳು. ಭೂಸಂಬಂಧ ವೃತ್ತಿ, ಪರಿಶ್ರಮ ಕಾರ್ಯಗಳು. ಈ ರಾಶಿಗಳು ದಶಮವಾಗಿದ್ದರೆ ಹಿಡಿಯುತ್ತವೆ. ಮನೆ ಕಟ್ಟಿಸುವುದು. ಬೇಸಾಯಮಾಡುವುದು ಇವುಗಳಿಂದ ಲಾಭವನ್ನು ಹೊಂದುತ್ತಾರೆ.

ವರಾಹನು ಸಂಹಿತೆಯಲ್ಲಿ ಜೋಯಿಸನು ವಣಿಜರಿಗೆ ಯಾವ ಕಾಲ ಲಾಭವು ಉಂಟಾಗುವುದು ಎಂಬುದನ್ನು ಆದೇಶಿಸಲು ಹೇಳಿರುವನು. ಅದನ್ನು ವಾಚಕ ಮಹಾಶಯರ ಅವಗಾಹನೆಗಾಗಿ ಇರಿಸುವೆನು.

ಅತಿವೃಷ್ಟ್ಯುಲ್ಕಾದಂಡಾನ್ ಪರಿವೇಷಗ್ರಹಣ ಪರಿಧಿಪೂರ್ವಾಂಶ್ಚ ।
ದೃಷ್ಟ್ವಾಽಮಾವಾಸ್ಯಾಯಾಮುತ್ಪಾತಾನ್ ಪೂರ್ಣಮಾಸ್ಯಾಂಶ್ಚ ॥
ಬ್ರೂಯಾದಘ ವಿಶೇಷನ್ ಪ್ರತಿಮಾಸಂ ರಾಶಿಶುಕ್ರಮಾತ್ ಸೂರ್ಯೋ
ಅನ್ಯತಿಥಾವುತ್ಪಾತಾಯೇಡಮರ್ತಯೇ ರಾಜ್ಞಾಂ ॥

ಅಮಾವಾಸ್ಯೆ ಪೌರ್ಣಮಿಗಳಲ್ಲಿ ಅತಿವೃಷ್ಟಿ, ಉಲ್ಕಾಪಾತ, ದಂಡ, ಪರಿ, ವೇಷ, ಸೂರ್ಯ ಚಂದ್ರಗ್ರಹಣ, ಪ್ರತಿಸೂರ್ಯ, ರಜೋನಿಹಾರ ದಿಗ್ದಾಹ ಗಂಧರ್ವ ನಗರವೇ ಮೊದಲಾದುವುಗಳನ್ನು ನೋಡಿ ವಸ್ತುಗಳ ಬೆಲೆಯ ಏರಿಳಿತವನ್ನು ಮೇಷಾದಿ ಮಾಸಗಳಲ್ಲಿ ಈ ಕೆಳಗಣ ರೀತಿಯಿಂದ ಆದೇಶಿಸುವುದು.

ಅಮಾವಾಸ್ಯೆ, ಪೌರ್ಣಮಿಗಳಲ್ಲದ ದಿನಗಳಲ್ಲಿ ಮೇಲೆ ಹೇಳಿದ ಉಲ್ಕಾಪಾತಾದಿಗಳನ್ನು ಕಂಡರೆ ಅರಸನ ಅನಿಷ್ಟಕ್ಕೆಂದೂ ರಾಜ್ಯ ಕಲಹಕ್ಕೆಂದೂ ತಿಳಿಯುವುದು. ಉಲ್ಕಾಪಾತ ಮೊದಲಾದುವುಗಳ ಲಕ್ಷಣವನ್ನು ಬೃಹತ್ಸಂಹಿತೆಯಲ್ಲಿ ವಿಪುಲವಾಗಿ ಕಾಣಬಹುದು. ಅವುಗಳನ್ನು ವಿಸ್ತರಭಯದಿಂದ ಕೊಡಲಾಗುವುದಿಲ್ಲ.

ಮೇಷಮಾಸದ ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಉಲ್ಕಾಪಾತಾದಿಗಳನ್ನು ಕಂಡರೆ ವಣಿಜನು ಗ್ರೀಷ್ಮಋತುವಿನ ಧಾನ್ಯಗಳನ್ನು ಸಂಗ್ರಹಿಸಿ ನಾಲ್ಕನೆ ತಿಂಗಳಲ್ಲಿ ಮಾರಿದರೆ ಲಾಭವನ್ನು ಹೊಂದುವನು. ವೃಷಭಮಾಸದ ಪರ್ವಗಳಲ್ಲಿ ಉಲ್ಕಾದಿಗಳುಂಟಾದುವಾದರೆ ವನ್ಯ ವಸ್ತುಗಳಿಂದ ನಾಲ್ಕನೆ ತಿಂಗಳಲ್ಲಿ ಆದಾಯವು ಉಂಟಾಗುವುದುವುದು.

ಮಿಥುನ ಮಾಸದ ಹುಣ್ಣಿಮೆ ಅಮಾವಾಸ್ಯೆಗಳಂದು ಅತಿವೃಷ್ಟ್ಯಾದಿ ಅಶುಭ ನಿಮಿತ್ತಗಳು ಸಂಭವಿಸಿದುವಾದರೆ ವಣಿಜನು ಮಧುರಾದಿ ರಸದ್ರವ್ಯವನ್ನೂ, ಧಾನ್ಯವನ್ನೂ ಸಂಗ್ರಹಿಸಿಡಬೇಕು. ಆರನೇ ತಿಂಗಳಲ್ಲಿ ಅವುಗಳ ವಿಕ್ರಯದಿಂದ ಲಾಭವು ಜನಿಸುವುದು.

ಕರ್ಕಾಟಕ ಮಾಸದ ಹುಣ್ಣಿಮೆ ಅಮಾವಾಸ್ಯೆಗಳಂದು ಪರಿವೇಷಾದಿಗಳುಂಟಾದುವಾದರೆ, ಜೇನು ಸುಗಂಧದ್ರವ್ಯ, ಎಣ್ಣೆ, ತುಪ್ಪ, ಬೆಲ್ಲ, ಇವುಗಳಿಂದ ಎರಡನೇ ತಿಂಗಳಲ್ಲಿ ಮಾರಾಟದಿಂದ ಲಾಭ ಉಂಟಾಗುವುದು. ಊನಮಾಸವಾದರೆ ನಷ್ಟವು ಉಂಟಾಗುವುದು. ಆ ವರುಷ ಅಧಿಕಮಾಸ ಉಂಟಾದರೂ ನಷ್ಟವೇ ಉಂಟಾಗುವುದು.

ಸಿಂಹಮಾಸದ ಪರ್ವತಿಥಿಗಳಂದು ಮೇಲಿನ ಪದ್ಯಗಳಲ್ಲಿ ಹೇಳಿದ ಗ್ರಹಣಾದಿಗಳು ಸಂಭವಿಸಿದುವಾದರೆ, ಮಣಿ, ಚರ್ಮ, ಆಯುಧ, ಮುತ್ತು, ಬೆಳ್ಳಿಗಳನ್ನು ವಣಿಜನು ಕೊಂಡು ಐದನೆಯ ತಿಂಗಳಲ್ಲಿ ಮಾರಿದರೆ ಲಾಭವನ್ನು ಹೊಂದುವನು ಹೀನಾಧಿಕ ವರ್ಗಗಳಲ್ಲಿ ಲಾಭವಾಗದು.

ಕನ್ಯಾಮಾಸದ ಹುಣ್ಣಿಮೆ ಅಮಾವಾಸ್ಯೆಗಳಂದು ಗ್ರಹಣಾದಿಗಳುಂಟಾದುವಾದರೆ, ಚಾಮರ, ಕತ್ತೆ, ಒಂಟೆ, ಕುದುರೆ ಇವುಗಳ ವಣಿಜನು ಆರನೆ ಇಮ್ಮಡಿ ಲಾಭವನ್ನು ಹೊಂದುವನು.

ತುಲಾ ಮಾಸದ ಪರ್ವತಿಥಿಗಳಂದು ಪರಿವೇಷಾದಿಗಳುಂಟಾದುವಾದರೆ ನೂಲಿನಿಂದ ಉಂಟಾದ ವಸ್ತುಗಳಿಗೂ, ಕಂಬಳಿಗೂ, ಕಾಜಿಗೂ, ಹಳದಿ ಬಣ್ಣದ ಹೂಗಳಿಗೂ ಆರನೆ ತಿಂಗಳಲ್ಲಿ ಬೆಲೆ ಏರುವುದು. ಆಗ ವಣಿಜನಿಗೆ ಇಮ್ಮಡಿ ಲಾಭವು ಉಂಟಾಗುವುದು.

ವೃಶ್ಚಿಕ ಮಾಸದ ಹುಣ್ಣಿಮೆ ಅಮಾವಾಸ್ಯೆಗಳಂದು [illegible] ಮೊದಲಾದವುಗಳುಂಟಾದುವಾದರೆ ವಣಿಜನು, ಫಲ, ಗಡ್ಡೆಗೆಣಸು, ವಿವಿಧ ರತ್ನ ಇವುಗಳಿಂದ ಎರಡು ವರ್ಷಾನಂತರ ಲಾಭವನ್ನು ಹೊಂದುವನು.

ಧನು ಮಾಸದ ಪರ್ವಗಳಲ್ಲಿ ಪರಿವೇಷಾದಿಗಳುಂಟಾದುವಾದರೆ ಕುಂಕುಮ ಶಂಖ, ಹವಳ, ಕಂಚು, ಮುತ್ತು ಇವುಗಳಿಂದ ವಣಿಜನು ಆರನೆ ತಿಂಗಳಲ್ಲಿ ಎರಡು ಪಾಲಷ್ಟು ಲಾಭವನ್ನು ಪಡೆಯುವನು.

ಮಕರ ಮಾಸದಲ್ಲಿ ಕುಂಭ ಮಾಸಗಳ ಹುಣ್ಣಿಮೆ ಅಮಾವಾಸ್ಯೆಗಳಂದು ಗ್ರಹಣ, ಉಲ್ಕಾಪಾತಾದಿಗಳುಂಟಾದುವಾದರೆ ಧಾನ್ಯ ಮತ್ತು ಲೋಹ ಭಾಂಡಗಳ ಮಾರಾಟದಿಂದ ವಣಿಜನು ಎರಡನೆ ತಿಂಗಳಲ್ಲಿ ಎರಡರಷ್ಟು ಲಾಭವನ್ನು ಪಡೆಯುವನು.

ಮೀನ ಮಾಸದ ಪರ್ವತಿಥಿಗಳಂದು ಗ್ರಹಣಾದಿ ನಿಮಿತ್ತಗಳುಂಟಾದುವಾದರೆ ಮೂಲದ್ರವ್ಯ; ಫಲ, ಗಡ್ಡೆಗೆಣಸು, ಪಾತ್ರೆ, ರತ್ನ, ಇವುಗಳಿಂದ ಆರನೆ ತಿಂಗಳಲ್ಲಿ ಲಾಭವನ್ನು ಹೊಂದುವನು.

ಮೇಷಾದಿ ಯಾವ ರಾಶಿಗಳಲ್ಲಿ, ಚಂದ್ರ ಇಲ್ಲವೆ ಸೂರ್ಯನು ಇದ್ದಾಗ ಈ ಪರಿವೇಷಾದಿಗಳು ಉಂಟಾಗುವವೋ ಆ ಸಮಯ ರವಿಚಂದ್ರರು ಅಧಿಮಿತ್ರರ ಯುತಿದೃಷ್ಟಿಯನ್ನು ಹೊಂದಿದ್ದರೆ ಲಾಭ ಉಂಟಾಗುವುದೆಂದು ತಿಳಿಯುವುದು.

ಹುಣ್ಣಿಮೆ ಅಮಾವಾಸ್ಯೆಗಳಂದು ಚಂದ್ರನಿಗೆ ಶುಭಯುತಿ ಶುಭವೀಕ್ಷಣೆಯು ಇರುವುದಾದರೆ ಮೇಲೆ ಹೇಳಿದಂತೆಯೇ ಫಾಯಿದೆಯು ಉಂಟಾಗುವುದು. ಅಶುಭ ದೃಷ್ಟಿ ಅಶುಭಯೋಗಗಳು ಉಂಟಾದರೆ ಆ ಮಾಸಗಳಿಗೆ ಹೇಳಿದ ವಸ್ತುಗಳ ವಿಕ್ರಯದಿಂದ ಲಾಭವನ್ನು ವಣಿಜನು ಹೊಂದಲಾರನು.

ಮೂಲ

ಮೇಷೋಪಗತೇ ಸೂರ್ಯೇ
ಗ್ರೀಷ್ಮಜಧಾನ್ಯಸ್ಯ ಸಂಗ್ರಹಂಕೃತ್ವಾ ।
ವನಮೂಲ ಫಲಸ್ಯ ವೃಷೇ
ಚತುರ್ಥೇ ಮಾಸೇ ತಯೋರ್ಲಾಭಃ ॥
ಮಿಥುನಸ್ಥೇ ಸರ್ವರಸಾನ್
ಧಾನ್ಯಾನಿ ಚ ಸಂಗ್ರಹಂ ಸಮುಪನೀಯೇ ।
ಷಷ್ಠೇ ಮಾಸೇ ವಿಪುಲಂ ವಿಕ್ರೇತಾ—
ಪ್ರಾಪ್ನುಯಾಲ್ಲಾಭಂ॥

(೩೬ನೇ ಪುಟಕ್ಕೆ ಮುಂದುವರಿಸಿಯದೆ.)



ಜಾಗತಿಕ ಪ್ರದರ್ಶನಕ್ಕಾಗಿ ಕಟ್ಟಿಸಿದ 200 ಅಡಿ ಎತ್ತರವ ವ್ಯಾಸದ ಗೋಲ ಮತ್ತು ತ್ರಿಕೋಣಾಕಾರದ 700 ಅಡಿ "ಮಿನಾರ್"

ಅಮೇರಿಕದ ಜಾಗತಿಕ ಪ್ರದರ್ಶನ

ಆಧುನಿಕ ಶಿಲ್ಪಕಲಾ ಕೌಶಲ್ಯದ ಅದ್ಭುತ.

ಪ್ರದರ್ಶನ ಮಂದಿರಗಳ ವಿವರ—ವ್ಯಯದ ಅಂಕೆ ಸಂಖ್ಯೆಗಳು, ಪ್ರವಾಸಿಗಳಿಗೆ ಸೌಕರ್ಯಗಳು.

ನ್ಯೂಯಾರ್ಕ್ ನಗರದ ಬಳಿ ನಡೆದ ಜಾಗ್ರ… ಪ್ರದರ್ಶನವು, ಜಗತ್ತಿನ ಇತಿಹಾಸದಲ್ಲಿ ಪ್ರಸಿದ್ಧವಾದು… ಇದರ ಬಗ್ಗೆ ರಚಿಸಲಾದ ಮಂದಿರಗಳು ಆಧುನಿಕ ಶಿ… ಕಲೆಯ ಅದ್ಭುತ ಮಾದರಿಯಾಗಿವೆ ಪ್ರದರ್ಶನ ಮ… ದಿರ–ಸ್ಥಳಸೌಕರ್ಯ–ಮೊದಲಾದುವುಗಳ ಬಗ್ಗೆ ವ್ಯ… ಸಿದ ದ್ರವ್ಯದ ಅಂಕೆಸಂಖ್ಯೆಗಳು ಪಾಶ್ಚಿಮಾತ್ಯ ಸಂಪತ… ಶ್ರಮವೂ ಏನನ್ನೂ ಸಾಧಿಸಬಲ್ಲುದೆಂಬುದನ… ಸೂಚಿಸುತ್ತವೆ.

ನ್ಯೂಯಾರ್ಕ್ ಜಾಗತಿಕ ಪ್ರದರ್ಶನವು ಜಗತ್ಪ್ರಸಿದ್ಧವಾದುದು. ಇದನ್ನು ಏರ್ಪಡಿಸಲು ಕೋಟಿಗಟ್ಟಲೆ ದ್ರವ್ಯ ವ್ಯಯಿಸಿ, ಮಹಾ ಕಟ್ಟಡಗಳನ್ನು ಕಟ್ಟಿಸಿರುವರು. 181 ಜನ ಶಿಲ್ಪಿಗಳೂ, ಚಿತ್ರಗಾರರರೂ, ಈ ಕಟ್ಟಡವನ್ನು ರಚಿಸುವುದಕ್ಕೆ ಸಲಹೆಗಳನ್ನು ಕೊಟ್ಟರು. ಶ್ರೇಷ್ಠ ಕಲಾವಿದರೂ, ಶಿಲ್ಪಿಗಳೂ, ಯಂತ್ರಸಂಯೋಜಕರೂ ತಮ್ಮ ಕೌಶಲ್ಯವನ್ನು ಇದರಲ್ಲಿ ಪ್ರದರ್ಶಿಸುವಂತೆ ಸಂದರ್ಭವನ್ನು ಒದಗಿಸಿ ಕೊಟ್ಟಿರುತ್ತಾರೆ.

ಪ್ರದರ್ಶನರಂಗದಲ್ಲಿ ಕಡಿಮೆಯೆಂದರೆ 50,000,000 ಜನರು ಸಂಚಾರ ಮಾಡಬಹುದು. "ಭಾವೀ ಕಟ್ಟೋಣಗಳನ್ನು ಕಟ್ಟುವುದಿದ್ದರೆ ಈ ರೀತಿಯ ಕಟ್ಟಡಗಳನ್ನು ಕಟ್ಟಿರಿ" ಎಂದು ಸೂಚಿಸಲು ಇದು ಮಾದರಿಯ ಕಟ್ಟಡವಾಗಿ ರಚಿತವಾಯಿತು. ಇದರ ವಿಸ್ತೀರ್ಣವು 1,216½ ಎಕರೆಯಾಗಿದೆ. ಎಲ್ಲಾ ತರದ ಅನುಕೂಲತೆಗಳಿಂದಲೂ, ಬಣ್ಣಗಳಿಂದಲೂ ಈ ಮಂದಿರವು ತುಂಬಿ ಹೋಗಿದ್ದು ಗಂಭೀರವಾಗಿ ಮಹತ್ತಾಗಿ ಕಾಣುತ್ತಿದೆ.

ಸುತ್ತಲೂ ವೃತ್ತಾಕಾರದಲ್ಲಿ 10,000 ಮರಗಳನ್ನು ನೆಟ್ಟಿರುತ್ತಾರೆ. ಹೂವಿನ ತೋಟಗಳೂ ಇವೆ. ಹಿಂದಿನ ಜಾತ್ರೆಗಳಿಗೆ ಬಂದು, ಬಿಸಿಲಲ್ಲಿ ಬಳಲಿ, ತಮ್ಮ ಕಾಲುಗಳನ್ನು ಸುಟ್ಟುಕೊಂಡ ಪ್ರಯಾಣಿಕರು ಈಗ ಆ ರೀತಿ ಕಷ್ಟಪಡಬೇಕಾಗಿಲ್ಲ—

ಅವರು ಸೆಕೆಯಿಂದ ಬಳಲಬೇಕಾಗಿಲ್ಲ. ಅಲ್ಲಲ್ಲಿ ಕಾರಂಜಿಗಳಿಂದ ನಿ… ಹಾರುತ್ತಿರುವುದು. ತಂಪಾದ ಗಾಳಿಯು ಬೀಸುವುದು.

50,000 ಬೆಂಚುಗಳನ್ನು ಸಾಲಾಗಿ ಇರಿಸಿರುತ್ತಾರೆ; 8,000 ಸುಖಾ… ಗಳನ್ನಿರಿಸಿರುತ್ತಾರೆ. ನಡೆದು ನಡೆದು ದಣಿದವರು ವಿಶ್ರಾಮ ಹೊಂದಲೆ… ಈ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಇಂದು ನ್ಯೂಯೋರ್ಕ್ ನಗರವನ್ನು ನೋಡಲು ಬಯಸದವರು ತಿ… ಸ್ವಲ್ಪ ಜನರಿರಬಹುದು. ನೋಡಿದವರು ಎಷ್ಟೋ ದಿನಗಳ ವರೆಗೆ ತ… ಕಂಡ ವಿಚಾರಗಳನ್ನು ಜನರಿಗೆ ಹೇಳುತ್ತಾರೆ. ಆದ್ದರಿಂದಲೇ ಇಂತಹ ಒ… ಕಟ್ಟೋಣದ ಅಗತ್ಯ ಕಂಡುಬಂದಿತು.

ಜಾತ್ರೆ ನಡೆಯುವಾಗ ಪ್ರತಿ ದಿನ ಸಾಧಾರಣ 250,000 ಜನರು ನೆರೆ… ತ್ತಾರೆ. ವಿಶೇಷ ದಿನಗಳಲ್ಲಿ 800,000 ಜನರು ಸೇರುತ್ತಾರೆ.

ಜಲಮಾರ್ಗವಾಗಿಯೂ ನೆಲಮಾರ್ಗವಾಗಿಯೂ, ವಾಯುಮಾ… ವಾಗಿಯೂ ಜನರು ಇಲ್ಲಿಗೆ ಬರಬಹುದು. ಅಂತಹ ಅನುಕೂಲತೆಗಳಿವೆ. ಗ… 160,000 ಜನರನ್ನು ಸಾಗಿಸಬಹುದು. ಈ ಜಾತ್ರೆಗೆ ಬರುವ ಜನರಲ್ಲಿ …

(೩೭ನೇ ಪುಟಕ್ಕೆ ಮುಂದುವರಿಸಿಯದೆ.)

ಕರ್ಕಿಣ್ಯಾರ್ಕೇ ಮಧುಗಂಧ ತೈಲ
ಘೃತ ಫಾಣಿತಾನಿ ವಿನಿಧಾಯ ।
ದ್ವಿಗುಣ ದ್ವಿತೀಯ ಮಾಸೇ
ಲಬ್ಧಿರ್ಹೀನಾಧಿಕೇ ಭೇದಃ ॥

ಸಿಂಹೇ ಮಣಿಚರ್ಮ
ಮರ್ಮ ಶಾಸ್ತ್ರಾ ಮೌಕ್ತಿಕಂ ರಜತಂ ।
ಪಂಚಮ ಮಾಸೇರ್ಲಬ್ಧಿಃ—
ರ್ವಿಕ್ರೇತುರತೋಽನ್ಯಥಾ ಭೇದಃ ॥

ಕನ್ಯಾಗತೇ ದಿನಕರೇ
ಚಾಮರಖರ ಕರಭವಾಜಿನಾಂಕ್ರೇತಾ ॥
ಷಷ್ಠೇ ಮಾಸೇ ದ್ವಿಗುಣಂ
ಲಾಭಮವಾಪ್ನೋತಿ ವಿಕ್ರೇಣನ್ ॥

ತೌಲಿನಿ ತಾಂತವ ಭಾಂಡಂ
ಮಣಿ ಕಂಬಲಿ ಕಾಚ ಪೀತ ಕುಸುಮಾನಿ ।
ಆದದ್ಯಾದ್ಧಾನ್ಯಾನಿ ಚ
ವರ್ಷಾರ್ಧಾತ್ ದ್ವಿಗುಣಿತಾ ವೃದ್ಧಿಃ ॥

ವೃಶ್ಚಿಕ ಸಂಸ್ಥೇ ಸವಿತಂ
ಫಲಕಂದ ಮೂಲ ವಿವಿಧ ರತ್ನಾನಿ ।
ವರ್ಷದ್ವಯ ಮುಷ್ಕಿತಾನಿ
ದ್ವಿಗುಣಂ ಲಾಭಂ ಪ್ರಯಚ್ಛಂತಿ ॥

ಚಾಪಗತೇ ಗೃಹ್ಣಿಯಾತ್
ಕುಂಕುಮ ಶಂಖ ಪ್ರವಾಲ ಕಾಚಾನಿ ।
ಮುಕ್ತಾಫಲಾನಿ ಚ ತತೋ
ವರ್ಷಾರ್ಧಾತ್ ದ್ವಿಗುಣತಾಂ ಯಾಂತಿ ॥

ಮೃಗ ಘಟಸಂಸ್ಥೆ ಸವಿತಂ
ಗೃಹ್ಣೀಯಾಲ್ಲೋಹ ಭಾಂಡ ಧಾನ್ಯಾದಿ ।
ಸ್ಥಿತ್ವಾ ಮಾಸಂ ದದ್ಯಾತ್
ಲಾಭಾರ್ಥೀ ದ್ವಿಗುಣಮಾಪ್ನೋತಿ ॥
ಸವಿತಂ ಝುಷಮುಪಯಾತೇ
ಮೂಲ ಫಲಂ ಕಂದ ಭಾಂಡ ರತ್ನಾನಿ ।
ಸಂಸ್ಥಾಪ್ಯ ವತ್ಸರಾರ್ಧಂ
ಲಾಭಕಮಿಷ್ಟಂ ಸಮಾಪ್ನೋತಿ ॥
ರಾಶೌ ರಾಶೌ ಯಸ್ಮಿನ್
ಶಿಶಿರ ಮಯೂಖಃ ಸಹಸ್ರ ಕಿರಣೋ ವಾ ।
ಯುಕ್ತೋಧಿ ಮಿತ್ರದೃಷ್ಟಃ
ಸ್ತತ್ರಾಯಂ ಲಾಭಕೋಽದಿಷ್ಟಃ ॥
ಸವಿತೃ ಸಹಿತಃ ಸಂಪೂರ್ಣೋ ವಾ
ಶುಭೈರ್ಯುತ ವೀಕ್ಷಿತಃ ।
ಶಿಶಿರ ಕಿರಣಃ ಸದ್ಯೋರ್ಘಸ್ಯ
ಪ್ರವೃದ್ಧಿಕರಃ ಸ್ಮೃತಃ ॥
ಅಶುಭ ಸಹಿತಃ ಸಂದೃಷ್ಟೋವಾ
ಹೀನಸ್ತ್ವಥವಾರವಿಃ ।
ಪ್ರತಿಗೃಹಗತಾನ್ ಭಾವಾನ್ ಬುಧ್ವಾ
ವದೇತ್ ಸದಸತ್ಫಲಂ ॥
ಬೃ. ಸ. ಅ. ೪೨.

ಎಮ್. ಸುಬ್ರಾಯ…

ಮುಂದಿ, ಯುನೈಟೆಡ್ ಸ್ಟೇಟ್ಸ್ ಮತ್ತು ಕೆನಡದ ಹಳ್ಳಿಗಳಿಂದ ಬರುವವರು ಅವರಿಗೂ ಪ್ರಯಾಣದ ಸೌಕರ್ಯವನ್ನು ಒದಗಿಸಿ ಕೊಡಲಾಗಿದೆ.

ಜಾತ್ರೆ ನಡೆಯುವಲ್ಲಿ 35,000 ಮೋಟಾರುಕಾರುಗಳು ಒಮ್ಮೆ ನಿಲ್ಲುವಷ್ಟು ಸೌಕರ್ಯವಿದೆ.

ಎರೋಪ್ಲೇನುಗಳಿಗೆ ತಂಗುವುದಕ್ಕೋಸ್ಕರ 343 ಎಕರೆ ಸ್ಥಳದಲ್ಲಿ ಬೇಕಾದ ಅನುಕೂಲತೆಗಳನ್ನು ಮಾಡಿರುತ್ತಾರೆ.

ಈ ಸ್ಥಳದ ಉತ್ತರ ದಿಕ್ಕಿನಲ್ಲಿ "ಫ್ಲಷಿಂಗ್ ಬೇ" ಎಂಬ ಕೊಲ್ಲಿಯಿದೆ. ಕೊಂಗ್ರೆಸ್ಸಿನವರು 505,000 ಡಾಲರುಗಳನ್ನು ವ್ಯಯಿಸಿ ಇದನ್ನು ಆಳ ಮಾಡಿದ್ದಾರೆ. ಹಡಗುಗಳು ಸುಲಭವಾಗಿ ಇಲ್ಲಿಗೆ ಬರಬಹುದು.

1939ರಲ್ಲಿ ಕಟ್ಟೋಣವನ್ನು ಕಟ್ಟಿದರು. ಇದಕ್ಕಿಂತ ಮೊದಲು ಈ ಸ್ಥಳವು ಕೆಸರಿನಿಂದ ತುಂಬಿತ್ತು. ಮೆರವಣಿಗೆಗಳು ಜರಗುವಾಗ ವಾಸನೆಯಿಂದ ಜನರಿಗೆ ಬಲು ಸಂಕಟವಾಗುತ್ತಿತ್ತು; ಕಣ್ಣಿಗೂ ಚೆನ್ನಾಗಿ ತೋರುತ್ತಿರಲಿಲ್ಲ.

2.200,000 ಶಿಲ್ಲಿಂಗುಗಳನ್ನು ವ್ಯಯಿಸಿ ಈ ಕೆಸರನ್ನು ತೆಗೆಸಿದರು. 190 ದಿನಗಳಲ್ಲಿ ರಾತ್ರಿ ಹಗಲೆನ್ನದೆ ಕೆಲಸಮಾಡಿಸಿ ಈ ಕೆಲಸವನ್ನು ಪೂರೈಸಿದರು.

ಅನಂತರ ಕಟ್ಟಡಗಳ ಪಂಚಾಂಗಗಳನ್ನು ಕಟ್ಟಿಸಿದರು ಆಡಳಿತ ಮಂದಿರ (Administration Building) ವನ್ನು ಪ್ರಥಮದಲ್ಲಿ ನಿರ್ಮಿಸಿದರು. ಇದಕ್ಕೆ 900,000. ಶಿಲ್ಲಿಂಗುಗಳನ್ನು ಖರ್ಚುಮಾಡಿರುತ್ತಾರೆ. 600 ಜನ ಆಫೀಸರರು ಕೆಲಸ ಮಾಡುತ್ತಾರೆ.

ಇಂತಹ ಹಲವು ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅದರಲ್ಲಿ ಪ್ರಾಮುಖ್ಯವಾದುದು 700 ಅಡಿ ಎತ್ತರದ ಗೋಪುರ, 200 ಅಡಿ ಎತ್ತರದ ವೃತ್ತಾಕಾರದ ಒಂದು ಕಟ್ಟೋಣವೂ ಆಗಿವೆ. ಪ್ರದರ್ಶನ ಮಂದಿರಗಳನ್ನು ರಚಿಸಲು 4,683,000 ಶಿಲ್ಲಿಂಗುಗಳನ್ನು ಖರ್ಚುಮಾಡಿರುತ್ತಾರೆ.

ವೃತ್ತಾಕಾರದಲ್ಲಿ ನಿರ್ಮಿಸಿದ ಕಟ್ಟಡವು, 18 ಅಂತಸ್ತುಗಳಿಂದ ಕೂಡಿದೆ: 18 ಉಕ್ಕಿನ ಕಂಬಗಳ ಮೇಲೆ ನಿಂತಿದೆ; 9,300,000 ರಾತಲು ಭಾರವಾಗಿದೆ. ಇದರ ತಲೆಯ ಮೇಲೆ ಒಂದು ಗುಮ್ಮಟ (Globe) ಇದೆ. ಇದರ ಸುತ್ತಲೂ ನೀರಿದೆ.

ಏಣಿಯ ಸಹಾಯದಿಂದ 50 ಅಡಿಗಳ ಎತ್ತರದ ವರೆಗೆ ಹೋಗಲು ಸಾಧ್ಯವಿದೆ. ಪ್ರವಾಸಿಗಳು ಅಲ್ಲಿಯ ವರೆಗೆ ಹೋಗಬಹುದು. ಇಲ್ಲಿ 1,000 ಜನರು ನಿಂತು ಕೆಳಗಿನ ದೃಶ್ಯಗಳನ್ನು ಸುಖವಾಗಿ ನೋಡಬಹುದು. ಇದರ ಒಳಗಿನ ಸ್ಥಳದ ಒಂದು ಸುತ್ತು ಬರುವುದಕ್ಕೆ 15 ಮಿನಿಟುಗಳು ಬೇಕಾಗುವುವು.

ಒಂದು ಕಟ್ಟೋಣದಿಂದ ಮತ್ತೊಂದು ಕಟ್ಟೋಣಕ್ಕೆ ಹೋಗಲು ಮೇಲಿನಿಂದ ಸಂಕವನ್ನು ಕಟ್ಟಿರುತ್ತಾರೆ.

700 ಅಡಿ ಎತ್ತರದ ಗೋಪುರದಿಂದ ಕೆಳಗೆ ಬರಲು 900 ಅಡಿ ಉದ್ದದ ವಕ್ರಾಕಾರವಾದ ದಾರಿಯಿದೆ.

200 ಅಡಿ ಎತ್ತರದ ವೃತ್ತಾಕಾರದ ಕಟ್ಟಡವು ಸೊಗಸಾಗಿ ಕಾಣುವಂತೆ ದೂರದಲ್ಲಿ ಹೆಚ್ಚು ಪ್ರಕಾಶವುಳ್ಳ ವಿದ್ಯುದ್ದೀಪಗಳನ್ನು ಇರಿಸಿದ್ದಾರೆ. ಈ ದೀಪಗಳು ಕ್ಷಣಕ್ಷಣಕ್ಕೆ ಹಲವು ಬಣ್ಣದ ಪ್ರಕಾಶಗಳನ್ನು ಈ ಮಂದಿರದ ಮೇಲೆ ಚೆಲ್ಲುವವು. ಫಕ್ಕನೇ ನೋಡುವಾಗ ಮಂದಿರದ ತಲೆಯಲ್ಲಿರುವ ಗೋಮಟವು ಮೆಲ್ಲನೇ ತಿರುಗುತ್ತದೋ ಎಂದು ತೋರುತ್ತಿದೆ; 700 ಅಡಿ ಎತ್ತರದ ಗೋಪುರದಿಂದ ರೇಡಿಯೋ ಬ್ರಾಡ್ ಕಾಸ್ಟ್ ಮಾಡುತ್ತಾರೆ, ಅಂತರ್ರಾಷ್ಟ್ರೀಯ ವಿಷಯಗಳನ್ನು ಇಲ್ಲಿ ಪ್ರಚಾರ ಮಾಡುತ್ತಾರೆ.



ಜಾಗ್ರತಿಕ ಪ್ರದರ್ಶನದ ಬಗ್ಗೆ ಸಂಗೀತ ಶಾಲೆ ಹೇಗಿರಬೇಕೆಂದು ಆಧುನಿಕ ಕಲಾವಿದನೊಬ್ಬನು ಈ ಚಿತ್ರ ಬರೆದು ಸೂಚಿಸಿರುವನು.

ಇತರ ಕಟ್ಟಡಗಳಿಗೂ ವಿದ್ಯುದ್ದೀಪಗಳ ಅಲಂಕಾರಗಳನ್ನು ಮಾಡಿರುತ್ತಾರೆ. ಒಟ್ಟಿನಲ್ಲಿ ಈ ಪ್ರದೇಶವು—ಸ್ವರ್ಗದಂತೆ ತೋರುತ್ತಿದೆ — ಇಂದು ಸಂಬಲಸಾಧ್ಯವಾದ ಶೋಧನೆಗಳನ್ನು ಮಾಡಿ ಇಲ್ಲಿ ಪ್ರದರ್ಶಿಸಬಹುದು. ಮನುಷ್ಯನಿಗೆ ನಿರ್ಮಾಣ ಮಾಡಲು ಸಾಧ್ಯವಿಲ್ಲದ್ದು ಯಾವುದೂ. ಇಲ್ಲವೆಂಬುದನ್ನು ಇದು ತೋರಿಸುತ್ತದೆ. ಮನುಷ್ಯನು ಸುಖವನ್ನು ಹೇಗೆ ಹೆಚ್ಚಿಸಬಹುದು ಎಂಬುದನ್ನು ಇದು ತೋರಿಸುತ್ತದೆ.

ಶೋಧನೆಗಳ ಖಾಸಗಿ ಪ್ರದರ್ಶನಗಳನ್ನು ನಡೆಸಲು 389 ಎಕರೆ ಸ್ಥಳವನ್ನು ಪ್ರತ್ಯೇಕಿಸಿ ಇಟ್ಟಿರುತ್ತಾರೆ. ಅವರು 14½ ಕೋಟಿ ರೂಪಾಯಿ ಖರ್ಚು ಮಾಡಿರುತ್ತಾರೆ.

280 ಎಕರೆ ಸ್ಥಳದಲ್ಲಿ ತಮಾಷೆಯ ಮೋಜಾಟಗಳನ್ನು ನಡೆಸುವ ಅನುಕೂಲತೆಗಳನ್ನು ಒದಗಿಸಿಕೊಟ್ಟಿರುತ್ತಾರೆ.

29 ಎಕರೆ ಸ್ಥಳವು ಪರದೇಶೀಯವರ ಸೌಕರ್ಯಕ್ಕಾಗಿ ಪ್ರತ್ಯೇಕಿಸಲ್ಪಟ್ಟಿದೆ. 31 ಎಕರೆ ಸ್ಥಳವು ಇತರ ರಾಷ್ಟ್ರಗಳ ಉಪಯೋಗಕ್ಕಾಗಿ ಉಪಯೋಗಿಸಲ್ಪಟ್ಟಿದೆ- ಅಂತರ್ರಾಷ್ಟ್ರೀಯ ಹಬ್ಬವಾಗಲೆಂದು ಈ ಸೌಕರ್ಯವನ್ನು ಅಮೇರಿಕದವರು ಒದಗಿಸಿದ್ದಾರೆ. ಇಷ್ಟು ದೊಡ್ಡ ಕಟ್ಟಡಗಳನ್ನು ಕಟ್ಟಿರುತ್ತಾರೆ. ಮನುಷ್ಯನು ತನ್ನ ಸುಖವನ್ನು ಹೇಗೆ ಹೆಚ್ಚಿಸಬಹುದೆಂದು ಅವರು ಮಾರ್ಗ ತೋರಿಸಿದ್ದಾರೆ.

ಮುಂದಿನ ಜನಾಂಗವು ಯಾವ ರೀತಿ ಸುಖದಿಂದ ಬಾಳಬೇಕೆಂದು ಅವರು ಅಡಿಗಲ್ಲು ಹಾಕಿಕೊಟ್ಟಿದ್ದಾರೆ.

ಪ್ರಪಂಚದ ಪ್ರಸಿದ್ಧ ಶ್ರೀಮಂತರು.

1.	ಇಡ್ಸೆಲ್ ಫೋರ್ಡ್	ಅಮೇರಿಕ
2.	ಹೆನ್ರಿ ಫೋರ್ಡ್	,,
3.	ಎಡ್ವಾರ್ಡ್ ಡಿ ರೇಶ್‌ಚೈಲ್ಡ್	ಫ್ರಾನ್ಸ್
4.	ಡ್ಯೂಕ್ ಒಫ್ ವೆಸ್ಟ್‌ಮಿನ್ಸ್ಟರ್	ಬ್ರಿಟೈನ್
5.	ವಿಲ್ಲಿಯಮ್	ಜರ್ಮನಿ
6.	ಬಡೋದೆ ಗಾಯಕವಾಡರು	ಬಡೋದೆ
7.	ಸೈಮನ್ ಬೆಟಿನೊ	ಬೊಲಿವಿಯಾ
8.	ಲೋರ್ಡ್ ಐವೀಫ್	ಬ್ರಿಟೈನ್
9.	ಆಗಾಖಾನ್	(ಇಂಡಿಯಾ)
10.	ನೈಝಾಮ್	ಹೈದಾರಾಬಾದು
11.	ಜಿ. ಡಿ. ವೆಂಡೆಲ್	ಫ್ರಾನ್ಸ್
12.	ಜೋನ್ ರೊಕ್‌ಫೆಲ್ಲರ್	ಅಮೇರಿಕ
13.	ಲೂಯಿ ಲೂಯಿಡ್ರೈಫಸ್	ಫ್ರಾನ್ಸ್
14.	ಫ್ರಿಟ್ಝ್ ಥೈಸೀನ್	ಜರ್ಮನಿ
15.	ಇನ್ ಯಾಂಗ್‌ಸಾಂಗ್	ಚೀನಿ
16.	ಫ್ರೆಂಕ್‌ಸ್ಟೈನ್ ಲಾರ್ಚ್	ಕ್ಯೂಬಾ
17.	ಫ್ರೆಡರಿಕ್ ಫ್ಲಿಕ್	ಜರ್ಮನಿ



ಕಾಶಿ ನಗರದ ಒಂದು ರಸ್ತೆ.

ಮಹಾಕ್ಷೇತ್ರ—ಕಾಶಿ

ಪ್ರಪಂಚ ಪ್ರಸಿದ್ಧವಾದ ದೇವಾಲಯಗಳ ಕೇಂದ್ರ

ಜಾಗತಿಕ ಬದಲಾವಣೆಗಳಿಗೆ ಮಣಿಯದ ಪುರಾತನ ನಗರದ ಪರಿಚಯ.

ಗಂಗಾನದಿಯು ಹಿಂದೂಸ್ಥಾನದ ಜೀವನ ರಕ್ತವಾದರೆ—ಕಾಶಿಯು ಹಿಂದುಸ್ಥಾನದ ಹೃತ್ಕೋಶವಾಗಿದೆ. ಈ ಸ್ಥಳದಲ್ಲಿ ಗಂಗಾನದಿಯು ಬಹಳ ವಿಶಾಲವಾಗಿದೆ. ಆದ್ದರಿಂದ ಇದರ ಪವಿತ್ರತೆಯು ಇನ್ನೂ ಹೆಚ್ಚಿದೆ. ಉತ್ತರ ದಿಕ್ಕಿಗೆ ಹರಿದಿದ ಗಂಗಾನದಿಯ ಪ್ರವಾಹವು—ಶಿವನ ನಿವಾಸವಾದ ಹಿಮಾಲಯವನ್ನು ವಂದಿಸುತ್ತದೋ ಎಂದು ತೋರುತ್ತದೆ.

ಶಿವನು ಈ ಸ್ಥಳವನ್ನು ಹರಸಿರುವನೆನ್ನುವರು. ಇಲ್ಲಿಯ ಘಟ್ಟಗಳು ಯಾವಾಗಲೂ ಯಾತ್ರಿಕರಿಂದ ತುಂಬಿರುತ್ತವೆ. ಹಲವರು ಬಹಳ ಗರೀಬರಾಗಿರುತ್ತಾರೆ. ಅತೀ ದೂರದಿಂದ ಜನರು ಇಲ್ಲಿಗೆ ಬರುವರು. ಪ್ರಯಾಣಕ್ಕೆ ತಗಲುವ ವೆಚ್ಚವೂ ಸಹಿಸಬೇಕಾದ ಕಷ್ಟವೂ ಯಾತ್ರಿಕರ ಗಮನಕ್ಕೆ ಬರುವುದಿಲ್ಲ. ಆತ್ಮೀಯ ವಿಚಾರಗಳಿಗೆ ಅವರು ಹಂಬಲಿಸಿರುವುದರಿಂದ ಈ ಕಷ್ಟಗಳನ್ನು ಅವರು ಗಣಿಸುವುದಿಲ್ಲ.

ಪಟ್ಟಣದ ದಿಕ್ಕಿಗಿರುವ ತಪ್ಪಲು ಬಲು ಎತ್ತರವಾಗಿಯೂ ಇಳಿಜಾರಾಗಿಯೂ ಇದೆ. ಈ ತಪ್ಪಲಲ್ಲಿ ನಿಂತಿರುವ ಗುಡಿಗಳು ಕಣ್ಣಿಗೆ ಅತೀ ಸುಂದರವಾಗಿ ತೋರುವುವು. ಘಟ್ಟದ ಶಿಖರಗಳಿಂದ ನದಿಗೆ ಬರುವುದಕ್ಕೆ ಉದ್ದದ, ವಿಶಾಲವಾದ ಮೆಟ್ಟಲುಗಳಿವೆ.

ಸೂರ್ಯನು ಉದಯಕ್ಕೆ ಬರುವ ಕಾಲದಲ್ಲಿ ಸುವರ್ಣದಂತೆ ಮಿರುಗುವ ಇಲ್ಲಿಯ ಸ್ತಂಭಗಳೂ, ಗೋಪುರಗಳೂ ಗೊಮ್ಮಟಗಳೂ—ಗುಡಿಯ ಶಿಖರಗಳೂ, ಅಮಾನುಷಾಕೃತಿಗಳಾಗಿ ತೋರುತ್ತವೆ. ಈ ಗುಡಿಗಳ ಹಿಂದೆ ಇಲ್ಲಿಯ ಪವಿತ್ರ ಪಟ್ಟಣವಿದೆ. ಪೂರ್ವದಲ್ಲಿ ಗಂಗಾನದಿಯು ಹರಿಯುವುದು. ಉತ್ತರ ದಕ್ಷಿಣಗಳಲ್ಲಿ ಗಂಗಾನದಿಯ ಶಾಖೆಗಳಾದ ವಾರಣ (ಅಥವಾ 'ಬಾರಣ') ಮತ್ತು 'ಅಸಿ' ಎಂಬ ನದಿಗಳು ಪ್ರವಹಿಸುತ್ತವೆ. ಪಶ್ಚಿಮದಲ್ಲಿ ಪಂಚಕೋಶ್ ಎಂಬ ಮಾರ್ಗವಿದೆ. 'ವಾರಣ' ಮತ್ತು 'ಅಸಿ'ಯ ನಡುವಣ ಪ್ರದೇಶವು ಕಾಶಿ ಅಥವಾ 'ವಾರಣಾಸಿ'ಯೆನಿಸಿತು. ಅದುವೇ ಮುಂದೆ 'ಬನಾರಸಿ'ಯಾಯಿತು.

ಈ ಸ್ಥಳವು ಪ್ರವರ್ಧಮಾನ ಚಂದ್ರನಂಥ ಆಕೃತಿಯುಳ್ಳದ್ದಾಗಿದೆ. ಶಿವನ ನಿವಾಸವಾದ ಕೈಲಾಸದಲ್ಲಿ ಯಾವಾಗಲೂ ಇರುವ ಚಂದ್ರನ ಪ್ರತಿರೂಪದಂತಿದೆಯೆನ್ನಬಹುದು. ಈ ಪವಿತ್ರ ಕ್ಷೇತ್ರದಲ್ಲಿ ಯಾರು ಮರಣ ಹೊಂದುತ್ತಾರೋ, ಯಾರ ಶವವನ್ನು ಇಲ್ಲಿ ದಹನಮಾಡುತ್ತಾರೋ ಅವರಿಗೆ ಮುಕ್ತಿ ದೊರೆಯುತ್ತದೆಂದು ಹಿಂದುಗಳು ನಂಬಿರುವರು

ಬಡವನಾದರೂ, ಯಾತ್ರೆಗೋಸ್ಕರ ತನ್ನ ಜೀವಿತದ ಸರ್ವಸ್ವವನ್ನು ವ್ಯಯಿಸಿ ಈ ಕ್ಷೇತ್ರ ದರುಶನ ಮಾಡಿದರೆ ಅವನು ತನ್ನ ಪಾಪಗಳನ್ನು ಪರಿಹಾರಮಾಡಿಕೊಂಡಂತಾಯಿತು.

ಕ್ರಿಸ್ತಪೂರ್ವ 500ನೇ ವರುಷದಲ್ಲಿ ಬುದ್ಧನು ತನ್ನ ಮತವನ್ನು ಪ್ರಚಾರ ಮಾಡಲು ಈ ಸ್ಥಳಕ್ಕೆ ಬಂದಾಗಲೂ, ಇದು ಪವಿತ್ರ ಕೇಂದ್ರವೆಂದೇ ಎಣಿಸಲ್ಪಡುತ್ತಿತ್ತು.

ಈ ಕ್ಷೇತ್ರವು ಎಷ್ಟೋ ಗಂಡಾಂತರಗಳಿಗೆ ಎದೆಯೊಡ್ಡಿ ಈಗಲೂ ಮೆರೆಯುತ್ತಿದೆ.

ಎಷ್ಟೋ ಗುಡಿಗಳು ನಾಶವಾಗಿವೆ. ಎಷ್ಟೋ ನೆರೆಗಳು, ಇಲ್ಲಿಯ ಘಟ್ಟಗಳನ್ನು ನೆಲದಡಿ ಮುಚ್ಚಿವೆ. ಆದರೆ ಈ ಕ್ಷೇತ್ರವನ್ನು ಮಾನವನು ನಿರ್ಮಿಸಿದ್ದಲ್ಲವೆಂದು ಈ ಗಂಡಾಂತರಗಳು ಸಾರುತ್ತಿವೆ. ಇದು ಅಮರವಾಗಿರುವ ಕ್ಷೇತ್ರವೆಂದು ಬೇರೆ ಹೇಳಬೇಕಾಗಿಲ್ಲ.

ಡಿಲ್ಲಿಯ ರಾಜಧಾನಿಗಳು ಒಂದು ದಿನ ಹುಟ್ಟಿದುವು; ಒಂದು ದಿನ ಅಳಿದವು—ಇವುಗಳಲ್ಲಿ ಮುಖ್ಯವಾದವು ಹಿಂದು, ಗುಲಾಮು, ಖಿಲ್ಜಿ, ತಗ್ಲಕ್, ಸಯ್ಯದ್, ಲೋದಿ ಮತ್ತು ಮೊಗಲ್ ಈ ವಂಶದವು. ಈ ರಾಜಧಾನಿಗಳು ನಶ್ವರವಾಗಿದ್ದುವು. ಆದರೆ ಕಾಶಿಯು ಅಂತಹ ಸ್ಥಳವಲ್ಲ. ಇಲ್ಲಿಯ ಗುಡಿಗೋಪುರಗಳನ್ನು ಅಷ್ಟು ಉತ್ತಮ ರೀತಿಯಿಂದ ಕಟ್ಟಿರುತ್ತಾರೆ. ಇಲ್ಲಿಯ ಗುಡಿಗಳ ಶಿಖರಗಳು—ಅಮರವಾದ ಒಂದು ಪಟ್ಟಣವನ್ನು ತೋರಿಸುತ್ತವೋ ಎಂಬ ಭಾವನೆಯನ್ನು ಹುಟ್ಟಿಸುತ್ತವೆ.

ಅಸಿ, ದಶಾಶ್ವಮೇಧ ಮಣಿಕರ್ಣಿಕಾ, ಪಂಚಗಂಗಾ, ಮತ್ತು ರಾಜ ಎಂಬ ಐದು ಘಟ್ಟಗಳಿವೆ. ಈ ಯಾವುದಾದರೂ ಒಂದು ಘಾಟಿಯಲ್ಲಿ ಸ್ನಾನ ಮಾಡುತ್ತಾರೆ. ಮೊದಲನೆಯ ಮತ್ತು ಕೊನೆಯ ಎರಡು ಘಾಟಿಗಳು, ಅಸಿ ಮತ್ತು ಬರ್ನಾ ನದಿಗಳು ಗಂಗಾ ನದಿಯೊಡನೆ ಮಿಲನವಾಗುವಲ್ಲಿವೆ.

ದಶಾಶ್ವಮೇಧವೆಂಬ ಘಾಟಿಯಲ್ಲೇ ಪೂರ್ವಕಾಲದಲ್ಲಿ ಬ್ರಹ್ಮನು—ದಶಾಶ್ವಮೇಧ ಯಜ್ಞವನ್ನು ಮಾಡಿದ್ದನೆನ್ನುವರು.

ಮಣಿಕರ್ಣಿಕಾ ಅಂದರೆ—[illegible] ಎಂದು ಅರ್ಥವಾಗುವುದು. ಈ ಘಾಟಿಯಲ್ಲಿ ಒಂದು ಬಾವಿ ಇದೆ. ಮಹಾದೇವಿಯ ಕಿವಿಯ ಆಭರಣವು ಇದೇ ಬಾವಿಗೆ ಬಿದ್ದಿತೆನ್ನುತ್ತಾರೆ. ಶಿವನು ಅಮೃತವನ್ನು ಪ್ರೋಕ್ಷಿಸಲು ಆಭರಣವು ಅಲ್ಲಿಯೇ ಕರಗಿ ಹೋಯಿತು. ಆದರೂ ಇದ್ದ ಸ್ಥಳದ ಮಣ್ಣನ್ನು ಎಲ್ಲಾ ರೋಗಗಳನ್ನು ಗುಣಪಡಿಸುವ ಮದ್ದನ್ನಾಗಿ ಪರಿವರ್ತಿಸಿದನು.

ಪಂಚಗಂಗಾ [illegible] ಪವಿತ್ರ ನೀರನ್ನು ಗಂಗಾ ನದಿಗೆ [illegible] ಉಪನದಿಗಳು ಕೂಡಿದ ಸ್ಥಳವಾಗಿದೆ.

ಹಲವು ಘಟ್ಟಗಳಿಗೆ ಇದೇ ರೀತಿ ಪುರಾಣಿಕತೆಯ ಸಂಬಂಧವಿದೆ. ಇಲ್ಲಿ ಸಂಸ್ಕೃತದಿಂದ ರಾಮಾಯಣವನ್ನು ಹಿಂದೀಭಾಷೆಗೆ ಪರಿವರ್ತಿಸಿದ ತುಲಸೀದಾಸನು 16ನೆಯ ಶತಮಾನದ ಕವಿಗಳಿಗೆ ಒಂದು ಭೂಷಣನಾಗಿದ್ದಾನೆ.

ಶಿವಾಲಯದ ಹಿಂಬದಿಯಲ್ಲಿ ಜಾಲಿಮಹಾಲ್—ಎಂಬ ಕೋಟೆ ಇದೆ; 1781ರಲ್ಲಿ ಹೇಸ್ಟಿಂಗ್ಸನು ಕಳುಹಿಸಿದ ಮೂರು ಆಫೀಸರರನ್ನೂ ಮತ್ತಿಬ್ಬರು ಸಿಪಾಯಿಗಳನ್ನೂ ಚೆಯತ್‌ಸಿಂಗನು ಇಲ್ಲಿಯೇ ಕೊಂದುದಾಗಿದೆ.

ಭಕ್ತವೃಂದಕ್ಕೆ—ಪುಣ್ಯಕ್ಷೇತ್ರವಾದ ಕೇದಾರನಾಥದ ನೆನಪು ಸಹಜವಾಗಿ ಬಂದೇ ಬರುತ್ತದೆ. ಕುಳಿತು ಶಿವನು ಜಗತ್ತನ್ನು ಆಳುವನೆಂದು ಜನರ ನಂಬುಗೆ. ಮಾನಸರೋವರವು ಅಲ್ಲಿರುವ ಒಂದು ತೀರ್ಥ ಸ್ಥಳ.

ಸೋಮೇಶ್ವರದಲ್ಲಿ ಸೋಮೇಶ್ವರ ದೇವರ ಗುಡಿ ಇದೆ. ಈ ದೇವರು ಎಲ್ಲಾ ರೋಗರುಜೆಗಳನ್ನು ಗುಣಪಡಿಸುವನೆಂಬ ನಂಬಿಕೆ ಜನರಲ್ಲಿದೆ. ಆದ್ದರಿಂದ ಈ ಕ್ಷೇತ್ರವು ಮಣಿಕರ್ಣಿಕಕ್ಕೆ ಸರಿಸಮಾನವಾಗಿದೆ. ಬೇನೆಗಳಿಂದ ನರಳುವ ಹೆಚ್ಚು ಮಂದಿ ಇಲ್ಲಿ ಬರುತ್ತಾರೆ.

1728ರಲ್ಲಿ ಜಯಪುರ ಸಂಸ್ಥಾನವನ್ನು ಸ್ಥಾಪನೆಮಾಡಿದ ರಾಜಾ ಸವಾಯಿ ಜಯಸಿಂಗನಿಗೆ ಖಗೋಲ ವಿಜ್ಞಾನದಲ್ಲಿರುವ ಅಭಿರುಚಿಯು—ಇಲ್ಲಿರುವ ಮಾನ ಮಂದಿರ ಎಂಬ ಶೋಧನಾಲಯವನ್ನು ನೋಡಿದ ಕೂಡಲೇ ನಮ್ಮ ನೆನಪಿಗೆ ಬರುವುದು.

ಲಲಿತಾ ಎಂಬಲ್ಲಿ ಮತ್ತೊಂದು ಗುಡಿಯಿದೆ. ನೇಪಾಳದವರು ಬಹಳ ಕುಶಲತೆಯಿಂದ ಇದನ್ನು ನಿರ್ಮಿಸಿದ್ದಾರೆ. ಅವರ ಕುಶಲತೆಯ ಪ್ರದರ್ಶನವಾಗಿ ಈ ಮಂದಿರವೆನ್ನಬಹುದು. ಇಲ್ಲಿ ತ್ರಿಲೋಚನನು ತನ್ನ ವೈರಿಗಳನ್ನು ನಾಶಮಾಡಲು ತನ್ನ ಫಾಲನೇತ್ರವನ್ನು ತೆರೆದಿರುವನು. ಇತರ ಕ್ಷೇತ್ರಗಳನ್ನು ಮುಟ್ಟಿದಂತೆ ಈ ಘಟ್ಟಗಳನ್ನು ಸನ್ಯಾಸಿಗಳು ಮುಟ್ಟುವುದಿಲ್ಲ. ಕಾಶಿಯು ಅಷ್ಟು



ದೇವನೆಲ್ಲಿ?



"ಎಲ್ಲಿ ಹುಡುಕಲು ಬೇಡ: ನಿನ್ನಲ್ಲೆ ನೀನರಸು"

ಲೇಖಕರು: ಶ್ರೀ। ಬ್ರಹ್ಮಾನಂದ ಕೆ. ಪದ್ಮಸಾಲಿ.

ವರವಸಂತದ ಕಾಲ ಬಿದ್ದ ಪೂರ್ಣಿಮೆ ದಿನವು. ಮುಸ್ಸಂಜೆಯ ಸಮಯ. ಕಾರ್ಕಳದ ವರಪುರವು, ಪುರದ ಸಂದಿನ ವನವು. ಚೆಲುವಿನಾ ವನವಾಸವು. ಸೊಬಗಿನಾ ಸುರಬೀಡು; [illegible] ತೀರ.

ನೇಸರನು ಸಾಗುವನಿನ ಕಡಲ ಸೇರುತಲಿತ್ತು. ದಿನ ಕುಂದಿ ಕಂದಾಗಿ ಸಂಜೆಗೂಡುತಲಿತ್ತು. ಬಾನಿನೊಳು ಬಣ್ಣ ಬಣ್ಣದ ಪರದೆ ಹರಡಿತ್ತು. ಮಂದ ಮಾರುತ ಮುಂದು ಮುಂದಾಗಿ ಬರುತಿತ್ತು. ಕಂಪ ಸೊಂಪನು ಹೊತ್ತು ತಂದು ಬೀಸುತಲಿತ್ತು. ಖಗ ಕುಲವು ಹಾಡುತ್ತ ಗೂಡ ಸೇರುತಲಿತ್ತು. ಮೃಗದ ಸಂಕುಲ ಮತ್ತೆ ತಾವ ಹುಡುಕುತಲಿತ್ತು. ಗೋವೃಂದ ಸಾಲಾಗಿ ಮನೆಯ ಕಡೆ ನಡೆದಿತ್ತು. ಇಂತು ವಿಶ್ರಾಂತಿಯದು ನೆಲೆಯಾಗುತಿತ್ತು.

ಜಗದ ಸೊಗ ಕಾಂಬುವದು ಎನಗೆ ಬಲು ಚಂದ. ಅದರ ಸವಿ ನೋಡುವದೆ ಎನಗೆ ಆನಂದ. ಏಕಾಂಗಿಯಾಗಿಹುದೆ ನಾನು ಅದರಿಂದ.

ಅಂದು ಆ ಸೊಗದ ಸವಿ ನಾನೇರಿ ಬಂದೆ. ಕೃಷ್ಣ ಬಂಡೆಯನೇರಿ ಕೂತುಕೊಂಡೆ. ಸೃಷ್ಟಿ ಸೌಂದರ್ಯವನು ಹೀರ ತಿಂದೆ.

ಮೆಲ್ಲ ಮೆಲ್ಲನೆ ಹೊತ್ತು ಮೀರಿ ಕತ್ತಲು ಬಂತು. ಮುಗಿಲ ಮರೆಯಿಂ ತಾರೆ ಮಿನುಗಿ ಬಂತು. ಪಡುಗಟ್ಟದಾ ಶಿಖರ ಶುಭ್ರವಾಗುತ ಬಂತು; ನಗು ಮೊಗದಿ ಚಂದ್ರ ತಾನೇರಿ ಬಂತು. ಹಿಟ್ಟು ಚೆಲ್ಲಿದ ಹಾಗೆ ಜಗವು ಆಯ್ತು; ಹಾಲು ಬಿದ್ದಂತೆ ತಾ ಬೆಳ್ಳಗಾಯ್ತು. ಚೆಲುವ ನಾಡದು ಮತ್ತೆ ಮೇರೆ ಮೀರಿತು. ಜಗದೊಳಗೆ ಅಂದವದು ಉಕ್ಕಿ ಬಂತು. ಶಾಂತ ಶಶಿಯಾ ಜಗವು ರವರಹಿತವಾಯ್ತು. ಅಂದ ಆನಂದವೇ ಎಲ್ಲೆಲ್ಲು ಆಯ್ತು.

ಜಗದ ಸೊಗವನುಮೀಂಟಿ ಮೀಂಟಿ ನೋಡಿತೆ. ಅಮಲು ಏರಿದಂತೆ ಮುಗ್ಧನಾದೆ. ಅದರೊಳಗೆ ನಾನು ಬಹು ತಲ್ಲೀನನಾದೆ. ಆ ಅಮಲಗೂಡಿನೊಳು ಸೂರೆ ಹೋದೆ. ಅಂತಿರಲು ನನ್ನ ಇರ ನನಗರಿಯದಾಯ್ತು. ನಾನೆಲ್ಲಿ ಇದ್ದೆನೋ ತಿಳಿಯದಾಯ್ತು. ಮತ್ತೇನು ಮಾಡಿದೆನೋ ಅದೂ ಮರೆಯಲಾಯ್ತು.

ಹ್ಹಾ! ಏನಿದೇನಿಹುದು! ಅತ್ಯಪೂರ್ವದ ರವವು! 'ಕ್ಲೀಂ' ಎಂಬ ಸ್ವರವೊಂದು! ಕಿವಿಕುಹರ ಭೇದಿಸಿತು—ಹೃದಯವನೆ ಭೇದಿಸಿತು. ಮುಗ್ಧನಾದೆನ್ನನ್ನು ಬಡೆದು ಎಬ್ಬಿಸಿತು.

ಎಚ್ಚೆತ್ತು ನಾನೆದ್ದೆ. ಹಿಂದು ಮುಂದು ನೋಡ್ದೆ. ಚಂದ್ರ ಬಹು ಏರಿಹನು—ರಾತ್ರೆ ಬಹು ಕಳೆದಿಹುದು. ನೀರವದ ಜಗವು ಬಹು ಗಂಭೀರವಾಗಿಹುದು. ನಾನಿನ್ನು ಇರಲಾರೆ. ಗೃಹ ಕಡೆಗೆ ನಡೆಯುವವ—ಹೆಜ್ಜೆ ಎರಡನು ಸಾರ್ದೆ. ಅನಿತರೊಳು ಮಗದೇನು? ಅಯ್ಯೊ ಏನಿಹುದಿದುವು! ಕಾಲ ಬುಡ ಕಾಲಾಹಿ!! ಹೆಡೆಯನ್ನು ಎತ್ತಿಹುದು–ಸುಯ್ಯಗುಟ್ಟುತಲಿಹುದು–ಎನ್ನ ಕಡೆ ಓಡೋಡಿ ಬರುತಲಿಹುದು!!!

ಜೀವದೊಳು ಮಿಗುದೊಂದು ಜೀವ ಬಂದಿರಬಹುದು. ಧೈರ್ಯವನು ನಾ ತಾಳಿ. ಕದಲದಲ್ಲೆ ನಿಂತೆ. ಆಗೇನು ಆಶ್ಚರ್ಯ! ಕೃಷ್ಣ ಫಣಿಯದು ನೋಡಿತು. ತಪ್ಪನ್ನು ತಾನೊಪ್ಪಿ, ಹಿಮ್ಮುಖವ ಹಾಕುತ್ತ ಸರಿದು ಹೋಯ್ತು. ಕಲ್ಲ ನಡುವಿನ ತನ್ನ ಬಿಲ ಸೇರಿ ಬಿಡ್ತು.

ಏರಲಾರದ ಭಾರವೊಂದನ್ನು ಎನ್ನ ತಲೆ ಮೇಲೆ ಏರಿದಂತೆ ಆಗ ಎನಗಾಯ್ತು. ಬಂದ ಆಪತ್ತು ತಾ ಸರಿದು ಹೋಯ್ತು. ಹೋದ ಪರಿ ಮಾತ್ರ ಅದು ಎನಗರಿಯದಾಯ್ತು. ಎನ್ನ ಜೀವಕೆ ಜೀವ ಇತ್ತವರು ಆರು? ಮೃತ್ಯುವಿಂದೆನ್ನನ್ನು ಕಾದವರು ಆರು? ಕಾಳಾಹಿಯಾಭರಣ ಸಂಹರಿಸಿದರಾರು? ಮುಗ್ಧನಾದೆನ್ನನ್ನು ಎಚ್ಚರಿಸಿದರಾರು? ಹ್ಹಾ! ಯಾರು? ಯಾರು? 'ಕ್ಲೀಂ' ಎಂಬ ಪ್ರಾಣರವ ಆರದಿರಬಹುದು? ಮೃಗದ ರವವದು ಅಲ್ಲ; ಪಕ್ಷಿಗಾರವ ಸಲ್ಲ; ಮೇಣ್ ಫಣಿಯೋ ನಿಜ ಕಳ್ಳ; ಎಚ್ಚರಿಪನವನಲ್ಲ; ಅಂತಿರಲು ಜೀವದಾನವನಿತ್ತ ದಾತನಾರು? ವೇದ ವೇದಾಂಗದೊಳು, ಪೂರ್ವದ ಪುರಾಣದೊಳು. ದೇವಾಧಿ ದೇವನೆಂದೆಣಿಸಿಕೊಳ್ಳುತಲಿರುವ ಆ "ದೇವ"ನಿರಬಹುದೆ? ಇಲ್ಲಿ ಆರದನಿರಲು ರವವು ತಾ ಬಂದಿರಲು ಬೇರಾರು ಇರಬಹುದು? ನಿಜ ದೇವನಿರಬಹುದು.

ಅಂತಿರಲು ಮತ್ತೆ ಇನ್ನೆಲ್ಲಿಹನೊ ಆ "ದೇವ"? ದೇವ ಮತ್ತೆಲ್ಲಿಹನು? ನನ್ನಲ್ಲಿ ಅವನಿಹನು, ಅವನಲ್ಲಿ ನಾನಿಹೆನು. ನಾನಿರಲು ಅವನಿಹನು—ಅವನಿರದಿ ನಾನಿಹೆನು—ನಾನೆಲ್ಲಿ ಇದ್ದರೂ ಅವನಲ್ಲಿ ಇಹನು—ಮತ್ತೆಲ್ಲಿಗೋದರೂ ಅವನಲ್ಲಿ ಬಹನು. ಅವನುಳಿದು ನಾನಿಲ್ಲ; ನಾನುಳಿದು ಅವನಿಲ್ಲ. ಅವನಿರದೆ ನಾನಿಲ್ಲ; ನಾನಿಲ್ಲದವನಿಲ್ಲ. ನನ್ನ ಕಾಯುವ ಭಾರ ಅವನು ಹೊತ್ತಿಹನು; ಅವನ ತಳೆಯುವ ಭಾರ ನಾನು ಹೊತ್ತಿಹೆನು. ಬಾಹ್ಯದೊಳು ಹುಡುಕಿದೊಡೆ ವ್ಯರ್ಥ ಕಾಣುವ ನನ್ನ ಅಂತರ್ಯದೊಳು ಅರಸೆ ಅಲ್ಲಿಹನು ಅವನು. ಚರ್ಮ ದೃಷ್ಟಿಗೆ ಕಾಣ, ಜ್ಞಾನ ದೃಷ್ಟಿಗೆ ಕಾಂಬ. ಎಲ್ಲಿ ಹುಡುಕಲು ಬೇಡ. ನಿನ್ನಲ್ಲೇ ನೀನುಡುಕು. ಹೋದಲ್ಲಿ ಅವ ಬಹನು; ಇದ್ದಲ್ಲಿ ಅವನಿಹನು. ನಿದ್ದೆಯಂ ನೀ ಮಾಡೆ ಎಚ್ಚರಿಪನವನು. ಭಯ ಬೇಡವೆಂಬ ಭಯ ದೊರಕಿತದು ಎನಗೆ ಅವನಿಂದಲೇ? ಅಲ್ಲ. ಮತ್ತೆ ನನ್ನಿಂದೆನಗೆ. ಅಲ್ಲಲ್ಲ. ಅವನಿರುವ ನನ್ನ ಮನದಿಂದಲೇ ಎನಗೆ!

❀ ❀ ❀ ❀

ಜೀವನದ ಚಿತ್ರವನೆ ಕಂಡಂತೆ ಆಯ್ತು. ಒಳ್ಳೆ ಗ್ರಂಥವ ಮತ್ತೆ ಓದಿದಂತಾಯ್ತು. ಮಸ್ತಕವು ಬರಿದಾಯ್ತು; ಬದಲು ಎದೆ ಹಿರಿದಾಯ್ತು. ಬೋಧಿ ವೃಕ್ಷವ ಬಿಟ್ಟು ಸಾನಂದದಿಂ ಬುದ್ಧ ಜಗಕಿಳಿದ ತೆರದಂತೆ ಕೃಷ್ಣ ಬಂಡೆಯ ಹಾಯ್ದು, ರಾಜ ಮಾರ್ಗವನೇರ್ದು, ಗೃಹಕೆ ಮುಖವಾಂತು ನಾ ಮುಂದೆ ಸಾರ್ದೆ.

ಪವಿತ್ರಕ್ಷೇತ್ರವಾಗಿದೆ. ಇಲ್ಲಿ ಕಿಂಚಿತ್ತು ವಿಧಿಗಳನ್ನು ನೆರವೇರಿಸಿದರೂ, ಇತರ ಪುಣ್ಯಕ್ಷೇತ್ರಗಳಿಗಿಂತ ಹೆಚ್ಚು ಫಲದೊರೆಯುವುದೆಂದು ಜನರಲ್ಲಿ ಭಾವನೆಯಿದೆ. ಆದ್ದರಿಂದ ಇಲ್ಲಿ ಹೆಚ್ಚು ಸಮಯ ನಿಲ್ಲಬೇಕಾದ ಅವಶ್ಯಕತೆಯಿಲ್ಲ.

"ಪ್ರತಿ ವರುಷ ಒಂದು ಮಿಲಿಯ ಯಾತ್ರಿಕರನ್ನೂ ಮತ್ತು ಕಾಶಿಯ ಜನರನ್ನೂ ನೋಡಿದಂತಹರಿಗೆ ಮಾಯಾಮಾಟಗಳು ತಾಗುವುದಿಲ್ಲ". ಪ್ಯಗೆ ಕೊಳಕನ್ನು ಸವರಿಕೊಂಡು ಬೇಡಲು ಬಂದವರ ವಿಚಾರ ಯಾರೂ ಗಮನ ಕೊಡುವುದಿಲ್ಲ. ಅವರ ಉಪಾಯಗಳೂ ಮೋಡಿಗಳೂ ಯಾವ ಫಲವನ್ನೂ ಕೊಡಲಾರವು.

ದಾನಧರ್ಮಗಳನ್ನು ಕೊಡುವ ಮನಸ್ಸಿದ್ದವರು ಸದುಪಯೋಗಕ್ಕಾಗಿ ದೇವಸ್ಥಾನಕ್ಕೆ ಕೊಡಬಹುದು ಅಥವಾ ಎಂಡೋಮೆಂಟಿನ ಸಂಸ್ಥೆಗಳಿಗೆ ಕೊಡಬಹುದು" ಎಂದು ಯಾತ್ರಿಕರಿಗೆ ದಾರಿತೋರಿಸುವವರು ಅನ್ನುತ್ತಾರೆ.

ಅವರು ಹೇಳಿದ ವಿಷಯವು ಸಮಂಜಸವಾದುದಾಗಿದೆ. ಆದರೆ ಇತರ ಕೆಲವು ಕ್ಷೇತ್ರಗಳಲ್ಲಿ ಕೂಡ ಇದೇ ರೀತಿಯ ಭಾವನೆಯಿದೆ.

ಕಾಶಿಗೆ ಯಾತ್ರಾರ್ಥಿಗಳಾಗಿ ಹೋಗುವವರಲ್ಲಿ, ಅಲ್ಲಿಯ ದೇವಾಲಯಗಳಿಗೆ ಹೇರಳ ಕಾಣಿಕೆಗಳನ್ನರ್ಪಿಸುವವರಲ್ಲಿ ವಣಿಜರೇ ಹೆಚ್ಚು ಎನ್ನಬಹುದಾಗಿದೆ. ಸಾಮಾನ್ಯವಾಗಿ ವಣಿಜರೆಲ್ಲರೂ ದೈವಭಕ್ತಿಯುಳ್ಳವರು. ಕಾಶಿಯ ಮಹಾತ್ಮ್ಯೆಯು ಪುರಾಣಕಥೆಗಳಿಂದ ಉಳಿದಿರುವುದಕ್ಕಿಂತ ಹೆಚ್ಚಾಗಿ ವಣಿಜರ ಅಚಲ ಶ್ರದ್ಧೆ ಮತ್ತು ದಾನಧರ್ಮಗಳಿಂದ ದೃಢವಾಗಿ ನಿಂತಿದೆ.

ಜಗತ್ತಿನ ಹಳೆ ನಗರಗಳೆಷ್ಟೋ ಜಾಗತಿಕ ಮಾರ್ಪಾಟುಗಳಿಗೆ ಮಣಿದಿವೆ. ಆದರೆ, ಕಾಶಿ ನಗರವು ತಿಲಮಾತ್ರವೂ ಬದಲಾವಣೆಹೊಂದಿದುದಿಲ್ಲ. ಅಲ್ಲಿನ ಮೂರು ಅಥವಾ ನಾಲ್ಕಡಿ ಅಗಲದ "ರಸ್ತೆ"ಗಳು ನೂರಾರು,—ಕಟ್ಟಡಗಳು ಸಾವಿರಾರು—ಈಗಲೂ ಪುರಾತನ ಕ್ರಮದಲ್ಲೇ ಇವೆ. ಆ ರಸ್ತೆಗಳೂ, ಕಟ್ಟಡಗಳೂ ಒಂದು ದೊಡ್ಡ ಗುಂಪಾಗಿ ಇದ್ದು, ಅಲ್ಲಿ ಹಿಂದೂಗಳಲ್ಲದ ಇತರರಿಗೆ ವಾಸಸ್ಥಾನವು ಸಾಧ್ಯವಾಗಿಲ್ಲ.

ಬ್ರಿಟೈನಿನ ಮಹಿಳಾ ಸೇವಾದಲಗಳು



(ಫೋಟೋ: ಫೋಕ್ಸ್ ಸ್ಟುಡಿಯೋ, ಲಂಡನ್.)

ಬ್ರಿಟೈನಿನ ಯುದ್ಧಯತ್ನದಲ್ಲಿ ಮಹಿಳೆಯರು ಅಸಾಮಾನ್ಯ ಭಾಗ ವಹಿಸಿರುವರು. ರಕ್ಷಣವಿಭಾಗದಲ್ಲಿ ಇವರಿದ್ದಾರೆ; ಬರವಣಿಗೆ—ಮುಂತಾದ ಕಾರ್ಯಗಳಲ್ಲೂ ಇವರ ಸಹಾಯವಿದೆ. ಕಳೆದ ಮಹಾ ಯುದ್ಧ ಕಾಲದಲ್ಲಿ ಹೇಗೆ ಇವರು ಸಹಾಯವಿತ್ತಿದ್ದರೋ ಅಂತೆಯೇ ಈ ದ್ವಿತೀಯ ಯುದ್ಧದಲ್ಲೂ ಅವರ ಕಾರ್ಯಾಂಶವಿದೆ.

ಈಗಿನ ಯಂತ್ರಯುದ್ಧವು ಸಾಮಾನ್ಯವಾದುದಲ್ಲ. ಧನಬಲ ಮಾತ್ರವೇ ಯುದ್ಧಕ್ಕೆ ಬೇಕಾದುದಲ್ಲ. ಜನಬಲವೂ ಬೇಕಾಗಿದೆ.

ಯುದ್ಧ ವಿಮಾನ ಒಂದನ್ನು ನೆಲದಿಂದ ವಾಯುಮಂಡಲಕ್ಕೆ ಹಾರಿಸಬೇಕಾದರೆ ಅದರ ಮೇಲ್ವಿಚಾರಗಳನ್ನು ನೋಡುವದಕ್ಕೆ, ಇತರ ಕೆಲಸಗಳನ್ನು ಮಾಡುವುದಕ್ಕೆ ಕಡಿಮೆ ಎಂದರೆ ಐದು ಜನರಾದರೂ ಅಗತ್ಯವಾಗಿ ಬೇಕಾಗುತ್ತಾರೆ.

ಅದೇ ರೀತಿಯಲ್ಲಿ ಭೂಸೈನ್ಯವನ್ನು ನಡೆಸುವಾಗಲೂ, ಅದರೊಂದಿಗೆ ಟ್ಯಾಂಕುಗಳು, ಯಂತ್ರಗಳು, ಕೋವಿಗಳು ಇತ್ಯಾದಿಗಳನ್ನು ಕೊಂಡು ಹೋಗಬೇಕಾಗುತ್ತದೆ. ಅಂತಹ ಸಮಯದಲ್ಲಿ ಯೋಧರು ಮಾತ್ರವೇ ಇದ್ದರೆ ಸಾಲದು. ಇತರ ಮೇಲ್ವಿಚಾರಗಳನ್ನು ನೋಡಿಕೊಳ್ಳುವಂತಹ ಜನರೂ ಬೇಕಾಗುತ್ತಾರೆ. ಬರವಣಿಗೆಯವರೂ, ಅಡುಗೆಯವರೂ, ಟೈಪುಮಾಡುವವರೂ, ಟೆಲಿಫೋನುಗಳಲ್ಲಿ ಕೆಲಸಮಾಡುವವರೂ, ಗಾಯಗಳನ್ನು ತೊಳೆದು ಅವುಗಳಿಗೆ ಮದ್ದು ಹಚ್ಚುವವರೂ, ಯುದ್ಧದ ಆಗುಹೋಗುಗಳನ್ನು ಬರೆದಿಡುವಂತಹರೂ ಬೇಕಾಗುತ್ತಾರೆ.

ಯುದ್ಧಕಾಲದಲ್ಲಿ ಗಂಡುಸರೆಲ್ಲ ಯುದ್ಧಕ್ಕೆ ಹೋದರೆ, ಇಂತಹ ಕೆಲಸಗಳನ್ನು ಮಾಡುವವರು ಯಾರು—ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ.

ಬ್ರಿಟನಿನ ಮಹಿಳೆಯರು ಇಂತಹ ಸಾಹಸ ಕಾರ್ಯಕ್ಕೆ ಕೈಹಾಕಿ ಸಾಧಾರಣ ಅರ್ಧ ಶತಮಾನವಾಯಿತೆನ್ನಬಹುದು.

1899-1902ರಲ್ಲಿ ದಕ್ಷಿಣ ಆಫ್ರಿಕದಲ್ಲೊಂದು ಯುದ್ಧ ತಲೆಯೆತ್ತಿತು. ಆ ಸಮಯದಲ್ಲಿ ಬ್ರಿಟಿಷ್ ಮಹಿಳೆಯರು ತಮ್ಮ ಸೇವಾ ದಳಗಳನ್ನು ಏರ್ಪಡಿಸಿ, ಯುದ್ಧಕ್ಕೆ ಸಹಾಯ ಮಾಡುತ್ತಿದ್ದರು. ಅವರು ಯುದ್ಧದಲ್ಲಿ ಗಾಯಹೊಂದಿದ ಯೋಧರನ್ನು ಶುಶ್ರೂಷೆ ಚಿಕಿತ್ಸೆಗಳಿಗಾಗಿ ಯುದ್ಧರಂಗದಿಂದ, ಬೇರೆ ದಿಕ್ಕಿಗೆ ಒಯ್ಯುತ್ತಿದ್ದರು. ಅವರಿಗೆ, ಬೇಕಾದ ಚಿಕಿತ್ಸೆಗಳನ್ನೂ ಕ್ರಮಪ್ರಕಾರವಾಗಿ ಮಾಡುತ್ತಿದ್ದರು. ಆ ಸಮಯದಲ್ಲಿ ಅವರು ತಮ್ಮ ಸೇವಾದಳಕ್ಕೆ "ಎಫ್. ಎ. ಎನ್. ವೈ" ಎಂದು ಹೆಸರಿಟ್ಟಿದ್ದರು.

ಕಳೆದ 1914—18ರ ಮಹಾಯುದ್ಧದಲ್ಲಿಯಂತೂ, ಬ್ರಿಟಿಷ್ ಮಹಿಳೆಯರು ತಮ್ಮ ಸೇವೆಯಿಂದ ಬ್ರಿಟಿಷರಿಗೆ ಬಹಳ ಯಶಸ್ಸನ್ನು ತಂದಿರುವರು. ಯುದ್ಧದ ಯಾವ ಅನುಭವವೂ ಇಲ್ಲದಂತಹ ಮಹಿಳೆಯರೂ ಸಹ ಬಹಳ ಹುರುಪಿನಿಂದ ಇಂತಹ ಸೇವಾದಳಗಳಿಗೆ ಸೇರಿದ್ದರು. ಅವರು ಸೈನಿಕರಿಗೆ ಆಹಾರವನ್ನು ತಯಾರಿಸುತ್ತಿದ್ದರು. ಪಾನೀಯಗಳನ್ನು ತಯಾರಿಸಿ ಕೊಡುತ್ತಿದ್ದರು. ಮದ್ದುಗಳನ್ನು ಕೊಡುತ್ತಿದ್ದರು. ಚಿಕಿತ್ಸೆಗಳನ್ನು ಮಾಡುತ್ತಿದ್ದರು. ಈ ರೀತಿಯಲ್ಲಿ ಕಳೆದ ಮಹಾಯುದ್ಧಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಅವರು ಕೊಟ್ಟಿದ್ದರು. ಆದರೂ ಅವರು ಪ್ರಚಾರ ಕೆಲಸಕ್ಕೆ ಹೋಗಲಿಲ್ಲ. ತಮ್ಮ ಕೆಲಸವನ್ನು ತಾವು ಮೌನದಿಂದ ಮಾಡುತ್ತಿದ್ದರು. ಆ ನಾಲ್ಕು ವರುಷಗಳಲ್ಲಿ ಬ್ರಿಟಿಷ್ ಮಹಿಳೆಯರು ತುಂಬಾ ಅನುಭವವನ್ನು ಪಡೆದಿದ್ದಾರೆ.

ಯುದ್ಧವು ನಡೆಯುತ್ತಿರುವಾಗ ತಾವು ಯಾವ ರೀತಿಯ ಕೆಲಸಗಳನ್ನು ಮಾಡಬೇಕು—ಎಂಬುದನ್ನು ಅವರು ಚೆನ್ನಾಗಿ ಮನನ ಮಾಡಿರುವರು. ಅಂತಹ ಅನುಭವವು ಪ್ರಕೃತದ ಯುದ್ಧಕ್ಕೆ ಅನುಕೂಲವಾಯಿತು. ಕಳೆದ ಮಹಾಯುದ್ಧದ ಅಂತ್ಯಕಾಲದಲ್ಲಿ ಮೂರು ಸೇವಾ ದಳಗಳು ಮುಖ್ಯವಾಗಿದ್ದುವು.

"ಡಬ್ಲ್ಯು. ಎ. ಎ. ಸಿ" "ಡಬ್ಲ್ಯು ಆರ್. ಎನ್. ಎಸ್" ಮತ್ತು ಡಬ್ಲ್ಯು. ಆರ್. ಎ. ಎಫ್." ಎಂದೇ ಆ ಮೂರು ದಳಗಳಾಗಿದ್ದುವು.

ಈಗ ಮೊದಲಿನ ದಳವಾದ "ಡಬ್ಲ್ಯು. ಎ. ಎ. ಸಿ"ಗೆ "ಎ. ಟಿ. ಎಸ್." ಎಂದು ಹೆಸರಿಟ್ಟಿರುತ್ತಾರೆ.

ಈ ದಳಗಳಿಗೆ ಸೇರಿದ ಮಹಿಳೆಯರೆಲ್ಲಾ ಒಂದೇ ರೀತಿ (Uniform)ಯ ಉಡುಪುಗಳನ್ನು ತೊಡುತ್ತಾರೆ.

ಮೊದಲಿನ ದಳದವರು ಖಾಕಿ ಬಣ್ಣದ ಉಡುಪನ್ನೂ, ಎರಡನೆಯವರು ನೀಲಿ ಬಣ್ಣದ ಉಡುಪನ್ನೂ, ಮೂರನೆಯವರು, ವಿಮಾನ ಯೋಧರು ತೊಡುವ ನೀಲಿ ಬಣ್ಣದ ಉಡುಪನ್ನೂ ತೊಡುತ್ತಾರೆ.

ಈ ದಳಗಳಿಗೆ ಸೇರಿದವರು, ಸ್ವದೇಶದಲ್ಲಿಯೂ ಪರದೇಶದಲ್ಲಿಯೂ ಯುದ್ಧಸೇವೆಯನ್ನು ಮಾಡಬೇಕಾಗುತ್ತದೆ.

ಯುದ್ಧದ ಸಮಯದಲ್ಲಿ ಇವರು ಅಗತ್ಯವಿದ್ದ ಬರವಣಿಗೆ ಕೆಲಸಗಳನ್ನೂ ಮಾಡುತ್ತಾರೆ. ದೊಡ್ಡ ದೊಡ್ಡ ಮನುಷ್ಯರ ಕಾರುಗಳನ್ನು ನಡೆಸುತ್ತಾರೆ. ಸೈನಿಕರಿಗೆ ಆಹಾರವನ್ನು ತಯಾರಿಸುತ್ತಾರೆ. ಇಂತಹ ಎಷ್ಟೋ ಕೆಲಸಗಳ ಭಾರವನ್ನು ಇಂಗ್ಲಾಂಡಿನ ಮಹಿಳೆಯರು ತಮ್ಮ ಹೆಗಲ ಮೇಲೆ ಹೊತ್ತಿರುತ್ತಾರೆ.

"ಎ. ಟಿ ಎಸ್." ಎಂಬ ದಳವು 1938ರಲ್ಲಿ, ಮ್ಯೂನಿಕ್ ಬಿಕ್ಕಟ್ಟು ಉಂಟಾದಾಗ ಜನ್ಮವೆತ್ತಿತು. ಭೂಸೈನ್ಯವನ್ನು ಹೆಚ್ಚಿಸುವಾಗ ಇಂತಹ ದಳಗಳ ಅವಶ್ಯಕತೆ ಬೀಳುತ್ತದೆ. ಶಾಂತಿಸಮಯದಲ್ಲಿಯೂ ಈ ದಳದ ಉಪಯೋಗ ಬೀಳುತ್ತದೆ.

1939 ರಲ್ಲಿ ಇಂತಹ ದಳಗಳಿಗೆ ಹೆಚ್ಚು ಜನರನ್ನು ಸೇರಿಸಲು ಪ್ರಯತ್ನವಾಯಿತು. ಎಷ್ಟೋ ಮಹಿಳೆಯರು ಉತ್ಸಾಹದಿಂದ ಸೇರಿದರು.

ಅಂತೆಯೇ ಇನ್ನೆರಡು ದಳಗಳೂ ಬಲವಾದುವು. ಈ ಮೂರು ದಳಗಳೂ ಈಗ ಬಹಳ ಪ್ರಯೋಜನಕಾರಿಯಾಗಿವೆ.

ಈ ದಳಗಳಲ್ಲಿದ್ದ ಮಹಿಳೆಯರೆಲ್ಲಾ ಬಹಳ ತರಬೇತಿ ಹೊಂದಿ ಜಾಣೆಯರಾಗಿರುವರು. ಗಾಯಗೊಂಡವರನ್ನು ಸಾಗಿಸಲು ತಯಾರಾದ ಮುಂದಾಳುಗಳೆಲ್ಲರೂ ಮೋಟಾರು ನಡೆಸಲು ಕಲಿತವರಾಗಿರುತ್ತಾರೆ. ಬಹು ಮಂದಿಗೆ ಚಿಕಿತ್ಸೆ, ಶುಶ್ರೂಷೆಗಳು ಚೆನ್ನಾಗಿ ತಿಳಿದಿವೆ. ಎಲ್ಲರೂ ಅನುಭವಶಾಲಿಗಳಾಗಿರುವರು. ಇವರಲ್ಲಿ ಹಲವರು, ಫ್ರಾನ್ಸಿನಲ್ಲಿ ಸೇವೆಮಾಡಿ ಅನುಭವ ಪಡೆದಿದ್ದಾರೆ. ಈ ಮೂರು ದಳಗಳಲ್ಲದೆ, ಮತ್ತೊಂದು ಹೊಸ ದಳವೀಗ ಜನ್ಮತಾಳಿದೆ. ಇದಕ್ಕೆ "ಎ. ಎಫ್. ಎಸ್"ಎಂದು ಹೆಸರು. ವಿಮಾನ ಯುದ್ಧ ಸಮಯದಲ್ಲಿ ಬಾಂಬುಗಳಿಂದ ಉಂಟಾದ ಬೆಂಕಿಯನ್ನು ನಂದಿಸುವುದಕ್ಕೋಸ್ಕರವೇ ಈ ದಳವಿರುತ್ತದೆ. ಅಂತೆಯೇ ತಮ್ಮ ಇಚ್ಛೆಯಿಂದಲೇ ಅನೇಕ ಮಹಿಳೆಯರು ಇಂತಹ ಸಾಹಸ ಕಾರ್ಯಕ್ಕೆ ಕೈಹಾಕಲು ಬರುತ್ತಾರೆ.

ವಿಮಾನ ವಿಧ್ವಂಸಕಸೈನಿಕರಿಗೂ ಇವರು ಸಹಾಯಮಾಡುತ್ತಾರೆ. ಕಾರ್ಖಾನೆಯ ರಕ್ಷಣೆಗೂ ಮುಂದಾಗುತ್ತಾರೆ. ಬಾಂಬಿನ ಹಾವಳಿ ಸಮಯ ಸ್ತ್ರೀಯರನ್ನು ರಕ್ಷಣೆ ಮಾಡಲು ಹೋರಾಡುತ್ತಾರೆ. ಕೆಲವರು ಸ್ತ್ರೀಯರು ಪೋಲೀಸರಾಗಿಯೂ ತಮ್ಮ ದೇಶಸೇವೆಯನ್ನು ಸಲಿಸುತ್ತಾರೆ.

ಇಂದಿನ ಯುದ್ಧದಲ್ಲಿ ಮನೆ ಮಠಗಳನ್ನು ಬಿಟ್ಟ ಚಿಕ್ಕಮಕ್ಕಳನ್ನು ಸಾಕಿ ಸಲಹುವ ಭಾರವೂ ಇಂತಹ ಸೇವಾ ಧುರೀಣೆಯರ ಪಾಲಿಗೇ ಬಿದ್ದಿದೆ. ಅವರೆಲ್ಲರೂ ಮೌನದಿಂದ ಆ ಕೆಲಸವನ್ನು ನೆರವೇರಿಸುತ್ತಿರುವರು. ಸಾವಿರಾರು ಜನ ಮಹಿಳೆಯರು ಇಂತಹ ನಿಷ್ಕಾಮಕರ್ಮದಲ್ಲಿ ನೈಮನಿರತರಾಗಿರುವರು.

ಅಲಂಕಾರದ ಒಡವೆಗಳು (Toilet Requisites)

ಪರಿಮಳ ದ್ರವ್ಯಗಳು, ಮುಖ್ಯ ತೈಲಗಳು

(ಲೇಖಕರು:—ಶ್ರೀ. ಕೆ. ವಿ. ಜೋಶಿ)



ಹಿಂದೂದೇಶವು, ವರುಷಪ್ರತಿ 1 ಕೋಟಿ. 20 ಲಕ್ಷ ರೂಪಾಯಿ ಬೆಲೆಯ ಪರಿಮಳ ದ್ರವ್ಯಗಳನ್ನೂ, ಸಾಬೂನುಗಳನ್ನೂ ಪರದೇಶದಿಂದ ತರಿಸುತ್ತದೆ. ಮದ್ರಾಸ್ ಪ್ರಾಂತ್ಯವು 15 ಲಕ್ಷ ರೂಪಾಯಿಯ ಸಾಮಾನುಗಳನ್ನು ತರಿಸುತ್ತದೆ

ಹಿಂದೂದೇಶದಲ್ಲಿ ತಯಾರಾಗುವ ಸಾಮಾನುಗಳಲ್ಲಿ, ಸಾಬೂನು ಕೈಗಾರಿಕೆಯು ಇತ್ತೀಚೆಗೆ ಬಹಳ ಮುಂದರಿದಿದೆ. ನಮ್ಮ ದೇಶದ ಹಲವು ಭಾಗಗಳಲ್ಲಿ ಸಾಬೂನು ತಯಾರಿಸುವ ಫೆಕ್ಟರಿಗಳಿವೆ. ಅವುಗಳೆಲ್ಲಾ ತೃಪ್ತಿಕರವಾದ ಕೆಲಸಗಳನ್ನು ಮಾಡುತ್ತಿವೆ. ಕಡಿಮೆ ಬೆಲೆಯಲ್ಲಿ ಅತಿ ಉತ್ತಮ ಸಾಬೂನುಗಳು ನಮ್ಮ ದೇಶದಲ್ಲಿ ತಯಾರಾಗುತ್ತಿವೆ. ಆದರಿಂದ ಪರದೇಶದಿಂದ ಇಲ್ಲಿಗೆ ಬಂದ ಸಾಬೂನುಗಳನ್ನು ಸಂಪೂರ್ಣವಾಗಿ ಓಡಿಸಬಹುದಾಗಿದೆ.

ಸಾಬೂನು ಕೈಗಾರಿಕೆಗೆ ಬೇಕಾಗುವ ಸಾಕಷ್ಟು ಮತ್ತು ಸಾಬೂನು ತಯಾರಿಸುವುದರಲ್ಲಿ ಕೈಚಳಕ ಇದ್ದವರ ಸಹಾಯದಿಂದ ಈ ಕೈಗಾರಿಕೆಯು ಪ್ರಾಮುಖ್ಯತೆಗೆ ಬಂದುದು ಮಾತ್ರವಲ್ಲದೆ, ಸ್ವದೇಶಿ ಚಳವಳಿಯಿಂದಲೂ ಇದು ಮುಂದಕ್ಕೆ ಬಂದಿದೆ. ಆದ್ದರಿಂದ ಇಷ್ಟು ಸಾಬೂನುಗಳು ಖರ್ಚಾಗುತ್ತಿವೆ. ಸ್ವದೇಶಿ ಪ್ರೇಮ ಬಂದು ಇನ್ನೂ ಬೆಳೆದರೆ ಸಾಬೂನು ಮತ್ತು ಮೇಲೆ ವಿವರಿಸಿದ ಇತರ ಸಾಮಗ್ರಿಗಳು ನಮ್ಮ ಮಾರ್ಕೆಟುಗಳಲ್ಲೆಲ್ಲಾ ತುಂಬಿಹೋಗುವವು. ಈ ಕೈಗಾರಿಕೆಗಳು ಮಾರ್ಕೆಟುಗಳ ವ್ಯಾಪಾರವನ್ನು ತಮ್ಮಲ್ಲೇ ಇರಿಸುವವು. ಇದಕ್ಕೆ ಜನರ ಬೆಂಬಲವು ಅತ್ಯಗತ್ಯವಾಗಿದೆ. ಉದಾರ ರೀತಿಯಲ್ಲಿ ಈ ಬೆಂಬಲವು ದೊರಕೀತೆ? ಈ ಕೆಳಗಿನ ವಿಚಾರಗಳನ್ನು ನಾವು ಮನನಮಾಡಿದರೆ, ನಮ್ಮ ದೇಶೀ ಸರಕುಗಳ ಕಡೆಗೆ ಗಮನಕೊಡುವ ಅವಶ್ಯಕತೆಯನ್ನು ಕಾಣದಿರಲಾರೆವು. ಕಲ್ಲಿಕೋಟೆ, ಮೈಸೂರು ಮೊದಲಾದ ಕಡೆಗಳಲ್ಲಿ ತಯಾರಾಗುವ ತೈಲಾದಿಗಳು, ಅಲ್ಲಿ ದೊರೆವ ಸಾಮಗ್ರಿಗಳಿಂದಲೇ ಆಗುತ್ತಿವೆ. ಆದ್ದರಿಂದ ಇಂತಹ ಕೈಗಾರಿಕೆಯು ಗ್ರಾಮ ಕೈಗಾರಿಕೆಯೆಂದೇ (Rural Industry) ಕರೆಯಲ್ಪಡುವುದು. ನಮ್ಮ ಪ್ರಾಂತಕ್ಕೆ ಇಂತಹ ಕೈಗಾರಿಕೆಗಳೇ ಬಹಳ ಯೋಗ್ಯವಾಗಿವೆ ದೇಶದ ಸಾಬೂನು ಕಾರ್ಖಾನೆಗಳಲ್ಲಿನ ಯಂತ್ರಗಳಿಂದ ಅತೀ ಸುಲಭದಲ್ಲಿ ವಸ್ತುಗಳನ್ನು ತಯಾರಿಸಬಹುದು. ಅತೀ ಅಗ್ಗದ ಯಂತ್ರಗಳನ್ನೇ ನಮ್ಮ ಪ್ರಾಂತಗಳಲ್ಲಿ ಉಪಯೋಗಿಸಬಹುದು. ಹಳ್ಳಿಗಳಲ್ಲಿ ತಯಾರಾಗುವ ಕೆಲವು ತರದ ಎಣ್ಣೆಗಳನ್ನು ಉಪಯೋಗಿಸಬಹುದು. ಹಳ್ಳಿಯವರಿಗೆ ಉತ್ತಮ ರೀತಿಯಲ್ಲಿ ತರಬೇತಿ ಮಾಡಿದರೆ ಕಡಿಮೆ ಬೆಲೆಗೆ ಬಟ್ಟೆ ಒಗೆಯುವ ಸಾಬೂನುಗಳನ್ನು ತಯಾರಿಸಲು ಕಲಿಸಬಹುದು. ಸಾಬೂನಿಗೆ ನಮ್ಮ ಪ್ರಾಂತ್ಯದ ಕೆಲವು ನಗರಗಳಂತೆ ಮಂಗಳೂರು ನಗರವೂ ಹೆಸರಾಗಿದೆ. ಈ ಪ್ರಾಂತದಲ್ಲಿ ಹಲವು ತರದ ಎಣ್ಣೆಯ ಬೀಜಗಳನ್ನು ಬೆಳೆಸುತ್ತಾರೆ. ಇವುಗಳ ಸ್ವಲ್ಪ ಭಾಗವನ್ನು ಮಾತ್ರ ಇಲ್ಲಿಯೇ ಎಣ್ಣೆಗಾಗಿ ಉಪಯೋಗಿಸುತ್ತಾರೆ. ಉಳಿದುದೆಲ್ಲಾ ಪರದೇಶಕ್ಕೆ ರಫ್ತಾಗುತ್ತದೆ.

ನಮ್ಮ ಪ್ರಾಂತದಲ್ಲೇ ಅವುಗಳನ್ನು ಎಣ್ಣೆಗಾಗಿಯೂ, ಹಿಂಡಿಗಾಗಿಯೂ, ಗೊಬ್ಬರಕ್ಕಾಗಿಯೂ ಉಪಯೋಗಿಸದೆ ಪರದೇಶಗಳಿಗೆ ಕಳುಹಿಸಿದರೆ ಆರ್ಥಿಕ ಸ್ಥಿತಿಗೆ ದೊಡ್ಡ ಘಾತವಾಗುತ್ತದೆ. ನಮಗೆ ಇದರಿಂದ ಉಪಯೋಗವೇನೂ ದೊರೆಯದೆ, ಪರದೇಶಗಳಿಗೆ ಮಾತ್ರ ಪ್ರಯೋಜನ ದೊರೆಯುತ್ತದೆ. ಇವುಗಳಿಂದ ಎಣ್ಣೆಯನ್ನು ತೆಗೆಯುವ ಕೈಗಾರಿಕೆಯು. ಇತರ ಕೈಗಾರಿಕೆಗಳಿಗೂ ಅಡಿಗಲ್ಲಾಗಿದೆ. ವನಸ್ಪತಿ ತೈಲ (Vegetable Ghee) ವನ್ನು ತಯಾರಿಸುವುದಕ್ಕೂ ಅನಂತರ ಸಾಬೂನು ಮಾಡುವುದಕ್ಕೂ ಎಣ್ಣೆಯ ಕೊಬ್ಬನ್ನು ತಯಾರಿಸಲಿಕ್ಕೂ ಸಾಧ್ಯವಿದೆ.

ಪ್ರಕೃತ ಹಿಂದೂಸ್ಥಾನದಲ್ಲಿ ಉತ್ತಮ ಸಾಬೂನು ತಯಾರಿಸುವುದಕ್ಕೆ, ಕೊಬ್ಬನ್ನೇ ಉಪಯೋಗಿಸಬೇಕಾಗಿದೆ. ಇದರಲ್ಲಿ ಸಿಕ್ಕುವ ಕೊಬ್ಬು ಯಾವ ಕಾಲದಲ್ಲಿಯೂ ಒಂದೇ ರೀತಿಯಾಗಿ ಬೇಕಾದಷ್ಟು ಸಿಗುವುದಿಲ್ಲ. ಶುದ್ಧೀಕರಿಸುವಾಗ ಹೆಚ್ಚಿನ ಭಾಗವು ನಿರುಪಯೋಗವಾಗುತ್ತದೆ. ಆದ್ದರಿಂದ ಅಮೆರಿಕಾ ಅಥವಾ ಇತರ ದೇಶಗಳಿಂದ ಬರುವ ಕೊಬ್ಬನ್ನು ಉಪಯೋಗಿಸಬೇಕಾಗುತ್ತದೆ. ಈ ಕಾರಣದಿಂದಲೇ ಪರದೇಶದಿಂದ ಬರುವ ಸಾಬೂನುಗಳೊಡನೆ ನಮ್ಮಲ್ಲಿಯ ಸಾಬೂನುಗಳ ಸ್ಪರ್ಧೆ (Competition) ನಡೆಯುವುದಿಲ್ಲ. ನಮ್ಮ ಪ್ರಾಂತದಲ್ಲಿ ಎಣ್ಣೆಯ ಬೀಜಗಳಿಂದ ಎಣ್ಣೆ ತೆಗೆದು ಅನಂತರ ಕೊಬ್ಬನ್ನು ತಯಾರಿಸಿದರೆ, ಇಲ್ಲಿ ಅತ್ಯುತ್ತಮ ಸಾಬೂನುಗಳನ್ನು ತಯಾರಿಸಬಹುದು. ಶುದ್ಧವಾದ ವನಸ್ಪತಿ ಎಣ್ಣೆಗಳನ್ನು ರಸಾಯನಿಕ ರೀತಿಯಲ್ಲಿ, "ವನಸ್ಪತಿ ತೈಲ" (Vegetable ghee) ಮತ್ತು ವನಸ್ಪತಿ "ಬೆಣ್ಣೆ"ಗಳನ್ನು ತಯಾರಿಸಿದರೆ, ಅವುಗಳಿಗೆ ವನಸ್ಪತಿ ಪದಾರ್ಥ (Vegetable Product) ಎಂದು ಹೆಸರು. ಈ ಕೃತಕ ತೈಲಕ್ಕೆ ಎಣ್ಣೆಯ ಪರಿಮಳ ಇರುವುದಿಲ್ಲ. ತಾಜಾ ತುಪ್ಪದಂತೆ ಈ ಪದಾರ್ಥವು ತೋರುವುದು. ತುಪ್ಪದಲ್ಲಿ ಕಾಣುವ ಕಣಗಳು ಇದರಲ್ಲಿಯೂ ಕಾಣುತ್ತಿವೆ. ಕೇರಳಾ ಸೋಪ್ ಇನ್ಸ್ಟಿಟ್ಯೂಟಿನಲ್ಲಿ ಎಣ್ಣೆಯನ್ನು ಶುದ್ಧೀಕರಿಸುತ್ತಾರೆ. ಅನಂತರ ಅದಕ್ಕೆ ಎಣ್ಣೆಯ ಪರಿಮಳವು ಇರುವುದಿಲ್ಲ. ಬ್ರಿಲಿಯಂಟೈನುಗಳನ್ನೂ, ತಲೆಗೆ ಹಚ್ಚುವ ಎಣ್ಣೆಗಳನ್ನೂ ಇಲ್ಲಿ ತಯಾರಿಸುತ್ತಾರೆ. ಸರಕಾರಗಳು ಬೇಕಾದರೆ ಈ ಪದಾರ್ಥಗಳನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ತಯಾರಿಸಬೇಕಾದೀತು. ಇಲ್ಲಿ ದೊರೆಯುವ ಎಣ್ಣೆಯ ಕಾಳುಗಳನ್ನು ಇಲ್ಲಿಯೇ ಉಪಯೋಗಿಸಲ್ಪಡಬೇಕಾದೀತು. ಇಂತಹ ಸಂದರ್ಭದಲ್ಲಿ ಹೆಚ್ಚು ಕೈಗಾರಿಕೆಗಳು ಇಲ್ಲಿ ಬೆಳೆದಾವು; ಹೆಚ್ಚು ಜನರಿಗೆ ವೃತ್ತಿಯು ದೊರಕೀತು. ಪರದೇಶಗಳಿಗೆ ರಫ್ತಾಗುವ ಭಾಗವು ಕಡಿಮೆಯಾದೀತು.

ಇದಕ್ಕೆ ಬೇಕಾದ ಪದಾರ್ಥಗಳು ಪಶ್ಚಿಮ ಕರಾವಳಿಯಲ್ಲಿ ಅನುಕೂಲ ರೀತಿಯಲ್ಲಿ ದೊರೆಯುವುವು. ಆದ್ದರಿಂದ ಈ ಕರಾವಳಿಯಲ್ಲಿ ಈ ಕೈಗಾರಿಕೆಯ ಒಂದು ಕಾರ್ಖಾನೆಯನ್ನು ತೆರೆಯುವುದು ಅಗತ್ಯವಿದೆ. ಎಣ್ಣೆಯ ಕಾಳುಗಳು ಇಲ್ಲಿ ಧಾರಾಳವಾಗಿ ದೊರೆಯುವುವು. ಆದರೂ ಒಂದು ನಿಶ್ಚಿತ ಪರಿಮಾಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇವುಗಳ ಉಪಯೋಗವನ್ನು ಪಡೆಯಲು ಬಯಸುವುದು ಸಾಧ್ಯವಿಲ್ಲ.

(ಆಧಾರದಿಂದ)

ಪ್ರಪಂಚದ ಹಡಗಗಳು (1936ರಲ್ಲಿ)

	ಟನ್ನುಗಳು.		ಟನ್ನುಗಳು
ಗ್ರೇಟ್ ಬ್ರಿಟೈನ್ ಮತ್ತು ಅಯರ್ಲೆಂಡ್	20,385,138	ಇಟಲಿ	3,098,159
ಫ್ರಾನ್ಸ್	3,002,455	ಜಾಪಾನ್	4,215,690
ಜರ್ಮನಿ	3,718,417	ನೋರ್ವೆ	4,054,485
ಹೊಲ್ಲೆಂಡ್	2,511,281	ಸಂಯುಕ್ತ ಅಮೇರಿಕ	12,556,563

ಈ ಮೇಲಿನ ಸಂಖ್ಯೆಗಳಲ್ಲಿ ಯುದ್ಧದ ಹಡಗುಗಳ ಸಂಖ್ಯೆ ಸೇರಿಲ್ಲ.

ಹಡಗುಗಳು

(ನೊರ್ಮನ್ ಹಿಲ್ಸನ್‌ರವರ ಲೇಖ.)

ಸ್ಕೊಟ್ಲೆಂಡ್. ಗ್ಲಾಸ್ಗೋ ನಗರದೊಂದು ಮನೆಯಲ್ಲಿ, ಬೆಳಗ್ಗಿನ ಊಟ ಮುಗಿದೇಳುವಾಗ ನಾವಿಕನೊಬ್ಬನು ತನ್ನ ಯಜಮಾನಿಗೆಂದನು: "ಈ ರಾತ್ರೆ ನನ್ನ ಊಟ ತಯಾರಿಸಬೇಡ, ಕೆಲದಿನಗಳಿಗೆ ನಾನು ಹಿಂತಿರುಗುವಂತಿಲ್ಲ."

ನಾವಿಕನು ಹಾಗೆನ್ನುತ್ತ ಮನೆ ಬಿಟ್ಟು ಕ್ಲೈಡ್‌ಸೈಡ್ ಬಂದರದತ್ತಕಡೆ ತೆರಳಿದನು.

ಸ್ವಲ್ಪ ಸಮಯದ ನಂತರ, ಬ್ರಿಟಿಷರ ಪ್ರಚಂಡ ಹೊಸ ಸ್ಟೀಮರು "ಕ್ವೀನ್ ಎಲಿಝಬೆತ್" ಬಂದರದಿಂದ ಹೊರಟಿತು. ಸಂಕದಲ್ಲಿ ಆ ನಾವಿಕನಿದ್ದನು, ಕೆಪ್ಟನ್ ಡಂಕಾನ್ ಕೆಮರನ್. ಕ್ಲೈಡಿನ ನಾವಿಕರಲ್ಲಿ ಈತನು ಪ್ರಸಿದ್ಧನು

ಡಂಕಾನನು ಹಡಗವನ್ನು, ಪ್ರಪಂಚದ ಅತೀ ಕಷ್ಟತರ ಅಳಿವೆಗಳಲ್ಲೊಂದರಿಂದ ನಡೆಸಿಕೊಂಡೊಯ್ಯುತ್ತಿದ್ದನು. ಪ್ರವಾಸವು ರಹಸ್ಯದಲ್ಲೇ ನಡೆದಿತ್ತು. ಒಮ್ಮೆ ಈ ಬಂದರವನ್ನು ಬಿಟ್ಟು ಹೊರಟ "ಕ್ವೀನ್ ಎಲಿಝಬೆತ್" ಹಡಗವು, ನಡುವೆ ಎಲ್ಲಿಯೂ ಬಂದರು ಮಾಡದೆ, ನೇರಾಗಿ ನ್ಯೂಯಾರ್ಕಿಗೆ ಹೋಯಿತು.

"ನಾವಿಕ"ರೆಂದೊಡನೆ ಎಲ್ಲರೂ ಉಚ್ಚ ತರಗತಿಯವರಾಗುವುದಿಲ್ಲ. ನೌಕಾ ಅನುಭವದಲ್ಲಿಯೂ ವಿಶೇಷ ತರಬೇತಿಪಡೆದವರಿರುವರು. ಹಡಗಗಳು ಹಾಯಿಗಳ ಹಾಗೂ ಅನುಕೂಲ ಹವೆಯ ಮೇಲೆಯೇ ಹೊಂದಿಕೊಂಡಿದ್ದ ಕಾಲದಲ್ಲಿ ಜಗತ್ತಿನ ನೌಕಾ ಪ್ರಕರಣಗಳಲ್ಲಿ ನಾವಿಕರ ಭಾಗವು ಅಷ್ಟೊಂದು ಮಹತ್ವವಿದ್ದಿರುತ್ತಿದ್ದಿಲ್ಲ.

ಇಂಗ್ಲಾಂಡಿನ ರಾಣಿ ಎಲಿಝಬೆತಳ ಕಾಲದಲ್ಲಿ ಕೆಲವು ನಾವಿಕ ನಾಯಕರು ವರುಷಕ್ಕೆ 500 ಪವನುಗಳ ವರೆಗೆ ಸಂಪಾದಿಸುತ್ತಿದ್ದರೆಂದು ಹೇಳಲಾಗಿದೆ. ಆ ಕಾಲದಲ್ಲಿ ಅದು ದೊಡ್ಡ ಮೊತ್ತವೆನಿಸಿತ್ತು.

ಆ ಕಾಲದ ಪ್ರವಾಸಗಳಲ್ಲಿ ಸ್ಪೈನೂ ಹೆಸರಾಗಿತ್ತು. ಸ್ಪೈನಿಂದ ವೆಸ್ಟ್ ಇಂಡೀಸಿಗೆ ಹೋಗುವುದೆಂದರೆ ಮಹಾ ಕಾರ್ಯವೆನಿಸಿತ್ತು. ನಾವಿಕ ನಾಯಕರು ಸ್ಪೈನಿನಿಂದ ವೆಸ್ಟ್ ಇಂಡೀಸಿಗೆ ಎಲ್ಲಿಯೂ ತಂಗದೆ ನೇರಾಗಿ ಪ್ರವಾಸ ಮಾಡಿ ಮರಳುತ್ತಿದ್ದರು. ಅವರಿಗೆ, ಸರಕು ಮೊದಲಾದುವುಗಳ ಟನ್ನುಗಳ ಮೇಲೆ ಆಧರಿಸಿ ತಲಬು ಕೊಡುತ್ತಿದ್ದರು. ಆ ಕಾಲದಲ್ಲಿ ಹಡಗು ನಡೆಸಿ ಒಯ್ಯುವವನ ವೃತ್ತಿಯು ಮಾತ್ರ ಯಾವುದಾದರೊಂದು ದಿನ ಮೇಲಾಧಿಕಾರಿಗಳಿಂದ ಗುಂಡು ಹೊಡೆಸಿ ಮರಣಕ್ಕೀಡಾಗುವಷ್ಟು ಅಪಾಯದಲ್ಲಿತ್ತೆನ್ನುವರು. ಹಡಗು ನಡೆಸುವವನು ತಪ್ಪು ಮಾಡಿದರೆ ಅಥವಾ ಹಡಗನ್ನು ಕಳಕೊಂಡರೆ ಅವನಿಗೆ, ಅವನ ನಂತರ ಬರುವವರಿಗೊಂದು ಪಾಠವೆನಿಸುವಂತೆ ಗುಂಡಿಕ್ಕಿ ಕೊಲ್ಲುತ್ತಿದ್ದರು.

ಉಗಿ ಹಡಗವು ಬಂತು. ಸಾಗರ ಪ್ರವಾಸದಲ್ಲಿ ಹೊಸ ಅಧ್ಯಾಯವು ತೆರೆಯಲ್ಪಟ್ಟಂತಾಯಿತು. ಜನರು ಈ ಉಗಿ ಹಡಗುಗಳನ್ನು ನೋಡಿ ಕೌತುಕಗೊಂಡರು. "ಇವು ನಿಜವಾಗಿ ಹೆಚ್ಚು ಕಾಲ ಬಾಳುವುವೇ?"—"ಅಪಾಯ ತರಲಾರವೇ?" ಎಂದು ಕೆಲವರು ಪ್ರಶ್ನಿಸಿದರು.

"ಹಾಯಿಗೆ ಪುನಃ ಒಂದು ಕಾಲವಿದೆ" ಎಂದರು ಕೆಲವರು.



ಬ್ರಿಟೈನಿನ ಥೇಮ್ಸ್ ನದಿಯ ಕಾವಲುಮಾಡುವವರು. (ಫೊಟೋ: ಫೊಕ್ಸ್ ಸ್ಟಡಿಯೋ, ಲಂಡನ್.)



(ಫೊಟೋ: ಫೊಕ್ಸ್ ಸ್ಟಡಿಯೋ, ಲಂಡನ್.)
ಬ್ರಿಟೈನಿನ ಯುದ್ಧ ಹಡಗುಗಳು ಸಮುದ್ರ ಕಾವಲುಮಾಡುತ್ತಿವೆ.

"ನೀರಿನಲ್ಲಿ ಉಗಿಯ ಯಾನಗಳೆಂದರೆ ಅದೊಂದು ಅಲ್ಪ ಕಾಲದ ಮರುಳು. ಇವು ನಡೆಸುವವು"—ಎಂದರು ಮತ್ತೆ ಕೆಲವರು.

ರಚಿಸಿದವರು ಈ ಹಡಗಗಳನ್ನು ಮೊದಲು ಹಾಯಿ ಹಡಗಗಳಷ್ಟೇ ಅಥವಾ ಅವುಗಳಿಗಿಂತ ಸ್ವಲ್ಪ ದೊಡ್ಡದಾಗಿ ರಚಿಸಿದರು. ಬರಬರುತ್ತಾ ಸ್ಟೀಮರುಗಳ ಆಕಾರದಲ್ಲಿಯೂ ಬದಲಾವಣೆಯಾಯಿತು. ಇಂದು 60,000 ಟನ್ನುಗಳಿಗೂ ಮಿಕ್ಕಿದ ಹಡಗುಗಳು ಸಾಗರವನ್ನು ನೆಲಕ್ಕಿಂತ ಸುಲಭವಾಗಿ ಮಾಡಿವೆ. ಹಡಗುಗಳಲ್ಲಿ ಹೊಟೇಲು, ಆಟದ ಬಯಲು, ಈಜುವ ಕೆರೆ ಮೊದಲಾದ ಯಾವತ್ತೂ ಸೌಕರ್ಯಗಳು—ಹಳೆ ಕಾಲದಲ್ಲಿ ಸ್ವಪ್ನವಾಗಿದ್ದುವು—ಈಗ ನಿಜವಾಗಿವೆ.

ಸ್ಟೀಮರ್ ರಚನೆಯಲ್ಲೂ ಬದಲಾವಣೆಗಳಾಗುತ್ತಿವೆ. ಹೊಸ ಸೌಕರ್ಯಗಳು ಕಲ್ಪಿಸಿಕೊಡಲ್ಪಡುತ್ತಿವೆ. ಹೆಚ್ಚು ಹೆಚ್ಚು ಸರಕುಗಳನ್ನೂ, ಅತಿ ವೇಗವಾಗಿ ಊರಿಂದೂರಿಗೆ ಒಯ್ಯುವರು.

"ಟ್ರಿನಿಟಿ ಹೌಸಸ್" ಎಂಬ ಬ್ರಿಟಿಷ್ ಸಂಸ್ಥೆಯು ನೌಕಾದಂಧೆಯಲ್ಲಿ ಹೆಸರಾದುದು. ಸಮಸ್ತ ಪ್ರಪಂಚದಲ್ಲೆಂಬಂತೆ ಈ ಸಂಸ್ಥೆಯ ಪದ್ಧತಿಗಳು ಅನುಸರಿಸಲ್ಪಡುತ್ತಿವೆ ಇವರ ಪದ್ಧತಿಯಂತೆ ಪ್ರತಿಯೊಂದು ಹಡಗದಲ್ಲಿ ದಾರಿ ತೋರಿಸುವ ಮುಖ್ಯ ನಾವಿಕನಿದ್ದರೆ, ಒಂದು ಪತಾಕೆಯನ್ನು ಹಾರಿಸುವರು. ಆ ಪತಾಕೆಯಿದ್ದರೆ ಮಾತ್ರ ಪ್ರಪಂಚದ ಯಾವತ್ತೂ ಬಂದರಗಳಲ್ಲಿ, ಹಡಗಗಳಿಗೆ ಪ್ರವೇಶ ಸಿಗುವುದು.

ಬ್ರಿಟಿಷರ "ಟ್ರಿನಿಟಿ ಹೌಸ್" ಸಂಸ್ಥೆಯು, ಲಂಡನಿನಲ್ಲಿರುವ "ಟವರ್ ಒಫ್ ಲಂಡನ್" ಬಳಿಯಿರುತ್ತದೆ.

ಕಳೆದ ಒಂದು ಶತಮಾನದಿಂದ ಈ "ಟ್ರಿನಿಟಿ ಹೌಸಿ"ನಲ್ಲಿ, ಸಮುದ್ರ ಪ್ರವಾಸದ ಸಮಸ್ಯೆಗಳು ಚರ್ಚಿಸಲ್ಪಡುತ್ತಿವೆ. ಪ್ರತಿಯೊಂದು ಹಡಗಕ್ಕೆ ದಾರಿ ತೋರಿಸುವ ನಾವಿಕನು ಬೇಕು, ಪ್ರತಿಯೊಬ್ಬ ನಾವಿಕನು ತನ್ನ ಕರ ತೆರಬೇಕು ಎಂಬ ಫ್ರೆಂಚ್ ಆಜ್ಞೆಯೂ, ಕಲ್ಕತ್ತಾ ಬಂದರಕ್ಕೆ ಹಡಗುಗಳು ಬಂದು ಹೋಗುವ ಸಂಕುಚಿತ ದಾರಿಯ ಸಮಸ್ಯೆಗಳೂ, ಚೀನಾ ಸಮುದ್ರದಲ್ಲಿನ ಕಷ್ಟತರ ದಾರಿಯ ವಿಷಯವೂ, ಈ "ಟ್ರಿನಿಟಿ ಹೌಸ್"ನಲ್ಲಿ ಚರ್ಚಿಸಲ್ಪಟ್ಟು, ಅದಕ್ಕೆ ತಕ್ಕ ಉಪಾಯಗಳನ್ನು ಕೈಕೊಳ್ಳಲಾಗಿದೆ.

ನಾವಿಕ ನಾಯಕನು ಚೆನ್ನಾಗಿ ದುಡಿದರೆ, ವರುಷಕ್ಕೆ 2000 ಪವನುಗಳಷ್ಟನ್ನು ಕೂಡಿಹಾಕಬಲ್ಲನು. ಸಾಮಾನ್ಯವಾಗಿ ಒಂದು ಸಾವಿರ ಪವನಿನ ವರೆಗೆ ದುಡಿವವರು ಹೆಚ್ಚು ಮಂದಿ ಇರುವರು.

ಉಗಿ ಹಡಗುಗಳು ಬಂದ ನಂತರ, ಯುದ್ಧ ನೌಕೆಯಲ್ಲಿ ಬದಲಾವಣೆಗಳಾಗಿವೆ. ಬ್ರಿಟಿಷರು ನೌಕೆಯಲ್ಲಿ ಪ್ರಪಂಚದಲ್ಲೆಲ್ಲ ಬಲಾಢ್ಯರು. ಬ್ರಿಟಿಷರ

(೪೪ನೇ ಪುಟಕ್ಕೆ ಮುಂದರಿಸಿಯದೆ)

ಪ್ರಾಚೀನಕಾಲದಲ್ಲಿ ದಕ್ಷಿಣ ಹಿಂದೂದೇಶದ ವ್ಯಾಪಾರ ವಹಿವಾಟು



—ಎನ್. ಬಿ.

ಈಗ ಮುಂದುವರಿದಿರುವ ಪಾಶ್ಚಾತ್ಯ ದೇಶಗಳು ಅನಾಗರಿಕ ಅವಸ್ಥೆಯಲ್ಲಿದ್ದ ಕಾಲದಲ್ಲಿ—ಎಂದರೆ ಕ್ರಿಸ್ತ ಶಕಾರಂಭಕ್ಕೆ ಮೊದಲು, ಭರತಖಂಡವು ಸಂಪತ್ತು ವೈಭವಗಳಿಂದಲೂ ಜನರ ಕಲೆ, ಚಾತುರ್ಯ ಇವುಗಳ ಮೇಲ್ಮೆಯಿಂದಲೂ ಪ್ರಸಿದ್ಧವಾಗಿದ್ದಿತು. ಇದು ಬರಿಯ ಊಹೆಯಲ್ಲ, ಕೇವಲ ಅಭಿಮಾನದ ಮಾತೂ ಅಲ್ಲ; ನಿಷ್ಪಕ್ಷಪಾತವಾದ, ಆದರೆ ಸರಿಯಾದ ಆಧಾರಗಳಿಂದ ಗೊತ್ತಾದ ಸಂಗತಿ. ಭಾರತ ದೇಶವು ಪ್ರಾಚೀನ ಕಾಲದಿಂದ ಉತ್ತರ ಮತ್ತು ದಕ್ಷಿಣ ಪ್ರದೇಶಗಳಾಗಿ ತನ್ನ ವೈಶಿಷ್ಟ್ಯವನ್ನು ಕಾದುಕೊಂಡಿದ್ದಿತು. ಈ ಭಾಗಗಳನ್ನು—ವಿಂಧ್ಯದ ಉತ್ತರಕ್ಕೆ ಆರ್ಯಾವರ್ತವೆಂದೂ, ದಕ್ಷಿಣಕ್ಕೆ ದಕ್ಷಿಣಾಪಥವೆಂದೂ ಕರೆಯುವ ರೂಢಿ ಇದ್ದಿತು. ಕೇವಲ ದಕ್ಷಿಣ ಭಾಗವು ದ್ರವಿಡ ಅಥವಾ ದ್ರಾವಿಡ ದೇಶವೆಂದು ಹೆಸರುಗೊಂಡಿದ್ದಿತು. ಕ್ರಮೇಣ ಇಡೀ ದಕ್ಷಿಣ ಹಿಂದೂದೇಶವನ್ನು ದ್ರಾವಿಡ ದೇಶವೆಂದು ಕರೆಯುವಂತೆಯೂ ಆಯಿತು! ಹೀಗಿದ್ದರೂ ಪ್ರಾಚೀನ ಕಾಲದಲ್ಲಿ ದ್ರವಿಡ ದೇಶವೆನ್ನುತ್ತಿದ್ದುದು ತಿರುಮಲ ಬೆಟ್ಟಗಳ ದಕ್ಷಿಣ ಪ್ರಾಂತಕ್ಕೆ ಮಾತ್ರ. ಎಂತಿದ್ದರೂ ಪ್ರಕೃತ ಕಾಲದಲ್ಲಿ ದಕ್ಷಿಣ ಹಿಂದೂದೇಶವೆನ್ನುವುದು ವಿಂಧ್ಯದ ದಕ್ಷಿಣಕ್ಕಿರುವ ಸಮಗ್ರ ಪ್ರದೇಶವನ್ನು ಕುರಿತಾಗಿ ಆಗಿರುತ್ತದೆ.

ನೂರಾರು ವರ್ಷಗಳ ಹಿಂದಿನಿಂದಲೂ ದಕ್ಷಿಣ ಭಾರತಕ್ಕೆ ಉತ್ತರ ಭಾರತದೊಡನೆ ಮಾತ್ರ ಪರಸ್ಪರ ರಾಜಕೀಯ ಮತ್ತು ವಾಣಿಜ್ಯ ಸಂಬಂಧವಿದ್ದುದಲ್ಲದೆ, ಬೆಬಿಲೋನಿಯಾ, ಅರೇಬಿಯಾ, ಐಗುಪ್ತ ದೇಶಗಳೊಡನೆ ವಿಶೇಷ ಸಂಬಂಧವು ಕೂಡ ಇದ್ದಿತು. ಕ್ರಿಸ್ತ ಶಕದ ಆರಂಭ ಕಾಲದಲ್ಲಿ—ಎಂದರೆ ಸುಮಾರು ಎರಡು ಸಾವಿರ ವರ್ಷಗಳ ಮೊದಲು ದಕ್ಷಿಣ ಭಾರತ ಮತ್ತು ಗ್ರೀಸ್, ರೋಮ್ ದೇಶ-ಇವುಗಳೊಳಗೆ ವ್ಯಾಪಾರ ವಹಿವಾಟು ಪ್ರಬಲವಾಗಿ ನಡೆಯುತ್ತಿತ್ತು. ಇವುಗಳೊಡನೆ ಮಾತ್ರವಲ್ಲದೆ, ಪರ್ಶಿಯಾ ಆಫ್ರಿಕ ಮತ್ತು ಚೈನಾ ದೇಶಗಳೊಡನೆ ಕೂಡ ವ್ಯಾಪಾರ ವಹಿವಾಟು ಚೆನ್ನಾಗಿ ಸಾಗುತ್ತಿತ್ತು. ಆ ಕಡೆಗಳಿಗೆ ಗಿಳಿ ಮತ್ತು ನವಿಲುಗಳ ರಫ್ತು ಇಲ್ಲಿಯ ವೈಶಿಷ್ಟ್ಯವು.

ಬೇರೆ ಯಾವ ಕಡೆಗಳಲ್ಲೂ ದೊರೆಯಲಾರದ, ಕರಿಮೆಣಸು (ಬಿಳಿ ಮೆಣಸು) ಮುತ್ತು ಮತ್ತು ಪಚ್ಚೆ ರತ್ನ ಇವುಗಳನ್ನು ದೊರಕಿಸುವ ಭಾಗ್ಯ ದಕ್ಷಿಣ ಹಿಂದೂದೇಶಕ್ಕೆ ಮಾತ್ರವಾಗಿದೆ. ಪಾಶ್ಚಾತ್ಯ ವ್ಯಾಪಾರ ಕೇಂದ್ರಗಳಲ್ಲಿ ಕರಿಮೆಣಸಿಗೆ ಒಳ್ಳೆ ಬೆಲೆ ಬರುತ್ತಿತ್ತು. ಅದು ಅಷ್ಟೊಂದು ಅಮೂಲ್ಯ ವಸ್ತುವೆಂದು ಗೊತ್ತಾಗಿತ್ತು. ಕ್ರಿ. ಶ. 400ರಲ್ಲಿ ಗೊಥ್ ಪ್ರಾಂತದ ಆಲರಿಕ್ ಎಂಬ ವೀರನು ರೋಮನ್ ಜನರನ್ನು ಗೆದ್ದು ಅವರಿಂದ ಪರಿಹಾರ ದ್ರವ್ಯ ರೂಪದಲ್ಲಿ 3,000 ರಾತಲು ಕರಿಮೆಣಸನ್ನು ಒಪ್ಪಿಸಬೇಕಾಗಿ ವಿಧಿಸಿದ್ದನು. ತೆಂಕಣ ಸಮುದ್ರ ಭಾಗದಿಂದ ಬಹು ಕಾಲದ ಹಿಂದಿನಿಂದಲೂ ಮುತ್ತನ್ನು ತೆಗೆಯುತ್ತಿದ್ದರು. ಈಗಲೂ ಕೂಡ ಈ ಭಾಗವು ಮುತ್ತಿಗೆ ಪ್ರಸಿದ್ಧವಾಗಿದೆ. ಇದರಿಂದ ದಕ್ಷಿಣ ಪ್ರದೇಶವು ಪರದೇಶದ ವ್ಯಾಪಾರಿಗಳನ್ನು ಆಕರ್ಷಿಸುತ್ತಿತ್ತು. ಪ್ಲಿನಿ (ಕ್ರಿ. ಶ. ಒಂದನೆ ಶತಮಾನದವನು) ಹೇಳುವಂತೆ ಪಚ್ಚೆ ರತ್ನವನ್ನು ಈ ದೇಶದವರೂ ರೋಮನ್ ಜನರೂ ಅತಿಯಾಗಿ ಮೆಚ್ಚುತ್ತಿದ್ದರು. ಆ ಕಾಲದಲ್ಲಿ ಪ್ರಸಿದ್ಧವಾದ ಮೂರು ಕಡೆಗಳಲ್ಲಿ ಪಚ್ಚೆ ರತ್ನದ ಖನಿಗಳಿದ್ದ ಉಲ್ಲೇಖವಿದೆ. (1) ಟಾಲೆಮಿ (ಕ್ರಿ. ಶ. ಎರಡನೆಯ ಶತಕ) ಹೇಳುವಂತೆ ಕಾವೇರಿಯ ಶಾಖೆಯಾದ ಕಪಿನೀ ನದಿಯ ದಡದಲ್ಲಿದ್ದ ಪುನ್ನಾಟ. (2) ಕೊಯಂಬುತ್ತೂರಿನಿಂದ ಸುಮಾರು 40 ಮೈಲು ದೂರದಲ್ಲಿರುವ ಪರಿಯೂರು (ಪಟ್ಟಿಯಾಲಿ). ಇತ್ತೀಚಿಗೆ 1820ರ ತನಕ ಇಲ್ಲಿ ಪಚ್ಚೆ ರತ್ನವನ್ನು ಅಗೆಯುವ ಕೆಲಸ ನಡೆಯುತ್ತಿತ್ತು. (3) ಸೇಲಂ ಜಿಲ್ಲೆಯ ಪೂರ್ವೋತ್ತರ ಮೂಲೆಯಲ್ಲಿರುವ ವಾಣಿಯಂಬಾಡಿ. ಇದು ಕೋಲಾರು ಚಿನ್ನದ ಗಣಿಗಳ ಸಮೀಪದಲ್ಲಿದೆ. ಈ ಖನಿಗಳಿದ್ದ ಪ್ರದೇಶದಲ್ಲಿ ಲೆಕ್ಕವಿಲ್ಲದ ರೋಮನ್ ನಾಣ್ಯಗಳು ದೊರೆಯುತ್ತವೆ. ಇದರಿಂದ ದಕ್ಷಿಣ ದೇಶದ ರತ್ನಗಳ ವ್ಯಾಪಾರವು ಎಷ್ಟು ಪ್ರಬಲವಾಗಿತ್ತೆಂದು ಗೊತ್ತಾಗುವುದು. ಪಚ್ಚೆ ರತ್ನವು ಮಾತ್ರವಲ್ಲದೆ ಸೇಲಂ ಕೊಯಂಬುತ್ತೂರು ಪ್ರಾಂತಗಳು ಮಾಣಿಕ್ಯ ಮತ್ತು ಪುಷ್ಯರಾಗಗಳಿಗೆ ಪ್ರಸಿದ್ಧವಾಗಿದ್ದುವು. ಇವುಗಳ ವ್ಯಾಪಾರವು ಜೋರಾಗಿ ನಡೆಯುತ್ತಲೂ ಇತ್ತು. ದಕ್ಷಿಣ ದೇಶವಂತೂ ಇನ್ನೂ ಬಗೆಬಗೆಯ ರತ್ನಗಳಿಗೆ ತವರೂರಾಗಿದ್ದಿತು. ಅವುಗಳ ವ್ಯಾಪಾರದಲ್ಲಿಯೂ ಪ್ರಸಿದ್ಧಿ ಹೊಂದಿದ್ದಿತು.

ಪ್ರಾಚೀನ ಕಾಲದ ದಕ್ಷಿಣ ಹಿಂದೂದೇಶದ ರಾಜ್ಯಗಳು ಬಲವಾದ ನಾವೆಗಳನ್ನು ಇರಿಸಿಕೊಂಡಿದ್ದುವು. ಇವುಗಳ ಮೂಲಕ ಪರದೇಶದ ವಿವಿಧ ಜನಾಂಗಗಳಿಗೆ ಸೇರಿದ ವ್ಯಾಪಾರಿಗಳು ಇಲ್ಲಿಯ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೂ ಸಾಗಿಸುವುದಕ್ಕೂ ಬರುತ್ತಿದ್ದರು. ಯುರೋಪಿನ ಚಿನ್ನ ಬೆಳ್ಳಿ ಮತ್ತು ಇತರ ವಸ್ತುಗಳ ವಿನಿಮಯದಿಂದ ಅವರು ವ್ಯಾಪಾರ ನಡೆಸುತ್ತಿದ್ದರು. ಈಗ ಯುರೋಪಿನಲ್ಲಿ ಪವನು ನಾಣ್ಯವು ಚಲಾವಣೆಯಾಗುವ ಹಾಗೆಯೇ ಆ ಕಾಲದಲ್ಲಿ ರೋಮನ್ ನಾಣ್ಯವಾದ ಅರೇಯಸ್ (Aureus) ಎಂಬುದು ಧಾರಾಳವಾಗಿ ಇಲ್ಲಿ ಚಲಾವಣೆಯಾಗುತ್ತಿತ್ತು. ಅಂಗಡಿ ಬೀದಿಗಳಲ್ಲಿ ರೋಮನರ ಒಂದು ಬಗೆಯ ಕಂಚಿನ ಚಿಕ್ಕ ನಾಣ್ಯವು ಹೇರಳ ಚಲಾವಣೆಯಾಗುತ್ತಿತ್ತು. ಅವುಗಳು ಹೊರಗಣಿಂದಲೂ ಬರುತ್ತಿದ್ದುವಲ್ಲದೆ, ಮಧುರೆಯಲ್ಲಿ ಕೂಡ ಅವುಗಳನ್ನು ಟಂಕಿಸುತ್ತಿದ್ದರು. ಕ್ರಿ. ಶಕದ ಮೊದಲನೆಯ ಎರಡು ಶತಮಾನಗಳಲ್ಲಿ ರೋಮಿನ ಪ್ರಜೆಗಳು ಇಲ್ಲಿ ವ್ಯಾಪಾರಕ್ಕಾಗಿ ಬಂದು ನೆಲಸಿದುದಕ್ಕೆ ಆಧಾರವಿದೆ. ಮುಚೂರಿಸ್ (ಈಗಿನ ಕೊಚ್ಚಿಯ ಕ್ರೇಂಗನೂರು) ಎಂಬಲ್ಲಿ ಅಗಸ್ಟಸ್ ಚಕ್ರವರ್ತಿಯ ಹೆಸರಲ್ಲಿ ಒಂದು ದೇವಾಲಯವು ಕೂಡ ಸ್ಥಾಪಿತವಾಗಿದ್ದಿತೆಂದು ತಿಳಿದುಬಂದಿದೆ. ಇದು ಕ್ರಿಸ್ತ ಪೂರ್ವ ಒಂದನೆಯ ಶತಮಾನದಲ್ಲಿ ಆಗಿದ್ದಿರಬೇಕು. ಕಾವೇರಿಯ ಸಂಗಮಸ್ಥಾನದ ಪುಹಾರ್ ಅಥವಾ ಕಾವಿರಿಪುಂಪಟ್ಟಿನ ಎಂಬ ಹೆಸರಿನ ಪ್ರಸಿದ್ಧ ರೇವು ಸ್ಥಳದಲ್ಲಿ ಅನೇಕ ಯವನರು ನೆಲಸಿದ್ದರು. ಈಗ ಆ ಸ್ಥಳವು ಮರಳ ದಿನ್ನೆಯಿಂದ ಮುಚ್ಚಿಹೋಗಿದೆ. ಆ ನಗರದ ಸಂಪತ್ತು ವೈಭವಗಳು ಪ್ರಾಚೀನ ತಮಿಳು ಕಾವ್ಯಗಳಲ್ಲಿ ಚೆನ್ನಾಗಿ ವ್ಯಕ್ತವಾಗಿವೆ.

ಈಗ ದೊರೆಯುವ ಆಧಾರಗಳಿಂದ ದಕ್ಷಿಣ ಹಿಂದೂದೇಶಕ್ಕೂ ಭೂಮಧ್ಯ ಸಮುದ್ರ (ಮೆಡಿಟರೇನಿಯನ್) ಪ್ರದೇಶಗಳಿಗೂ ಇದ್ದ ಸಂಬಂಧವು ಮತ್ತಷ್ಟು ಸ್ಪಷ್ಟವಾಗಿದೆ. ಮೆಡಿಟರೇನಿಯನ್ ಪ್ರದೇಶ ಟೈಗ್ರಿಸ್—ಎಫ್ರೆಟಿಸ್ ತಪ್ಪಲು ಮತ್ತು ಚೈನ ಇವು ಅತಿ ಪ್ರಾಚೀನ ಸಂಸ್ಕೃತಿಗಳ ಅವಶೇಷಗಳು. 11, 13 ಮತ್ತು 15ನೆಯ ಶತಮಾನಗಳ ಪ್ರಸಿದ್ಧ ಪ್ರಯಾಣಿಕರೂ ನಾವಿಕರೂ ಆಗಿದ್ದ ಅಲ್ಬರೇನಿ, ಮಾರ್ಕೊಪೋಲೊ ಮತ್ತು ವಾಸ್ಕೋಡಿ ಗಾಮ-ಇವರ ಹೇಳಿಕೆಗಳು ಪ್ರಾಚೀನ ಕಾಲದ ವ್ಯಾಪಾರ ಸಂಬಂಧವು ಮುಂದುವರಿಯುತ್ತ ನಡೆದು ಬರುತ್ತಿದ್ದಿತೆಂದು ತಿಳಿಸುತ್ತವೆ. ಕ್ರಿ. ಪೂರ್ವ ಎರಡನೆಯ ಶತಮಾನದಲ್ಲಿ ಭಾರತ ದೇಶದಿಂದ ಐಗುಪ್ತ, ಸೀರಿಯಾ, ಮೆಸೆಡನ್, ಸೈಪ್ರಸ್ ಮತ್ತು ಸೈಡನ್ ಪ್ರಾಂತಗಳ ಗ್ರೀಕ್ ದೊರೆಗಳ ಬಳಿಗೆ ರಾಯಭಾರಿಗಳನ್ನು ಕಳಿಸುತ್ತಿದ್ದರು. ಐಗುಪ್ತದಲ್ಲಿ ದೊರೆತ ಒಂದು ಪ್ರಾಚೀನ ಗ್ರೀಕ್ ಪ್ರಹಸನದಲ್ಲಿ ನಮ್ಮ ಪಶ್ಚಿಮ ಕರಾವಳಿಯ ಪ್ರಸ್ತಾವ ಬಂದಿದೆ. ಅದರಲ್ಲಿ ಹಲವು ವಿದೇಶಿ ಪದಗಳಿವೆ ಎಂದು ಸಂಶೋಧಕ ವಿದ್ವಾಂಸರು ತಿಳಿದುಕೊಂಡರು. ಅವು ಕನ್ನಡ ಪದಗಳಾಗಿರಬಹುದೆಂದು ಪ್ರಬಲವಾಗಿ ಊಹಿಸಲ್ಪಟ್ಟಿದೆ. ಆ ಪ್ರಹಸನದ ಸ್ಥಳವು ಕೂಡ ಮಲ್ಪೆಯ ಬಳಿಯಲ್ಲಿರುವ ಉದಿಯಾವರ ಪ್ರಾಂತವೆಂದು ಕೆಲವೊಂದು ಆಧಾರಗಳಿಂದ ನಿರ್ಣಯಿಸಿದ್ದಾರೆ. ಇದು ಸಾಮಾನ್ಯ ಕ್ರಿ. ಶ. ಎರಡನೆಯ ಶತಮಾನದ ಹಿಂದಿನ ಕತೆ. ಹಿಬ್ರೂ ಗ್ರಂಥಗಳಲ್ಲಿ ಗಂಧಸರಕು ಧೂಪ ಸಾಮುಗ್ರಿಗಳ ಪ್ರಸ್ತಾಪವಿದೆ. ಇವು ನಮ್ಮ ಪಶ್ಚಿಮ ಘಟ್ಟಗಳ ಉತ್ಪನ್ನಗಳೇ ಹೊರತು ಬೇರೆಯಲ್ಲ. ಪ್ರಾಚೀನ ಕಾರ್ಥೇಜ್ ನಗರದ ಅರಸ ಅರಮನೆಗಳು ಸಹ್ಯಾದ್ರಿ ಪ್ರದೇಶದ ಗಂಧದ ಮರಗಳಿಂದ ರಚಿತವಾದುವು. ಮೆಡಿಟರೇನಿಯನ್ ಪ್ರದೇಶದ "ಊರ್" ಎಂಬಲ್ಲಿರುವ ಭಗ್ನಾವಶೇಷಗಳಲ್ಲಿ ಭಾರತದ ತೇಗಿನ ಮರವು ಗುರುತಿಸಲ್ಪಟ್ಟಿದೆ. ಅದು ಬೆಬಿಲೋನಿನ ರೇವು ಆಗಿದ್ದಾಗ, ಎಂದರೆ ಕ್ರಿ. ಪೂರ್ವ ನಾಲ್ಕು ಶತಮಾನಗಳ ಮೊದಲು ದಕ್ಷಿಣ ದೇಶದ ಸಂಬಂಧವನ್ನು ಸೂಚಿಸುತ್ತದೆ. ಇತ್ತ ಕಡೆಯಿಂದ ಪರದೇಶಗಳಿಗೆ ಕಾಡು ಉತ್ಪತ್ತಿಗಳು ಧಾರಾಳವಾಗಿ ರಫ್ತಾಗುತ್ತಿದ್ದುವೆಂಬುದಕ್ಕೆ ಬೇಕಾದಷ್ಟು ಆಧಾರಗಳು ದೊರೆಯುತ್ತವೆ.

ಯಾವುದಾದರೊಂದು ದೇಶದ ಸಂಪತ್ತು ಪರಕೀಯರನ್ನು ಆ ಕಡೆ ಆಕರ್ಷಿಸುವುದು ಸಹಜ. ನಮ್ಮ ದೇಶವು ವಿವಿಧ ಜನಾಂಗಗಳ ಸಂತೆಯಾಗಿರುವುದಕ್ಕೆ ಇಲ್ಲಿಯ ಸಂಪತ್ತೇ ಕಾರಣ. ಈ ಸಂಪತ್ತು ಮುಖ್ಯವಾಗಿ ಪ್ರಾಕೃತಿಕ ಉತ್ಪನ್ನಗಳಿಂದಲೂ ಕೈಗಾರಿಕೆಗಳಿಂದಲೂ ಉಂಟಾದುದು; ಎರಡನೆಯದಾಗಿ ವ್ಯಾಪಾರ ವಹಿವಾಟಿನಿಂದ ವೃದ್ಧಿಗೊಂಡುದು. ದಕ್ಷಿಣ ದೇಶದ ಭೂಸಂಪತ್ತನ್ನು ಗಮನಿ

ಸಿದರೆ, ನೂರಾರು ವರ್ಷಗಳಿಂದ ಇಲ್ಲಿ ವಿಶೇಷ ಹವಾಮಾನದಲ್ಲಾಗಲಿ, ಇತರ ಪ್ರಾಕೃತಿಕ ಕಾರಣಗಳಲ್ಲಾಗಲಿ ಬದಲಾವಣೆಯಾಗಿರುವಂತೆ ತೋರುವುದಿಲ್ಲ. ಗುಜರಾಥ, ಖಾನ್ ದೇಶ ಮತ್ತು ಬಿರಾರ್ ಪ್ರಾಂತಗಳಲ್ಲಿ ಬಹು ಕಾಲದಿಂದ ಹತ್ತಿ ಚೆನ್ನಾಗಿ ಬೆಳೆಯುತ್ತಿತ್ತು. ಕ್ರಿ. ಶ. ಒಂದೆರಡನೆಯ ಶತಮಾನದಲ್ಲಿ "ಪೆರಿಪ್ಲಸ್"ಕಾರನೂ 13ರಲ್ಲಿ ಮಾರ್ಕೋಪೋಲನೂ, 16ರಲ್ಲಿ ಟವೆರ್ನಿಯರನೂ ಭರೋಛ (ಭೃಗುಕಚ್ಛ)ದಿಂದ ರಫ್ತಾಗುತ್ತಿದ್ದ ಸಾಮಗ್ರಿಗಳಲ್ಲಿ ಹತ್ತಿಯ ನೂಲು ಮತ್ತು ವಸ್ತ್ರಗಳ ಪ್ರಸ್ತಾವವನ್ನು ಎತ್ತಿದ್ದಾರೆ. 13 ಮತ್ತು 17ನೆಯ ಶತಮಾನಗಳಲ್ಲಿ ನೀಲಿಯು ಧಾರಾಳವಾಗಿ ಹೊರ ಪ್ರಾಂತಗಳಿಗೆ ಇಲ್ಲಿಂದ ಹೋಗುತ್ತಿದ್ದಿತು. 12 ಮತ್ತು 13ನೆಯ ಶತಮಾನಗಳಲ್ಲಿ ಗಂಧಸರಕುಗಳು ಹೇರಳವಾಗಿ ಹೊರ ಹೋಗುವುದಿತ್ತು. ಪಶ್ಚಿಮ ಕರಾವಳಿಯು ತೆಂಗಿನಕಾಯಿ, ಅಕ್ಕಿ, ವೀಳ್ಯದೆಲೆಗಳಿಗೆ ಪ್ರಸಿದ್ಧಿ ಪಡೆದಿದ್ದಿತು. ಪಶ್ಚಿಮ ಘಟ್ಟಗಳಿಂದ ಗಂಧ, ತೇಗು, ಬೀಟೆ ಮರಗಳು ಧಾರಾಳವಾಗಿ ಸಾಗಿಸಲ್ಪಡುತ್ತಿದ್ದುವು. ಬಹು ಪ್ರಾಚೀನ ಕಾಲದಲ್ಲಿ ಇಲ್ಲಿಯ ಮರಗಳು ಪರದೇಶಕ್ಕೆ ಹೋಗುತ್ತಿದ್ದ ಸಂಗತಿಯನ್ನು ಮೇಲೆಯೇ ಸೂಚಿಸಿದೆಯಷ್ಟೆ. ಗ್ರೀಕ್ ಭಾಷೆಯ [illegible]" (Oruza) ಎಂಬುದು ತಮಿಳು ಮಲೆಯಾಳ. ತುಳು ಭಾಷೆಗಳಲ್ಲಿ ಪ್ರಚಾರದಲ್ಲಿರುವ 'ಅರಿಸಿ,' 'ಅರಿ'ಯೇ ಆಗಿದೆ. ಕನ್ನಡದಲ್ಲಿ ಅದು ಅಕ್ಕಿಯೆಂದಾಗಿದೆ. ಕರಿಮೆಣಸು ಸಂಸ್ಕೃತ ಭಾಷೆಯಲ್ಲಿ "ಯವನಪ್ರಿಯ"ವೆಂಬ ಹೆಸರನ್ನು ಹೊಂದಿದೆ. ಯವನ (ಗ್ರೀಕ)ರಿಗೆ ಪ್ರಿಯವಾದ ವಸ್ತುವಾಗಿರಬೇಕಲ್ಲವೆ! ಹಿಬ್ರೂ ಗ್ರಂಥಗಳಲ್ಲಿ ತೋರುವಂತೆ "ತುಕಿ. ತೂಕೆ" ಎಂಬ ಶಬ್ದದ ಚರಿತ್ರೆಯನ್ನು ಕ್ರಿಸ್ತ ಪೂರ್ವ ಸಾವಿರ ವರ್ಷಗಳ ಹಿಂದಿನಿಂದಲೇ ತಿಳಿಯಬಹುದಾಗುತ್ತದೆ. ಇದು "ಸೋಗೆ" ಎಂಬುದರ ರೂಪಾಂತರ. ತಮಿಳಿನಲ್ಲಿ ತೋಹೈ ಎನ್ನುವರು. ಅಂತೂ 'ಸೋಗೆ'ಗಳಿಂದ ಸುಂದರವಾಗಿ ತೋರುವ 'ನವಿಲು'ಗಳನ್ನು ಕುರಿತಾಗಿ ಹುಟ್ಟಿದ ಶಬ್ದವಿದು. ಹಿಬ್ರೂ ಜನರ ದೊರೆಯಾದ ಸೊಲಮನನ ಹಡಗುಗಳಲ್ಲಿ ತರುತ್ತಿದ್ದ ವಸ್ತುಗಳಲ್ಲಿ ತೂಕಿ (ಸೋಗೆ)ಯ ಪ್ರಸ್ತಾವವಿದೆ. ದಕ್ಷಿಣ ಪ್ರಾಂತ್ಯದ ಅರಣ್ಯಗಳು, ವಿಶೇಷವಾಗಿ ಘಟ್ಟದ ಸೀಮೆಗಳು ಆನೆಗಳಿಗೆ ಈಗಲೂ ಪ್ರಸಿದ್ಧವಾಗಿವೆ. ದಂತ ಸಾಮಗ್ರಿಗಳ ವ್ಯಾಪಾರವು ಕೂಡ ಆ ಕಾಲದಲ್ಲಿ ಬಲವಾಗಿ ನಡೆಯುತ್ತಲಿದ್ದಿರಬೇಕು.

ಖನಿಜ ಸಂಪತ್ತಿನ ವಿಷಯದಲ್ಲಿ ದಕ್ಷಿಣ ಹಿಂದೂದೇಶವು ಪ್ರಸಿದ್ಧವಾಗಿತ್ತು. ಭೃಗುಕಚ್ಛದಿಂದ ರಫ್ತಾಗುತ್ತಿದ್ದ ವಸ್ತುಗಳಲ್ಲಿ ಪೆರಿಪ್ಲಸ್ ಗ್ರಂಥಕಾರನು (2ನೆಯ ಶತಕದವನು) ತಾಮ್ರವನ್ನು ಕುರಿತಾಗಿ ಹೇಳಿದ್ದಾನೆ. ಕಡಪ್ಪ, ಬಳ್ಳಾರಿ ಜಿಲ್ಲೆಗಳಲ್ಲಿ ತಾಮ್ರದ ಖನಿಗಳ ಕುರುಹುಗಳು ಧಾರಾಳವಾಗಿ ದೊರೆತಿವೆ. ಬಿಜಾಪುರ ಧಾರವಾಡ ಜಿಲ್ಲೆಗಳಲ್ಲಿ ಕೂಡ ತಾಮ್ರದ ಖನಿಗಳಿದ್ದುದು ಗೊತ್ತಾಗಿದೆ. ಅವುಗಳಲ್ಲಿ ಕೆಲವು ಹೈದರಾಲಿಯ ಕಾಲದ ತನಕ ತಾಮ್ರವನ್ನು ದೊರಕಿಸುತ್ತಿದ್ದುವೆಂದೂ ಖನಿಯ ಅಗೆತದ ಕೆಲಸ ನಡೆಯುತ್ತಿದ್ದಿತೆಂದೂ ತಿಳಿದುಬಂದಿದೆ. ಪ್ರಾಚೀನ ಕಾಲದಲ್ಲಿ ತಾಮ್ರವು ಬಹು ಅಮೂಲ್ಯ ಲೋಹವೆನಿಸಿದ್ದಿತು. 17ನೆಯ ಶತಮಾನದಲ್ಲಿ ತಾಮ್ರದ ಬೆಲೆ ಈಗಿರುವುದಕ್ಕಿಂತ ಐದು ಪಾಲು ಹೆಚ್ಚಾಗಿತ್ತು. ತಾಮ್ರದ ಖನಿಗಳಿಗಿಂತಲೂ ರತ್ನದ ಖನಿಗಳು ಮತ್ತಷ್ಟು ಅಮೂಲ್ಯವಾಗಿದ್ದುವು. ಕಡಪ್ಪ, ಬಳ್ಳಾರಿ, ಜಿಲ್ಲೆಗಳಲ್ಲಿಯೂ ಗೋಲ್ಕೊಂಡದ ಬಳಿಯ ನದಿಯ ತಪ್ಪಲಲ್ಲಿಯೂ ಅಮೂಲ್ಯ ವಜ್ರಗಳು ದೊರೆಯುತ್ತಿದ್ದುವು. ಇದು ಇತ್ತೀಚೆಗಿನವರೆಗೆ ಬಹು ಪ್ರಸಿದ್ಧವಾದುದೆಂದು ಮಾರ್ಕೋಪೋಲೊ, ಇಬ್ನ್‌ಬಟೂಟ, ಟವೆರ್ನಿಯರ್, ಮೊದಲಾದವರ ಹೇಳಿಕೆಗಳಿಂದ ಗೊತ್ತಾಗಿದೆ. ಇಬ್ನ್‌ಬಟೂಟನ ಕಾಲದಲ್ಲಿ ದಕ್ಷಿಣವು ಚಿನ್ನಾಭರಣಗಳ ವ್ಯಾಪಾರದಲ್ಲಿ ಹೆಸರಾಗಿದ್ದಿತು. ಟವೆರ್ನಿಯರನ (17ನೆಯ ಶತಮಾನ) ಹೇಳಿಕೆಯ ಮೇರೆಗೆ ಗೋವೆಯಿಂದ ಮೊದಲಿನಿಂದಲೇ ಚಿನ್ನಾಭರಣಗಳು ಹೇರಳವಾಗಿ ಹೊರಗೆ ಹೋಗುತ್ತಿದ್ದುವೆಂದು ತಿಳಿಯುವುದು.


ಭೃಗುಕಚ್ಛ ಮತ್ತು ದ್ರಾವಿಡ ನಾಡಿನಿಂದ ಬಟ್ಟೆಬರೆಗಳು ಹೆಚ್ಚಾಗಿ ರಫ್ತಾಗುತ್ತಿದ್ದುವೆಂದು ಪೆರಿಪ್ಲಸದಿಂದ ತಿಳಿಯುವುದು. ದಕ್ಷಿಣದಲ್ಲಿ ಪೈಠಣ ಮತ್ತು ತಗರೆ ವಸ್ತ್ರ ವ್ಯಾಪಾರದ ಕೇಂದ್ರಗಳಾಗಿದ್ದುವು. ಗುಜರಾಥ, ಥಾನಾ, ವಾರಂಗಲ ಈ ಕಡೆಗಳಲ್ಲಿ ನೇಯ್ಗೆಯ ಕೈಗಾರಿಕೆ ಹೆಚ್ಚಾಗಿ ನಡೆಯುತ್ತಿದ್ದಿತೆಂದೂ, ಅವು ಪರದೇಶಗಳಿಗೆ ಕಳಿಸಲ್ಪಡುತ್ತಿದ್ದುವೆಂದೂ ಮಾರ್ಕೋಪೋಲೋನು (13ನೆಯ ಶತಕದವನು) ಸೂಚಿಸಿದ್ದಾನೆ. ಬರ್ಹಾನಪುರ, ಬಿರಾರುಗಳಲ್ಲಿ ತಯಾರಾಗುತ್ತಿದ್ದ ಕ್ಯಾಲಿಕೊ ಬಟ್ಟೆಯು ಪರ್ಸಿಯಾ, ಟರ್ಕಿ, ಪೋಲೆಂಡ್, ಅರೇಬಿಯ ಮತ್ತು ಕೈರೋ ಪ್ರಾಂತಗಳಿಗೆಲ್ಲ ಹೋಗುತ್ತಿತ್ತೆಂದು ಟವೇರ್ನಿಯರನ ಹೇಳಿಕೆಯಿದೆ.

ಭೃಗುಕಚ್ಛ ಬಂದರಿಗೆ ಆಮದಾಗುತ್ತಿದ್ದ ಒಡವೆಗಳಲ್ಲಿ ಪೆರಿಪ್ಲಸನು ಸಾಮಾನ್ಯ ಬಗೆಯ ಮುತ್ತುಗಳು, ಚಿನ್ನ, ಗುಲಾಮರು, ಇಟಲಿಯ ದ್ರಾಕ್ಷಾರಸ, ತವರ. ಸೀಸ, ಗ್ಲಾಸ. ಮುಂತಾದುವುಗಳನ್ನು ಹೇಳಿದ್ದಾನೆ. ಪಶ್ಚಿಮ ಕರಾವಳಿಗೆ ಬರುತ್ತಿದ್ದ ಪ್ರತಿ ಹಡಗುಗಳೂ ಇತರ ಸಾಮಗ್ರಿಗಳೊಡನೆ ಕುದುರೆಗಳನ್ನು ತುಂಬಿಕೊಂಡು ಬರುತ್ತಿದ್ದುವೆಂದು ಮಾರ್ಕೋಪೋಲೋನು ಹೇಳಿರುವನು.

ಇತ್ತೀಚೆಗೆ ಸಿಂಧ ಮತ್ತು ಪಂಜಾಬು ಪ್ರಾಂತಗಳಲ್ಲಿ ನಡೆದ ಭೂಸಂಶೋಧನೆಗಳಿಂದ [illegible] ಸಂಗತಿಗಳು. ದಕ್ಷಿಣ ದೇಶದ ಪ್ರಾಚೀನ ಸ್ಥಿತಿಗಳ [illegible]. ಹರಪ್ಪಾ ಮತ್ತು ಮೊಹೆಂಜದಾರೋ [illegible] ಮೂಲಕವಾಗಿ ದಕ್ಷಿಣ ದೇಶದ ಜನಗಳ ಪ್ರಾಚೀನತೆ. ಸಂಸ್ಕೃತಿ. ಕೈಗಾರಿಕೆ ಮೊದಲಾದುವುಗಳು ಮತ್ತಷ್ಟು ಬೆಳಕಿಗೆ ಬಂದಿವೆ. ಆರ್. ಡಿ. ಬ್ಯಾನರ್ಜಿಯವರ [illegible] ಮೇರೆಗೆ ಹರಪ್ಪಾ, ಮೊಹೆಂಜದಾರೋಗಳ ರಚನೆಯನ್ನು [illegible] ಮಾಡಿದರೆಂದು ಗೊತ್ತಾಗುವುದು. ಆ ವಾದವು ಇನ್ನೂ ಸ್ಥಿಮಿತಕ್ಕೆ ಬಂದಿರುವುದಿಲ್ಲವಾದುದರಿಂದ ಅದರ ಸೂಚನೆಯನ್ನಷ್ಟೇ ಇಲ್ಲಿ ಹೇಳಿದೆ.

ಪಾಶ್ಚಾತ್ಯದೇಶಗಳೊಡನೆ ವ್ಯಾಪಾರ ವಹಿವಾಟಿನ ಸಂಬಂಧವಿದ್ದಂತೆಯೇ ಪೂರ್ವಪ್ರದೇಶದ ದ್ವೀಪಗಳೊಡನೆಯೂ ಚೈನಾ ದೇಶದೊಡನೆಯೂ ದಕ್ಷಿಣ ದೇಶದ ನಿಕಟ ಸಂಬಂಧವಿದ್ದಿತು. ಜಾವ, ಸುಮಾತ್ರ, ಬೊರ್ನಿಯೋ ದ್ವೀಪಗಳಲ್ಲಿ ದಕ್ಷಿಣ ದೇಶೀಯರು ಹೋಗಿ ನೆಲೆಸಿದ್ದರು. [illegible] ಸಾಯಂ, ಕಂಬೋಡಿಯಗಳಲ್ಲೂ ವಸಾಹತುಗಳನ್ನು ಕಟ್ಟಿದ್ದರು. ಪ್ರಾಚೀನ ಕಾಲದಿಂದಲೇ ಪೂರ್ವಪಶ್ಚಿಮ ಕರಾವಳಿಗಳಿಂದ ಚೈನಾದೇಶಕ್ಕೆ ಸಮುದ್ರ ಮೂಲಕ ವ್ಯಾಪಾರ ವಹಿವಾಟು ನಡೆಯುತ್ತಿತ್ತು. ಕ್ರಿ. ಶ. 5ನೆಯ ಶತಕದಲ್ಲಿ ದಕ್ಷಿಣ ದೇಶದಿಂದ ಚೈನಕ್ಕೆ ಕಳಿಸಲ್ಪಟ್ಟ 'ಲೀಮ್‌ವೂ' ಎಂಬ ರಾಯಭಾರಿಯು ದಕ್ಷಿಣ ದೇಶದಲ್ಲಿ ರೋಮ್ ಚಕ್ರಾಧಿಪತ್ಯದೊಡನೆ ಹೆಚ್ಚಾದ ವ್ಯಾಪಾರವು ಸಾಗುತ್ತಲಿದ್ದಿತೆಂದು ಅಲ್ಲಿ ತಿಳಿಸಿದ್ದನೆಂಬ ಉಲ್ಲೇಖವಿದೆ.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ದಕ್ಷಿಣ ದೇಶವನ್ನು ಸಂಚರಿಸಿ ಕರಾವಳಿಗಳಲ್ಲಿ ಸುತ್ತಾಡಿ ತಮ್ಮ ಹೇಳಿಕೆಗಳನ್ನು ಬರೆದಿಟ್ಟಿರುವ ಪ್ಲಿನಿ, ಪ್ಟೊಲೊಮಿ ಮತ್ತು 'ಪೆರಿಪ್ಲಸ್' ಗ್ರಂಥಕಾರ ಮೊದಲಾದ ಗ್ರೀಕ್ ಮತ್ತು ರೋಮನ್ ಬರೆಹಗಾರರ ಮಾತುಗಳಿಂದ ಅನೇಕಾನೇಕ ಸಂಗತಿಗಳು ತಿಳಿದುಬಂದಿವೆ. ಈ ಕಡೆಯ ಬಂದರುಗಳು ಪ್ರಸಿದ್ಧ ನದಿಗಳ ರಾಜಧಾನಿಗಳು. ಇವುಗಳೆಲ್ಲವುಗಳ ಪ್ರಸ್ತಾಪವನ್ನವರು ವಿಸ್ತಾರವಾಗಿ ಮಾಡಿರುವರು. ಅವರು ಹೇಳಿದ ಬಂದರುಗಳಾವುವು, ಈಗ ಅವು ಎಲ್ಲಿವೆ. ಮುಂತಾದ ವಿಷಯಗಳಲ್ಲಿ ವಾದವಿವಾದಗಳು ಹುಟ್ಟಿದರೂ, ಅವೆಲ್ಲ ಇಲ್ಲಿಯವೆಂಬುದೂ, ಇಲ್ಲಿಗೆ ಪ್ರಾಚೀನ ಕಾಲದಲ್ಲಿ ಪರದೇಶಗಳೊಡನೆ ವ್ಯಾಪಾರ ವಹಿವಾಟು ನಡೆಯುತ್ತಿತ್ತೆಂಬುದೂ ನಿರ್ವಿವಾದವಾಗಿದೆ.



(ಹಿಂದೇ ಪುಟದಿಂದ ಮುಂದರಿದುದು)

ವ್ಯಾಪಾರೀ ಹಡಗುಗಳು ಒಟ್ಟು ಹದಿನೆಂಟು ಮಿಲಿಯ ಟನ್ನುಗಳಷ್ಟು ಇವೆ ಎನ್ನುವರು. ಬ್ರಿಟೈನು ಚಿಕ್ಕ ದ್ವೀಪವಾಗಿದ್ದು, ಹೆಚ್ಚಿನ ವ್ಯಾಪಾರವನ್ನು ಹೊರದೇಶಗಳೊಡನೆ ಸ್ಟೀಮರುಗಳ ಮೂಲಕವೇ ನಾಡಬೇಕಾಗಿದೆ. ಈ ವ್ಯಾಪಾರದ ರಕ್ಷಣೆಗೆ ಬ್ರಿಟಿಷ್ ಸರಕಾರವು ಅತ್ಯಂತ ಶ್ರೇಷ್ಠವೆನಿಸುವ ನೌಕಾದಲವನ್ನೂ ಇಟ್ಟಿದೆ.

ಒಂದಾನೊಂದು ಕಾಲದಲ್ಲಿ ಭಾರತವು ಹಡಗ ವ್ಯಾಪಾರದಲ್ಲಿ ಅತ್ಯಂತ ಪ್ರಸಿದ್ಧಿಪಡೆದಿತ್ತು. ಪ್ರಪಂಚದ ಯಾವ ರಾಷ್ಟ್ರಗಳೊಡನೆಯೂ ಭಾರತವು ಹಡಗ ವ್ಯಾಪಾರದಲ್ಲಿ ಸ್ಪರ್ಧೆಗೆ ನಿಲ್ಲುವಷ್ಟು ಸಮರ್ಥವಾಗಿತ್ತು. ಆ ಕಾಲದಲ್ಲಿ ಕೊಂಕಣ ಕರಾವಳಿಯೂ, ಮಲಬಾರ್ ಕರಾವಳಿಯೂ ಇತಿಹಾಸಪ್ರಸಿದ್ಧವಾದುವು. ದೊಡ್ಡ ಹಡಗುಗಳನ್ನು ಕಟ್ಟುವ ಬಂದರಗಳೂ ಇಲ್ಲಿ ಇದ್ದುವು. ಇಂದು ಈ ಶ್ರೇಷ್ಠತೆಯು ಎಲ್ಲಿಯೋ ಮಾಯವಾಗಿದೆ. ಅದೃಷ್ಟಚಕ್ರವು ತಿರುಗಿದೆ. ಬ್ರಿಟೈನು ಸಮುದ್ರವನ್ನು ಆಳುತ್ತಿದೆ. ಬ್ರಿಟಿಷರ ಆಡಳಿತದಲ್ಲಿ ಹಿಂದೂದೇಶದ ಹಡಗ ವ್ಯಾಪಾರವು ಯಾವ ಸುಧಾರಣೆಯನ್ನೂ ಕಂಡಿಲ್ಲವೆನ್ನಬಹುದು. ಬ್ರಿಟಿಷರ ಹಡಗುಗಳನ್ನೇ ನಾವು ಹಿಂದೂದೇಶದ ತೀರಗಳಲ್ಲಿ ಕಾಣುತ್ತಿದ್ದೇವೆ.

ಜಲಯಾನವು ಯಾವ ಕಾಲದಲ್ಲಿ ರಚಿಸಲ್ಪಟ್ಟಿತೆಂದು ಹೇಳಬರುವುದಿಲ್ಲ. ಅತಿ ಪುರಾತನ ಕಾಲದಿಂದ ರಾಮಾಯಣ—ಮಹಾಭಾರತಗಳಲ್ಲೂ ಇದರ ಉಲ್ಲೇಖವಿದೆ. ಆದರೆ ಹಡಗಗಳ ಉಗಿಯಿಂದ ಚಲಿಸಲಾರಂಭವಾದಂದಿನಿಂದ ಜಲಯಾನಗಳಲ್ಲಿ ಹಲವು ಬಗೆಯ ಶೀಘ್ರ ಮಾರ್ಪಾಟುಗಳಾದುವು.



ಮೆಡಿಟರೇನಿಯನಿನ ಪ್ರಾಮುಖ್ಯತೆ

ಇಟೇಲಿಯ ಅದ್ಭುತಕರ ಸೋಲು

ನಾಝಿಗಳ ಭೂಸೈನ್ಯ

ಬ್ರಿಟೈನಿಗೆ ಪೃಥ್ವಿಯ ಹಲವು ಭಾಗಗಳಿಂದ ಸಹಾಯವೊದಗಿದೆ. ಈ ಗಗನ ಸೈನಿಕರು ಕೆನಡದ ವಿಮಾನಶಾಲೆಗಳಲ್ಲಿ ತರಬೇತಿ ಹೊಂದಿ ಬಂದಿರುವರು. ಕೆನಡದಲ್ಲಿ ಬ್ರಿಟಿಷರ ಬಗ್ಗೆ ವೈಮಾನಿಕರು ಸಿದ್ಧವಾಗುತ್ತಿರುವರು.

ಏಕ್ಸಿಸ್ ರಾಷ್ಟ್ರಗಳು ಈಜಿಪ್ತ, ಪೆಲೆಸ್ತೈನ್ ಮತ್ತು ಸುಯೇಜ್ ಕಾಲುವೆಗಳನ್ನು ವಶಪಡಿಸಿಕೊಂಡರೆ ಹಿಂದೂಸಾಗರ ಮತ್ತು ಶಾಂತಿಸಾಗರ ಇವುಗಳಲ್ಲಿದ್ದ ಬ್ರಿಟಿಷ್ ರಾಷ್ಟ್ರಗಳನ್ನು ಎದುರಿಸಲು ಅವುಗಳಿಗೊಂದು ಪಿಡಿಕೆ ಸಿಕ್ಕಿದಂತಾಗುತ್ತದೆ.

ಇದರಿಂದ ಬ್ರಿಟಿಷರಿಗೆ ಜಲಮಾರ್ಗದ ಕೊರತೆಯುಂಟಾಗಲಾರದು. ಅವರಿಗೆ "ಕೇಪ್ ಓಫ್ ಗುಡ್ ಹೋಪಿ"ಗಾಗಿ ಹೋಗಲು ಸಾಧ್ಯವಿದೆ. ಆದರೆ, ಏಕ್ಸಿಸ್ ರಾಷ್ಟ್ರಗಳು ತಮ್ಮ ಸೈನ್ಯವನ್ನು ಸುಯೇಜ ಕಾಲುವೆಯ ಮುಖಾಂತರ ಸಾಗಿಸಬಹುದು. ಇದೇ ಪ್ರಾಮುಖ್ಯವಾದ ವಿಷಯವಾಗಿದೆ.

ಹೀಗಾದರೆ, ಬ್ರಿಟಿಷ್ ಪೂರ್ವ ಆಫ್ರಿಕದ ರಾಷ್ಟ್ರಗಳಿಗೂ, ಏಡನಿಗೂ ದೊಡ್ಡ ಧಕ್ಕೆ ಬಂದೊದಗಬಹುದು. ಮೆಡಿಟರೇನಿಯನಿನ ವ್ಯಾಪಾರವನ್ನೇ ಇವರು ಹಾಳುಮಾಡಬಹುದು. ಅದರ ಬದಲು ದಕ್ಷಿಣ ಏಶಿಯಾದಲ್ಲಿರುವ ಏಕ್ಸಿಸ್ ಸೈನ್ಯಗಳಿಗೆ ಆಹಾರ ಸಾಮಗ್ರಿಗಳನ್ನು ಇವರು ಒದಗಿಸಿಕೊಡಬಹುದು: ಏಕ್ಸಿಸ್ ಸೈನ್ಯಗಳೇ ಮೆಡಿಟರೇನಿಯನಿನಲ್ಲಿ ತುಂಬಿ ಪೌರ್ವಾತ್ಯ ಬ್ರಿಟಿಷ್ ರಾಷ್ಟ್ರಗಳಿಗೆ ಹಾನಿಯಾಗಬಹುದು.

ಆದ್ದರಿಂದಲೇ ಈಜಿಪ್ತ ಮತ್ತು ಸುಯೇಜ ಕಾಲುವೆಯನ್ನು ರಕ್ಷಣೆ ಮಾಡುವುದು ಅಷ್ಟು ಪ್ರಾಮುಖ್ಯ ವಿಷಯವಾಗಿದೆ.

ಸುಯೇಜ ಕಾಲುವೆಯು ಬರೇ ವ್ಯಾಪಾರದ ಹೆದ್ದಾರಿಯಲ್ಲ. ಇದು ಏಕ್ಸಿಸ್ ರಾಷ್ಟ್ರಗಳ ಸ್ವಾಧೀನಕ್ಕೆ ಹೋದರೆ ನೈರೋಬಿ, ಬೊಂಬಾಯಿ, ಕಲ್ಕತ್ತ, ಕೊಲಂಬೊ, ಸಿಂಗಾಪುರ, ಸಿಡ್ನಿ, ಮೆಲ್ಬೋರ್ನ್ ಮತ್ತು ವೆಲ್ಲಿಂಗ್ಟನ್ ಈ ಬಂದರಗಳಿಗೆ ಅಪಾಯ ತಟ್ಟಬಹುದು.

ಆದ್ದರಿಂದ ಬ್ರಿಟಿಷರು ಅಷ್ಟು ಉತ್ಸಾಹದಿಂದ ಮೆಡಿಟರೇನಿಯನಿನ ಭದ್ರತೆಯನ್ನು ಉದ್ಧರಿಸಲು ಹೋರಾಡುತ್ತಿರುವರು. ಬ್ರಿಟಿಷರು ಇಲ್ಲಿ ಬಹಳ ಬಲಶಾಲಿಗಳಾಗಿರುವರು; ವೈರಿಗಳು ಎದುರಾಗುವ ಮೊದಲೇ ಬ್ರಿಟಿಷರು ಇನ್ನು ಬಲಶಾಲಿಗಳಾಗಲಿರುವರು.

❃ ❃ ❃ ❃ ❃

ಇನ್ನು ಇಟಲಿಯ ವಿಚಾರಗಳನ್ನು ಪರಿಶೀಲಿಸೋಣ. ಪಿಂಡಸ್ ಎಂಬಲ್ಲಿ ಗ್ರೀಕರ ಯುದ್ಧವು ಅಸಾಧಾರಣವಾಯಿತು. ಫಿನ್ನರಂತೆ ಇವರೂ ಧೀರತೆಯಿಂದ ಹೋರಾಡಿದರು. ಈ ಯುದ್ಧದ ಪರಿಣಾಮದಿಂದ ಇಟಲಿಯ ಯಶಸ್ಸಿಗೆ ಕಳಂಕ ಬಂದಂತಾಗಿದೆ.

ಅದಲ್ಲದೆ ಇಟಲಿಯಿಂದ ಬರುವ ಸೈನ್ಯವನ್ನು ಇವರು ಎದುರಿಸುವರು. ಪರ್ವತ ಪ್ರದೇಶದಲ್ಲಿ ಕಿಕ್ಕಿರಿದ ಇಟಲಿಯಾನ ಸೈನಿಕರು ಬಹಳ ತೊಂದರೆ ಪಡಬೇಕಾದೀತು. ಅದರಲ್ಲಿಯೂ ಚಳಿಗಾಲದಲ್ಲಿ ಬಹಳ ಕಷ್ಟಗಳನ್ನು ಎದುರಿಸಬೇಕಾಗಬಹುದು.

"ಟೊರೆಂಟೊ" ಎಂಬ ಬಂದರದಲ್ಲಿದ್ದ ಹಡಗುಗಳನ್ನು ಇಟಲಿಯಾನರು ಕಳೆದುಕೊಂಡರು. ಇದರಿಂದ ಇಟಲಿಯ ಗೌರವಕ್ಕೆ ಕುಂದುಂಟಾಗಿದೆ. ಎಷ್ಟೋ ನಷ್ಟವೂ ಉಂಟಾಗಿದೆ. ಆದ್ದರಿಂದ ಇಟಲಿಯ ನೌಕಾಬಲದ ಜಂಭವನ್ನು ಮುರಿದಂತಾಯಿತು. ವಿಮಾನ ಯುದ್ಧದಲ್ಲಿಯೂ ಇಟಲಿಯಾನರು ವಿಜಯಿಗಳಾಗಲಿಲ್ಲ.

ಅಟ್ಲಾಂಟಿಕ್ ಸಾಗರದಲ್ಲಿಯೂ ಇಟಲಿಯ ಹಡಗುಗಳನ್ನು ಜಗ್ಗುಬಡಿದ ಬ್ರಿಟಿಷರು ನೆಲ್ಸನನ ಶೌರ್ಯವನ್ನು ಮರೆಯಲಿಲ್ಲ. ಜರ್ಮನರ ಭೂಸೈನ್ಯದ ಚಟುವಟಿಕೆಗಳು ಇನ್ನೂ ಬಯಲಿಗೆ ಬರಲಿಲ್ಲ. ಜರ್ಮನಿಗೆ ಅಪಾರವಾದ ಭೂಸೈನ್ಯವಿದೆ. ಅದಕ್ಕಿನ್ನೂ ಹಾನಿಬರಲಿಲ್ಲ, ಜರ್ಮನರ ಭೂಸೈನ್ಯವು ಅತಿ ಬಲಶಾಲಿಯಾದುದಾಗಿದೆ.

ಆದರೆ ಅದಿನ್ನೂ ರಂಗಕ್ಕಿಳಿಯಲಿಲ್ಲ. ಅದನ್ನು ಎದುರಿಸಲು ಬೇಕಾದ ಸೈನ್ಯ ಸಂಗ್ರಹವನ್ನು ಬ್ರಿಟಿಷರು ಮಾಡುತ್ತಲೇ ಇರುವರು.



ಬ್ರಿಟೈನಿನ ಒಂದು ಬೋಂಬರ್ ವಿಮಾನಕ್ಕೆ, ಬೋಂಬನ್ನು ಸಿಕ್ಕಿಸುತ್ತಿರುವರು. ಈ ಬೋಂಬುಗಳು ವಿದ್ಯುಚ್ಛಕ್ತಿಯಿಂದ ಚಲಿಸಿ, ಬೇಕಾದ ಸ್ಥಳಗಳಿಗೆ ಎಸೆಯಲ್ಪಡುವುವು. ಇವುಗಳನ್ನು ಬಿಸುಡಲು ಒಂದು ಗುಂಡಿಯನ್ನು ಒತ್ತಿದರಾಯಿತು.



"ಸ್ಪಿಟ್ ಫಾಯರ್" ಎಂಬ ಬ್ರಿಟೈನಿನ ವಿಮಾನ. ಇಂತಹ ವಿಮಾನಗಳು ಶತ್ರು ವಿಮಾನಗಳನ್ನೆದುರಿಸಿ ಕಾದಾಡಲು ಹೆಸರಾಗಿವೆ.



ಬ್ರಿಟೈನಿನ ರೋಯಲ್ ಆರ್ಟಿಲ್ಲರಿ ಸ್ವಯಂಸೇವಕರ ದಲ. ಇವರು ನ್ಯೂಫೌಂಡ್‌ಲ್ಯಾಂಡಿನಿಂದ ಬಂದವರು. ಫೀಲ್ಡ್ ಮಾರ್ಶಲ್ ಲೋರ್ಡ್ ಮಿಲ್ನೆಯವರು ಪರೀಕ್ಷೆ ನಡೆಸುತ್ತಿದ್ದಾರೆ. (ಫೊಟೋ: ಫೊಕ್ಸ್ ಸ್ಟಡಿಯೋ, ಲಂಡನ್.)

ಬ್ರಿಟೈನಿನಲ್ಲಿ ಆಹಾರ ಸಾಮುಗ್ರಿಗಳು

ಸರಬರಾಯಿಗೆ ಸುವ್ಯವಸ್ಥೆ

ಯುದ್ಧವು ಪ್ರಾರಂಭವಾಗಿ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯ ವಾಯಿತು. ಆದರೂ ಇಂಗ್ಲಾಂಡಿನಲ್ಲಿ ಆಹಾರಸಾಮುಗ್ರಿಗಳಿಗೆ ಕೊರತೆಯಿಲ್ಲ.

ಬೇಕಾದಷ್ಟು ಆಹಾರಸಾಮುಗ್ರಿಗಳನ್ನು ಇಂಗ್ಲಾಂಡು ಸಂಗ್ರಹಿಸಿಟ್ಟಿದೆ. ಅಂಗಡಿಗಳಲ್ಲೆಲ್ಲಾ [illegible] ಸಾಮಾನುಗಳು ದೊರೆಯುತ್ತವೆ. ದಿನಸುಗಳಿಗೆ ಕೊರತೆಯಿಲ್ಲ; ಮಾಂಸಕ್ಕೆ ತುಟ್ಟಿಯಿಲ್ಲ; ಬೆಣ್ಣೆ ರೊಟ್ಟಿಗಳು ಅಗತ್ಯವಿದ್ದಷ್ಟು ಸಿಗುತ್ತವೆ.

ಲಂಡನ್ ಬಾಂಬಿನ ಹಾವಳಿಗಳಿಗೆ ಹೆಚ್ಚು ಎದೆಯೊಡ್ಡಿದ ಪಟ್ಟಣವಾಗಿದೆ. ಆದರೂ ಆಹಾರಸಾಮುಗ್ರಿಗಳಿಗೆ ಕೊರತೆ ತರಲು ಅಂತಹ ಹಾವಳಿಗಳಿಗೆ ಅಸಾಧ್ಯವಾಗಿದೆ. ಈ ಮೊದಲು ಹದಿನೈದು ದಿವಸದ ಹಿಂದೆ ಒಂದು ಪ್ರಚಂಡ ಬಾಂಬಿನ ಹಾವಳಿಯಾಗಿತ್ತು. ಆಗ ಒಂದು ದಿನ ಮಾತ್ರ, ಒಂದು ಸಾಮುಗ್ರಿಯ ತುಟ್ಟಿಯಾಗಿತ್ತು. ಇತರ ಸಾಮುಗ್ರಿಗಳು "ಇಡೀ ರಾಷ್ಟ್ರದ ಜನರ ಒಂದು ಊಟಕ್ಕೆ" ಬೇಕಾದಷ್ಟು ಸಿದ್ಧವಾಗಿದ್ದುವು. ಆಹಾರಸಾಮುಗ್ರಿ ಇಲಾಖೆಯ ಸಚಿವರೇ ಈ ಆಧಾರವನ್ನು ಕೊಟ್ಟಿರುತ್ತಾರೆ.

ಇಷ್ಟು ಹಾವಳಿಗಳಾದುದು ಮಾತ್ರವಲ್ಲದೆ ಇತರ ಕಷ್ಟಗಳೇನೂ ಸಂಭವಿಸಲಿಲ್ಲ.

ಬಾಂಬುಗಳ ಹಾವಳಿಯಿಂದ ಮನೆಗಳನ್ನು ಕಳೆದುಕೊಂಡವರು ಒಂದು ಅರ್ಜಿಯನ್ನು ಸರಕಾರಕ್ಕೆ ಬರಕೊಂಡರೆ ಅವರಿಗೆ ಬೇಕಾದಷ್ಟು ಆಹಾರವು ದೊರೆಯುತ್ತದೆ.

ಆಹಾರ ಸಾಮುಗ್ರಿ ಸಂಗ್ರಹ ಇಲಾಖೆಯ ಮಂತ್ರಿಗಳಾದ ಲೋರ್ಡ್ ಊಲ್ಟನ್ ಇವರು ಆಹಾರ ಸಾಮುಗ್ರಿಗಳ ವಿಚಾರದಲ್ಲಿ ಬಿಗುವಿನ ಯಾವ ಕಾನೂನುಗಳನ್ನೂ ಮಾಡಬಾರದೆಂದು ಅವರ ಕೈಕೆಳಗಿನ ಆಫೀಸರರಿಗೆ ತಿಳಿಸಿರುತ್ತಾರೆ. ಆಹಾರ ಸಾಮುಗ್ರಿಗಳನ್ನು ಒದಗಿಸುವ ಕೆಲಸವನ್ನು ಈ ಮಹಾಶಯರು ಅತೀ ಜಾಣ್ಮೆಯಿಂದ ನೆರವೇರಿಸುತ್ತಾರೆ.

ಲಂಡನಿನಿಂದ 200 ಮೈಲು ದೂರದಲ್ಲಿ ಒಂದು ದೊಡ್ಡ ಉಗ್ರಾಣವಿದೆ—ಅದರಲ್ಲಿ ಬೇಕಾದ ಆಹಾರ ಸಾಮುಗ್ರಿಗಳನ್ನು ಒದಗಿಸಿಟ್ಟಿದ್ದಾರೆ. ಯಾವುದಾದರೂ ಪಟ್ಟಣದಲ್ಲಿ, ಯಾವುದಾದರೂ ಸಾಮುಗ್ರಿಯು ಅಗತ್ಯ ಬಿದ್ದರೆ ಬರೇ 12 ತಾಸುಗಳಲ್ಲಿ ಇಲ್ಲಿಂದ ಆಹಾರವನ್ನು ತರಿಸಬಹುದು.

ಆಹಾರ ಸಾಮುಗ್ರಿಯ [illegible] ಮಾತ್ರವೇ ಕೆಲವು ದಿನಗಳ ಹಿಂದೆ ಬಿದ್ದ ಆಹಾರ ಸಾಮುಗ್ರಿಗಳ ತುಟ್ಟಿಯನ್ನು ತಿಳಿದಿರುವರು. ಇತರರಾರೂ ಅದನ್ನು ತಿಳಿದಿಲ್ಲ. ಏಕೆಂದರೆ, ಅಷ್ಟು ಅಚ್ಚುಕಟ್ಟಾಗಿ ಆಹಾರ ಸಾಮುಗ್ರಿಗಳನ್ನು [illegible].

ಪ್ರಕೃತ ಆಹಾರ ಸಾಮುಗ್ರಿಗಳಿಗೆ ಪಡಿ (Ration) ನಿಶ್ಚಯಿಸಿದ್ದು, ಸಾಮಾಗ್ರಿಗಳ ತುಟ್ಟಿಗಾಗಿಯಲ್ಲ; ಯುದ್ಧ ಸಮಯದಲ್ಲಿ ಅನಾವಶ್ಯಕವಾಗಿ ರುಚಿರುಚಿಯ ತಿಂಡಿಗಳನ್ನು ತಿನ್ನಬಾರದೆಂದೂ, ಆಹಾರ ಸಾಮುಗ್ರಿಗಳು ಎಲ್ಲರಿಗೂ ಸಿಗಬೇಕೆಂಬುದೂ ಮುಖ್ಯವಾದ ಕಾರಣಗಳಾಗಿವೆ. ಈ ರೀತಿಯ ವ್ಯವಸ್ಥೆ ಮಾಡುವುದು ಉತ್ತಮವೆಂದೇ ಇದನ್ನು ಇಂಗ್ಲಾಂಡಿನಲ್ಲಿ ಕೈಗೊಂಡರೂ ಇದರಿಂದ ಯಾರಿಗೂ ತೊಂದರೆಯಾಗಿಲ್ಲ. ಎಲ್ಲರಿಗೂ ಅನುಕೂಲತೆಯುಂಟಾಗಿದೆ.

[illegible] ಹೆಚ್ಚಿನ ಕಷ್ಟವಾಗಲಿಲ್ಲ. ಪ್ರತಿವಾರ ಅವರಿಗೆ ಬೇಕಾದಷ್ಟು ಸಾಮುಗ್ರಿಗಳನ್ನು ಕೊಂಡುಕೊಳ್ಳಬೇಕಾಗುತ್ತದೆ ಅಷ್ಟೆ. [illegible] ರಿಗೆ, ಅತೀ ಸುಲಭದಲ್ಲಿ ಆಹಾರ ಪದಾರ್ಥಗಳು ಸಿಗುತ್ತವೆ.

ಹಿಂದೆ ಶಾಂತಿ ಸಮಯದಲ್ಲಿ ವಿಶ್ರಾಂತಿ ಭವನದಲ್ಲಿ ಕುಳಿತು ಫ್ಲೂಟ್‌ಬಾಲ್ ಆಟ ವಿಷಯಗಳನ್ನು ಚರ್ಚಿಸುತ್ತ ಹುರಿದ ಮಾಂಸವನ್ನು ತಿನ್ನುತಿದ್ದವರು ಇಂದೂ ಈ ಯುದ್ಧದ ಸಮಯದಲ್ಲಿ ಹುರಿದ ಮಾಂಸವನ್ನು ತಿನ್ನುತ್ತಾರೆ.

ಆಹಾರದ ತುಟ್ಟಿಯು ಏನೆಂದು ಇಂಗ್ಲಾಂಡಿನಲ್ಲಿ ಯಾರಿಗೂ ಅನುಭವವಾಗಿಲ್ಲ.

ಎಂತಹ ಬಿಕ್ಕಟ್ಟಿನ ಸಮಯ ಬಂದರೂ ಅದನ್ನು ಎದುರಿಸಲು, ಇಂಗ್ಲಾಂಡು ಸಿದ್ಧವಾಗಿದೆ. ಆಹಾರ ಸಾಮುಗ್ರಿಗಳಿಗೆ ತೊಂದರೆ ಬರಲಾರದೆಂದು ಲೋಕದ ಎಲ್ಲಾ ಜನರಿಗೂ ತಿಳಿದಿದೆ.



ಬ್ರಿಟೈನಿನಲ್ಲಿ; ಅಲ್ಲಲ್ಲಿ ಕೆಲವು ಗುಂಡಿಗಳನ್ನು ತೋಡುತ್ತಿರುವರು. ಶತ್ರು ವಿಮಾನಗಳು ಬಂದು ಇಳಿಯಲು ಯತ್ನಿಸಿದರೆ, ಈ ಗುಂಡಿಗಳಲ್ಲಿ ಹಿಡಿಯಲ್ಪಡುವುವು. ಬ್ರಿಟೈನಿನ ಒಂದು ಬಯಲಲ್ಲಿ ಒಂದು ಗುಂಡಿ ಅಗೆಯುತ್ತಿರುವ ಚಿತ್ರ.

ಕಾವ್ಯಗಳಲ್ಲಿ ವರ್ಣನೆ

ಕಾವ್ಯಗಳಲ್ಲಿ ಕವಿಗಳು ಜನಜೀವನವನ್ನು ಪ್ರತಿಬಿಂಬಿಸಿದ್ದುಂಟು. ಕವಿಯು ಯಾವ ಕಾಲದ ಕಥೆಯನ್ನು ಹೇಳುವುದಾಗಿದ್ದರೂ ತನ್ನ ಸುತ್ತುಮುತ್ತಲಿನ, ತನ್ನ ಕಾಲದ ವಾತಾವರಣವನ್ನು ಮರೆಯಲಾರನು. ಅದು ಅವನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದ್ದು ಹೊರಸೂಸದಿರುವುದಿಲ್ಲ. ರಾಮಾಯಣವನ್ನು ಕುರಿತು ಬರೆಯುವ ಕವಿ ರಾಮಾಯಣ ಕಥೆ ನಡೆಯುತ್ತಿದ್ದಾಗಲೇ ಅದನ್ನು ಕಂಡು ತಿಳಿದಿರಲಿಲ್ಲ. ಆದಿಕವಿ ವಾಲ್ಮೀಕಿಯ ವಿಚಾರವೆಂತಿದ್ದರೂ ಅದನ್ನು ಆಧಾರವಾಗಿಟ್ಟುಕೊಂಡು ಬರೆದ ಹಲವರು ಆ ಮೇಲಿನವರು ಸಂಸ್ಕೃತೇತರ ಭಾಷೆಯವರು ವಾಲ್ಮೀಕಿಯ ಮಾತುಗಳನ್ನು ಅಕ್ಷರಶಃ ಭಾಷಾಂತರಿಸಲಿಲ್ಲ. ಮುಖ್ಯ ಕಥಾಭಾಗವನ್ನು ಆಧಾರವಾಗಿಟ್ಟುಕೊಂಡು ತಮ್ಮ ದೇಶ, ಭಾಷೆ, ಕಾಲಗಳ ಸನ್ನಿವೇಶಗಳನ್ನು ಅನುಸರಿಸಿಕೊಂಡು ಬರೆದರು. ಅವುಗಳನ್ನು ಅಲ್ಲಗಳೆಯುವುದಕ್ಕೆ ಅವರಿಂದ ಸಾಧ್ಯವಾಗದುದರಲ್ಲಿ ಆಶ್ಚರ್ಯವಿಲ್ಲ. ಒಂದು ವೇಳೆ ಹಾಗೆ ಅಲ್ಲಗಳೆದು ಅವರು ಬರೆಯುತ್ತಿದ್ದರೆ, ಅವರದು ಕೇವಲ ಕೃತಕ ಕಲೆಯಾಗಿಯೇ ಪರಿಣಮಿಸುವಂತಿತ್ತು. ಪುರಾಣ ಕಥೆಯಾಗಲಿ ಕಲ್ಪಿತವಾಗಲಿ ಚಾರಿತ್ರಿಕವಾಗಲಿ ಕಾವ್ಯಗಳಲ್ಲಿ ಕವಿಯ ದೇಶ ಕಾಲಗಳ ಪ್ರಭಾವವು ಇದ್ದೇ ಇರುವುದು. ಕವಿ ಸಮಯಕ್ಕೊಳಗಾಗಿ ವರ್ಣನೆಗಳಲ್ಲಿ ಅನುಭವಾಂಗಗಳನ್ನು ಕವಿಗಳು ಅಲ್ಲಲ್ಲಿ ಸೇರಿಸುತ್ತಾರೆ. ಆದರೆ ಹೆಚ್ಚಿನ ಭಾಗಗಳಲ್ಲಿ ಅವರು ನೋಡಿದುದನ್ನು ಕಾಣಿಸದಿರುವುದಿಲ್ಲ. ಉದಾಹರಣಾರ್ಥವಾಗಿ ತೊರವೆಯ ರಾಮಾಯಣದ ಕವಿ ಕೊಟ್ಟಿರುವ ಸೀರೆಗಳ ವರ್ಣನೆಯನ್ನು ತೆಗೆದುಕೊಳ್ಳುವ. ಇವನು 16ನೆಯ ಶತಕದವನು. ಶೋಲಾಪುರ ಜಿಲ್ಲೆಯವನು. ಇವನು ಹೇಳುವ ಬಗೆಯ ಸೀರೆಗಳನ್ನು ಸ್ವತಃ ಕಂಡಿದ್ದವನಾಗಿರಬಹುದು. ಸುಂದರ ಕಾಂಡದಲ್ಲಿ ಹನುಮಂತನ ಬಾಲಕ್ಕೆ ಬೆಂಕಿ ಹತ್ತಿಸುವ ಸಂದರ್ಭ ಬರುತ್ತದೆ. ಆಗ ಬಾಲಕ್ಕೆ ಸುತ್ತುವುದಕ್ಕೆ ಸಿಕ್ಕಿದ ಬಟ್ಟೆಗಳನ್ನೆಲ್ಲಾ ಉಪಯೋಗಿಸಿ ಮುಗಿಯಿತು. ಬಾಲವು ಮತ್ತಷ್ಟು ಬೆಳೆಯುತ್ತ ಬಂತು. ಕೊನೆಗೆ,

ಪೊಳಲ ಧನಿಕರ ಧಾರ್ಮಿಕರ ಮನೆ।
ಗಳಲಿ ಧೊರೆಗಳ ಭವನ ವಸನ
ಗಳುಳಿದುದಿಲ್ಲ................॥

—ಎಂದಾದ ಬಳಿಕ ರಕ್ಕಸರಾಯನು 'ತರಿಸಿದನಂದು ಪುರ ಜನದ' ಅವು ಎಂಥೆಂಥವುಗಳೆಂದು ಕವಿಯು ವಿವರವಾಗಿ ಹೇಳುತ್ತಾನೆ.

ರಂಗ ಚಿತ್ರ ವಸಂತ ರತಿ ಸಾ।
ಳಂಗ ಗುಜ್ಜರ ರತುನರವೆಯ ಭು–।
ಜಂಗವಲ್ಲರಿ ಪಲ್ಲವಾವಳಿ ಪಚ್ಚೆ ವ್ಯೆ ಮೆರೆವ॥
ಶೃಂಗರಕೆ ಸುವರ್ಣಪಳಿ ಮದ–।
ನಾಂಗರೇಖೆ ಸುರಾಗ ರಜತ ಕು–।
ರಂಗವಿಲಸಿತ ವಸನ ಬಾಲಕೆ ಸೇರಿದುವು ಕಪಿಯ॥
ಹಳದಿ ಸಂಧ್ಯಾರಾಗ ಹರಿಣಾ।
ವಳಿ ಹಯಾವಳಿ ಹಸ್ತಿ ಹರಿಮುಖಿ।
ವಿಲಸಿತಾವಳಿ ವಿವಿಧ ಚಿತ್ರಲತಾಂತ ಲತಿಕೆಗಳ।
ಫಳಿ ಸುರೇಖೆ ಮಯೂರ ಹಂಸಾ–।
ವಳಿ ಸುರಾವಳಿ ಮೇಘವಣ್ಣಿಗೆ–।
ಸಲ ವಿವಿಧ ನಿವಸನಗಳೆಸೆದುವು ಕಪಿಯ ಬಾಲದಲಿ॥
ಮಾದಳಿರು ಮಂಜರಿಕೆ ಮಾಧವಿ।
ವ್ಯೆ[illegible]ಡವಿ ಸಾವಂತಿ ಸೊಗಸಿನ।
ಬೀದಿ ಬಿಳಿವೆಳಗಾವಿ ಸಂಪಿಗೆಗಾವಿ ತೆಳುಗಾವಿ।
ಆದ ಸೀರೆ ಸರೋಜ ವಲ್ಲರಿ।
ನಾದಪಾವಳಿ ಪಟ್ಟೆಗಳು ಮೊದ–।
ಲಾದ ವಿವಿಧಾಂಬರಗಳೆರೆದುವು ಕಪಿಯ ಬಾಲದಲಿ॥
ಗೌರಿಕಣೆ ಗುರುಗುಂಜಿ ಕುಂಕುಮ।
ವಾರನಾರೀ ಬೆಡಗ ವರಸಿಂ–।
ಧೂರ ಮಂಜರಿ ಮನ್ಮಥಾವಳಿ ಮಕರ ಚಿತ್ರಲತೆ॥
ಚಾರು ಚಾಪಳ ಚತುರತರ ಶೃಂ–।
ಗಾರ ನಾಯಕಿಯರ ನವಾಂಬರ।
ಮಾರುತಿಯ ಬಾಲದಲಿ ಬೆಳೆದುವು ಬಿಡದೆ ಬೆಂಬಳಿಯ॥
ಬಿಳಿದು ಬೆಂಬಳಿದಳಿಬಿಳಿದ ಪೊನ್–।
ಬಳಿ ಪಸುರ್ಮಡಿ ಪಚ್ಚೆ ಪೊತ್ತಿಯ।
ಫಳಿ ಸುರಂಗ ಸುರಾಗ ಬೊಂಬೆಯ ಬಣ್ಣ ಮೊದಲಾದ।
ಹಲವು ದೇಶದ ದೇಶಿಯರ ಭೂ–।
ತಳ ಭುಜಂಗಮ ಭುವನ ವೀಥಿಯ।
ವಿಲಸಿತಾಂಬರ ವಿಂಬುಗೊಂಡುವು ಕಪಿಯ ಬಾಲದಲಿ॥

ಹನುಮಂತನನ್ನು ತೇರಿನಲ್ಲಿರಿಸಿ ಆನೆಗಳಿಂದೆಳೆಯಿಸಿಕೊಂಡು ರಾವಣನ ಬಳಿಗೆ ಬರುತ್ತಿದ್ದಾಗ ಅವನ ಭಾರಕ್ಕೆ ಕುಸಿಯುತಿದ್ದ ತೇರನ್ನು ಆಗಾಗ ಸರಿಪಡಿಸಿಕೊಳ್ಳಬೇಕಾಗಿತ್ತು. ಆಗ ಅದಕ್ಕಿದ್ದ ಕೆಲಸಗಾರರನ್ನೂ ಅವರ ಗದ್ದಲವನ್ನೂ ಕುರಿತು ಇದೇ ಕವಿ ಹೀಗೆನ್ನುತ್ತಾನೆ:—

'ಬಳೆವೊಳೆಯ ನಾರೈವ ಕಮ್ಮರ।
ರುಲುಹುಗಳ ಕೈಬಾಚಿ ಬೀಲಣ–।
ದುಳಿಯ ಕೆಲಸದ ಬಡಗಿಯರ ಬಿರುಧನಿಯ ಕುಳಿತವರ॥
ತಳಪಟವ ಮಾಡುವ ಪದಾಗ್ರದ-
ಯಲುಗು ಗುದ್ದಲಿ ಗೋರೆಗಳ ಬಲು
ಗೆಲಸದ ದೊಡ್ಡವರ ಕಳಕಳದಿರುತಿರ್ದುದಸುರ ರಥ॥
ನಟ್ಟಗಾಲಿಯ ಕೀಳು ತರೆಗಳ।
ಕುಟ್ಟುತಚ್ಚಿನ ಕಿಚ್ಚಿ ನುರುಬೆಯ।
ದಟ್ಟಣೆಗೆ ಧಾರೆಗಳ ಬಿಡುವೆಣ್ಣೆಗಳ ಪಖ್ಖಲೆಯ।
ಥಟ್ಟಗೆಡುವಾನೆಗಳಿಗಾನೆಯ।
ಕಟ್ಟುತಸುರರಿಗಸುರರನು ಹೋಗ।
ಗುಟ್ಟುತೀಪರಿ ನಡೆಸಿತಂದರು ನೃಡಪರಾಕ್ರಮನ'॥

ತೊರವೆಯ ರಾಮಾಯಣದ ಕವಿಯು ಹನುಮಂತನನ್ನು ಎಳೆದು ತರುವ ದೃಶ್ಯವನ್ನು ಕಂಡಿರಲಿಕ್ಕಿಲ್ಲವಷ್ಟೆ. ಆದರೆ ಇಂಥ ಸಂದರ್ಭಗಳು ಆಗ ಅವನ ಕಣ್ಣಿಗೆ ಬಿದ್ದಿರಬಹುದು. ಗೋಮಟೇಶ್ವರ ಮೂರ್ತಿಯಂಥ ವಿಗ್ರಹಗಳನ್ನು, ಶಿಲಾಸ್ತಂಭಗಳನ್ನು ದೊಡ್ಡ ಕಟ್ಟಡಗಳಿಗೆ ಬೇಕಾಗಿದ್ದ ಭಾರದ ತೊಲೆಗಳನ್ನು ಮುಂತಾದವುಗಳನ್ನು ಸಾಗಿಸಿಕೊಂಡು ಬರುತ್ತಿದ್ದ ಸಂದರ್ಭಗಳಲ್ಲಿ ಇಂಥ ದೃಶ್ಯವು ಕಾಣದಿರಲಾರದಷ್ಟೆ.

ಕುಮಾರ ವ್ಯಾಸನು ಭಾರತದಲ್ಲಿ ಕಾಣುವ ದ್ರೌಪದೀ ಸ್ವಯಂವರದ ವರ್ಣನೆಯ ಸಂದರ್ಭದಲ್ಲಿ ಭೋಜನ ಬ್ರಾಹ್ಮಣರನ್ನು ತಕ್ಕ ಮಟ್ಟಿಗೆ ವರ್ಣಿಸಿದ್ದಾನೆ. ಈ ವರ್ಣನೆಯು ನಿಜವಾಗಿ ಮಹಾಭಾರತ ಕಾಲದ ಬ್ರಾಹ್ಮಣರಿಗೆ ಅನ್ವಯಿಸುವುದೋ ಎಂದು ವಾಚಕರು ಊಹಿಸಬಹುದು. ಸಂದರ್ಭ ಹೀಗಿದೆ.

ಅರ್ಜುನನು ಬ್ರಾಹ್ಮಣ ವೇಷದಲ್ಲಿದ್ದು ಊಟಕ್ಕೆ ಬಂದಿದ್ದ ಬ್ರಾಹ್ಮಣರ ನಡುವೆ ಕುಳಿತಿದ್ದನು. ಕ್ಷತ್ರಿಯರು ಬಿಲ್ಲೆತ್ತುವುದಕ್ಕೆ ಅಸಮರ್ಥರಾದಾಗ ಬ್ರಾಹ್ಮಣರೊಳಗೆ ಆರಾದರೂ ಸಮರ್ಥರಿದ್ದರೆ ಏಳಬಹುದೆಂಬ ಡಂಗುರವಾಯಿತು. ಆಗ ಬ್ರಾಹ್ಮಣರು 'ನಮಗೇಕೆ ಈ ಸುದ್ದಿ. ಬಂದ ದಕ್ಷಿಣೆ ಮೃಷ್ಟ ಭೋಜನದಿಂದ ತುಷ್ಟರು ನಾವು; ವಚನ ಶೂರರು ನಾವು. ವಿದ್ಯಾಂಗಗಳಲ್ಲಿ ಬೇಕಾದರೆ ಕರೆಸಿನೋಡಿ ಪರೀಕ್ಷೆ ಮಾಡಲಿ' ಎಂದು ಮಾತಾಡಿಕೊಳ್ಳುತ್ತಾರೆ.

'ಅಲ್ಲದಿದ್ದರೆ ಶೋಧಿಸಿದ ತನಿ–।
ಬೆಲ್ಲವಿಕ್ಕಿದ ಹೂರಿಗೆಯ ಮೆದೆ–।
ಯಲ್ಲಿ ಪರಡಿಯ ಶಾವಿಗೆಯ ಪರಿಪರಿಯ ಪಾಯಸದ॥
ಫುಲ್ಲಿಗೆಯ ತತ್ಸವಿಯ ಮಂಡಿಗೆ।
ಯಲ್ಲಿ ನವಘೃತ ಸೂಪದಂಶಕ।
ದಲ್ಲಿ ನೋಡಲಿ ನಮ್ಮನೆಂದುದು ಧೂರ್ತ ವಟುನಿಕರ॥

ಇಂಥ ಬ್ರಾಹ್ಮಣರ ಸಭೆಯ ಮಧ್ಯದಿಂದ ಅರ್ಜುನನು ಏಳುವುದನ್ನು ಕಂಡಾಗ ಇತರರು ಅವನನ್ನು ಕುರಿತು ಹೇಳುವ ಮಾತು ಇದು—

'ಏನು ಸಿದ್ಧಿ! ಉಪಾಧ್ಯರೆಲ್ಲರಿ–
ದೇನು ಧನುವಿಂಗಲ್ಲವೇ ತಾ–
ನೇನು ಮನದಂಷವಣೆ ಬಯಸಿದಿರೇ ನಿತಂಬಿನಿಯಾ॥

❀ ❀ ❀ ❀ ❀

ಮದುವೆ ಬೇಕೇ ಶ್ರೋತ್ರಿಯಸ್ತೋ–।
ಮದಲಿ ಕನ್ಯಾರ್ಥಿಗಳು ನಾವೆಂ–
ಬುದು ನಿಜಾನ್ವಯ ವಿದ್ಯೆಯಲಿ ಕೊಡುವುದು ಪರೀಕ್ಷೆಗಳ॥

❀ ❀ ❀ ❀ ❀

ಕೆಲರು ಹೋಗದಿರೆಂದು ಜರೆದರು।
ಕೆಲರು ತಾನೇ ಬಲ್ಲನೆಂದರು
ಕೆಲರು ನುಡಿದರು ವಿಪ್ರ ಸಭೆಗಪಹಾಸ್ಯವಹುದೆಂದು।
ಕೆಲರು ತಪ್ಪೇನೆಂದು ಕಳೆದರು
ಕೆಲರು ಭದ್ರಾಕಾರನೀತಂ–।
ಗಳುಕುವುದು ಧನು ಭಾಗ್ಯಮುಖವೆಂದುದು ಬುಧಸ್ತೋಮ॥

ಮುಖ್ಯವಾಗಿ ಹೇಳುವುದೇನೆಂದರೆ ಕಾವ್ಯಗಳಲ್ಲಿ ಅಲಂಕಾರದ ತೊಡಕುಗಳು ಎಷ್ಟಿದ್ದರೂ ಸಹಜತೆಯ ಸೊಗಸೂ ಚೆನ್ನಾಗಿ ಕಾಣುವ ಅಂಶಗಳೂ ವಾಚಕರಿಗೆ ದೊರೆಯದಿರಲಾರವು.

'ಚ'



ನಾರದನ ನರಜನ್ಮ ಯಾ

ಆಧುನಿಕ ನಾರದನ ಹತ್ತು ತತ್ವಗಳು

(ಲೇಖಕಿ:—ಶ್ರೀಮತಿ ಲೀಲಾಬಾಯಿ ಕಾಮತ್, ಉಡುಪಿ.)

ಕಥಾ ಕಾಲವು ತಿಳಿಯಬೇಕೆಂದಿದ್ದಲ್ಲಿ ತಾವು [illegible] ಸರ [illegible]—[illegible] ಕಡೆಗೆ [illegible] ನಮ್ಮ ಕಥಾಕಾಲವು [illegible] ಕಾಲವೆಂದು [illegible]. ರೆವರೆಂಡ್ ನಾರದರು [illegible] ರಜೆ ಪಡೆಕೊಂಡು ಸ್ವಾಸ್ಥ್ಯ ಸುಧಾರಣೆ ಗೋಸ್ಕರ ಮೃತ್ಯುಲೋಕಕ್ಕೆ ಬಂದು ಬೆಂಗಳೂರಿನ ಹೊಟೆಲೊಂದರಲ್ಲಿ ಉಳಕೊಂಡಿದ್ದರು. ಬೇಕಾದಷ್ಟು ತಿರುಗಾಡಿ ನರಲೋಕದ ನವನಾಗರಿಕ ಜೀವನದ ಸೊಬಗನ್ನು ನೋಡಿ—ವಿಟಮಿನ್ ಸಹಿತ ಮತ್ತು ರಹಿತ, ಎರಡೂ ಭೋಜನಗಳನ್ನುಂಡು 5, 6 ದಿನಗಳಲ್ಲಿ 10 ಪೌಂಡು ಭಾರವನ್ನು ಹೆಚ್ಚಿಸಿಕೊಂಡಿದ್ದರು.

ರೆವರೆಂಡ್ ನಾರದರು ಬೆಂಗಳೂರಿಗೆ ಬಂದ ಉದ್ದೇಶವು ಪಟ್ಟಣದ ಸೊಬಗನ್ನು ನೋಡುವುದಾಗಿರದೆ ಸ್ವಾಸ್ಥ್ಯದ ಕಡೆ ಹೆಚ್ಚು ಗಮನವಿತ್ತು. ಅದೊಂದು ಬಾರಿ ಇಬ್ಬರು ಯುವತಿಯರು ರಿಕ್ಷಾಗಾಡಿಯಲ್ಲಿ ಹೋಗುತ್ತಿದ್ದರು. ಇಬ್ಬರು ನವಯುವಕರೂ ಕೈಯಲ್ಲಿ [illegible] ಹಿಡಕೊಂಡು ರಿಕ್ಷದ ಹಿಂದುಗಡೆಯಿಂದ [illegible] [illegible]

ಅದೊಂದು ದಿನ ನಾರದರು ಹತ್ತರದ ಗುಡ್ಡವೊಂದರಲ್ಲಿ ತಿರುಗಾಡಲು ಹೋಗಿದ್ದರು. ತಿರುಗಾಡಿ ದಣುವಾರಿಸಲು ಒಂದು ಮರದ ಕೆಳಗೆ ಕುಳಿತು "ಫೂಡ್ ಕೆರಿಯರ್" (Food carrier) ರಿಂದ ಬ್ರೆಡ್ಡು, ಬೆಣ್ಣೆ, ಘಮಘಮಿಸುವ ನೀರುಳ್ಳಿಯ ಪದಾರ್ಥವನ್ನೂ ತೆಗೆದು ಅಲ್ಪ ಉಪಾಹಾರ ಮಾಡಲು ಉಪಕ್ರಮಿಸಿದರು.

ಮದ್ರಾಸಿನ ಶಿಯರ್ ಬಜಾರಿನ ಕೆಲವು ವ್ಯಾಪಾರಿಗಳ ದಳವೊಂದು ಕೂಡ ಅಲ್ಲಿ ಬಂದಿತ್ತು. ಆಪಾದಮಸ್ತಕ ಖಾದಿ ಪೋಷಾಕನ್ನು ಧರಿಸಿ ರಾಜನೈತಿಕ ತಿನಸುಗಳನ್ನು ತಿನ್ನಲು ಕುಳಿತ ರೆವರೆಂಡ್ ನಾರದರನ್ನು ಕಂಡು ಇವರಾರೋ ಶ್ರೇಷ್ಠ ತರಗತಿಯ ರಾಜನೀತಿಜ್ಞರಿರಬೇಕೆಂದು ಎಣಿಸಿ ನಾರದರ ಪರಿಚಯ ಮಾಡಿಕೊಳ್ಳಲು ವ್ಯಾಪಾರಿದಳದವರಿಗೆ ಉತ್ಸುಕತೆಯಾಯಿತು. ಪರಿಚಯವಾಗಲು ಹೆಚ್ಚು ವಿಳಂಬವಾಗಲಿಲ್ಲ. ಬೆಲ್ಲಕ್ಕೆ ಇರುವೆಗಳು ಮುತ್ತಿದಂತೆ ರಾಜನೀತಿಜ್ಞರಿಗೆ ವ್ಯಾಪಾರಿಗಳು ಮುತ್ತುವುದು ಸಹಜಸ್ವಭಾವವಾಗಿದೆ. ಆ ದಳದ ಮುಖ್ಯ ವ್ಯಕ್ತಿ ಅರ್ಥಾತ್ ಮುಖಂಡ ಮತ್ತು ರೆವರೆಂಡ್ ನಾರದರಲ್ಲಿ ಕೆಳಗಿನಂತೆ ಸಂಭಾಷಣೆಯಾಗತೊಡಗಿತು.

ರೆ. ನಾ:—ತಾವೆಲ್ಲರೂ ಇಲ್ಲಿ ಬಂದ ಕಾರಣವಾವುದು? ಅವಶ್ಯವಾಗಿ ಏನಾದರೊಂದು ಕೆಲಸವಿಲ್ಲದೆ ನೀವಿಲ್ಲಿ ಬರಲಿಕ್ಕಿಲ್ಲ.

ಮುಖಂಡ:—ಹಾಗೇನೂ ಅವಶ್ಯವಾದ ಕೆಲಸವಿಲ್ಲ. ಆದರೆ ಸರಕಾರದವರು ಕ್ರಿಸ್‌ಮಸ್ ರಜೆಯಲ್ಲಿ "ಶೇರ್ ಮಾರ್ಕೆಟ್" (Share market) ಮುಚ್ಚದೆ ಬಿಡುವುದಿಲ್ಲ. ಫಲಸ್ವರೂಪವಾಗಿ ದಲಾಲರು, ವ್ಯಾಪಾರಿಗಳು, ಶೇರ್ ಬ್ರೋಕರರು, ಯಾವುದಾದರೊಂದು ಕಾರಣದಿಂದ ಊಟಿ, ಡಾರ್ಜಿಲಿಂಗ್, ಮೈಸೂರು, ಬೆಂಗಳೂರು, ಇತ್ಯಾದಿ ಪ್ರೇಕ್ಷಣೆಯ ಸ್ಥಳಗಳಲ್ಲಿ ಹೋಗದೆ ನಿಲ್ಲುವುದಿಲ್ಲ. ನಮಗೂ ಕೂಡ ಇಲ್ಲಿ ಬಂದಾಗ ಏನಾದರೊಂದು ವ್ಯಾಪಾರವಾಗುತ್ತದೆ. ಬೀಸಿದ ಬಲೆಯಲ್ಲಿ ಯಾರಾದರೂ ಸಿಕ್ಕಿಬಿದ್ದಲ್ಲಿ ರೈಲು ಖರ್ಚು ವಿನಹಾ ಏನಾದರೂ "ಪೋಕೆಟ್ ಮನಿ" (Pocket Money) ಕೂಡಾ ಕೈಸೇರುತ್ತದೆ.

ರೆವರೆಂಡ್ ನಾರದ:—[illegible] ಪಕ್ಷಿಯನ್ನು ಕೊಂಡಂತೆ. ತಿರುಗಾಟವೂ ಆಯಿತು ಸಾಧ್ಯವಾದಲ್ಲಿ ಯಾರಾದರೊಬ್ಬನನ್ನು ಬಲೆಯಲ್ಲಿ ಹಾಕಿಕೊಂಡರೆ, ಕೆಲವು ತಿಂಗಳ ತನಕ ಆರಾಮದಿಂದ ಇರಬಹುದು. ಈಗ ಕಲಿಯುಗ. ನಿಮ್ಮಂತಹರಿಗೇನೆ ಇದು ಸುಸಮಯ. ಪ್ರಾಮಾಣಿಕತೆ ಭೂತದಯೆ, ಸತ್ಯ, ಉದಾರತ್ವ ಇತ್ಯಾದಿಗಳೆಲ್ಲವೂ ಕೃತಯುಗ ತ್ರೇತಾಯುಗದ ಮಾತಾಯಿತು. ಈಗ ಕಲಿಯುಗ! ಪ್ರಾಮಾಣಿಕತೆ ಸತ್ಯ ಇತ್ಯಾದಿಗಳಿಗೆ ಈಗ ಬೆಲೆಯಿಲ್ಲ. ಈಗ ಗಾಳಿ ಬಂದಂತೆ ತಾಯಿ ಬಿಟ್ಟಲ್ಲಿ ಮಾತ್ರ [illegible]

ಮುಖಂಡ:—ಸರಿ! ತಾವು ಹೇಳಿದ್ದು ನಿಜ. ತ್ರಿಕಾಲಜ್ಞಾನಿಗಳಾದ ತಾವು ನಮಗೇನಾದರೂ ಕೆಲವು ಸಲಹೆಗಳನ್ನು ಹೇಳಿದ್ದಲ್ಲಿ ನಾವು ನಿಮ್ಮ ಉಪಕಾರವನ್ನು [illegible]

ರೆವರೆಂಡ್ ನಾರದ:—ಚಿಂತಿಲ್ಲ! ಲೋಕೋದ್ಧಾರವೇ ನಮ್ಮ ಕರ್ತವ್ಯ. ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿ ಮಾಡುವುದೇ ನಮ್ಮ ಧ್ಯೇಯ. ನಾನು ಕೆಲವು ನೀತಿಬೋಧೆಗಳನ್ನು ನಿಮಗರುಹುತ್ತೇನೆ, ಅದನ್ನು ನುನಸ್ಸಿನಲ್ಲಿಟ್ಟು ನೀವು ನಡೆದಲ್ಲಿ ನಿಮಗೆ ಏತರದ್ದೇ ಆದರೂ ಕೊರತೆಯಿಲ್ಲ. ನೀವು ಮನಸ್ಸಿಟ್ಟು ಕೇಳಿ.

ವ್ಯಾಪಾರಿ ದಳದ ಮುಖಂಡನು ತನ್ನ ಶೀಘ್ರಲಿಪಿಯ (Shorthand) ಕ್ಲಾರ್ಕನನ್ನು ಸಂಜ್ಞೆ ಮಾಡಿದನು. ಅವನು ನಾರದರು ಕೊಟ್ಟ ಕೆಲವು ನಿಯಮಗಳನ್ನು ಬರಕೊಂಡನು.

1. "ದ್ರವ್ಯೇಣ ಸರ್ವವಶಃ" ದ್ರವ್ಯವಿದ್ದಲ್ಲಿ ಎಲ್ಲವನ್ನೂ ವಶಮಾಡಬಹುದು. ಆದುದರಿಂದ ಧನವೇ ನಿಮ್ಮ ಇಹಲೋಕಪರಲೋಕವೆಂದು ತಿಳಿಯಿರಿ.

2. ಕಲಿಯುಗದಲ್ಲಿ ಧನವೇ ಮುಖ್ಯವಾದುದರಿಂದ ಧನವಂತರಾದವರು ಮಾತ್ರ ನಿಮ್ಮ ಬಂಧುಬಳಗ ಇಷ್ಟಮಿತ್ರರೆಂದು ತಿಳಿಯಿರಿ.

3. ಧನವನ್ನು ಸಂಪಾದಿಸಲು, ತಂದೆ, ತಾಯಿ, ಇಷ್ಟಮಿತ್ರ, ಅಣ್ಣ, ತಮ್ಮನೆಂದು ನೋಡದೆ ಸದಾಚಾರದಿಂದಲೋ, ದುರಾಚಾರದಿಂದಲೋ ಹೇಗಾದರೂ ಮಾಡಿ ಧನವನ್ನು ಶೇಖರಿಸಿರಿ.

4. ನೀವು ಧನಿಕರಾದಲ್ಲಿ ಓದು ಬರಹ ಗೊತ್ತಿಲ್ಲದಿದ್ದರೂ ಚಿಂತಿಲ್ಲ. ಇಂಗ್ಲೀಷಿನಲ್ಲಿ ಒಂದು ದಸ್ಕತು ಹಾಕಲು ಗೊತ್ತಿದ್ದರೆ ಸಾಕು. ಮಾತಾಡುವಾಗ ಮಾತ್ರ ಕೆಲವು ಇಂಗ್ಲೀಷು ಶಬ್ದಗಳನ್ನು ನಡುವಿನಲ್ಲಿ ಸೇರಿಸಿಕೊಳ್ಳಲು ಮರೆಯಬೇಡಿರಿ.

5. ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು, ಇತ್ಯಾದಿ ಹತ್ತು ಸಮಸ್ತರ ಸಂಸ್ಥೆಗಳ ಧ್ಯೇಯವಾವುದೆಂದು ಗೊತ್ತಿಲ್ಲದಿದ್ದರೂ ಚಿಂತಿಲ್ಲ. ಆದರೆ ಆಯಾಸಂಸ್ಥೆಗಳು ಜನತೆಯ ಪ್ರತಿನಿಧಿಗಳನ್ನು ಚುನಾಯಿಸುವಲ್ಲಿ,

ಒಳಹೊಕ್ಕು ಸಂಸ್ಥೆಯ ಕೆಲಸ ಮಾಡಲು ಆಗದಿದ್ದರೂ ಚಿಂತಿಲ್ಲ. ಹೇಗಾದರೂ ಮಾಡಿ ಒಳಹೊಕ್ಕು ತಾವು ಕೂಡಾ ಶ್ರೇಷ್ಠ ಮುಖಂಡರೆನಿಸಿಕೊಳ್ಳಿರಿ.

6. ನೀವು ವಾಸಿಸುವಲ್ಲಿ ಯಾವ ಆಂದೋಲನಕ್ಕೆ ಜನತೆಯ ಸಹಾಯ ಹೆಚ್ಚಿರುತ್ತದೋ ಆಯಾ ಆಂದೋಲನದಲ್ಲಿ ಮುಖ್ಯ ಸ್ಥಾನ ಪಡೆಯಲು ಮರೆಯಬೇಡಿರಿ.

7. ಬಡಬಗ್ಗರು ಬೇಡ ಬಂದಾಗ ಸಹಾಯಮಾಡದಿದ್ದಲ್ಲಿ ಚಿಂತಿಲ್ಲ. ಒಬ್ಬ ಶ್ರೇಷ್ಠ ಮನುಷ್ಯನ ಹೆಸರು ಹೇಳಿ ಯಾವುದಾದರೊಂದು ಸಂಸ್ಥೆಗೆ ವರ್ಗಣಿ ಕೇಳಲು ಬಂದಲ್ಲಿ ಆ ಸಂಸ್ಥೆಯ ಧ್ಯೇಯವಾವುದೆಂದು ಗೊತ್ತಿಲ್ಲದಿದ್ದರೂ ನಾಲ್ಕಕ್ಷರಕ್ಕೆ ಕಮ್ಮಿಯಾಗದ ಚೆಕ್ಕು ಕೊಡಿರಿ.

8. ನಿಮ್ಮ ಮನೆಯಲ್ಲಿ ಮದುವೆ, ಮುಂಜಿಗಳಾದಲ್ಲಿ ಬಡ ಬಗ್ಗರಿಗೆ ಊಟ ಹಾಕದಿದ್ದರೂ ಅಡ್ಡಿಯಿಲ್ಲ, ಆದರೆ ಹೊಟ್ಟೆತುಂಬ ಇದ್ದವರಿಗೆ ಮೃಷ್ಟಾನ್ನ ಭೋಜನ ಹಾಕಲು ಮರೆಯಬೇಡಿರಿ.

9. ಯಾವುದಾದರೊಂದು ಸಭಾ ಸಮಿತಿಗೆ ಅಧ್ಯಕ್ಷನಾಗಲು ಕೇಳ ಬಂದಾಗ ಎಂಥಾ ಕೆಲಸವನ್ನಾದರೂ ಬದಿಗೊತ್ತಿ ನಿಮಗೆ ಅದರಲ್ಲಿ ಮೈ ತುಂಬಾ ದುಡಿಯಲಿಕ್ಕಾಗದಿದ್ದರೂ ಅಧ್ಯಕ್ಷ ಸ್ಥಾನವನ್ನು ಮಾತ್ರ ತಿರಸ್ಕರಿಸಬೇಡಿರಿ.

10. ಶ್ವೇತವರ್ಣವು ಮಂಗಲಕಾರಿಯೆಂದು ಹಿಂದಿನಿಂದಲೂ ಮನ್ನಣೆ ಪಡೆದಿದೆ. ಇಂತಹ ಶ್ರೇಷ್ಠ ವರ್ಣವು ರೂಪಾಯಿಯ ರೂಪದಲ್ಲಿ ನಿಮಗೆ ಪ್ರಸನ್ನವಾಗಿದೆ. ಆದುದರಿಂದ ಅದನ್ನು ಪ್ರಸನ್ನದಲ್ಲಿರಿಸಲು ಎಂಥಾ ಘೋರ ಅಪರಾಧವನ್ನು ಮಾಡಿದರೂ ಚಿಂತಿಲ್ಲ. ಆದರೆ ಅದರ ಪೂಜನವನ್ನು ಮರೆಯದಿರಿ. ನೀವು ಎಂಥಾ ಕಷ್ಟದಲ್ಲಿ ಸಿಲುಕಿಬಿದ್ದರೂ ಆ ಸಗುಣ ರೂಪಿಯಾದ ರೂಪಾಯಿಯು ನಿಮ್ಮನ್ನು ಸಂಕಟದಿಂದ ಪಾರುಗೊಳಿಸುವುದು.

ವ್ಯಾಪಾರಸ್ಥರೇ! ಮಹತ್ತರವಾದ ಹತ್ತು ತತ್ವಗಳನ್ನು ನಿಮಗರುಹಿದೆನು. ಇವನ್ನು ಮನಸ್ಸಿನಲ್ಲಿಟ್ಟು ನೀವು ವರ್ತಿಸಿದಲ್ಲಿ ಎಂಥಾ ಘೋರ ವಿಪತ್ತಿನಿಂದಲೂ ನೀವು ಪಾರಾಗುವಿರಿ. ಇದಕ್ಕೆ ಸಂಶಯವಿಲ್ಲ. ಇದು ತ್ರಿವಾರ ಸತ್ಯಮಿಥ್ಯ. ಅದಲ್ಲದೆ ಇಹಲೋಕದಲ್ಲಿ ನಿಮ್ಮ ಕೀರ್ತಿಯು ನೀವು ಸಾಯುವ ಮುಂಚೆಯೇ ಅಜರಾಮರವಾಗಿ ಸೂರ್ಯಾಸ್ತಮಾನ ತನಕ ಶಾಶ್ವತವಾಗಿ ನಿಲ್ಲುವುದು.

ಮುಖಂಡ.—ಮಹಾಶಯರೇ! ಮಹಾನುಭಾವರೇ! ತಮ್ಮ ಸಲಹೆಗಳು ನಮಗೆ ಪ್ರಗತಿಪಥದಲ್ಲಿ ಮುಂದುವರಿಯಲು ಚುಕ್ಕೆ ಹುಳದಂತೆ ಅಮೋಘವಾದ ಬೆಳಕನ್ನು ಕೊಡದಿರಲಾರವು. ಆದರೂ ನಮ್ಮ ಮನಸ್ಸಿನಲ್ಲೇನೋ ಒಂದು ಸಂಶಯ ಮೂಡುತ್ತಿದೆ. ಆದುದರಿಂದ ಅವನ್ನು ದೂರಪಡಿಸಲಿಕ್ಕೆ ಪುರಾಣ ಶಾಸ್ತ್ರಗಳನ್ನೆತ್ತಿ ಒಂದು ಕಥಾ ರೂಪದ ದೃಷ್ಟಾಂತಕೊಡಬೇಕು.

ರೆವರೆಂಡ್ ನಾರದ:—ಓ ಲಕ್ಷ್ಮೀ ಭಕ್ತರೇ! ನೀವು ಕೇಳಿದ ಪ್ರಶ್ನೆಯು ನಿಜವಾಗಿಯೂ ಯೋಚಿಸತಕ್ಕದ್ದಾಗಿದೆ. ಆದರೆ ಹಿಂದಿನ ಪುರಾಣಗಳು ನಿಮ್ಮಂಥವರಿಗೆ ತಕ್ಕುದಲ್ಲ. ನಿಮ್ಮಂತವರಿಗೋಸ್ಕರ ವಾಚಾಳಿ ಋಷಿಕೃತವಾದುದೊಂದು "ಅನುಕೂಲಶಾಸ್ತ್ರವಿದೆ" ಅದರ . . . 000? ಪುಟದಲ್ಲಿ—44ನೇ ಶ್ಲೋಕದಲ್ಲಿ ಆಧಾರ ರೂಪವಾಗಿ ಒಂದು ಸಣ್ಣ ಕಥೆ ಇದೆ. ಅದನ್ನು, ನಿಮ್ಮ ಶಂಕೆಯನ್ನು ನಿವಾರಿಸಲು ಹೇಳುತ್ತೇನೆ.

ಲಕ್ಷ್ಮೀ ಪುತ್ರರೇ! ಅನುಕೂಲ ಶಾಸ್ತ್ರವು ಜಗತ್ತಿನ ಎಲ್ಲಾ ಶಾಸ್ತ್ರಗಳಿಗಿಂತ ಮಿಗಿಲಾಗಿದೆ. ಲಕ್ಷ್ಮಿಯ ವಿಷಯ ಅದರಲ್ಲಿರುವ ಒಂದು ಕಥೆಯನ್ನು ಕೇಳಿ. ನಾನು ಮೇಲೆ ನಿಮಗರುಹಿದ 10 ತತ್ವಗಳನ್ನು ಪರಿಪಾಲಿಸಿ ಸಾಕ್ಷಾತ್ ಲಕ್ಷ್ಮೀ ದೇವಿಯನ್ನು ಪ್ರಸನ್ನ ಮಾಡಿಕೊಂಡ ಸಾಹುಕಾರ ಪುತ್ರನ ಕಥೆಯನ್ನು ಕೇಳುವವರಾಗಿ.

ನಾರದ ಉವಾಚ.—ಧರಣಿ ಮಂಡಲದ ಮಧ್ಯದಲ್ಲಿ ಗೋಪುರದಲ್ಲಿ ಒಬ್ಬ ಸಾಹುಕಾರನಿದ್ದನು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯವನು ಸಾಧುವಾಗಿಯೂ, ದೈವಭಕ್ತಿಯುಳ್ಳವನಾಗಿದ್ದನು. ತಂದೆಯು ಎಷ್ಟು ಹೇಳಿ ಕೊಟ್ಟರೂ ಅವನಿಗೆ ಸಾಹುಕಾರರ ತತ್ವವು ಮನಸ್ಸಿಗೆ ಹೋಗುವದಿಲ್ಲವಿತ್ತು. ಅವನು ಸಾಕಷ್ಟು ವಿದ್ಯೆ ಕಲಿತು ಹಳ್ಳಿಯ ಪಾಠಶಾಲೆಯ ಉಪಾಧ್ಯಾಯನಾಗಿ ಬಡ ಜೀವನವನ್ನು ನಡೆಸುತ್ತಿದ್ದನು.

ಕಿರಿಯವನು ಕೆಟ್ಟ ಗುಣಗಳ ಸಮುದ್ರವಾಗಿಯೂ ಸುಳ್ಳು ಹೇಳುವುದರಲ್ಲಿ ಘಟಿಂಗನಂತೆಯೂ, ಮಾತಾಡುವುದರಲ್ಲಿ ಮಾತಿನ ಮಲ್ಲನನ್ನು ಮೀರಿಸುತ್ತಿದ್ದನು. ಕೃಪಣನಲ್ಲಿ ಕೃಪಣನಾಗಿದ್ದನು. ಎಷ್ಟೆಗೂ ಅವನಿಗೂ ಎಣ್ಣೆ ಮತ್ತು ಸೀಗೆ ಗಿದ್ದಷ್ಟು ಮಿತ್ರತ್ವವಿತ್ತು. ಅದಕ್ಕಾಗಿ ಅವನ ತಂದೆಯು ಅವನನ್ನು ಮನೆಯಿಂದ ಹೊರಹಾಕಿದ್ದನು.

ಲಕ್ಷ್ಮೀ ಪುತ್ರರೇ! ಕೇಳುವವರಾಗಿರಿ. ಹೊಟ್ಟೆಯೆಂಬುದು ಯಾವ ಕಷ್ಟ ಬಂದರೂ ತನ್ನ ಕರ್ತವ್ಯ(ಹಸಿವು)ವನ್ನು ಮರೆಯದಾಗಿದೆ. ಅದು ಕಿರಿಯ ಪುತ್ರನನ್ನು ತನ್ನ ಕರ್ತವ್ಯಗೋಸ್ಕರ ಕೆಟ್ಟ ಬುದ್ಧಿಯಲ್ಲಿ ಮನಸ್ಸು ಹೋಗುವಂತೆ ಮನಸ್ಸು ಪ್ರೇರೇಪಿಸಿತು. ಅಂದು ಊರ ಜಾತ್ರೆಯಾಗಿತ್ತು. ಅನೇಕ ಮಹನೀಯರೂ ಊರ ಜಾತ್ರೆ ನೋಡಲು ಬಂದಿದ್ದರು. ಈ ಹುಡುಗನು ಕೈಯಲ್ಲೊಂದು ಸಣ್ಣ ಕತ್ತರಿಯನ್ನು ಹಿಡಿದುಕೊಂಡು ಹಣದ ಚೀಲದ ಬೇಟೆಗಾಗಿ ಹೊರಟಿದ್ದನು. ಅತಿ ಮುದುಕನೊಬ್ಬನ ಚೀಲದಲ್ಲಿ ಹಣದ ಪೆಕೆಟೊಂದು ಅವನಿಗೆ ಕಂಡು ಬಂತು. ಅವನು ತನ್ನ ಕತ್ತರಿಯಿಂದ ಮುದುಕನಿಗೆ ತಿಳಿಯದಂತೆ ಅವನ ಚೀಲವನ್ನು ಕತ್ತರಿಸಿ ಅವನ ಪಾಕೆಟನ್ನು ಹಾರಿಸಿದನು. ಅಂದು ಜಾತ್ರೆಯನ್ನು ನೋಡಲು ಸ್ವರ್ಗದಿಂದ ಲಕ್ಷ್ಮೀ ಮತ್ತು ವಿಷ್ಣು ಇಬ್ಬರೂ ಬಂದಿದ್ದರು. ಪಾಕೇಟು ಹಾರಿಸುತ್ತಿರುವ ಆ ಹುಡುಗನನ್ನು ಕಂಡು ಲಕ್ಷ್ಮೀಯು, ಆತನು ತನ್ನ ಭಕ್ತನೆಂದು ಬಗೆದು, ತನ್ನ ನಿಜರೂಪದಲ್ಲಿ ಅವಳು ಪ್ರತ್ಯಕ್ಷಳಾದಳು. ಮತ್ತು ಹೀಗೆ ಹೇಳತೊಡಗಿದಳು.

ಲಕ್ಷ್ಮೀ ಉವಾಚ:—"ಎಲೈ ಸಾಹುಕಾರನ ಪುತ್ರನೇ! ನೀನು ನನ್ನ ಭಕ್ತನೆಂಬ ವಿಷಯವು ನೀನು ಜೇಬನ್ನು ಕತ್ತರಿಸುವಾಗಲೇ ನನ್ನ ಮನಸ್ಸಿಗೆ ಬಂದಿದೆ. ನಿನ್ನ ಈ ಬುದ್ಧಿಯನ್ನು ನೋಡಿ ಮೆಚ್ಚಿದೆ. ಇನ್ನು ಮುಂದಕ್ಕೂ ನೀನು ಅದೇ ವೃತ್ತಿಯನ್ನು ಕೈಕೊಂಡರೆ ನಿನ್ನ ಮೇಲೆ ನನ್ನ ಸಂಪೂರ್ಣ ಕೃಪಾ ಕಟಾಕ್ಷವನ್ನು ಬೀರುತ್ತೇನೆ. ಮುಂದಕ್ಕೆ ನೀನು [illegible] ನಾಗುವಿ. ಆಗ ಮಾತ್ರ ನೀನು [illegible] ಪ್ರೀತಿಸಬೇಕು. ಕರುಣೆ ಉಪಕಾರವೆಂಬುದನ್ನು ಮರೆಯಬೇಕು. [illegible] ಕೈಕೊಳ್ಳಬೇಕು. ಆಗ ನೀನು ಇನ್ನೂ ಧನವಂತನಾಗುವಿ. ಸತ್ಯ ಅಹಿಂಸಾತ್ಮಕ ಜೀವನವನ್ನು ಕೈಕೊಂಡು ದೈವಭಕ್ತಿಯಿಂದ ನಡೆದಲ್ಲಿ ನಾನೆಂದಿಗೂ ಪ್ರತ್ಯಕ್ಷಳಾಗಲಿಕ್ಕಿಲ್ಲ. ಅಂತಹವರಿಗೆ ಒಲಿಯುವುದಿಲ್ಲ; ನಡೆ. ಈಗ ನಾನು ಹೇಳಿದ ತತ್ವಗಳನ್ನೇ ಅನುಸರಿಸು" ಎಂದು ಮಾಯವಾದಳು.

ಅಂದಿನಿಂದ ಅವನು ಅದೇ ವೃತ್ತಿಯನ್ನು ಮುಂದೊತ್ತಿ ಲಕ್ಷಗಟ್ಟಲೆ ಧನವನ್ನು ಒಟ್ಟುಗೂಡಿಸಿದನು. ಸಮುದ್ರವನ್ನು ನದಿಗಳು ಸೇರುವಂತೆ ಇನ್ನೂ ಹೆಚ್ಚಿನ ಧನವು ಅವನಲ್ಲಿ ಬಂದು ಸೇರತೊಡಗಿತು. ಅಂದಿನಿಂದ ಅವನು ಊರ ಆಢ್ಯ ಗೃಹಸ್ಥರಲ್ಲಿ ಒಬ್ಬನೆಂದು ಗಣಿಸಲ್ಪಟ್ಟನು.

ಇತ್ತ ಅವನ ಅಣ್ಣನು ಸರಳ ಜೀವನವನ್ನು ನಡೆಸುತ್ತಿದ್ದನು. ಅವನಿಗೆ ಒಪ್ಪೊತ್ತು ಊಟ ಸಿಕ್ಕುವುದೇ ಕಷ್ಟವಾಗತೊಡಗಿತು. ನೋಡಿದಿರಾ, ಜನರೇ! ಈಗಲಾದರೂ ಸಮಾಧಾನವಾಯಿತೇ? ಆದುದರಿಂದ ನನ್ನ ಈ ಹತ್ತು ತತ್ವಗಳನ್ನು ಅನುಸರಿಸಿರಿ" ಎಂದು ನಾರದರಂದರು.

ವ್ಯಾಪಾರಿಗಳು ತಮ್ಮ ಸ್ಥಾನಕ್ಕೆ ತೆರಳಿದರು. ನಾರದರು ತಮ್ಮ ಹೊಟೇಲಿನತ್ತಕಡೆ ಹೋದರು.

ಸಾಮಾನ್ಯ ಮನುಷ್ಯನ ಎತ್ತರ ಮತ್ತು ಭಾರ

ಎತ್ತರ	ಇರಬೇಕಾದ ಭಾರ
5 ಫೀಟು	100 ರಾತ್ತಲು
5 ಫೀಟು 1 ಇಂಚು	103 ,,
5 ,, 2 ,,	106 ,,
5 ,, 3 ,,	109 ,,
5 ,, 4 ,,	112 ,,
5 ,, 5 ,,	115 ,,
5 ,, 6 ,,	118 ,,
5 ,, 7 ,,	121 ,,
5 ,, 8 ,,	124 ,,
5 ,, 9 ,,	127 ,,

ಐದಡಿ ಎತ್ತರ ಇದ್ದವನು ನೂರು ರಾತ್ತಲು ಭಾರ ಇರಬೇಕೆಂಬಲ್ಲಿಂದ, ಪ್ರತಿಯೊಂದು ಇಂಚು ಎತ್ತರಕ್ಕೆ ಮೂರು ರಾತ್ತಲುಗಳಂತೆ ಕೂಡಿಸಿಕೊಂಡು ಓದತಕ್ಕದ್ದು.

ಕೆಲವರು ಎತ್ತರಕ್ಕೆ ಸರಿಯಾಗಿ ಭಾರವಿರುವುದಿಲ್ಲ. ಅಂಥವರ ಆರೋಗ್ಯವು ಸಾಮಾನ್ಯವಾಗಿ ಚೆನ್ನಾಗಿಲ್ಲವೆಂದು ತಿಳಿಯತಕ್ಕದ್ದು.



ಬ್ರಿಟಿಷ್ ಯುದ್ಧ ಹತ್ಯಾರು ಕಾರ್ಖಾನೆಯಲ್ಲಿ, ಒಂದು ಲಘು ಟ್ಯಾಂಕನ್ನು ದುರುಸ್ತಿಗೆ ತಂದಿರುವರು. ಬ್ರಿಟ್ಟಿನಲ್ಲಿನ [illegible] ಹೆಚ್ಚಿಸಿರಲು, ಈ ಟ್ಯಾಂಕುಗಳನ್ನು ನಡೆಸಲು ಪ್ರತ್ಯೇಕ ದಳಗಳು ರಚಿತವಾಗಿವೆ.

ಯುದ್ಧಕ್ಕಿಳಿದರೆ ಜಪಾನಿನ ಪರ್ಯಾವಸಾನವಾಗುವುದು!

ಚೀನದೊಡನೆ ಹೋರಾಡಿ ಸೋಲುತ್ತಿರುವ ರಾಷ್ಟ್ರ

ಜಪಾನಿನ ವ್ಯಾಪಾರ ವಹಿವಾಟುಗಳು

ಜಪಾನಿನ ಹೆಚ್ಚಿನ ವ್ಯಾಪಾರವು ಬ್ರಿಟಿಷರಿಗೂ, ಅಮೇರಿಕಾನರಿಗೂ ಹಂಚಿ ಹೋಗಿದೆ. ಜಪಾನು ತನ್ನ ರಫ್ತುಗಳನ್ನು ಈ ಎರಡು ರಾಷ್ಟ್ರಗಳಿಗೇ ಹೆಚ್ಚಾಗಿ ಕಳುಹಿಸುವುದು. ಇದು ಯುದ್ಧಕ್ಕಿಳಿದು, ಮಿತ್ರರಾಷ್ಟ್ರಗಳೊಡನೆ ಹೋರಾಡಿದರೆ ಇದಕ್ಕೆ ದೊಡ್ಡ ನಷ್ಟ ಉಂಟಾಗುವುದು. ಜಪಾನಿನ ವ್ಯಾಪಾರವು ಆಗಲೇ ಕಡಿದು ಹೋಗುವುದು.

ಹತ್ತಿ, ಉಣ್ಣೆ, ಎಣ್ಣೆ ಮತ್ತು ಇತರ ಅನೇಕ ಲೋಹಗಳನ್ನು ಜಪಾನು ಪರದೇಶಗಳಿಂದ ತರಿಸುತ್ತಿದೆ.

ಇತ್ತೀಚೆಗೆ 12 ತಿಂಗಳುಗಳಿಂದ ಜಪಾನಿಗೆ ಹೋಗುತ್ತಿದ್ದ ಲೋಹಗಳು ಬ್ರಿಟನ್ನಿಗೆ ಯುದ್ಧಕ್ಕಾಗಿ ಹೋಗುತ್ತಿವೆ. ಅಂತೆಯೇ ಇತರ ಸಾಮಗ್ರಿಗಳೂ ಜಪಾನಿಗೆ ಇತರ ವರುಷಗಳಲ್ಲಿ ಸಿಕ್ಕುತಿದ್ದಷ್ಟು ಈಗ ಸಿಗುವುದಿಲ್ಲ. ಸಣಬಿನ ನಾರಂತೂ ಬಹಳ ಅಪರೂಪವಾಗಿದೆ. ಜಪಾನಿಗೆ ಕೆಲವು ಸಮಯದ ವರೆಗೆ ಬ್ರಿಟಿಷ್ ರಾಷ್ಟ್ರಗಳಿಂದ ನಿಕ್ಕಲ್, ಕೋಬಾಲ್ಟ್, ಟಂಗಸ್ಟನ್ [illegible] ಲೋಹಗಳು ಜಪಾನಿಗೆ ಹೋಗುತ್ತಿಲ್ಲ.

ಜಪಾನು ಹಿಂದೂದೇಶಗಳೊಳಗೆ ಇರುವ ಹತ್ತಿಯ ವ್ಯಾಪಾರ [illegible] ನಿಂತಿರುತ್ತದೆ.

ಇನ್ನು ಈಜಿಪ್ಟಿನಿಂದಲೂ, ಅಮೇರಿಕದಿಂದಲೂ ಜಪಾನು ತನಗೆ ಬೇಕಾದ ಹತ್ತಿಯನ್ನು ತರಿಸಬೇಕಾಗುತ್ತದೆ.

ಆಸ್ಟ್ರೇಲಿಯಾದಿಂದ, ಜಪಾನು ತನಗೆ ಬೇಕಾದಷ್ಟು ಉಣ್ಣೆಯನ್ನು ತರಿಸುತ್ತಿದೆ.

ಜಪಾನಿಗೆ ಬೇಕಾದ ಎಣ್ಣೆಯು ಅಮೇರಿಕದಿಂದಲೂ ಈಸ್ಟ್ ಇಂಡೀಸ್ (ನೆದರ್‌ಲೇಂಡ)ಗಳಿಂದಲೂ ಬರಬೇಕಾಗಿದೆ. ಈಸ್ಟ್ ಇಂಡೀಸ್‌ಗಳಿಂದಲೂ, ಮಲಯಾದಿಂದಲೂ ಜಪಾನು ರಬ್ಬರನ್ನು ತರಿಸುತ್ತಿದೆ.

ಆದ್ದರಿಂದ ಬ್ರಿಟಿಷ್ ಮತ್ತು ಅಮೇರಿಕದವರೊಡನಿರುವ ವ್ಯಾಪಾರವನ್ನು ಕಳೆದುಕೊಂಡರೆ ಜಪಾನಿಗೆ ದೊಡ್ಡ ಗಂಡಾಂತರ ಉಂಟಾಗಬಹುದು. ಇದಲ್ಲದೆ ಜಪಾನು ಅಮೇರಿಕಕ್ಕೆ ರೇಶ್ಮೆಯನ್ನು ಕಳುಹಿಸುತ್ತದೆ. ಅಲ್ಲಿಯ ವ್ಯಾಪಾರವು ಜಪಾನಿನ ಜೀವಾಳವಾಗಿದೆ. ಇದನು ಕಳೆದುಕೊಂಡರೆ ಜಪಾನಿಗೆ ಉಸಿರು ಕಟ್ಟಿದಂತಾಗುತ್ತದೆ.

ಜಪಾನಿನ ಬಟ್ಟೆಗಳು ಪೂರ್ವ ಆಫ್ರಿಕಕ್ಕೆ ಹೋಗುತ್ತವೆ. ಜಪಾನಿನ ರಬ್ಬರ್ ಬೂಟ್ಸುಗಳು ಬ್ರಿಟಿಷ್ ಈಸ್ಟ್ ಇಂಡೀಸ್‌ಗೆ ಹೋಗುತ್ತವೆ. ಜಪಾನಿನ ಸಿಮೆಂಟು ಮಲಯಕ್ಕೆ ಹೋಗುತ್ತದೆ. ವಿದ್ಯುಚ್ಛಕ್ತಿಯ ಉಪಕರಣಗಳೂ, ಕೇನ್ ಮಾಡಿದ ಪದಾರ್ಥಗಳೂ, ಬ್ರಿಟಿಷರ ಇತರ ರಾಷ್ಟ್ರಗಳಿಗೂ, ಮಿತ್ರ ರಾಷ್ಟ್ರಗಳಿಗೂ ಹೋಗುತ್ತವೆ.

ಇದನ್ನೆಲ್ಲಾ ವಿಮರ್ಶಿಸುವಾಗ, ಜಪಾನು ಅಮೇರಿಕ ಮತ್ತು ಬ್ರಿಟಿಷರ ಮೇಲೆ ಹೊಂದಿಕೊಂಡಿದೆ ಎಂದು ನಿಚಿತವಾಗುತ್ತದೆ.

ಜಪಾನು ಎಲ್ಲಿಯಾದರೂ ಈ ಎರಡು ರಾಷ್ಟ್ರಗಳೊಡನೆ ಕತ್ತಿ ಕಟ್ಟಿದರೆ, [illegible] ಆತ್ಮಹತ್ಯವನ್ನು ಮಾಡಿಕೊಂಡಂತಾಗುವುದು.



ಪೋಲೆಂಡಿನಿಂದ ಇಂಗ್ಲಾಂಡಿಗೆ ಬಂದಿಳಿದ ಪೋಲಿಶ್ ಸೈನಿಕರು. ಇವರು ನೆಲದಲ್ಲಿಯೂ, ಜಲದಲ್ಲಿಯೂ ಗಗನದಲ್ಲಿಯೂ ಹೋರಾಡಲು ಸಿದ್ಧರು. ಈಗ ಬ್ರಿಟ್ಟೆನಿನಲ್ಲಿ ಟೆಲಿಫೋನ್ ಕೇಂದ್ರಗಳಲ್ಲಿ ಕೆಲಸ ಮಾಡುವವರೂ ಹೇರಳ ಇದ್ದಾರೆ.

ನಾಣ್ಯಗಳು

1 ಪೈ					
3 ಪೈ	ಕಾಲಾಣೆ	1⅛ ಪೆನ್ಸ್	10 ರೂಪಾಯಿ		15 ಶಿಲ್ಲಿಂಗು
16 ಆಣೆ	ಒಂದು ರೂಪಾಯಿ	1 ಶಿಲ್ಲಿಂಗ್ 6 ಪೆನ್ಸ್	100,000 ರೂಪಾಯಿ	1 ಲಕ್ಷ	7500 ಪವನು
			100 ಲಕ್ಷ ,,	1 ಕೋಟಿ	750,000 ಪವನು



ಆರೋಗ್ಯವೂ ದೀರ್ಘಾಯುಷ್ಯವೂ

ವ್ಯಾಪಾರಸ್ಥರು ಗಮನಿಸಬೇಕಾದ ವಿಷಯಗಳು

(ಲೇಖಕರು:—ಡಾ| ಎಫ್. ಎಚ್. ಒಡೆಯರ್, ಫರಂಗಿಪೇಟೆ.)

ಮಾನವನಿಗೆ ಪ್ರಾಣವು ಮುಖ್ಯವೂ ಅತೀ ಅಮೂಲ್ಯವೂ ಆದುದು. ಪ್ರಾಣದ ನಂತರ ದೇಹಾರೋಗ್ಯವೇ ಎರಡನೆಯದು. ಆರೋಗ್ಯ ಒಂದಿಲ್ಲದಿದ್ದರೆ ಮಾನವನಿಂದಾಗತಕ್ಕ ಕಾರ್ಯಗಳೆಲ್ಲಕ್ಕೂ ಚ್ಯುತಿಯುಂಟಾಗುವುದು. ಸಂತೋಷಾನುಭವಗಳು ಕೂಡಾ ಅನುಭವಿಸಲು ಸಾಧ್ಯವಿಲ್ಲ. ಅನಾರೋಗ್ಯವುಳ್ಳ ಮನುಷ್ಯನು ಅಸೌಖ್ಯ, ಕಷ್ಟ ಮತ್ತು ಬಾಧೆ ಇವುಗಳನ್ನು ಅನುಭವಿಸುವುದು ಮಾತ್ರವಲ್ಲದೆ ಬೇಕಾದ್ದನ್ನು ಒದಗಿಸಿಕೊಳ್ಳಲು ಅಶಕ್ತನಾಗುವನು. ಆರೋಗ್ಯಕ್ಕೆ ಒಂದಾವರ್ತಿ ಚ್ಯುತಿ ಬಂದರೆ ಅದು ಬೇಗನೇ ವಾಸಿಯಾಗಲಾರದೆಂಬುದೂ ತುಂಬಾ ಕಷ್ಟನಷ್ಟಗಳನ್ನೆಲ್ಲಾ ಅನುಭವಿಸಬೇಕೆಂಬುದೂ ಎಲ್ಲರ ಅನುಭವದ ಮಾತಾಗಿದೆ. ತನ್ನ ಸ್ವಂತ ಶರೀರವನ್ನು ಆರೋಗ್ಯದಲ್ಲಿಟ್ಟುಕೊಳ್ಳುವುದು ಸುಖಸಂತೋಷದಿಂದ ಬಾಳಲು ಆಶಿಸುವ ಪ್ರತಿಯೊಬ್ಬನ ಕರ್ತವ್ಯವಾಗಿದೆಯೆಂದು ಸಾಧಾರಪೂರ್ವಕವಾಗಿ ಹೇಳದ ಹೊರತು, ಯಾರೂ ಒಪ್ಪಲಾರರೆಂಬುದು ನಿಜವಿದೆ. ಆದುದರಿಂದ ಆಧಾರಸಹಿತವಾಗಿ ಈ ಲೇಖನವನ್ನು ಬರೆಯುತ್ತೇನೆ.

ಮನಸ್ಸು—ಆರೋಗ್ಯವು

ಪ್ರಾಜ್ಞರು ಅರಿಷಡ್ವರ್ಗಗಳನ್ನು ರೋಗಗಳಲ್ಲಿ ಎಣಿಸಿರುತ್ತಾರೆ. ಅವುಗಳೇ ಮುಂದೆ ಪ್ರಾಣಿಗಳಲ್ಲಿ ವಿಷಯೇಚ್ಛೆ—ಅಜ್ಞಾನ—ಬೇಸರಿಕೆ ಮುಂತಾದ ದುಃಖಗಳನ್ನುಂಟುಮಾಡುತ್ತವೆ ಮನೋಭೂಮಿಕೆಗಳಲ್ಲಿ ಉತ್ಪನ್ನವಾಗುವ ಈ ವಿಕಾರಗಳೇ ದೇಹೇಂದ್ರಿಯಗಳಿಗೆ ಅಯುಕ್ತ ಆಹಾರ ವಿಹಾರಗಳಲ್ಲಿ ಪ್ರವರ್ತಿಯನ್ನುಂಟುಮಾಡುತ್ತವೆ. ಇಂದ್ರಿಯಗಳ ಹೀನ ಮಿತ್ಯಾತಿಯೋಗ, ಅಸಾತ್ಮ್ಯಾದಿ ಹೇತು ದೋಷಗಳಿಂದ ದೇಹವು ಅನೇಕ ರೋಗಗಳ ತವರ್ಮನೆಯಾಗಿದೆ. ಈ ಕುರಿತು ಗೀತೆಯಲ್ಲಿ "ಕಾಮಾದ್ಭವತೀ ಕ್ರೋಧ" ಎಂದು ಕ್ರಮವಾಗಿ ಕಾಮದಿಂದ ಕ್ರೋಧವೂ, ಕ್ರೋಧದಿಂದ ಮೋಹವೂ, ಮೋಹದಿಂದ ಬುದ್ಧಿನಾಶವೂ, "ಬುದ್ಧಿನಾಶಾತ್ ಪ್ರಣಶ್ಯತಿ" ಬುದ್ಧಿನಾಶದಿಂದ ಸರ್ವನಾಶವೂ ಆಗುತ್ತದೆಂದು ಉಲ್ಲೇಖಿಸಿರುತ್ತದೆ. ಪ್ರಾಣಿಮಾತ್ರಗಳ ಕಾಯಿಕಾಂತರಿಕ ರೋಗಗಳಿಗೆ ಮನೋವಿಕಾರಗಳೇ ಆದಿಕಾರಣವಾಗಿರುತ್ತವೆ. "ಏಕೈಕಮಪ್ಯನರ್ಥಾಯ" ಎಂಬಂತೆ ಒಂದೊಂದೇ ಅನರ್ಥಗಳಿಗೆ ಒಂದೊಂದೇ ಕಾರಣವಾಗಿರುವಾಗ ಎಲ್ಲವೂ ಒಂದಾಗಿ ಸೇರಿದರೆ ಕೇಳುವದೇನು. ಈ ಕುರಿತು ಗೀತೆಯಲ್ಲಿ "ನರಕಸ್ಯೇದಂ ದ್ವಾರನಾಶಯಂತ್ಯಾತ್ಮನಃ" ಎಂಬುದು ಯಥಾರ್ಥವಾಗಿದೆ.

ಜಾನಪದ ಧ್ವಂಸಕ ರೋಗಗಳಿಗೆ ಕಾಮಕ್ರೋಧಾದಿ ಷಡ್ವರ್ಗಗಳ ಮುಂದೆ ಸಾಂಸರ್ಗಿಕ ರೋಗಗಳು ಉತ್ಪನ್ನವಾಗುತ್ತದೆಂದು ಆಚಾರ್ಯವರ್ಯರ ಮತವಾಗಿದೆ. ಅಳರಸನ ಮಾತ್ಸರ್ಯ, ದುಷ್ಕಾಮ, ಇತ್ಯಾದಿಗಳಿಂದ ಘೋರ ಸಂಗ್ರಾಮವು ಉಂಟಾಗಿ ಇಡೀ ದೇಶವನ್ನೂ, ಜನಾಂಗವನ್ನೂ, ಧ್ವಂಸಮಾಡಬಲ್ಲದೆಂದು ಪುರಾಣೇತಿಹಾಸಗಳಿಂದಲೂ, ಪ್ರಾಚೀನ ಅರ್ವಾಚೀನ ಚರಿತ್ರೆಗಳಿಂದಲೂ ಕಂಡುಬರುತ್ತವೆ. ಮಾನವರನ್ನು ಅನೇಕ ಸಂಕಟ ಮತ್ತು ಮೃತ್ಯುಪಥಕ್ಕೊಯ್ಯುವ ಮನೋವಿಕಾರಗಳನ್ನು ಜೈಸುವುದು ಬಹು ಕಷ್ಟತರವಾದುದರಿಂದಲೂ, ಈ ಮನೋವಿಕಾರಗಳೇ ಎಲ್ಲಾ ಪ್ರಾಣಿಗಳ ರೋಗದ ಅದಿರಣಗಳಾದುದರಿಂದ ಇವುಗಳನ್ನು ಜೈಸತಕ್ಕ ವೈದ್ಯನು (ಡಾಕ್ಟರನು) ಅಪೂರ್ವ ವೈದ್ಯನಾದ ಪರಮಾತ್ಮನೆಂದೂ ಅನಾಮಯತ್ವವೇ ರೋಗದ ನಿವೃತ್ತಿಯೆಂದೂ ಸೂಕ್ಷ್ಮದರ್ಶನಕಾರರಾದ ಆಚಾರ್ಯರ ಮತವಾಗಿದೆ.

ಗೀತಾ ಬೋಧೆ

ಗೀತೆಯಲ್ಲಿ "ಜನ್ಮಬಂಧ ವಿನಿರ್ಮುಕ್ತಾ ಪದಂಗಚ್ಛಸ್ತ್ಯನಾಮಯಂ" ಎಂದೂ ಅನಾಮಯ ಸಾಮ್ರಾಜ್ಯದ ಭೋಗವು ಜನ್ಮ ಬಂಧದ ಅಂದರೆ ಅಜ್ಞಾನದ ಮುಕ್ತಿಯಂತರವೇ ಎಂದು ಉಲ್ಲೇಖಿಸವಿದೆ. ಅನಾಮಯವೆಂದರೆ ಮೋಕ್ಷವೆಂದೂ ಆ ಮೋಕ್ಷವೇ ಸಂಪೂರ್ಣ ನಿರೋಗ ಸ್ಥಿತಿಯೆಂದೂ, ಸ್ಪಷ್ಟವಾಗುತ್ತದೆ. ಮೋಕ್ಷವನ್ನೂ, ಅನಾಮಯ ಸ್ಥಿತಿಯನ್ನೂ ದೇಹವಿರುವಾಗಲೇ ದೊರಕಿಸಿಕೊಳ್ಳ ಬೇಕಲ್ಲದೆ ನಂತರ ದೊರಕಲಾರದು. ಮನಸ್ಸೇ ಕಾಮದ್ವೇಷಾದಿದೋಷಗಳಿಂದ ಮುಕ್ತವಾಗಿ ಅಂದರೆ ನಿರ್ವಿಷಯವಾಗಿ ಆನಂದಮಯ ಸಾತ್ವಿಕ ಸ್ಥಿತಿಯಲ್ಲಿ ಇರಬಹುದು. "ರಜಸ್ತಮಶ್ಚ ಮನಸೋದೌಚದೋಷಾ ಉದಾಹೃತೌ" ಪ್ರವೃತ್ತಿ ಮಾರ್ಗಿಗಳಾದ ಜನೋಪಕಾರಿಗಳು ಜೀವಂತ ಸ್ಥಿತಿಯಲ್ಲಿದ್ದುಕೊಂಡು ರಾಜ್ಯಕಾರಭಾರ ಮಾಡಿದ್ದು ಭಾಗವತ, ಭಗವದ್ಗೀತೆ, ಇತ್ಯಾದಿಗಳಲ್ಲಿ ಉದಾಹರಿಸಲ್ಪಟ್ಟಿವೆ. "ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ। ವೀತರಾಗ ಭಯಕ್ರೋಧ ಸ್ಥಿತಧೀರ್ಮುನಿರುಚ್ಯತೇ॥" ಎಂದು ಗೀತೆಯಲ್ಲಿ ಸ್ಥಿತಃ ಪ್ರಜ್ಞನ ಲಕ್ಷಣವನ್ನು ಹೇಳುವಲ್ಲಿ ಉಲ್ಲೇಖಿಸವಿದೆ. "ವೀತರಾಗ ಭಯಕ್ರೋಧಾ" ಅಂದರೆ ಬಿಡಲ್ಪಟ್ಟ ರಾಗ–ಭಯ–ಕ್ರೋಧರಾದವರೇ ಸ್ಥಿತಪ್ರಜ್ಞರಾದವರೆಂದು ಸಿದ್ಧಾಂತವು. ಹೀಗೆಂಬಾಗ ರಾಗಾದಿ ರೋಗಗಳಿಂದ ಮುಕ್ತರಾದವರು ಅನಾಮಯಿಗಳೆಂಬುದು ನಿಶ್ಚಯ. ಈ ಅನಾಮಯ ಸ್ಥಿತಿಯನ್ನು ಹೊಂದಬೇಕಾದರೆ ದೋಷಗಳು ನಷ್ಟವಾಗಿ ಅದು ಸತ್ವವಿಶಿಷ್ಟವಾಗಲಿಕ್ಕೇ ಬೇಕು. ಅಂದರೆ ಸತ್ಯ ಸ್ವರೂಪಿಯಾದ ಆತ್ಮ ಸ್ವರೂಪಿಯ ಸಾಕ್ಷಾತ್ಕಾರವನ್ನು ಹೊಂದುವುದೇ ಅನಾಮಯತ್ವವು ಅಥವಾ ಆರೋಗ್ಯ. ಈ ಸ್ಥಿತಿಯನ್ನು ಹೊಂದಿದ ಪುರುಷನು ಮಮತಾ ರಹಿತನಾಗಿ "ನಾತ್ಮಾರ್ಥಂ ನಾ ಪಿತಾಮಾರ್ಥಂ ಅಥ ಭೂತದಯಾಂ ಪ್ರತಿ" ಎಂಬಂತೆ ಲೋಕ ಸಂಗ್ರಹ ಕಾರ್ಯ ಸಾಮರ್ಥ್ಯವುಳ್ಳವನೂ ಮಮತಾ ರಹಿತನೂ ಆಗಬಲ್ಲನು. ಹೀಗೆಂಬಾಗ, "ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ" ಎಂಬ ಗೀತಾ ವಾಕ್ಯದಂತೆ ನಮ್ಮ ಕರ್ಮಗಳಲ್ಲೊಂದಾಗಿರುವ ಆರೋಗ್ಯಕ್ಕೂ ಪ್ರಾಣ ಮಾತ್ರದ ಹಿತಕ್ಕೂ ಕಾರಣವಾಗಿರುವ ರೋಗಗಳ ಬೀಜವಾದ ಅರಿಷಡ್ವರ್ಗಗಳನ್ನು ನಾಶಮಾಡಿ ಅನಾಮಯತ್ವ ಅಥವಾ ಪೂರ್ಣ ಆರೋಗ್ಯವನ್ನು ಸಂಪಾದಿಸಿಕೊಳ್ಳ ಬೇಕು.

ಚಿಂತೆಯೇ ಮುಪ್ಪು

ದೇಹಾರೋಗ್ಯಕ್ಕೆ ಪರಿಶುದ್ಧತೆ ಎಷ್ಟು ಅವಶ್ಯವೋ ಅದಕ್ಕಿಂತಲೂ ನಿಷ್ಕಳಂಕವಾದ ಮನಸ್ಸಿನ ಅವಶ್ಯಕತೆಯು ಹೆಚ್ಚೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮನಸ್ಸನ್ನು ನಿರ್ಮಲವಾಗಿಟ್ಟುಕೊಳ್ಳುವುದೇ ಆನಂದವು. ಆನಂದವೇ ಆರೋಗ್ಯವು. ಮನಸ್ಸು ಮಲಿನವಾಯಿತೆಂದರೆ ಚಿಂತೆ—ದುಃಖ—ರೋಗ ಇತ್ಯಾದಿ ಸಮಸ್ತ ಅಮಂಗಲಗಳು ಆವಿರ್ಭವಿಸಿ ಎಂತಹ ಬಲಾಢ್ಯ ಮನುಷ್ಯನನ್ನಾದರೂ ಚಿಂತೆಗೆ ಒಳಗುಮಾಡಿ ಸೊರಗಿಸುವುದು. ಅಷ್ಟೈಶ್ವರ್ಯ ಸಂಪನ್ನನಾದವನಲ್ಲಿಯೂ ಕೂಡಾ ಚಿಂತೆಯು ತನ್ನ ಪ್ರತಾಪವನ್ನು ತೋರಿಸದೇ ಬಿಡದು. "ಚಿಂತಾಯಾಶ್ಚ ಚಿತಾಯಾಶ್ಚ ಬಿಂದು ಮಾತ್ರ ವಿಶೇಷತಃ। ಚಿತಾ ದಹತಿ ನಿರ್ಜೀವಂ ಚಿಂತಾ ಜೀವಂತಮೇವಚ" ಎಂಬಂತೆ ಚಿಂತೆಗೂ ಚಿತೆಗೂ ಬಿಂದು ಮಾತ್ರ ವ್ಯತ್ಯಾಸವು. ಚಿತೆಯು ಜೀವರಹಿತನನ್ನು ದಹಿಸಿದರೆ ಚಿಂತೆಯು ಜೀವಸಹಿತವಾಗಿ ದಹಿಸುವುದು. ಆದುದರಿಂದಲೇ ಮನುಷ್ಯನು ತನ್ನ ಮನಸ್ಸನ್ನು ಚಿಂತೆಗೆ ಅಧೀನವಾಗಗೊಡಬಾರದೆಂದು ಪ್ರಾಜ್ಞರು ಹೇಳುತ್ತಿರುವುದು. ಮನಸ್ಸಿನ ನಿರ್ಮಲತೆಯು ಕೆಟ್ಟಿತೆಂದರೆ ದೇಹಾರೋಗ್ಯವು ಕೆಡುತ್ತದೆಂಬುದು ನಿರ್ವಿವಾದ. ಈ ಕುರಿತು ಉಪನಿಷತ್ತಿನಲ್ಲಿ "ಮನಯೇವ ಮನುಷ್ಯಾಣಾ ಕಾರಣಂ ಬಂಧ (ದುಃಖ) ಮೋಕ್ಷಯೋಃ" ಎಂದು ಉಲ್ಲೇಖಿಸಿರುತ್ತದೆ. ಇಲ್ಲಿ ಬಂಧವೆಂದರೆ ದುಃಖವೆಂದೂ ರೋಗವೆಂದೂ ಹೇಳಬಹುದು. ಅಭ್ಯಂತರ ರೋಗಕ್ಕೆ ಮನಸ್ಸು ಒಂದು ಸ್ಥಾನವೆಂದೂ, ಅದು ಮಲಿನವಾದರೆ "ಧೀಧೈರ್ಯಾತ್ಮಾದಿ ವಿಜ್ಞಾನಂ ಮನೋದೋಷೌಷಧಂ ಪರಂ" ಎಂಬಂತೆ ಧೀಧೈರ್ಯಾತ್ಮಾದಿ ವಿಜ್ಞಾನಗಳು ಇದಕ್ಕೌಷಧಗಳೆಂದೂ, ಆಚಾರ್ಯವರ್ಯರುಗಳ ಮತವಾಗಿದೆ ಮನಸ್ಸು ಮಲಿನವಾಗಲಿಕ್ಕೆ ನಾನಾ ಪ್ರಕಾರದ ದುರಾಶೆಗಳು–ಕಾಮಕ್ರೋಧಾದಿಗಳು–ರಾಜಸ ಮತ್ತು ತಾಮಸೋಪೇತ ಆಹಾರಗಳು ಇತ್ಯಾದಿ ಇತ್ಯಾದಿ ಕಾರಣಗಳಾಗಿರುತ್ತವೆ. ಈ ಕುರಿತು ಗೀತೆಯಲ್ಲಿ "ಆಹಾರ ರಾಜಸಸ್ಯೇಷ್ಟಾಂ ದುಃಖಶೋಕಾ

ಮಯಪ್ರದಾಃ" ಎಂದು ಉಲ್ಲೇಖಿಸಲಿದೆ. ಅನಾತ್ಮನಾದ ಪುರುಷನು ಇವುಗಳ ಏಳತಕ್ಕೆ ಸಿಕ್ಕಿಬಿದ್ದು ಅಗ್ನಿಮಾಂದ್ಯ—ಅತಿಸಾರ—ಕ್ಷಯ—ಉನ್ಮಾದ ಇತ್ಯಾದಿ ಭಯಂಕರ ರೋಗಗಳಿಂದ ಅಜನ್ಮ ಪರಿಯಂತರ ದುಃಖಪಡುವುದಲ್ಲದೆ ಮರಣದ ರುಚಿಯನ್ನೂ ನೋಡುವನು. ಮಲಿನವಾದ ಮನಸ್ಸುಳ್ಳವನಲ್ಲಿ ಜ್ಞಾನೋದಯವಾಗಲಾರದೆಂಬುದನ್ನು ಯಥಾರ್ಥವಾಗಿ ಹೇಳಬಹುದು. ಪ್ರಬಲ ಕಾರಣಗಳಿಂದಾಗಿ ಮನೋದೌರ್ಬಲ್ಯಕ್ಕೆ ಎಡೆಯನ್ನು ಕೊಟ್ಟರೆ ಜೀರ್ಣಶಕ್ತಿಯು ಮಂದವಾಗಿ ಅಗ್ನಿಮಾಂದ್ಯವು ತಲೆದೋರಿ ದೇಹದ ಗಟಕಗಳಿಗೆ ಪೋಷಕ ದ್ರವ್ಯವು ದೊರಕದೆ ದೇಹವು ಕೃಷವಾಗುವುದು. ದೇಹ ದೌರ್ಬಲ್ಯ ಮತ್ತು ಮನೋದೌರ್ಬಲ್ಯವು ಒಟ್ಟಾಗಿ ಸೇರಿ ಅನೇಕಾನೇಕ ಭಯಂಕರ ರೋಗಗಳಿಗೆ ಅವಕಾಶವನ್ನು ಕಲ್ಪಿಸಿ ದೇಹಾವಸಾನಕ್ಕೆ ಕಾರಣವಾಗುವುದು. ಆದುದರಿಂದ ಆಯುರಾರೋಗ್ಯ ಅಭಿಲಾಷಿಗಳು ಚಿಂತಾ-ಲೋಭ-ಭಯಾದಿಗಳಿಗೆ ಆಶ್ರಯವನ್ನೀಯದೆ ಮನಶ್ಶಾಂತಿಯನ್ನು ಗಳಿಸಿಕೊಳ್ಳಲೇ ಬೇಕು. ಮನಶ್ಶಾಂತಿಯೇ ಆರೋಗ್ಯತೆಯ ಬೀಜವು. ಮನೋನಿಗ್ರಹವು ಬಹು ದುರ್ಲಭವಾಗಿರುವುದರಿಂದಲೇ ಅಂದರೆ ಬಹು ಸಂಖ್ಯಾಕರು ರೋಗದಿಂದ ನರಳುತ್ತಿರುವರು. ಈ ಕುರಿತು ಗೀತೆಯಲ್ಲಿ "ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ" ಎಂದೂ ಅಭ್ಯಾಸೇನತು ಕೌಂತೇಯ ವೈರಾಗ್ಯೇನ ಚ ಗೃಹ್ಯತೆ" ಎಂದು ಮನೋ ನಿಗ್ರಹದ ಮಾರ್ಗವನ್ನು ಉಲ್ಲೇಖಿಸಿರುತ್ತದೆ. ಆದುದರಿಂದ ಆರೋಗ್ಯ ಭಾಗ್ಯವನ್ನು ಅಪೇಕ್ಷಿಸುವ ಮನುಷ್ಯನು ಅಪಥ್ಯಕಾರಕ ಪದಾರ್ಥಗಳಿಂದಲೂ ದುರಾಲೋಚನೆ ದುಷ್ಕೃತ್ಯಗಳಿಂದಲೂ ಮನಸ್ಸನ್ನು ನಿಗ್ರಹಿಸಿಕೊಳ್ಳ ಬೇಕು. ಎಲ್ಲಿ ದೃಢ ವಿಶ್ವಾಸ ಮನೋ ನಿಗ್ರಹಗಳಿವೆಯೋ ಅಲ್ಲಿ ಆರೋಗ್ಯವಿದೆಯೆಂದು ತಿಳಿಯಿರಿ. "ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ" ಎಂದು ಹೇಳಿರುವುದರಿಂದ ಮನಸ್ಸಿಗೂ ದೇಹಾದಿ ಇಂದ್ರಿಯಗಳಿಗೂ ನಿಕಟ ಸಂಬಂಧವಿದೆಯೆಂದು ಕಂಡುಬರುತ್ತದೆ. ಆದುದರಿಂದ ಸರ್ವಥಾ ಇಂದ್ರಿಯಗಳಿಗೆ ವಶರಾಗದೆ ಮನಸ್ಸನ್ನು ಸ್ವಾಧೀನದಲ್ಲಿರಿಸಿಕೊಂಡರೆ ಯಾವ ಆದಿವ್ಯಾಧಿಗಳೂ ಇಲ್ಲದೆ ನಿತ್ಯವೂ ಆರೋಗ್ಯವಂತರಾಗಿ ಬಾಳುವುದರಲ್ಲಿ ಏನೇನೂ ಅನುಮಾನವಿಲ್ಲ.

ಪಂಚಭೂತಗಳು

ಸೃಷ್ಟಿ ಕ್ರಮದಲ್ಲಿ ಗಾಳಿ—ಚಳಿ—ಬಿಸಿಲು—ಮಳೆಗಳು ಎಷ್ಟು ಮಹತ್ವದ ಕಾರ್ಯವನ್ನು ಮಾಡುತ್ತವೆ ಎಂಬುದು ಪ್ರತಿಯೊಬ್ಬನಿಗೂ ತಿಳಿದೇ ಇದೆ. ಒಂದು ಬೀಜವು ನೆಲಕ್ಕೆ ಬಿದ್ದರೆ ಮಳೆ ಬಂದ ಕೂಡಲೇ ಅದು ಭೂಮಿ-ನೀರುಗಳ ಸಂಯೋಗದಿಂದ ಮೊಳೆತು ಗಿಡವಾಗಿ ಗಾಳಿ ಪ್ರಕಾಶಗಳಿಂದ ಬೆಳೆದು ಹೂಬಿಟ್ಟ ಕೂಡಲೇ ಅದರಲ್ಲಿಯ ಸುಗಂಧವನ್ನು ಗಾಳಿಯು ಎಲ್ಲೆಡೆಗಳಲ್ಲಿಯೂ ಬೀರಿ ಭ್ರಮರಗಳ ಮನಸ್ಸನ್ನಾಕ್ರಮಿಸಿ ಬೀಜೋತ್ಪತ್ತಿಯಾಗಿ ಕಾಯಿಯಾದ ಮೇಲೆ ಕ್ರಮೇಣ ಬೆಳೆದು, ಚಳಿ, ಗಾಳಿ, ಬಿಸಿಲುಗಳಿಂದ ಪರಿಪಕ್ವವಾಗಿ ಸಂತರ ಸಂತಾನೋತ್ಪಾದನೆಗೆ ಸಿದ್ಧವಾಗುವದು. ಇದೇ ರೀತಿಯಲ್ಲಿ ಉಪಯುಕ್ತವಾದ ಚಳಿ, ಗಾಳಿ, ಬಿಸಿಲು, ಮಳೆಗಳು ಮನುಷ್ಯನ ದೇಹಕ್ಕೂ ಬೇಕೆಂಬುದು ನಿರ್ವಿವಾದ. ಆದರೆ ಮಿತಪ್ರಮಾಣದಲ್ಲಿ ಮತ್ತು ಮನುಷ್ಯನ ಶಕ್ತ್ಯಾನುಸಾರವಾಗಿರಬೇಕು. ಅವುಗಳು ಅವನ ವಿಶಿಷ್ಟ ಮರ್ಯಾದೆಯನ್ನು ಮೀರಿದರೆ ಅವನೂ ರೋಗಪೀಡಿತನಾಗುತ್ತಾನೆ. ಆದುದರಿಂದ ತನಗೆ ಅಪಾಯವಾಗದಂತೆ ಮಳೆ, ಗಾಳಿ, ಚಳಿ, ಬಿಸಿಲುಗಳಿಂದ ತನ್ನ ಆರೋಗ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಮನುಷ್ಯನು ವಸ್ತ್ರವನ್ನು ತನ್ನ ದೇಹಕ್ಕೆ ಸರಿಯಾಗುವಂತೆ ಧರಿಸಿಕೊಳ್ಳ ಬೇಕು. ಉಡುಪನ್ನು ಉಪಯೋಗಿಸುವುದರಿಂದ ಚಳಿ, ಗಾಳಿ ಮೊದಲಾದುವುಗಳನ್ನು ನಿವಾರಿಸುವುದಕ್ಕೂ ಶರೀರ ಸಂರಕ್ಷಣೆಗೂ ಮರ್ಯಾದೆ ಗೌರವವನ್ನು ಕಾಪಾಡುವುದಕ್ಕೂ ಅತೀ ಅಗತ್ಯವಿದೆ. ಬೇರೆ ಬೇರೆ ದೇಶಗಳ ವಾತಾವರಣಗಳಿಗನುಸಾರವಾಗಿ ಉಡುಪುಗಳನ್ನು ಬದಲಾಯಿಸುವ ಪದ್ಧತಿ ಹೊರತು ಜಾತಿ ಮತ ಪಂಗಡಗಳ ವಿಂಗಡಕ್ಕಾಗಿ ಉಡುಪುಗಳ ಬದಲಾವಣೆಯಿಲ್ಲವೆಂಬುದನ್ನೂ ಮರೆಯಬೇಡಿರಿ. ಒಂದು ದೇಶದ ಉಡುಪು ವ ಉಡುವ ಪದ್ಧತಿಗಳು ಮತ್ತೊಂದು ದೇಶದಲ್ಲಿ ನಿರುಪಯೋಗವಾಗುತ್ತವೆ. ಆಯಾಯಾ ದೇಶಕ್ಕೆ ತಕ್ಕಂತೆ ಉಡುಪನ್ನು ಧರಿಸದಿದ್ದರೆ ಅಪಾಯ ಸಂಭವಿಸುವುದೂ ಉಂಟು. ದೇಶಕ್ಕೆ ತಕ್ಕ ವೇಷವನ್ನು ಮಾಡಿಕೊಂಡರೆ ಸಾಲದು. ಆಯಾಯ ಕಾಲದ ಹವಾಮಾನಕ್ಕೆ ಬೇಕಾದಂತೆ ಉಡುಪುಗಳನ್ನು ಬದಲಾಯಿಸಿಕೊಳ್ಳ ಬೇಕೆಂಬುದನ್ನು ಮರೆಯಬೇಡಿರಿ. ಮನುಷ್ಯನು ತಾನು ಧರಿಸುವ ತನ್ನ ಉಡುಪನ್ನು ತನ್ನ ಉದ್ಯೋಗಕ್ಕನುಸಾರವಾಗಿಯೂ ಬದಲಾಯಿಸಿಕೊಳ್ಳ ಬೇಕೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳ ಬೇಕು.

ಪರಿಶುದ್ಧತೆ

ಪ್ರವಾಹಗಳು ಯಾವ ಕಾರಣಗಳಿಂದ ಹರಿಯುತ್ತವೆಯೋ ಮಂದ ಮಾರುತನು ಯಾವ ಅಂತಃಶಕ್ತಿಯಿಂದ ಪ್ರೇರಿತನಾಗಿ ಬೀಸುತ್ತಿರುವನೋ, ಸೂರ್ಯ ಚಂದ್ರ ಮೊದಲ್ಗೊಂಡು ಗ್ರಹಗಳು ಯಾವ ಶಕ್ತಿಯಿಂದ ಚಲಿಸುತ್ತವೋ ಅಂತಹ ಶಕ್ತಿಯೇ ಜಗತ್ತಿನ ಸೂತ್ರಧಾರಿ ಭುವನ ಭವನಗಳನ್ನು ಹೊತ್ತು ನಿಂತಿರುವ ಮೇರು ಪರ್ವತವು ಪ್ರೇಮ ಸಾಹಿತ್ಯದ ಕೃತಿಯೊಂದು ಅಂತರ್ವ್ಯಾಪ್ತಿಯತೆಯನ್ನು ಪಡೆಯಬೇಕಾಗಿದ್ದರೆ ಪ್ರೇಮವನ್ನು ಕವಿಯು ತನ್ನ ಪ್ರತಿಭೆಯಿಂದ ಹೊರಸೂಸಿದ್ದಿರಬೇಕು. ಅಂತರಾತ್ಮನೇ ಪ್ರೇಮವು. ಯಾವ ಸಂಘ ಸಮೂಹಗಳೇ ಆದರೂ ಪ್ರೇಮದ ನೆಲಗಟ್ಟಿನ ಮೇಲೆ ನಿಂತರೆ ಅದು ಬಹುಕಾಲ ನೆಗಣಿಯ ಹುಳಗಳಂತೆ ಸಾವಿಲ್ಲದೆ ಬಾಳುವುದು. ಪ್ರೇಮದಿಂದಲೇ ಹೊರತು ಸುಖವಾಗಿ ಜೀವಿಸಲು ಬೇರೊಂದು ದಾರಿಯಿಲ್ಲ. ಪ್ರತೀ ಒಬ್ಬನ ಹೃದಯವು ಶುದ್ಧವಾಗಿರಬೇಕು. ಹೀಗೆ ಶುದ್ಧವಾಗಿರಬೇಕಾದರೆ ಬಾಹ್ಯ ಶುದ್ಧಿಯು ಅತ್ಯಾವಶ್ಯಕ. ಸ್ನಾನ, ವಸ್ತ್ರಭೂಷಣಗಳು—ಪ್ರಸನ್ನ ವದನವು ಬಾಹ್ಯ ಶುದ್ಧಿಗೆ ಅವಶ್ಯಕವು. ನಿರೋಗಿಯಾದ ಮನಸ್ಸೂ ಶರೀರವೂ ಇದ್ದಲ್ಲಿಯೇ ಪ್ರಸನ್ನತೆಯುಳ್ಳದ್ದಾಗುವುದೆಂಬುದನ್ನು ಮರೆಯಬೇಡಿರಿ.

ಈ ಮೇಲಿನ ಎಲ್ಲಾ ವಿಚಾರಗಳನ್ನು ಸಾಹುಕಾರರು ವಿಚಾರಕ್ಕೆ ತಂದುಕೊಂಡು ಅವರ ಆರೋಗ್ಯವನ್ನು ಬೆಳಿಸುವುದಕ್ಕಾಗಿ ಪ್ರಯತ್ನ ಪಟ್ಟು ಆರೋಗ್ಯವಂತರಾಗಿ ಬಾಳಿದರೆ ಅವರು ಗಳಿಸುವ ಐಶ್ವರ್ಯವನ್ನು ಸುಖವಾಗಿ ಅನುಭವಿಸಬಹುದು. ದೇಹವನ್ನು ಆರೋಗ್ಯಕ್ಕಾಗಿ ಅವರೆಷ್ಟು ಜಾಗರೂಕರಾಗಿ ನೋಡಿಕೊಳ್ಳ ಬೇಕೊ ಅದರಂತೆಯೇ ಅವರ ವಾಸದ ಮನೆ, ವ್ಯಾಪಾರದ ಭಂಡಸಾಲೆ, ಮಳಿಗೆ ಅಂಗಡಿಗಳನ್ನೂ ಜಾಗ್ರತೆಯಲ್ಲಿ ನೋಡಿಕೊಳ್ಳಲೇ ಬೇಕು. ಹಾಗೆ ನೋಡಿಕೊಳ್ಳದ ಹೊರತು ಅವರಿಂದ ನಿರೋಗದಿಂದಿರಲು ಸಾಧ್ಯವಿಲ್ಲ. ಅವರ ಮನೆ, ಭಂಡಸಾಲೆ, ಮಳಿಗೆ ಅಂಗಡಿಗಳಲ್ಲಿ ನೂರಾರು ಪ್ರಾಣಿಗಳು ಜೀವಿಸಿಕೊಂಡಿರುತ್ತವೆಂಬುದು ಅವರೆಲ್ಲರ ಅನುಭವದ ಮಾತು. ಇಂತಹ ಪ್ರಾಣಿಗಳು ಕಟ್ಟಡಗಳಲ್ಲಿ ಹಿತ್ತಲು ತೋಟಗಳಲ್ಲಿ ಮೂಲೆ ಗುಂಪುಗಳಲ್ಲಿ ಸತ್ತುಬಿದ್ದು ಅಲ್ಲಿಯೇ ಕೊಳೆತು ಆ ದುರ್ವಾಸನೆಯು ವಾತಾವರಣದಲ್ಲಿ ಸೇರಿ ಅಲ್ಲಿ ಕ್ರಿಮಿಗಳಾಗಿ ಬದಲಾದ ವಾತಾವರಣದಿಂದ ದೋಷದೂಷಿತವಾಗಿ ರೋಗವು ಪ್ರಾಪ್ತವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ಕುರಿತು ಅವರು ತುಂಬಾ ಮುಂಜಾಗ್ರತೆಯನ್ನು ತೆಗೆದುಕೊಳ್ಳುವುದು ಅವಶ್ಯವಿದೆ. ಅವರು ವ್ಯಾಪಾರ ಮಾಡುತ್ತಿರುವ ಸ್ಥಳ ಹಾಗೂ ವಾಸಿಸುವ ಮನೆಯ ಮುಂದ್ಗಡೆಯ ರಸ್ತೆಯಲ್ಲಿ ವಾಹನ ಇತ್ಯಾದಿಗಳ ಚಲಾವಣೆಯಿಂದಾಗಿ ಏಳುತ್ತಿರುವ ಧೂಳಿ ಧೂಸರಗಳ ಕಡೆಗೂ, ಮನೆ ಬಾಗಲುಗಳಲ್ಲಿರುವ ಕೊಳಕ. ನೀರು ಹರಿಯುತ್ತಿರುವ ಚರಂಡಿಗಳ ಗಡೆಗೂ ಲಕ್ಷ್ಯಕೊಟ್ಟು ಮುಂಜಾಗ್ರತೆಯನ್ನು ತೆಗೆದುಕೊಳ್ಳ ಬೇಕು. ಹಾಗೆ ಮಾಡದ ಹೊರತು ಭಯಂಕರ ರೋಗಗಳನ್ನು ಅವರು ತಡೆಯಲಾರರೆಂಬದನ್ನು ಮರೆಯಬೇಡಿರಿ. ಈ ತರದ ಮುಂಜಾಗ್ರತೆಯನ್ನು ಅವರು ತೆಗೆದುಕೊಳ್ಳದಿದ್ದರೆ ಭಯಂಕರ ರೋಗಗಳನ್ನು ಅವರೂ ಅವರ ಸಂತತಿ ಮತ್ತು ಆಸುಪಾಸಿನವರೂ ಅನುಭವಿಸಬೇಕಾದೀತೆಂಬುದನ್ನು ಮರೆಯಬಾರದು.

ವ್ಯಾಪಾರಸ್ಥರು ಐಶ್ವರ್ಯವನ್ನು ಗಳಿಸುವುದರೊಂದಿಗೆ ಆರೋಗ್ಯವನ್ನೂ, ಆರೋಗ್ಯದೊಂದಿಗೆ ಸಂಪತ್ತನ್ನೂ ಗಳಿಸಿ, ಸುಖಸಂತೋಷದಿಂದಿರುವದಲ್ಲದೆ ಅವರ ಸಂತಾನಪರಂಪರೆಯವರೂ ಸುಖವಾಗಿರುವಂತೆ ಮಾಡಲು "ಮುನಿಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡುಗಳಿಗೆ ತೀರ್ವೆ ತೆರುತ್ತೇವೆ. ಇಲಾಖಾ ಆರೋಗ್ಯ ಖಾತೆಯವರು ನಮ್ಮ ಆರೋಗ್ಯದ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ" ರೆಂದು ತಿಳಿದು ನಮ್ಮ ಆರೋಗ್ಯದ ಭಾರವನ್ನು ಆರೋಗ್ಯ ಇಲಾಖೆಯವರ ಮೇಲೆ ಹೊರಿಸಿಕೊಂಡಿರುವುದರಲ್ಲಿ ಅರ್ಥವಿಲ್ಲ. ಆರೋಗ್ಯ ಖಾತೆಯವರೊಂದಿಗೆ ಸಾಹುಕಾರರೂ ಸೇರಿ ಇಲಾಖೆಯವರನ್ನು ನಿದ್ರೆಯ ಮಬ್ಬಿನಿಂದ ಹೊಡೆದೆಬ್ಬಿಸಿ ಊರು, ಪೇಟೆ, ಪಟ್ಟಣ, ಹಳ್ಳಿ, ಮೂಲೆ, ಬೀದಿ, ಓಣಿ ಕೇರಿಗಳನ್ನು ಸ್ವಚ್ಛವಾಗಿಡುವಂತೆ ಪ್ರಯತ್ನಪಟ್ಟರೆ, ಎಲ್ಲರೂ ಆರೋಗ್ಯದಿಂದಿರಲು ಸಾಧ್ಯವಿದೆ.

ನಾಡಿ ಬಡಿತ

	ಮಿನಿಟಗೆ		ಮಿನಿಟಗೆ
ಗರ್ಭದಲ್ಲಿ	140—150	ಪ್ರಾಯಸ್ಥನಾದಾಗ	72
ಶಿಶು	100—140	ವೃದ್ಧಾಪ್ಯ	75—80
ಬಾಲ್ಯ	80—100		



ದ್ವಿತೀಯ ಮಹಾ ಯುದ್ಧದ ವೆಚ್ಚಗಳು

ದಿನಕ್ಕೆ ಹದಿನಾರು ಮಿಲಿಯ ಪವನು!

ದ್ವಿತೀಯ ಮಹಾ ಯುದ್ಧದಲ್ಲಿ ಬ್ರಿಟ್ಟೆನು ದಿನಕ್ಕೆ ಹದಿನಾರು ಮಿಲಿಯ ಪವನನ್ನು ವ್ಯಯಿಸುವ ಮಟ್ಟಕ್ಕೆ ಬಂದಿದೆ. ಜರ್ಮನಿಯು, ತನ್ನ ರಾಷ್ಟ್ರೀಯ ವರಮಾನದ ಸೇಕಡಾ 60ರಷ್ಟನ್ನು ವ್ಯಯಿಸುತ್ತಿದೆ. ಇದರ ಪರ್ಯಾವಸಾನವೇಂದು?

ಬ್ರಿಟ್ಟಿನಿಗೆ ಬಂದಿರುವ ಕೆನಡಾ ರೊಯಲ್ ಏರ್‌ಫೋರ್ಸಿನ ಕೆಲವು ವೈಮಾನಿಕರು. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಗಳಿಂದ ಬ್ರಿಟ್ಟಿನಿಗೆ ಉತ್ತಮ ಸೈನಿಕರು ಬಂದು ಸೇರುತ್ತಿರುವರು.

ಪ್ರಕೃತದ ಯುದ್ಧದಲ್ಲಿ, ಜರ್ಮನರು ವರುಷಕ್ಕೆ 4,000,000,000 ಪೌಂಡುಗಳಂತೆ ವ್ಯಯ ಮಾಡುತ್ತಾರೆ. ಆದರೆ ಬ್ರಿಟಿಷರು ವರ್ಷಕ್ಕೆ 3,000,000,000 ಪೌಂಡುಗಳಂತೆ ವೆಚ್ಚ ಮಾಡುತ್ತಾರೆ. ಈ ವೆಚ್ಚವನ್ನು ಸಾಧಾರಣ ಅಂದಾಜಿನ ಮೇಲೆ ಕಂಡುಹಿಡಿದಿರುತ್ತಾರೆ.

ಜರ್ಮನ ಆಫೀಸರರು ಪ್ರಚಾರ ಮಾಡುತ್ತಿರುವ ಕೆಲವು ಅಂಕೆ ಸಂಖ್ಯೆಗಳ ಆಧಾರದಿಂದಲೂ, ಜರ್ಮನಿಯು ಇತರ ಬೇಂಕುಗಳಿಂದ ತೆಗೆದುಕೊಂಡ ಸಾಲದ ಆಧಾರಗಳಿಂದಲೂ, ಅವರ ಯುದ್ಧದ ವೆಚ್ಚವನ್ನು ಕಂಡುಹಿಡಿಯಲಾಗಿದೆ. ಜರ್ಮನಿಯ ಉತ್ಪತ್ತಿಯ ಶೇಕಡಾ 60ರಷ್ಟು ಈ ಖರ್ಚು ಏರಿದೆ ಎಂದು ಅಂದಾಜು ಮಾಡಲಾಗಿದೆ.

ಏಕ್ಸಿಸ್ ರಾಷ್ಟ್ರಗಳು ಜಯಿಸಿದ ರಾಷ್ಟ್ರಗಳ ಯುದ್ಧ ವೆಚ್ಚಗಳನ್ನು ಕೂಡಿಸಿದರೆ ವರುಷಕ್ಕೆ ಇದು 5,000,000,000 ಪೌಂಡುಗಳಾಗಬಹುದು ಎಂದೂ ನಿರ್ಧರಿಸಲಾಗಿದೆ.

ಬ್ರಿಟಿಷರಿಗೆ ಸಾಮಂತ ರಾಷ್ಟ್ರಗಳಿಂದಲೂ. ಯುನೈಟೆಡ್ ಸ್ಟೇಟ್ಸಗಳಿಂದ ಬರಬಹುದಾದ ಸಹಾಯಗಳನ್ನು ಈ ವೆಚ್ಚಗಳಿಗೆ ಕೂಡಿಸಬೇಕಾಗುತ್ತದೆ.

ಆದರೆ ಬ್ರಿಟಿಷರಿಗೆ ಬರುವ ಸಹಾಯಗಳಿಗೂ ಜರ್ಮನಿಯವರಿಗೆ ಬರುವ ಸಹಾಯಗಳಿಗೂ ಅಜಗಜಾಂತರದ ವ್ಯತ್ಯಾಸವಿದೆ.

ಬ್ರಿಟಿಷರು ಧನಸಂಗ್ರಹಕ್ಕಾಗಿ ಇನ್ನೂ ಇನ್ನೂ ಯತ್ನ ಮಾಡುತ್ತಿರುವರು. ಪ್ರಕೃತ ಸಾಮಾಗ್ರಿಗಳ ಬೆಲೆಯನ್ನು ಎಣಿಸುವಾಗ, ಬ್ರಿಟನ್ನಿನ ವೆಚ್ಚದ, 1,000,000,000 ಪೌಂಡುಗಳಲ್ಲಿ ಶೇಕಡಾ 30ರಷ್ಟು, ವ್ಯಯವು ಹೆಚ್ಚಾಗಿದೆ ಎಂದು ನಿರ್ಧರಿಸಲಾಗಿದೆ.

ಆದರೆ ದೇಶದ ಉತ್ಪತ್ತಿಯನ್ನು ಹೆಚ್ಚಿಸಿದರೆ ಇದನ್ನು ತಡೆಯಬಹುದೆಂದು ಭರವಸೆಯುಂಟಾಗುತ್ತದೆ. ಈವರೆಗೆ ಗಮನಕೊಡದಂತಹ ಕೈಗಾರಿಕೆಗಳಿಗೂ ವ್ಯವಸಾಯಕ್ಕೂ ಕೈಕೊಡಬೇಕಾಗುತ್ತದೆ.


ಈ ದ್ವಿತೀಯ ಮಹಾ ಯುದ್ಧದಲ್ಲಿ ಆಗುತ್ತಿರುವ ವ್ಯಯವು ಪ್ರಪಂಚದ ಇತಿಹಾಸದಲ್ಲಿ ಹಿಂದೆಂದೂ ಜರಗಿಲ್ಲವೆನ್ನುವರು. ಕಳೆದ ಮಹಾ ಯುದ್ಧದಲ್ಲಿ ಬ್ರಿಟಿಷರ ಯುದ್ಧ ವೆಚ್ಚವು ದಿನಕ್ಕೆ ಒಂಭತ್ತು ಮಿಲಿಯ ಪವನಿನವರೆಗೆ ಮುಟ್ಟಿತ್ತು ಎನ್ನುವರು. ಈ ಸಂಖ್ಯೆ ಕೂಡಾ ಯುದ್ಧದ ನಾಲ್ಕನೇ ವರುಷದಲ್ಲಿ! ಆದರೆ, ಈ ಜಾರಿಯ ಯುದ್ಧದಲ್ಲಿ, ದ್ವಿತೀಯ ವರುಷಾರಂಭದಲ್ಲೆ ದಿನಕ್ಕೆ 16 ಮಿಲಿಯ ಪವನುಗಳನ್ನು ಬ್ರಿಟ್ಟನು ವ್ಯಯಿಸುತ್ತಿದೆಯೆಂದು ಹೇಳಲಾಗಿದೆ.

ಜರ್ಮನಿಯ ಯುದ್ಧವೆಚ್ಚವಾದರೂ ಕಡಿಮೆಯಿಲ್ಲ. ಬ್ರಿಟ್ಟೆನಿಗಿಂತ ಜರ್ಮನಿಯೇ ಹೆಚ್ಚು ವ್ಯಯಿಸುತ್ತಿದೆಯಂತೆ. ಜರ್ಮನಿಯ ರಾಷ್ಟ್ರೀಯ ವರಮಾನದ ಸೇಕಡಾ 60ರಷ್ಟು ಅಂಶವಿಂದು ಯುದ್ಧಕ್ಕೆ ವ್ಯಯವಾಗುತ್ತಿದೆಯೆಂದು ಒಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಖ್ಯಾ ವಿಶಾರದನೊಬ್ಬನು ಪ್ರಕಟಿಸಿರುವನು.

ಜರ್ಮನಿಯು ಈ ಎಲ್ಲಾ ವ್ಯಯವನ್ನು ತನ್ನ ಬೊಕ್ಕಸದಿಂದಲೇ ವಿನಿಯೋಗಿಸುತ್ತಿಲ್ಲ. ಅಧೀನ ರಾಷ್ಟ್ರಗಳಿಂದಲೂ ಹಣವೆತ್ತುತ್ತಿದೆ.

ವ್ಯಯವು ಕಡಿಮೆಯಾಗುವ ಬದಲು ಹೆಚ್ಚುತ್ತಿದೆ. ಯುದ್ಧ ದೆಸೆಯಿಂದ ಜನರ ಸಂಪಾದನೆಯು ಕಡಿಮೆಯಾಗುತ್ತಿದೆ. ಪ್ರಜೆಗಳು ತಮ್ಮ ಖರ್ಚುಗಳನ್ನು ಕಡಿಮೆಮಾಡುತ್ತಿರಲಿ; ಮತ್ತು ಅದನ್ನು ರಾಷ್ಟ್ರದ ರಕ್ಷಣೆಗೆ ಕೊಡುತ್ತಿರಲಿ— ಎಂದು ಬ್ರಿಟ್ಟೆನಿನ ಹಾಗೂ ಜರ್ಮನಿಯ ಮುಖಂಡರು ಸಾರುತ್ತಿದ್ದಾರೆ.

ಈ ವೆಚ್ಚಗಳ ಪರ್ಯಾವಸಾನವೆಂದು?



"ಪೆರೆಚ್ಯೂಟ್" ಎಂಬ ವಿಮಾನಕೊಡೆಗಳ ಮೂಲಕ ಸೈನಿಕರನ್ನು ಶತ್ರುವಿನ ನಡುವೆ ಇಳಿಸುವೆನೆಂದು ಜರ್ಮನಿಯು ಬೆದರಿಕೆ ಹಾಕುತ್ತಿದೆ. ಆದರೆ, ಬ್ರಿಟ್ಟೆನಿನಲ್ಲಿ ಈ "ಪೆರೆಚ್ಯೂಟ್" ಸೈನಿಕರನ್ನು ಕೂಡಲೇ ಹಿಡಿಯಲು ಯಾ ಕೋವಿಯಿಂದ ಕೊಲ್ಲಲು "ಪೆರೆಶೊಟ್" ವೀರರು ಸಿದ್ಧರಿರುವರು.

"ತ್ಯಾಗ!"

ಬರೆಹಗಾರ:—"ಮನು"

ರಾಧೆ ಹೊರಟು ಹೋದಳು. ಅನಿತ್ಯಲೋಕವ ತೊರೆದು ನಿತ್ಯಲೋಕಕ್ಕೆ ಹೋದಳು. ಚಿನ್ನಪ್ಪ ತನ್ನೆದೆಯ ಬೆಳಕು ನೊಂದಿತೆಂದುಕೊಂಡ. ಜೀವನ ನೀರಸವೆನಿಸಿತು. ಆದರೆ ಜೀವ ಸಿಗುವಂತಿರಲಿಲ್ಲವಗೆ. ರಾಧೆ ಹೋಗುವಾಗ, "ನನಗಾಗಿ ಮರುಗದಿರಿ. ನನ್ನ ಮರೆಯಿರಿ. ನೀಲಿಯನ್ನ ನಿಮ್ಮ ಕೈಯಲ್ಲಿ ಅರ್ಪಿಸಿರುವೆನು. ಅವಳ ಸುಖವೇ ನಿಮ್ಮ ಬಾಳಿನ ಗುರಿಯಾಗಿರಲಿ" ಎಂದು ಕೈಜೋಡಿಸಿ ಬೇಡಿಕೊಂಡಿದ್ದಳು. ಅದನ್ನಾತ ಎಂದೂ ಮರೆವಂತಿಲ್ಲ. ಆದುದರಿಂದ ನೀಲಿಗಾಗಿ–ರಾಧೆಯ ಕೊನೆಯಾಸೆಯನ್ನು ನೆರವೇರಿಸುವುದಕ್ಕಾಗಿ ಅವನು ಜೀವಿಸಬೇಕಾಗಿತ್ತು. ರಾಧೆಗೆ ಅವನ ಮೇಲಿದ್ದ ಪ್ರೇಮವಿಶ್ವಾಸಗಳೇ ಅಷ್ಟು.

ರಾಧೆಯ ವಿವಾಹಿತ ಪತಿ ರಂಗಪ್ಪ. ರಂಗಪ್ಪನ ವಯಸ್ಸು 48ಕ್ಕೆ ಮೀರಿದ್ದರೂ ಅವನ ಹಣ–ಕಾಸುಗಳಿಗೆ ಮನಸೋತು ಗೌರಿ ತನ್ನ ಮಗಳನ್ನವಗೆ ಧಾರೆಯೆರೆದಿದ್ದಳು. ಆದರೆ ರಾಧೆಗೆ ಮಾತ್ರ ರಂಗಪ್ಪನ ಹಣಕಾಸು ಮೆಚ್ಚಿಗೆಯಾಗಲಿಲ್ಲ. ಅವಳಿಗವನ ಕಳೆಗೆಟ್ಟು ಒಳಸೇರಿದ್ದ ಕಣ್ಣು–ಕೆನ್ನೆಗಳು, ಕರಿಬಣ್ಣದ ಮುಂದೆದ್ದು ಬಂದು ಗಲ್ಲಿವ ಮುಚ್ಚಲೆತ್ನಿಸುತಿದ್ದ ಹಲ್ಲುಗಳು, ಎಲುಬುಗೂಡಿನಂತಿದ್ದ ದೇಹ, ಅವನ ಮೇಲೆ ಜಿಗುಪ್ಸೆ ಉಂಟಾಗುವಂತೆ ಮಾಡಿದ್ದುವು.

ರಂಗಪ್ಪನಿಗೆ, ಮೊದಲ ಹೆಂಡತಿಯ, ಚಿನ್ನಪ್ಪನೆಂಬ ಮಗನಿದ್ದನು. ಅವನಿಗೆ ಸುಮಾರು 22 ವಯಸ್ಸು, ಹರೆಜವ್ವನದ ಕಳೆತುಂಬಿದ್ದ ಜೀವ. ಅವನ ತುಂಬಿದ ಮುಖ, ಹೊಳಪುಳ್ಳ ಕಣ್ಣುಗಳು, ರಾಧೆಯ ಹೃದಯವ [illegible]ಟದಿಂದಲೇ ಇರಿಯತೊಡಗಿದ್ದುವು.

ಚಿನ್ನಪ್ಪನಿಗೂ ರಾಧೆಯನ್ನು ನೋಡಿದಂದಿನಿಂದ ಅವಳ ಮೇಲೊಂದು ವಿಧವಾದ ಮರುಕ–ಸಹಕಾಸ. ಅವಳೆಲ್ಲೆಲ್ಲೋ ಮೂಲೆಯಲ್ಲಿ ಕುಳಿತು ಕಣ್ಣೀರು ಸುರಿಸುವುದು ಅವನಿಗೆ ಸೇರುತ್ತಿದ್ದಿಲ್ಲ. ಅವಳವನನ್ನು ನೋಡಿದಾಗಲೆಲ್ಲ ಅವಳ ಕಣ್ಣುಗಳು ಅವನೊಡನೆ ಏನೇನೋ ಹೇಳುತ್ತಿರುವಂತೆ ಭಾಸವಾಗುತಿತ್ತವಗೆ.

ಹೇಗೆ ಅದೊಂದು ವಿಚಿತ್ರ ಶಕ್ತಿ, ಅದೃಶ್ಯತಂತು ಅವರೀರ್ವರ ಹೃದಯಗಳ ವಿಚಿತ್ರ ರೀತಿಯಿಂದ, ಗುಪ್ತವಾಗಿ ಒಂದುಗೂಡಿಸುತಿತ್ತು–ಬಲವಾಗಿ ಬಿಗಿಯುತಿತ್ತು.

ಒಂದು ಮುಸ್ಸಂಜೆ ಚಿನ್ನಪ್ಪ ಹಿತ್ತಿಲ ಕೊಳದಲ್ಲಿ ಎತ್ತುಗಳ ಮೈ ತೊಳೆಯುತ್ತಲಿದ್ದ. ಕಿರುಗೀತವೊಂದನ್ನು ಹಾಡುತಲ್ತಿದ್ದ. ಹಾಡು ಮುಗಿದೊಡನೆ ಕೊಳದ ದಡದಲ್ಲಿನ ಬೇಲಿಯಲ್ಲಿ ಸರಸರ ಸದ್ದಾಯಿತು. ಆಶ್ಚರ್ಯಗೊಂಡು ಚಿನ್ನಪ್ಪ ಮೊಗವನ್ನೆತ್ತಿ ನೋಡಿದ. ಕರಿಬಟ್ಟೆಯಿಂದ ದೇಹವನ್ನು ಕವಿದಿದ್ದ ವ್ಯಕ್ತಿಯೊಂದು ಅವಸರವಸರವಾಗಿ ಹೋಗುತಲಿತ್ತು. "ಯಾರವರು" ಚಿನ್ನಪ್ಪ ಕೇಳಿದ. ನಿರುತ್ತರ; ಬದಲಾಗಿ ವ್ಯಕ್ತಿ ಓಡತೊಡಗಿತು. ಚಿನ್ನಪ್ಪನ ಕುತೂಹಲ ಬೆಳೆಯಿತು. ಕಣ್ಣು ತೆರೆಯುವುದೊಳಗಾಗಿ ಅವನು ಆ ವ್ಯಕ್ತಿಯ ಬೆನ್ನು ಹತ್ತಿದ ವ್ಯಕ್ತಿ ಗಾಬರಿಗೊಂಡು ನಿಂತಿತು, ಮೊಗದಿಂದ ಬಟ್ಟೆ ಜಾರಿತು. ಚಿನ್ನಪ್ಪನಿಗೆ ಝುಮ್ಮೆಂದಿತು. ವ್ಯಕ್ತಿ ರಾಧೆಯಾಗಿದ್ದಳು. ನಾಚಿಕೆಯಿಂದಲೋ, ಗಾಬರಿಯಿಂದಲೋ ಗಡಗಡನೆ ನಡುಗುತ್ತಲಿದ್ದಳು. ಕ್ಷಣಹೊತ್ತು ನಿಶ್ಶಬ್ದ.

"ತಪ್ಪಾಯಿತು—" ಚಿನ್ನಪ್ಪ ಮೆಲುದನಿಯಲ್ಲಂದು ಹಿಂದಿರುಗಿದ.

ರಾಧೆ ಉತ್ತರವೀಯಲಿಲ್ಲ. ಮುಖವೆತ್ತಿ, ಚಿನ್ನಪ್ಪನನ್ನೊಮ್ಮೆ ನೋಡಿದಳು ಮಾತ್ರ.

ಚಿನ್ನಪ್ಪ ಹತ್ತು ಗಾವುದ ಮುನ್ನಡೆದಿದ್ದ.

"ಚಿನ್ನಪ್ಪಾ—ಇಲ್ಲ, ಇಲ್ಲ–" ರಾಧೆ ಗೊಣಗಿದಳು.

ಚಿನ್ನಪ್ಪನಿಗೆಲ್ಲ ತಿಳಿಯಿತು. ತುಸು ಬೆದರಿದ. ಆದರೆ ಎರಡು ಹೆಜ್ಜೆ ಹಿಂಜರಿದ.

"ಇಲ್ಲ—ಹೋಗು—ಕ್ಷಮಿಸು—" ರಾಧೆ ನಡುಗುವ ದನಿಯಲ್ಲಂದಳು.

ಪುನಃ ಕ್ಷಣಹೊತ್ತು ನಿಸ್ಸದ್ದು.

ಸಹತಾಪ. ನಲ್ಮೆತುಂಬಿದ ನೋಟದಿಂದೊಮ್ಮೆ ರಾಧೆಯ ನೋಡಿ ಚಿನ್ನಪ್ಪ ಕೊಳದೆಡೆಗೆ ಓಡಿದ. ರಾಧೆಯ ಹೃದಯ ಬಿರಿಯಿತು, ಅವಳು ಗಳಗಳನೆ ಅಳತೊಡಗಿದಳು.

ಮುಂದೆ ಐದಾರು ದಿನಗಳು ಸಂದುವು. ರಾಧೆ ಒಮ್ಮೆಯಾದರೂ ಚಿನ್ನಪ್ಪನನ್ನು ಮುಖವೆತ್ತಿ ನೋಡಲಿಲ್ಲ. ನೋಡುವ ಧೀರತನವವಳಿಗುಂಟಾಗಲಿಲ್ಲ. ಚಿನ್ನಪ್ಪನಿಗೆ ಮಾತ್ರ ಅವಳೊಡನೆ ಮಾತನಾಡುವ ಹಂಬಲ ಕ್ಷಣಕ್ಷಣಕ್ಕೂ ಹೆಚ್ಚುತಲಿತ್ತು. ಅವನೀಗೆ ಫಲಿಸಿತು. ಅನಿರೀಕ್ಷಿತವಾಗಿ ಕೊಳದ ದಂಡೆಯಲ್ಲಿ ರಾಧೆಯೊಬ್ಬಳೇ ಕುಳಿತಿರುವುದು ನೋಡಿದ ಚಿನ್ನಪ್ಪ. ರಾಧೆಯೂ ಚಿನ್ನಪ್ಪನನ್ನು ನೋಡಿದಳು. ಮಿಂಚಿನ ವೇಗದಲ್ಲಿ ಚಿನ್ನಪ್ಪ ರಾಧೆಯನ್ನು ತನ್ನ ತೋಳಸೆರೆಯಲ್ಲಿ ಬಂಧಿಸಿದ. ಅವಳ ಮುಖದಲ್ಲಿ ಮುಖವಿರಿಸಿದ

ಮತ್ತೆರಡು ದಿನಗಳ ಮೇಲೆ ಆ ಹಳ್ಳಿಯಲ್ಲಿ ದೊಡ್ಡ ಗಲಭೆ. ರಂಗಪ್ಪ ನಂತೂ ಕೋಪದಿಂದ ನಡುಗುತ್ತಿದ್ದ. ರಾಧೆ ಚಿನ್ನಪ್ಪನೊಂದಿಗೆ—

ರಾಧೆ ಚಿನ್ನಪ್ಪನೊಂದಿಗೆ ಮಂಗಳೂರ ಕಿರುಬೀದಿಯೊಂದರಲ್ಲಿ ಹೋಗುತ್ತಿದ್ದಳು. ಈರ್ವರಲ್ಲೂ ಶಾಂತಿ-ತೃಪ್ತಿಗಳ ಬೆಳಕು ಬೆಳಗುತಿತ್ತು. ರಾಧೆ ತನ್ನೊಡನೆ ಒಂದೆರಡು ಆಭರಣಗಳನ್ನು ತಂದಿದ್ದುದರಿಂದ ಜೀವನಕ್ಕೆ ಅವರಿಗೇನೂ ಕೊರತೆಯೆನಿಸಲಿಲ್ಲ. ಕೆಲ ದಿನಗಳಲ್ಲೇ ಈರ್ವರೂ ಗಿರಣಿಯೊಂದರಲ್ಲಿ ಕೆಲಸ ದೊರಕಿಸಿಕೊಂಡರು. ಜೀವನವು ಅಮೃತಮಯವೆನಿಸಿತು.

ವರ್ಷವೊಂದು ಕ್ಷಣದಂತೆ ಕಳೆಯಿತು. ಕಾಲನಿಗೆ ಆ ಜಕ್ಕವಕ್ಕಿಗಳ ಪ್ರೇಮಗಾನ ರುಚಿಸಲಿಲ್ಲ. ಅವನು ತನ್ನ ಕರಿಗೈಯನ್ನು ರಾಧೆಯೆಡೆಗೆ ಚಾಚಿದ. ತನ್ನೊಡಲ ಪ್ರೇಮಕಾಣಿಕೆಯೆಂದು ನೀಲಿಯನ್ನ ಚಿನ್ನಪ್ಪನ ಕೈಯಲ್ಲಿತ್ತು ರಾಧೆ ಕೊನೆಯುಸಿರನೆಳೆದಳು.

ನೀಲಿಯೇ ಚಿನ್ನಪ್ಪನ ಜಗತ್ತು. ನೀಲಿಯೇ ಅವನ ಸರ್ವಸ್ವ. ಅವನಾಶೆ–ಆಕಾಂಕ್ಷೆಗಳೆಲ್ಲ ನೀಲಿಯ ನಗುಮೊಗವನ್ನು ನೋಡುವುದು. ನೀಲಿಯನ್ನು ಕ್ಷಣವೂ ಅಗಲಿರಲಾರನೀತ. ಗಿರಣಿಗೂ ತನ್ನ ಜೊತೆಯಲ್ಲೇ ಒಯ್ಯುತ್ತಿದ್ದ. ಗಿರಣಿಯ ಒಂದು ಮೂಲೆಯಲ್ಲಿ ಮಲಗಿಸುತಿದ್ದ. ಜೊತೆಗೊಬ್ಬ ಚಿಕ್ಕ ಹುಡುಗಿಯನ್ನೂ ಗೊತ್ತುಹಚ್ಚಿದ್ದ.

ಜೀವನದಲ್ಲಿ ಒಂದು ಗುರಿಯಿರಬೇಕು. ಅದನ್ನು ನೆರವೇರಿಸುವ ಹಟವಿರಬೇಕು. ಜೀವನದಲ್ಲಿ ಆಗ ಇರುವ ಆಸೆ, ಆನಂದ, ಹುರುಪು ಮತ್ತೆಂದೂ ಇರಲಾರದು. ಆಗ—ಗುರಿಯನ್ನು ಸೇರುವಾತುರದಲ್ಲಿ—ಮಾನವನಿಗೆ ಸುಖ ದುಃಖ, ಹಸಿವೆ, ನಿದ್ರೆಗಳ ಗಣನೆಯೇ ಇಲ್ಲ. ಚಿನ್ನಪ್ಪನಿಗೂ ಹಾಗೆಯೇ ಅನಿಸಿತ್ತು. ನೀಲಿಯ ಜೀವನವನ್ನು ಸುಖಮಯಗೊಳಿಸಬೇಕೆಂಬುದೊಂದೇ ಅವನಿಗೀ ಜಗತ್ತಿನಲ್ಲಿರುವ ಆಸೆ. ಆದರೆ ಮಾನವನ ಆಸೆ ಪೂರ್ಣವಾದುದೆಂದಾದರೂ ಇದೆಯೆ?

ಒಂದು ಬೆಳಗ್ಗೆ ಚಿನ್ನಪ್ಪ ನೀಲಿಯನ್ನೆತ್ತಿ ಗಿರಣಿಗೆ ಹೋದಾಗ [illegible]ಗೆಳೆಯರೆಲ್ಲರೂ ಗೇಟಿನ ಬಳಿಯಲ್ಲಿ ಗುಂಪುಗುಂಪಾಗಿ ನೆರೆದಿದ್ದರು. ಚಿನ್ನಪ್ಪನನ್ನು ಒಳಗೆ ಹೋಗಗೊಡದಾದರು ಚಿನ್ನಪ್ಪ ಬೆರಗುಗೊಂಡು ಕಾರಣವೇನೆಂದು ಕೇಳಿದ. "ಮುಷ್ಕರ— ಮುಷ್ಕರ—" ಎಂದುತ್ತರವಿತ್ತರು.

ಮುಷ್ಕರವೆಂದರೇನೆಂದು ಚಿನ್ನಪ್ಪನಿಗೆ ತಿಳಿಯದು. ಹಾಗೆಂದರೇನೆಂದು ಕೇಳಿದ. "ಕೆಲಸಕ್ಕೆ ಹೋಗಕೂಡದು."

"ಅದೇಕೆ?" "ಮುಷ್ಕರ!"

ಚಿನ್ನಪ್ಪ ತೀರಾ ವಿಚಾರಮಗ್ನನಾದ. ಕೆಲಸಕ್ಕೆ ಹೋಗಕೂಡದೆ? ಹಾಗಾದರೆ ಜೀವಿಸುವುದೆಂತು? ಮುಷ್ಕರವು ತನ್ನಂತಹರಿಗಲ್ಲವೆಂದುಕೊಂಡ ಚಿನ್ನಪ್ಪ. ಅದು ಹಣಕಾಸು ಇರುವವರಿಗೆ. ತಾನು ಕೆಲಸಕ್ಕೆ ಹೋಗಲೇಬೇಕು

ಶುಭ್ರ ಬಟ್ಟೆಗಳ ಧರಿಸಿದ್ದ ಯುವಕನೊಬ್ಬ ಆತನನ್ನು ತಡೆದ.

"ಕೆಲಸಕ್ಕೆ ಹೋಗಬಾರದೇನು? ಹಾಗಾದರೆ ಜೀವಸುವುದು ಹೇಗೆ?"

"ಈ ಮುಷ್ಕರವೇಕೆಂದು ತಿಳಿದಿರುವೆ? ನಿಮ್ಮೊಳಿತಿಗಾಗಿ. ಯುದ್ಧ ಭತ್ತೆಯನ್ನು ಹೆಚ್ಚಿಗೆ ಕೊಡುವುವೆಂದು ಗಿರಣಿ ಮಾಲಕರೊಪ್ಪುವ ವರೆಗೆ ನೀವು ಕೆಲಸಕ್ಕೆ ಹೋಗಕೂಡದು."

"ಅವರೊಪ್ಪುವರೇನು?" "ಒಪ್ಪದೆ ಬಿಡುವಂತಿಲ್ಲ."

ಚಿನ್ನಪ್ಪ ಹಿಂದಿರುಗಿದ.

ಏಳೆಂಟು ದಿನಗಳು ಕಳೆದರೂ ಮುಷ್ಕರ ನಿಲ್ಲಲಿಲ್ಲ. ಕೂಲಿಗಾರರ ಕೇಳಿಕೆಗೆ ಮಾಲಕರೊಪ್ಪಲಿಲ್ಲ. ಬಡವರ ಗೋಳನ್ನು ಮಾನಿಸುವಷ್ಟು ಹೇಡಿಗಳೇನು ಅವರು? ಚಿನ್ನಪ್ಪ ವಿಚಾರ ಮಗ್ನನಾದ. ಇನ್ನೊಂದೆರಡು ದಿನಗಳವರೆಗೆ ಮುಂದುವರಿದರೆ ಹೇಗೆ? ಎಷ್ಟು ದಿನಗಳ ವರೆಗೆ ಸಾಲಮಾಡಿ ಉಣ್ಣುತ್ತಿರಬಹುದು? ಅವನಿಗಾಗಿ ಮರುಗಲಿಲ್ಲ. ನೀಲಿಗಾಗಿ. ನೀಲಿ ದಿನೇ ದಿನೇ ಕೃಶವಾಗುತ್ತಿರುವಂತೆ ಅವನಿಗೆ

ಭಾಸವಾಯಿತು. ಹೃದಯ ನಡುಗಿತು. ಕೆಲಸಕ್ಕೆ ಹೋಗಲೇಬೇಕೆಂದವನು ನಿಶ್ಚಯಿಸಿದ. ಅವನಿಗಾಗಿ ಅಲ್ಲ, ನೀಲಿಗಾಗಿ. ಆದರೆ-? ಅವನೊಬ್ಬನಿಂದಾಗಿ ಹೆಚ್ಚು ದೊರೆಯಲಿರುವ ಕೂಲಿ ತಪ್ಪಿಹೋಗುವುದಾದರೆ? ಬಡವರಿಗಾಗಿ ಅವರು ಹೆಣಗಾಡುತ್ತಿರುವಾಗ ಅವನೊಬ್ಬ ವಿಚಾರವನ್ನಾತ ಮಾಡುತ್ತಿರುವುದೆ? ಚಿನ್ನಪ್ಪನ ಮನ ಹೊಯ್ದಾಡಿತು.

ಅಂದು ರಾತ್ರಿ ಕನ್ನಯ್ಯನವನ ಗುಡಿಸಲತ್ತ ಬಂದನು. ಇರ್ವರೂ ಹೊರಗೆ ಅಂಗಳದಲ್ಲಿ-ಬೆಳದಿಂಗಳಲ್ಲಿ ಕುಳಿತುಕೊಂಡರು. ಚಿನ್ನಪ್ಪ ತನ್ನೊಡಲ ಬೇಗೆಯ ಮನಕರಗುವಂತೆ ಕನ್ನಯ್ಯನ ಮುಂದೆ ತೋರಿಕೊಂಡ. ಕನ್ನಯ್ಯ ಮುಗುಳ್ನಕ್ಕ.

"ಚಿನ್ನಪ್ಪಾ, ನಾನಿಂದು ನಿನ್ನೆಡೆಗೆ ಬಂದಿರುವುದೇಕೆಂದು ತಿಳಿದೆ?" ಕನ್ನಯ್ಯ ಕೇಳಿದ. ಚಿನ್ನಪ್ಪ ಆಸೆತುಂಬಿದ ಕಣ್ಣುಗಳಿಂದ ಕನ್ನಯ್ಯನ ನೋಡತೊಡಗಿದ.

"ನನ್ನಲ್ಲಿ ನಿನಗೆ ವಿಶ್ವಾಸವಿದೆಯೆಂದಾದರೆ ಮಾತ್ರ—"

"ಹಾಗೆಂದರೆ?"

"ನಿನ್ನ ಕೆಲಸಕ್ಕೊಯ್ಯುವುದಕ್ಕೆ ಬಂದೆ!"

ಚಿನ್ನಪ್ಪನ ಮುಖವರಳಿತು. "ಎಲ್ಲಿಗೆ-?"

"ಏಕೆ. ಮೊದಲಿದ್ದ ಗಿರಣಿಗೆ."

ಚಿನ್ನಪ್ಪ ವಿಚಾರಮಗ್ನನಾದ.

"ಚಿನ್ನಪ್ಪಾ, ಮುಷ್ಕರದ ಹುಚ್ಚು ನಿನಗೆ ಹಿಡಿಸಿದವರಾರು? ಮುಷ್ಕರವು ಕೂಲಿಗಾರರ ಜೀವಹಿಂಡುವ ಭೂತ. ಧುರೀಣರೆಂದೆನಿಸಿಕೊಳ್ಳಲು ಸ್ವಾರ್ಥಪಿಶಾಚಿಗಳು ಕೂಲಿಗಾರರ ಮೇಲೆ ಹೂಡುವ ಬಲೆ. ಇವರ ಈ ಗದರಿಕೆಗೆ ಮ್ಹಾಲಕರೆಂದಾದರೂ ಬೆದರುವುದುಂಟೆ?"

ಚಿನ್ನಪ್ಪ ನಕ್ಷತ್ರಗಳ ನೋಡತೊಡಗಿದ.

"ನಾನನ್ನುವುದ ಕೇಳು. ಇನ್ನೊಂದು ತಿಂಗಳಾದರೂ ಮುಷ್ಕರ ನಿಲ್ಲುವಂತಿಲ್ಲ. ಅದುವರೆಗೆ ನೀನು ಹೇಗೆ ಜೀವಿಸಬಲ್ಲೆ? ನನ್ನೊಡನೆ ಬಾ. ಮುಷ್ಕರಗಾರರಿಗೆ ವಿರೋಧವಾಗಿ ಕೆಲಸಕ್ಕೆ ಬರುವವರಿಗೆ ದಿನದ ಕೂಲಿಯಲ್ಲಿ ನಾಲ್ಕಾಣೆ ಹೆಚ್ಚಿಸುವೆನೆಂದು ಮಾಲಕರು ನನ್ನೊಡನೆ ಅಂದಿರುವರು."

ಚಿನ್ನಪ್ಪ ಸುಮ್ಮನಿರುವುದನ್ನು ನೋಡಿ, "ಏನೆನ್ನುವೆ ಚಿನ್ನಪ್ಪಾ?" ಕೇಳಿದ

ಚಿನ್ನಪ್ಪನುತ್ತರವೀಯಲಿಲ್ಲ. ಏನೋ ವಿಚಾರಮಾಡುತಲಿದ್ದ.

"ನಾಳೆ ಸಂಜೆ ಬರುವೆನು ಚಿನ್ನಪ್ಪಾ. ಚೆನ್ನಾಗಿ ಯೋಚಿಸಿಟ್ಟಿರು!"

ಕನ್ನಯ್ಯನು ಹೊರಟುಹೋದ. ನೀಳವಾದೊಂದುಸಿರೆಳೆದು ಚಿನ್ನಪ್ಪ ನೀಲಿಯ ಬಳಿಗೆ ಹೋದನು. ಬೆಳುದಿಂಗಳು ಕಿಟಕಿಯಿಂದ ತೂರಿ ನೀಲಿಯ ಮುಖದ ಮೇಲೆ ಬೀಳುತ್ತಿತ್ತು. ಚಿನ್ನಪ್ಪ ಮೆಲ್ಲನೆ ತನ್ನ ಕೈಯನ್ನವಳ ಹಣೆಯ ಮೇಲಾಡಿಸಿದ. ಕೆಂಡದಂತೆ ಬಿಸಿಯಾಗಿತ್ತು. ದೇಹಾದ್ಯಂತ ಸುಡುತ್ತಲಿತ್ತು. ಚಿನ್ನಪ್ಪನೆದೆ ಧಸಕ್ಕೆಂದಿತು. ಕ್ಷಣಹೊತ್ತು ಏನುಮಾಡಬೇಕೆಂದು ತಿಳಿಯದಾಯಿತವನಿಗೆ. ಆದರೆ ಮತ್ತೊಂದರೆ ಕ್ಷಣದಲ್ಲಿ ಅವನು ಮನೆಯಿಂದ ಹೊರಬಿದ್ದ.

ರಾತ್ರಿ 11 ತಾಸು ಕಳೆದಿರಬಹುದು. ನಗರವೆಲ್ಲ ನಿದ್ರೆ ಹೋಗುತ್ತಿತ್ತು. ವಿದ್ಯುತ್ ದೀಪಗಳು ಮಾತ್ರ ಮೌನದಲ್ಲಿ ಬೆಳಗುತ್ತಿದ್ದುವು.

ಚಿನ್ನಪ್ಪನೊಂದು ದೊಡ್ಡ ಮನೆಯ ಮುಂದೆ ನಿಂತನು. ಮುಂದೆ ತೂಗ ಹಾಕಿದ್ದ ಕರಿಹಲಗೆಯಲ್ಲಿ "ಡಾಕ್ಟರ ಶ್ರೀಧರರಾವ" ಎಂದು ಬರೆಯಲ್ಪಟ್ಟಿತ್ತು. ಬಾಗಿಲ ತಟ್ಟಿದನೊಮ್ಮೆ ಚಿನ್ನಪ್ಪ; ನಿರುತ್ತರ. ಪುನಃ ತುಸು ಬಲವಾಗಿ ತಟ್ಟಿದ; ನಿಸ್ಸದ್ದು. "ರಾಯರೇ—ರಾಯರೇ" ಗಟ್ಟಿಯಾಗಿ ಕರೆದ.

"ಯಾರು?" ಒಳಗಿನಿಂದ ಗೊಣಗಿದಂತಾಯಿತು. ಚಿನ್ನಪ್ಪನ ಕಣ್ಣುಗಳು ಮಿನುಗಿದುವು.

"ರಾಯರೇ, ಅಗತ್ಯವಾದ ಕೆಲಸವಿದೆ."

ಒಂದೆರಡು ನಿಮಿಷಗಳು ಕಳೆದುವು. ಯಾರೂ ಬಾಗಿಲು ತೆರೆಯಲಿಲ್ಲ. ಚಿನ್ನಪ್ಪ ಪುನಃ ಕರೆದ.

ಈ ಬಾರಿ ಬಾಗಿಲು ತೆರೆಯಲ್ಪಟ್ಟಿತು. ಕೃತಜ್ಞತೆಯಿಂದ ಚಿನ್ನಪ್ಪನ ಕಣ್ಣುಗಳಿಂದ ಹನಿಗಳೆರಡುದುರಿದುವು.

"ಈ ರಾತ್ರಿಯಲ್ಲೇನು ಕೆಲಸ?" ಒಳಗಿನಿಂದಲೇ ಯಾರೋ ಕೇಳಿದರು.

"ಡಾಕ್ಟರ ಶ್ರೀಧರ ರಾಯರೊಡನೆ—"

ಪುನಃ ಒಂದೆರಡು ನಿಮಿಷಗಳ ವರೆಗೆ ನಿಸ್ಸದ್ದು. ಆ ಮೇಲೆ ಏನೇನೋ ಗೊಣಗುತ್ತ ಶ್ರೀಧರ ರಾಯರು ಹೊರಬಂದರು.

"ಏಕಪ್ಪಾ ಈ ರಾತ್ರಿಯಲ್ಲಿ" ಶ್ರೀಧರರಾಯರ ಸಿಡಿಲಿನ ನುಡಿ.

"ರಾಯರೇ, ನನ್ನ ನೀಲಿಯ ಮೈ ಕೆಂಡದಂತೆ ಸುಡುತಲಿದೆ. ಈ ಬಡವನ ಮೇಲೆ ದಯೆತೋರಿ ನನ್ನ ಗುಡಿಸಲಿಗೊಮ್ಮೆ—"

"ಹೋಗು, ಹೋಗು. ಈ ರಾತ್ರೆಯಲ್ಲೇನು ನೀಲಿ ಸಾಯಲಾರಳು. ಬೆಳಗಾಯಿತೆಂದರೆ ಯಾವುದಾದರೊಂದು ಆಸ್ಪತ್ರೆಗೆ ಹೋಗು!" ಎಂದು ಚಿನ್ನಪ್ಪನ ಮಾತನ್ನು ನಡುವೆ ತಡೆದು ನುಡಿದರು ಶ್ರೀಧರ ರಾಯರು. ಜೊತೆಗೆ ಬಾಗಿಲಿಕ್ಕಿದ ಸದ್ದು. ಜಗತ್ತೆಲ್ಲೋ ಓಡಿ ಹೋಗುತ್ತಿರುವಂತೆ ಭಾಸವಾಯಿತು ಚಿನ್ನಪ್ಪನಿಗೆ. ನಿರಾಸೆ, ದುಃಖ, ಕೋಪದಿಂದ ಅವನ ದೇಹಾದ್ಯಂತ ಬೆವರತೊಡಗಿತು. ಕ್ಷಣಹೊತ್ತು ಅಲ್ಲೇ ಬಾಗಿಲಿಗೊರಗಿ ನಿಂತನು. ಅಷ್ಟರಲ್ಲಿ ಪ್ರಬಲ ವೇಗದಿಂದ ಕಾರೊಂದು ಆ ಮನೆಯ ಮುಂದೆ ಬಂದು ನಿಂತಿತು. ಶುಭ್ರ ವಸ್ತ್ರಗಳನ್ನು ಧರಿಸಿದ್ದ ವ್ಯಕ್ತಿಯೊಂದು ಅದರಿಂದಿಳಿದುಬಂದು ಬಾಗಿಲ ಬಡಿಯಿತು. ಚಿನ್ನಪ್ಪ ತುಸು ದೂರ ಸರಿದು ನಿಂತನು. ಆ ವ್ಯಕ್ತಿ ಆಂಗ್ಲಭಾಷೆಯಲ್ಲೇನೋ ನುಡಿಯತೊಡಗಿತು. ಚಿನ್ನಪ್ಪನೆಲ್ಲವನ್ನೂ ನೋಡುತಲಿದ್ದ. ಶ್ರೀಧರರಾಯರು ಹೊರಬಂದು ವ್ಯಕ್ತಿಯೊಡನೆ ಕಾರನ್ನೇರಿ ಹೊರಟು ಹೋದರು. ಚಿನ್ನಪ್ಪನು ಅಳತೊಡಗಿದ.

ಮರುದಿನ ಸಂಜೆ ಕನ್ನಯ್ಯನವನೆಡೆಗೆ ಬಂದ. ಚಿನ್ನಪ್ಪ ನೀಲಿಯ ಚಾಪೆಯ ಬಳಿ ಕುಳಿತು ಕಣ್ಣೀರಿಳಿಸುತಿದ್ದ. ಕನ್ನಯ್ಯ ಕ್ಷಣಹೊತ್ತು ನೋಡಿದ. ಎಲ್ಲವೂ ತಿಳಿಯಿತು. "ಚಿನ್ನಪ್ಪಾ—!" "...." ಕನ್ನಯ್ಯ ಮತ್ತೆ ಮಾತೆತ್ತಲಿಲ್ಲ. ಏನೋ ಯೋಚಿಸಿ ಹೊರಟುಹೋದ.

ಚಿನ್ನಪ್ಪನ ಮನ ಭಾರವಾಗಿತ್ತು. ಹೃದಯ ನೋವುಗೊಂಡಿತ್ತು. ನೀಲಿ ಅವನ ಜೀವನ ತಂತಿ. ಕಾಲನೀಗ ಅದರಲ್ಲಿ ವಿಚಿತ್ರ ಗಾನ ನುಡಿಸತೊಡಗಿದ್ದಾನೆ. ತಂತಿಯು ಮುರಿಯುವಂತೆ ಮೀಟುತಲಿದ್ದಾನೆ. ತಂತಿ ಮುರಿದರೆ ರಾಘವೇನೆಂದುತ್ತರವೀಯಬೇಕು? ರಾಘಗೆ ವಿಶ್ವಾಸಘಾತ ಮಾಡಿದಂತಾಗಲಿಲ್ಲವೆ?

ತುಸು ಹೊತ್ತಿನಲ್ಲಿ ಕನ್ನಯ್ಯನೊಂದು ವ್ಯಕ್ತಿಯನ್ನು ಕರೆತಂದ. ವ್ಯಕ್ತಿ ನೀಲಿಯ ಚೆನ್ನಾಗಿ ಪರೀಕ್ಷಿಸಿ ಕನ್ನಯ್ಯನ ಕಿವಿಯಲ್ಲೇನೋ ನುಡಿಯಿತು.

"ಚಿನ್ನಪ್ಪಾ, ಇನ್ನು ನಿನ್ನ ಹೆದರಿಕೆಯನ್ನೆಲ್ಲಾ ಬಿಡು. ಇದೋ ಪ್ರಸಿದ್ಧರಾದ ವೈದ್ಯರೊಬ್ಬರನ್ನು ಕರೆತಂದಿರುವೆನು. ಗಾಬರಿಗೇನೂ ಕಾರಣವಿಲ್ಲವೆಂದು ಹೇಳುತ್ತಿರುವರು. ಅವರೀಯುವ ಮಾತ್ರೆಯನ್ನು ದಿನಕ್ಕೆರಡರಂತೆ ಕೊಡುತ್ತಲಿದ್ದರೆ ಸರಿ! ನಿನ್ನ ನೀಲಿ ಪೂರ್ಣ ಸುಖಿಯಾಗುವಳು ನೋಡು" ಎಂದು ಭರವಸೆಯಿತ್ತ ಕನ್ನಯ್ಯ.

ಚಿನ್ನಪ್ಪ ಕನ್ನಯ್ಯನನ್ನೊಮ್ಮೆ ವೈದ್ಯರನ್ನೊಮ್ಮೆ ಕೃತಜ್ಞತೆಯಿಂದ ನೋಡಿದ. ವೈದ್ಯರು ಕನ್ನಯ್ಯನೊಡನೆ ಏನೋ ಹೇಳಿ ಹೊರಟುಹೋದರು.

"ಚಿನ್ನಪ್ಪಾ" ಕನ್ನಯ್ಯ ನುಡಿದ: "ನೀಲಿಯ ವಿಷಯವಾಗಿ ನೀನೇನೂ ಬೆದರದಿರು. ಅವಳ ಜೀವಕ್ಕೇನೂ ಅಪಾಯವಿಲ್ಲವೆಂದು ವೈದ್ಯರಂದರು. ಈಗ ನೀನೊಂದು ಉಪಕಾರ ಮಾಡಬೇಕಾಗಿದೆ. ನನ್ನೊಂದು ಮಾತನ್ನು ಉಳಿಸಿಕೊಡಬೇಕಾಗಿದೆ."

ಕನ್ನಯ್ಯ ಮತ್ತೂ ಹೇಳಿದ "ನಾಳೆ 10-50 ಜನರ ಕೆಲಸಕ್ಕೆ ಕರೆತರುವೆನೆಂದು ಮಾಲಕರೊಡನೆ ಮಾತುಕೊಟ್ಟಿರುವೆನು. ನೀನು ನಾಳೆ ಬೆಳಗ್ಗೆ ಕೆಲಸಕ್ಕೆ ಹೋಗಲೇ ಬೇಕು."

ಚಿನ್ನಪ್ಪ ಗಾಬರಿಯಿಂದ ನೀಲಿಯ ಮುಖವ ನೋಡಿದ.

"ನೀಲಿಯ ನೋಡಿಕೊಳ್ಳುವ ವ್ಯವಸ್ಥೆ ನಾನು ಮಾಡುವೆನು. ನನ್ನ ತಾಯಿಯ ಕಳುಹಿಕೊಡುವೆನು."

ಚಿನ್ನಪ್ಪನಿಗೆ ಮನಸ್ಸಿಲ್ಲವಾದರೂ ಒಪ್ಪಬೇಕಾಯಿತು. ಕನ್ನಯ್ಯನ ಉಪಕಾರವನ್ನವನೆಂದೂ ಮರೆಯನು. ಆನಂದದಿಂದ ಹೊರಟುಹೋದ ಕನ್ನಯ್ಯ.

ಮರುದಿನ ಬೆಳಗ್ಗೆ ಕನ್ನಯ್ಯನ ತಾಯಿ ಬಂದೊಡನೆ, ನೀಲಿಯ ಜಾಗ್ರತೆಯಾಗಿ ನೋಡಿಕೊಳ್ಳುವಂತೆ ಹೇಳಿ, ಚಿನ್ನಪ್ಪ ಗಿರಣಿಗೆ ಹೊರಟುಹೋದ. ಹೋಗುವಾಗಲೇಕೋ ಅವನೆದೆ ನಡುಗಿದಂತಾಯಿತು. ನೀಲಿಯ ಮುಖದಲ್ಲೇನೋ ಒಂದು ವಿಧವಾದ ನೆರಳು ಕವಿದಿರುವಂತೆ ಭಾಸವಾಯಿತು

ಗಿರಣಿಯಲ್ಲಿ ಮುಷ್ಕರ ಪ್ರಬಲವಾಗಿ ನಡೆದಿತ್ತು. ಕನ್ನಯ್ಯ ತನ್ನವರೊಡನೆ ಚಿನ್ನಪ್ಪನ ಆಗಮನವ ನೋಡುತ್ತಲಿದ್ದ. ಚಿನ್ನಪ್ಪನು ಬಂದೊಡನೆ, 'ನಡೆಯಿರಿ ಹೋಗೋಣ ಕೆಲಸಕ್ಕೆ' ಎಂದು ಹಿಗ್ಗಿನಿಂದ ನುಡಿದ. ಮುಷ್ಕರಗಾರರು ಹೋಗಕೂಡದೆಂದು ವಿನಯದಿಂದ ಕೇಳತೊಡಗಿದರು. ಕನ್ನಯ್ಯ ಹೋಗಲೇ ಬೇಕೆಂದ. ಹೋಗುವುದಾದರೆ ನಮ್ಮೆದೆಯ ಮೇಲೆ ನಡೆದು ಹೋಗಬೇಕೆಂದು ಗೇಟಿನ ಮುಂದೆ ಮಲಗಿಕೊಂಡರು ಮುಷ್ಕರಗಾರರು. ಕನ್ನಯ್ಯ ಮುನ್ನಡೆದ. ಆದರೆ ಚಿನ್ನಪ್ಪನಿಗೇಕೋ ಮನಸ್ಸು ಬಾರದಾಯಿತು. ಅವನು ಹಿಂಜರಿದ. ಅಷ್ಟರಲ್ಲಿ ಪ್ರಬಲ ವೇಗದಿಂದ ಕಾರೊಂದು ಅಲ್ಲಿ ಬಂದು ನಿಂತಿತು ಬಿಳೀ ಟೊಪ್ಪಿಯ ಧರಿಸಿದ್ದ ವ್ಯಕ್ತಿಯೊಂದು ಅದರಿಂದಿಳಿಯಿತು. 'ಶ್ರೀಧರರಾಯರಿಗೆ ಜಯವಾಗಲಿ! ಕ್ರಾಂತಿಯು ಬಾಳಲಿ!! ಬಡವರೋದ್ಧಾರವಾಗಲಿ!!!' ಎಂಬ ಜಯಘೋಷಗಳು ಕೇಳಬಂದುವು. ಚಿನ್ನಪ್ಪ ತನ್ನ ಕಣ್ಣುಗಳನ್ನತ್ತ ಹೊರಳಿಸಿದ. ಬಡವರೋದ್ಧಾರಕರಾದ ಶ್ರೀಧರ ರಾಯರನ್ನೊಮ್ಮೆ ನೋಡಿದ. ತಿರಸ್ಕಾರ-ಕೋಪಗಳಿಂದ ಅವನೆದೆ ತುಂಬಿ ಹೋಯಿತು. ಕನ್ನಯ್ಯನಂದ ಮಾತುಗಳು ನೆನಪಾದುವು. 'ಸ್ವಾರ್ಥಮಯ ಜಗತ್ತು. ಸ್ವಹಿತಕ್ಕಾಗಿಯೇ ಹೋರಾಡುವವರಲ್ಲದೆ ಜನಹಿತ ದೃಷ್ಟಿಯಿಂದಲ್ಲ. ಹೀಗಿರುವಾಗ ನಾನೇಕೆ ನನ್ನ ಹಿತದಿಂದ ಹಿಂಜರಿಯಬೇಕು?' ಎಂದು ಯೋಚಿಸಿ ಚಿನ್ನಪ್ಪ ತನ್ನೊಂದು ಕಾಲನ್ನು ಮುಷ್ಕರಗಾರನೊಬ್ಬನೆದೆಯ ಮೇಲಿರಿಸಿದ. ಅವನೆದೆ ಝುಲ್ಲೆಂದಿತು. ಒಳಗಿನೊಳದನಿಯೊಂದು ಅವನನ್ನೆಚ್ಚರಿಸಿತು. ಪುನಃ

(58ನೇ ಪುಟಕ್ಕೆ ಮುಂದುವರಿಸಿಯದೆ.)



ನೃತ್ಯಕಲೆಯ ಕುರಿತು ಎರಡುಮಾತು

(ಲೇಖಕರು:—ಶ್ರೀ| ಕೆ. ಕೆ. ಶೆಟ್ಟಿ)



“ಭಕ್ತಿ ಭಾವ” ಎಂಬ ನೃತ್ಯದ ಒಂದು ದೃಶ್ಯ

ನೃತ್ಯಕಲೆಯು ಹಿಂದೂದೇಶದಲ್ಲಿ ಆದಿಯಿಂದಲೂ ಪ್ರಸಿದ್ಧಿಯಲ್ಲಿದ್ದಿತ್ತು. ಎಂಬ ವಿಷಯವು ನಮಗೆ ಪುರಾಣಗಳಿಂದಲೂ, ವೇದಗಳಿಂದಲೂ ತಿಳಿದುಬರುತ್ತಿದೆ. ಹಿಂದೂದೇಶದ ಏಳ್ಗೆಗೆ ಅದು ಮುಖ್ಯ ಕಾರಣವಾಗಿರುತ್ತದೆ. ನಮ್ಮ ಪುರಾಣಪ್ರಸಿದ್ಧ ದೇವಾಲಯಗಳಲ್ಲಿ ಕಂಡು ಬರುವ ಶಿಲಾಲಿಪಿಗಳೂ, ಕೆತ್ತನೆಯ ಪ್ರತಿಮೆಗಳೂ ಇದಕ್ಕೆ ಸಾಕ್ಷ್ಯವಾಗಿದೆ. ನೃತ್ಯದೇವತೆಯಾದ ಶಿವನ ಅಮರ ತಾಂಡವ ನೃತ್ಯವು ಎಂತಹ ನಾಸ್ತಿಕನ ಎದೆಯನ್ನಾದರೂ ಕವಲೊಡೆಯುವಂತೆ ಮಾಡುವುದರಲ್ಲಿ ಸಂದೇಹವಿಲ್ಲ. ತನ್ನನ್ನು ನಂಬಿದವರನ್ನು ಲೋಕದ ಈ ಬಂಧನದಿಂದ ಬಿಡಿಸಿ, ಅವರಿಗೆ ಶಾಶ್ವತ ಮುಕ್ತಿಯನ್ನು ಕರುಣಿಸುವೆನೆಂದು ಸೂಚಿಸುವಂತೆ ನೃತ್ಯಭಂಗಿಯು ಕಲ್ಪಿಸುತ್ತದೆ.

ಹಿಂದೂದೇಶದಲ್ಲಿ ನೃತ್ಯಕಲೆಯು ಉನ್ನತಿಯನ್ನು ಹೊಂದುವಂತೆ ಪ್ರೋತ್ಸಾಹವನ್ನು ಕೊಟ್ಟವರು ನಮ್ಮ ಪೂರ್ವದ ಅರಸರು [illegible]. ಪ್ರತಿಯೊಬ್ಬ ಅರಸನ ಆಸ್ಥಾನದಲ್ಲಿ ಸಂಗೀತಗಾರರೂ, ನೃತ್ಯಗಾರರು ಮತ್ತು ಚಿತ್ರಗಾರರು ಇರಲೇಬೇಕೆಂಬ ಕಟ್ಟಳೆಯಿತ್ತು. [illegible] ಸಂಗೀತ ಮತ್ತು ನೃತ್ಯಗಾರರಿಗೆ ವಿಶೇಷ ಆದರವಿತ್ತು. [illegible] ನೃತ್ಯಗಳ ಪಾಂಡಿತ್ಯವಿದೆಯೆಂದು ಹೇಳುವುದು [illegible] ಭೂಷಣ [illegible]ವಾಗಿತ್ತು. ನೃತ್ಯವು [illegible] ಮಾತ್ರವೇ [illegible]. ಸರ್ವಸಾಧಾರಣವಾಗಿ ಪ್ರತಿಯೊಬ್ಬರೂ ಅದನ್ನು ಅಭ್ಯಾಸಿಸುತ್ತಿದ್ದರು. ನೂರಾರು ವಿವಿಧ ಹಾವಭಾವಗಳಲ್ಲಿ ಪ್ರದರ್ಶಿಸಲ್ಪಡುವ ಗ್ರಾಮ್ಯ ನೃತ್ಯವೂ ಜಾತಿಮತ ಐಕ್ಯತೆಯಲ್ಲಿ ಪ್ರಾಧಾನ್ಯವನ್ನು ಪಡೆದಿತ್ತು. ಉತ್ಸವ ಜಾತ್ರೆಗಳ ಸಮಯದಲ್ಲಿ ಜನರು ಇಂತಹ ನೃತ್ಯಗಳನ್ನು ಪ್ರದರ್ಶಿಸುವ ರೂಢಿಯಿತ್ತು.

ಆದರೆ ಕಳೆದ ಎರಡು ಶತಮಾನಗಳಲ್ಲಿ ಪಾಶ್ಚಾತ್ಯ ಶಿಕ್ಷಣದ ದೆಸೆಯಿಂದಾಗಿ ನೃತ್ಯಕಲೆಗೆ ಬಲವಾದ ತಡೆಯುಂಟಾಗಿದೆ. ನವನಾಗರಿಕತೆಯು ಜನತೆಯಲ್ಲಿ ತಮ್ಮ ಪೂರ್ವ ಕಲಾಸಂಸ್ಕೃತಿಗಳ ತಿರುಳನ್ನು ಕೂಡಾ ಮರೆಸುವಂತೆ ಅಜ್ಞಾನಾಂಧಕಾರವನ್ನು ತಂದೊಡ್ಡಿದೆ. ಶಾಸ್ತ್ರೋಕ್ತ ನೃತ್ಯದ ಸ್ಥಾನದಲ್ಲಿ ಅಶ್ಲೀಲ ನೃತ್ಯಗಳು ಕಾಣಬರುತ್ತವೆ. ಕೊಂಬು, ಕಹಳೆ ಇವೇ ಮೊದಲಾದ ವಾದ್ಯ ಘೋಷಗಳಿಂದ ಮೆರೆಯುವ ನಮ್ಮ ಜಾತ್ರೆಗಳಲ್ಲಿ ಈಗ ಬೇಂಡ್ ಕ್ಲಾರ್‌ನೇಟ್ ಮೊದಲಾದ ಪಾಶ್ಚಾತ್ಯ ಸಂಗೀತ ವಾದನಗಳು ಕೇಳಿ ಬರುತ್ತವೆ. ನೃತ್ಯ ಮತ್ತು ಸಂಗೀತದ ಬದಲಾಗಿ ದೇಶದ ಆಯಾಯ ಕಡೆಗಳಲ್ಲಿ ಸಿನೇಮಾ ಮಂದಿರಗಳು ತಲೆದೋರಿವೆ. ಇನ್ನು ಮುಂದಿನ ಒಂದೆರಡು ಶತಮಾನಗಳಲ್ಲಿ ಕೂಡ ಇದೇ ರೀತಿ ಮುಂಬರಿಯುತ್ತ ಹೋದರೆ, ನಮ್ಮ ಹಳೆಯ ಕಲೆಯ ಬೀಜಾಕ್ಷರಗಳು ಕೂಡಾ ಮರೆಯುವಂತೆ ಆಗಬಹುದು.

ವಿಸ್ತಾರವಾದ ಹಿಂದೂದೇಶಗಳಲ್ಲಿ ಈಗಲಾದರೂ ಸಂಗೀತ, ನೃತ್ಯಗಾರರಿಗೆ ಕಡಿಮೆಯಿರುವುದಿಲ್ಲ. ಸಂಗೀತ ಮತ್ತು ನೃತ್ಯ ಪಾಂಡಿತ್ಯದ ಗನಿಗಳೇ ಆಗಿರುವ ಹಲವು ಮಹಾತ್ಮರನ್ನು ನಾವು ಅಲ್ಲಲ್ಲಿ ಕಾಣಬಹುದು. ಅಲ್ಲದೆ ಅವರಲ್ಲಿರುವ ಜ್ಞಾನಸಂಗ್ರಹವು ಪುನಃ ಹಿಂದೂದೇಶದ ನೃತ್ಯಕಲೆಯ ಹಾಗೂ ಸಂಗೀತ ಕಲೆಯ ನವಸೃಷ್ಟಿಯನ್ನು, ನಿರ್ಮಾಣ ಮಾಡಲು ಶಕ್ತಿಯುಳ್ಳದ್ದಾಗಿದೆ. ಆದರೆ ಬರಿಯ ಬಣಮಾತುಗಳಿಂದ ಕೆಲಸವು ಪೂರೈಸುವಂತಿಲ್ಲ. ಜೊತೆಗೆ ಜನ ಸಹಾಯವೂ, ಹಿಂಬಲವೂ ದೊರೆತರೆ ಮಾತ್ರ ಕಾರ್ಯವು ಕೊನೆಗಾಣುವದು.

ದೇಶದ ಆಯಾಯ ಭಾಗಗಳಲ್ಲಿ ಈಗಲೇ ಬೇರೆ ಬೇರೆ ರೀತಿಯಲ್ಲಿ ಕಾರ್ಯಕ್ಷೇತ್ರಗಳು ಹೂಡಲ್ಪಟ್ಟಿವೆ. ಅಲ್ಲದೆ ಅವುಗಳ ಯಶಸ್ಸಿಗಾಗಿ ಭಗೀರಥ ಪ್ರಯತ್ನಗಳು ನಡೆಯುತ್ತಿವೆ. ಹಿಂದೂದೇಶದ ಹೆಚ್ಚಿನ ಭಾಗಗಳಲ್ಲಿ ನೃತ್ಯ ಮತ್ತು ಸಂಗೀತಗಳನ್ನು ಹೇಳಿಕೊಡುವ ಶಾಲಾಸಂಸ್ಥೆಗಳೂ ತೆರೆಯಲ್ಪಟ್ಟಿವೆ ಅಲ್ಲದೆ ಸರಕಾರವು ತನ್ನ ‘ಹಳ್ಳಿಯ ಪುನರುತ್ಥಾನ’ ಕಾರ್ಯದಲ್ಲಿ ಮರೆತುಹೋದ ಗ್ರಾಮ್ಯ ನೃತ್ಯವನ್ನು ಮುಖ್ಯ ಆಧಾರವನ್ನಾಗಿ ಇಟ್ಟುಕೊಂಡಿದೆ. ಇದೇ ರೀತಿಯಲ್ಲಿ ಮುಂಬರಿಯುತ್ತ ಹೋದರೆ ‘ಹನಿ ಕೂಡಿ ಹಳ್ಳ’ ಎಂಬ ನಾಣ್ಣುಡಿಯಂತೆ ಇನ್ನು ಕೆಲವೇ ವರ್ಷಗಳಲ್ಲಿ ನಾವು ಕೈಗೂಡಿದ ‘ನವಸೃಷ್ಟಿಯ ನಿರ್ಮಾಣ ಕಾರ್ಯವು’ ಕೊನೆಗಾಣುವುದು.

ನಮ್ಮ ಹಿಂದೂಸ್ಥಾನದಲ್ಲಿ ನೃತ್ಯಕಲೆಯು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಅಭ್ಯಾಸಿಸಲ್ಪಡುತ್ತದೆ. ಆದರೆ ನಮ್ಮ ನೆರೆಯೂರಾದ ‘ಕೇರಳವು’ ನೃತ್ಯಕಲೆಯ ‘ತವರುಮನೆ’ ಎಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ಪುರಾತನ ನೃತ್ಯಕಲೆಯ ಒಂದು ಅಂಗವಾದ ‘ಕಥಕ್ಕಳಿ’ ನೃತ್ಯವನ್ನು ಬಯಲಿಗೆ ತಂದು ಅದರ ಪೂರ್ಣ ಮಹತ್ವವನ್ನು ಜನರಿಗೆ ಅರುಹಿದವರೆಂದರೆ ಶ್ರೀ ಕವಿ ವಲ್ಲತ್ತೋಳ್ ಮಹಾಶಯರು. ಇವರು ನೃತ್ಯಕಲೆಯ ಉನ್ನತಿಗಾಗಿ ಪಡೆದ ಶ್ರಮವು ಅಷ್ಟಿಷ್ಟಲ್ಲ. ನೃತ್ಯಕಲೆಯ ಚರಿತ್ರೆಯಲ್ಲಿ ಈ ಮಹನೀಯರ ಹೆಸರು ಸ್ವರ್ಣಾಕ್ಷರವಾಗಿ ಬಾಳುವುದು. ಕೆಲವೇ ವರ್ಷಗಳ ಮೊದಲು ಇವರು ಬೇರೆ ಹಲವು ಮಹನೀಯರ ಉದಾರಾಶ್ರಯದಿಂದ ‘ಕೇರಳ ಮಂಡಲ’ ವೆಂಬ ನೃತ್ಯಕಲಾ ಸಂಸ್ಥೆಯನ್ನು ಸ್ಥಾಪಿಸಿ, ತನ್ಮೂಲಕ ನೃತ್ಯಕಲೆಯ ಮೇಲ್ಮೆಗಾಗಿ ಸಾಧಿಸುತ್ತಿದ್ದಾರೆ. ಇವರು ಸ್ಥಾಪಿಸಿದ ಈ ನೃತ್ಯ ಕೇಂದ್ರವು ಹಿಂದೂಸ್ಥಾನದಲ್ಲಿ ವಿಶೇಷ ಪ್ರಸಿದ್ಧಿಯನ್ನು ಪಡೆದಿದೆ. ಇಂದು ನಮಗೆ ತೋರಿಬರುವ ಹಲ





ಎಡವಲ್ಲಿ ಕಾಣುವ ಚಿತ್ರದಲ್ಲಿ “ಪ್ರಭಾತ” ನೃತ್ಯವನ್ನು, ಸೂರ್ಯನ ಆಗಮನದಿಂದ ಹರುಷಗೊಂಡು ಅರಳಿದ ಪದ್ಮಪುಷ್ಪದ ಮೂಲಕ ಪ್ರದರ್ಶಿಸಲಾಗಿದೆ. ಪುಷ್ಪದಲ್ಲಿ ನಿಂತ ನರ್ತಕಿಯು, ಪುಷ್ಪವರಳಿದ ಸಂತಸವನ್ನು ಅರುಹಿದುದನ್ನು ಪ್ರದರ್ಶಿಸುತ್ತಿರುವಳು. ಎಡಬಲಗಳಲ್ಲಿ ಇರುವ ಮತ್ತೆರಡು ಪುಷ್ಪಗಳು ನಡುವಣ ಪುಷ್ಪವನ್ನು ಸ್ವಾಗತೀಕರಿಸುತ್ತಿರುವುವು.

ಬಲವಲ್ಲಿ: “ಮಿಲನ”ದ ಒಂದು ದೃಶ್ಯ.

ಕೆಲವು ನೃತ್ಯ ಪ್ರವೀಣರಲ್ಲಿ ಈ ಸಂಸ್ಥೆಯಲ್ಲಿ ಶಿಕ್ಷಣವನ್ನು ಪಡೆಯದವರು ಯಾರೂ ಇರುವುದಿಲ್ಲ. ನೃತ್ಯ ಕಲೆಯು ಪೂರ್ಣವೆಂದೆಸಿಸಿಕೊಳ್ಳಬೇಕಾದರೆ ಈ ಸಂಸ್ಥೆಯಲ್ಲಿ ಅಲ್ಪ ಅವಧಿಯ ಶಿಕ್ಷಣವನ್ನಾದರೂ ಪಡೆಯಲೇಬೇಕು.

'ಕಥಕ್ಕಳಿ' ನೃತ್ಯದಲ್ಲಿ ಸಂಗೀತಕ್ಕೆ ಅಷ್ಟೊಂದು ಪ್ರಾಧಾನ್ಯತೆ ಇಲ್ಲದಿದ್ದರೂ ತಾಳಕ್ಕೆ ಅದರಲ್ಲಿ ಬಹಳ ವಿಶಿಷ್ಟತೆ ಇರುತ್ತದೆ. ಚೆಂಡೆ (Drum) ಮತ್ತು ತಾಳಗಳ ಹಿಮ್ಮೇಳದಿಂದ ಲಯಬದ್ಧವಾಗಿ, ನಾಟ್ಯ ಶಾಸ್ತ್ರ ಮುದ್ರೆಗಳಿಂದೊಡಗೂಡಿ, ವಿವಿಧ ಹಾವಭಾವಗಳನ್ನು ಹೊರಸೂಸುವ, ಈ ವಿಶೇಷ ನೃತ್ಯವು ಆದಿಯಿಂದಲೂ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಆದರೆ ಜನತೆಯಲ್ಲಿ ಅಲ್ಪ ಸಂಖ್ಯೆಯ ಒಂದು ಪಕ್ಷಕ್ಕೆ ಈ ರೀತಿಯ ನೃತ್ಯವು ಅಷ್ಟೊಂದು ಸೊಗಸೆಂದು ತೋರುವುದಿಲ್ಲ. ಕಾರಣ ಸಂಗೀತವಾದನಗಳ ಹಿಮ್ಮೇಳದಿಂದ ನಟಿಸಲ್ಪಡುವ ನೃತ್ಯದ ಸೌಮ್ಯತೆಯನ್ನು ಕಥಕ್ಕಳಿಯೊಡನೆ ಪರಿಶೀಲಿಸಿ ನೋಡಿದರೆ, ಕಥಕ್ಕಳಿಯಲ್ಲಿ ಒಂದು ತರದ ಕಠೋರತೆಯು ಕಾಣಬರುವುದು. ಆದರೆ ಶಾಸ್ತ್ರಯುಕ್ತವಾಗಿ ನೃತ್ಯಕಲೆಯನ್ನು ಅಭ್ಯಾಸಿಸುವವನು ಕಥಕ್ಕಳಿಯನ್ನು ಕಲಿಯದೆ ಇದ್ದರೆ ಆತನ ವಿದ್ಯೆಯು ಅಪೂರ್ಣವೆನಿಸುವುದು. ಒಂದು ಪದಾರ್ಥವೂ ರುಚಿಕರವೆನಿಸಬೇಕಾದರೆ, ಕಹಿ, ಖಾರ, ಉಪ್ಪು ಇವು ಹೇಗೆ ಅಗತ್ಯವೋ ಅಂತೆಯೇ ನೃತ್ಯದಲ್ಲಿ ಕೂಡಾ 'ಕಠಿಣತೆ' ಕಠೋರತೆ, ಸೌಮ್ಯತೆ ಇವುಗಳು ಸಮತೂಕವಾಗಿ ಸೇರಿರಬೇಕು. ಆಗ ಮಾತ್ರ ಕಲಿತ ವಿದ್ಯೆಯು ಪೂರ್ಣವೆನಿಸುವುದು. ನೃತ್ಯಕಲಾ ಪ್ರವೀಣರಾದ ಉದಯಶಂಕರರು ಕೂಡಾ ಕೊನೆಯದಾಗಿ ಕಥಕ್ಕಳಿಯನ್ನು ಕಲಿತು ತಮ್ಮ ವಿದ್ಯೆಯನ್ನು ಪೂರ್ಣವೆಂದೆಣಿಸಿಕೊಂಡಿದ್ದಾರೆ.

ಎರಡನೆಯದರ ಕುರಿತು ಕೆಲವು ಮಾತುಗಳನ್ನು ಹೇಳುವುದಾದರೆ 'ಕಥಕ್ಕಳಿ'ಯಷ್ಟೇ ಪ್ರಸಿದ್ಧಿಪಡೆದ ಉತ್ತರ ಹಿಂದೂಸ್ಥಾನದ 'ಕಥಕ್' ನೃತ್ಯವು ವಿಷಯ ಈ ನೃತ್ಯವು [illegible] ದಲೂ ಬಹಳ ವಿಶೇಷತೆಯನ್ನು ಪಡೆದಿದೆ. ಅಲ್ಲದೆ ಭರತಮುನಿಯು ಬರೆದಂತಹ ಈ ನೃತ್ಯದ ವಿಶೇಷತೆಯು ಭರತನಾಟ್ಯ ಶಾಸ್ತ್ರಕ್ಕನುಸಾರವಾಗಿ ಮುದ್ರೆಯಿಂದೊಡಗೂಡಿ ಇದರಲ್ಲಿ ವಿವಿಧ ಹಾವಭಾವಗಳು ಸಂಗೀತದ 'ಲಹರಿ'ಯಲ್ಲಿ ಹೊಂದಿಕೊಂಡಿವೆ. ಹಿಮ್ಮೇಳಕ್ಕೆ ಕಥಕ್ಕಳಿಯಲ್ಲಿ ಚೆಂಡೆ (Drum) ಮತ್ತು ತಾಳಗಳಿದ್ದರೆ 'ಕಥಕ್' ನೃತ್ಯದಲ್ಲಿ ಅವುಗಳ ಸ್ಥಾನದಲ್ಲಿ 'ಪಕ್ಕವಾದ್ಯ' ಅಥವಾ 'ತಬ್ಲ' ಮತ್ತು ವಿವಿಧ ಸಂಗೀತವಾದನಗಳು ಸೇರಿವೆ. ನೃತ್ಯಗಾರನು ತಾಳಕ್ಕನುಸಾರವಾಗಿ ತಬ್ಲೆಯ 'ಭೋಲ್'ಗಳನ್ನು ತನ್ನ ಕಾಲಿನ ಗೆಜ್ಜೆಯ ಝಣತ್ಕಾರದಿಂದ ಪ್ರದರ್ಶಿಸಿ ಕೈಗಳಿಂದ ವಿವಿಧ ಹಾವಭಾವಗಳನ್ನು ರೂಪಿಸುತ್ತಾನೆ. ಈ ನೃತ್ಯವು ವಂಶಪಾರಂಪರ್ಯವಾಗಿ ನಡೆದುಬಂದುದ್ದಾಗಿದೆ. ಈಗಲೂ ಕೂಡ ಉತ್ತರ ದೇಶದಲ್ಲಿ ಇವರ ವಂಶಸ್ಥರು ಹಲವರಿರುತ್ತಾರೆ. ಈಗಿನ ಇದರ ಪೋಷಕರನ್ನು ಕುರಿತು ಹೇಳುವುದಾದರೆ, 1. ಲಚ್ಚುಮಹಾರಾಜ್, 2. ಶಂಬುಲಾಲ್, 3. ಜಯಲಾಲ್, 4. ಮೋಹನಲಾಲ್, 5. ಸುಂದರ ಪ್ರಸಾದ್ ಇವರೇ ಮೊದಲಾದ ಮಹನೀಯರು ಪ್ರಸ್ತುತ ಈ ನಾಟ್ಯಕಲೆಯನ್ನು ಮುಂದಕ್ಕೆ ತರಲು ಬಹಳ ಶ್ರಮವನ್ನು ಪಡುತ್ತಿದ್ದಾರೆ. (ಬೇರೆ ಕೆಲವು ಮಹನೀಯರೂ ಕೂಡಾ ಇದರಲ್ಲಿ ಸಹಾಯಕರಾಗಿದ್ದಾರೆ. ಆದರೆ ಅವರ ಹೆಸರುಗಳು ಸರಿಯಾಗಿ ತಿಳಿದುಬಾರದ ಕಾರಣದಿಂದಾಗಿ ಅದನ್ನು ಇಲ್ಲಿ ವಿಸ್ತಾರವಾಗಿ ಕೊಡಲಾಗಿಲ್ಲ.)

ಮೂರನೆಯದಾಗಿ ಹೇಳುವುದಿದ್ದರೆ ಮಣಿಪುರಿನೃತ್ಯ. ಇದು ಅಷ್ಟೊಂದು ಪ್ರಸಿದ್ಧಿಗೆ ಬಂದಿಲ್ಲದಿದ್ದರೂ, ಇದರ ಪ್ರಾಧಾನ್ಯವು ವಿಶೇಷವಾಗಿದೆ. ಹೆಚ್ಚಿನ ಜನರಿಗೆ ಇದು ಬಹಳ ಮನೋರಂಜಕವೂ ಪ್ರಿಯವೂ ಆಗಿರುತ್ತದೆ.

ಈಗಲೀಗ ನೃತ್ಯಕಲಾ ವಿದ್ಯೆಯನ್ನು ಶ್ರಮಪಟ್ಟು ಅಭ್ಯಾಸಿಸಿ ಅದನ್ನು ಊರ್ಜಿತಾವಸ್ಥೆಗೆ ತಂದವರೆಂದರೆ 1. ಉದಯಶಂಕರ, 2. ಮೇನಕಾ 3. ರಾಗಿಣಿದೇವಿ, 4. ಗೋಪಿನಾಥ, 5. ನಟರಾಜವಶಿ, 6. ಪೂವಯ್ಯ ಸಹೋದರಿಯರು, 7. ಕಮಲೇಶಕುಮಾರಿ, 8. ಲೀಲಾದೇಸಾಯಿ ಇವರೇ ಮೊದಲಾದವರು. ಇವರಲ್ಲಿ ಮೊದಲನೆಯ ಎರಡು ನಾಮಾಂಕಿತರು ಹಿಂದೂದೇಶದಲ್ಲಿ ಮಾತ್ರವಲ್ಲದೆ ಪಾಶ್ಚಾತ್ಯ ದೇಶಗಳಲ್ಲಿ ಕೂಡಾ ವಿಶೇಷ ಪ್ರಾಧಾನ್ಯವನ್ನು ಪಡೆದಿರುವರು. ಉದಯಶಂಕರರು ಪಾಶ್ಚಾತ್ಯ ದೇಶಗಳಲ್ಲಿ ತಮ್ಮಗಳ ದಳ ಸಮೇತವಾಗಿ ತಿರುಗಿ ಅಲ್ಲಲ್ಲಿ ತಮ್ಮ ನೃತ್ಯಪ್ರದರ್ಶನಗಳನ್ನು ಮಾಡಿ ಹಿಂದೂದೇಶದ ಪುರಾಣಕತೆಯು ಎಷ್ಟರಮಟ್ಟಿನ ವಿಶೇಷತೆಯನ್ನು ಹೊಂದಿತ್ತು ಎಂಬುದನ್ನು ಅವರಿಗೆ ವ್ಯಕ್ತಪಡಿಸಿದ್ದಾರೆ. ಮೇನಕಾದೇವಿಯವರು ಅಮೇರಿಕಾ ದೇಶದವರೆಗೆ ಹೋಗಿ ಅಲ್ಲಿ ತಮ್ಮ ನಾಟ್ಯಪ್ರದರ್ಶನಗಳನ್ನು ತೋರಿಸಿ ಹಿಂದೂದೇಶಕ್ಕೆ ನೃತ್ಯಕಲೆಯಲ್ಲಿ ಪ್ರಥಮ ಸ್ಥಾನವು ದೊರೆಯುವಂತೆ ಸಾಧಿಸಿದ್ದಾರೆ. ಇವರೀರ್ವರ ಹೆಸರುಗಳು ನೃತ್ಯಕಲೆಯ ಚರಿತ್ರೆಯಲ್ಲಿ ಆಚಂದ್ರಾರ್ಕವಾಗಿ ಬಾಳುವವು. ಇವರು ತಮ್ಮ ಕಾರ್ಯವನ್ನು ಈಗಲೂ ಕೂಡಾ ಮುಂದುವರಿಸಿಕೊಂಡೇ ಇರುತ್ತಾರೆ. ನೃತ್ಯಕಲಾ ಪ್ರಸಾರಣ ಕಾರ್ಯದ ಸಲುವಾಗಿ ಉದಯಶಂಕರರು ಆಲ್ಮೋರಾದಲ್ಲಿಯೂ, ಮೇನಕಾದೇವಿಯವರು ಪೂನಾ ನಗರದ ಖಾಂಡಾ ಎಂಬಲ್ಲಿಯೂ, ಎರಡು ವಿದ್ಯಾಕೇಂದ್ರಗಳನ್ನು ಸ್ಥಾಪಿಸಿ ಅದರ ಪೋಷಣೆಯ ಸಲುವಾಗಿ ಬಹಳ ಶ್ರಮಪಡುತ್ತಾರೆ.

ಉದಯಶಂಕರರು ಸ್ಥಾಪಿಸಿದ 'The Uday Shanker India Cultural Centre' ಇದರ ವಿಷಯ ಕುರಿತು ಎರಡು ಮಾತುಗಳನ್ನು ಹೇಳುವುದು ತೀರಾ ಅವಶ್ಯವಾಗಿದೆ. ಅಲ್ಲಲ್ಲಿ ಚದರಿಹೋದ ಹಿಂದೂದೇಶದ ಹಲವು ಪುರಾಣ ನೃತ್ಯಗಳನ್ನು ಒಂದುಗೂಡಿಸಿ, ಅವುಗಳಲ್ಲಿ ಹೊಸ ಚೈತನ್ಯವನ್ನೂ, ಹುರುಪನ್ನೂ ತುಂಬಿ ಜನಮನೋರಂಜನೆಗೆ ಪಾತ್ರವಾಗುವಂತೆ ಪ್ರಕಾಶಮಾನವಾಗಿ ಮಾಡಲು ಉದಯಶಂಕರರು ತುಂಬಾ ಶ್ರಮಪಟ್ಟಿರುತ್ತಾರೆ. ಇವರು ರಚಿಸಿದ ನೃತ್ಯಗಳು ಹಿಂದೂದೇಶದವರಿಗೆ ಮಾತ್ರವಲ್ಲ ಪಾಶ್ಚಾತ್ಯರಲ್ಲಿಯೂ ಕೂಡಾ ಆಶ್ಚರ್ಯವನ್ನುಂಟುಮಾಡಿದೆ. ಲೋಕದ ಆಯಾ ಭಾಗಗಳಿಂದ ಅವರಿಗೆ ದೊರೆತ ಆದರವೂ ಜನಸಹಾಯವೂ ಒಂದು ವಿದ್ಯಾ ಕೇಂದ್ರವನ್ನು ಸ್ಥಾಪಿಸುವಂತೆ ಅವರಲ್ಲಿ ಹುರುಪನ್ನುಂಟುಮಾಡಿ ಈಗಾಗಲೇ ಅವರು ಅದನ್ನು ಪ್ರಾರಂಭಿಸಿಯೇ ಬಿಟ್ಟಿದ್ದಾರೆ. ಕೇಂದ್ರಕ್ಕೆ ಯೋಗ್ಯವಾದ ಸ್ಥಳವೂ ಆಲ್ಮೋರದಲ್ಲಿ ಕಂಡುಬಂದದ್ದರಿಂದ ಅಲ್ಲಿಯೇ ಕಟ್ಟಡವನ್ನು ಸ್ಥಾಪಿಸಿದ್ದಾರೆ. ಹಿಂದೂದೇಶದ ಪವಿತ್ರ ಕಲೆಯಾದ 'ನೃತ್ಯವನ್ನು' ದೇಶದ ಜನರಿಗೆ ಅರುಹಿ ತನ್ಮೂಲಕ ತನ್ನ ಪಾಲಿನ ದೇಶಸೇವೆಯನ್ನು ಅವರು ಅರ್ಪಿಸುತ್ತಿದ್ದಾರೆ. ಅವರಲ್ಲಿ ಜಾತಿಮತಗಳೆಂಬ ಭೇದವಿರುವುದಿಲ್ಲ. ಅವರ ವಿದ್ಯಾ[illegible] [illegible] ಯಾವ [illegible] [illegible] ಇರುತ್ತದೆ. ಉದಯಶಂಕರರು ಸ್ಥಾಪಿಸಿದ ಕೇಂದ್ರಕ್ಕೆ [illegible] [illegible] ಭಾಗಗಳಿಂದ [illegible] ಶಾಲೆಯಲ್ಲಿ ಕಲಿತ ನೃತ್ಯಗಾರರು ಬಂದು ಸೇರುತ್ತಾರೆ. ಆದುದರಿಂದ ಎಲ್ಲಾ ತರದ ನೃತ್ಯಗಳನ್ನೂ ಇಲ್ಲಿ ಕಲಿಯಲು ವಿಶೇಷ ಅವಕಾಶವಿದೆ. ನೃತ್ಯದ ಸಲುವಾಗಿ ವಿವಿಧ ಸಂಗೀತೋಪಕರಣಗಳೂ ಇನ್ನಿತರ ಸಾಹಿತ್ಯಗಳೂ ಸಂಗ್ರಹಿಸಲ್ಪಟ್ಟಿವೆ. ಉದಯಶಂಕರರು ಸ್ಥಾಪಿಸಿದ ಈ ಸಂಸ್ಥೆಯು ಏಳ್ಗೆಯನ್ನು ಪಡೆಯುವುದರಲ್ಲಿ ಸಂದೇಹವಿರುವುದಿಲ್ಲ. ಕಾರಣ ಅದಕ್ಕೆ ಸರಕಾರದ ಬೆಂಬಲವೂ ದೊರೆತಿದೆ.



"ಆರಾಧನೆ" ನೃತ್ಯದ ದೃಶ್ಯ ಮತ್ತು ವೃಂದ ಸಂಗೀತ.

ಇನ್ನು ನಮ್ಮದೇ ಆಗಿರುವ ಕರ್ಣಾಟಕವನ್ನು ನಾಟ್ಯಕಲಾ ದೃಷ್ಟಿಯಲ್ಲಿ ನೋಡಿದರೆ ಇಲ್ಲಿಯೂ ಕೂಡ ಈಗಾಗಲೇ ನೃತ್ಯಕಲೆಯು ಉದ್ಭವಿಸಿ [illegible]. ಅಲ್ಲದೆ ಇದರ ಉನ್ನತಿಗಾಗಿ ಬಹಳ ಪ್ರಯತ್ನಗಳೂ ನಡೆಯುತ್ತವೆ. ಕರ್ಣಾಟಕದ ನೃತ್ಯಕಲಾ ಪ್ರವೀಣರಲ್ಲಿ ಅಗ್ರಸ್ಥಾನವು ಶ್ರೀ ಶ್ರೀನಿವಾಸ ಕುಲಕರ್ಣಿ [illegible] ಇವರಿಗೆ ಸಲ್ಲತಕ್ಕದು. ಶ್ರೀಯುತರು ತಮ್ಮ ಬಾಲ್ಯ ಪ್ರಾಯದಿಂದಲೇ ನೃತ್ಯದ ಕಡೆಗೆ [illegible] ಗಮನವನ್ನು ಕೊಟ್ಟು ಆಗಾಗ್ಗೆ ಕೆಲವು [illegible] [illegible] ತಮ್ಮ ಪ್ರದರ್ಶನಗಳನ್ನು ತೋರಿಸುತ್ತಾ ಕೊನೆಗೆ ಶ್ರೀ [illegible] [illegible] ನಾಟಕ ಮಂಡಳಿಯ ಮಾಲಿಕರಾದ ಶ್ರೀ [illegible]ನವರ [illegible] ನೃತ್ಯ[illegible] ಅವರ ಕಂಪೆನಿಯಲ್ಲಿ ಒಂದು ಸ್ಥಾನವನ್ನು ಸಂಪಾದಿಸಿದರು. [illegible] ಇವರ ನೃತ್ಯ ವಿದ್ಯೆಯನ್ನು ಪ್ರಚಾರ ಮಾಡಲು ತುಂಬಾ [illegible] [illegible] [illegible] [illegible] ಇವರು [illegible]. [illegible] [illegible] [illegible]ಯುತ್ತಾ ಬಂತು. ಕೊನೆಗೆ [illegible] [illegible] [illegible] 'ಕೇರಳ ಮಂಡಲ'ಕ್ಕೆ [illegible] [illegible] [illegible] ಅಭ್ಯಾಸಿಸಿದರು. [illegible] [illegible] [illegible] ಅನೇಕ [illegible] [illegible] ಅಲ್ಲದೆ ಪ್ರದರ್ಶನಗಳಲ್ಲಿಯೂ [illegible] ನೃತ್ಯದ [illegible] [illegible]ಯನ್ನು ಪಡೆದಿರುತ್ತಾರೆ.

ಕೊನೆಯದಾಗಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯನ್ನು ಕುರಿತು ನಾಟ್ಯದೃಷ್ಟಿಯಲ್ಲಿ ನೋಡುವುದಾದರೂ ನಮ್ಮೀ ಚಿಕ್ಕ ಜಿಲ್ಲೆಯು ಕೂಡಾ ನೃತ್ಯಕಲೆಯಲ್ಲಿ ಹಿಂದುಳಿದಿಲ್ಲವೆಂಬುದು ನಮಗೆ ಉಚಿತವಾಗುವುದು. ಇಲ್ಲಿ ಜನದೃಷ್ಟಿಯಲ್ಲಿ ಬೆಳಕಿಗೆ ಬಂದವರೆಂದರೆ ಶ್ರೀ ಶಿವರಾಮ ಕಾರಂತರು. ಇವರ "ನೃತ್ಯ"ದಲ್ಲಿ ವಿಶಿಷ್ಟತೆಯೇನೆಂದರೆ "ನೃತ್ಯ" ಪಾತ್ರವು ತಮ್ಮದೇ ಆಗಿರುತ್ತದೆ. ಇವರು ನೃತ್ಯಕಲೆಯನ್ನು ಬೇರೆಯಾಗಿ ಅಭ್ಯಾಸಿಸಲಿಲ್ಲ. ತಮ್ಮ ಸ್ವಂತ ಕಲ್ಪನಾಶಕ್ತಿಯಿಂದ ಕೆಲವೊಂದು ದೃಶ್ಯಗಳನ್ನು ಪದ್ಯರೂಪದಲ್ಲಿ ಅಭ್ಯಾಸಿಸಿ ಅವುಗಳನ್ನು ಅಲ್ಲಲ್ಲಿ ಪ್ರದರ್ಶಿಸಿರುತ್ತಾರೆ. ಇವರ ನೃತ್ಯಕಲೆಯಲ್ಲಿ ಹೊಗಳಲರ್ಹವಾದುದೆಂದರೆ ಇವರ "ಕಲ್ಪನಾ ಚಾತುರ್ಯ." ಪ್ರಸ್ತುತ ನಾಟ್ಯಕಲೆಯನ್ನು ಇಲ್ಲಿ ಮುಂದೊತ್ತಲು ಪ್ರಯತ್ನಪಟ್ಟ [illegible] ನೃತ್ಯ [illegible]

(ಹಿಂದಿನ ಪುಟದಿಂದ ಮುಂದರಿದುದು)

ಬೇತಿಯ ತರಗತಿಯನ್ನು ತೆರೆಯಲು ಪ್ರೋತ್ಸಾಹಕೊಟ್ಟ "ಈಶ್ವರಾನಂದ ಮಹಿಳಾ ಸೇವಾಶ್ರಮ"ದವರ ಸಹಾಯವು ಸ್ತೋತ್ರಾರ್ಹವಾದುದು. ಆದರೆ ಇಲ್ಲಿ ಸ್ತ್ರೀಯರಿಗೆ ಮಾತ್ರವೆಂಬ ವರ್ಗೀಯ ಭೇದವಿರುವುದರಿಂದ ಇದರಿಂದ ಜನತೆಗೆ ಅಷ್ಟೊಂದು ಹೆಚ್ಚಿನ ಪ್ರಯೋಜನವು ಇದೆಯೆಂದು ಹೇಳಲಾಗುವುದಿಲ್ಲ. ಆದರೂ ಅವರು ತೋರಿಸಿಕೊಟ್ಟ ಉದಾಹರಣೆಯನ್ನು ಉಳಿದವರು ಕೈಕೊಂಡರೆ ಅದರಿಂದ ಕಲೆಯ ಮುಂದಿನ ಏಳ್ಗೆಗೆ ಅನುಕೂಲವಾಗುವುದು.

ಇಲ್ಲಿ ನೃತ್ಯಕಲೆಯನ್ನು ಮುಂದೊತ್ತಲು ಅಷ್ಟೊಂದು ಹೆಚ್ಚಿನ ಕುಂದುಗಳು ಕಾಣಬರುವುದಿಲ್ಲ. ಕಾರಣ ನೃತ್ಯಕಲೆಗೆ ಅನುಕೂಲವಾಗುವ ಸಂಗೀತ ಸಾಧನ ಇವೇ ಮೊದಲಾದ ಉಪಕರಣಗಳು ನಮ್ಮಲ್ಲಿ ಇದ್ದೇ ಇವೆ. ಹಿಮ್ಮೇಳಕ್ಕೆ ಬೇಕಾದ ವಾದನಗಳಲ್ಲೂ ವಾದ್ಯಗಾರರೂ (Orchestra set) ಅನೇಕರಿರುತ್ತಾರೆ. ಶಾಸ್ತ್ರೋಕ್ತವಾಗಿ ಸಂಗೀತ ವಿದ್ಯೆಯನ್ನು ಅಭ್ಯಾಸಿಸಿದವರೂ ಬಹು ಮಂದಿ ಇದ್ದಾರೆ. ಅಲ್ಲದೆ ನೃತ್ಯಕಲೆಯಲ್ಲಿ ಅಭಿರುಚಿ ಇದ್ದ ತರುಣ ಜನಾಂಗವೂ ಜೊತೆಗೆ ಸಹಾಯಕ್ಕಿದೆ. ನೃತ್ಯಕಲೆಯಲ್ಲಿ ನುರಿತವರೂ ಹಲವು ಮಂದಿ ಇರುತ್ತಾರೆ. ಅಲ್ಲದೆ ಅವರು ತಮ್ಮ ತನುಮನಧನಗಳನ್ನು ಈ ರೀತಿಯ ಕಲಾ ಸೇವೆಗೆ ಅರ್ಪಿಸಲು ಸದಾ ಸಿದ್ಧರಿರುತ್ತಾರೆ. ಆದರೆ ಮುಖ್ಯವಾಗಿ ಬೇಕಾದುದೇ ನಮ್ಮಲ್ಲಿ ಇಲ್ಲದ ಕಾರಣದಿಂದಾಗಿ ಮಾತ್ರ ಈ ಘನ ಪ್ರಶ್ನೆಯು ಇಷ್ಟರವರೆಗೆ ವಿಮಾಸಲಾಗಿಡಲಾಗಿದೆ. ಅದೇನೆಂದರೆ ಧನಸಹಾಯ. ಇದೊಂದು ದೊರಕಿತೆಂದರೆ ಕಾರ್ಯಕ್ಷೇತ್ರವು ಕ್ಷಿಪ್ರದಲ್ಲಿಯೇ ವಿಸ್ತಾರವಾಗುವುದರಲ್ಲಿ ತಿಲಮಾತ್ರವಾದರೂ ಸಂಶಯವಿರುವುದಿಲ್ಲ. ಇಂದು ತಕ್ಕ ಸುಸಂದರ್ಭವು ದೊರೆತ ಕಾರಣದಿಂದಾಗಿ ವಿಮಾಸಲಾಗಿಟ್ಟ ಈ ಘನ ಪ್ರಶ್ನೆಯನ್ನು ವಾಣಿಜ್ಯಕ್ಷೇತ್ರದ ಮುಂದಿಡಲಾಗಿದೆ. ಅಲ್ಲದೆ ವಾಣಿಜ್ಯ ಲೋಕದಿಂದ ಈ ಕಾರ್ಯಕ್ಕೆ ಪ್ರೋತ್ಸಾಹವು ದೊರೆತು ನಮ್ಮ ಕಲೆಯ "ನವಸೃಷ್ಟಿ"ಯು ನಿರ್ಮಾಣವಾಗುವುದೆಂಬ ಭರವಸೆಯು ಕೂಡಾ ನಮಗಿದೆ.

(ನೃತ್ಯಕಲೆಯ ಕುರಿತು ಏನಾದರೂ ಹೆಚ್ಚಿನ ವಿವರಗಳನ್ನು ತಿಳಿಯುವ ಕುತೂಹಲವಿರುವವರು ಲೇಖಕರಿಗೆ ಬರೆದಲ್ಲಿ ಅವನ್ನು ತಿಳಿಸಲು ಲೇಖಕರು ಸದಾ ಸಿದ್ಧರಿರುತ್ತಾರೆ. ಸಂ. ಪ್ರ.)

(೫೫ನೇ ಪುಟದಿಂದ ಮುಂದರಿದುದು)

ಹಿಂಜರಿದ ಅಷ್ಟರಲ್ಲಿ ನೆರೆದಿದ್ದ ಜನರಲ್ಲಿ ಹಾಹಾಕಾರ ಕೇಳಿಬಂತು. ಮಿಂಚಿನ ವೇಗದಿಂದ ಮೋಟರು ಬಂಡಿಯೊಂದು ಬಂದು ಹತ್ತೆರಡು ಪೋಲೀಸರದರಿಂದಿಳಿದರು. ಶ್ರೀಧರರಾಯರೊಡನೆ ಏನನ್ನೋ ಮಾತನಾಡಿದರು. ಪುನಃ 'ಶ್ರೀಧರ ರಾಯರಿಗೆ ಜಯವಾಗಲಿ; ಕ್ರಾಂತಿಯು ಬಾಳಲಿ' ಎಂಬ ಸದ್ದು. ಪುನಃ ಚಿನ್ನಪ್ಪ ತನ್ನ ಕಣ್ಣುಗಳನ್ನತ್ತ ಹೊರಳಿಸಿದ. ಪೋಲೀಸರೀರ್ವರ ನಡುವೆ ಶ್ರೀಧರರಾಯರು ಕೈದಿಯಾಗಿ ಹೋಗುತ್ತಿದ್ದರು. ಸ್ವಾರ್ಥತ್ಯಾಗ ಬಡಜನರಿಗಾಗಿ ನಗುಮೊಗದಿಂದ ಸೆರೆಮನೆಯ ಸ್ವೀಕಾರ. ವಿಲಕ್ಷಣವಾಗಿ ನಕ್ಕ ಚಿನ್ನಪ್ಪ.

ಶ್ರೀಧರರಾಯರನ್ನು ಕೈದು ಮಾಡುದುದರಿಂದ ಮುಷ್ಕರಗಾರರತಾಳ್ಮೆ ಕೆಟ್ಟಿತು. ಪೋಲೀಸರ ಮೇಲೆ ಕಲ್ಲಮಳೆಗರೆಯತೊಡಗಿದರವರು. ಪೋಲೀಸರು ಗುಂಡು ಹಾರಿಸತೊಡಗಿದರು. ಚಿನ್ನಪ್ಪ ತೀರಾ ಗಾಬರಿಗೊಂಡ. ನೀಲಿಯ ಚಿತ್ರ ಅವನ ಮನದಾಳದಲ್ಲಿ ಮಿಂಚಿನಂತೆ ಸುಳಿಯುತೊಡಗಿತು. ಅವನಲ್ಲಿಂದ ಓಡಿಹೋಗಲೆತ್ನಿಸಿದ. ಅಷ್ಟರಲ್ಲಿ ಯಾರೋ ಅವನ ಕೈಹಿಡಿದು ಅವನ ಕಿವಿಯಲ್ಲೇನೋ ಉಸುರಿದರು. ಅವನು ಬೆದರಿ ಅತ್ತಿತ್ತ ನೋಡತೊಡಗಿದ. ದೂರದ ಬಾನಿನಂಚಿನಲ್ಲಿ ರಾಧೆ ನೀಲಿಯನ್ನೆತ್ತಿ ಅವನನ್ನು ತನ್ನೆಡೆಗೆ ಕರೆಯುತ್ತಿರುವಂತೆ ತೋರಿತು. 'ಕ್ರಾಂತಿಯು ಬಾಳಲಿ' ಚಿನ್ನಪ್ಪ ಬೊಬ್ಬಿಟ್ಟ. 'ಢಂ' ಎಂದು ಗುಂಡಿನ ಸದ್ದಿನೊಂದಿಗೆ, 'ರಾಧಾ–ನೀಲೀ' ಎಂದರಚುತ್ತ ನೆಲಕ್ಕುರುಳಿದ ಚಿನ್ನಪ್ಪ!

ಆರೋಗ್ಯವರ್ಧಕ ಹವೆಯ ಸ್ಥಳಗಳು

ಪರ್ವತ ಪ್ರದೇಶಗಳಲ್ಲಿ ಕೆಲವನ್ನು ಆರೋಗ್ಯವರ್ಧಕ ಹವೆಯ ಸ್ಥಳಗಳೆಂದು ಪ್ರತ್ಯೇಕಿಸಿದ್ದಾರೆ. ಹೆಚ್ಚಾಗಿ ಸೆಖೆಗಾಲದಲ್ಲಿ ಶ್ರೀಮಂತರು ಈ ಸ್ಥಳಗಳಿಗೆ ಹೋಗಿ ಕೆಲವು ತಿಂಗಳು ಉಳಕೊಳ್ಳುವರು. ಇವುಗಳಲ್ಲಿ ಕೆಲವು ಸ್ಥಳಗಳು ಸಮುದ್ರ ಮಟ್ಟಕ್ಕಿಂತ ಎಷ್ಟು ಎತ್ತರ ಇವೆಯೆಂಬುದನ್ನು ಇಲ್ಲಿ ಕೊಡಲಾಗಿದೆ.

ನೈನಿಕಾಲ್	....	....	6400	ಫೀಟು
ರಾಣಿಖೇತ್	....	....	5980	„
ಆಲ್ಮೋರಾ	....	....	5500	„
ಮಸ್ಸೂರಿ	....	....	6600	„
ಲೇಂಡ್ಸ್‌ಡೌನ್	....	....	6060	„
ಚಕ್ರಾತಾ	....	....	6885	„
ಸಿಮ್ಲಾ	....	....	7116	„
ಕಸೌಲಿ	....	....	6200	„
ಡಾಲ್ಹೌಸಿ	....	....	6740	„
ಮುರ್ರೀ	....	....	7700	„
ಶ್ರೀನಗರ	....	....	5250	„
ಗುಲ್ಮರ್ಗ್	....	....	8659	„
ಡಾರ್ಜಿಲಿಂಗ್	....	....	7163	„
ಕಾಲಿಂಪೋಂಗ್	....	....	4000	„

ಖಾದಿಯನ್ನು ಯಾಕೆ ಕೊಂಡುಕೊಳ್ಳಬೇಕು?

ಖಾದಿಗಾಗಿ ವ್ಯಯಿಸಿದ ಒಂದು ರೂಪಾಯಿಯು ಹೇಗೆ, ಯಾರಿಗೆ ಪಾಲಾಗಿ ಸಲ್ಲುವುದೆಂಬುದನ್ನು ಇಲ್ಲಿ ಕಾಣಿಸಿದೆ.

	ರೂ. ಆ. ಪೈ.
ಹತ್ತಿ ಬೆಳೆಸಿದ ಒಕ್ಕಲಿಗನಿಗೆ	0—3—0
ಹತ್ತಿಯನ್ನು ಸ್ವಚ್ಛಪಡಿಸಿದವನಿಗೆ ಮತ್ತು ನೂಲುವವನಿಗೆ	0—5—9
ನೇಯುವವನಿಗೆ	0—4—6
ಬಟ್ಟೆ ಮಡಿ ಮಾಡುವವನಿಗೆ ಮತ್ತು ಬಣ್ಣ ಕೊಡುವವನಿಗೆ	0—1—3
ಆಡಳಿತೆಯ ಸಂಸ್ಥೆಯವರಿಗೆ	0—1—6
ಜುಮ್ಲಾ . .	1—0—0

ಭಂಡವಲಗಾರರಿಲ್ಲ; ಕೆಲಸಗಾರರಿಗೂ, ಮಾಲಕರಿಗೂ ಜಟಾಪಟಿಗಳಿಲ್ಲ

ನಾನಾ ದೇಶಗಳ ರೈಲ್ವೆ: ಅವುಗಳ ಉದ್ದ

ಸಂಯುಕ್ತ ಅಮೇರಿಕ	241,818	ಮೈಲು
ರಷ್ಯ	52,089	„
ಕೆನಡಾ	42,307	„
ಜರ್ಮನಿ	33,704	„
ಆಸ್ಟ್ರೇಲಿಯಾ	27,130	„
ಹಿಂದೂದೇಶ	42,953	„
ಫ್ರಾನ್ಸ್	27,306	„
ಜಪಾನ್	14,243	„
ಪೋಲೆಂಡ್	11,169	„
ಸ್ವೀಡನ್	10,454	„
ದಕ್ಷಿಣಾಫ್ರಿಕ	13,855	„
ಅರ್ಜೆಂಟಿನಾ	24,850	„
ಗ್ರೇಟ್ ಬ್ರಿಟನ್	20,170	„
ಇಟೇಲಿ	10,519	„

ಮದರಾಸು ಪ್ರಾಂತ್ಯದ ಜನಸಂಖ್ಯೆ

ಹಿಂದೂಸ್ಥಾನದ ಜನಸಂಖ್ಯೆ (1931ರ ಖಾನೇಶುಮಾರಿ ಪ್ರಕಾರ)		374.200,000
ಮದ್ರಾಸ್ ಸಂಸ್ಥಾನದ ಪ್ರಕೃತದ ಜನಸಂಖ್ಯೆ		44.165,000
ಚದರ ಮೈಲಿನ ಜನಸಂಖ್ಯೆಯ ಸಾಂಧ್ರತೆ (Density)		329.
ಅಕ್ಷರ ಜ್ಞಾನವಿದ್ದವರು		9·2%.
ಪಟ್ಟಣಗಳ ಸಂಖ್ಯೆ		330.
ಗ್ರಾಮಗಳ ಸಂಖ್ಯೆ		44,509.
ಹಿಂದುಗಳು		88·31%.
ಮುಹಮ್ಮದೀಯರು		7·07%.
ಕ್ರೈಸ್ತರು		3·80%.
ಜನನಗಳು	ಸಾವಿರಕ್ಕೆ	38·87 ರಂತೆ.
ಮರಣಗಳು	ಸಾವಿರಕ್ಕೆ	23·46 ರಂತೆ.
ಕಂದಾಯದ ಮೊತ್ತ		ರೂ 74,93,50,000.
ಭೂಕಂದಾಯ	(ಮೊತ್ತ ಕಂದಾಯದ ಶೇಕಡಾ ಅಂಶಗಳು)	30·9.
ಅಬಕಾರಿ ತೆರಿಗೆಗಳು (Excise)		25·2.

ರುಧಿರ ದಾನ

(ಲೇಖಕಿ:—"ಲೀಲಾ")

"ಆನಂದನು ಇಂದಿಗೆ ಏಳು ದಿನಗಳಿಂದ ಏನೂ ತಿನ್ನಲಿಲ್ಲ"ವೆಂದು ಮನೋರಮೆಯು ಗದ್ಗದ ಕಂಠದಿಂದ ತನ್ನ ಪತಿಯೊಡನೆ ಹೇಳಿದಳು.

ಸುರೇಶನು "ನಾನೇನು ಮಾಡಲಿ ಡಾಕ್ಟರರನ್ನು ಕರೆತರಲು ನನ್ನ ಕೈಯಲ್ಲಿ ಕಾಸಿಲ್ಲ"ವೆಂದನು.

ಪತಿಯ ಮಾತನ್ನು ಕೇಳಿ ಮನೋರಮೆಯು ಹತ್ತಿರದಲ್ಲೇ ಮಲಗಿದ್ದ ತನ್ನ ಕಂದನನ್ನು ನೋಡಿ ಒಂದು ನಿಶ್ವಾಸವನ್ನು ಬಿಟ್ಟಳು. ಮಗುವಿನ ತಲೆಯ ಮೇಲೆ ಕೈ ಇಟ್ಟು—"ಆಹಾ! ಮಗುವಿನ ತಲೆಯು ಕಾದ ಕಬ್ಬಿಣದಂತಿದೆ. ಬೆಳಗ್ಗಿನಿಂದ ಮಗುವು ಕಣ್ಣು ಕೂಡಾ ತೆರೆಯಲಿಲ್ಲ. ಯಾರಾದರೊಬ್ಬ ಡಾಕ್ಟರರಿಗೆ ತೋರಿಸಿದ್ದಲ್ಲಿ ಮಗುವು ಬೇಗನೇ ಗುಣಮುಖವಾಗುತಿತ್ತು" ಎಂದಳು. ಪತ್ನಿಯ ಮಾತನ್ನು ಕೇಳಿ ಸುರೇಶನು ಎದ್ದು ಹೊರಗೆ ನಡೆದನು.

ಒಂದು ಬಡ ಗುಡಿಸಲಿನಲ್ಲಿ ಮೇಲೆ ಹೇಳಿದ ಸಂಭಾಷಣೆಯು ನಡೆಯುತ್ತಿತ್ತು. ಸುರೇಶನು ಮಾಧವರಾಯರ ಏಕಮಾತ್ರ ಪುತ್ರನಾಗಿದ್ದನು. ಮಾಧವರಾಯರು ಆಗರ್ಭ ಶ್ರೀಮಂತರಾಗಿದ್ದರು. ಮಾತೃಹೀನನಾದ ಸುರೇಶನು ತಂದೆಯ ಕೃಪಾ [illegible] ಬೆಳೆದ ಮಗು. ಮಾಧವರಾಯರ [illegible] ಇಲ್ಲ. [illegible] ಅರ್ಥಾತ್ [illegible] ಕುಟುಂಬದವರಿಗೆ ಸಹಾಯಮಾಡು [illegible] ಕೊಡುವುದು, ಇತ್ಯಾದಿ.

[illegible] ಹೊಲವನ್ನು ಮೆಯ್ದಲ್ಲಿ ತಡೆವವರಾರು? ಸುರೇಶನ ಪಾಲಿಗೆ ಕೇವಲ ಸಾಲವನ್ನು ಇಟ್ಟುಬಿಟ್ಟರು. ಫಲಸ್ವರೂಪವಾಗಿ ಮನೆಮಾರೆಲ್ಲವೂ ಸಾಲಗಾರರ ವಶವಾಯಿತು. ಬೀದಿಯ ಭಿಕಾರಿಯಾದ ಸುರೇಶನು ತನ್ನ ಪತ್ನಿ ಪುತ್ರರೊಡನೆ ಹಿರಿಯರ ಆಸ್ತಿಯಲ್ಲಿ ಉಳಿದ ಅದೊಂದು ಬಡ ಗುಡಿಸಲಿನಲ್ಲಿ ವಾಸಿಸತೊಡಗಿದನು.

ನಿರುದ್ಯೋಗವೆಂಬ ರೋಗದಿಂದ ಪೀಡಿತನಾದ ಸುರೇಶನು ನೆಟ್ಟಗೆ ಡಾಕ್ಟರರ ಶೋಪಿಗೆ ಬಂದನು. ಅಪರಿಚಿತ ವ್ಯಕ್ತಿಯನ್ನು ಕಂಡು ಬಂದ ಕಾರಣವೇನೆಂದು ಡಾಕ್ಟರರು [illegible]ದರು. "ಸ್ವಾಮಿ! ನನ್ನ ಮಗುವು [illegible] ದಿನಗಳಿಂದ [illegible] ತಮ್ಮ [illegible]" ಎಂದು ಸುರೇಶನು ಡಾಕ್ಟರರನ್ನು [illegible].

ಡಾಕ್ಟರರು, "ರೋಗಿಯನ್ನು ನೋಡದೆ ಔಷಧಿಯನ್ನು ಹೇಗೆ ಕೊಡಲಿ" ಎಂದು ಕೇಳಿದರು.

"[illegible]" ಎಂದು ಸುರೇಶನು ಡಾಕ್ಟರರನ್ನು ಕೃತಜ್ಞತೆಯಿಂದ [illegible]. ಡಾಕ್ಟರರು ಕೃತ್ರಿಮ ನಗುವನ್ನು ನಗುತ್ತಾ ಫೀಸನ್ನು ಕೇಳಿದರು.

"ಡಾಕ್ಟರರೇ! ನಾನು ಅತಿ ಬಡವನಾಗಿದ್ದೇನೆ. ಆದರೆ ನನ್ನ ಕೈಯಲ್ಲಿ ಕಾಸಾದೊಡನೆ ತಮ್ಮ ಫೀಸನ್ನು ಕೊಡದೆ ನಿಲ್ಲಲಿಕ್ಕಿಲ್ಲ".

"ಎಲಾ! ನೀನೇನು ಇದೆಲ್ಲವನ್ನೂ ವ್ಯಾಪಾರವೆಂದೆಣಿಸಿದ್ದೀಯಾ?"

ಸುರೇಶನು ಕೆಲವು ಸಮಯ ಯೋಚಿಸಿದನು. ಫೀಸನ್ನು ಕೊಡಲೊಪ್ಪಿ ಡಾಕ್ಟರರನ್ನು ಮನೆಗೆ ಕರಕೊಂಡು ಹೋದನು. ಮಗುವು ಕಣ್ಣುಮುಚ್ಚಿ ಬಿದ್ದುಕೊಂಡಿತ್ತು. ಹತ್ತಿರದಲ್ಲೇ ಮನೋರಮೆಯು ಕುಳಿತಿದ್ದಳು. ಡಾಕ್ಟರರು ಮಗುವನ್ನು ಪರೀಕ್ಷಿಸಿ, 'ನಿಮೋನಿಯಾ' ಜ್ವರವಾಗಿದೆ. ಅತಿ ಜಾಗ್ರತೆಯ ಮತ್ತು ಒಳ್ಳೆ ತರದ ಮದ್ದಿನ ಮತ್ತು ಒಳ್ಳೇ ರೀತಿಯ ಆರೈಕೆಯ ಆವಶ್ಯಕತೆಯಿದೆ" ಎಂದು ಹೇಳಿದರು. ಡಾಕ್ಟರರ ಮಾತನ್ನು ಕೇಳುತ್ತಲೇ ಮನೋರಮೆಯ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ಉಣಲು ಗತಿ ಇಲ್ಲದವರಿಗೆ ಮದ್ದಿಗೆ ಗತಿ ಯಾರು?

ಡಾಕ್ಟರರು ಹೊರಡಲನುವಾದರು. ಸುರೇಶನು ಕಳವಳದಿಂದ "ಡಾಕ್ಟರ ಸಾಹೇಬರೇ ತಮ್ಮ ಫೀಸನ್ನು ಆದಷ್ಟು ಬೇಗ ಕೊಡುವೆನು. ನಮ್ಮ ಬಡತನವು ಗೋಚರವಾಗದಿರಲಿಕ್ಕಿಲ್ಲ". ಸುರೇಶನ ಮಾತುಕೇಳಿ ಡಾಕ್ಟರರು ಸಿಟ್ಟಿನಿಂದ ಕೆಂಪಗಾದರು. "ನಿನ್ನ ಬಡತನಕ್ಕೆ ಯಾರು ಅಳುತ್ತಾರೆ. ಒಳ್ಳೇ ಮಾತಿನಿಂದ ಫೀಸು ಕೊಡದು ಇಲ್ಲದಿದ್ದಲ್ಲಿ ಪರಿಣಾಮವು ನೆಟ್ಟಗಾಗಲಾರದು" ಎಂದರು.

ಸುರೇಶನು ದೀನ ಸ್ವರದಿಂದ "ಡಾಕ್ಟರರೇ ನನ್ನೊಡನೆ ಧನವಿದ್ದಲ್ಲಿ ತಾವು ಕೇಳುವ ಮೊದಲೇ ನಾನು ಕೊಟ್ಟುಬಿಡುತ್ತಿದ್ದೆ. ಆದರೆ ನನ್ನೊಡನೆ ಕುರುಡು ಚಿಕ್ಕಾಸು ಕೂಡಾ ಇಲ್ಲ. ದಿನಕ್ಕೆ ಹತ್ತಿಪ್ಪತ್ತು ರೂಪಾಯಿ ಸಂಪಾದನೆ ಮಾಡುವ ತಮಗೆ ನಮ್ಮಂಥ ಬಡಬಗ್ಗರಿಗೆ ಸಹಾಯ ಮಾಡಿದಲ್ಲಿ ಪರಮಾತ್ಮನು ಕೆಟ್ಟದು ಮಾಡಲಿಕ್ಕಿಲ್ಲ. ಆದುದರಿಂದ ನನ್ನ ಮೇಲೆ ದಯವಿಟ್ಟು ಇಂದಿನ ಮಟ್ಟಿಗೆ ನನ್ನನ್ನು ಸುಧಾರಿಸಿದ್ದಲ್ಲಿ ತಮಗೆ ಪುಣ್ಯ ಬಂದೀತು."

"ಎಲಾ! ಕರಕೊಂಡು ಬಂದು ಕೆಲಸವಾದ ಮೇಲೆ ಮೋಸ ಕೊಡುವಿಯಾ? ಚಿಂತಿಲ್ಲ ನೋಡಿಕೊಳ್ಳುವೆನು" ಎಂದು ಡಾಕ್ಟರರು ಹೊರಟರು. ಸುರೇಶನು ಡಾಕ್ಟರರೊಡನೆ ತಮ್ಮ ಋಣವನ್ನು ಹೇಗಾದರೂ ಮಾಡಿ ಸಲ್ಲಿಸುವೆನೆಂದು ಹೇಳಿ ಹಿಂದಿರುಗಿದನು.

ಡಾಕ್ಟರರು ಹೊರ ಹೋದರೂ ಮನೋರಮೆಯು ತನ್ನಲ್ಲೇ ಮಗ್ನಳಾಗಿದ್ದಳು. ಅವಳಿಗೆ ಬಾಹ್ಯ ಪ್ರಪಂಚದ ಅರಿವೇ ಇಲ್ಲ. ಡಾಕ್ಟರರನ್ನು ಕರತಂದು ತೋರಿಸಿಯಾಯಿತು. ಆದರೆ ಮದ್ದು ತರುವುದು ಎಲ್ಲಿಂದ? ಎಂಬ ಪ್ರಶ್ನೆಯು ಉದ್ಭವಿಸಿತು.

ಸುರೇಶನು ಔಷಧಿಯ ಪಟ್ಟಿಯನ್ನು ಪಡಕೊಂಡು ನೆಟ್ಟಗೆ ತನ್ನ ತಂದೆಯ ಪಾಲುಗಾರನಾದ ರಾಮರಾಯರಲ್ಲಿಗೆ ಹೋದನು. ಇಂದು ರಾಮರಾಯರಲ್ಲಿ ದೊಡ್ಡ ಔತಣ. ಇಷ್ಟಮಿತ್ರರನೇಕರು ಕೂಡಿದ್ದರು.ಸುರೇಶನು ಬಂದ ಕೂಡಲೇ ರಾಮರಾಯರ ಮುಖಕ್ಕೆ ಗಂಟುಬಿತ್ತು. ಅವರು ಸುರೇಶನನ್ನು ಒಂದೆಡೆ ಕರೆದು, ಬಂದ ಕಾರಣವನ್ನು ವಿಚಾರಿಸಿದರು. ಸುರೇಶನು ತನ್ನ ಸ್ಥಿತಿಯನ್ನು ವಿವರಿಸಿ ತನಗೆ [illegible] ಸಹಾಯ[illegible] ಕೇಳಿಕೊಂಡನು. [illegible] ತಾನೇ ಬಡವ [illegible] ಸುರೇಶನನ್ನು [illegible].

ಬಡಪಾಯಿಯಾದ ಸುರೇಶನು ದುಃಖದಿಂದ ಮನೆಯತ್ತ [illegible]. ಹಿಂದಿನ ಘಟನೆಗಳೆಲ್ಲವೂ ಚಿತ್ರಪಟದಂತೆ ಅವನ ಕಣ್ಣೆದಿರಿಗೆ ಬರತೊಡಗಿದುವು. ತಂದೆಯ ಕಾಲದಲ್ಲಿ ತಾನು ಅನುಭವಿಸಿದ ಸುಖ, ಆಗ ರಾಮರಾಯರು ತನ್ನನ್ನು ಪ್ರೀತಿಸಿದ ರೀತಿ, ತಂದೆಯ ಮೃತ್ಯುವಿನೊಡನೆ ಪಾಲುಗಾರರು ಮಾಡಿದ ಸುಲಿಗೆ. ಸಾಲಗಾರರು ಮಾಡಿದ ಅತ್ಯಾಚಾರ ಇವೆಲ್ಲವೂ ಅವನಿಗೆ ನೆನಪಾದುವು.

❀ ❀ ❀ ❀ ❀

ಸುರೇಶನು ಮನೆ ಸೇರುವಾಗ ಕತ್ತಲಾಗಿತ್ತು. ಹಣತೆಯೊಂದು ತನ್ನ ಅಲ್ಪ ಪ್ರಕಾಶವನ್ನು ಬೀರುತ್ತಿತ್ತು. ಆ ಅಲ್ಪ ಪ್ರಕಾಶದಿಂದ ಗುಡಿಸಲು ಇನ್ನೂ ಭೀಕರವಾಗಿ ತೋರುತ್ತಿತ್ತು. ಸುರೇಶನು ಮ್ಲಾನವದನನಾಗಿ ಬಂದು ಮಗುವಿನ ಬಳಿಯಲ್ಲಿ ಕುಳಿತನು. ಸುರೇಶನ ಮುಖವನ್ನು ಕಂಡ ಕೂಡಲೇ ಮನೋರಮೆಗೆ ನಡೆದ ಸಂಗತಿ ತಿಳಿದುಹೋಯಿತು. ಸುರೇಶನು ಮಗುವಿನ ಸ್ಥಿತಿ ಹೇಗಿದೆಯೆಂದು ಪ್ರಶ್ನಿಸಿದನು. ಮನೋರಮೆಯ ಕಣ್ಣುಗಳು ಅಶ್ರುಪೂರಿತವಾದುವು. ಉತ್ತರದ ಬದಲು ಕಣ್ಣೀರಿನ ಬೊಟ್ಟುಗಳು ಕೆಳಗೆ ಉರುಳಿದುವು.

ಸಮಯ ಕಳೆದಂತೆ ಹಣತೆಯ ಎಣ್ಣೆಯೂ ಕಮ್ಮಿಯಾಗತೊಡಗಿತು. ಸುಯ್ಯನೆ ಅದೊಂದು ಗಾಳಿಯು ಬೀಸಿತು. ಹಣತೆಯು ನಂದಿ ಹೋಯಿತು. ಹಣತೆಯ ಜ್ಯೋತಿಯೊಡನೆ ಸುರೇಶನ ವಂಶ ಅಂಕುರವೂ ಮುರಿದು ಹೋಯಿತು. ಮನೋರಮೆಯೂ ತನ್ನ ಕಂದನನ್ನು ಹಿಂಬಾಲಿಸಿದಳು. ಈ ಎರಡು ಶವಗಳ ನಡುವೆ ಜೀವವಿದ್ದ ಶವದಂತೆ ಸುರೇಶನು ಕುಳಿತಿದ್ದನು.

❀ ❀ ❀ ❀ ❀

ಅರುಣೋದಯವಾಯಿತು. ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಗೂಡನ್ನು ಬಿಟ್ಟು ಹೊರಹೊರಟವು. ಅಲ್ಲಲ್ಲಿ ಉದಯರಾಗವು ಕೇಳಬರತೊಡಗಿತು. ಕೃಷಿಕರು ನೇಗಿಲುಗಳನ್ನು ಹಿಡಕೊಂಡು ಹೊಲದತ್ತಕಡೆ ಸಾಗುತ್ತಿದ್ದರು. ನಿರ್ಜನವಾದ ಸ್ಮಶಾನ ಭೂಮಿಯಿಂದ ಸುರೇಶನು ಮಗುವಿನ ಅಂತ್ಯಕ್ರಿಯೆಯನ್ನು ಮುಗಿಸಿ ಮನೆಯತ್ತ ಕಡೆ ಬರುತ್ತಿದ್ದನು. ಸ್ಮಶಾನದ ಬಾಗಿಲಲ್ಲೇ ಬೆಳಗಿನ ಝಾವಕ್ಕೆ ತಿರುಗಾಡಲು ಬಂದ ರಾಮರಾಯರು ಸುರೇಶನಿಗೆ ಭೇಟಿಯಾದರು. ರಾಮರಾಯರನ್ನು ಕಂಡ ಕೂಡಲೇ ಸುರೇಶನ ಕಣ್ಣುಗಳು ಕೆಂಪಗಾದವು. ಅವನ ಮುಖದಲ್ಲಿ ರಾಕ್ಷಸೀ ಭಾವವು ಮೂಡಿತು. ಅವನು ನೆಟ್ಟಗೆ ರಾಮರಾಯನ ಹತ್ತರ ಹೋಗಿ "ನರಾಧಮನೇ! ನನ್ನ ಸರ್ವಸ್ವವನ್ನೂ ಅಪಹರಿಸಿ ಇಂದು ನನಗೆ ಈ ಸ್ಥಿತಿ ಪ್ರಾಪ್ತವಾಗಲು ನೀನೇ ಕಾರಣ. ಮಗುವಿಗೆ ಅಸ್ವಸ್ಥವೆಂದು ಬೇಡ ಬಂದಲ್ಲಿ ಚಿಕ್ಕಾಸೂ ಇಲ್ಲವೆಂದು ಮರಳಿ ಕಳುಹಿಸಿದಿ. ನನ್ನ ಸರ್ವನಾಶಕ್ಕೆ ನೀನೇ ಕಾರಣವಾದಿ.

ಹೊಟ್ಟೆ ತುಂಬ ಇದ್ದವರಿಗೆ ಮೃಷ್ಟಾನ್ನ ಭೋಜನ ಹಾಕಲು ನಿನಗೆ ಅನುಕೂಲತೆ ಇದೆ ಅಲ್ಲವೇ, ಚಿಂತೆಯಿಲ್ಲ." ಎಂದು ಹೇಳಿ ಸುರೇಶನು ರಾಮರಾಯರ ಅತಿ ಸಮೀಪ ಹೋಗಿ ಅವರ ಕುತ್ತಿಗೆಯಲ್ಲಿದ್ದ ಬಂಗಾರದ ಸರಪಣಿಯನ್ನು ಎಳೆದು ತೆಗೆದು ಮನೆಯತ್ತ ಕಡೆ ಧಾವಿಸಿದನು.

ಸುರೇಶನ ರೂಪವನ್ನೂ ಅವನ ಕೃತಿಯನ್ನೂ ಕಂಡು ಬೆದರಿದ ರಾಮರಾಯರು ಜೀವಕ್ಕೆ ಬಂದದ್ದು ಬೆರಳಲ್ಲೇ ಹೋಯಿತು. ಪ್ರಾಣ ಉಳಿದಲ್ಲಿ ಬೇಡಿ ತಿಂದೇನು ಎಂದು ನೇರಾಗಿ ಮನೆಯ ಕಡೆ ನಡೆದರು. ಹಾದಿಯಲ್ಲೇ ಪೋಲೀಸ್ ಸ್ಟೇಶನಿನಲ್ಲಿ ಸರಪಣಿ ಅಪಹರಿಸಿದವನ ಪತ್ತೆಯನ್ನು ಕೊಟ್ಟುಹೋದರು.

ಸುರೇಶನು ಮನೋರಮೆಯ ಶವವನ್ನು ನಿಟ್ಟಿಸುತ್ತಾ ಕುಳಿತಿದ್ದನು. ಸರಪಣಿಯು ಶವದ ಬದಿಯಲ್ಲಿ ಬಿದ್ದುಕೊಂಡಿತ್ತು. ಅಷ್ಟರಲ್ಲಿ ಪೋಲೀಸರು ಬಂದು ಅವನನ್ನು ಸುತ್ತುಗಟ್ಟಿದರು.

"ಎಲಾ! ಕಳ್ಳಾ, ಕಳವಿನ ಮಾಲು ಸಹಿತ ನೀನು ಸಿಕ್ಕಿಬಿದ್ದೆ. ಬರೀ ಮಾತಿನಿಂದ ಬಂದೆ ಒಳ್ಳೇದು. ಇಲ್ಲವಿದ್ದಲ್ಲಿ [illegible]ಕೊಂಡು ಹೋಗುವೆವು" ಎಂದು ಪೋಲೀಸರು ಸುರೇಶನನ್ನು ಉದ್ದೇಶಿಸಿ ಹೇಳತೊಡಗಿದರು.

ಸುರೇಶನು ಪೋಲೀಸರನ್ನು ಉದ್ದೇಶಿಸಿ "[illegible] ನಾನು ನಿಮ್ಮೊಟ್ಟಿಗೆ ಬರುವೆನು ಆದರೆ! ನಾನು ನಿಜವಾಗಿಯೂ ಕಳ್ಳನಲ್ಲ. [illegible] ನನ್ನು ಸುಡುವ [illegible]ಗೋಸ್ಕರ ರಾಮರಾಯರ ಸರಪಣಿ ತೆಗೆದದ್ದು ನಿಜ. ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಆದರೆ! ದಯಾಳುಗಳಾದ ನೀವು ನನಗೆ ಸ್ವಲ್ಪ ಸಮಯ ಕೊಟ್ಟಲ್ಲಿ ನನ್ನ ಹೆಂಡತಿಯ ಅಂತಿಮ ಕ್ರಿಯೆಯನ್ನು ಮುಗಿಸಿ ನಿಮ್ಮೊಟ್ಟಿಗೆ ಬರುತ್ತಿದ್ದೆ."

ರಾಮರಾಯರು ಸುರೇಶನನ್ನು ಇದ್ದಂತೆ ಕರಕೊಂಡು ಬರಬೇಕೆಂದು ಪೋಲೀಸರ ಕೈಬಿಸಿ ಮಾಡಿದ್ದರು. ಅತ್ತಲಾಗೆ ಧನದ ಮೋಹ ಇತ್ತಲಾಗೆ ಮನುಷ್ಯತ್ವ ಇವೆರಡರ ಮಧ್ಯದಲ್ಲಿ ಪೋಲೀಸರು ಸಿಕ್ಕಿಬಿದ್ದರು. ಆದರೂ ಅವರು ಇಬ್ಬರನ್ನೂ ಸಮನಾದ ರೀತಿಯಲ್ಲಿ ತೃಪ್ತಿಪಡಿಸಲು ಮನೋರಮೆಯ ಅಂತಿಮ ಕ್ರಿಯೆಯನ್ನು ತಾವು ಮಾಡಲೊಪ್ಪಿ, ಸುರೇಶನನ್ನು ಪೋಲೀಸು ಠಾಣೆಗೆ ಕರಕೊಂಡ್ಹೋದರು. ಮನೆಯಿಂದ ಹೊರಡುವಾಗ ಸುರೇಶನು ಮನೋರಮೆಯನ್ನು ಉದ್ದೇಶಿಸಿ "ಹಾಯ್! ಮನೋರಮೆ ನಿನ್ನ ಅಂತಿಮ ಸಂಸ್ಕಾರವು ಅನಾಥರಂತೆ ನಡೆಯಬೇಕಾಯಿತಲ್ಲವೇ? ನನ್ನಂತಹ ದುರ್ಭಾಗ್ಯನು ಜಗತ್ತಿನಲ್ಲಿ ಯಾರೂ ಇರಲಿಕ್ಕಿಲ್ಲ." ಎಂದನು.

❋ ❋ ❋ ❋ ❋

ಇಂದು ಸುರೇಶನ ನ್ಯಾಯ ನಿರ್ಣಯದ ದಿನವಾಗಿತ್ತು. ಶ್ರೀಮಂತನ ಮಗನಾದ ಸುರೇಶನ ವಿಚಾರಣೆಯನ್ನು ನೋಡಲು ಕೋರ್ಟಿನಲ್ಲಿ ಜನರು ಕಿಕ್ಕಿರಿದು ತುಂಬಿದರು. ಕಷ್ಟಕಾಲದಲ್ಲಿ ಸಹಾಯ ಮಾಡುವರೆ ಯಾರೂ ಮುಂದುವರಿಯಲಿಲ್ಲವಾದರೂ ಇಂದಿನ ಸೊಬಗನ್ನು ಕಣ್ತುಂಬಾ ನೋಡಲು ಅನೇಕರು ತಮ್ಮ ಕೆಲಸವನ್ನು ಬದಿಗೊತ್ತಿ ಕೋರ್ಟಿನಲ್ಲಿ ಹಾಜರಾಗಿದ್ದರು. ಸುರೇಶನಿಂದ ಎಳೆಯಲ್ಪಟ್ಟ ರಾಮರಾಯರ ಸರಪಣಿಯು ನ್ಯಾಯಾಧೀಶರ ಇದಿರುಗಡೆ ಮೇಜಿನ ಮೇಲೆ ಇಡಲ್ಪಟ್ಟಿತ್ತು.

"ಸುರೇಶ! ರಾಮರಾಯರ ಸರಪಣಿಯನ್ನು ಕದ್ದದ್ದು ನೀನು ಒಪ್ಪುವಿಯಾ?" ಎಂದು ನ್ಯಾಯಾಧೀಶರು ಕೇಳಿದರು.

ಸುರೇಶನು ನ್ಯಾಯಾಧೀಶರನ್ನು ಉದ್ದೇಶಿಸಿ ಹೇಳತೊಡಗಿದನು. "ಧರ್ಮಾವತಾರರೇ! ಕಾನೂನಿನ ಪ್ರಕಾರ ನಾನು ಅಪರಾಧಿಯಾಗಿರಲೂ ಬಹುದು. ಆದರೆ ಬಡತನದ ಬೇಗೆಯಿಂದ ನನಗೆ ಹೀಗೆ ಮಾಡಬೇಕಾಯಿತು. ನನ್ನ ಮಗುವಿನ ಆರೈಕೆಯ ಖರ್ಚಿಗೋಸ್ಕರ ನನ್ನ ಪರಿಚಿತರಾದ ರಾಮರಾಯರಲ್ಲಿಗೆ ಹೋದೆ. ಆದರೆ ಅಲ್ಲಿಂದ ನಿರಾಶನಾಗಿ ಹಿಂದಿರುಗಿದೆ. ಇದೇ ರಾಮರಾಯರು ನನ್ನ ತಂದೆಯ ಪಾಲುಗಾರನಾಗಿದ್ದಾಗ, ನನ್ನ ತಂದೆಯು ಮೃತವಾದೊಡನೆ ನನ್ನ ಸರ್ವಸ್ವವನ್ನೂ ಅಪಹಾರಮಾಡಿ ನನಗೆ ಬೀದಿಯ ಭಿಕಾರಿಯನ್ನಾಗಿ ಮಾಡಿದರು. ಆದರೆ ಆಗ ನಾನು ಮರುಗಲಿಲ್ಲ. ಕಷ್ಟಕಾಲದಲ್ಲಿ ಕೆಲವು ರೂಪಾಯಿ ಕಡ ಕೇಳಲು ಹೋದಾಗ ಕೈಯಲ್ಲಿ ಚಿಕ್ಕಾಸೂ ಕೂಡಾ ಇಲ್ಲವೆಂದು ನನ್ನನ್ನು ಹಿಂದಿರುಗಿಸಿದರು. ಬೇಡವಾದವರಿಗೆ ಮೃಷ್ಟಾನ್ನ ಕೊಡಲು ಕಾಸಿದೆ. ದೊಡ್ಡ ಹುದ್ದೆದಾರರು ಬಂದಲ್ಲಿ ಟೀಪಾರ್ಟಿ ಕೊಡುವುದು ಅನಾವ್ಯಯವಲ್ಲ. ವರ್ತಮಾನ ಪತ್ರಿಕೆಗಳಲ್ಲಿ ಹೆಸರು ಬರುವ ವರ್ಗಣಿಗೆ ಕೊಡಲು ಬೇಕಾದಷ್ಟು ಹಣವಿದೆ. ಆದರೆ ಕೇವಲ ಬಡವನೊಬ್ಬನಿಗೆ ಕಷ್ಟಕಾಲದಲ್ಲಿ ಕೆಲವು ರೂಪಾಯಿಗಳನ್ನು ಕೊಟ್ಟು ಉಪಕಾರ ಮಾಡಿದಲ್ಲಿ ಅನಾವ್ಯಯ. ಹೆಂಡತಿಯ ಶವ ಸಂಸ್ಕಾರಕ್ಕೆ ನನ್ನೊಡನೆ ಚಿಕ್ಕಾಸು ಕೂಡಾ ಇರಲಿಲ್ಲ. ಆದುದರಿಂದ ಒಬ್ಬಂಟಿಯಾಗಿ ಬರುತ್ತಿದ್ದ ರಾಮರಾಯರ ಸರಪಣಿಯನ್ನು ಎಳೆದು ತೆಗೆದದ್ದು ನಿಜ. ಇಂಥಾ ಆಗರ್ಭ ಶ್ರೀಮಂತರು ಬಡವರಿಗೋಸ್ಕರ ಏನಾದರೊಂದು ಉದ್ಯೋಗ ಒದಗಿಸಿಕೊಟ್ಟಲ್ಲಿ ನನ್ನಂಥ ಬಡ ಕುಟುಂಬಗಳು ಸುಧಾರಣೆ ಹೊಂದುತ್ತಿದ್ದುವು." ಮಾತಾಡುತ್ತಾ ಸುರೇಶನ ಕಂಠವು ಗದ್ಗದವಾಯಿತು. ಕಣ್ಣುಗಳಲ್ಲಿ ನೀರು ತುಂಬಿತು.

[ನಿಜವಾಗಿಯೂ ವ್ಯಾಪಾರಸ್ಥರು ಮನಸ್ಸು ಮಾಡಿದ್ದಲ್ಲಿ ನಿರುದ್ಯೋಗವನ್ನು ಸಂಪೂರ್ಣವಾಗಿ ಅಲ್ಲವಿದ್ದರೂ ತಕ್ಕ ಮಟ್ಟಿಗೆ ದೂರ ಮಾಡಬಲ್ಲರು. ಕೇವಲ ಲಾಭದ ಕಡೆ ದೃಷ್ಟಿಯನ್ನಿಡದೆ, ಕೆಲವು ಔದ್ಯೋಗಿಕ ಸಂಸ್ಥೆಗಳನ್ನು [illegible] ಬಹಳ ಉಪಕಾರವಾದೀತು. ಪ್ರಥಮದಲ್ಲಿ ಹೆಚ್ಚು ಲಾಭ [illegible] ನೌಕರರ ಸಂಬಳ ಹೆಚ್ಚಿಸಲು [illegible] ನೌಕರರಿಗೆ ಕೆಲಸ ಸಿಗದಾ[illegible] [illegible] ಬರುತ್ತದೆ.]

[illegible] ನ್ಯಾಯಾಧೀಶರು ಸುರೇಶನನ್ನು [illegible] ವರ್ಷಗಳ [illegible] ಹೇಳಿದರು.

❋ ❋ ❋ ❋ ❋

[illegible] ಸಂಗತಿ ನಡೆದು ನಾಲ್ಕು ವರ್ಷಗಳಾದುವು. ಡಾಕ್ಟರರ ಮಗುವಿಗೆ [illegible] ಡಾಕ್ಟರರೊಬ್ಬರು ಹೇಳಿ ಹೊರಟುಹೋದರು. ಅಂದು [illegible] ಹೊಸ ಮಾದರಿಯಾಗಿತ್ತು. ದುಡ್ಡು ಕೊಟ್ಟರೂ ರುಧಿರ ಕೊಡಲು ಯಾರೂ ಮುಂದುವರಿಯಲಿಲ್ಲ. ಡಾಕ್ಟರರು ಮಗುವಿನ ಆಶೆಯನ್ನು ಬಿಟ್ಟು ಬಿಟ್ಟರು. ಈ ಸಂಗತಿಯು ಜೈಲಿನಿಂದ ಬಿಡುಗಡೆ ಹೊಂದಿದ ಸುರೇಶನಿಗೆ ತಿಳಿದುಬಂತು. ಅವನು ಡಾಕ್ಟರನಲ್ಲಿಗೆ ಬಂದು ತಾನು ತನ್ನ ರಕ್ತವನ್ನು ಮಗುವಿಗೋಸ್ಕರ ಕೊಡಲೊಪ್ಪಿದನು. ಡಾಕ್ಟರರು ಸುರೇಶನನ್ನು ಗುರುತಿಸಲಿಲ್ಲ. ಪ್ರಥಮವಾಗಿ ಡಾಕ್ಟರರು ಸ್ವಲ್ಪ ಸಂಕೋಚಪಟ್ಟರು. ಆದರೆ ಸುರೇಶನು ಅಂದಿನ ನೆನಪನ್ನು ಮಾಡಿಕೊಟ್ಟನು. "ಡಾಕ್ಟರರೇ! ಅಂದು [illegible] ಕೊಡುವೆನೆಂದು ಪುಸಲಾಯಿಸಿ ಕರಕೊಂಡು ಹೋಗಿ [illegible] ಹಿಂದಿರುಗಿಸಿದ್ದು ತಾವು ಮರೆಯದಿರಲಾರಿರಿ. ಆದರೆ ಅಂದು ನಾನು, ತಮ್ಮ ಋಣವನ್ನು ಹೇಗಾದರೂ ಸಲ್ಲಿಸುವೆನೆಂದು ಹೇಳಿದ ಮಾತನ್ನು ಸತ್ಯಪಡಿಸಲು ಇಂದು ಪರಮಾತ್ಮನು ನನಗೆ ಸಂದರ್ಭವನ್ನು ಒದಗಿಸಿ ಕೊಟ್ಟಿದ್ದಾನೆ. ಕಷ್ಟಕಾಲದಲ್ಲಿ ಶ್ರೀಮಂತನಿರಲಿ, ಬಡವನಿರಲಿ, ಇಬ್ಬರೂ ಒಂದೇ. ಆದರೆ ಶ್ರೀಮಂತರು ಧನದ ಸಹಾಯದಿಂದ ಅದನ್ನು ಪಾರುಮಾಡುತ್ತಾರೆ. ಆದರೆ ಬಡವನಿಗೆ ಪರಮಾತ್ಮನೇ ಸಹಾಯ. ಡಾಕ್ಟರರೇ! ಇದು ಆಲೋಚಿಸುವ ಸಮಯವಲ್ಲ. ಇದು ಜೀವನ ಮರಣದ ಪ್ರಶ್ನೆಯಾಗಿದೆ. ಮನಸ್ಸಿನಲ್ಲಿ ಏನೂ ಬೇಸರಪಡದೆ ನನ್ನನ್ನು ಋಣಮುಕ್ತನನ್ನಾಗಿ ಮಾಡಿರಿ." ಡಾಕ್ಟರರು ನಿರುಪಾಯರಾದರು. ಬಂದವನನ್ನು ಕಳುಹಿಸಿದ್ದಲ್ಲಿ ಬೇರೆ ಉಪಾಯವಿಲ್ಲ. ದುಡ್ಡು ಕೊಟ್ಟರೂ ರಕ್ತ ಕೊಡುವವನು ಸಿಗದಿದ್ದಾಗ ತಾನಾಗಿ ಬಂದವನನ್ನು ಹಿಂದಿರುಗಿಸಲು ಮಗುವಿನ ಮೇಲಣ ಮಮತೆ ಬಿಡದು. ಸುದೈವದಿಂದ ಸುರೇಶನ ರಕ್ತವು ಡಾಕ್ಟರರಿಗೆ ಬೇಕಾದ ತರದ್ದಾಗಿತ್ತು. ಡಾಕ್ಟರರು ರುಧಿರವನ್ನು ತೆಗೆದು ತಮ್ಮ ಕೆಲಸವನ್ನು ಪೂರೈಸಿದರು. ಮಗುವು ಗುಣ ಮುಖವಾಗುತ್ತಾ ಬಂತು. ಮಗುವಿನ ಸ್ಥಿತಿಯು ಸುಧಾರಿಸಿದುದನ್ನು ಕಂಡು ಸುರೇಶನ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು. ಡಾಕ್ಟರರು ಸಂತೋಷದಿಂದ 100 ರೂಪಾಯಿಯ ನೋಟುಗಳನ್ನು ತಂದು ಸುರೇಶನ ಕೈಯಲ್ಲಿ ಕೊಟ್ಟರು. ಆದರೆ ಸುರೇಶನು ತೆಗೆದುಕೊಳ್ಳಲೊಪ್ಪಲಿಲ್ಲ. ಅವನ ನಿಸ್ಪೃಹತೆಯನ್ನು ಕಂಡು ಡಾಕ್ಟರರು ಚಕಿತರಾದರು. ಅದೊಂದು ದಿನ ಸುರೇಶನು ಡಾಕ್ಟರರ ಮನೆಯಿಂದ ಕಾಣೆಯಾದನು. ಡಾಕ್ಟರರು ಎಷ್ಟು ಪ್ರಯತ್ನಪಟ್ಟರೂ ಸುರೇಶನ ಪತ್ತೇ ಸಿಕ್ಕಲಿಲ್ಲ.

ರಾಮರಾಯರಿಗೆ ಈ ಸಂಗತಿ ಗೊತ್ತಾದ ಕೂಡಲೇ ಅವರ ಮನಸ್ಸು ಹೇಗಾಯಿತೊ,, ದೇವರೇ ಬಲ್ಲ!!!

ಆಧಾರದಿಂದ.



ನರ್ತಕಿ

(ಲೇಖಕರು: ಶ್ರೀ। ಬಿ. ವಿ. ಬಾಳಿಗ.)

ನಳಿನಿಯು ದೇಶ-ವಿದೇಶಗಳಲ್ಲಿ ಸನ್ಮಾನ ಪಡೆದಳು ಕಲ್ಕತ್ತೆಯಲ್ಲಿ ಅವಳಿಗೆ ದೊರೆತ ಅಭೂತಪೂರ್ವ ಸನ್ಮಾನದಿಂದ ಪುಳಕಿತಳಾದಳು. ಆದರೆ ಅವಳ ಮನೋಮಂದಿರದ ಮೂರ್ತಿಯನ್ನು ಕಾಣದೆ ಕಳವಳಿಸಿದಳು ಗೋಪಾಲನು ಬಂದನು. ಆದರೆ.....!



ಪ್ರಸಿದ್ಧ ನರ್ತಕಿ ನಳಿನಿಯು ಕಲ್ಕತ್ತದಲ್ಲಿ ತನ್ನ ಮೊದಲನೇ ಪ್ರದರ್ಶನವನ್ನು ಮಾಡಲಿದ್ದಾಳೆ. ನಾಟಕ ಶಾಲೆಯಲ್ಲಿ ಕಿಕ್ಕಿರಿದು ತುಂಬಿದ ಜನಸ್ತೋಮವು ಏಕಕಾಲದಲ್ಲಿ ತೆರೆಯಕಡೆಗೆ ತಮ್ಮ ದೃಷ್ಟಿಯನ್ನು ತಿರುಗಿಸಿತು. ಕಾರಣ ಪ್ರತ್ಯಕ್ಷ ನಳಿನಿಯೇ ಜನರ ಮುಂದೆ ನಾಟಕರಂಗದಲ್ಲಿ ಕೈಮುಗಿದು ನಿಂತಿರುತ್ತಾಳೆ. ಆಂಗ್ಲ ದೇಶದವರೇ ಅವಳನ್ನು ಹಿಂದೂದೇಶದ ಪ್ರಸಿದ್ಧ ನರ್ತಕಿ ಎಂದು ಕೊಂಡಾಡಿರುತ್ತಾರೆ.

ಪ್ಯಾರಿಸ್ ನಗರದಲ್ಲಿ ಜನರ ಆದರಕ್ಕೆ ಪಾತ್ರಳಾದ ನಳಿನಿಯು ಯುದ್ಧದ ಮೊದಲು ಆ ನಗರದಲ್ಲಿ ಹಲವು ನೃತ್ಯ ಪ್ರದರ್ಶನಗಳನ್ನು ತೋರಿಸಿದ್ದಳು. ಅವಳ ಚಾತುರ್ಯವನ್ನು ದೂರದಿಂದಲೇ ಕೇಳಿದ ಆಂಗ್ಲ ದೇಶದವರು ಅವಳನ್ನು ತಮ್ಮ ದೇಶಕ್ಕೆ ಆಮಂತ್ರಿಸಿದ್ದರು. ತನ್ಮಧ್ಯೆ ಅವಳಿಗೆ "ನರ್ತನ ರಾಣಿ" ಎಂಬ ಬಿರುದನ್ನು ಕೂಡಾ ಅವರು ಕಳುಹಿಸಿ ಆಯಿತು. ಈ ವಾರ್ತೆಯು ನಿಮಿಷ ಮಾತ್ರದಲ್ಲಿ ಅಟ್ಲಾಂಟಿಕ್ ಸಾಗರದ ಆಚೆಗೆ ಪಸರಿಸಿ, ಅಮೇರಿಕಾ ದೇಶದವರು ಕೂಡಾ ಇವಳ ಬರುವಿಕೆಯನ್ನು ಹಾರೈಸತೊಡಗಿದರು. ನ್ಯೂಯಾರ್ಕ್ ನಗರದಲ್ಲಿ ಅವಳಿಗೆ ಸಿಕ್ಕಿದ ಪ್ರೋತ್ಸಾಹವು ಅಷ್ಟಿಷ್ಟಲ್ಲ. ಅವಳು ಮೂರು ತಿಂಗಳು ಮಾತ್ರ ಅಲ್ಲಿ ನೆಲಸುವುದೆಂದು ಗೊತ್ತುಮಾಡಿದ್ದಳು. ಆದರೆ ಹೋಲಿವುಡ್ಡಿನ ಅಧಿಕಾರಿಗಳ ಒತ್ತಾಯದಿಂದ ಆರು ತಿಂಗಳ ಅವಧಿ ಅಲ್ಲಿಯೇ ಕಳೆಯಬೇಕಾಯಿತು. ಹೋಲಿವುಡ್ಡಿನ ಅಧಿಕಾರಿಗಳು ಅವಳ ನೃತ್ಯಕ್ಕೆ ಮರುಳಾಗಿದ್ದರು. ಹೋಲಿವುಡ್ಡಿನ ಆಯಾಯಾ ಚಲಚ್ಚಿತ್ರ ಸಂಸ್ಥೆಗಳಿಂದ ನಳಿನಿಗೆ ಕರೆ ಬಂತು. ಆದರೆ ಅವಳು ಯಾವುದಕ್ಕೂ ಗಮನಕೊಡದೆ ತನ್ನ ಊರನ್ನು ಸೇರಲು ಬಯಸಿದಳು. ಈ ನಡುವೆ ಯುದ್ಧವು ಪ್ರಾರಂಭವಾದ ವಾರ್ತೆಯು ಕೇಳಿಬಂದುದರಿಂದ ಅವಳು ಹಿಂದೂದೇಶಕ್ಕೆ ಬರಲು ಅಡ್ಡಿಯಾಗಿ, ತನಗೆ ಜಪಾನಿಗಳಿಂದ ಬಂದ ಆಮಂತ್ರಣವನ್ನು ಸ್ವೀಕರಿಸುವಂತಾಯಿತು. ಮೂರು ತಿಂಗಳುಗಳ ಕಾಲ ಅವಳು ಟೋಕಿಯೋದಲ್ಲಿದ್ದು "ಹಿಂದೂದೇಶದ ನೃತ್ಯರಾಣಿ" ಎಂಬ ಬಿರುದನ್ನು ಸಂಪಾದಿಸಿದಳು. ಈ ರೀತಿ ಐದು ವರುಷಗಳ ಅವಧಿಯನ್ನು ಪರರಾಷ್ಟ್ರಗಳಲ್ಲಿ ವೆಚ್ಚಮಾಡಿ ಕೊನೆಗೆ ತನ್ನ ದೇಶವಾದ ಕಲ್ಕತ್ತೆಯ ಕಡೆಗೆ ಪ್ರಯಾಣವನ್ನು ಹೂಡಿದಳು. ದಾರಿಯಲ್ಲಿ ಎರಡು ಕಡೆಗಳಲ್ಲಿ ಅವಳನ್ನು ತಡೆದರು. ಮೊದಲನೇಯದಾಗಿ ಬರ್ಮೀಯರು ತಮ್ಮ ದೇಶದಲ್ಲಿ ಒಂದು ಪ್ರದರ್ಶನವನ್ನು ಅಗತ್ಯವಾಗಿ ತೋರಿಸಬೇಕೆಂದು ಅವಳನ್ನು ಒತ್ತಾಯಪಡಿಸಿದರು. ಎರಡನೇಯ ಸಲ ರಂಗೂನಿನಲ್ಲಿ ಆಮಂತ್ರಿಸಿದರು. ಉಪಾಯವಿಲ್ಲದೆ ನಳಿನಿಯು ಎರಡನ್ನೂ ಸ್ವೀಕರಿಸಿ ಕೊನೆಗೆ ತನ್ನ ದೇಶವನ್ನು ಸೇರಿದಳು. ಇಂದು ಅವಳ ಮಾತೃದೇಶದಲ್ಲಿ ಅವಳ ಮೊದಲ ಪ್ರದರ್ಶನ.

ಜನರ ಸ್ವಾಗತ ಘೋಷದಿಂದ ನಾಟ್ಯಶಾಲೆಯು ತುಂಬಿತು. ಈ ನಡುವೆ ನಳಿನಿಯ ಮೊದಲ ನೋಟವು ಎರಡನೇ ಪಂಕ್ತಿಯ ನಡುವೆ ಖಾಲಿ ಇರುವ ಎರಡು ಕುರ್ಚಿಗಳ ಮೇಲೆ ಬಿದ್ದಿತು. ನಾಟ್ಯಶಾಲೆಯಲ್ಲಿ ಖಾಲಿಬಿದ್ದವುಗಳೆಂದರೆ ಆ ಎರಡು ಕುರ್ಚಿಗಳು ಮಾತ್ರ. ಉಳಿದ ಎಲ್ಲಾ ಸ್ಥಳಗಳು ಕಲ್ಕತ್ತೆಯ ಹಿರಿಯನಿಂದ ಕಿರಿಯನ ವರೆಗೆ ತುಂಬಿದ್ದರೂ ನಳಿನಿಯ ನೋಟಕ್ಕೆ ಮೊದಲಾಗಿ ಬಿದ್ದವುಗಳೆಂದರೆ ಆ ಎರಡು ಖಾಲಿ ಕುರ್ಚಿಗಳು ಮಾತ್ರ. ನಳಿನಿಯ ನಾಟ್ಯಕ್ಕೆ ಮೊದಲಾಯಿತು. ಜನರೆಲ್ಲರೂ ಆಕೆಯ ಕಡೆಗೆ ತಮ್ಮ ಗಮನವೆಲ್ಲವನ್ನಿಟ್ಟು ಆಕೆಯ ನೃತ್ಯಲಹರಿಯಲ್ಲಿ ಮಗ್ನರಾದರು. ಪ್ರತಿಯೋರ್ವರೂ ಆಕೆಯ ವಿವಿಧ ಹಾವಭಾವಗಳನ್ನು ಎವೆಯಿಕ್ಕದೆ ದೃಷ್ಟಿಸುತ್ತಿದ್ದರು. ಮಿಂಚಿನೋಪಾದಿಯಲ್ಲಿ ಕ್ಷಣಮಾತ್ರದಲ್ಲಿ ನಾನಾ ರೀತಿಯಲ್ಲಿ ಚಲಿಸುವ ಆಕೆಯ ಕರಗಳು ಎಲ್ಲರ ಗಮನವನ್ನೂ ಆಕೆಯ ಕಡೆಗೆ ಆಕರ್ಷಿಸುತ್ತಿದ್ದುವು. ಅವಳ ಆ ಚಲನೆಯಲ್ಲಿ ಯಾವುದೋ ಒಂದು ತರದ ಮಾಯಾಶಕ್ತಿಯು ಅಡಕವಾಗಿದೆ ಎಂಬುದಾಗಿ ಪ್ರೇಕ್ಷಕರ ಭಾವನೆಯಾಗಿತ್ತು. ಬರೇ ನೃತ್ಯದಿಂದ ಈ ತರದ ಆನಂದವನ್ನು ಪಡೆಯಲು ಸಾಧ್ಯವಿದೆಯೆಂಬುದು ಜನರಿಗೆ ತಿಳಿದುದು ಈಗ ಮಾತ್ರ. ಪ್ರತ್ಯಕ್ಷ ದೇವತೆಗಳೇ ಅವಳ ನೃತ್ಯಕ್ಕೆ ಮನಸೋತು, ತಾವೂ ನೃತ್ಯಮಾಡತೊಡಗಿದರು ಎಂದರೆ ಅತಿಶಯೋಕ್ತಿಯಾಗಲಾರದು.

ನಳಿನಿಯ ಭಾವವಾದರೋ ಬೇರೆ ರೀತಿಯಲ್ಲಿಯೇ ಮಾರ್ಪಾಟವನ್ನು ಹೊಂದಿತ್ತು. ಎಂದೂ ಬಾರದ ಒಂದು ತರದ ಜಿಗುಪ್ಸೆಯು ಇಂದು ಆಕೆಯಲ್ಲಿ ಉತ್ಪನ್ನವಾಗಿದ್ದಿತು. ಇಂದು ಆಕೆಯು ನೃತ್ಯದ ಕಡೆಗೆ ಒಯ್ದುದು ಪೂರ್ಣ ಮನಸ್ಸಲ್ಲ. ಕೇವಲ ಮನಸ್ಸಿನ ಒಂದು ಭಾವ ಮಾತ್ರ. ಅವಳ ನೃತ್ಯದಲ್ಲಿ ಅದೊಂದು ತರದ ಪವಿತ್ರತೆಯು ಹೊರಸೂಸಲ್ಪಟ್ಟರೂ, ಅವಳ ಮನೋಭಾವನೆಗಳು ಮಾತ್ರ ಬೇರೊಂದು ಕಡೆಯಲ್ಲಿ ಬೇರೂರಿದ್ದುವು. ಅವಳ ಮನಸ್ಸಿನಲ್ಲಿ ಚಲಿಸುವ ಪದಾರ್ಥಗಳೆಂದರೆ ನಡುವೆ ಖಾಲಿಬಿಟ್ಟಿರುವ ಆ ಎರಡು ಕುರ್ಚಿಗಳು ಮಾತ್ರ.

ಆ ಎರಡು ಸ್ಥಳಗಳಲ್ಲಿ ಆಕೆಯು ಇಂದು ಕಾಣಬೇಕಿದ್ದುದೆಂದರೆ ಆಕೆಯ ತಾಯಿಯನ್ನು, ಮತ್ತು ಏಕಮಾತ್ರ ಜೀವದ ಗೆಳೆಯನನ್ನು. ನಳಿನಿಯ ಪಿತನು ಆಕೆಯು ಬಾಲ್ಯದಲ್ಲಿರುವಾಗಲೇ ತೀರಿಹೋಗಿದ್ದನು. ಅವಳ ತಾಯಿಯನ್ನು ಕಲ್ಕತ್ತದಲ್ಲಿಯೇ ಬಿಟ್ಟು ಆಕೆಯು ಶಿಕ್ಷಣಕ್ಕಾಗಿ ಯುರೋಪಿಗೆ ಹೋಗಿ ಐದು ವರ್ಷ ಕಾಲ ಕಳೆದಿದ್ದಳು. ಪರದೇಶದಲ್ಲಿ ಆಕೆಗೆ ತಿಂಗಳಿಗೊಂದಾವರ್ತಿ ತನ್ನ ತಾಯಿಯಿಂದ ಕ್ಷೇಮದ ಕುರಿತು ಪತ್ರಗಳು ಬರುತ್ತಿದ್ದುವು. ಆದರೆ ಪರರಾಷ್ಟ್ರಗಳಲ್ಲಿ ಯುದ್ಧವು ಪ್ರಾರಂಭವಾದಂದಿನಿಂದ ಮಾತ್ರ ಮಗಳ ಮತ್ತು ತಾಯಿಯ ಪತ್ರವ್ಯವಹಾರಗಳಿಗೆ ತೊಡಕುಂಟಾಗಿ ಇಂದಿಗೆ ಒಂಬತ್ತು ತಿಂಗಳ ಅವಧಿಯು ದೀರ್ಘಕಾಲದ ಮೌನವ್ರತದಲ್ಲಿಯೇ ಕಳೆದು ಹೋಯಿತು. ಆಕೆಯ ಏಕಮಾತ್ರ ಜೀವದ ಗೆಳೆಯನೆಂದರೆ ಗೋಪಾಲ. ಆತನು ಅವಳ ಬಾಲ್ಯದ ಸಹಪಾಠಿ; ಅಲ್ಲದೆ ಅವಳಿಗೂ ಆತನಿಗೂ ದೂರದ ಸಂಬಂಧವೂ ಇತ್ತು. ಅವರೀರ್ವರೂ ತಮ್ಮ ಬಾಲ್ಯವನ್ನು ಒಂದೇ ಮನೆಯಲ್ಲಿ ಕಳೆದವರು. ಇಂದು ನಳಿನಿಯು ನಿರೀಕ್ಷಿಸುತ್ತಿರುವುದು ಅವರೀರ್ವರ ಆಗಮನವನ್ನು. ಆದರೆ ಅವರೀರ್ವರೂ ಅಷ್ಟು ಸಮಯದ ವರೆಗೆ ಬಾರದಿರಲು ಕಾರಣವೇನಿರಬಹುದು? ಇದೇ ನಳಿನಿಯ ಹಾವಭಾವಗಳಲ್ಲಿ ಆಗಾಗ್ಗೆ ಚಲಿಸತೊಡಗಿದ ಘನವಾದ ವಿಷಯ.

ನಳಿನಿಯು ಕಲ್ಕತ್ತವನ್ನು ಪ್ರಾತಃಕಾಲದಲ್ಲಿಯೇ ಸೇರಬಹುದು, ಎಂದು ಭಾವಿಸಿದ್ದಳು. ಬೆಳಿಗ್ಗೆ ಕಲ್ಕತ್ತವನ್ನು ಮುಟ್ಟಿದರೆ ಚಿನ್ಸೂರದಲ್ಲಿ ವಾಸಿಸುತ್ತಿದ್ದ ತನ್ನ ತಾಯಿಯನ್ನು ಒಮ್ಮೆ ನೋಡಿ ಬರಬಹುದೆಂಬ ಕಾಂಕ್ಷೆಯು ಅವಳಲ್ಲಿತ್ತು. ಅಲ್ಲದೆ ಪ್ರದರ್ಶನವು ಸಾಯಂಕಾಲಕ್ಕೆಂದು ಗೊತ್ತುಮಾಡಿದ್ದುದರಿಂದ ಅವಳಿಗೆ ಸಮಯವೂ ಅನುಕೂಲವಾಗಿ ದೊರಕಿತ್ತು. ಆದರೆ ಮಳೆಗಾಲದ ದೆಸೆಯಿಂದಾಗಿ ಹಡಗು ಏಳು ಘಂಟೆ ತಡವಾಗಿ ಬಂದು ಮುಟ್ಟಿತು. ಇದರಿಂದಾಗಿ ನಳಿನಿಯ ಮೊದಲನೇ ಆಶೆಯೇ ನಿರಾಶೆಯಾಯಿತು. ಅವಳು ಪ್ರದರ್ಶನಕ್ಕೆ ಬರೇ ಒಂದು ಘಂಟೆ ಕಾಲ ಮೊದಲು ಬಂದು ಮುಟ್ಟಿದಳು. ಆದರೆ ತನ್ನ ತಾಯಿಯನ್ನು ಕೂಡಲೇ ಕಾಣಬೇಕೆಂಬ ಆತುರವು ಅವಳಲ್ಲಿದ್ದುದರಿಂದ ಆಕೆಯು ಬಂದ ಕೂಡಲೇ ಚಿನ್ಸೂರಕ್ಕೆ ಒಂದು ತಂತಿಯನ್ನು ಕಳುಹಿಸಿದ್ದಳು. ಅಲ್ಲದೆ ನಾಟಕ ಶಾಲೆಯ ಪ್ರಥಮ ತರಗತಿಯ ಎರಡು ಸೀಟುಗಳನ್ನು ತನ್ನ ತಾಯಿ ಮತ್ತು

ಗೋಪಾಲನಿಗಾಗಿ ಕಾದಿಟ್ಟಿದ್ದಳು. ಓರ್ವ ಸೇವಕನನ್ನು ಕೂಡಾ ಆ ಕ್ಷಣವೇ ರೈಲು ಮೂಲಕ ಚಿನ್ಸೂರಿಗೆ ಕಳುಹಿಸಿದ್ದಳು. ಆದಷ್ಟು ಬೇಗನೇ ತನ್ನ ತಾಯಿಯನ್ನು ಕಾಣಲು ಇದೇ ಉಪಾಯವು ತಕ್ಕುದೆಂದು ಆಕೆಗೆ ಹೊಳೆದಿತ್ತು. ಆದರೆ ಗೋಪಾಲನಿಗಾಗಿ ಆಕೆಯು ಆತುರಪಟ್ಟ ವಿಷಯವು ಬಹಳ ಗೋಪ್ಯವಾಗಿತ್ತು.

ನೃತ್ಯಮಾಡಲು ತೊಡಗಿದ ನಳಿನಿಗೆ ಐದು ವರ್ಷದ ಹಿಂದಿನ ಕಥೆಯು ಕಣ್ಣ ಮುಂದೆ ಹೊಳೆದಂತಾಯಿತು. ಆಗ ಆಕೆಯು ಬರೇ ಹದಿನಾರು ವರ್ಷದ ತರುಣಿ. ಆಕೆಯನ್ನು ಅನಿಲನಿಗೆ ವಿವಾಹ ಮಾಡುವುದೆಂದು ನಿಶ್ಚಯವಾಗಿತ್ತು. ಆದರೆ ಗೋಪಾಲನಿಗೆ ಮಾತ್ರ ಅವಳು ಮದುವೆಯಾಗಿ ಗೃಹಿಣಿಯಾಗುವುದು ಸಮ್ಮತಿಯಿರಲಿಲ್ಲ. ಆತನು ಬಯಸಿದ್ದುದೆಂದರೆ ಆಕೆಯು ಹಿಂದೂದೇಶದಲ್ಲಿ ಎಲ್ಲ ತರುಣಿಯರಿಗಿಂತ ಹೆಚ್ಚಿನ ವಿಶೇಷತೆಯನ್ನು ಪಡೆದು ಆದರ್ಶ ನಾರೀರತ್ನವೆಂದು ಹೊಗಳಿಸಿಕೊಳ್ಳಬೇಕೆಂಬುದಾಗಿ. "ಅನಿಲನು ನಿನಗೆ ಯೋಗ್ಯ ವರನಲ್ಲ. ಕಾರಣ ನೀನು ಕೀರ್ತಿವಂತಳಾಗಲಿರುವವಳು. ನೀನು ಮದುವೆಯಾಗ ಬೇಕಾದುದು ಕೀರ್ತಿಯನ್ನು" ಇದು ಗೋಪಾಲನು ನಳಿನಿಗೆ ಆಗಾಗ್ಯೆ ಬೋಧಿಸುತ್ತಿದ್ದ ಹಿತವಾದ. ಆತನ ಈ ಮಾತುಗಳು ಆಕೆಯಲ್ಲಿ ಒಂದು ತರದ ನವ ಚೈತನ್ಯವನ್ನುಂಟುಮಾಡಿ ಆಕೆಯು ತನ್ನ ಮುಂದಿನ ಏಳ್ಗೆಯ ಪ್ರತಿಬಿಂಬವನ್ನು ಕಣ್ಣಮುಂದೆ ಕಂಡಳು.

ತಾನು ಗೋಪಾಲನೊಡನೆ ಮಾಡುತ್ತಿದ್ದ ಸಂಭಾಷಣೆ, ಗೋಪಾಲನು ತನ್ನಲ್ಲುಸುರುವ ಸವಿನುಡಿಗಳು, ತಾಯಿಯೊಡನೆ ತಾನು ನಡೆದುಕೊಂಡ ರೀತಿ, ತಾಯಿಯ ಮರುನುಡಿಗಳು ಇವೇ ಮೊದಲಾದ ಪೂರ್ವದ ದೃಶ್ಯಗಳು ಒಂದರ ಹಿಂದೆ ಒಂದು ಆಕೆಯ ಕಣ್ಣಮುಂದೆ ಚಲಿಸತೊಡಗಿದುವು. "ಇನ್ನು ಎಷ್ಟು ಕಾಲ ಈ ರೀತಿ ನೃತ್ಯದಲ್ಲಿ ನಿನ್ನ ಕಾಲವನ್ನು ವ್ಯರ್ಥ ಮಾಡುವೆ. ಬರೇ ನೃತ್ಯದಿಂದ ಗಂಡನನ್ನು ಸಂಪಾದಿಸಬಹುದೆಂದು ತಿಳಿದಿರುವೆಯಾ" ಎಂದು ಆಗಾಗ ತಾಯಿಯು ಆಕೆಗೆ ಗದರಿಸುತ್ತಿದ್ದುದು, ಆಕೆಗೆ ಈಗಲೀಗ ನೆನಪಾಯಿತು.

"ಆದರೆ ಇದು ಬರೇ ಕಾಲಹರಣೆ ಅಲ್ಲವಮ್ಮಾ" ಎಂದು ಆಕೆಯು ಕೊಟ್ಟ ಉತ್ತರವೂ ಆಕೆಯ ಸ್ಮೃತಿಯಲ್ಲಿ ಬಂದಿತು.

"ಖಂಡಿತವಾಗಿಯೂ ಇದು ಕಾಲಹರಣೆಯಲ್ಲದೆ ಬೇರೆಯಲ್ಲ. ಆದರಿಂದ ಸಿಗುವ ಪ್ರಯೋಜನವಾದರೂ ಏನಿರುವುದು? ಮರ್ಯಾದೆಯುಳ್ಳ ಕುಲದವರು ಓರ್ವ ನರ್ತಕಿಯನ್ನು ತಮ್ಮ ಸೊಸೆಯನ್ನಾಗಿ ಎಂದೂ ಬರಮಾಡಲಾರರು. ಕೇವಲ ಹುಚ್ಚನಾದ ಆ ಗೋಪಾಲನ ಮಾತಿನಿಂದಾಗಿ ಇನ್ನು ಬರಲಿರುವ ಕೀರ್ತಿಗಾಗಿ ಹಣಗಾಡಿ ಏನೂ ಪ್ರಯೋಜನವಿಲ್ಲ. ಆತನು ಸಂಬೋಧಿಸಿದ ಆ ಕೀರ್ತಿಯು ಬರೇ ಕನ್ನಡಿಯೊಳಗಿನ ಗಂಟು ಎಂದು ಮುಂದೆ ನಿನಗೆ ತಿಳಿಯದೆ ಹೋಗಲಾರದು. ಆತನು ಕೇವಲ ಹುಚ್ಚನು. ಅಲ್ಲದೆ ಆತನ ಮಾತುಗಳು ತಿರುಕನು ಕನಸ್ಸು ಕಂಡಂತೆ. ಅನಿಲನು ನಿನಗೆ ತಕ್ಕ ವರನು. ಆದರೆ ನೀನು ನರ್ತಕಿ ಎಂದು ತಿಳಿದುಹೋದರೆ ಆತನು ಇಲ್ಲವೇ ಆತನ ಮಾತಾಪಿತೃರು ನಿನ್ನೊಡನೆ ವಿವಾಹಕ್ಕೆ ಒಡಂಬಡಲಾರರು" ಈ ರೀತಿಯಾಗಿ ಆಗಾಗ ತಾಯಿಯು ನಳಿನಿಯನ್ನು ಗದರಿಸುತ್ತಲೇ ಇದ್ದಳು. ಆದರೆ ನಳಿನಿಯು ಮಾತ್ರ ತಾಯಿಯ ಮಾತಿಗೆ ಒಂದಿಷ್ಟಾದರೂ ಗಮನವನ್ನು ಕೊಡದೆ ಗೋಪಾಲನ ಮಾತನ್ನು ದೃಢವಾಗಿ ನಂಬಿ ತನ್ನ ಮುಂದಿನ ಕೀರ್ತಿಗಾಗಿ ಹಾರೈಸುತ್ತಿದ್ದಳು. ಇದು ಐದು ವರ್ಷದ ಹಿಂದಿನ ಮಾತು.

ನಳಿನಿಯ ಮೊದಲನೇ ಪ್ರವೇಶವು ಮುಗಿದೊಡನೆಯೇ ಪ್ರೇಕ್ಷಕ ವರ್ಗದವರಿಂದ ಏಕ ಕಂಠದಲ್ಲಿ ಜಯಘೋಷವು ಹೊರಟಿತು. ಕೈಚಪ್ಪಾಳೆಯಿಂದ ಕಿವಿ ಕಿವುಡಾಯಿತು. ಇತರ ದೇಶದಲ್ಲಿ ದೊರೆತಂತೆ, ತನ್ನ ಊರಾದ ಕಲ್ಕತ್ತದಲ್ಲಿಯೂ ನಳಿನಿಗೆ ವರ್ಣಿಸಲಸದಳವಾದ ಆದರವು ದೊರೆಯಿತು ಮುಂದಿನ ಸಾಲಿನಲ್ಲಿ ಕುಳಿತ ಉಚ್ಚ ತರಗತಿಯ ಪ್ರೇಕ್ಷಕ ಪ್ರೇಕ್ಷಕಿಯರು ನಳಿನಿಯ ವಿಷಯ ತುಂಬಾ ಗೌರವಪಟ್ಟು ಆಕೆಯನ್ನು ಪೂರ್ವದ ದೇವದಾಸಿಯರೊಡನೆ ಸರಿ ಹೋಲಿಸಿದರು. ನಳಿನಿಯಿಂದಾಗಿ ತಮ್ಮ ತವರೂರಾದ ಕಲ್ಕತ್ತಕ್ಕೆ ಇಂದು ನೃತ್ಯಕಲೆಯಲ್ಲಿ ಪ್ರಥಮಸ್ಥಾನವು ದೊರೆಯಿತೆಂದು ಜನರೆಲ್ಲರೂ ಹಿಗ್ಗಿದರು. ಈ ರೀತಿ ಮೊದಲನೇ ಪ್ರವೇಶದಲ್ಲಿಯೇ ಜನರ ಆಕರ್ಷಣೆಗೆ ಪಾತ್ರಳಾಗುವುದೆಂದರೆ ನರ್ತಕಿಗೆ ತುಂಬಾ ಶ್ರೇಯಸ್ಸಿನ ಮಾತು.

ಹತ್ತು ನಿಮಿಷದ ವಿರಾಮಕ್ಕಾಗಿ ಒಳಗೆ ಹೋದ ನಳಿನಿಗೆ ಮಾತ್ರ ಮನಸ್ಸಿನಲ್ಲಿ ನೆಮ್ಮದಿಯಿರಲಿಲ್ಲ. ಆಕೆಯ ಹೃದಯದಲ್ಲಿ ತನ್ನ ತಾಯಿಯ ಮತ್ತು ಆಪ್ತ ಸ್ನೇಹಿತನ ವಿಷಯ ಭಾವನಾತರಂಗಗಳು ಒಂದರ ಮೇಲೆ ಒಂದು ಉಕ್ಕೇರಿ ಬರುತ್ತಿದ್ದುವು. ತನ್ನ ನೃತ್ಯದ ವಿಷಯ ಅವಳಿಗೆ ಒಂದು ತರದ ಅಪೂರ್ಣತೆಯು ಭಾಸವಾಯಿತು. ನಾಟಕ ಶಾಲೆಯಲ್ಲಿ ಬರಿಯ ಎರಡು ಸ್ಥಳಗಳು ಮಾತ್ರ ನಡುವೆ ಖಾಲಿ ಬಿದ್ದಿದ್ದರೂ, ನಳಿನಿಗೆ ಇಡೀ ನಾಟಕಶಾಲೆಯು ಶೂನ್ಯ ವೆಂದೆನಿಸಿತು. ಈ ರೀತಿ ಮನಸ್ಸಿನಲ್ಲಿ ತಳಮಳಗೊಂಡು ಆಕೆಯು ಕೂಡಲೇ ಟೆಲಿಫೋನ್ ಮೂಲಕ ರೈಲ್ವೆ ಅಧಿಕಾರಿಗಳೊಡನೆ ಸಂಭಾಷಿಸತೊಡಗಿದಳು.

ಚಿನ್ಸೂರಿನಿಂದ ಬಿಟ್ಟ ಕಡೆಯ ಗಾಡಿಯು ಈಗಾಗಲೇ ಐದು ನಿಮಿಷಕ್ಕೆ ಮೊದಲು ಬಂದು ಮುಟ್ಟಿದೆ ಎಂಬ ಸಮಾಚಾರವು ರೈಲ್ವೆ ಅಧಿಕಾರಿಗಳಿಂದ ಬಂದಿತು. ಅದನ್ನು ತಿಳಿದ ಮರುಕ್ಷಣದಲ್ಲಿ ನಳಿನಿಯು ತನ್ನ ಅಲಂಕಾರ ಮಂದಿರಕ್ಕೆ ಬಂದು ಮನಸ್ಸಿನ ಆಯಾಸವನ್ನು ಪರಿಹರಿಸಲು ಕೊಂಚ ಕಾಲ ಒಂದು ಸೋಫಾಕ್ಕೆ ಒರಗಿ ಕುಳಿತಳು.

ನಳಿನಿಯು ತನ್ನ ಎರಡನೇ ಪ್ರವೇಶದ ಕೊನೆಯಲ್ಲಿ ತಾನು ನಿರೀಕ್ಷಿಸುತ್ತಿರುವವರ ಆಗಮನವನ್ನು ಕಂಡಳು. ಅವರು ನಾಟಕ ಶಾಲೆಯ ದ್ವಾರವನ್ನು ಪ್ರವೇಶಿಸಿ, ಒಳಗೆ ಬರುವ ಮೊದಲೇ ನಳಿನಿಯ ಕೋಮಲ ದೃಷ್ಟಿಯು ಅವರಿಬ್ಬರ ಮೇಲೆ ಬಿತ್ತು. ನಾಟಕ ಶಾಲೆಯ ಅಧಿಕಾರಿಗಳು ಅವರಿಬ್ಬರನ್ನೂ ಮರ್ಯಾದೆಯಿಂದ ಬರಮಾಡಿ ಅವರಿಗಾಗಿ ಕಾದಿಟ್ಟ ಸೀಟಿನ ಕಡೆಗೆ ಅವರನ್ನು ಕರೆತಂದುದನ್ನೂ ಆಕೆಯು ಕಂಡಳು. ಗೋಪಾಲನನ್ನು ಮಾತ್ರ ಒಬ್ಬ ಚಿಕ್ಕ ಹುಡುಗನು ಕೈಗೆ ಹಿಡಿದು ಆತನ ಆಸನದ ಬಳಿ ಕರೆತಂದನು. ಅವರೀರ್ವರನ್ನು ಕಂಡ ಮಾತ್ರದಿಂದಲೇ ನಳಿನಿಗೆ ಹಿಡಿಯಲಾರದಷ್ಟು ಆನಂದವಾಯಿತು. ಆಕೆಯ ತಾಯಿಯಲ್ಲಿ ಆಕೆಯು ವಿಶೇಷ ಬದಲಾವಣೆಗಳನ್ನು ಕಾಣಲಿಲ್ಲ. ಗೋಪಾಲನು ಮಾತ್ರ ತೀರಾ ಹೊಸಬನಂತೆ ಆಕೆಗೆ ಕಂಡುಬಂದನು. ಆತನು ಕಣ್ಣಿಗೆ ಬಣ್ಣದ ಕನ್ನಡಿಯೊಂದನ್ನು ಇಟ್ಟಿದ್ದನು. ಮೋರೆಯಲ್ಲಿ ಆನಂದದ ಚಿಹ್ನೆಯು ಮುಗುಳುನಗೆ ನಗುವಂತಿತ್ತು. [illegible] ಪ್ರವೇಶದ ಕೊನೆಯಲ್ಲಿ ಕೂಡಾ ಮೊದಲಿಗಿಂತ ಇಮ್ಮಡಿಯಾಗಿ ಕೈಚಪ್ಪಾಳೆಗಳು ಕೇಳಿಬಂದವು. ನಳಿನಿಗೆ ತಾನು ಕಂಡ ಹೊಸ ದೃಶ್ಯದ ದೆಸೆಯಿಂದಾಗಿ ಒಂದು ತರದ ನವಚೇತನವು ಉಂಟಾಗಿ, ಆಕೆಯು [illegible] ಸ್ಫೂರ್ತಿಭೂತಳಾದಳು.

ಪುನಃ ಐದು ವರುಷದ ಹಿಂದಿನ ವಿಚಾರಗಳು ಆಕೆಗೆ ಮೇಲಿಂದ ಮೇಲೆ ಹೊಳೆದು ಬಂದವು. ಗೋಪಾಲನ ಮಾತಿನ [illegible] ಆಕೆಯ ತಾಯಿಗೆ ಪ್ರತ್ಯಕ್ಷ ಕಂಡುಬರುವುದೆಂದು ಆಕೆಯು ಮನಸ್ಸಿನಲ್ಲಿ ಹಿಗ್ಗಿದಳು. ತನ್ನ ಇಂದಿನ ಕೀರ್ತಿಗೆ ಕಾರಣಭೂತನಾದ ಗೋಪಾಲನಿಗೆ [illegible] ಆನಂದವಾದೀತು ಎಂಬುದು ಆಕೆಗೆ ಗ್ರಹಿಸಲಸದಳವಾಯಿತು.

ಮೂರನೇ ನೃತ್ಯವು [illegible] ಮೇಲೆನಿಸಿತು. ಕಾರಣ ಈಗ ನಳಿನಿಯ ಮನಸ್ಸಿನಲ್ಲಿದ್ದ [illegible] ವಾಗಿವೆ. ಸೂರ್ಯಕಿರಣಗಳಂತೆ ಆಕೆಯ [illegible] ಯನ್ನು ಬೆಳಗಿಸಿದವು. ನಳಿನಿಯ ಮನಸ್ಸಿನಲ್ಲಿ [illegible] ಪುನಃ ಹೊಸ ವಿಚಾರಗಳು ಮೂಡತೊಡಗಿದವು. ತಾನು ಅನಿಲನೊಡನೆ ತಾಯಿಯ ಮಾತಿನಂತೆ ಅಂದು ವಿವಾಹವಾಗಿದ್ದರೆ, ಇಂತಹ ಕೀರ್ತಿಯು ಎಂದೂ ಲಭಿಸುತ್ತಿರಲಿಲ್ಲವೆಂಬುದು ಆಕೆಗೆ ತಿಳಿದುಬಂತು. ತನ್ನ ಎಳೆಯ ಪ್ರಾಯದಲ್ಲಿ ತಾಯಿಯು ಗೋಪಾಲನೊಡನೆ ಮಾಡುತ್ತಿದ್ದ ಸಂಭಾಷಣೆಯ ಕೆಲವು ತಿರುಳು ಮಾತುಗಳೂ ಆಕೆಯ ನೆನಪಿಗೆ ಬಂದುವು.

"ನೀನು ನನ್ನ ಕುವರಿಯನ್ನು ತಪ್ಪು ಮಾರ್ಗಕ್ಕೆಳೆಸುವೆ. ನೀನು ಉಂಡ ಮನೆಗೆರಡನ್ನು ಬಯಸಲೆಳಸುವ ಅಧಮನು, ತಿಳಿಗೇಡಿಯು. ಈ ರೀತಿಯಾಗಿ ನೀನು ವರ್ತಿಸುತ್ತಿರುವುದು ಕೇವಲ ನಿನ್ನ ಸ್ವಾರ್ಥಾಭಿಲಾಷೆಗಾಗಿ. ಇಲ್ಲವಿದ್ದ ಪಕ್ಷದಲ್ಲಿ ನೀನ್ಯಾಕೆ ಅವಳನ್ನು ಅನಿಲನೊಡನೆ ವಿವಾಹವಾಗುವಂತೆ ಬೋಧಿಸಬಾರದು?" ಈ ರೀತಿಯಾಗಿ ತನ್ನ ತಾಯಿಯು ಒಮ್ಮೆ ಗೋಪಾಲನನ್ನು ಜರೆದುದು ನಳಿನಿಗೀಗ ಜ್ಞಾಪಕವಾಯಿತು. ಆದರೆ ಗೋಪಾಲನು ತಾಳ್ಮೆಯಿಂದ ಕೊಟ್ಟ ಉತ್ತರವೂ ಆಕೆಗೆ ಹೊಳೆಯದೆ ಇರಲಿಲ್ಲ 'ಅಮ್ಮಾ, ನಿಜವಾಗಿಯೂ ನಾನು ನೀವು ಹೇಳಿದಂತೆ ನೀಚನಹುದು. ನೀವು ಬೇಕಾದರೆ ನನ್ನನ್ನು ಯಾವ ರೀತಿಯ ಕೆಟ್ಟ ಹೆಸರಿನಿಂದ ಕರೆಯಿರಿ. ನಾನು ಅದಕ್ಕೆ ಒಂದಿಷ್ಟೂ ಬೇಸರ ಪಡುವಂತಿಲ್ಲ. ಆದರೆ ನಳಿನಿಯು ಮದುವೆಯಾಗುವುದು ಮಾತ್ರ ನನಗೆಷ್ಟಕ್ಕೂ ಸಮಂಜಸವಿಲ್ಲ. ಆಕೆಯು ಮುಂದೆ ದೊಡ್ಡ ಸ್ಥಾನವನ್ನು ಪಡೆಯಲಿರುವವಳು. ನಿಮಗೆ ಈಗ ಕಂಡುಬಾರದಿದ್ದರೂ, ಮುಂದಾದರೂ ದೇವರು ತೋರಿಸಿಯೇ ತೋರಿಸುವನು. ನೀವು ಆ ಕಾಲವು ಶೀಘ್ರದಲ್ಲಿಯೇ ಬರುವುದನ್ನು ಕಾಣಲಿರುವಿರಿ. ಆದರೆ ನನಗೆ ಮಾತ್ರ ಅದನ್ನು ನೋಡುವ ಪುಣ್ಯವು ಇದೆಯೋ ಇಲ್ಲವೋ ಎಂಬುದನ್ನು ನಾನೀಗ ಖಂಡಿತವಾಗಿ ಹೇಳಲಾರೆ. ಆದರೆ ಅದನ್ನು ನಾನು ಈಗಲೇ ನನ್ನ ಜ್ಞಾನದೃಷ್ಟಿಯಿಂದ ಕಂಡಿರುವೆನಾದ ಕಾರಣದಿಂದ ನನ್ನ ಮನಸ್ಸಿಗೆ ಪೂರ್ಣ ಶಾಂತಿಯು ದೊರೆತಿದೆ.' ಇದು ಗೋಪಾಲನು ಅಂದು ನಳಿನಿಯ ತಾಯಿಗೆ ಕೊಟ್ಟ ಉತ್ತರ. "ನಿಮ್ಮ ಮಗಳು ಒಂದಲ್ಲ ಒಂದು ದಿನ ಖಂಡಿತವಾಗಿಯೂ ಲೋಕದಲ್ಲಿ ಹಿರಿಯಳೆನಿಸುವಳು. ನಾನು ಆ ಸುದಿನವನು ಕಂಡಿರುತ್ತೇನೆ. ಆ ಸಮಯವು ಮೂಡುವ ದಿನವೂ ನನ್ನ ಕಾಲದಲ್ಲಿಯೇ ಬರುವುದು. ಆದರೆ ನಾನು ಮಾತ್ರ ಅದನ್ನು ಕೇಳಲು ಹೊರತು ಕಾಣಲು ಶಕ್ತನಿರುವುದಿಲ್ಲ." ಎಂದು ಗೋಪಾಲನು ತನ್ನ ತಾಯಿಯೊಡನೆ ಪದೇ ಪದೇ ಹೇಳುತ್ತಿದ್ದ ವಚನಗಳೂ ನಳಿನಿಯ ಕಣ್ಣ ಮುಂದೆ ಸ್ವರ್ಣಾಕ್ಷರಗಳಾಗಿ ಹೊಳೆದವು. ಗೋಪಾಲನ ಮಾತಿನಿಂದಾಗಿ ತಾನು ಇಂದು ಕೀರ್ತಿಯ ಪ್ರಥಮ ಸೋಪಾನ

ವನ್ನೇರಿದುದು ತಾಯಿಯ ಗೋಚರಕ್ಕೆ ಈಗಲಾದರೂ ಬಾರದೆ ಹೋಗಲಾರದು ಎಂಬುದು ನಳಿನಿಗೆ ದೃಢವಾಯಿತು.

ನಳಿನಿಯ ನೃತ್ಯಲಹರಿಯು ಮೇರೆ ಮೀರಿ ಮುಂದೆ ಹರಿಯಿತು. ಅವಳ ಪ್ರತಿಯೊಂದು ಹಾವಭಾವಗಳಲ್ಲಿ ಹೊಸರೀತಿಯ ಉಲ್ಲಾಸವು ಕಂಡು ಬಂತು. ತನ್ನ ಮುಂದೆ ಕುಳಿತ ಆ ಎರಡು ವ್ಯಕ್ತಿಗಳ ಆಗಮನವು ಆಕೆಗೆ ಅಧಿಕ ತರದ ಸಂತೋಷವನ್ನುಂಟುಮಾಡಿತು. ಗೋಪಾಲನು ಅಂದು ತನ್ನ ಹೃದಯದಲ್ಲಿ ಕಂಡ ಭಾವೀ ಕೀರ್ತಿಯನ್ನು ಇಂದು ಪ್ರತ್ಯಕ್ಷ ನೋಡುವಂತಾಯಿತು. ಎಂಬುದು ಆಕೆಯ ಆನಂದಕ್ಕೆ ಜೊತೆಗೂಡಿತು. ಗೋಪಾಲನು ನಿರೀಕ್ಷಿಸಿದ ಸುದಿನವು ಇಂದು ಉದಯವಾದದ್ದು ನಳಿನಿಯ ತಾಯಿಗೂ ತೋರದೆ ಇರಲಿಲ್ಲ.

ತನ್ನ ಪ್ರದರ್ಶನದ ಮೊದಲನೇ ಬಾರಿ ಇಂದು ನಳಿನಿಯು ಪ್ರೇಕ್ಷಕ ವರ್ಗವನ್ನೇ ಮರೆತಳು. ಯಾರೂ ಈ ತನಕ ಪ್ರದರ್ಶಿಸದಂತಹ ಹೊಸ ನೃತ್ಯವನ್ನು ಆಕೆಯು ಜನರ ಮುಂದೆ ತೋರಿಸಿದಳು. ನೃತ್ಯದ ನಡುವೆ ತನ್ನನ್ನೇ ತಾನು ಮರೆತಳು. ಕೆಲವು ಕ್ಷಣದ ವರೆಗೆ ಎಲ್ಲವೂ ನೀರವ. ಮರುಕ್ಷಣದಲ್ಲಿಯೇ ಗುಡುಗಿನೋಪಾದಿಯಲ್ಲಿ ಜನರ ಕೈ ಚಪ್ಪಾಳೆಯ ಶಬ್ದವೂ ಕೇಳಿಬಂತು. ಅಲ್ಲಿಗೆ ನಳಿನಿಯ ಅಂದಿನ ಕಾರ್ಯಕ್ರಮವು ಮುಕ್ತಾಯವಾಯಿತು. ಆದರೆ ಜನರಿಗೆ ನಳಿನಿಯ ನರ್ತನವನ್ನು ತೊರೆದು ಹಿಂತಿರುಗಲು ಮನಸ್ಸೇ ಬಾರದು. ನಾಲ್ಕೈದು ಬಾರಿ ಅವಳನ್ನು ಪುನಃ ಬರುವಂತೆ ಜನರೆಲ್ಲರೂ ಕೂಗಿ ಕರೆದರು. ಕೊನೆಗೆ ಪ್ರತ್ಯಕ್ಷ ನಳಿನಿಯೇ ರಂಗಭೂಮಿಗೆ ಬಂದು ಜನರನ್ನು ಕೊಂಚ ಸಮಾಧಾನಗೊಳಿಸಿದಳು. ತನಗೆ ಬಹಳ ಆಯಾಸವಾಗಿರುವುದರಿಂದ ತನ್ನನ್ನು ಕ್ಷಮಿಸಬೇಕೆಂಬುದಾಗಿ ದೀನಭಾವನಿಂದ ಆಕೆಯು ಪ್ರೇಕ್ಷಕ ವರ್ಗದವರೊಡನೆ ಅರಿಕೆ ಮಾಡಿಕೊಂಡಳು. ಜನರೂ ಆಕೆಯಲ್ಲಿ ಕನಿಕರಗೊಂಡು, ಅವಳಿಗೆ ಮುಂದೆ ತೊಂದರೆ ಕೊಡದೆ ತಮ್ಮ ತಮ್ಮ ವಸತಿಗಳಿಗೆ ಹಿಂತಿರುಗಿದರು.

ನಳಿನಿಯನ್ನು ಇದಿರುಗೊಳ್ಳಲು ಕಿಕ್ಕಿರಿದು ಮುಂದೆ ನುಗ್ಗಿ ಬಂದಿದ್ದ ಜನಸ್ತೋಮದಲ್ಲಿ ಗೋಪಾಲನೂ ಒಬ್ಬನಾಗಿದ್ದನು. ಆತನ ಕಣ್ಣುಗಳಿಂದ ಆನಂದ ಬಾಷ್ಪಗಳು ಒಂದೇ ಸವನೆ ಧಾರಾರೂಪವಾಗಿ ಇಳಿಯುತಿದ್ದವು. ನಳಿನಿಯ ತಾಯಿಯೂ ಆನಂದದ ಭರದಲ್ಲಿ ಗೋಪಾಲನ ಕೈಯನ್ನೊಮ್ಮೆ ಸವರಿದುದು ನಳಿನಿಗೆ ಕಾಣದೆ ಇರಲಿಲ್ಲ. ನಳಿನಿಯು ಜನರೆಲ್ಲರನ್ನೂ ಬೀಳ್ಕೊಂಡು ತನ್ನ ಶೃಂಗಾರದ ಭವನದ ಕಡೆಗೆ ಹೋದಳು. ಅಲ್ಲಿಗೆ ಅಲ್ಲಿಗೆ ತನ್ನ ತಾಯಿಯನ್ನೂ ಗೋಪಾಲನನ್ನೂ ಬರಹೇಳುವಂತೆ ಓರ್ವ ಸೇವಕನನ್ನು ಕಳುಹಿಸಿದಳು. ನಳಿನಿಯ ಹೇಳಿಕೆಯಂತೆ ಒಂದೆರಡು ಗಳಿಗೆಯಲ್ಲಿ ಆಕೆಯ ತಾಯಿ ಮತ್ತು ಗೋಪಾಲನು ಆಕೆಯ ಕೋಣೆಯಲ್ಲಿ ಪ್ರವೇಶಿಸಿದರು. ನಳಿನಿಯ ತಾಯಿಯು ಕೊಠಡಿಯೊಳಗೆ ಕಾಲಿಟ್ಟೊಡನೆಯೇ, ಒಮ್ಮೆಯೇ ಧಾವಿಸಿಬಂದು ನಳಿನಿಯನ್ನು ತನ್ನ ಎರಡು ಕೈಗಳಿಂದಲೂ ಬಿಗಿದಪ್ಪಿ, ಹರಸಿ ಮುದ್ದಾಡಿದಳು. ಅವಳ ಕಣ್ಣುಗಳೆರಡೂ ನೀರಿನಿಂದ ತುಂಬಿ ತೊಯ್ದುಹೋಗಿದ್ದುವು.

"ಮಗಳೇ, ನಿನ್ನನ್ನು ನಾನು ಎಷ್ಟು ಕೊಂಡಾಡಿದರೂ ಸಾಲದು. ಬರಿಯ ಗಾಳಿ ಗೋಪುರಗಳೆಂದು ನಾನು ಅಂದು ಬಗೆದ ಗೋಪಾಲನ ನುಡಿಗಳು ಇಂದು ನಾನು ಪ್ರತ್ಯಕ್ಷ ನನ್ನ ಕಣ್ಣ ಮುಂದೆಯೇ ನಿಜವೆಂದು ಒಪ್ಪಿಕೊಳ್ಳಬೇಕಾಯಿತು. ಗೋಪಾಲನಿಗೆ ನಾನು ಮಾಡಿದ ಅನ್ಯಾಯಕ್ಕಾಗಿ ಇಂದು ನಾನು ಪಶ್ಚಾತ್ತಾಪ ಪಡುತ್ತೇನೆ." ಈ ರೀತಿ ನುಡಿದ ನಳಿನಿಯ ತಾಯಿಯು ಗೋಪಾಲನ ಕೈ ಹಿಡಿದು ಅವನನ್ನು ಮಗಳ ಬಳಿಗೆ ಕರತಂದಳು.

"ನಳಿನಿ! ನಿನ್ನ ಧನ್ಯತೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ನಿಜವಾಗಿಯೂ ನಾನು ಹೇಳಿದಂತೆ ಇಂದು ನಿನ್ನ ಕೀರ್ತಿಯನ್ನು ಕಿವಿಗಳಿಂದ ಕೇಳುವ ಭಾಗ್ಯವು ಮಾತ್ರ ನನಗೆ ದೊರೆಯಿತು. ನಾನು ನೆನಸಿದುದಕ್ಕಿಂತಲೂ ಇಮ್ಮಡಿಯಾಗಿ ಕೀರ್ತಿಯನ್ನು ನೀನು ಸಂಪಾದಿಸಿರುವೆ. ನಿನ್ನ ಸಾಹಸವು ಮೆಚ್ಚತಕ್ಕುದು" ಗೋಪಾಲನ ಈ ಸವಿನುಡಿಗಳು ನಳಿನಿಯ ಹೃದಯದಲ್ಲಿ ಅದೊಂದು ತರದ ಉತ್ಸಾಹವನ್ನು ತಂದೊಡ್ಡಿದವು. ಕೆಲವು ನಿಮಿಷದ ವರೆಗೆ ಸಂತೋಷದ ಅತಿರೇಕದಿಂದ ಆಕೆಯ ತುಟಿಗಳಲ್ಲಿ ಮಾತುಗಳೇ ಬರಲಿಲ್ಲ. ಕೊನೆಗೆ ಬಹಳ ಕಷ್ಟಪಟ್ಟು, "ನೀನು ಅದನ್ನು ಪ್ರತ್ಯಕ್ಷ ಅನುಭವಿಸಿದುದಕ್ಕಾಗಿ ನಾನು ತುಂಬಾ ಸಂತೋಷಪಡುತ್ತೇನೆ" ಎಂದು ಆಕೆಯು ಕೆಲವು ಮಾತುಗಳನ್ನುಸುರಿದಳು ತಕ್ಷಣ ಆಕೆಯು ತನ್ನ ತಾಯಿಯ ಕಡೆಗೆ ನೋಡಿದಳು. ಆಕೆಯ ಗಲ್ಲದಿಂದ ಕಣ್ಣೀರಿನ ಹನಿಗಳು ಧಾರಾರೂಪವಾಗಿ ಇಳಿಯುತ್ತಿದ್ದವು. ಮರುಮಾತೆತ್ತದೆ ಆಕೆಯು ಗೋಪಾಲನ ಕಡೆಗೆ ತಿರುಗಿ ಒಂದೇ ಸವನೆ ದೋಷಿಸತೊಡಗಿದಳು.

'ಅಮ್ಮಾ, ನೀನು ದುಃಖಿಪಡುವ ಕಾರಣವಾದರೂ ಏನು? ನಿಜವಾಗಿ ಗೋಪಾಲನು ಹೇಳಿದಂತೆ ಇಂದು ನಾನು ಕೀರ್ತಿಯನ್ನು ಪಡೆಯಲಿಲ್ಲವೇ? ಅದಕ್ಕಾಗಿ ನೀನು ಇಂದು ಪಡೆಯಬೇಕಾದುದು ಸಂತೋಷ" ಎಂದು ನಳಿನಿಯು ತಾಯಿಯೊಡನೆ ಪ್ರಶ್ನಿಸಿದಳು.

"ಹಾಗಲ್ಲ! ಮಗೂ, ನಾನು ಮಾತ್ರ ಅದನ್ನು ಕಂಡೆನು. ಗೋಪಾಲನು ಅದನ್ನು ಕಾಣದೆ ಹೋದನು. ಕೆಲವು ವರ್ಷಗಳ ಹಿಂದೆ ಅವನು ಅಸ್ವಸ್ಥನಿದ್ದು ಆತನ ದೃಷ್ಟಿಯು ಹೋಯಿತು. ತನ್ನ ಮಗಳ ಸತ್ಕೀರ್ತಿಯನ್ನು ಕಾಣುವ ಸುಯೋಗವನ್ನು ಅವನ ಹಣೆಯಲ್ಲಿ ದೇವರು ಬರೆಯಲಿಲ್ಲ" ಎಂಬ ತಾಯಿಯ ಉತ್ತರವನ್ನು ಕೇಳಿದೊಡನೆ ನಳಿನಿಯ ಹೃದಯದಲ್ಲಿ ನೂರಾರು ಸಿಡಿಲುಗಳು ಹೊಡೆದುವು. ಉತ್ತರ ಕೊಡಲಾರದೆ ಆಕೆಯು ತಾಯಿಯ ತೋಳುಗಳಲ್ಲಿ ಮೂರ್ಛೆಹೋಗಿ ಬಿದ್ದಳು.

"ನಾನು ಅದನ್ನು ಕಾಣಲಾರೆ: ಆದರೆ ಅದನ್ನು ಕಿವಿಗಳಿಂದ ಕೇಳಬಲ್ಲೆ" ಎಂದು ಗೋಪಾಲನು ಹೇಳುತ್ತಿದ್ದ ಪಂಕ್ತಿಯು ಕೂಡಾ ನಿಜವೆನಿಸಿತು.

(ಆಧಾರದಿಂದ)

ಅದ್ಭುತ ಶೋಧಗಳು ಈ ಕೆಳಗಿನ ವರುಷಗಳಲ್ಲಿ ನಡೆದುವು!

ಶೋಧಕರು	ಶೋಧ
ಕೊಲ್ಟ್ (ಅಮೇರಿಕನ್)	ರಿವಾಲ್ವರ್ (1835)
ಮೊರ್ಸೆ ,,	ಇಲೆಕ್ಟ್ರಿಕ್ ಟೆಲಿಗ್ರಾಫ್ (1835)
ಬೆಲ್ ,,	ಟೆಲಿಫೋನ್ (1876)
ಎಡಿಸನ್ ,,	ಗೆಸ್‌ಲೈಟ್ (1878)
ಎಡಿಸನ್ ,,	ಸಿನೆಮಾ ಯಂತ್ರ (1893)
ರೈಟ್ ಬ್ರದರ್ಸ್ ,,	ವಿಮಾನ (1903)
ವಾಟ್ (ಇಂಗ್ಲೆಂಡ್)	ಉಗಿಯಂತ್ರ (1565)
ಥಿಮೊ ನಿಯರ್ (ಫ್ರಾನ್ಸ್)	ಹೊಲಿಗೆಯಂತ್ರ (1830)
ಡೆಗುರೆ ಮತ್ತು ನಾಯ್ಸೆ (ಫ್ರಾನ್ಸ್)	ಫೊಟೊಗ್ರಾಫಿ (1839)
ನೊಬೆಲ್ (ಸ್ವಿಡನ್)	ಡೈನೆಮೈಟ್ (1867)
ಮಾರ್ಕೊನಿ (ಇಟೇಲಿ)	ವಾಯರ್‌ಲೆಸ್ (1896)
ಈಸ್ಟ್‌ಮೇನ್ (ಅಮೇರಿಕ)	ಫೊಟೋ ಫಿಲ್ಮ್ (1885)
ಚೀನದವರು	ಮುದ್ರಣ (593)
ಮೆಡಮ್ ಕ್ಯೂರಿ (ಫ್ರಾನ್ಸ್)	ರೇಡಿಯಮ್ (1903)
ಐ. ಎಲ್. ಬೈರ್ಡ್ (ಇಂಗ್ಲೆಂಡ್)	ಟೆಲಿವಿಝನ್ (1925)
ಡೈಸೆಲ್ (ಜರ್ಮನಿ)	ಡೈಸೆಲ್‌ಮೊಟರ್ (1900)
ಸ್ಟಿಫನ್ಸನ್ (ಇಂಗ್ಲೆಂಡ್)	ರೈಲು ಇಂಜಿನ್ (1885)
ಥೋಮ್ಸನ್ (ಅಮೇರಿಕ)	ಇಲೆಕ್ಟ್ರಿಕ್ ವೆಲ್ಡಿಂಗ್ (1860)
ಟೊರ್ರಿಸೆಲ್ಲಿ (ಇಟೇಲಿ)	ಬೆರೊಮಿಟರ್ (1643)
ರೊಯಿಂಟ್‌ಜೆನ್ (ಜರ್ಮನಿ)	ಎಕ್ಸರೇ ಯಂತ್ರ (1895)

ಹಿಂದೂದೇಶದಲ್ಲಿ ಮಧ್ಯಾಹ್ನ ಹನ್ನೆರಡು ಘಂಟೆಗೆ (ಸ್ಟೆಂಡಾರ್ಡ್ ಘಂಟೆ) ಸರಿಯಾಗಿ ಇತರ ಕಡೆಗಳ ಸಮಯದ ತುಲನೆ

ಎಡಿಲೈಡ್ (ಆಸ್ಟ್ರೇಲಿಯಾ)	ಅಪರಾಹ್ನ	4	ಘಂಟೆ
ಅಮ್ಸ್‌ಟರ್ಡಮ್ (ಹೊಲ್ಲೆಂಡ್)	ಪೂರ್ವಾಹ್ನ	6–50	,,
ಅಥೆನ್ಸ್ (ಗ್ರೀಸ್)	,,	8–30	,,
ಆಕ್ಲೆಂಡ್ (ನ್ಯೂಝಿಲಾಂಡ್)	ಅಪರಾಹ್ನ	6	,,
ಬರ್ಲಿನ್ (ಜರ್ಮನಿ)	ಪೂರ್ವಾಹ್ನ	7–30	,,
ಬುಕಾರೆಸ್ಟ್ (ರುಮೇನಿಯಾ)	,,	8–30	,,
ಕೈರೋ (ಇಜಿಪ್ಟ್)	,,	8–30	,,
ಕಲ್ಕತ್ತಾ	ಅಪರಾಹ್ನ	12-23	,,
ಕೇಪ್‌ಟೌನ್ (ದಕ್ಷಿಣ ಆಫ್ರಿಕ)	ಪೂರ್ವಾಹ್ನ	8–30	,,
ರಂಗೂನ್ (ಬರ್ಮಾ)	ಅಪರಾಹ್ನ	1	,,
ರೋಮ್ (ಇಟೇಲಿ)	ಪೂರ್ವಾಹ್ನ	7–30	,,
ಲೆನಿನ್‌ಗ್ರೇಡ್ (ರಷ್ಯಾ)	,,	9–30	,,
ಲಂಡನ್	,,	6–30	,,
ಮಾಲ್ಟಾ (ಭೂಮಧ್ಯ ಸಮುದ್ರ)	,,	7–30	,,
ನ್ಯೂಯೋರ್ಕ್ (ಅಮೇರಿಕ)	ಅಪರಾಹ್ನ	1–30	,,
ಯೊಕಾಹಾಮಾ (ಜಪಾನ್)	,,	3–30	,,
ಸಿಂಗಪುರ	,,	1–30	,,



ಎಲ್ಲಿ ತಪ್ಪಿದೆ?

(ಲೇಖಕರು: ಶ್ರೀ। ಎಸ್. ಎನ್. ಹೊಳ್ಳ)

ಒಂದು ಹಡಗವು ಬಿರುಗಾಳಿಗೆ ಸಿಕ್ಕಿ ಒಡೆದುಹೋಯಿತು. ಅದರಲ್ಲಿದ್ದ ಪ್ರಯಾಣಿಕರಲ್ಲಿ ಇಬ್ಬರು ಮಾತ್ರ ಈಜಾಡಿ ಬಹು ದೂರದಲ್ಲಿದ್ದ ಒಂದು ಚಿಕ್ಕ ದ್ವೀಪದ ದಡ ಸೇರಿದರು. ಆ ದ್ವೀಪದಲ್ಲಿ ಕಾಡು ಮತ್ತು ಕಾಡ ಮೃಗಗಳ ಹೊರತು ಮನುಷ್ಯರಿದ್ದಿಲ್ಲ. ಆ ಮೃಗ ಪಕ್ಷಿ ಗಿಡ ಮರಗಳ ನಿವಾಸ ಸ್ಥಾನದಲ್ಲಿ ಈ ಮನುಷ್ಯರಿಬ್ಬರೂ ಸೇರಿಕೊಂಡರು. ಇವರ ಬಳಿ ಏನಿದ್ದಿಲ್ಲ. ದ್ವೀಪದಲ್ಲಿ ಅಲ್ಲಲ್ಲಿದ್ದ ಸಿಹಿನೀರಿನ ಬುಗ್ಗೆಗಳಿಂದ ನೀರು ಕುಡಿದು ಕಂದಮೂಲಾದಿಗಳನ್ನು ತಿಂದು ಇವರಿಬ್ಬರೂ ಅಲ್ಲಿ ಇತರ ಮೃಗಗಳಂತೆಯೇ ಇದ್ದರು.

ತಮ್ಮ ಆಹಾರಕ್ಕೆ ಬೇಕಾದ ಹಣ್ಣು ಹಂಪಲುಗಳನ್ನು ಗಡ್ಡೆ ಗೆಣಸುಗಳನ್ನು ಹುಡುಕಿಕೊಂಡು ಇವರು ದಿನವಿಡೀ ಆ ದ್ವೀಪದಲ್ಲಿ ಸುತ್ತಾಡುತ್ತಾ ಇರಬೇಕಾಗಿ ಬಂತು. ಕೆಲವೆಡೆ ನೀರಿನ ಆಶ್ರಯವಿದ್ದಲ್ಲಿ ದಟ್ಟನಾಗಿ ಬೆಳೆದ ಗಿಡಮರಗಳ ಕಡೆ ಇವರು ಒಂದೆರಡು ದಿನ ಉಳಕೊಳ್ಳುತ್ತಿದ್ದರು. ಕೊನೆಗೆ ಇವರು ಒಂದು ಚಿಕ್ಕ ಹೊಳೆಯ ದಡದಲ್ಲಿ ನೆಲೆನಿಂತರು. ಬೇಕು ಬೇಕಾದ ಹಣ್ಣು ಬೀಜಗಳನ್ನು ಗಡ್ಡೆಗಳನ್ನು ಬೇರೆ ಕಡೆಯಿಂದ ಹುಡುಕಿ ತಂದು ಆ ಹೊಳೆಯ ದಡದಲ್ಲೇ ಬಿತ್ತಿ ನೆಟ್ಟು ತಮಗೆ ಬೇಕಾದ ಆಹಾರ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಳ್ಳತೊಡಗಿದರು. ಆಹಾರವನ್ನು ಕಾಡಿನಿಂದ ಹುಡುಕಿ ತರುತ್ತಿದ್ದ ದಿವಸಗಳಲ್ಲಿ ಇವರಿಬ್ಬರೂ ಒಟ್ಟಿನಲ್ಲೇ ದುಡಿಯುತ್ತಿದ್ದರು. ಹಾಗೆಯೇ ಬೇಕಾದುದನ್ನು ಬೆಳೆಸುವಾಗಲೂ ಇಬ್ಬರೂ ಪರಸ್ಪರ ಸಹಕಾರ ಬುದ್ಧಿಯಿಂದ ದಿನಕ್ಕೆ ಎಂಟು ತಾಸು ಕೆಲಸಮಾಡುತ್ತಿದ್ದರು. ಇಬ್ಬರ ಕೆಲಸದಿಂದಾಗಿ ಉಂಟಾಗುತ್ತಿದ್ದ ಆಹಾರ ಸಾಮಗ್ರಿಗಳನ್ನು ಇಬ್ಬರೂ ತಮತಮಗೆ ಬೇಕಾದಷ್ಟನ್ನು ತಮತಮಗೆ ಇಷ್ಟ ಬಂದಾಗ ತಿನ್ನುತ್ತಿದ್ದರು. ಹೀಗಿರುವಲ್ಲಿ ಅವರಲ್ಲಿ ಒಬ್ಬನಿಗೆ ಏನೋ ಒಂದು ರೋಗತಗಲಿತು. ಅವನು ಕೆಲವು ಸಮಯ ಹಾಸಿಗೆ ಹಿಡಿದನು. ಆಗ ಅವನ ಅನುಪಾನದ ಭಾರವು ಇನ್ನೊಬ್ಬನ ಮೇಲೆ ಬಿತ್ತು. ಮಾತ್ರವಲ್ಲ ಆಹಾರ ಸಂಪಾದನೆಗಾಗಿ ಬೇಕಾದುದನ್ನು ಬೆಳೆಯಿಸುವ, ಇಷ್ಟರವರೆಗೆ ಇಬ್ಬರು ಮಾಡುತ್ತಿದ್ದ ಕೆಲಸವನ್ನು ಅವನೊಬ್ಬನೇ ಮಾಡಬೇಕಾಯಿತು. ಮಾತ್ರವಲ್ಲ ದಿನಕ್ಕೆ ಎರಡು ಘಂಟೆ ಕಾಲ ರೋಗಿಯ ಶುಶ್ರೂಷೆ ನಡೆಸುವ ಭಾರವೂ ದುಡಿವವನ ಮೇಲೆ ಬಿತ್ತು. ಕೆಲವು ಸಮಯದ ನಂತರ ರೋಗಿಗೆ ರೋಗ ವಾಸಿಯಾಯಿತು. ಆತ ಆರೋಗ್ಯ ಹೊಂದಿದ. ತಾನೂ ದುಡಿಯಲು ತೊಡಗಿದ. ತಾನು ರೋಗದಲ್ಲಿ ನರಳುತ್ತಿದ್ದ ದಿನಗಳಲ್ಲಿ ತನ್ನ ಅನುಪಾನ ನಡೆಸಿದುದು ಮಾತ್ರವಲ್ಲದೆ ಬೇಕಾದ ಆಹಾರಕ್ಕಾಗಿಯೂ ದುಡಿಯುತ್ತಿದ್ದ ತನ್ನ ಬಂಧುವಿನ ಋಣವನ್ನು ಸಲ್ಲಿಸುವುದಕ್ಕಾಗಿ ಅವನು ತನ್ನ ಬಂಧುವಿನೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡನು. ಎರಡು ತಿಂಗಳ ಕಾಲ ದಿನಕ್ಕೆ ಎಂಟು ಗಂಟೆಗಳಂತೆ ತಾನು ದುಡಿಯದೆ ಇದ್ದುದರಿಂದಾಗಿ 480 ಗಂಟೆಗಳ ಕೆಲಸವು ತನ್ನಿಂದಾಗಿ ಬಾಕಿಯಾಗಿರುವುದನ್ನೂ, ತನ್ನ ಶುಶ್ರೂಷೆ ನಡೆಸಿಕೊಂಡು ದಿನಕ್ಕೆ ಎರಡು ತಾಸು ಹಾಗೆ ದುಡಿದುದಕ್ಕಾಗಿ ಆ ಲೆಕ್ಕದಲ್ಲಿ ಎರಡು ತಿಂಗಳುಗಳಲ್ಲಾದ 120 ಘಂಟೆಯ ದುಡಿತವನ್ನೂ ಒಟ್ಟು ಸೇರಿಸಿ ತನ್ನ ಬಂಧುವಿಗೆ ತಾನು 600 ಘಂಟೆಗಳ ದುಡಿತದ ಮಟ್ಟಿಗೆ ಋಣಿಯಿರುವೆನೆಂದು ಅವನು ಒಪ್ಪಿಕೊಂಡನು. ಮಾತ್ರವಲ್ಲ ಈ 540 ಘಂಟೆಗಳ ಕೆಲಸವನ್ನು ದಿನಕ್ಕೆ 10 ಘಂಟೆ (ತನ್ನ ಬಂಧುವು 8 ಘಂಟೆ ದುಡಿವಾಗ)ಯಂತೆ ದುಡಿದು 300 ದಿವಸಗಳಲ್ಲಿ ದುಡಿದು ಹಾಗೆ ತನ್ನನ್ನು ತಾನು ತನ್ನ ಬಂಧುವಿನ ಋಣದಿಂದ ಬಿಡಿಸಿಕೊಳ್ಳುವುದು ನ್ಯಾಯವೆಂದು ಅವನು ನಿರ್ಧರಿಸಿದನು. ಈ ಒಪ್ಪಂದವನ್ನು ಇಬ್ಬರೂ ಒಪ್ಪಿಕೊಂಡು ಅದರಂತೆಯೇ ವರ್ತಿಸಿದರು. ಆದರೆ ದುರ್ದೈವವಶಾತ್ ತನ್ನ ಬಂಧುವು ರೋಗಪೀಡಿತನಾಗಿದ್ದ ದಿನಗಳಲ್ಲಿ ಇಬ್ಬರ ಕೆಲಸವನ್ನೂ ಒಬ್ಬನೇ ಮಾಡಿಕೊಂಡಿದ್ದುದರಿಂದಾಗಿ ಬಹಳ ಬಳಲಿದ್ದ ಬಂಧುವು ಅಸ್ವಸ್ಥದಲ್ಲಿ ಬಿದ್ದನು. ಈಗ ಒಪ್ಪಂದ ಮಾಡಿಕೊಂಡವನು ತನ್ನ ಬಂಧುವು ತಾನು ರೋಗಪೀಡಿತನಾಗಿದ್ದಾಗ ಇದ್ದ ಸ್ಥಾನದ ಜವಾಬ್ದಾರಿ ವಹಿಸಿ ದುಡಿದನು. ಆದರೆ ಇಪ್ಪತ್ತೇ ದಿವಸಗಳಲ್ಲಿ ರೋಗಿಯು ಗುಣ ಹೊಂದಿದನು. ಈ ಇಪ್ಪತ್ತು ದಿವಸಗಳ 200 ಘಂಟೆಯ ಕೆಲಸ ಹಾಗೂ ಶುಶ್ರೂಷೆಗಾಗಿ ಬಂಧುವಿಗಾಗಿ ಖರ್ಚಾದ 40 ಘಂಟೆಯ ದುಡಿತವನ್ನು 600 ಘಂಟೆಗಳ ತನ್ನ ಸಾಲದಿಂದ ಕಳೆದು ಉಳಿದ 560 ಘಂಟೆ ದುಡಿತವನ್ನು ತಾನು ಸಲ್ಲಿಸುವುದು ಮಾತ್ರ ಮೊದಲು ರೋಗಕ್ಕೆ ಬಲಿಬಿದ್ದವನ ಪಾಲಿಗೆ ಉಳಿದಂತಾಯಿತು. ಹೀಗೆ ಆಗಾಗ ಒಬ್ಬನಲ್ಲದಿದ್ದರೆ ಇನ್ನೊಬ್ಬ ವಿರಾಮ ಪಡೆಯುತ್ತಿದ್ದು ಒಂದು ವರ್ಷ ನಡೆದು ಕೊನೆಗೊಂದು ದಿನ ಇಬ್ಬರೂ ಒಟ್ಟು ಸೇರಿ ಲೆಕ್ಕ ತೆಗೆದುದಾಗಿ ಒಬ್ಬನಿಗೆ ಇನ್ನೊಬ್ಬನಿಂದ 360 ಘಂಟೆಗಳ ಕೆಲಸವು ಬಾಕಿಯಾಗಿದೆಯೆಂದು ಲೆಕ್ಕ ಸಿಕ್ಕಿತು. ವರ್ಷದ ಕೊನೆಗೆ ತಮ್ಮಲ್ಲಿ ಉಳಿದ ದವಸಧಾನ್ಯಗಳ ಲೆಕ್ಕ ತೆಗೆಯಲಾಗಿ ಕನಿಷ್ಠ ಪಕ್ಷ ಮೂರು ತಿಂಗಳಿಗೆ ಬೇಕಾದ ಸಾಮಗ್ರಿಗಳು ತಮ್ಮಲ್ಲಿ ಉಳಿದಿವೆಯೆಂದೂ ಅವರಿಗೆ ಲೆಕ್ಕ ಸಿಕ್ಕಿತು. ಹೊಸ ವರ್ಷದ [illegible] ಅಂದಾಜು ಪಟ್ಟಿಯನ್ನು ತಯಾರಿಸುವಲ್ಲಿ ಹಳೆ ವರ್ಷದ ಉಳಿಕೆಯನ್ನು ಹೊಸ ವರ್ಷದ ಅಂತ್ಯಕ್ಕೆ ಸಾಧಾರಣ ಅಷ್ಟೇ ಉಳಿಸಬೇಕೆಂಬ ನಿರ್ಧಾರ ಮಾಡಿದ [illegible] ಒಂದು ವರ್ಷದ [illegible] ನಾವು ಈ [illegible] ಒಪ್ಪಂದ ಮಾಡಿಕೊಂಡರು. [illegible] ಬಂಧುವು ದಿನಕ್ಕೆ [illegible] ಘಂಟೆ ಮತ್ತು [illegible] ಬಂಧುವು ದಿನಕ್ಕೆ 7 ಘಂಟೆ [illegible] ಒಪ್ಪಂದ. ಆದರೆ [illegible] ಒಂದು ಹಡಗವು ಬಂತು. ಅವರಿಬ್ಬರ [illegible] ಊರಿಗೆ ಹೋದರು; [illegible].

ಅವರಿಬ್ಬರೂ [illegible] ಅಲ್ಲಿ [illegible] ಅಂದಿಗೆ ಹತ್ತು ಎಕ್ರೆ ಜಮೀನನ್ನು ತಯಾರಿಸಿದ್ದರು. ಅವರು ಅಲ್ಲಿದ್ದ ಐದು ವರ್ಷಗಳಲ್ಲಿ ಅವರ ಉದರಪೋಷಣೆ ನಿಮಿತ್ತ ಅವರು ದುಡಿದುದು ಮಾತ್ರವಲ್ಲದೆ 10 ಎಕ್ರೆ ಜಮೀನನ್ನೂ ಏಕಕಾಲದಲ್ಲಿ ತಯಾರಿಸಿದರೆಂದರೆ, ಹೊಟ್ಟೆ ತುಂಬಿಸಿದುದು ಮಾತ್ರವಲ್ಲ ಅವರಿಬ್ಬರೂ ಹೊಲ ಮಾಡಿದರು ಎಂದು ಅರ್ಥವಾಗುವುದು.

ಈ ಆಸ್ತಿ ಯಾರದು? ಇದು ಅವರಿಬ್ಬರ ಸಮಷ್ಟಿ ಹಕ್ಕಿನ ಆಸ್ತಿಯೆಂದು ಕೂಡಲೇ ಉತ್ತರಬರುವುದು. ಆದರೆ ಒಬ್ಬನು ಇನ್ನೊಬ್ಬನಿಗೆ [illegible] ಕಾರಣದಿಂದಾಗಿ ಸಾಧಾರಣ 1000 ಕೆಲಸದ ಘಂಟೆಗಳಷ್ಟು ಸಾಲಗಾರನಾಗಿದ್ದರೆ ಈ ಆಸ್ತಿಯಲ್ಲಿ ಆ ಸಾಲಗಾರನ ಪಾಲಿನಲ್ಲಿ ಎಷ್ಟು ಕಡಿಮೆ ಬರುತ್ತಿತ್ತು, ನೋಡೋಣ

5 ವರ್ಷಗಳಲ್ಲಿ ಸರಾಸರಿ ದಿನವೊಂದಕ್ಕೆ 10 ಘಂಟೆ ದುಡಿದುದರಿಂದಾಗಿ ಇಬ್ಬರ ಆಹಾರಕ್ಕೆ ಬೇಕಾದುದು ಮತ್ತು ಏಕಕಾಲದಲ್ಲಿ 10 ಎಕ್ರೆ ಜಮೀನು ಉಂಟಾಯಿತು ಎಂಬಾಗ ಆಹಾರ ಸಂಪಾದನೆಗೆ ಮಾತ್ರ ಎಷ್ಟು ಸಮಯ ಬೇಕಿತ್ತು ಎಂದು ನೋಡಬೇಕಾಗುವುದು. ಆ ಸಮಯವು ಇಷ್ಟೇ ಎಂದು ಅವರಿಬ್ಬರ ಒಪ್ಪಂದದಿಂದ ನಿರ್ಧರಿಸಬಹುದೇ ಹೊರತು ಅಂಥ ಲೆಕ್ಕಕ್ಕೆ ಕಾನೂನೇನೂ ಇಲ್ಲ. ಸರಾಸರಿ ದಿನದ 8 ಘಂಟೆಗಳ ಸಮಯದ ದುಡಿತವು ಹೊಲದ ನಿರ್ಮಾಣಕ್ಕಾಗಿ ವಿನಿಯೋಗಿಸಲ್ಪಟ್ಟಿದೆಯೆಂದು ಅವರಿಬ್ಬರೂ ಒಪ್ಪಿಕೊಂಡರೆ 5 ವರ್ಷಗಳಲ್ಲಿ ಒಟ್ಟು 14400 ಘಂಟೆ ಕೆಲಸದ ಫಲವಾಗಿ 10 ಎಕ್ರೆ ಜಮೀನಿನ ನಿರ್ಮಾಣವಾಯಿತೆಂದು ನಮಗೆ ಲೆಕ್ಕ ಸಿಗುವುದು. ಈ 14400 ತಾಸುಗಳ ಶ್ರಮದಲ್ಲಿ ಒಬ್ಬನು 8200 ಮತ್ತೊಬ್ಬ 6200 ಘಂಟೆ ದುಡಿದಿರುವರಾಗಿ ನಾವು ತಿಳಕೊಳ್ಳಬಹುದು. ಆ ದಾವಾಶೆಯಲ್ಲಿ ಆಸ್ತಿಯನ್ನು ಇಬ್ಬರೊಳಗೆ ಹಂಚುವುದಿದ್ದರೆ (ಅಂಥ ಅಧಿಕಾರವು ಅವರಿಬ್ಬರಿಗೆ ಇರುವುದಿದ್ದರೆ) ಸಾಲಿಗನಿಗೆ ಹತ್ತು ಎಕ್ರೆಯನ್ನು 72 ಪಾಲುಮಾಡಿ ಅವುಗಳಲ್ಲಿ 41 ಪಾಲು ಸಾಲಗಾರನಿಗೆ 31 ಪಾಲು ಬರುವಂತಾಗುವುದು. ತಾವೇ ಸಿದ್ಧಗೊಳಿಸಿದ ಜಮೀನನ್ನು ಬಿಟ್ಟು ಅವರಿಬ್ಬರೂ ಬಂದ ಹಡಗ ಹತ್ತಿ ಊರಿಗೆ ಹೋಗಲು ಬಯಸಲಿಲ್ಲವೆನ್ನಿ. ಅವರು ಅಲ್ಲೇ ಉಳಕೊಂಡರೆನ್ನಿ. ಇವರು ಇಬ್ಬರೂ ಅಲ್ಲೇ ಇನ್ನೂ ಕೆಲವು ವರ್ಷ ಇರುವಂತಾಯಿತೆನ್ನಿ. ಆದರೆ ಅವರಲ್ಲಿ ಒಬ್ಬನು ದುಡಿಯಲಾರ

ದಷ್ಟು ಅಶಕ್ತನಾಗಿ ಬಿಟ್ಟನೆಂದೂ ಹಾಗಾಗಿ ಮೊದಲೇ ತನ್ನ ಪಾಲಾಗಿದ್ದ 1000 ಘಂಟೆಯ ಕೆಲಸದ ಹೊರೆಯು ಬೆಳೆಯುತ್ತಾ ಹೋಯಿತೆಂದೂ ಪರಿಣಾಮವಾಗಿ ಹೊಲದ ಮೇಲೆ ಆತನಿಗಿದ್ದ ಎಲ್ಲಾ ಅಧಿಕಾರವನ್ನು ಅವನು ಕಳಕೊಳ್ಳುವಂತಾಯಿತೆಂದೂ ತಿಳಿಯೋಣ: ಹೀಗಾದರೆ—

ಈ ಕತೆಯಲ್ಲಿನ ಸಾಲಗಾರನು ತನ್ನ ಬಂಧುವೂ ತಾನೂ ಒಟ್ಟಿನಿಂದ ದುಡಿದು ಉಂಟುಮಾಡಿರುವ ಹೊಲದ ಮೇಲಿನ ಅಧಿಕಾರವನ್ನು ಕಳಕೊಂಡುದರಲ್ಲಿ ಒಂದು ನ್ಯಾಯವಿದೆ. ಈ ನ್ಯಾಯವು ಅವರಿಬ್ಬರೊಳಗಿನ ಪರಸ್ಪರ ಸಂಬಂಧದಿಂದಾಗಿ ಅವರಿಬ್ಬರಿಗೆ ನ್ಯಾಯ ಸಿಗುವುದಕ್ಕೆ ಬೇಕಾಗಿ ಅವರಿಬ್ಬರೂ ಒಪ್ಪಿಕೊಳ್ಳಬಹುದೇ ಹೊರತು ಅಂಥ ಒಂದು ನ್ಯಾಯಕ್ಕೂ ಅವರು ಇಷ್ಟು ವರ್ಷ ಅವರ ಆಹಾರವನ್ನು ಒದಗಿಸಿಕೊಳ್ಳುವುದಕ್ಕಾಗಿ ಉಪಯೋಗಿಸಿಕೊಂಡ ನೆಲಕ್ಕೂ ಏನೇನೂ ಸಂಬಂಧವಿಲ್ಲ. ಆ ನೆಲದ ವಿಚಾರ ಅವರಿಬ್ಬರೊಳಗಿರುವ ಸಂಬಂಧಕ್ಕೂ ಅವರಿಬ್ಬರಿಗೆ ಒಟ್ಟಿನಲ್ಲಿ ಆ ನೆಲದೊಡನಿರುವ ಸಂಬಂಧಕ್ಕೂ ಏನೇನೂ ಸಂಬಂಧವಿಲ್ಲ. ಇರುವುದಾದರೆ ಋಣಾನುಬಂಧ ಮಾತ್ರ. ಇವರಿಬ್ಬರೂ ಆ ನೆಲಕ್ಕೆ ಋಣಿಗಳಾಗಿರಬೇಕೇ ಹೊರತು ಆ ನೆಲದ ಧನಿಗಳವರೆಂದು ಹೇಳಿಕೊಳ್ಳುವ ಅಧಿಕಾರವೇನೂ ಇವರಿಬ್ಬರಿಗೂ ಬರುವುದಿಲ್ಲ ಹಾಗೂ ಅವರೊಳಗಿನ ಸಂಬಂಧವೇನೇ ಇರಲಿ, ಅದಕ್ಕೆ ಆ ನೆಲಹೊಣೆಯಲ್ಲಿ ಬದಲು ಅವರು ಇಷ್ಟು ವರ್ಷ ಬದುಕಿರುವುದಕ್ಕೆ ಸಹಕಾರಿಯಾದ ನೆಲಕ್ಕೆ ಅವರಿಬ್ಬರೂ ಎಷ್ಟು ಋಣಿಗಳಾಗಿದ್ದರೂ ಹೆಚ್ಚಲ್ಲ. ಈ ಋಣವು ಕೊಟ್ಟು ಪರಿಹರಿಸುವ ಋಣವಲ್ಲ. ಪ್ರೀತಿಯಿಂದ ಸಲ್ಲಿಸುವ ಋಣತಾಯಿಯ ಋಣದಂತಿರುವ ಬಂಧವಿದು. ಇದೇ ಬಂಧವೇ ಮಾನವನಿಗೂ ಅವನ ನಿವಾಸಸ್ಥಾನವಾದ ಈ ಗೋಲಕ್ಕೂ ಇದೆಯೇ ಹೊರತು ಮಾನವನೇನಾದರೂ ಈ ಗೋಲದ ಒಂದು ಭಾಗದ ಅಥವಾ ಇಡಿಯ ಧನಿ ತಾನೆಂದು ಹೇಳಿಕೊಳ್ಳುವುದರಲ್ಲಿ ನ್ಯಾಯವಿಲ್ಲ. ಹಾಗೆ ಹೇಳುವುದಾದರೆ ಜನ್ಮವಿತ್ತ ಅಮ್ಮನಿಗೆ ಮಗನು ಮೇಲಾಧಿಕಾರಿಯೆಂದಂತಾಗುವುದು. ಹಾಗಾದುದರಿಂದ ನಿಸರ್ಗದ ಮೇಲೆ, ಅದೇ ನಿಸರ್ಗದತ್ತವಾದ ಸಂಪತ್ತನ್ನು ತನ್ನ ಶ್ರಮದಿಂದಾಗಿ ಸಂಪಾದಿಸುವ ಮನುಷ್ಯನು ಯಾವ ಅಧಿಕಾರವನ್ನು ಸ್ಥಾಪಿಸುವುದೂ ಸರಿಯಲ್ಲ. ಹಾಗೆ ಅಧಿಕಾರ ಸ್ಥಾಪಿಸುವುದಾದರೆ ಅದೊಂದು ತಪ್ಪು. ಹಾಗಾದರೆ ಈ ಲೋಕ ನಮ್ಮದು ಎಂಬುದರಲ್ಲಿ ಅಡಕವಾದ ಅರ್ಥವೇನು? ಇವಳು ನಮ್ಮ ತಾಯಿ ಎಂದು ಒಬ್ಬ ಅಮ್ಮನ ಮಕ್ಕಳೆಲ್ಲರೂ ಸಮಾನಾಧಿಕಾರದಿಂದ ಹೇಳುವ ಮಾತಿನ ಅರ್ಥವೇ ಆಗಿದೆ. ಅದೇ ರೀತಿ ಇದು ನಮ್ಮ ದೇಶ ಎಂದು ಗೋಲದ ಒಂದೆಡೆಯ ಮನುಷ್ಯರು ಗೌರವ ಪಡುವುದರ ಅರ್ಥವೂ ಆಗಿದೆ. ದೇಶಪ್ರೇಮ ಎಂಬುದರ ಸರಳವೂ ನೈಜವೂ ಆದ ತಾತ್ಪರ್ಯವು ಇಷ್ಟೇ ಇದೆ. ನಾವು ನಿಂತಿರುವ, ನಾವು ಹುಟ್ಟಿ ಬೆಳೆಯಲು ಎಲ್ಲ ರೀತಿಯಿಂದಲೂ ನಮಗೆ ಸಹಕಾರಿಯಾಗುತ್ತಿರುವ ನೆಲಕ್ಕೂ ನಮಗೂ ಇರುವ ಸಂಬಂಧವು ಋಣಾನುಬಂಧದಿಂದಾಗಿ ಬರುವ ದೇಶಪ್ರೇಮವಾಗಿರಬೇಕೇ ಹೊರತು ಅಧಿಕಾರದಿಂದಾಗಿ ಬರುವ ಹಮ್ಮಿನಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಗೋಲಕ್ಕೂ ಮಾನವನಿಗೂ ತಾಯಿ ಮಕ್ಕಳ ಸಂಬಂಧ ಇರುವುದು ಮಾನವನಿಗೆ ಹಿತಕಾರಿಯಾಗಿದೆಯೆಂದು ಹೇಳೋಣ.

ಇನ್ನು ನಮ್ಮ ಕತೆಯ ದಾರಿ ಹಿಡಿದು ಅಲ್ಲಿ ನೆಲಕ್ಕೂ ದುಡಿದ ಬಂಧುಗಳಿಬ್ಬರಿಗೂ ಇದ್ದ ಸಂಬಂಧವನ್ನು ವಿಮರ್ಶಿಸೋಣ. ನೆಲಕ್ಕೆ ಅವರು ಧನಿಗಳಲ್ಲ. ಅವರು ಬರುವ ಮೊದಲೇ ಆ ನೆಲ ಅಲ್ಲಿತ್ತು. ಅದನ್ನು ಹೊಲವನ್ನಾಗಿ ಮಾಡಿದವರು ಅವರು. ಆದರೆ ತನ್ನನ್ನು ಹೊಲವಾಗಿ ಮಾಡಿರೆಂದು ಆ ನೆಲವೇನೂ ಅವರನ್ನು ಬೇಡಿಕೊಂಡದ್ದಿಲ್ಲ. ಅವರ ಅನ್ನ ಹುಟ್ಟಿಸಿಕೊಳ್ಳುವುದಕ್ಕಾಗಿ ಆ ನೆಲದ ಭಾಗದಲ್ಲಿ ಇಬ್ಬರೂ ತಮ್ಮ ಬೆವರನ್ನು ಸೂಸಿ ಬರೆ ನೆಲವನ್ನು ಪೈರು ಪಚ್ಚೆಯ ನೆಲೆವೀಡಾದ ಹೊಲವಾಗಿ ಮಾಡಿದರು. ಇದರಲ್ಲಿ ಹೆಚ್ಚು ದುಡಿದವನಿಗೆ ಹೊಲದ ಮೇಲೆ ಹೆಚ್ಚು ಅಧಿಕಾರ ಬಂದೀತೆಂದೂ ಕಡಿಮೆ ದುಡಿದವನಿಗೆ ಹೊಲದ ಮೇಲೆ ಕಡಿಮೆ ಅಧಿಕಾರ ಉಳಿದೀತೆಂದೂ, ನಾವು ವಿಮರ್ಶಿಸಿದ್ದೇವೆ. ಇಲ್ಲಿ ಹೊಲ ಎಂಬುದರ ಬದಲು 'ಕೃತ' ಎಂದು ಹೇಳುವುದರಿಂದ 'ಅಧಿಕಾರ' ಎಂಬುದರ ಸರಿಯಾದ ಅರ್ಥವು ನಮಗೆ ಮುಂದಟ್ಟಾಗಲು ಸುಲಭವಾಗುವುದು. ನೆಲವನ್ನು ತಮ್ಮ ಹಿತಕ್ಕಾಗಿ ಹೊಲವಾಗಿ ಮಾರ್ಪಡಿಸಿದ ಇಬ್ಬರ ಶ್ರಮದ ಪರಿಣಾಮವಾಗಿ ಉಂಟಾದ ಕೃತದಲ್ಲಿ ಹೆಚ್ಚು ಪಾಲು ಶ್ರಮ ಉಪಯೋಗಿಸಿದವನಿಗೆ ಆ ಕೃತದ ಮೇಲೆ ಹೆಚ್ಚು ಅಧಿಕಾರವಿರಬೇಕು. ಕಡಿಮೆ ಕಾಯಕಷ್ಟ ಉಪಯೋಗಿಸಿದವನಿಗೆ ಆ ಕೃತದ ಮೇಲೆ ಕಡಿಮೆ ಅಧಿಕಾರ ಇರಬೇಕು. ಎಂದು ಎಲ್ಲರೂ ಒಪ್ಪಿಕೊಳ್ಳದಿರಲಾರರು. ಅಂದರೆ ಹೊಲದ ಮೇಲೆ ಅಧಿಕಾರವಿರುವುದಾದರೆ ಹೆಚ್ಚು ದುಡಿದವನಿಗೆ ಹೆಚ್ಚು ಪಾಲು ಎಂದು ಹೇಳುವಾಗ, ಕಡಿಮೆ ದುಡಿದವನಿಗೆ ಕಡಿಮೆಪಾಲು ಅಧಿಕಾರವೆನ್ನುವಾಗ, ಏನೂ ದುಡಿಯದವನಿಗೆ ಏನೂ—ಹೊಲದ—ಕೃತದ—ಹುಟ್ಟುವಳಿಯ—ಅಧಿಕಾರವಿಲ್ಲನೆಂದು ಇನ್ನು ಬೇರೆ ಹೇಳಬೇಕಾಗಿಲ್ಲ, ಅರ್ಥಾತ್ ದುಡಿಯದವನಿಗೆ ಉಣ್ಣುವ ಅಧಿಕಾರವಿಲ್ಲ ಎಂದು ಹೇಳಿದರೆ ಸರ್ವ ಸಮ್ಮತವಾದ ನ್ಯಾಯವೆಂದಾಗುವುದು. ಆದರೆ ನಾಳೆ ದುಡಿದಾನು ಮತ್ತು ನಿನ್ನೆ ದುಡಿದವನಿವನು ಎಂಬ ಆಶೆ ಮತ್ತು ಕೃತಜ್ಞತೆಯಿಂದಾಗಿ ಮಕ್ಕಳು ಮತ್ತು ಮುದುಕರಿಗೆ ಉಣ್ಣುವ ಅಧಿಕಾರವಿದೆಯೆಂದು ನಾಗರಿಕ ಮಾನವನು ಒಪ್ಪಿಕೊಳ್ಳದಿರಲಾರನು.

ಮೇಲಿನ ಇಷ್ಟು ಸತ್ಯಗಳನ್ನು ಒಪ್ಪಿಕೊಂಡು ನಾವು ನಾವಿರುವ ಲೋಕದ ಇಂದಿನ ಸ್ಥಿತಿಯ ಕಡೆಗೊಮ್ಮೆ ನೋಡೋಣ, ಏನನ್ನು ಕಾಣುತ್ತೇವೆ? ಗೋಲದ ಮೇಲ್ಭಾಗವನ್ನು ಹಲವು ಪಾಲುಗಳನ್ನಾಗಿ ಮಾಡಿಕೊಂಡು ಒಂದೊಂದು ತುಂಡನ್ನು ಅಲ್ಲಿನವರು ನಮ್ಮದೇಶವೆಂದು ಹೇಳಿಕೊಳ್ಳುತ್ತಿದ್ದಾರೆ. ಅವರವರ ಮೇಲ್ಮೆಗೆ ಹಾಗೂ ಗೌರವಪಟ್ಟು ದೇಶಪ್ರೇಮ ತೋರುವುದಾದರೆ ನಮ್ಮ ವ್ಯಾಜ್ಯವಿಲ್ಲ. ಆದರೆ ತಮ್ಮ ಪಶುಬಲ ಪ್ರಯೋಗಿಸಿ ಅವರಂತೆಯೇ ನಮ್ಮ ದೇಶ ಎಂದು ಹೇಳಿ ಹೆಮ್ಮೆ ಪಡುವ ಯೋಗ್ಯತೆಯುಳ್ಳ ಇತರ ದೇಶೀಯರನ್ನು ತಮ್ಮ ಸ್ವಾಧೀನಪಡಿಸಿಕೊಂಡಿರುವರು. ಹಾಗೆ ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ನೆಲ ಹೊಲ ಸಂಪತ್ತೆಲ್ಲವ ಹುಟ್ಟಿಸುವುದಕ್ಕಾಗಿ ದುಡಿಯುವ ಲೋಕದ ಮಾನವ ಮಹಾಜನ ವರ್ಗವು ಆ ಸಂಪತ್ತನ್ನು ಉಪಯೋಗಿಸುವ ತಮ್ಮ ನ್ಯಾಯವಾದ ಅಧಿಕಾರವನ್ನು ಕಳಕೊಂಡಿದ್ದಾರೆ. ನಮ್ಮ ಕತೆಯಲ್ಲಿ ದುಡಿಯದವನು ಕೃತದ ಮೇಲಿನ ಅಧಿಕಾರವನ್ನು ಕಳಕೊಂಡನೆಂದು ನಾವು ಕಂಡಿದ್ದೇವೆ. ಆದರೆ ಇಂದಿನ ಆರ್ಥಿಕ ಪದ್ಧತಿಯಲ್ಲಿ ದುಡಿದವನು ಸರ್ವಸ್ವವನ್ನು ಕಳಕೊಂಡಿದ್ದಾನೆ. ಕತೆಯಲ್ಲಿ ದುಡಿಯದವನು ದುಡಿದವನ ವಶಬಂದ ಕೃತದ ಮೇಲಿನ ಎಲ್ಲ ಅಧಿಕಾರವನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಳ್ಳುವುದನ್ನು ನೀವು ನ್ಯಾಯವೆಂದು ಒಪ್ಪುವಿರಾ? ಹಾಗೆ ಒಪ್ಪುವಿರಾದರೆ ಇಂದಿಗೆ ಆಚರಣೆಯಲ್ಲಿರುವ ಆರ್ಥಿಕ ಪದ್ಧತಿಯೂ ಸರಿಯೆಂದು ನೀವು ಹೇಳಬಹುದು. ಆದರೆ ನೀವು ಸರಿ ಎಂದ ಮಾತ್ರಕ್ಕೆ ಸುಳ್ಳು ಸತ್ಯವಾಗಲೊಲ್ಲದಷ್ಟೆ. ಆದುದರಿಂದ ಇದ್ದುದನ್ನು ಇದ್ದಂತೆ ಒಪ್ಪಿರಿ. ಎಲ್ಲ ಹಕ್ಕುಗಳನ್ನು ಕಳಕೊಂಡವನು ಎಲ್ಲ ಅಧಿಕಾರವನ್ನು [illegible] ಸ್ವಾಧೀನಪಡಿಸಿಕೊಳ್ಳುವ ಅನ್ಯಾಯವು [illegible] ಇಂದಿನ ರೀತಿಯಾಗಿದೆ ಎಂದು ಒಪ್ಪಿರಿ.

ದುಡಿದವನಿಗೂ ಕೃತದ ಮೇಲೆ ಅಧಿಕಾರವಿದೆಯಾದರೂ ನೆಲದ ಮೇಲೆ ಅಧಿಕಾರವಿಲ್ಲನೆಂದು ನಾವು ಕತೆಯಲ್ಲಿ ವಿಮರ್ಶಿಸಿದ್ದೇವೆ. ಆದರೆ ಇಂದಿಗೆ ದುಡಿಯದವನಿಗೆ ಕೃತ ಮಾತ್ರವಲ್ಲ ನೆಲದ ಮೇಲೂ ಅಧಿಕಾರವಿದೆ. [illegible] ಬೇಕಾದ ಪದಾರ್ಥಗಳನ್ನು ತಯಾರಿಸುವಲ್ಲಿ ಕತೆಯಲ್ಲಿ ಹೇಳಿದ ಇಬ್ಬರು ಬಂಧುಗಳು ನೆಲವನ್ನು ಉಪಯೋಗಿಸಿಕೊಂಡು ತಮ್ಮ ಕಾಯಕಷ್ಟವನ್ನು ಪ್ರಯೋಗಿಸಿದರಷ್ಟೆ. ಹಾಗೆ ಅವರ ಅನ್ನವನ್ನು ಹೊಂದುವಲ್ಲಿ ಅವರು ದುಡಿಯಬೇಕಾದಲ್ಲಿ ಅವರ ಸಹಾಯಕ್ಕೆ ನೆಲವು ಅವರಿಂದ ಉಪಯೋಗಿಸಲ್ಪಟ್ಟಿತು. ಆ ನೆಲದ ಮೇಲೆ ಯಾರ ಅಧಿಕಾರವೂ ಇರಬಾರದು. ಅದು ಹೊಲವಾದುದು ಅವರ ಶ್ರಮದ ಫಲವಾಗಿ ಆದರೆ ಆ ಹೊಲದ ಮೇಲೆ ಅವರಿಬ್ಬರಿಗೂ ಅಧಿಕಾರ ಇದ್ದರೆ, ತಪ್ಪಿಲ್ಲ ಎಂದೂ ನಾವು ಸೂಚಿಸಿದ್ದೆವು ಮಾತ್ರವಲ್ಲ ಕೊನೆಗೆ ದುಡಿಯದೇ ಇದ್ದವನಿಗೆ ಆ ಹೊಲದ ಮೇಲಿನ ಅಧಿಕಾರ ತಪ್ಪಿ ಹೋಗಲೂ ಬಹುದು. ಹಾಗೆ ತಪ್ಪಿ ಹೋದರೆ ಅದು ತಪ್ಪಾಗಲಾರದು ಎಂದೂ ಸೂಚಿಸಿದ್ದೆವು. ಆದರೆ ಇಂದಿಗೆ ಹೋಗಿದೆ? ಸಂಪತ್ತನ್ನೂ ಉಂಟುಮಾಡುವಲ್ಲಿ ಕಾಯಕಷ್ಟವನ್ನು ಉಪಯೋಗಿಸುವವನ ವಶವಿರಬೇಕಾದ ಹೊಲವು ದುಡಿಯದವನ ವಶವಿದೆ. ಹಾಗಾಗಿ ಹೊಲ ಮಾತ್ರವಲ್ಲ ದುಡಿತದ ಮೇಲಾಧಿಕಾರವನ್ನೂ ದುಡಿಯದವ ತನ್ನ ವಶಪಡಿಸಿಕೊಂಡಂತಾಗಿದೆ. ಹಾಗಾಗಿ ಲೋಕದ ಸಮಸ್ತ ಸಂಪತ್ತನ್ನು ಉಂಟುಮಾಡುವವನು ತನ್ನ ದುಡಿತಕ್ಕೆ ಎಷ್ಟು ಬೆಲೆ ಇರಬೇಕೆಂದು ನಿರ್ಧರಿಸುವ ಅಧಿಕಾರವನ್ನು ಕಳಕೊಂಡಂತಾಗಿದೆ. ಲೋಕದ ಅನ್ನದಾತನಾದ ದುಡಿತವು ಹೊಟ್ಟೆಯ ಕೂಳಿಗಾಗಿ ಬೇಡುವಂತಾಗಿದೆ: ಉಂಟುಮಾಡುವವನು ಉಣ್ಣುವುದಕ್ಕಿಲ್ಲದೆ ಹೊಟ್ಟೆಪಾಡಿಗಾಗಿ ತನ್ನ ರಕ್ತವನ್ನು ಮಾರುವ ಕಾಲ ಬಂದಿದೆ. ಅರ್ಥಾತ್ ಅಹಿಂಸೆ ಸತ್ಯ, ಧರ್ಮ ನ್ಯಾಯ ನೀತಿಗಳೆಂದಿದ್ದರೆ ಅವುಗಳೆಲ್ಲ ಇಲ್ಲವಾಗಿ ಅಸತ್ಯ, ಅಧರ್ಮ ಅನ್ಯಾಯ ಅನೀತಿ, ಹಿಂಸೆಗಳು ನಾಲ್ಕೂ ಕಾಲುಗಳಿಂದ ನಿಂತುದು ಮಾತ್ರವಲ್ಲ. ಮಾನವ ಕೋಟಿಯ ಮೇಲೆ ಮನಬಂದಂತೆ ಸವಾರಿ ಮಾಡುತ್ತಿರುವಂತಾಗಿದೆ.

ಹಾಗಾದರೆ ನಮ್ಮ ಕತೆಯಲ್ಲಿ ಪೋಣಿಸಿ ಕಾಣಿಸಲಾದ ಆರ್ಥಿಕ ಸತ್ಯಗಳಿಗೂ ಇಂದಿನ ಪರಿಸ್ಥಿತಿಗೂ ಸರಿ ತಿರುಗುಮುರುಗು ಇದೆ. ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ನ್ಯಾಯವು ತಲೆಕೆಳಗಾಗಿದೆ. ಎಂದು ಈ ಮೇಲಿನ ವಿಮರ್ಶೆಯಿಂದ ತಮಗೆ ತಿಳಿದುಬಾರದಿರದು. ನೀವು ಅದನ್ನು ಒಪ್ಪದೆಯೂ ಇರಲಾರಿರಿ. ಆದರೆ ಒಪ್ಪುವುದರೊಡನೆ, "ನಿಜವಾದ ಆರ್ಥಿಕ ನ್ಯಾಯಕ್ಕೂ ಈಗಿನ ಇರಕ್ಕೂ ರಾತ್ರಿ ಹಗಲಿದೆ. ಎಲ್ಲ ಆರ್ಥಿಕ ನ್ಯಾಯ ತಲೆಕೆಳಗಾಗಿ ನಡೆಯುತ್ತಿದೆ, ಸರಿ, ಒಪ್ಪೋಣ. ಇದನ್ನು ಸರಿಗೊಳಿಸಿ ನ್ಯಾಯವನ್ನು ನಾಲ್ಕು ಕಾಲುಗಳಿಂದ ನಿಲ್ಲಿಸುವ ದಾರಿ ಯಾವುದು ಹೇಳಿ ನೋಡೋಣ" ಎಂದು ನೀವು ನಮ್ಮನ್ನು ಪ್ರಶ್ನಿಸದಿರಲಾರಿರಿ. ಈ ನಿಮ್ಮ ಪ್ರಶ್ನೆಗೆ ಉತ್ತರವೀವುದು ನಮ್ಮ ಕರ್ತವ್ಯ. ಹಿರಿಯರು ಹಿಂದೆ ಹೇಳಿದ ಮಾತನ್ನು ನಿಮಗೆ ನಾವು ಹೇಳಿ ಉತ್ತರವೀಯಬಹುದು. ಅದು ಹೀಗಿದೆ.

ಲೋಕದ ಸಂಪತ್ತನ್ನು ಉಂಟುಮಾಡುವ ಗೈಮೆಯು ಅದೇ ಸಂಪತ್ತಿನ ಸರ್ವಾಧಿಕಾರಿ. ಗೈಮೆಯ ಆ ನೈಜ ಅಧಿಕಾರವು ಆಚರಣೆಯಲ್ಲಿ ಬರಬೇಕಾದರೆ

ಸಂಪತ್ತನ್ನು ಉಂಟುಮಾಡುವ ಕೆಲಸದಲ್ಲಿ ಗೈಮೆಯ ಸಹಾಯಕ್ಕೆ ಒದಗುವ ಹೊಲವೇ ಮೊದಲಾದ ಉಪಕರಣಗಳ ಮೇಲಿನ ಅಧಿಕಾರವು ಆ ಗೈಮೆಯ ವಶವೇ ಇರಬೇಕು. ಹಾಗಾದರೆ ಮಾತ್ರ ದುಡಿತವು ಬೇಡುವುದು ನಿಂತೀತು. ಇನ್ನೂ ಚೆನ್ನಾಗಿ ಅರ್ಥವಾಗುವ ಮಾತಿನಲ್ಲಿ ಹೇಳುವುದಿದ್ದರೆ ಲೋಕದ ಸಂಪತ್ತನ್ನು ಉಂಟುಮಾಡವ ಹಂಚುವ ಮತ್ತು ಉಪಯೋಗಿಸುವ ಸರ್ವಾಧಿಕಾರವು ಲೋಕದಲ್ಲಿ ಇಂದಿಗಿರುವ ಸಾಧಾರಣ 250 ಕೋಟಿ ಮಾನವ ಸಮಾಜದ ಸಮುಷ್ಟಿಯ ಅಧಿಕಾರಕ್ಕೊಳಪಡಬೇಕು. ಇಂದಿಗೆ ಆ ಅಧಿಕಾರವು ದುಡಿಯದ ಸಾಧಾರಣ ನಾಲ್ಕೈದು ಕೋಟಿಯಷ್ಟಿರುವ ಕೆಲವೇ ಮಂದಿಯ ಒಂದು ಚಿಕ್ಕ ವರ್ಗದವರ ವಶವಿದೆ. ಅದರಿಂದಾಗಿ ದುಡಿವ ಹಲವರ ವರ್ಗದ ದುಡಿತಕ್ಕೆ ಬೆಲೆ ಕಟ್ಟುವ ಅಧಿಕಾರವು ಕೆಲವೇ ಮನುಷ್ಯರ ವರ್ಗದ ಸ್ವಾರ್ಥಕ್ಕೆ ಬೇಕಾದಂತೆ ದುರ್ವಿನಿಯೋಗಗೊಳಿಸಲಾಗುತ್ತಿದೆ. ಎಲ್ಲರ ಸ್ವಾರ್ಥವನ್ನು ಎಲ್ಲರೂ ಒಟ್ಟಿನಲ್ಲಿ ಹಿಡಿತದಲ್ಲಿಡಬಹುದೇ ಹೊರತು, ಎಲ್ಲರ ಹಿತಕ್ಕೆ ಬೇಕಾದಂತೆ ನಿಸರ್ಗದತ್ತ ಸಂಪತ್ತನ್ನು ಎಲ್ಲರೂ ಒಟ್ಟಿನಲ್ಲಿ ನಿರ್ಧರಿಸುವಂತೆ ಹಂಚಿಕೊಳ್ಳಬಹುದೇ ಹೊರತು ಒಬ್ಬೊಬ್ಬನ ಅಥವಾ ಕೆಲವೇ ಮಂದಿಯ ಸರ್ವಾಧಿಕಾರಕ್ಕೆ ಬಿಡುವುದು ಮಾನವ ಹಿತದೃಷ್ಟ್ಯಾ ಸಮಂಜಸವಲ್ಲ. ಆದುದರಿಂದ ಇಂದಿಗೆ ಹಲವರ ಗೈಮೆಯ ಮೇಲೆ ಮತ್ತು ಸಂಪದುತ್ಪಾದನೋಪಕರಣಗಳ ಮೇಲೆ ಮಾನವ ಕುಲದ ಒಂದು ಚಿಕ್ಕ ವರ್ಗಕ್ಕೆ ಸರ್ವಾಧಿಕಾರವಿರುವುದು ತಪ್ಪು. ಅದು ಹೋಗಿ ಬದಲು ಲೋಕದ ಸಂಪತ್ತನ್ನು ಉಂಟುಮಾಡುವ ಮಾನವ ಕುಲದ ಹಲವು ಮಂದಿಯ ವರ್ಗಕ್ಕೆ ಆರ್ಥಿಕ ನ್ಯಾಯ ದೊರೆವ ರೀತಿಯ ಸಮಗ್ರ ಸಮಾಜದ ಸರ್ವಾಧಿಕಾರ ಸ್ಥಾಪನೆಯಾಗಬೇಕು. ಸಂಪದುತ್ಪಾದನೋಪಕರಣಗಳನ್ನೆಲ್ಲ ಸಮಾಜೀಕರಣ ಮಾಡಬೇಕು. ಅಂದರೆ ಎಲ್ಲವೂ ಸರಕಾರದ್ದಾಗಬೇಕು. ಅಂಥ ಸರಕಾರವು ಎಲ್ಲರದಾಗಬೇಕು. ಹಾಗಾದರೆಮಾತ್ರ ಮಾನವ ಕುಲಕ್ಕೆ ಆರ್ಥಿಕ ಸ್ವಾತಂತ್ರ್ಯ ಸಿದ್ಧಿಸೀತು. ಹೊಟ್ಟೆಯ ಹಿಟ್ಟಿನ, ಮೈಬಟ್ಟೆಯ ಸಮಸ್ಯೆ ಬಗೆಹರಿದೀತು. ದಾರಿದ್ರ್ಯ, ಅವಿದ್ಯೆ ರೋಗ ರುಜೆ ಯುದ್ಧಗಳು ಲೋಕದಿಂದ ಮಾಯವಾದಾವು. ಮಾನವ ಕುಲದ ಕಲ್ಯಾಣವಾದೀತು. ಲೋಕಶಾಂತಿ ಸ್ಥಾಪನೆಯಾದೀತು.

ಗಾಜಿನ ಕೈಗಾರಿಕೆ

ಹಿಂದೂಸ್ಥಾನವು ಪ್ರತಿ ವರುಷ $1\frac{1}{4}$ ಕೋಟಿ ರೂಪಾಯಿಗಿಂತಲೂ ಹೆಚ್ಚು ಬೆಲೆಯ ಗಾಜಿನ ಸಾಮಾನುಗಳನ್ನು ಪರದೇಶದಿಂದ ಆಮದುಮಾಡುತ್ತದೆ. ನಮ್ಮ ಸಂಸ್ಥಾನವು ಸಾಧಾರಣ 20ರಿಂದ 23 ಲಕ್ಷ ರೂಪಾಯಿಯ ಗಾಜಿನ ಸಾಮಾನುಗಳನ್ನು ಪರದೇಶಗಳಿಂದ ತರಿಸುತ್ತದೆ. ಈ ಸಾಮಾನುಗಳಲ್ಲಿ ಶೇಕಡಾ 40 ಪಾಲು ಬಳೆಗಳೂ, ಬಾಟ್ಲಿಗಳೂ, ತಟ್ಟೆಗಳೂ ಆಗಿವೆ. ನಮ್ಮ ದೇಶದಲ್ಲಿ ಬಳೆಯ ಕೈಗಾರಿಕೆಯೊಂದೇ ಪರದೇಶದ ಬಳೆಯೊಂದಿಗೆ ಸ್ಪರ್ಧೆ (Competition) ನಡೆಸುತ್ತಿದೆ. ಬಹಳ ಸಮಯದಿಂದ ಬಳೆಯ ಕೈಗಾರಿಕೆಯು ತನ್ನ ಸ್ಥಾನವನ್ನು ಕಾಯ್ದುಕೊಂಡಿದೆ. ಸಂಯುಕ್ತ ಪ್ರಾಂತಗಳಲ್ಲಿಯೂ, ಮಧ್ಯಪ್ರಾಂತಗಳಲ್ಲಿಯೂ, ಬಂಗಾಳದಲ್ಲಿಯೂ, ಪಂಜಾಬದಲ್ಲಿಯೂ, ಬೊಂಬಾಯಿಯಲ್ಲಿಯೂ ಗಾಜಿನ ಕೈಗಾರಿಕೆಯ ಹಲವು ಫೇಕ್ಟರಿಗಳಿವೆ. ಹೈದರಾಬಾದ ಸಂಸ್ಥಾನದಲ್ಲಿ ಎರಡು ಫೇಕ್ಟರಿಗಳಿವೆ. ನಮ್ಮ ಸಂಸ್ಥಾನದಲ್ಲಿ [illegible] ವರ್ಕ್ಸ್ ಎಂಬ ಒಂದೇ ಒಂದು ಫೇಕ್ಟರಿ ಇದೆ.

ಗಾಜನ್ನು ತಯಾರಿಸುವುದಕ್ಕೆ ಮುಖ್ಯವಾದ ಮರಳು, ಸುಣ್ಣ, ಸೋಡಾ ಏಷ್ (Soda-ash) ಎಂಬ ಈ ಮೂರು ಸಾಮುಗ್ರಿಗಳಲ್ಲಿ ಮೊದಲನೆಯ ಎರಡು ಸಾಮುಗ್ರಿಗಳು ಹಿಂದೂದೇಶದಲ್ಲಿಯೇ ದೊರೆಯುತ್ತವೆ. ಆದರೆ ಮೂರನೆಯದಾದ ಸೋಡಾ ಏಷ್‌ನ್ನು ಪರದೇಶದಿಂದಲೇ ತರಿಸಬೇಕಾಗುತ್ತದೆ. ಪರದೇಶದಲ್ಲಿ ಇದಕ್ಕಿರುವ ಬೆಲೆಗಿಂತ ಎರಡು ಪಾಲು ಹೆಚ್ಚು ಬೆಲೆ ನಮ್ಮ ದೇಶದಲ್ಲಾಗುವುದು. ಆದರೂ ಆಶಾಕಿರಣಗಳು ದೂರದ ದಿಗಂತದಲ್ಲಿ ಮೂಡಿವೆ. ಟಾಟಾಕಂಪೆನಿಯವರು ಸೋಡಾ ಏಷ್ ತಯಾರಿಸುವ ಕೈಗಾರಿಕೆಯನ್ನು ಕೈಗೊಳ್ಳುವರು ಅಥವಾ ಕೈಗೊಂಡಿರುವರು. ಬೆನಾರಿಸ್ ಹಿಂದೂ ವಿಶ್ವವಿದ್ಯಾನಿಲಯದ ಡಾ। ಡ್ಯೂಚಿ ಮತ್ತು ಶ್ರೀ। ಪಿ. ಎನ್. ಅಗರ್‌ವಾಲರವರು ಸೋಡಾ ಏಷ್‌ನ ಬದಲು ಬೇರೆ ಪದಾರ್ಥ (Neppeline Syenite rock) ವನ್ನು ಕಂಡು ಹಿಡಿದಿದ್ದಾರೆ. ಇದು ಬಹಳ ಆಶಾಜನಕವಾದ ವಿಷಯವಾಗಿದೆ. ಈ ಪದಾರ್ಥಗಳು ನಮ್ಮ ಪ್ರಾಂತದ ವಿಶಾಖಪಟ್ಣ ಮತ್ತು ಕೊಯಮುತ್ತೂರುಗಳಲ್ಲಿ ಧಾರಾಳವಾಗಿ ದೊರೆಯುತ್ತವೆ. ಒಡಕು ಗಾಜಿನ ಪಾತ್ರೆಗಳನ್ನು ಬಳೆ ಮಾಡುವುದಕ್ಕಾಗಿ ಉಪಯೋಗಿಸುತ್ತಾರೆ. ಇದರಿಂದ ಈ ವರೆಗೆ ಬಳೆ ಮಾಡಲು ಬೇಕಾಗುವ ಸಾಮುಗ್ರಿಗಳನ್ನು ಸಂಗ್ರಹಿಸಲು ಇರುವ ತೊಡಕುಗಳನ್ನು ನಿವಾರಣೆ ಮಾಡಿದಹಾಗಾಯಿತು. ಇನ್ನುಮುಂದಕ್ಕೆ ಈ ಕೈಗಾರಿಕೆಯನ್ನು ನಮ್ಮ ದೇಶದ ಯಾವ ಭಾಗದಲ್ಲಿಯೂ ಗುಡಿಕೈಗಾರಿಕೆ (Cottage Industry) ಯನ್ನಾಗಿ ಇಟ್ಟುಕೊಳ್ಳಬಹುದು. ದಕ್ಷಿಣ ಕನ್ನಡ ಜಿಲ್ಲಾ ಮಲ್ಪೆ ಬಳಿಯ ಮರಳೂ ಗಾಜಿಗೆ ಯೋಗ್ಯವಿದೆಯಂತೆ.

ಹಣ್ಣುಗಳನ್ನು ಕೇನ್ (Can) ಮಾಡುವುದು

ಆಮದು:—ಸರಾಸರಿಯಾಗಿ $1\frac{1}{4}$ ಕೋಟಿ ರೂಪಾಯಿ.

ಮದ್ರಾಸಿನ ಭಾಗ:—ಸರಾಸರಿಯಾಗಿ 20 ಲಕ್ಷ ರೂಪಾಯಿ.

ಹಣ್ಣುಹಂಪಲು, ಗಡ್ಡೆಗೆಣಸುಗಳನ್ನು ಬೆಳೆಸುವ ಸ್ಥಳದ ವಿಸ್ತೀರ್ಣ:—691,506 ಎಕರೆಗಳು (1937-38)

ಹಣ್ಣುಗಳನ್ನು "ಕೇನ್" ಮಾಡುವುದು:—ಎಲ್ಲಾ ಹಣ್ಣುಗಳು ಪಾಕಗಳನ್ನೂ ರಸಾಯನಗಳನ್ನೂ ತಯಾರಿಸಲು ಈ ಕೈಗಾರಿಕೆಯು ಎಡೆಕೊಡುತ್ತದೆ. ಭೂಲೋಕದ ಇತರ ಭಾಗಗಳಲ್ಲಿ ಬೆಳೆಯುವ ಹಣ್ಣುಗಳಿಗಿಂತಲೂ ಅಗ್ಗವಾಗಿ ಇಲ್ಲಿ ದೊರೆಯುವಂತೆ ಮಾಡಬಹುದು. ಇಲ್ಲಿ ಅನುಕೂಲವಾದ [illegible] ಸ್ಥಳಗಳಿವೆ. ಅದರಿಂದ ಇಲ್ಲಿ ಹಣ್ಣುಗಳನ್ನು [illegible] ಬೆಳೆಸಬಹುದು. ನಮ್ಮ ಪ್ರಾಂತಕ್ಕೆ ಅಂತಹ ಸ್ಥಳಗಳಲ್ಲಿ [illegible] ದೊರೆಯುವುದು. ಅದರಿಂದ ವಿಧವಿಧದ ಉತ್ತಮ ಹಣ್ಣುಗಳನ್ನು ಬೆಳೆಸಬಹುದು.

[illegible] ಹಣ್ಣುಗಳನ್ನು [illegible] ಬೆಳೆಸಿದರೆ [illegible] ಹಣ್ಣುಗಳನ್ನು [illegible] ಬೆಳೆಸಿದರೆ [illegible] ಹಣ್ಣುಗಳನ್ನು ಮಾರಬಹುದು. ಕೇನಿಂಗ್ ಮತ್ತು ಪ್ರಿಸರ್ವಿಂಗ್ ರೀತಿಗಳಿಂದ ಹಣ್ಣುಗಳನ್ನು [illegible] ಮಾಡಲು ಅನುಕೂಲವಿಲ್ಲದಿದ್ದರೆ, ಹೆಚ್ಚು ಪ್ರಮಾಣದಲ್ಲಿ ಹಣ್ಣುಗಳನ್ನು ಬೆಳೆಸಿದರೂ ಯಾವ ಪ್ರಯೋಜನವೂ ಸಿಗದು. ಅದರಿಂದ ಈ ಕೈಗಾರಿಕೆಯನ್ನು ಪ್ರೋತ್ಸಾಹಿಸಬೇಕಾಗಿದೆ. ಈ ಕೈಗಾರಿಕೆಯನ್ನು ಗುಡಿಕೈಗಾರಿಕೆ (Cottage Industry) ಯನ್ನಾಗಿಯೂ, ಫೇಕ್ಟರಿ ಕೈಗಾರಿಕೆಯನ್ನಾಗಿಯೂ ಇಟ್ಟುಕೊಳ್ಳಬಹುದು. ಬೆಜ್ವಾಡದಲ್ಲಿ [illegible] ಅನಾನಾಸುಗಳನ್ನು ಕೇನ್ ಮಾಡುತ್ತಾರೆ. ಕಲ್ಯಾಣಪುರದಲ್ಲಿಯೂ 'ಕೇನ್' ಮಾಡುವ ಪ್ರಯೋಗ ನಡೆದು, ಕೆಲವೊಂದು "ಕೇನ್" ಹಣ್ಣುಗಳು [illegible] ಬಂದಿದ್ದುವು. ಆದರೆ ಬಹುಶಃ ಅದು, ಮಾರಾಟದ ಕ್ಷೇತ್ರದ ಅನುಕೂಲವಿಲ್ಲದೆ ನಿಂತುಹೋಯಿತು. ಕರ್ನೂಲು ಜಿಲ್ಲೆಯ ಪನ್ಯಾಮ್ [illegible] ಮಾವು, ಅನಾನಾಸು, ಪೇರಳೆ ಇತ್ಯಾದಿಗಳಿಗೆ ಕೇಂದ್ರವಾಗಿದೆ. ಹಣ್ಣುಗಳು ಧಾರಾಳ ಸಿಗುವ ಸಮಯ ಈ ಹಣ್ಣುಗಳ ಉಪಯೋಗವನ್ನು ಬೇರೆ ರೀತಿಯಲ್ಲಿ ಪಡೆದು, ಹಣ್ಣುಗಳು ಕಡಿಮೆ ಇರುವ ಸಮಯ ಇವುಗಳನ್ನು ಮಾರಾಟಕ್ಕೆ ತರಲು ಸರಕಾರದ ಇಂಡಸ್ಟ್ರಿ-ಏಕ್ಟ್ ಪ್ರಕಾರ ಒಂದು ಕೇನಿಂಗ್ ಮತ್ತು ಪ್ರಿಸರ್ವಿಂಗ್ ಕೈಗಾರಿಕೆಯ ಕ್ಷೇತ್ರವನ್ನು ಇಲ್ಲಿ ತೆರೆಯುವ ಸೂಚನೆ ಇದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಷರಜ್ಞರು

ದಕ್ಷಿಣ ಕನ್ನಡ ಜಿಲ್ಲೆಯು ನಮ್ಮ ಸಂಸ್ಥಾನದ 25 ಜಿಲ್ಲೆಗಳಲ್ಲಿ ಒಂದಾಗಿದೆ. (ಮದರಾಸು ನಗರವನ್ನು ಪ್ರತ್ಯೇಕ 'ಜಿಲ್ಲೆ'ಯೆಂದು ಕೂಡಿಸಿಕೊಳ್ಳಲಾಗಿದೆ.)

ದಕ್ಷಿಣ ಕನ್ನಡ ಜಿಲ್ಲೆಯು ಅಕ್ಷರಜ್ಞರ ಮಟ್ಟಿಗೆ, 16 ಜಿಲ್ಲೆಗಳನ್ನು ಹಿಂದಿಕ್ಕುತ್ತದೆ. ಆದರೆ, ಬೇರೆ 8 ಜಿಲ್ಲೆಗಳು (ಮಲಬಾರು, ನೀಲಗಿರಿ, ತಿನ್ನವೆಲ್ಲಿ, ರಾಮನಾಡು, ಮಧುರಾ, ತ್ರಿಚಿನಾಪಳ್ಳಿ, ತಂಜಾವೂರು ಮತ್ತು ಮದರಾಸು) ನಮ್ಮ ಜಿಲ್ಲೆಗಿಂತ ಎಷ್ಟೋ ಮುಂದುವರಿದಿವೆ. ಮಲಬಾರಿನಲ್ಲಿ ಅಕ್ಷರಜ್ಞರು ದಕ್ಷಿಣ ಕನ್ನಡ ಜಿಲ್ಲೆಗಿಂತ ಸೇಕಡಾ 4 ರಷ್ಟು ಹೆಚ್ಚು ಇರುವರು.

ಲೋಕಪ್ರಸಿದ್ಧ ಗ್ರಂಥಾಲಯಗಳು

ಗ್ರಂಥಾಲಯ	ನಗರ	ಗ್ರಂಥಗಳು
ಬಿಬ್ಲಿಯಾಥಿಕ್ ನೇಶನಲ್	ಪೆರಿಸ್	7,970,000
ಬ್ರಿಟಿಷ್ ಮ್ಯೂಝಿಯಮ್	ಲಂಡನ್	4,156,400
ಬೋಡಿಯನ್ ಗ್ರಂಥಾಲಯ	ಒಕ್ಸ್‌ಫರ್ಡ್	3,968,000
ಲೆನಿನ್ ಪಬ್ಲಿಕ್ ಲೈಬ್ರೆರಿ	ಮೊಸ್ಕೊ	5,541,000
ನೇಶನಲ್ ಬಿಬ್ಲಿಯೊಥಿಕ್	ವಿಯನ್ನಾ	2,265,500
ಪಬ್ಲಿಕ್ ಲೈಬ್ರೆರಿ	ಲೆನಿನ್‌ಗ್ರಾಡ್	5,163,948
ಪ್ರುಸ್ಸಿಶ್ಚೆಸ್ಟಾಟ್ಸ್ ಬಿಬ್ಲಿಯೊಥೆಕ್	ಬರ್ಲಿನ್	3,686,690



SRI. M. ANNAPPA NAYAK,
President: Merchants' Holiday Committee, Mangalore.
ಶ್ರೀ ಎಮ್. ಅಣ್ಣಪ್ಪ ನಾಯ್ಕರು,
ಮಂಗಳೂರು ಮರ್ಚಂಟ್ಸ್ ಹೊಲಿಡೇ ಕಮಿಟಿಯ ಅಧ್ಯಕ್ಷರು.

ಹಿಂದೂದೇಶದ ಕುರಿತು ತಿಳಿಯಬೇಕಾದ ಕೆಲವು ಮುಖ್ಯ ವಿಷಯಗಳು

ಹಿಂದೂದೇಶದ ಜನಸಂಖ್ಯೆಯು 353 ಮಿಲಿಯ: ಇದು ಭೂಲೋಕದ ಐದನೇ ಒಂದಂಶವಾಗಿರುತ್ತದೆ. ಬಂಗಾಳವು ಹಿಂದೂದೇಶದ ಅತೀ ಹೆಚ್ಚು ಜನ ಸಂಖ್ಯೆಯುಳ್ಳ ಪ್ರದೇಶವಾಗಿರುತ್ತದೆ. ಅಲ್ಲಿಯ ಜನಸಂಖ್ಯೆಯು 50,114,002.

ಸಂಯುಕ್ತ ಪ್ರಾಂತ್ಯದಲ್ಲಿ ದೇಶದ ಎಲ್ಲಾ ಭಾಗಗಳಿಗಿಂತ ಹೆಚ್ಚು ಮರಣ ಗಳು ಸಂಭವಿಸುತ್ತವೆ. ಅಲ್ಲಿಯ ಸರಾಸರಿ ಮರಣ ಸಂಖ್ಯೆಯು 33·5.

ಅಸ್ಸಾಮಿನ ಸರಾಸರಿ ಮರಣ ಸಂಖ್ಯೆಯು 23·8. ಇದು ದೇಶದ ಅತೀ ಕಡಿಮೆ ಸಂಖ್ಯೆಯಾಗಿರುತ್ತದೆ.

ಮದ್ರಾಸಿನಲ್ಲಿ ದೇಶದ ಎಲ್ಲಾ ಭಾಗಗಳಿಗಿಂತ ಹೆಚ್ಚು ಹೆಂಗುಸರು ಇದ್ದಾರೆ. 1000 ಗಂಡಸರಾದರೆ 1025 ಹೆಂಗಸರು.

ಪಂಜಾಬಿನಲ್ಲಿ ಹೆಂಗುಸರ ಸಂಖ್ಯೆಯು ದೇಶದ ಎಲ್ಲಾ ಭಾಗಗಳಿಗಿಂತ ಅತೀ ಕಡಿಮೆ. 1000 ಗಂಡಸರಾದರೆ 831 ಹೆಂಗುಸರು.

ಶಿಶು ಮರಣ ಸಂಖ್ಯೆಯು ಬರ್ಮಾ ದೇಶದಲ್ಲಿ ಅತೀ ಕಡಿಮೆ. ಅಲ್ಲಿಯ ಸರಾಸರಿ ಸಂಖ್ಯೆಯು 23% ಯೆಹೂದ್ಯರಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚು. ಪ್ರತೀ ಕುಟುಂಬದ ಸರಾಸರಿ ಶಿಶುಗಳ ಸಂಖ್ಯೆಯು 5·9.

ಹಿಂದೂದೇಶದಲ್ಲಿ ಹಿಂದೂ ಮತವು ಬೇರೆ ಎಲ್ಲಾ ಮತಗಳಿಗಿಂತ ವಿಸ್ತಾರ ವಾಗಿ ಹರಡಿದೆ. ಪ್ರತೀ 10,000ಕ್ಕೆ, 6825ರಂತೆ ಜನರು ಈ ಮತವನ್ನು ಅನು ಸರಿಸುತ್ತಾರೆ.

ಕ್ರೈಸ್ತರಿಗೆ ಇದ್ದಷ್ಟು ದೊಡ್ಡ ಕುಟುಂಬಗಳು ಬೇರೆ ಯಾವ ಜಾತಿಗೂ ಇರು ವುದಿಲ್ಲ. ಅವರ ಪ್ರತೀ ಕುಟುಂಬದಲ್ಲಿ ಸರಾಸರಿ 5 ಜನರಿದ್ದಾರೆ.

ಬಂಗಾಳದಲ್ಲಿ ವಿಧವೆಯರ ಸಂಖ್ಯೆಯು ಅಧಿಕ. 1000ಕ್ಕೆ 22·6ರ ಪ್ರಕಾರ ವಿಧವೆಯರಿದ್ದಾರೆ.

ಅಜಮೀರ್–ಮರವಾರಾ, ಇಲ್ಲಿ ದೇಶದ ಎಲ್ಲಾ ಭಾಗಗಳಿಗಿಂತ ಹೆಚ್ಚು ಕುರುಡರು ಇರುತ್ತಾರೆ. ಪ್ರತೀ 100,000ಕ್ಕೆ 383ರಂತೆ ಕುರುಡರಿದ್ದಾರೆ.

ವಿಸ್ತೀರ್ಣದಲ್ಲಿ ಜಾಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳು ಹಿಂದೂದೇಶದಲ್ಲಿ ಅತೀ ದೊಡ್ಡವುಗಳು. ಆದರೆ ಜನಸಂಖ್ಯೆಯಲ್ಲಿ ಹೈದರಾಬಾದು ಸಂಸ್ಥಾನವು ಮಿಗಿಲಾಗಿದೆ.

ಹಿಂದೂದೇಶದ ಜನಸಂಖ್ಯೆಯು ಇತ್ತೀಚೆಗಿನ ಖಾನೇಶುಮಾರಿಯ ಪ್ರಕಾರ ಚೈನಕ್ಕಿಂತ ಹೆಚ್ಚೆಂದು ಮಂಜೂರಾಗಿದೆ. ಆದುದರಿಂದ ಭೂಲೋಕದ ಅತೀ ಹೆಚ್ಚಿನ ಜನಸಂಖ್ಯೆಯು ಹಿಂದೂದೇಶದಲ್ಲಿ ಎಂದು ಖಂಡಿತವಾಗಿದೆ.

1931ನೇ ಖಾನೇಶುಮಾರಿಯ ಪ್ರಕಾರ ತಿಳಿದುಬಂದ ಹಿಂದೂದೇಶದ ಜನರ ಕೆಲವು ನೂತನ ವೃತ್ತಿಗಳು ಈ ಕೆಳಗೆ ಕಾಣಿಸಿದಂತೆ ಇವೆ.

ಉದ್ಯೋಗವನ್ನು ಗೊತ್ತುಹಚ್ಚುವ ಸಾಕ್ಷಿಗಾರರು, ಸ್ಮಶಾನದಲ್ಲಿ ಧರ್ಮ ಬೇಡುವವರು, ದೇವರನ್ನು ಅಭಿಷೇಕ ಮಾಡುವವರು, ಸಾಂಕ್ರಾಮಿಕ ರೋಗ ಗಳನ್ನು ಮಾಟಮಂತ್ರಗಳಿಂದ ಓಡಿಸುವವರು, ಜಾತಕ ಪರಿಶೀಲಿಸುವವರು, ಮಾಟಗಾರರು, ಕೊರವಂಜಿಗಳು, ಮಧ್ಯಸ್ಥರು, ಕಿವಿಯ ಮಯಣವನ್ನು ಹೊರ ತೆಗೆಯುವವರು, ಹಲ್ಲುಗಳಲ್ಲಿ ಬಂಗಾರ ತುಂಬಿಸುವವರು, ಸತ್ತ ಎತ್ತುಗಳ ಕೊಂಬು ಕಡಿಯುವವರು, ಅಶುದ್ಧ ರಕ್ತವನ್ನು ಹೀರುವವರು, ಶಂಖಗಳನ್ನು ಶೋಧಿಸುವವರು, ತೊಟ್ಟಿಲು ತೂಗುವವರು, ಮಿಡಿತೆಗಳನ್ನು ಮಾರುವವರು, ಇತ್ಯಾದಿ.

ಬಲುಚಿಸ್ಥಾನವು ದೇಶದ ಎಲ್ಲಾ ಭಾಗಗಳಿಗಿಂತ ವಿರಳ ಜನಸಂಖ್ಯೆ ಯುಳ್ಳದ್ದಾಗಿರುತ್ತದೆ.

ಅಹಮ್ಮದಾಬಾದಿನಲ್ಲಿ ದೇಶದ ಬಹಳ ಪುರಾತನ ಮುನಿಸಿಪಾಲಿಟಿಯು ಇದೆ. ಇದು 1834ರಲ್ಲಿ ಸ್ಥಾಪಿತವಾಯಿತು.

ಹಿಂದೂದೇಶದ ಜನಸಂಖ್ಯೆಯು 1921ರಲ್ಲಿ 31½ ಕೋಟಿಯಿತ್ತು. 1931 ರಲ್ಲಿ 35 ಕೋಟಿಯಾಯಿತು.

ಜಕೋಬಾಬಾದ್ ಎಂಬಲ್ಲಿ ಉಷ್ಣಮಾಪಕ ಯಂತ್ರವು ಬೇಸಗೆಯಲ್ಲಿ 125° ವರೆಗೆ ಏರುತ್ತದೆ. ಅಂತೆಯೇ ಚಳಿಗಾಲದಲ್ಲಿ 25° ತನಕ ಇಳಿಯುತ್ತದೆ.

ಚಿರಾಪುಂಜಿಯಲ್ಲಿ ವರ್ಷಕ್ಕೆ ಸರಾಸರಿ 460 ಇಂಚು ಮಳೆಯು ಬರುತ್ತದೆ. ಆದರೆ ಮೇಲಿನ ಸಿಂಧ್ ಪ್ರಾಂತದಲ್ಲಿ ವರ್ಷಕ್ಕೆ 3 ಇಂಚು ಮಳೆಬರುವುದು ವಿರಳ.

ಹಿಂದೂದೇಶದಲ್ಲಿ ಭೂಲೋಕದ 3% ಭಂಗಾರವು ಉತ್ಪತ್ತಿಯಾಗುತ್ತದೆ.

ಹಿಂದುಸ್ಥಾನದ ಜನಸಂಖ್ಯೆಯಲ್ಲಿ ಬರೇ 10% ಜನರು ಊರುಗಳಲ್ಲಿ ವಾಸ ಮಾಡುತ್ತಾರೆ.

ಹಿಂದೂದೇಶದಲ್ಲಿ 1000 ಗಂಡುಸರಿಗೆ 940 ಹೆಂಗುಸರ ಪ್ರಕಾರ ಜನ ಸಂಖ್ಯೆಯಿದೆ.

ಹಿಂದುಸ್ಥಾನದ ಜನನ ಸಂಖ್ಯೆಯೂ, ಮರಣ ಸಂಖ್ಯೆಯೂ ಪ್ರಪಂಚದಲ್ಲಿ ಅತೀ ಹೆಚ್ಚಿನದ್ದಾಗಿದೆ.

ಬೊಂಬಾಯಿಯು ಹತ್ತಿಗೂ, ಪಂಜಾಬು ಗೋಧಿಗೂ ಮತ್ತು ಬಂಗಾಳ ಸಣಬಿಗೂ ಪ್ರಖ್ಯಾತಿಪಟ್ಟಿವೆ.

ಬ್ರಿಟಿಷ್ ಹಿಂದೂಸ್ಥಾನದಲ್ಲಿ ಒಂದು ಚದರ ಮೈಲಿಗೆ 196ರಂತೆಯೂ, ಇತರ ಸಂಸ್ಥಾನಗಳಲ್ಲಿ 133ರಂತೆಯೂ ಜನಸಂಖ್ಯೆಯು ಹರಡಿಕೊಂಡಿದೆ.

ಶೇಕಡಾ 90ರಂತೆ ಹಿಂದೂದೇಶದ ಜನರು ಹಳ್ಳಿಯಲ್ಲಿ ವಾಸಮಾಡುತ್ತಾರೆ.

ಸಾಧಾರಣ ಶೇಕಡಾ 70ರಂತೆ ಹಿಂದೂದೇಶದ ಜನರು ಬೇಸಾಯ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವೃತ್ತಿಗಳಲ್ಲಿ ತಮ್ಮ ಕಾಲವನ್ನು ಕಳೆಯುತ್ತಾರೆ.

ಹಿಂದೂದೇಶದಲ್ಲಿ ಬೇಸಾಯದ ಮೇಲೆ ಹೊರಿಸಿದ ಕಂದಾಯವು 900 ಕೋಟಿ ರೂಪಾಯಿಗಳೆಂದು ಸೆಂಟ್ರಲ್ ಬ್ಯಾಂಕಿಂಗ್ ಶೋಧನಾ ಸಮಿತಿಯವರು ಪ್ರಕಟಪಡಿಸಿದ್ದಾರೆ. ಇದು ಭೂಕಂದಾಯದ 15 ಪಾಲು ಆಗುತ್ತದೆ.

ಅಂದಾಜಿನ ಮೇಲೆ ಹಿಂದೂದೇಶದಲ್ಲಿ ಸಾಧಾರಣ ಪ್ರತಿಯೊಂದು ವ್ಯಕ್ತಿಗೆ ಒಂದು ಎಕ್ರೆ ಸಾಗುವಳಿ ನೆಲವು ದೊರೆಯುತ್ತದೆ.

ಭೂಲೋಕದ ಮೂರನೇ ಒಂದಂಶ ಅಶಿಕ್ಷಿತರು ಹಿಂದೂದೇಶ ಒಂದರಲ್ಲಿಯೇ ಇರುತ್ತಾರೆ.

ಹಿಂದೂದೇಶದ 350 ಮಿಲಿಯ ಜನರಲ್ಲಿ ಬರೇ 25 ಮಿಲಿಯ ಜನರು ಮಾತ್ರ ಓದುಬರಹ ತಿಳಿದವರಿದ್ದಾರೆ.

1921ರಿಂದ 1931ರ ವರೆಗಿನ 10 ವರ್ಷದಲ್ಲಿ ಹಿಂದೂದೇಶವು ಅಧಿಕ ಗೊಳಿಸಿದುದು 1% ಶಿಕ್ಷಿತರನ್ನು ಮಾತ್ರ.

ಚಲಚ್ಚಿತ್ರ ಕೈಗಾರಿಕೆ (Film Industry)

ಚಲಚ್ಚಿತ್ರಗಳನ್ನು [illegible] (Travelling Cinemas) [illegible] ರುವ ಮೆಚ್ಚುಗೆಯನ್ನು ತೋರಿಸುತ್ತಿವೆ. ಒಂದಾನೊಂದು ಕಾಲದಲ್ಲಿ ನಮ್ಮಲ್ಲಿ ಪರದೇಶಿ ಚಿತ್ರಗಳು ತುಂಬಿದ್ದುವು. ದೇಶೀಯ ಚಿತ್ರಗಳು ಅಪರೂಪವಾಗಿ ಹುಟ್ಟುತ್ತಿದ್ದುವು. ಆದರೆ ಈಗ ಒಂದು ನವೀನ ಯುಗವೇ ಮೂಡಿದೆ. ಸುಸಂಸ್ಕೃತ ರಾದ ಕೆಲವು ಮಂದಿಗಳು ಮಾತ್ರವೇ ಈಗ ಚಲಚ್ಚಿತ್ರಗಳನ್ನು ನೋಡುವವರಲ್ಲ ಸಾಮಾನ್ಯ ಜನರೂ ಈಗ ಚಲಚ್ಚಿತ್ರಗಳನ್ನು ನೋಡಲು ಇಷ್ಟಪಡುತ್ತಾರೆ. ಪರ ದೇಶಿ ಚಿತ್ರಗಳ ಭಾಷೆಯನ್ನು ಅವರು ತಿಳಿಯದ್ದರಿಂದ ಹಿಂದೀಯ ಚಿತ್ರಗಳನ್ನೇ ನೋಡಲು ಬಯಸುತ್ತಾರೆ. ಆದ್ದರಿಂದ ಹಿಂದೂದೇಶದಲ್ಲಿ ದೇಶಿಯ ಚಿತ್ರಗಳೇ ತುಂಬಿಹೋಗಿವೆ. ಈ ಕೈಗಾರಿಕೆಯು ಬಹಳ ಬೇಗ ಅಭಿವೃದ್ಧಿ ಹೊಂದಿವೆ.

ಆದರೆ ಇದಕ್ಕಾಗಿ ಸಂತೋಷಪಡುವುದು ನ್ಯಾಯವಲ್ಲ. ಏಕೆಂದರೆ ಈ ಕೈಗಾರಿಕೆಗೆ [illegible] ವತ್ತೂ ಯಂತ್ರಗಳನ್ನು ಆಸಿದ್ದ ಪಟಲ (Raw Films)ಗಳನ್ನು [illegible]

1937–38ರಲ್ಲಿ ಹಿಂದೂದೇಶವು 18 ಲಕ್ಷ ರೂಪಾಯಿ ಬೆಲೆಯ ಚಲ ಚ್ಚಿತ್ರ ಯಂತ್ರಗಳನ್ನೂ, 25 ಲಕ್ಷ ರೂಪಾಯಿ ಬೆಲೆಯ ಪಟಲ (Film)ಗಳನ್ನೂ ಪರದೇಶಗಳಿಂದ ತರಿಸಿರುತ್ತದೆ. ಮಹಾಜನರ ಬೆಂಬಲ ಸಿಕ್ಕಿದರೆ ಇವುಗಳನ್ನೆಲ್ಲಾ ಇಲ್ಲಿಯೇ ತಯಾರಿಸಬಹುದು. ಇಲ್ಲಿಯೇ ತಯಾರು ಮಾಡಿದಾಗ ಮಾತ್ರ ನಮ್ಮ ಚಲಚ್ಚಿತ್ರ ಕೈಗಾರಿಕೆಯು ದೇಶೀಯ ಕೈಗಾರಿಕೆಯಾಗುತ್ತದೆ. ಇತ್ತೀಚೆಗೆ ವಿಷಾದಕರವಾದ ವಿಚಾರಗಳು ನಡದಿವೆ. ಪರದೇಶೀ ಧಂಡವಲಗಾರರು ತಮ್ಮ ಹಣವನ್ನು ನಮ್ಮ ದೇಶದ ಚಲಚ್ಚಿತ್ರ ಕೈಗಾರಿಕೆಯಲ್ಲಿ ಸುರಿಯಲು ಪ್ರಯತ್ನಿ ಸುವರು. ಚಲಚ್ಚಿತ್ರ ಮಂದಿರಗಳಲ್ಲಿ ತಮ್ಮ ಹಣವನ್ನು ವ್ಯಯಿಸಿರುವರು. ಇಂತಹ ಪ್ರಯತ್ನಗಳನ್ನು ನಾವು ಮುರಿದುಹಾಕಬೇಕು. ದೇಶಪ್ರೇಮಿಗಳೆಲ್ಲರೂ ಇದಕ್ಕೆ ಎಡೆಕೊಡಲು ಪ್ರೋತ್ಸಾಹ ಕೊಡಬಾರದು.

ಅಳಿಯುತ್ತಿರುವ ಕೆಲವು ಕೈಗಾರಿಕೆಗಳು

ಗಾಜಿನ ಬಳೆಗಳು ಬೆಂಕಿಪೆಟ್ಟಿಗೆಗಳು (ಗುಡಿ ಕೈಗಾರಿಕೆಯಾಗಿ Cottage Industry) ಕಲ್ಲಿನ, ಕಂಚಿನ ಮತ್ತು ಮರದ ಆಟದ ಸಾಮಾನುಗಳು; ಮರದ, ದಂತದ ಮತ್ತು ಎಲುಬಿನ ಗುಂಡಿಗಳು ಮತ್ತು ಬಾಚಣಿಗೆಗಳು; ಸಂಗೀತ ವಾದನ ಗಳು. (Musical Instruments) ಜಮಖಾನಗಳು (Pile Carpets) ಉಣ್ಣೆಯ ಕಂಬಳಿಗಳು ಇತ್ಯಾದಿ ಇತ್ಯಾದಿ.

ರಸಾಯನಗಳು, ಮದ್ದುಗಳು ಮತ್ತು ವಿಜ್ಞಾನೀಯ ಉಪಕರಣಗಳು

ರಸಾಯನಗಳನ್ನೂ, ಮದ್ದುಗಳನ್ನೂ, ಮತ್ತು ಇದಕ್ಕೆ ಸಂಬಂಧಪಟ್ಟ ಉಪಕರಣ (Scientific instruments) ಗಳನು ತಯಾರಿಸುವ ಕೈಗಾರಿಕೆಯು ನಮ್ಮಲ್ಲಿರುವ ಬಾಲ್ಯಾವಸ್ಥೆಯ ಕೈಗಾರಿಕೆಗಳಲ್ಲಿ ಒಂದಾಗಿದೆ. ಆದರೆ, ಪ್ರಕೃತದ ಬೆಳವಣಿಗೆಯನ್ನು ನೋಡಿದರೆ ಈ ಕೈಗಾರಿಕೆಯು ನಮ್ಮಲ್ಲಿ ಪ್ರಾಮುಖ್ಯ ಕೈಗಾರಿಕೆಗಳಲ್ಲಿ ಒಂದಾಗುವ ಚಿಹ್ನೆಗಳನ್ನು ತೋರಿಸುತ್ತದೆ. ಬಂಗಾಳದಲ್ಲಿ ರಸಾಯನಗಳು (Chemicals) ನ್ನು ತಯಾರಿಸುವ ಫೆಕ್ಟರಿಗಳು ಹಲವು ಇವೆ. ಬರೋಡದ ಎಲೆಂಬಿಕ್ ಕೆಮಿಕಲ್ ವರ್ಕ್ಸ್ ಎಂಬ ಕಂಪೆನಿಯು ಅತೀ ಬೇಗನೇ ಪ್ರಾಮುಖ್ಯತೆಗೆ ಬಂದಿದೆ. ಮೈಸೂರಿನಲ್ಲಿ, ಒಂದು ಖಾಸಗಿಯಾಗಿಯೂ, ಇನ್ನೊಂದು ಸರಕಾರದ ಬೆಂಬಲದಿಂದಲೂ, ಎರಡು ಫೆಕ್ಟರಿಗಳು ಮದ್ದುಗಳನ್ನು ತಯಾರಿಸುತ್ತಿವೆ. ಮದರಾಸಿನಲ್ಲಿ ಹಲವು ವರುಷಗಳಿಂದ ಪೇರಿ ಎಂಡ್ ಕೋ—ಇವರು ಎಲ್ಲಾ ತರದ ರಸಾಯನಗಳನ್ನು ತಯಾರಿಸುವರು. ಮೆಡ್ರಾಸ್ ಕೆಮಿಕಲ್ ಇಂಡಸ್ಟ್ರಿ (Madras Chemicals Industry) ಎಂಬ ಸಂಸ್ಥೆಯು ಇತ್ತಿಚೆಗೆ ರಸಾಯನಗಳನ್ನೂ ಮದ್ದುಗಳನ್ನೂ ಶಸ್ತ್ರ ಚಿಕಿತ್ಸೆಗೆ ಅಗತ್ಯವಿರುವ ಬಟ್ಟೆಗಳನ್ನೂ ತಯಾರಿಸುತ್ತಿದೆ. ಮುಖಕಾಂತಿಯನ್ನು ವರ್ಧಿಸುವ ಪದಾರ್ಥಗಳನ್ನೂ ಸರಾಯಿಗಳ (Spirits) ಶುದ್ಧಿಯನ್ನೂ ಇಲ್ಲಿ ಮಾಡುತ್ತಾರೆ. ಬೆಜವಾಡದ ಒಂದು ಸಂಸ್ಥೆಯೂ, ಈ ಕೈಗಾರಿಕೆಯನ್ನು ಕೈಕೊಂಡಿದೆ. ನಮ್ಮ ಪ್ರಾಂತದಲ್ಲಿ ಮುಸಲಿಪಟಮ್ ಎಂಬಲ್ಲಿಯ ಹೆಬ್ಬಾರ್ ಬ್ರದರ್ಸ್ ಎಂಡ್, ಆಂಧ್ರಾ ಸೈಂಟಿಫಿಕ್ ಕೋ (Hebbar Bros· and Andhra Scientific Co.,) ಎಂಬ ಸಂಸ್ಥೆಯು ಶಸ್ತ್ರ ಚಿಕಿತ್ಸೆಯ (Surgical) ಮತ್ತು ವಿಜ್ಞಾನ (Scientific) ಉಪಕರಣಗಳನ್ನು ತಯಾರಿಸುವುದರಲ್ಲಿ ಪ್ರಥಮದ್ದಾಗಿದೆ. ಹಿಂದೂಸ್ಥಾನದಲ್ಲಿ ತಯಾರಾದ ಹಲವು ಔಷಧಿಗಳೂ. ಇಂಜಕ್ಷನ್‌ಗಳಿಗೆ ಉಪಯೋಗಿಸುವ ಔಷಧಿಗಳೂ, ಇತರ ಪೇಟೆಂಟ್ ಮದ್ದುಗಳೂ ಪರದೇಶದಿಂದ ಬಂದ ಮದ್ದುಗಳೊಡನೆ ಸ್ಪರ್ಧೆ (Competetion) ನಡೆಸಿವೆ. ಮನೆಗಳಿಗೂ ಆಸ್ಪತ್ರೆಗಳಿಗೂ ಅಗತ್ಯವಿರುವ ಔಷಧಿಗಳು ಹಿಂದೂಸ್ಥಾನದಲ್ಲಿಯೇ ದೊರೆಯುತ್ತಿವೆ. ಮಹಾಜನರಿಂದ ಇನ್ನೂ ಹೆಚ್ಚು ಪ್ರೋತ್ಸಾಹ ಸಿಕ್ಕಿದರೆ ಹಿಂದೂಸ್ಥಾನಕ್ಕೆ ಬೇಕಾಗುವಷ್ಟು ಔಷಧಿಯು ಹಿಂದೂಸ್ಥಾನದಲ್ಲೇ ತಯಾರಾಗುವುದರಲ್ಲಿ ಸಂದೇಹವಿಲ್ಲ. ಮಾತ್ರವಲ್ಲದೆ ವಿಜ್ಞಾನ (Science) ಉಪಕರಣಗಳು ಕೂಡಾ ಇಲ್ಲಿಯೇ ತಯಾರಾಗಬಹುದು. ಇವನ್ನೆಲ್ಲಾ ತಯಾರಿಸುವ ಚೈತನ್ಯದ ಚಿಹ್ನೆಗಳು ಈಗ ಕಾಣುತ್ತಿವೆ.

1937—38ರಲ್ಲಿ ಪರದೇಶದಿಂದ 6 ಕೋಟಿ ರೂಪಾಯಿ ಬೆಲೆಯ ಔಷಧಿಗಳನ್ನೂ, ಮೇಲೆ ವಿವರಿಸಿದ ಇತರ ಸಾಮಗ್ರಿಗಳನ್ನೂ ನಾವು ತರಿಸಿರುತ್ತೇವೆ. ಇದರಲ್ಲಿ ನಮ್ಮ ಪ್ರಾಂತದ ಭಾಗವು 94 ಲಕ್ಷ ರೂಪಾಯಿಯಾಗಿದೆ.

1937—38 ರಲ್ಲಿ ತರಿಸಿದ ಸಾಮಾನುಗಳು

	ಹಿಂದೂಸ್ಥಾನ (ರೂಪಾಯಿಗಳಲ್ಲಿ)	ಮದ್ರಾಸ್ ಪ್ರಾಂತ (ರೂಪಾಯಿಗಳಲ್ಲಿ)
ರಸಾಯನಗಳು (Chemicals)	3,32,82,055	53,08,887
ಔಷಧಿಗಳು ಮತ್ತು ಔಷಧಿಗಳನ್ನು ತಯಾರಿಸುವ ಸಾಮಗ್ರಿಗಳು	2,36,16,740	37,39,626
ವಿಜ್ಞಾನ (Scientific) ಉಪಕರಣಗಳು	18.39,393	2,10.422
ಶಸ್ತ್ರ ಚಿಕಿತ್ಸೆಯ (Surgical) ಉಪಕರಣಗಳು	13,96,958	1,1,9646
ಮೊತ್ತ	6,01.35,146	93,76,581

ಪರದೇಶಗಳಿಗೆ ಹೋಗುವ ಇಷ್ಟು ಹಣವನ್ನು ನೀವು ನಿಲ್ಲಿಸುವಿರಾ?

ಲೋಹದ ಲಘು ಕೈಗಾರಿಕೆಗಳು
Light Metal Industry

ನಮ್ಮ ಸಂಸ್ಥಾನವು ಪ್ರತಿವರುಷ 20 ಲಕ್ಷ ರೂಪಾಯಿ ಬೆಲೆ ಬಾಳುವ ಕಟ್ಲೆರಿ ಸಾಮಾನುಗಳನ್ನೂ, ಕೃಷಿಗೆ ಸಂಬಂಧವಾದ ಉಪಕರಣಗಳನ್ನೂ, ಮನೆ ಉಪಯೋಗಕ್ಕೆ ಬೇಕಾಗುವ ಹತ್ಯಾರುಗಳನ್ನೂ, ಪರದೇಶದಿಂದ ತರಿಸುತ್ತಿದೆ. ಈ ತರದ ಹತ್ಯಾರುಗಳನ್ನೂ ಪಾತ್ರೆಗಳನ್ನೂ ತಯಾರಿಸುವ ಕೈಗಾರಿಕೆಯು ನಮ್ಮ ದೇಶದ ಅತೀ ಪುರಾತನ ಕೈಗಾರಿಕೆಗಳಲ್ಲಿ ಒಂದಾಗಿದೆ. ನಮ್ಮ ಪ್ರಾಂತದ ನಿಶ್ಚಿತ ಕೆಲವೇ ಕಡೆಗಳಲ್ಲಿ ಮಾತ್ರ ಈ ಕೈಗಾರಿಕೆಯು ಪ್ರಚಾರದಲ್ಲಿದ್ದುದಲ್ಲ. ಆದರೆ ನಮ್ಮ ಪ್ರಾಂತದಲ್ಲಿ ಮಲಬಾರ ಜಿಲ್ಲೆಯೂ, ತಂಜಾವೂರ ಜಿಲ್ಲೆಯಲ್ಲಿ ಕುಂಭಕೋಣಂ ಎಂಬ ಸ್ಥಳವೂ, ಈ ಕೈಗಾರಿಕೆಯಲ್ಲಿ ಬಹು ಪ್ರಖ್ಯಾತಿ ಹೊಂದಿದ ಕೇಂದ್ರವಾಗಿದೆ. ಇತ್ತೀಚೆಗೆ ಪರದೇಶದ ಸಾಮಾನುಗಳು ದೇಶೀಯ ಸಾಮಾನುಗಳೊಡನೆ ಸಹ ಸ್ಪರ್ಧೆ ನಡೆಸಲು ತೊಡಗಿವೆ. ಆದರೆ ನಮ್ಮ ಪದ್ಧತಿಗಳು ಮತ್ತು ಅಭಿರುಚಿಗಳು ಪರದೇಶಿ ಸಾಮಾನುಗಳನ್ನು ಮೆಚ್ಚುವುದಿಲ್ಲ. ಆದ್ದರಿಂದ ಈ ಕೈಗಾರಿಕೆಯು ಬದುಕಿದೆ. ಉತ್ತರ ಮಲಬಾರ ಜಿಲ್ಲೆಯ ಶೋರನ್ಯೂರ್‌ನಲ್ಲಿ—ದಿ, ಮೆಟಲ್ ಇಂಡಸ್ಟ್ರಿ ಲಿಮಿಟೆಡ್ (The Metal Industry Ltd.) ಸಂಸ್ಥೆಯು ಮಾತ್ರ ಕಾಫಿ ತೋಟಗಳಿಗೂ, ಹೂವಿನ ತೋಟಗಳಿಗೂ, ಬಡಗಿಗಳಿಗೂ, ಕಮ್ಮಾರರಿಗೂ ಬೇಕಾದ ಹತ್ಯಾರುಗಳನ್ನು ರಚಿಸಿ ತಯಾರಿಸುತ್ತದೆ. ಇದು ಕಟ್ಲೆರಿ ಸಾಮಾನುಗಳನ್ನೂ ಕತ್ತರಿಗಳನ್ನೂ ತಯಾರಿಸುತ್ತಿದೆ. ಹಿಂದೂದೇಶವು ಹೆಮ್ಮೆಪಡುವ ಪುರಾತನ ಕೈಗಾರಿಕೆಗಳಲ್ಲಿ ಲೋಹ ಕೈಗಾರಿಯೂ ಒಂದಾಗಿದೆ.

ಕಟ್ಟಡಗಳಿಗೆ ಬೇಕಾಗುವ ಸಾಮಗ್ರಿಗಳ ತಯಾರಿ

ಹಿಂದುಸ್ಥಾನದ ಕಟ್ಟೋಣಗಳನ್ನು, ಸ್ವದೇಶಿ ಸಾಮಗ್ರಿಗಳಿಂದಲೇ ಕಟ್ಟಬೇಕು. ಸ್ವದೇಶಿ ಸಾಮಗ್ರಿಗಳನ್ನು ಉಪಯೋಗಿಸಿದ ಕಟ್ಟೋಣಗಳು, ಭರತಪುರ ಕೋಟೆ (Bharathpur Fort) ಮೊಹೆಂಜೊದಾರದ ಕಟ್ಟೋಣಗಳು, ಹರಪಾ ಕಟ್ಟಡಗಳು. ತಾಜಮಹಾಲು, ಇವುಗಳಷ್ಟೇ ಗಟ್ಟಿಮುಟ್ಟಾಗಿಯೇ ಬಾಳುವುವು.

ಉಕ್ಕು, ಕಬ್ಬಿಣ, ಮತ್ತು ಮರ ಇವುಗಳನ್ನು ಬಿಟ್ಟು—ಇತರ 60 ಲಕ್ಷ ರೂ. ಬೆಲೆಯ ಕಟ್ಟೋಣ ಕಟ್ಟಿಸಲು ಬೇಕಾಗುವ ಸಾಮಾಗ್ರಿಗಳನ್ನು ಪರದೇಶದಿಂದ ನಮ್ಮ ದೇಶಕ್ಕೆ ತರಿಸುತ್ತೇವೆ. ನಮ್ಮ ಸಂಸ್ಥಾನವು 10 ಲಕ್ಷ ರೂಪಾಯಿಗಿಂತ ಹೆಚ್ಚು ಬೆಲೆಯ ಸಾಮಾನುಗಳನ್ನು ತರಿಸುವುದು.

ಇಲ್ಲಿ ತಯಾರಾಗುವ ಸಿಮೆಂಟಿನ ಪರಿಮಾಣವು 120,000 ಟನ್ನುಗಳಿಗೆ ಏರಿದೆ. ಹೊರದೇಶದಿಂದ ಈ ಪ್ರಾಂತ್ಯಕ್ಕೆ ಬರುವ ಸಿಮೆಂಟು 13,000 ಟನ್ನುಗಳಿಗೆ ಇಳಿದಿದೆ. ಬೆಜವಾಡ, ತ್ರಿಚಿನಾಪಳ್ಳಿ, ಮಂಗಳಗಿರಿಗಳಲ್ಲಿ ರಚನೆಯಾಗುವ ಫೆಕ್ಟರಿಗಳಿಂದ ಇನ್ನೂ ವರುಷಕ್ಕೆ 180,000 ಟನ್ನುಗಳಷ್ಟು ಸಿಮೆಂಟು ತಯಾರಾಗಬಹುದು. ಸ್ವಲ್ಪ ಸಮಯದಲ್ಲಿಯೇ ಈ ಪ್ರಾಂತದಲ್ಲಿ, ವರುಷಕ್ಕೆ 300,000 ಟನ್ನು ಸಿಮೆಂಟು ತಯಾರಾಗಬಹುದು. ಕಟ್ಟಡ ಸಾಮಗ್ರಿಗಳು ಇನ್ನು ಕೆಲವು ಈ ಪ್ರಾಂತದಲ್ಲಿ ಧಾರಾಳವಾಗಿ ದೊರೆಯುವುವು. ನಮ್ಮ ಪ್ರಾಂತದಲ್ಲಿ ವಿಶಾಲವಾದ ಕಾಡುಗಳಿವೆ. ಸಾಗುವಾನಿಯಂತಹ ಮರಗಳು ಮೋಪಿಗೆ ಬಹಳ ಹೆಸರು ಪಡೆದಿವೆ. ಹಿಂದೂದೇಶಕ್ಕೆ ಬೇಕಾದ ಮರಮೋಪುಗಳು ಹಿಂದೂದೇಶದಲ್ಲಿಯೇ ಇವೆ. ಪ್ರತಿಯೊಬ್ಬರೂ ಪರದೇಶೀ ಸಾಮಗ್ರಿಗಳನ್ನು ತೊರೆದರೆ ದೇಶೀಯ ಕಟ್ಟಡ ಸಾಮಗ್ರಿಗಳನ್ನು ತಯಾರಿಸುವ ಕೈಗಾರಿಕೆಯು ಬಹು ಬೇಗನೇ ವೃದ್ಧಿ ಹೊಂದುವುದು.

ಅದ್ಭುತ ಶೋಧಗಳು

ಜ್ವರವನ್ನಳೆವ ಥರ್ಮಾಮೀಟರನ್ನು 1721ರಲ್ಲಿ ಫೆರನ್ಹೈಟ್ ಎಂಬ ಫ್ರೆಂಚನು ಕಂಡುಹಿಡಿದನು. ಡಿಗ್ರಿಮಾಪಕದಲ್ಲಿ, ಅಳತೆಗೆ ಇಂತಿಷ್ಟು 'ಫೆರನ್ಹೈಟ್' ಎಂದು ಅವನ ಹೆಸರೇ ಬಂದಿದೆ.

ಬೆಂಕಿಕಡ್ಡಿಗಳನ್ನು 1831ರಲ್ಲಿ ಫ್ರಾನ್ಸಿನ ಸೌರಿಯಾ ಎಂಬವನು ಕಂಡುಹಿಡಿದನು.

ಫೌಂಟನ್ ಪೇನನ್ನು ಅಮೇರಿಕದ ವಟರ್‌ಮೇನನು 1864ರಲ್ಲಿ ಕಂಡುಹಿಡಿದನು.

ಟೈಪ್ರೈಟರನ್ನು 1873ರಲ್ಲಿ ಶೊಲೋ ಎಂಬಾತನು ರಚಿಸಿದನು.

ಸೇಫ್ಟಿರೇಝರನ್ನು ತಯಾರಿಸಿದ ಕೀರ್ತಿಯು ಇಂಗ್ಲಾಂಡಿನ ಜಿಲ್ಲೆಟನದು. (1904)

ಮೆಶಿನ್‌ಗನ್ನನ್ನು ಮೊದಲಾಗಿ 1861ರಲ್ಲಿ, ಗೆಟ್ಲಿಂಗ್ ಎಂಬವನು ತಯಾರಿಸಿದನು. ಲೂವಿಸ್ ಮೆಶಿನ್‌ಗನ್ನು 1912ರಲ್ಲಿ ಲೂವಿಸನಿಂದ ರಚಿತವಾಯಿತು.

ಡಾಕ್ಟರರು ರೋಗಿಗಳ ಶ್ವಾಸಕೋಶಗಳನ್ನು ಪರೀಕ್ಷಿಸುವ ಸ್ಟೆತಸ್ಕೋಪನ್ನು 1816ರಲ್ಲಿ ಫ್ರಾನ್ಸಿನ ಲಾಯೆನೆಕ್ ಎಂಬಾತನು ತಯಾರಿಸಿದನು.

ವಸ್ತ್ರಗಳಿಗೆ ಹಾಕುವ ರಂಗುಗಳನ್ನು (ಎನಲೈನ್ ಡಾಯ್ಸ್) 1856ರಲ್ಲಿ ಇಂಗ್ಲಾಂಡಿನ ಪರ್ಕಿನ್ ಎಂಬವನು ತಯಾರಿಸಿದನು.

ಝೆಫೆಲಿನ್ ಎಂಬ ವಾಯುಯಾನವನ್ನು 1908ರಲ್ಲಿ ಜರ್ಮನಿಯ ಕೌಂಟ್ ಝೆಫೆಲಿನನು ತಯಾರಿಸಿದನು.

ಮೋಟರ್‌ಕಾರನ್ನು 1884ರಲ್ಲಿ ಡೈಮ್ಲರ್ ಬೆಂಝ್ ಎಂಬಾತನು ತಯಾರಿಸಿದನು.

ಯುದ್ಧದಲ್ಲಿ ಉಪಯೋಗಿಸುವ ಟ್ಯಾಂಕನ್ನು 1924ರಲ್ಲಿ ಸ್ವಿಂಟನ್ ಎಂಬಾತನು ರಚಿಸಿದನು.

ದಾಕು ಹಾಕುವುದನ್ನು ಮೊದಲಾಗಿ 1895ರಲ್ಲಿ ಜರ್ಮನಿಯ ಡಾಕ್ಟರ್ ಜೆನ್ನರ್ ಎಂಬಾತನು ಪ್ರಚಾರಕ್ಕೆ ತಂದನು.

ಮದ್ರಾಸ್ ಸಂಸ್ಥಾನಕ್ಕೆ ಪರದೇಶಗಳಿಂದ ತರಿಸಿದ ಪ್ರಾಮುಖ್ಯ ಸಾಮಾನುಗಳ ಮೊಬಲಗು ಮತ್ತು ಒಟ್ಟು ವ್ಯಾಪಾರದ ದಾಮಾಶಯ

(1937—38)

ಸಾಮಾನುಗಳ ವಿವರ	ರೂಪಾಯಿಗಳು	ಒಟ್ಟು ವ್ಯಾಪಾರದ 100 ಭಾಗಗಳಲ್ಲಿ
1. ಯಂತ್ರಗಳು ಮತ್ತು ವಿಲ್ಲಿನ ಕೆಲಸಕ್ಕೆ ಬೇಕಾಗುವ ಸಾಮಾನುಗಳು	2,40,36,044	13
2. ಎಣ್ಣೆಗಳು	1,63,92,003	9
3. ಲೋಹಗಳು ಮತ್ತು ಲೋಹದ ಅದುರುಗಳು	1,44,64,700	8
4. ವಾಹನಗಳು	1,07,20,166	6
5. ಹತ್ತಿಯ ಬಟ್ಟೆ-ಬರೆಗಳು	92,89,678	5
6. ಹತ್ತಿಯ ಸುರುಳಿಗಳು ಮತ್ತು ನೂಲು	72,31,120	4
7. ಕಾಗದ ಮತ್ತು ರಟ್ಟು	70,97,014	4
8. ಉಪಕರಣಗಳು ಮತ್ತು ಶೋಧನಾ ಸಾಮಗ್ರಿಗಳು	68,45,182	4
9. ಚರ್ಮ ಹದಮಾಡುವ ಮತ್ತು ಬಣ್ಣಕೊಡುವ ಸಾಮಗ್ರಿಗಳು	64,77,223	3
10. ರಸಾಯನಗಳು	52,99,440	3
11. ಆಹಾರ ಸಾಮಗ್ರಿಗಳು ಮತ್ತು ಎಣ್ಣೆ ತಯಾರಿಗೆ ಬೇಕಾಗುವ ಸಾಮಗ್ರಿಗಳು	49,71,141	3
12. ಕೃತಕ ರೇಶ್ಮೆ	48,04,939	3
13. ಪಾತ್ರೆಗಳು ಇತ್ಯಾದಿ (ಗಾಜಿನ, ಕಬ್ಬಿಣದ, ಮತ್ತು ಲೋಹದ)	47,31,392	3
14. ಗೊಬ್ಬರಗಳು	44,28,880	2
15. ಸಾಂಬಾರಗಳು	40,57,966	2
16. ರಬ್ಬರು	38,20,548	2
17. ಮದ್ದನ್ನು ತಯಾರಿಸುವ ಸಾಮಗ್ರಿಗಳು ಮತ್ತು ಮದ್ದು	37,34,865	2
18. ರೇಶ್ಮೆ ಮತ್ತು ರೇಶ್ಮೆಯ ಬಟ್ಟೆಗಳು	36,66,484	2
19. ಶರಾಬು	26,85,586	1
20. ಗಾಜು ಮತ್ತು ಗಾಜಿನ ಸಾಮಗ್ರಿಗಳು	22,52,592	1
21. ತಂಬಾಕು	16,07,301	1
22. ಚಾ ಪೆಟ್ಟಿಗೆಗಳು	16,03,602	1
23. ಸ್ಟೇಶನರಿ ಸಾಮಾನುಗಳು (ಕಾಗದ ಬಿಟ್ಟು)	13,64,525	1
24. ಪೋಸ್ಟು ಮೂಲಕ ತರಿಸಿದ ಸಾಮಾನುಗಳು (ಎಲ್ಲಾ ತರದ)	12,99,824	1
25. ಕಟ್ಟಡ ಕಟ್ಟಲು ಉಪಯೋಗಿಸುವ ಮತ್ತು ಎಂಜಿನಿಯರಿಂಗ್ ಸಾಮಗ್ರಿಗಳು	10,93,677	1
26. ಮರಮೋಪುಗಳು	8,45,447	
27. ಸಾಬೂನು	4,71,833	
28. ಬೀಜಗಳು, ಧಾನ್ಯಗಳು ಮತ್ತು ಧಾನ್ಯದ ಹುಡಿಗಳು	2,83,900	
29. ಸಕ್ಕರೆ	25,365	
30. ಇತರ ಸಾಮಾನುಗಳು	2,42,71,430	15
ಜುಮ್ಲಾ	17,98,73,867	100

ಮದ್ರಾಸ್ ಸಂಸ್ಥಾನದಿಂದ ಬರ್ಮವನ್ನು ಬಿಟ್ಟು ಇತರ ರಾಷ್ಟ್ರಗಳಿಗೆ ಕಳುಹಿಸಿದ ಸಾಮಾನುಗಳು ಮತ್ತು ಒಟ್ಟು ವ್ಯಾಪಾರದ ದಾಮಾಶಯ.

ಸಾಮಾನುಗಳ ವಿವರ	ರೂಪಾಯಿಗಳು	ಒಟ್ಟು ವ್ಯಾಪಾರದ ನೂರು ಭಾಗಗಳಲ್ಲಿ
1. ಬೀಜಗಳು (Seeds)	8,41,22,174	23
2. ಚರ್ಮ	6,55,79,835	18
3. ಚಾ	4,53,25,988	13
4. ಹತ್ತಿಯ ಬಟ್ಟೆಬರೆಗಳು	2,21,30,357	7
5. ಹತ್ತಿ (ಅಸಿದ್ಧ)	2,07,36,649	6
6. ಹಣ್ಣುಗಳು ಮತ್ತು ತರಕಾರಿಗಳು	1,48,40,793	4
7. ಲೋಹಗಳು ಮತ್ತು ಲೋಹದ ಅದುರುಗಳು	1,37,99,658	4
8. ಧಾನ್ಯಗಳು, ತಿನ್ನುವ ಬೀಜಗಳು ಮತ್ತು ಧಾನ್ಯದ ಹುಡಿಗಳು	1,09,27,480	3
9. ಹುರಿಹಗ್ಗಗಳು ಮತ್ತು ಸುಂಬು	97,07,141	2
10. ತಂಬಾಕು ಮತ್ತು ತಂಬಾಕಿನಿಂದ ತಯಾರಾದ ವಸ್ತುಗಳು	91,24,598	2
11. ರಬ್ಬರು	83,85,181	2
12. ಹಿಂಡಿಗಳು	73,55,143	2
13. ಕಾಫಿ	51,90,157	2
14. ಸಾಂಬಾರಗಳು (Spices)	47,27,144	1
15. ಪೋಸ್ಟು ಮೂಲಕ ಕಳುಹಿಸಿದ ಸಾಮಾನುಗಳು	43,29,741	1
16. ಚರ್ಮಗಳು	41,70,388	1
17. ಮೀನು	32,34,645	1
18. ಕುಂಚಗಳಿಗೆ ಉಪಯೋಗಿಸುವ ನಾರುಗಳು	19,56,264	1
19. ಎಣ್ಣೆಗಳು	17,14,570	1
20. ಇತರ ಸಾಮಾನುಗಳು	1,91,42,338	6
ಜಮಾ	35,65,00,244	
ಪರದೇಶಿ ಮಹಾಲುಗಳನ್ನು ಪುನಃ ರಫ್ತು ಮಾಡಿದುದರ ಮೊಬಲಗು	14,90,055	
ಜುಮ್ಲಾ	35,79,90,299	100

ನ್ಯಾಯವಿಧಾಯಕ ಸಭೆಗಳು ಅಥವಾ ಪಾರ್ಲಿಮೆಂಟುಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ನ್ಯಾಯವಿಧಾಯಕ ಸಭೆ ಅಥವಾ ಪಾರ್ಲಿಮೆಂಟಿಗೆ ಯಾವ ಹೆಸರುಗಳು ಇರುತ್ತವೆಂಬುದನ್ನು ಈ ಕೆಳಗೆ ಕೊಡಲಾಗಿದೆ.

ದೇಶ	ಪಾರ್ಲಿಮೆಂಟಿನ ಹೆಸರು
ಜಾಪಾನ್	ಡಾಯಟ್
ಸಂಯುಕ್ತ ಅಮೇರಿಕ	ಕೊಂಗ್ರೆಸ್
ಇಂಗ್ಲೆಂಡ್	ಪಾರ್ಲಿಮೆಂಟ್
ತುರ್ಕಿಸ್ಥಾನ	ಗ್ರೇಂಡ್ ನೇಶನಲ್ ಎಸೆಂಬ್ಲಿ
ಜರ್ಮನಿ	ರೀಚ್‌ಸ್ಟಾಗ್
ಪೋಲೆಂಡ್	ಸೆಜ್ಮ್
ಪರ್ಸಿಯಾ	ಮಜಿಲಿಸ್
ಫ್ರಾನ್ಸ್	ಚೇಂಬರ್
ಐಸ್‌ಲೇಂಡ್	ಆಲ್ತಿಂಗ್
ನೆದರ್ಲೆಂಡ್ಸ್	ಸ್ಟೇಟ್ಸ್ ಜನರಲ್
ಐರೀಶ್ ಫ್ರೀಸ್ಟೇಟ್	ಡಾಯಲ್ ಐರೀಶ್
ಯುಗೋಸ್ಲೇವಿಯಾ	ಸ್ಕುಪ್ಶ್ಟಿನಾ
ನೋರ್ವೆ	ಸ್ಟೋರ್ಟಿಂಗ್
ಸ್ವಿಝರ್ಲೆಂಡ್	ಫೆಡರಲ್ ಎಸೆಂಬ್ಲಿ
ಇಟೇಲಿ	ಸೆನೇಟ್
ಸ್ಪೈಯಿನ್	ಕೊರ್ಟ
ಇಂಡಿಯಾ	ಫೆಡರಲ್ ಎಸೆಂಬ್ಲಿ
ಡೆನ್ಮಾರ್ಕ್	ರಿಗ್‌ಸ್ಡಾಗ್
ಇಜಿಪ್ಟ್	ಪಾರ್ಲೆಮಾನ್

ಭೂಲೋಕದ ಜನಸಂಖ್ಯೆ

[1940ನೇ ಖಾನೇಶುಮಾರಿಯು ನಡೆಯುತ್ತಿದೆ. ಇದರ ಅಂಕೆಸಂಖ್ಯೆಗಳು 1941ರಲ್ಲಿ ಪ್ರಕಟವಾಗುವುವು. ಈ ಕೆಳಗೆ 1931ನೇ ಅಂಕೆಸಂಖ್ಯೆಗಳು ಕೊಡಲ್ಪಟ್ಟಿವೆ.

ಆಸ್ಯಾ	1,147,707,455
ಆಫ್ರಿಕಾ	156,576,789
ಯುರೋಪು	574,274,495
ಉತ್ತರ ಅಮೇರಿಕಾ	174,375,279
ಒಶೆನಿಯಾ	81,682,859
ದಕ್ಷಿಣ ಅಮೇರಿಕಾ	87,398,025
[illegible]	2,222,014,902

ಆಫ್ರಿಕಾ—ಅಬಿಸೀನಿಯ	5,500,000
ಆಲ್ಜೀರಿಯಾ	7,000,00
ಉಳಿದ ಬ್ರಿಟಿಷ್ ರಾಜ್ಯಗಳು	36,974,535
ಈಜಿಪ್ಟ್	15,281,000
ಫ್ರೆಂಚ್ ಆಫ್ರಿಕಾ	56,821,000
ಇಟಲಿಯನ್ ಆಫ್ರಿಕಾ	2,456,254
ಬೆಲ್ಜಿಯನ್ ಕೊಂಗೊ	10,000,090
ಲ್ಯಾಬಿರಿಯಾ	2,000,000
ಮೊರೊಕ್ಕೊ	5,000,000
ಪೋರ್ಚುಗೀಸ್ ಆಫ್ರಿಕಾ	7,056,000
ಯೂನಿಯನ್ ಒಫ್ ಸೌತ್ ಆಫ್ರಿಕಾ	8,488,000
[illegible]	156,576,789

ಆಸ್ಯಾ ಅಫ್ಘಾನಿಸ್ಥಾನ	6,380,000
ಅರೇಬಿಯಾ	10,000,000
ಭೂಟಾನ್	250,000
ಇನ್ನಿತರ ಬ್ರಿಟಿಷ್ ರಾಜ್ಯಗಳು	11,469,000
ಚೈನಾ	453,815,235
ಫ್ರೆಂಚ್ ರಾಜ್ಯಗಳು	24,467,614
ಬ್ರಿಟಿಷ್ ಹಿಂದೂಸ್ಥಾನ	353,837,778
ಇರಾಕ್	3,000,000
ಇರಾನ್ (ಪರ್ಶಿಯಾ)	15,055,115
ಜಪಾನ್	97,694,628
ಕೊರೆಯಾ ಮತ್ತು ಫೊರ್ಮೋಸಾ	26,000,000
ಜಪಾನು ಆಶ್ರಿತ ರಾಜ್ಯಗಳು	1,725,000
ಮಂಚುಕೊ	34,244,908
ನೇಪಾಲ್	5,600,000
ಪೆಲೆಸ್ತೈನ್	1,100,000
ಪೋರ್ಚುಗೀಸ್ ಆಸ್ಯ	1,189,000
ರಷ್ಯಾ (ಸೋವಿಯಟ್)	
ಆಸ್ಯದಲ್ಲಿ	54,000,000
ಸಯಾಮ	12,355,000
ಟೀಬೇಟ್, ಮಂಗೋಲಿಯಾ	3,000,000
ಟರ್ಕಿ ಆಸ್ಯದಲ್ಲಿ	12,000,000
ಯುರೋಪು ಅಲ್ಬೇನಿಯಾ	1,000,000
ಆಸ್ಟ್ರಿಯಾ	6,759,062
ಬೆಲ್ಜಿಯಮ್	8,247,950
ಬಲ್ಗೇರಿಯಾ	6,090,215
ಜೆಕೊಸ್ಲೊವೇಕಿಯಾ	14,730,000
ಡಾಂಜಿಗ್	407,517
ಡೆನ್‌ಮಾರ್ಕ್	3,560,000
ಇಂಗ್ಲೆಂಡ್	37,7 4,003
ಎಸ್ಟೋನಿಯಾ	1,126,383
ಫಿನ್‌ಲೆಂಡ್	3,640,000
ಫ್ರಾನ್ಸ್	41,834,926
ಜರ್ಮನಿ	65,306,130
ಜಿಬ್ರಾಲ್ಟರ್, ಮಾಲ್ಟಾ, ಗೊಜೊ	267,000
ಗ್ರೀಸ್	6,620,000
ಹಂಗೇರಿ	8,783,918
ಐಸ್‌ಲೆಂಡ್	100,000
ಐರಿಷ್ ಸ್ವತಂತ್ರರಾಜ್ಯ	3,000,000
ಇಟಲಿ	42,425,000
ಲೇಟವಿಯಾ	1,939,000
ಲ್ಯಾಷೆನ್‌ಸ್ಟಿನ	10,303
ಲಿಥುವೇನಿಯಾ	2,451,173
ಲಕ್ಸೆಂಬರ್ಗ್	299,993
ಮೊನಾಕೊ	22994
ನೆದರ್‌ಲೆಂಡ್ಸ್	8290,389
(ತಗ್ಗು ಪ್ರದೇಶಗಳು)	
ಉತ್ತರ ಐರ್ಲೆಂಡ್	1,251,000
ನೋರ್ವೆ	2,845,000
ಪೋಲೆಂಡ್	33,221,000
ಪೋರ್ಚುಗಲ್	6,825,883
ರುಮೇನಿಯಾ	18,791,645
ಸೆನ್ ಮೆರಿನೊ	13,990
ಸ್ಕೋಟ್‌ಲೆಂಡ್	4,842,980
ಸ್ಪೈನ್	28,719,177
ಸ್ವೀಡನ್	6,211,566
ಸ್ವಿಜರ್‌ಲೆಂಡ್	4,125,000
ಟರ್ಕಿ	17,500,100
ಯು. ಎಸ್. ಎಸ್. ಆರ್.	168,000,000
ವೇಲ್ಸ್	2,158,193
ಯುಗೋಸ್ಲೋವಿಯಾ	14,280,000

ಉತ್ತರ ಅಮೇರಿಕಾ:—

[illegible]	59,273
[illegible]	27,789
[illegible]	10,681000
[illegible]	5 6,000
[illegible]	3,700,000
ಕ್ಯೂರಕೊವಾ	76,299
ಡೊಮಿನಿಯನ್ ರಿಪಬ್ಲಿಕ್	1,478,000
ಫ್ರೆಂಚ ದ್ವೀಪಗಳು	505,686
ಗ್ರೀನ್‌ಲೆಂಡ್	16,630
ಗ್ವಾಟಿಮಾಲಾ	2,245,693
ಹೈಟಿ	2,700,000
ಹೊಂಡ್ಯುರಾಸ್	775,050
ಬ್ರಿಟಿಷ್ ಹೊಂಡ್ಯುರಾಸ್	52,945
ಜಮೈಕಾ	1,090,000
ಮೆಕ್ಸಿಕೊ	17,184,000
ನ್ಯೂಫೌಂಡ್‌ಲೆಂಡ್	282,000
ನಿಕರಾಗ್ವಾ	750,000
ಪನಾಮಾ	442,000
ಪನಾಮಾ ಕಾಲುವೆಯ ಪ್ರದೇಶ	30,990
ಪ್ಯೂರ್ಟೊರಿಕೊ	1,610,000
ಸೆಲ್ವೆಡೋರ್	1,522,186
ಸಂಯುಕ್ತ ರಾಜ್ಯ	126,564,000
ಸಂಯುಕ್ತ ರಾಜ್ಯದ ವರ್ಜಿನ್ ದ್ವೀಪಗಳು	22,012
ಬ್ರಿಟಿಷ್ ವೆಸ್ಟ್ ಇಂಡೀಸ್	2,043,786
ಓಶೆನಿಯಾ, ಆಸ್ಟ್ರೇಲಿಯಾ	6,668,195
ಡಚ್ ಈಸ್ಟ್ ಇಂಡೀಸ್	60,731,025
ಫಿಜಿ ದ್ವೀಪಗಳು	193,238
ಗುವಾಮ	19,800
ಹವಾಯಿ	378,948
ನ್ಯೂ ಕೆಲಿಡೋನಿಯಾ ಮತ್ತು ತಹೀತಿ	93,065
ನ್ಯೂಗಿನಿಯಾ	406,344
ಬ್ರಿಟಿಷ್ ಪ್ಯಾಸಿಫಿಕ್ ದ್ವೀಪಗಳು	544,000
ಫಿಲಿಪ್ಪೈನ್ ದ್ವೀಪಗಳು	12,590,369
ಬ್ರಿಟಿಷ್ ಸಮೋವೊ ದ್ವೀಪಗಳು	47,820
ಸಂಯುಕ್ತ ರಾಜ್ಯದ ಸಮೋವೊ ದ್ವೀಪಗಳು	

ದಕ್ಷಿಣ ಅಮೇರಿಕಾ:—

ಅರ್ಜೆಂಟಿನಾ	12,055,469
ಬೊಲಿವಿಯಾ	3,000,000
ಬ್ರೆಝಿಲ್	45,000,000
ಚಿಲಿ	4,433,000
ಕೊಲಂಬಿಯಾ	9,016.000
ಇಕ್ವೆಡೋರ್	2,600,116
ಬ್ರಿಟಿಷ್ ಗಿಯಾನಾ	318,000
ಡಚ್ ಗಿಯಾನಾ	227,657
ಫ್ರೆಂಚ್ ಗಿಯಾನಾ	33,000
ಪರುಗ್ವೆ	800,000
ಪೆರು	4,500,000
ಟ್ರಿನಿಡಾಡ್	412,783
ಉರುಗ್ವೆ	1.975,000
ವೆನೆಝ್ಯುವೆಲಾ	3.027,000

ಹಿಂದೂದೇಶದ ಮುಖ್ಯ ಸಂಸ್ಥಾನಗಳು

ಅರಸರು	ವರ್ಷದ ಸರಾಸರಿ ಆದಾಯ ರೂ.	ಸರಕಾರಕ್ಕೆ ಸಲ್ಲುವ ಪೊಗದಿ ರೂ.
ಕಲಾತ ಖಾನರು (ಬಲೂಚಿಸ್ಥಾನ)	14,49,00	....
ಭೂತಾನ ಮಹಾರಾಜರು.	4,00,000	....
ಮಧ್ಯ ಹಿಂದೂಸ್ಥಾನ		
ಭೋಪಾಲ ನವಾಬರು	80,00,000	1,61,290- 5-0
ದೇವಾಸ ಮಹಾರಾಜರು (ಹಿರಿಯರು)	6,30,000	14,237- 4-7
(ಕಿರಿಯವರು)	5,28,000	14,237- 4-7
ನರಸಿಂಹಘಡ ಮಹಾರಾಜರು	9,06,000	....
ದಾತಿಯದ ಮಹಾರಾಜರು	14,33,000	....
ಪನ್ನದ ಮಹಾರಾಜರು	12,65,000	9,955- 0-0
ಒರ್ಛಾದ ಮಹಾರಾಜರು	13,09,000	....
ಇಂಡೋರ್ ಮಹಾರಾಜರು	1,24,21,000	....
ರೇವಾ ಮಹಾರಾಜರು	60,00,000	....
ಬರ್‍ವಾನಿಯ ರಾಣರು	10,31.000	3,389- 0-0
ಧಾರ ಮಹಾವಾಜರು	17,60,000	6;601- 0-0
ಜವೊರಾ ಮಹಾರಾಜರು	12,96,000	1,37,127- 0-0
ರತ್ಲಮ್ ಮಹಾಜರು	10,00,000	42,000- 0-0
ಕೊಲ್ಹಾಪುರ ಮಹಾರಾಜರು	77,00,000	....
ಭೋರ್ ರಾಜರು	6,71,000	4,684- 0-0
ಜಂಜೀರಾ ಮಹಾರಾಜರು	9,35,000	....
ಸಾಂಗ್ಲಿಯ ರಾಜರು	15,41,000	....
ಸಾವಂತವಾಡಿ ಅರಸರು	6,43,000	....
ಕಲಹಂದಿಯ ಮಹಾರಾಜರು	6,35,000	16,000- 0-0
ಮಯೂರ ಭಂಜ ಮಹಾರಾಜರು	26,60,000	1,068- 0-0
ಪಾಟ್ನಾ ಮಹಾರಾಜರು	8,56,000	13,000- 0-0
ಬಡೋದೆಯ ಗಾಯಿಕ್‌ವಾಡರು	2,60,09,000	....
ಬಸ್ತಾ ರಾಜರು	7,38,000	154- 0-0
ಬರಿಯಾ ಅರಸರು	11,74,000	....
ಕೆಂಬೆಯ ನವಾಬರು	10,19,000	21,924- 0-0
ಚೋಟಾ ಉದಯಪುರದರಸರು	13,10,000	7,806- 0-0
ಧೇರಾಮಪುರ ರಾಜರು	10,27,000	9,000- 0-0
ರಾಜಪಿಪ್ಲ ಮಹಾರಾಜರು	24,95,000	50,001- 0-0
ಗ್ವಾಲಿಯರ್ ಮಹಾರಾಜರು	2,31,79,000	....
ಹೈದರಾಬಾದು ನೈಜಾಮರು	7,98,90,000	....
ಜಮ್ಮು ಮತ್ತು ಕಾಶ್ಮೀರ ಸಂಸ್ಥಾಗಳ ಅರಸರು	2,23,29,000	ಎರಡು ಕಾಶ್ಮೀರ ಶಾಲುಗಳು ಮತ್ತು ಮೂರು ರುಮಾಲುಗಳು
ಕೊಚ್ಚಿಯ ಮಹಾರಾಜರು	90,09,090	2,00,000- 0-0
ಪಡುಕೋಟೆಯ ರಾಜರು	22,88,000	....
ತಿರುವಾಂಕೂರ ಮಹಾರಾಜರು	2,44,02,000	7,96,430- 0-0
ಮೈಸೂರು ಮಹಾರಾಜರು	3,45,27,000	24,50,000- 0-0
ಭವಾಲಪುರ ನವಾಬರು	45,50,000	....
ಫರಿದ್‌ಕೋಟ್ ರಾಜರು	17,32,000	....
ಜಿಂದ್ ಮಹಾರಾಜರು	24,00,000	....
ಕಾಪುರ್‌ತಾಲಾ ಮಹಾರಾಜರು	36,00,000	....
ಮಲರಕೊತ್ಲಾ ನವಾಬರು	8,50,000	....
ಮಾಂಡ್ಯ ಅರಸರು	12,58,000	1,00,000- 0-0
ನಭಾ ಮಹಾರಾಜರು	25,55,000	....
ಪಾಟಿಯಾಲಾ ಮಹಾರಾಜರು	1,45,00000	....
ಖೈರಪುರ ದೊರೆಯವರು	15,00,000	....
ಭರತಪುರ ಮಹಾರಾಜರು	31,67,000	....
ಬುಂದಿಯ ಅರಸರು	17,35,000	1,20,000- 0-0
ಧೋಲಪುರದ ಮಹಾರಾಜಾ ರಾಣರು	16,78,000	....
ಕೋಟಾ ಮಹಾರಾಜರು	51,71,000	4,34,720- 0-0
ಅಲ್ವಾರ್ ಮಹಾರಾಜರು	37,00,000	....
ಜಯಪುರದ ಮಹಾರಾಜರು	1.20,00,000	4,00,000- 0-0
ಕಿಸನ್‌ಗರ ಮಹಾರಾಜರು	7,50,000	....
ಟಂಕ್ ಮಹಾರಾಜರು	21,68,000	....
ಉದಯಪುರ ಮಹಾರಾಜರು	67,31,000	2,66,000- 0-0
ಜೋಧಪುರದ ಅರಸರು	142,08,000	2,13,000- 0-0
ಪಲಾನ್‌ಪುರ ನವಾಬರು	10,81,000	....
ಭೀಕಾನೀರ ಮಹಾರಾಜರು	1,21,00,000	....
ಸಿರಾಯಿ ಮಹಾರಾಜರು	10,03,000	....
ಸಿಕ್ಕಿವತ್ ಮಹಾರಾಜರು	4,86,000	....
ಭವನಗರ ಮಹಾರಾಜರು	1,50,08,000	1,28,060- 0-0
ಕಚ್ಚ ಮಹಾರಾಜರು	31,27,191	82,257-15-0
ಧ್ರಂಗದ್ರಾ ರಾಜಾಸಾಹಿಬ ಮಹಾರಾಜರು	25,00,000	40.671- 0-0
ಗೊಂಡೊಲ್ ಮಹಾರಾಜರು	50,00,000	49,0 .6- 0-0
ಇಡಾರ್ ಮಹಾರಾಜರು	21,00,000	
ಜುನಾಘಡ್ ನವಾಬರು	80,00,000	28,394- 0-0
ಲಿಮ್ಡಿಯ ಥಾಕೋರ್ ಸಾಹೇಬರು	9,13,000	54,517- 1-0
ಮೊರ್ವಿಯ ಮಹಾರಾಜರು	47,13,000	9,263- 0-0
ನವಾನಗರ ಜಾಮ್ ಸಾಹೇಬ ಮಹಾರಾಜರು	93,47,000	50,312- 0-0
ಪಲಿಕಾನದ ಥಾಕೋರ್ ಸಾಹೇಬರು	13,18,000	....
ಪೋರ್‌ಬಂದರ್ ಮಹಾರಾಜಾ ರಾಣಾ ಸಾಹೇಬರು	21,75,000	21,202- 0-0
ರಾಧನ್‌ಪುರ ಮಹಾರಾಜರು	10,00,0000	....
ರಾಜಕೋಟೆ ಥಾಕೋರ್ ಸಾಹೇಬರು	10,76,000	18,991- 0-0
ಮಣಿಪುರ ಮಹಾರಾಜರು	7,41,000	5,000- 0-0
ಕೂಚ್‌ಬಿಹಾರ್ ಮಹಾರಾಜರು	25,84,697	67,700-15-0
ತ್ರಿಪುರದ ಅರಸರು	30,86,000	....
ಕಾಶೀರಾಜರು	17,98,771	2,19,000- 0-0
ರಾಮಪುರ ನವಾಬರು	49,17,023	....
ಟ್ರೇರಿ ಘರ್‌ವಾಲ್ ರಾಜರು	19,01,000	....

ಪ್ರಸಿದ್ಧ ವಜ್ರಗಳು

ವಜ್ರದ ಹೆಸರು	ತೂಕ
ಕುಲ್ಲಿನನ್	$3106\frac{1}{2}$ ಕೆರೆಟ್
ಟಫೆನಿ	969 ,,
ಸ್ಟಾರ್ ಒಫ್ ಸೌತ್ ಆಫ್ರಿಕಾ	$530\frac{1}{5}$,,
ವಿಕ್ಟೋರಿಯಾ (ಈಗ "ನಿಝಾಮ್")	$457\frac{1}{2}$,,
ಗ್ರೇಟ್ ಮೊಗಲ್	$287\frac{1}{2}$,,
ಜುಭಿಲಿ	245 ,,
ಒರ್ಲೊಫ್	$194\frac{3}{4}$,,
ರಿಜೆಂಟ್ ಒಫ್ ಪಿಟ್	$136\frac{3}{4}$,,
ಫ್ಲೋರೆಂಟೈನ್	$133\frac{1}{16}$,,
ಕೊಹಿನೂರ್	105 ,,

"ಶಿಲಾರಾಳ" (Amber)

ಬಾಲ್ಟಿಕ್ ಸಮುದ್ರದ ತೆರೆಗಳು ದಡಕ್ಕೆ ತಂದು ಹಾಕುತ್ತಿದ್ದ ಶಿಲಾರಾಳ (Amber) ವನ್ನು, ಇತಿಹಾಸದ ಪೂರ್ವಕಾಲದಲ್ಲಿ ನೆಲಸಿದ್ದ ಜನರೂ ಕಂಡುಹಿಡಿದಿದ್ದರು. ಶಿಲಾರಾಳದ ಎರಡು ತುಂಡುಗಳನ್ನು ಹಿಡಿದು ಒಂದನ್ನೊಂದಕ್ಕೆ ತಿಕ್ಕಿದರೆ ಚಿನ್ನದ ಬಣ್ಣವು ಅವುಗಳಿಗೆ ಬರುತ್ತದೆ. ಶಿಲಾಯುಗದಲ್ಲಿ ಮಾನವನು ಪ್ರಥಮದಲ್ಲಿ ಧರಿಸಿದ ಆಭರಣವೇ ಶಿಲಾರಾಳದ ತುಂಡುಗಳಿಂದ ರಚಿಸಿದ ಹಾರವಾಗಿದೆ. ಈಗಲೂ ಶಿಲಾರಾಳವು ಬಹಳ ಬೆಲೆಯುಳ್ಳ ವಸ್ತುವಾಗಿದೆ.

ಇತಿಹಾಸದ ಪೂರ್ವದಲ್ಲಿ ಎಷ್ಟೋ ವರುಷಗಳ ಹಿಂದೆ ಬೆಳೆದಿದ್ದ ಒಂದು ಜಾತಿಯ ಮರದ ಹಾಲು ಭೂಮಿಯೊಳಗೆ ಸೇರಿ, ಭೂಮಿಯ ಒತ್ತಾಟದಿಂದ ಗಟ್ಟಿಯಾಗಿ, ಕೊನೆಗೆ ಶಿಲಾರಾಳವಾಯಿತು. ಆ ಕಾಲದಲ್ಲಿ ಉತ್ತರ ಧ್ರುವ ಪ್ರದೇಶದಲ್ಲಿಯೂ ಸಮಶೀತೋಷ್ಣ ವಲಯದ ವಾಯುಗುಣ ವ್ಯಾಪಿಸಿತ್ತು. 60,000,000 ವರುಷಗಳು ಕಳೆದ ಮೇಲೆ ಮಂಜುಗಡ್ಡೆಯ ಯುಗ ಬಂದಿತ್ತು. ಅನಂತರ ಕ್ರಮೇಣ ಈಗಿನ ಯುಗ ಬಂದಿತು. ದ್ರವರೂಪದಲ್ಲಿದ್ದ ಶಿಲಾರಾಳವು ಪಾರದರ್ಶಕವಾದ ಪದಾರ್ಥವಾಗಿ ಗಟ್ಟಿಯಾಗಲು ಬಹಳ ಸಮಯವನ್ನು ಕಳೆದಿರಬೇಕು.

ಕಾಲವು ಕಳೆದಂತೆ, ಭೂಮಟ್ಟ (Surface)ವೂ ಬದಲಾವಣೆ ಹೊಂದಿದೆ. ದೊಡ್ಡ ದೊಡ್ಡ ಖಂಡಗಳು, ಸಮುದ್ರಪಾಲಾಗಿವೆ. ವಿಶಾಲವಾದ ಬಯಲುಗಳು, ಪರ್ವತಶ್ರೇಣಿಗಳಾಗಿ ಮರೆದಿವೆ. ಆದರೂ, ಶಿಲಾರಾಳದ ಪದರುಗಳು, ಮನುಷ್ಯನ ಕೈಗೆ ಸಿಕ್ಕುವಂತಹ ಸ್ಥಳದಲ್ಲೇ ದೊರೆಯುತ್ತಿರುವುದು ಆಶ್ಚರ್ಯಕರವಾದ ಸಂಗತಿಯಾಗಿದೆ.

ಬಾಲ್ಟಿಕ್ ಸಮುದ್ರದ ದಡದಲ್ಲಿ ದೊರೆಯುತ್ತಿದ್ದ ಶಿಲಾರಾಳದ ತುಂಡುಗಳಿಗೆ ಭೂಲೋಕದಲ್ಲೆಲ್ಲಾ ವಿಶೇಷ ಬೆಲೆಯಿತ್ತು. ಪ್ರಾಚೀನ ಕಾಲದ, ಗ್ರೀಕರೂ, ರೋಮನರೂ, ಫೊನೀಸಿಯನ (Phonician) ರೂ ದೂರದ ದೇಶಗಳಿಗೆ ಪ್ರಯಾಣಮಾಡಿ ಇದನ್ನು ಸಂಗ್ರಹಿಸುತ್ತಿದ್ದರು. ಇದರಿಂದಲೇ ಅವರು ವ್ಯಾಪಾರಮಾಡುತ್ತಿದ್ದರು.

ಶಿಲಾರಾಳದ ಸೊಬಗು ಗ್ರೀಕರ ಕಲೆಯಲ್ಲಿಯೂ, ಸಾಹಿತ್ಯದಲ್ಲಿಯೂ, ಶಾಶ್ವತವಾಗಿ ನೆಲಸಿಂತಿದೆ. ಹೋಮರ್ ಕವಿಯು ಅದರ ಗುಣಗಳನ್ನು ಹಾಡಿದ್ದಾನೆ. ಶಿಲಾರಾಳವನ್ನು ತಿಕ್ಕುವಾಗ ವಿದ್ಯುಚ್ಛಕ್ತಿ ಉಂಟಾಗುತ್ತದೆಂಬುದನ್ನು ಗ್ರೀಕರೇ ಕಂಡುಹಿಡಿದಿದ್ದರು. ಈ ಶಕ್ತಿಗೆ ಅವರು ಇಲೆಕ್ಟ್ರನ್ (Electron) ಎಂದು ಹೆಸರಿಟ್ಟರು. ಆ ಹೆಸರೇ ಇಂದು "ಇಲೆಕ್ಟ್ರಿಸಿಟಿ" (Electricity) ಯಾಗಿ ಮಾರ್ಪಾಟುಹೊಂದಿದೆ.

ರೋಮ್ ದೇಶದ ಚಕ್ರವರ್ತಿಯಾಗಿದ್ದ ನೀರೋ (Nero) ಎಂಬವನು, ಬಾಲ್ಟಿಕ್ ಪ್ರದೇಶದಿಂದ ಶಿಲಾರಾಳವನ್ನು ತರಿಸುವುದಕ್ಕೋಸ್ಕರ ಜನರ ಒಂದು ತಂಡವನ್ನು ಕಳುಹಿಸಿದ್ದನು. ಆ ತಂಡವು 13,000 ರಾತಲು ಭಾರದ ಶಿಲಾರಾಳವನ್ನು ತಂದಿತ್ತು. ಇದರಿಂದಲೇ ಆಗಿನ ಕಾಲದ ಇದರ ವ್ಯಾಪಾರವು ಯಾವ ರೀತಿಯಲ್ಲಿ ಇತ್ತು ಎಂಬುದು ತಿಳಿದುಬರುತ್ತದೆ.

ಪ್ಲೀನಿ (Pliny) ಎಂಬ ಲೇಖಕನ ಲೇಖನಗಳಲ್ಲಿ, ಶಿಲಾರಾಳದ ವ್ಯಾಪಾರದ ವಿಚಾರಗಳು ಬಹಳ ಸೊಗಸಾಗಿ ಚಿತ್ರಿಸಲ್ಪಟ್ಟಿವೆ. ರೋಮ್ ನಗರದ ಶ್ರೀಮಂತರು ಆಗ ಕುಡಿಯುತ್ತಿದ್ದ ಪೆಕಿನಿಯನ್ (Pakenian) ದ್ರಾಕ್ಷಾರಸದ ಬಣ್ಣವೇ ಈ ಶಿಲಾರಾಳಕ್ಕಿತ್ತೆಂದು ಅವನು ಬರೆದಿದ್ದಾನೆ. ಅಲ್ಲಿಯ ಸ್ತ್ರೀಯರು, ತಮ್ಮ ತಲೆ ಕೂದಲು ಇದರ ಬಣ್ಣದಂತೆ ಹೊಳೆಯಲು ತಲೆಗೆ ಒಂದು ತರದ ಹಳದಿ ಬಣ್ಣವನ್ನು ಹಚ್ಚುತ್ತಿದ್ದರು.

ಇದರಿಂದ ಆಭರಣಗಳನ್ನೂ, ಸರಗಳನ್ನೂ ಅವರು ಮಾಡುತ್ತಿದ್ದರು: ಸ್ತ್ರೀಯರು ತಮ್ಮ ಉಡುಪುಗಳಿಗೆ ಇದರ ಪಿನ್ನು (Pin) ಗಳನ್ನು ಚುಚ್ಚುತ್ತಿದ್ದರು. ಮದ್ದಿಗಾಗಿಯೂ ಆರೋಗ್ಯಕ್ಕಾಗಿಯೂ ರೋಮನರು ಇದನ್ನು ಉಪಯೋಗಿಸುತ್ತಿದ್ದರೆಂದು ಪ್ಲೀನಿಯು ಬರೆದಿದ್ದಾನೆ.

ಬೇನೆಗಳಿದ್ದವರು ಇದರ ಹಾರಗಳನ್ನು ಧರಿಸುತ್ತಿದ್ದರು. ಕೆಟ್ಟ ನೀರಿನಿಂದ ಬಂದ ರೋಗಗಳನ್ನು ನಿವಾರಿಸುವುದಕ್ಕೋಸ್ಕರ ರೋಮ್ ದೇಶದ ಒಕ್ಕಲಿಗರ ಹೆಂಡಂದಿರು ಇದರ ಸರಗಳನ್ನು ಧರಿಸುತ್ತಿದ್ದರು.

ಇದನ್ನು ರೋಮನರು ತಮ್ಮ ದೇವಸ್ಥಾನಗಳಲ್ಲಿಯೂ ಉಪಯೋಗಿಸುತ್ತಿದ್ದರು. ದೇವರನ್ನು ಸಂತೋಷಗೊಳಿಸುವುದಕ್ಕೋಸ್ಕರ, ಅವರು ಇದನ್ನು ದೇವಸ್ಥಾನಗಳಲ್ಲಿ ಸುಡುತ್ತಿದ್ದರು. ಆಗ ಇದಕ್ಕೆ ಬಹಳ ಬೆಲೆಯಿತ್ತು. ಇದರಿಂದ ಕೊರೆದು ರಚಿಸಿದ ಒಂದು ಚಿಕ್ಕ ಪ್ರತಿಮೆಗೆ ದಟ್ಟಮುಟ್ಟವಾಗಿ ಬೆಳೆದ ಒಬ್ಬ ಗುಲಾಮನಿಗಿರುವ ಬೆಲೆಗಿಂತ ಹೆಚ್ಚು ಬೆಲೆಯಿತ್ತೆಂದು ಪ್ಲೀನಿಯು ಬರೆದಿದ್ದಾನೆ. ಎಲ್ಲಾ ಯುಗದ ಕಲಾವಿದರು ಇದರ ಸೊಬಗನ್ನು ಮೆಚ್ಚಿದ್ದಾರೆ.

12ನೇ ಶತಮಾನದ ವರೆಗೆ, ಶಿಲಾರಾಳವನ್ನು ಸಂಗ್ರಹ ಮಾಡಿ ವ್ಯಾಪಾರ ಮಾಡುವ ಸಂಸ್ಥೆಗಳು ಬಾಲ್ಟಿಕ್ ಪ್ರದೇಶದಲ್ಲಿದ್ದುವು. ಅಲ್ಲಿ ಆಗತ್ಯವಿದ್ದಾಗ ಇದು ದೊರೆಯುತ್ತಿತ್ತು. ಇದರ ಕೆತ್ತನೆ ಕೆಲಸವು ಬಹಳ ದೇಶಗಳಲ್ಲಿ ಹಬ್ಬಿರುತ್ತದೆ. ಹಿಂದೂದೇಶದಲ್ಲಿಯೂ ಇದರಿಂದ ಪ್ರತಿಮೆಗಳನ್ನು ಮಾಡುತ್ತಿದ್ದರು. ಚೀನಾದಲ್ಲಿಯೂ ಇತರ ಪೌರ್ವಾತ್ಯ ದೇಶಗಳಲ್ಲಿಯೂ ಇದರಿಂದ ಕೆತ್ತನೆ ಕೆಲಸಗಳನ್ನು ಮಾಡುತ್ತಿದ್ದರು.

17ನೆಯ ಶತಮಾನದಲ್ಲಿ ಈ ಕಲೆಯು ಶ್ರೇಷ್ಟತೆಯ ಶಿಖರಕ್ಕೇರಿತ್ತು. ಯೂರೋಪಿನ ವಸ್ತು ಸಂಗ್ರಹಾಲಯಗಳಲ್ಲಿ ಇದರಿಂದ ಮಾಡಿದ ಪ್ರತಿಮೆಗಳು ಅನೇಕವಿವೆ.

ಇದರಿಂದ ಪೆಟ್ಟಿಗೆಗಳನ್ನೂ, ಪೀಠಗಳನ್ನೂ ಇತರ ವಸ್ತುಗಳನ್ನು ಮಾಡುತ್ತಿದ್ದರು.

ಈಗಲೂ ಬಾಲ್ಟಿಕ್ ಪ್ರದೇಶಗಳಿಂದ ಪ್ರತಿ ವರುಷ, 500 ಟನ್ನುಗಳಿಗಿಂತಲೂ ಹೆಚ್ಚು ಶಿಲಾರಾಳವು ದೊರೆಯುತ್ತದೆ. ಭೂಮಿಯ ಒಳಗೆ ಅವೆ ಮಣ್ಣಿನ ಪದರುಗಳ ಅಡಿಯಲ್ಲಿ ಇದರ ಗಣಿಗಳಿವೆ. ಅಲ್ಲಿ ನೀರೂ ಇರುತ್ತದೆ. ಅಲ್ಲಿ ಸಣ್ಣ ಸಣ್ಣ ತುಂಡುಗಳು ದೊರೆಯುತ್ತವೆ. ಕೆಲವು ರಾತಲುಗಳಿಗಿಂತ ಹೆಚ್ಚು ಭಾರದ ತುಂಡುಗಳು ಸಿಗುವುದಿಲ್ಲ. ಹನ್ನೆರಡು ಅಥವಾ ಹದಿನೈದು ರಾತಲು ಭಾರದ ತುಂಡುಗಳು ಸಿಗುವುದೇ ಅಪರೂಪ; ಸಿಕ್ಕಿದರೆ, ಅವುಗಳಿಗೆ ವಿಶೇಷ ಬೆಲೆ ಇರುತ್ತದೆ.

ಇದು ಅತೀ ಹಗುರವಾದ ವಸ್ತುವಾದರೂ ನೀರಿನಲ್ಲಿ ತೇಲುವುದಿಲ್ಲ; ಬಿರುಗಾಳಿ ಬಂದು ನೀರನ್ನು ಅಲ್ಲೋಲಕಲ್ಲೋಲ ಮಾಡಿದರೆ ಮಾತ್ರ [illegible]ಯಲ್ಲಿರುವ ಶಿಲಾರಾಳದ ತುಂಡುಗಳು ದಡಕ್ಕೆ ಬರುತ್ತವೆ. ಒಳ್ಳೇ ಅನುಭವಶಾಲಿಗಳಾದ ಬೆಸ್ತರು ಅಂತಹ ತುಂಡುಗಳನ್ನು ಸಂಗ್ರಹಿಸುತ್ತಾರೆ. ಸಮುದ್ರ ದಡದಲ್ಲಿ ಬೆಳೆದ ಹಾವಸೆಗಳಲ್ಲಿಯೂ ಈ ತುಂಡುಗಳು ಸಿಕ್ಕಿಕೊಂಡಿರುತ್ತವೆ. ಎಷ್ಟೋ ವರುಷಗಳಿಂದ ಜನರು ಈ ರೀತಿಯಲ್ಲಿ ದೊರೆತ ಶಿಲಾರಾಳದ ತುಂಡುಗಳನ್ನು ಸಂಗ್ರಹಿಸುತ್ತಾರೆ.

ಈಗ ಶಿಲಾರಾಳವನ್ನು ಆಧುನಿಕ ರೀತಿಯಲ್ಲಿ ಗನಿಗಳಿಂದ ಅಗೆದು ತೆಗೆಯುತ್ತಾರೆ. ಯಂತ್ರಗಳ ಸಹಾಯದಿಂದ ಮೇಲಿರುವ ಮಣ್ಣನ್ನೂ, ಅನಂತರ ಸಿಗುವ ಆವೆಮಣ್ಣನ್ನೂ ತೆಗೆಯುತ್ತಾರೆ. ನೀಲಿ ಬಣ್ಣದ ಮಣ್ಣು ಸಿಕ್ಕಿದೊಡನೆ, ಶಿಲಾರಾಳದ ಪದರು ದೊರೆತಂತೆ ಸರಿ.

ಶಿಲಾರಾಳದ ತುಂಡುಗಳನ್ನು ಅಲ್ಲಿಂದ ತೆಗೆದು, ಅತೀ ರಭಸದಿಂದ ನೀರು ಬೀಳುವಲ್ಲಿ ತೊಳೆಯುತ್ತಾರೆ. ಇದನ್ನು ಗನಿಗಳಿಂದ ಅಗೆದು ತೆಗೆಯುವುದು, ಚಿನ್ನವನ್ನು ಗನಿಯಿಂದ ತೆಗೆದಂತೇ ಆಗಿದೆ.

ಆದರೆ ಚಿನ್ನವನ್ನು ತೆಗೆಯುವಾಗ ಅಲ್ಲೇ ಸೂಕ್ಷ್ಮವಾದ ತುಂಡುಗಳನ್ನೂ ಸಂಗ್ರಹಿಸುತ್ತಾರೆ. ಶಿಲಾರಾಳವನ್ನು ತೆಗೆಯುವಾಗ ಅಷ್ಟು ಜಾಗರೂಕತೆಯನ್ನು ಉಪಯೋಗಿಸಬೇಕಾಗಿಲ್ಲ. ಏಕೆಂದರೆ ಚಿಕ್ಕ ಚಿಕ್ಕ ತುಂಡುಗಳನ್ನು ಆರಿಸುವುದಿಲ್ಲ.

ಜರ್ಮನ್ ಗನಿಗಳಲ್ಲಿ ಮಾತ್ರ ಉತ್ತಮ ಶಿಲಾರಾಳವು ದೊರೆಯುತ್ತದೆ. ಕಳೆದ ಅರ್ಧ ಶತಮಾನದಲ್ಲಿ ಜರ್ಮನಿಯ ಪಾಮಾನಿಕನ್ (Palmanicken) ಎಂಬಲ್ಲಿ 35,000,000 ರಾತಲು ಶಿಲಾರಾಳ ತೊರೆತಿವೆ. ಇನ್ನೂ ಮುಂದಿನ ಅರ್ಧ ಶತಮಾನದಲ್ಲಿ ಸಾಧಾರಣ 50,000,000 ರಾತಲು ಶಿಲಾರಾಳವು ಜಗತ್ತಿನ ಉಗ್ರಾಣದಲ್ಲಿ ಸಂಗ್ರಹವಾಗಬಹುದೆಂದು ಅಂದಾಜು ಮಾಡಲಾಗಿದೆ. ಅಂತೂ ಇದರ ಸಂಗ್ರಹಕ್ಕೆ ಬರಗಾಲ ಬರಲಾರದು; ಆದರೂ ಅದರ ಬೆಲೆ ಇಳಿಯಲಾರದು.

ಶಿಲಾರಾಳದ ಹಲವು ತುಂಡುಗಳಲ್ಲಿ ಪ್ರಾಚೀನ ಕಾಲದ ಕ್ರಿಮಿಕೀಟಗಳೂ ಕೆಲವು ತರದ ಸಸ್ಯಗಳೂ ಅಡಗಿರುತ್ತವೆ. ಸಾವಿರಾರು ವರುಷಗಳ ಹಿಂದೆ ಇತಿಹಾಸಕ್ಕೂ, ಪೂರ್ವ ಕಾಲದಲ್ಲಿ ಭೂಗೋಲದ ಸೃಷ್ಟಿಯು ಹೇಗಿತ್ತೆಂದು ಒಂದು ಚಿತ್ರವನ್ನು ತೋರಿಸುವ ಒಂದು ಪ್ರದರ್ಶನಾಲಯವಿದ್ದರೆ ಅದು ಈ ಶಿಲಾರಾಳದ ಪದರು. ಕೆಲವು ತುಂಡುಗಳಲ್ಲಿ ಪ್ರಾಚೀನ ಕಾಲದ ಹೂವುಗಳೂ ಅಡಗಿರುತ್ತವೆ.

ಶಿಲಾರಾಳವು ಜಲಾವಸ್ಥೆಯಲ್ಲಿರುವಾಗ ಅದರಲ್ಲಿ ಅಂಟಿದ ವಸ್ತುಗಳೇ ಇವುಗಳಾಗಿವೆ. ಅದು ಘನಾವಸ್ಥೆಯನ್ನು ಹೊಂದಿದೊಡನೆ ಈ ಜೀವಿಗಳೂ ವಸ್ತುಗಳೂ ಅದರಲ್ಲಿ ಸಿಕ್ಕಿಕೊಂಡು ಎಷ್ಟೊ ಯುಗಗಳು ಮಗುಚಿದರೂ ಕೊಳೆಯದೆ ಇದ್ದಂತೆ ಇರುತ್ತವೆ. ಶಿಲಾರಾಳವು ಪಾರದರ್ಶಕವಾದ್ದರಿಂದ ಒಳಗೆ ಅಡಗಿದ ಪದಾರ್ಥಗಳು ಹೊರಗೆ ಸ್ಪಷ್ಟವಾಗಿ ಕಾಣುತ್ತವೆ.

ಏಡನಿನಲ್ಲಿ (Aden) ಯಾವ ಜೀವಿಗಳೂ ಸಸ್ಯಗಳೂ ಇದ್ದುವೋ ಅವುಗಳನ್ನೆಲ್ಲಾ ಈ ಶಿಲಾರಾಳವು ಸಂಗ್ರಹಿಸಿರುತ್ತದೆ. ಇದು ಅತೀ ಸಂತೋಷದ ವಿಷಯವಾಗಿದೆ. ಈಗ ನಮ್ಮ ದೃಷ್ಟಿಗೆ ಬೀಳದ ಸಸ್ಯಗಳೂ ಜೀವಿಗಳೂ, ಶಿಲಾರಾಳದಲ್ಲಿ ಮನೆಮಾಡಿಕೊಂಡಿವೆ. ಹಿಂದಿನ ಜಗತ್ತು ಯಾವರೀತಿಯಲ್ಲಿತ್ತು ಎಂಬುದನ್ನು ಈ ಶಿಲಾರಾಳವು ನಮಗೆ ತೋರಿಸಿಕೊಡುತ್ತದೆ. ಒಂದಾನೊಂದು ಕಾಲದಲ್ಲಿ ಉತ್ತರಯೂರೋಪದಲ್ಲಿ ಉಷ್ಣವಲಯದಲ್ಲಿ ಯಾವರೀತಿಯ ಸಸ್ಯಗಳು ಬೆಳೆಯುತ್ತಿದ್ದುವೆಂದು ಇವುಗಳಿಂದ ನಮಗೆ ತಿಳಿದುಬರುತ್ತದೋ, ಹಾಗೆಯೇ ಒಂದಾನೊಂದು ಕಾಲದಲ್ಲಿ ಉತ್ತರ ಆಫ್ರಿಕದಲ್ಲಿದ್ದ ವಾಯುಗುಣವೇ ಜರ್ಮನಿಯಲ್ಲಿ ಇತ್ತೆಂದು ನಮಗೆ ನಿರ್ಧರಿಸಲು ಸಾಧ್ಯವಾಗುತ್ತದೆ.

ಶಿಲಾರಾಳದಲ್ಲಿ ದೊರೆಯುವ ಜೀವಿಗಳೂ, ಸಸ್ಯಗಳೂ ಸಜೀವವಾಗಿಯೇ ಇವೆಯೋ ಎಂದು ತೋರುತ್ತವೆ. ಚಿಕ್ಕ ಜೀವಿಯೂ ಇದರಲ್ಲಿ ಸಿಕ್ಕಿರುತ್ತದೆ. ಒಂದು ಸರ್ತಿ 47 ಜಾತಿಯ ಇರುವೆಗಳು ಶಿಲಾರಾಳದಲ್ಲಿ ಸಿಕ್ಕಿರುತ್ತವೆ. 90 ಪಿ.ಲಿಯ ವರುಷಗಳ ಹಿಂದೆ ಜೀವಿಸಿದ್ದ ಒಂದು ಜಾತಿಯ ನೊಣವೂ ಇದರಲ್ಲಿ ಸಿಕ್ಕಿರುತ್ತದೆ.

ರಶಿಯದ ಝಾರನು (Czar) ಬೇಸಿಗೆಯಲ್ಲಿರಲು ಝಾರ್ಕ್ಯೋಜಿ (Zarukoje) ಎಂಬಲ್ಲಿ ಒಂದು ಅರಮನೆಯನ್ನು ಕಟ್ಟಿಸಿದ್ದನು. ಇದರೊಳಗೆ ಶಿಲಾರಾಳದಿಂದಲೇ ಶೃಂಗಾರಗಳನ್ನು ಮಾಡಿರುತ್ತಾರೆ. ಉತ್ತಮ ತರದ ಕಲಾವಿದರು 50 ವರುಷಗಳಲ್ಲಿ ಇದರ ಕೆಲಸವನ್ನು ಮಾಡಿ ಮುಗಿಸಿದರು. ಭೂಲೋಕದ ಎಲ್ಲಾ ಕಲಾವಿದರೂ ಇದರಲ್ಲಿ ಭಾಗವಹಿಸಿದ್ದರು.

ಬೇರಿಸಿನ ಪ್ರದರ್ಶನಾಲಯವೊಂದರಲ್ಲಿ ಇದ್ದ 5 ಅಡಿ ಉದ್ದದ ಶಿಲಾನಿರ್ಮಿತ ಜಹಜು ಬಲು ಸೊಗಸಾದ ಕೃತಿಯಾಗಿದೆ. ಇದಕ್ಕೆ 20,000 ಪೌಂಡುಗಳ ಬೆಲೆಯನ್ನು ಕಟ್ಟಿರುತ್ತಾರೆ.

ಇತ್ತೀಚೆಗೆ ಶಿಲಾರಾಳದಿಂದ ಅಂದವಾದ ಆಭರಣಗಳನ್ನೂ, ಶೃಂಗಾರಗಳನ್ನೂ ಮಾಡುತ್ತಾರೆ.

ಹಿಂದೂಸ್ಥಾನದ ಖಾನೇಶುಮಾರಿ

(1931ರಲ್ಲಿ ಗಣನೆಯಾದಂತೆ.)

	ಹಿಂದೂದೇಶ	ಬ್ರಿಟಿಷರ ಕೈಕೆಳಗಿನ ರಾಜ್ಯಗಳು	ಹಿಂದೂದೇಶದ ಸಂಸ್ಥಾನಗಳು
ಚದರಳತೆ [ಚ. ಮೈ.]	1,808,679 [ಚ. ಮೈ.]	1,096,171 [ಚ. ಮೈ.]	712,508 [ಚ. ಮೈ.]
ಜನಸಂಖ್ಯೆ	352,837,778	271,526,933	81,310,845
(a) ಪಟ್ಟಣವಾಸಿಗಳು.	38,979,211	29,652,453	9,326,958
(b) ಹಳ್ಳಿಯಲ್ಲಿ ವಾಸಮಾಡುವವರು	313,858,567	241,874,680	71,983,887

ಮತಗಳು

		ಬದಲಾವಣೆಯ ಶೇಕಡಾ ಸಂಖ್ಯೆ	ಜುಮ್ಲಾ ಜನಸಂಖ್ಯೆಯ ಶೇಕಡಾ ಪಾಲು 1921—31
ಹಿಂದೂಗಳು	239,195,140	+ 10·4	68·24
ಮುಸಲ್ಮಾನರು	77,677,545	+ 13·0	22·16
ಬೌದ್ಧರು	12,786,806	+ 10·5	3·65
ಪಂಗಡದವರು	8,280,347	— 15·3	2·36
ಕ್ರೈಸ್ತರು	6,296,763	+ 32·5	1·79
ಸಿಕ್ಕರು	4,335,771	+ 33·9	1·24
ಜೈನರು	1,252,105	+ 6·2	·36
ಜೊರೊಸ್ಟ್ರಿಯಾನರು	109,752	+ 7·8	·03
ಯೆಹೂದ್ಯರು	24,141	+ 10·9	·01
ಇನ್ನುಳಿದ ಚಿಲ್ಲರೆ ಮತಸ್ಥರು ಮತ್ತು ಉಳಿದವರು	571,187,307	+ 2·2	·16

ಹಿಂದೂದೇಶದಲ್ಲಿ ಯುರೋಪಿಯಾನರ ಸಂಖ್ಯೆ

(1931ರ ಖಾನೇಶುಮಾರಿಯಂತೆ)

ಯುರೋಪಿಯನರು		168,133.
ಗಂಡಸರು	117,335	
ಹೆಂಗಸರು	50,798	
ಎಂಗ್ಲೋ ಇಂಡಿಯಾನರು		138,395
ಗಂಡಸರು	71,247	
ಹೆಂಗಸರು	67,148	

ಸೂಚನೆ:-ಯುರೋಪಿಯಾನರ ಜನಸಂಖ್ಯೆಯನ್ನು ಸೂಚಿಸುವ ಸಂಖ್ಯೆಯು 1921ರಿಂದ 1931ರ ವರೆಗೆ 10,883 ಮತ್ತು 1901ರಿಂದ 3,309ರ ಪ್ರಕಾರ ಇಳಿತವನ್ನು ಸೂಚಿಸುತ್ತದೆ. ದೇಶದ ಜುಮ್ಲಾ ಜನಸಂಖ್ಯೆಯಲ್ಲಿ ಯುರೋಪಿಯಾನರು ಕೇವಲ ಶೇಕಡಾ ·05ರ ಅಂಶ ಮಾತ್ರ ಇರುತ್ತಾರೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್-ಲಿಮಿಟೆಡ್

ಈ ಬ್ಯಾಂಕು 1906ನೇ ಇಸವಿಯಲ್ಲಿ ಉಡುಪಿಯಲ್ಲಿ ಸ್ಥಾಪಿತವಾಯಿತು. ಇದೇ ಜಿಲ್ಲೆಯ ಮೊದಲನೆಯ ಬ್ಯಾಂಕು. 1931ನೇ ಇಸವಿಯಲ್ಲಿ ತನ್ನ ರಜತ ಮಹೋತ್ಸವವನ್ನು ಜರಗಿಸಿ ಈಗ ತಾನೇ ಒಂಭತ್ತು ವರ್ಷಗಳು ಕಳೆದು ಹೋದುವು. ಈ ಸಂಸ್ಥೆಯು ತನ್ನ ಕಾರ್ಯಕ್ಷೇತ್ರವನ್ನು ಜಿಲ್ಲೆಯಲ್ಲಿ ಮಾತ್ರವಲ್ಲದೆ, ಮದ್ರಾಸು ಸಂಸ್ಥಾನ, ಕೊಡಗು ಸೀಮೆ, ಮೈಸೂರು ಸಂಸ್ಥಾನ ಇವುಗಳಲ್ಲಿರುವ ಪ್ರಾಮುಖ್ಯ ಸ್ಥಳಗಳಿಗೆ ಕೂಡಾ ವಿಸ್ತರಿಸಿ ಇಂದಿಗೆ 20 ಶಾಖೆಗಳಿಂದೊಡಗೂಡಿದೆ. ಎಲ್ಲೆಲ್ಲಿಯೂ ಜನಾದರಕ್ಕೆ ಪಾತ್ರವಾಗಿದೆ.

ಆಡಳಿತೆ ಮಂಡಳಿ, ಪಾಲು ಭಂಡವಾಳ, ಕ್ಷೇಮನಿಧಿ ಇವುಗಳಿಂದಲೇ ಮುಖ್ಯವಾಗಿ ಬ್ಯಾಂಕಿನ ಭದ್ರತೆ ಮತ್ತು ವಿಶ್ವಾಸಾರ್ಹತೆ ಇವುಗಳನ್ನು ಪರೀಕ್ಷಿಸಬೇಕಾಗಿದೆ. ಇವುಗಳಲ್ಲಿ ಒಂದೊಂದೇ ವಿಷಯವನ್ನು ಎತ್ತಿ ನೋಡಿದರೆ ಬ್ಯಾಂಕು ಯಾವ ವಿಷಯದಲ್ಲೂ ಹಿಂದುಳಿದಿಲ್ಲ ಎಂಬುದು ಒಡೆದು ಕಾಣಿಸುತ್ತದೆ. ಇದೇ ಸಂಚಿಕೆಯ ಇನ್ನೊಂದೆಡೆಯಲ್ಲಿ ಕಾಣುವ ಬ್ಯಾಂಕಿನ ಆಡಳಿತೆ ಮಂಡಳಿಯ ಸದಸ್ಯರ ಹೆಸರುಗಳನ್ನು ಪರಿಶೀಲಿಸಿದರೆ ಅವುಗಳ ಪರಿಚಯವಿಲ್ಲದ ಜನರು ತೀರ ವಿರಳರಿರಬಹುದು. ಜಿಲ್ಲೆಯ ಪ್ರಾಮುಖ್ಯರೂ ಕಾರ್ಯದಕ್ಷತೆಯಲ್ಲಿ ಮೇಲ್ಮೆ ಹೊಂದಿದ ಅಷ್ಟು ಜನರೇ ಆಡಳಿತೆ ಮಂಡಳಿಯಲ್ಲಿರುವಾಗ ಬ್ಯಾಂಕು ವಿಶ್ವಾಸಾರ್ಹತೆಯನ್ನು ಹೊಂದುವುದರಲ್ಲಿ ಸಂದೇಹವೇ ಇಲ್ಲ. ಇತರ ಇನ್ನೆಷ್ಟೋ ಪ್ರಾಮುಖ್ಯ ಸಂಸ್ಥೆಗಳ ಆಡಳಿತೆ ಮಂಡಳಿಯ ಮೆಂಬರರಾಗಿರುವ ಡಾ। ಯು. ಸುಂದರರಾವ ಪೈಗಳೇ ಈ ಬ್ಯಾಂಕಿನ ಅಧ್ಯಕ್ಷರಿರುವರು. ಇವರ ನೇತೃತ್ವದಲ್ಲಿ ಬ್ಯಾಂಕು ದಿನದಿಂದ ದಿನಕ್ಕೆ ಉತ್ತಮ ಪ್ರಗತಿಹೊಂದುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಬ್ಯಾಂಕುಗಳ ಪಾಲು ಭಂಡವಾಳ, ಕ್ಷೇಮನಿಧಿ, ಇವುಗಳೇ ಬ್ಯಾಂಕಿನ ಅಡಿಗಟ್ಟಿನ ಭದ್ರತೆಯನ್ನು ನಿರ್ಧರಿಸುವ ಸಾಧನಗಳು. ಇಷ್ಟು ಅಲ್ಪ ಸಮಯದೊಳಗೆ, ಆರ್ಥಿಕ ಮುಗ್ಗಟ್ಟು, ಸ್ಪರ್ಧಾ ಯುದ್ಧದ ಪರಿಣಾಮ ಮುಂತಾದ ಯಾವತ್ತೂ ಎಡರುಗಳನ್ನು ಐದಿಗೊತ್ತಿ, ಪಾಲು ಭಂಡವಾಳವಾಗಿ ರೂಪಾಯಿ 4,34,615 ಕ್ಷೇಮನಿಧಿಯಾಗಿ ರೂಪಾಯಿ 3,90,000 ಶೇಖರಿಸಿದ ಸಂಗತಿಯನ್ನು ನೋಡಿದರೆ, ಈ ಬ್ಯಾಂಕಿನ ಯಾವ ಠೇವಣಾತಿದಾರನಿಗೂ ಅದೊಂದು ಸಂತೋಷದ ಸಂಗತಿಯಾಗುವುದರಲ್ಲಿ ಆಶ್ಚರ್ಯವಿಲ್ಲ.

ಈ ಸಂಸ್ಥೆಯು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದಿ, ತನ್ನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವಿಸ್ತರಿಸಿ ದೇಶದ ವಾಣಿಜ್ಯ ಕೈಗಾರಿಕೆಗಳಿಗೆ ಮತ್ತಷ್ಟು ಸಹಕಾರಿಯಾಗಲೆಂದೇ ನಮ್ಮ ಆಶಯ.

ನದಿ ನೀರಿನ ಉಪಯೋಗ

ಗೋದಾವರಿ:—ನೀರಿನ ಪ್ರವಾಹದ ಶೇಕಡಾ ಸ್ವಲ್ಪ ಅಂಶವನ್ನು ಮಾತ್ರ ಉಪಯೋಗಿಸುತ್ತಾರೆ.

ಕೃಷ್ಣಾ:—ನೀರಿನ ಪ್ರವಾಹದ ಶೇಕಡಾ ಸ್ವಲ್ಪ ಅಂಶವನ್ನು ಮಾತ್ರ ಉಪಯೋಗಿಸುತ್ತಾರೆ.

ಕಾವೇರಿ:—ನೀರಿನ ಪ್ರವಾಹದ ಶೇಕಡಾ ಹೆಚ್ಚಿನ ಅಂಶವನ್ನು ಉಪಯೋಗಿಸುತ್ತಾರೆ. ಇನ್ನೂ ಹೆಚ್ಚಿನ ಉಪಯೋಗವನ್ನು ಗಳಿಸುವುದು ಸಂಶಯಾಸ್ಪದವಾಗಿದೆ.

ಪೆನ್ನಾರ:—ನೀರಿನ ಪ್ರವಾಹದ ಹೆಚ್ಚಿನ ಭಾಗವನ್ನು ಉಪಯೋಗಿಸುತ್ತಾರೆ. ಇನ್ನೂ ಹೆಚ್ಚಿನ ಉಪಯೋಗ ಪಡೆಯಲು ಸಾಧ್ಯವಿಲ್ಲ.

ವೈಗೈ:—ನೀರಿನ ಪ್ರವಾಹದ ಹೆಚ್ಚಿನ ಅಂಶವನ್ನು ಉಪಯೋಗಿಸುತ್ತಾರೆ. ಇನ್ನೂ ಹೆಚ್ಚಿನ ಉಪಯೋಗ ಪಡೆಯಲು ಎಡೆಯಿಲ್ಲ.

ತುಂಗಭದ್ರಾ ನದಿಯ ನೀರಾವರಿ

1. ಈ ನದಿಯ ಆಣೆಕಟ್ಟು ಮಲ್ಲಾಪುರಂ ಎಂಬಲ್ಲಿದೆ. ಹೊಸಪೇಟೆಯಿಂದ ಇಲ್ಲಿಗೆ ಮೂರು ಮೈಲು ದೂರವಿದೆ.

2. ಇಲ್ಲಿ 1,20,000 ಮಿಲಿಯ ಘನ ಅಡಿ ನೀರು ಸಂಗ್ರಹವಾಗುವದು. 138 ಮೈಲುಗಳ ವರೆಗೆ ನೀರು ಹರಡಿದೆ.

3. ಈ ಅಣೆಕಟ್ಟಿನ ನೀರು 1,072,500 ಎಕರೆ ಸ್ಥಳದ ಸಾಗುವಳಿಗಾಗಿರುತ್ತದೆ.

4. ಬಳ್ಳಾರಿ, ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳು ಈ ನೀರಿನ ಉಪಯೋಗವನ್ನು ಪಡೆಯುತ್ತವೆ.

ಜಿಲ್ಲೆಗಳು	ತಾಲೂಕುಗಳು	ಎಕರೆಗಳು
ಬಳ್ಳಾರಿ	ರಾಯದುರ್ಗ, ಹೊಸಪೇಟೆ, ಬಳ್ಳಾರಿ, ಸಿರುಗುಪ್ಪ, ಆಲೂರು ಮತ್ತು ಅಡೋನಿ.	7,84,000
ಅನಂತಪುರ	ಗೂಟಿ	1,28,200
ಕರ್ನೂಲು	ಪಟ್ಟಿಕೊಂಡ ಮತ್ತು ಕರ್ನೂಲು	1,60,300

5. ನೀರಿಲ್ಲದ ಪ್ರದೇಶದಲ್ಲಿ ಕ್ಷಾಮವನ್ನು ನಿವಾರಿಸುವುದಕ್ಕಾಗಿಯೇ ಈ ಅಣೆಕಟ್ಟನ್ನು ಕಟ್ಟಿರುತ್ತಾರೆ.

6. 1938ರಲ್ಲಿ ಸಾವಿರಾರು ಜನರು ಬರಗಾಲದಿಂದ ಕಷ್ಟಪಡುತ್ತಿದ್ದರು. ಆಗ ಈ ನೀರಿರುತ್ತಿದ್ದರೆ, ಆದರಿಂದ ಬರಗಾಲವನ್ನು ನಿವಾರಿಸಬಹುದಿತ್ತು.

7. 80 ವರುಷಗಳಿಂದಲೇ ಈ ಅಣೆಕಟ್ಟನ್ನು ಕಟ್ಟುವ ಏರ್ಪಾಡಾಗುತಿತ್ತು.

ಹಿಂದೂಸ್ಥಾನದ ಭಂಗಾರದ ಆಮದು ರಫ್ತುಗಳು

ವರ್ಷ	ಆಮದು ರೂ.	ರಫ್ತು ರೂ.
1922-23	41,32,29,000	13,31,000
1923-24	20,25,31.000	6,98,000
1924-25	78,28,98,000	36,32,000
1925-26	35,22,99,363	37,53,564
1926-27	19,50,12,002	10,06,554
1927-28	18,13,44,062	3,44,039
1928-29	21,21,89,692	2,02,714
1929-30	14,23,11,477	1,03,081
1930-31	13,24,52,453	49,34,388
1931-32	2,79,95,364	60,78,25,155
1932-33	1,31,81,[illegible]91	66,84,09,347
1933-34	1,09,94,285	58.15,30,246
1934-35	71,93,000	53,25,68,708
1935-36	94,95,410	38,30,55,365

1937-38ರಲ್ಲಿ ಮದ್ರಾಸ್ ಸರಕಾರಕ್ಕೆ ಪ್ರತಿ ಜಿಲ್ಲೆಗಳಿಂದ ತೆತ್ತ ಭೂಕಂದಾಯ

ಜಿಲ್ಲೆಗಳು	ಪರ್ಮನೆಂಟ ಸೆಟ್ಲಮೆಂಟ ಪ್ರಕಾರದ ಕಂದಾಯ ರೂಪಾಯಿಗಳಲ್ಲಿ	ರಾಯತ್ವಾರಿ ಮತ್ತು ಇತರ ರೀತಿಯ ಭೂಕಂದಾಯ ರೂಪಾಯಿಗಳಲ್ಲಿ	ಜುಮ್ಲಾ ಭೂಕಂದಾಯ
ವಿಶಾಖಪಟ್ಣ	10,84,712	15,30,423	33,48,103
ಪೂರ್ವ ಗೋದಾವರಿ	5,92,684	56,32,523	64,90,635
ಪಶ್ಚಿಮ ಗೋದಾವರಿ	2,01,531	49,18,090	52,68,715
ಕೃಷ್ಣಾ	2,57,491	45,69,647	50,65,477
ಗುಂಟೂರು	44,917	67,18,009	68,31,[illegible]76
ನೆಲ್ಲೂರು	4,32,0[illegible]4	30,00,486	37,17,583
ಕಡಪಾ	—	18,71,837	19,15,346
ಅನಂತಪುರ	—	16,62,123	16,83,074
ಬಳ್ಳಾರಿ	—	13,39,593	13,57,681
ಕರ್ನೂಲು	—	21,37,863	21,51,767
ಮದ್ರಾಸ್	433	1,41,025	1,41,822
ಚೆಂಗಲ್ಪಟ್ಟು	1,58,386	26,41,032	29,81,985
ಚಿತ್ತೂರು	3,86,609	10,78,115	16,76,916
ಉತ್ತರ ಆರ್ಕಾಡು	64,337	38,28,719	39,56,175
ದಕ್ಷಿಣ ಆರ್ಕಾಡು	10,740	60,76,744	61.25,897
ತಂಜಾವೂರು	41,738	1,02,61,8[illegible]4	1,05,02.220
ತಿರುಚಿನಾಪಳಿ	60,040	38,14,174	39,60,883
ಮಧುರಾ	1,72,421	35,54,128	38,48,495
ರಾಮನಾಡು	8,70,310	7,73,918	21,97,728
ತಿನ್ನವೆಲ್ಲಿ	2,37,454	30,20,053	34,30,098
ಕೊಯಮುತ್ತೂರ	24,510	37,65.267	38,11,189
ನೀಲಗಿರಿ	—	1,94,130	1,94,130
ಸೇಲಂ	3,91,912	28,64,884	34,05,246
ದಕ್ಷಿಣ ಕನ್ನಡ	—	33,90,826	33,90,826
ಮಲಬಾರು	—	50,97,229	50,97.229
ಒಟ್ಟು	50,32,319	8,3[illegible],62,672	9,26.51,196

ಟಪ್ಪಾಲಾಫೀಸುಗಳು

ಹಿಂದೂದೇಶದಲ್ಲಿ 1930ರಿಂದ 1936ರ ವರೆಗೆ ಟಪ್ಪಾಲು ಆಫೀಸುಗಳು ಹೇಗೆ ಹೆಚ್ಚುತ್ತ ಬಂದಿವೆಯೆಂಬುದನ್ನು ಈ ಕೆಳಗಿನ ಅಂಕೆಸಂಖ್ಯೆಗಳಿಂದ ತಿಳಕೊಳ್ಳಬಹುದು:—

ವರುಷ	ಆಫೀಸುಗಳು	ಸಿಬಂಧಿ
1930—31	24,175	115.205
1931—32	23,985	113.326
1932—33	23,787	106,480
1933—34	23,676	106,204
1934—35	23,622	120,265
1935—36	23,695	119,863

ಮದ್ರಾಸು ಪ್ರಾಂತ್ಯದಲ್ಲಿ ಒಂದು ಟಪ್ಪಾಲಾಫೀಸು 14,702 ಜನರಿರುವ 54 ಚದರಮೈಲಿಗೊಂದರಂತೆ ಇರುತ್ತದೆ. ಬರ್ಮಾದಲ್ಲಿ 17,349 ಜನರಿರುವ 459 ಚದರಮೈಲಿಗೊಂದು ಟಪ್ಪಾಲಾಫೀಸು ಇದೆ. ಬೊಂಬಾಯಿಯಲ್ಲಿ ಮಾತ್ರ 9195 ಜನರಿರುವ 46 ಚದರ ಮೈಲಿಗೊಂದು ಇರುತ್ತದೆ.

ಬೆಳ್ಳಿಯ ಆಮದು ರಫ್ತುಗಳು

ವರ್ಷ	ಆಮದು ರೂ.	ರಫ್ತು ರೂ.
1926-27	21,76,34,000	1,89,54,000
1937-28	16,47,34,000	2,63,69,000
1928-29	15,92,18,000	6,15,11,000
1929-30	13,41,91,000	4,79,79,000
1930-31	13,46,63,000	3,38,70,000
1931-32	4,42,64,000	4,84,81,000
1932-33	1,62,95,000	3,64,26,000
1933-34	81,73,000	7,17,45,000
1934-35	4,45,11,000	9,86,75,000
1935-36	6,45,74,460	7,03,09,479

ಪ್ರಪಂಚದ ಮುಖ್ಯ ನಗರಗಳೂ ಅಲ್ಲಿಯ ಜನಸಂಖ್ಯೆಯೂ

(1931ನೇ ಜಾನೇಶುವಾರಿಯಂತೆ)

ಅಲೆಕ್ಸಾಂಡ್ರಿಯಾ	573,063
ಎಮ್ಸ್ಟರ್‌ಡೆಮ್	778,000
ಅಂಗೋರಾ	120 000
ಏಥೆನ್ಸ್	452,918
ಬಗ್ದಾದ್	250,000
ಬೆಂಗ್‌ಕೊಕ್	541,000
ಬಾರ್ಸಿಲೋನಾ	1,050,000
ಬೆಟೆವಿಯಾ	435,184
ಬೆಲ್‌ಫಾಸ್ಟ್	415,000
ಬರ್ಲಿನ್	4,242,500
ಬರ್ಮಿಂಗ್ಹಾಮ್	1,200,000
ಬೊಂಬಾಯಿ	1,157,052
ಬ್ರಿಸ್ಬೆ	625,003
ಬ್ರಿಸ್ಟೊಲ್	415,000
ಬ್ರೂಸ್ಸೆಲ್ಸ್	966,000
ಬುಡಾಪೆಸ್ಟ್	1,3 0,000
ಬುಕಾರೆಸ್ಟ್	670.000
ಬ್ಯೂನೆಸ್ ಏರಿಸ್	2,230.946
ಕೈರೊ	1,064,567
ಕಲ್ಕತ್ತಾ	1,419,321
ಕೆಂಟೊನ್	1,050,000
ಚಿಕಾಗೊ	4,955,000
ಕೊಲೋನ್	758,000
ಕೊಲೊಂಬೊ	284,155
ಕೊಪೆನ್‌ಹೇಗನ್	831,218
ಡ್ರೆಸ್‌ಡೆನ್	726,000
ಢೆಲ್ಲಿ	447,442
ಡಬ್ಲಿನ್	424,000
ಎಡಿನ್‌ಬರ್ಗ್	442,000
ಜಿನೊವಾ	620,093
ಗ್ಲಾಸ್ಗೊ	1,190.000
ಹೇಗ್	580,000
ಹೆಂಬರ್ಗ್	1,643,000
ಹೆಂಕೊ	777,993
ಇಸ್ತಾಂಬೂಲ್	883,411
ಕೋಬ್	912,140
ಕ್ಯೋಟೊ	1,089,592
ಲೀಡ್ಸ್	512,000
ಲೈಪ್‌ಜಿಗ್	766,000
ಲೆನಿನ್‌ಗ್ರೇಡ್	2,840,000
ಲಿಸ್ಬನ್	630,000
ಲಿವರ್‌ಪೂಲ್	1,196,000
ಲಂಡನ್	8,401,000
ಮೆಡ್ರಿಡ್	1,048,072
ಮೆಂಚೆಸ್ಟರ್	1,100,000
ಮೆಕ್ಸಿಕೊ	1,100,000
ಮಿಲಾನ್	1,053,723
ಮೊಂಟ್ರೀಲ್	1,017,000
ಮೊಸ್ಕೊ	3,663,300
ಮ್ಯೂನಿಚ್	738,000
ನ್ಯೂಯಾರ್ಕ್	7,363,624
ನೊಗೊಯಾ	1,082,814
ನ್ಯಾನ್‌ಕಿಂಗ್	1,009,800
ನೇಪಲ್ಸ್	1,000 000
ಒಡೆಸ್ಸಾ	485,200
ಒಸೊಕಾ	2,9 0,800
ಪ್ಯಾರಿಸ್	4,930,500
ಪೆಪಿಂಗ್	1,520,000
ಪ್ರೇಗ್	910,000
ರಿಯೊಡಿಜೆನೈರೊ	1,717,000
ರೋಮ್	1,045,000
ಸೆಂಟಿಯಾಗೊ	1,333.058
ಸೆವೊಪೌಲ್ಸ್	1,006,407
ಶಾಂಘಾಯಿ	3,500,000
ಸಿಂಗಾಪೂರ್	596,602
ಸ್ಟೋಕ್‌ಹೋಮ್	519,711
ಸಿಡ್ನಿ	1,249,040
ಟೆಹರಾನ್	320,000
ಟ್ರೈನ್‌ಸ್ಟಿನ್	1,387,462
ಟೊಕಿಯೊ	5,875,388
ಟೊರೊಂಟೊ	757,000
ಟ್ಯೂರಿನ್	622,791
ವಿಯಾನ್ನಾ	1,865,780
ವಾರ್ಸೊ	1,225,451
ಯಾಕೊಹಾಮಾ	704,291

ಪ್ರಪಂಚದ ಮುಖ್ಯ ಬಂದರುಗಳು

ಬಂದರ	ದೇಶ
ಅಲೆಕ್ಸಾಂಡ್ರಿಯಾ	ಈಜಿಪ್ಟ್
ಎಮ್ಸ್ಟರ್‌ಡೆಮ್	ನೆದರ್‌ಲೆಂಡ್ಸ್ (ತಗ್ಗು ಪ್ರದೇಶಗಳು)
ಎಂಟವರ್ಪ್	"
ಬೊಂಬಾಯಿ	ಹಿಂದೂದೇಶ
ಬ್ರಿಸ್ಟಲ್	ಇಂಗ್ಲೆಂಡ್
ಬ್ಯೂನೆಸ್ ಏರಿಸ್	ಅರ್ಜೆಂಟಿನಾ
ಕಲ್ಕತ್ತಾ	ಹಿಂದೂದೇಶ
ಕಾರ್ಡಿಫ್	ಇಂಗ್ಲೆಂಡ್
ಕೊಲೊಂಬೋ	ಸಿಲೋನ್
ಜಿನೊವಾ	ಇಟಲಿ
ಗ್ಲಾಸ್ಗೊ	ಸ್ಕೊಟ್‌ಲೆಂಡ್
ಹೆಂಬರ್ಗ	ಜರ್ಮನಿ
ಹೊಂಕೊಂಗ್	ಚೈನಾ
ಹಲ್	ಇಂಗ್ಲೆಂಡ್
ಕ್ಯೊಬಾ	ಜಪಾನ್
ಲೈಕ್	ಸ್ಕೊಟ್‌ಲೆಂಡ್
ಲಿವರ್‌ಪೂಲ್	ಇಂಗ್ಲೆಂಡ್
ಲಂಡನ್	"
ಮ್ಯಾಂಚೆಸ್ಟರ್	"
ಮಾರ್ಸೇಲ್ಸ್	ಫ್ರಾನ್ಸ್
ಮೊಂಟೆವಿಡಿಯೋ	ಹಂಗೇರಿ
ಮೊಂಟ್ರೀಲ್	ಕೆನಡಾ
ನ್ಯೂ ಕೆಸಲ್	ಇಂಗ್ಲೆಂಡ್
ನ್ಯೂ ಒರ್ಲಿಯನ್ಸ್	ಯು. ಎಸ್. ಎ.
ನ್ಯೂಯಾರ್ಕ್	"
ಫಿಲೆ ಡೆಲ್ಫಿಯಾ	"
ರಂಗೂನು	ಬರ್ಮಾ
ರಿಯೊಡಿಜೆನೈರೊ	ಬ್ರೆಜಿಲ್
ರೊಟರ್‌ಡೆಮ್	ನೆದರ್‌ಲೆಂಡ್ (ತಗ್ಗು ಪ್ರದೇಶಗಳು)
ಸೆನ್ ಫ್ರಾನ್ಸಿಸ್ಕೊ	ಯೂ. ಎಸ್. ಎ.
ಶಾಂಘಾಯಿ	ಚೈನಾ
ಸಿಂಗಾಪೂರ್	ಎಫ್. ಎಮ್. ಎಸ್.
ಸೌತ್ ಹೆಂಪ್ಟನ್	ಇಂಗ್ಲೆಂಡ್
ಸಿಡ್ನಿ ಎನ್. ಎಸ್. ಡಬ್ಲ್ಯೂ.	ಆಸ್ಟ್ರೇಲಿಯಾ
ವೆಲ್ಲಿಂಗ್‌ಟನ್ ಎನ್. ಜಡ್.	ನ್ಯೂಜೀಲೆಂಡ್
ಯಾಕೊಹಾಮಾ	ಜಪಾನ್

ನಮ್ಮ ಪ್ರಾಂತದ ಮುನ್ಸಿಪಾಲಿಟಿಗಳು

ಜಿಲ್ಲೆಗಳು ಮತ್ತು ಮುನ್ಸಿಪಾಲಿಟಿಗಳ ಸಂಖ್ಯೆ	ಮುನ್ಸಿಪಾಲಿಟಿಗಳ ಹೆಸರು	1931ನೇ ಖಾನೇಶುಮಾರಿ ಪ್ರಕಾರ ಜನ ಸಂಖ್ಯೆ	1938–39ರಲ್ಲಿ ಉತ್ಪತ್ತಿ ರೂಪಾಯಿಗಳಲ್ಲಿ	1937-38 ರಲ್ಲಿ ಇದ್ದ ಶಾಲೆಗಳು (ಹುಡುಗಿಯರಿಗೆ ಮತ್ತು ಹುಡುಗರಿಗೆ)
ಅನಂತಪುರ 3	1 ಅನಂತಪುರ	15,078	99,352	9
	2 ಹಿಂದುಪುರ	14.211	155,828	15
	3 ತಾಡ್ಪತ್ರಿ	12.620	73,390	8
ಉತ್ತರ ಆರ್ಕಾಡು 6	4 ಗುಡಿಯಾಟಂ	34,688	97,609	11
	5 ತಿರುಪತ್ತೂರು	18,299	91,897	15
	6 ತಿರುವನ್ನಮಲೈ	27,480	124.003	13
	7 ವಣಿಯಾಂಬಡಿ	22,940	68,437	9
	8 ವೆಲ್ಲೂರು	57,265	295,729	26
	9 ವಲಾಜಪೇಟೆ	11,102	56,652	7
ದಕ್ಷಿಣ ಆರ್ಕಾಡು 3	10 ಚಿದಂಬರಂ	25,093	123,042	12
	11 ಕಡಲೂರು	57,358	234,832	32
	12 ವಿಲ್ಲುಪುರಂ	20,127	91,175	9
ಬಳ್ಳಾರಿ 3	13 ಆದೋನಿ	35,635	147.862	18
	14 ಬಳ್ಳಾರಿ	47,573	336,954	15
	15 ಹೊಸಪೇಟೆ	21,673	122,384	6
ಚೆಂಗಲ್ಪಟ್ಟು 3	16 ಚೆಂಗಲ್ಪಟ್ಟು	14,358	84,707	9
	17 ಕಂಜೀವರಂ	65,258	293,873	28
	18 ಸಯ್ಯದಪೇಟೆ	33,066	181,281	11
ಚಿತ್ತೂರು 2	19 ಚಿತ್ತೂರು	22,018	92,880	9
	20 ತಿರುಪತಿ	19,138	88,807	5
ಕೊಯಮುತ್ತೂರು 6	21 ಕೊಯಮುತ್ತೂರು	95,198	926.919	17
	22 ಧರ್ಮಪುರಂ	18,218	76,768	8
	23 ಈರೋಡು	30,836	220,436	14
	24 ಪೊಲ್ಲಾಚಿ	22,112	285,227	10
	25 ತಿರುಪ್ಪೂರ್	18,059	311,930	14
	26 ಉಡಾಮಲ್ ಪೇಟ	13,684	98,300	8
ಕಡಪಾ 2	27 ಕಡಪ	22,602	170,997	22
	28 ಪ್ರೊದ್ದತ್ತೂರು	20,124	95.986	22
ಪೂರ್ವ ಗೋದಾವರಿ 3	29 ಕೋಕನಾಡು	65,952	402,900	30
	30 ಪೆದ್ದಾಪುರಂ	17,338	49,966	7
	31 ರಾಜಮಹೇಂದ್ರಿ	53,526	330,697	43
ಪಶ್ಚಿಮ ಗೋದಾವರಿ 2	32 ಎಲ್ಲೋರ	57,342	317,196	27
	33 ಪಾಲಕೋಲ	60,904	123,520	10
ಗುಂಟೂರು 5	34 ಚಿರಲಾ	18,853	—	5
	35 ಗುಂಟೂರು	65,179	333,961	25
	36 ನರಸರಾಯ ಪೇಟೆ	15,403	80,147	8
	37 ಸಿಂಗೋಲ್	16.672	70,725	9
	38 ತೆನ್ನಾಲಿ	34,580	149,325	17
ದಕ್ಷಿಣ ಕನ್ನಡ 2	39 ಮಂಗಳೂರು	66,756	256,308	19
	40 ಉಡುಪಿ	17,250	49,629	6
ಕೃಷ್ಣಾ 3	41 ಬೆಜ್ವಾಡ	60,427	665,493	33
	42 ಗುಡಿವಾಡಾ	13,535	66,413	5
	43 ಮುಸಲಿಪಟಂ	56,928	282,532	18
ಕರ್ನೂಲು 2	44 ಕರ್ನೂಲು	35,314	258,793	17
	45 ನಂದ್ಯಾಲ	22,603	113,459	12
ಮಧುರಾ 6	46 ಬೊಡಿನಾಯಕನೊಡ್	27,036	69,343	5
	47 ಡಿಂಡಿಗಲ್ಲು	43,617	230,526	15
	48 ಕೊಡಿಕನಾಲ್	6,523	131,035	2
	49 ಮಧುರಾ	181,884	14,86,686 (1937—38)	64
	50 ಪಳ್ನಿ	18,899	91,312	4
	51 ಪೆರಿಯಾಕುಳಂ	23,004	84,900	5
ಮಲಬಾರು 5	52 ಕಲ್ಲಿಕೋಟೆ	99,273	448,769	39
	53 ಕಣ್ಣಾನೂರು	34,236	128,951	13
	54 ಕೊಚ್ಚಿನ್	22,576	118,029	9
	55 ಪಾಲ್ಘಾಟು	49,084	156,864	21
	56 ತಲಚೇರಿ	30,349	125,244	20
ನೆಲ್ಲೂರು 1	57 ನೆಲ್ಲೂರು	45,895	251,147	30
ನೀಲಗಿರಿ 2	58 ಕೂನೂರು	14,326	278,119	7 (ಹುಡುಗರ ಶಾಲೆಗಳು)
	59 ಉಟಕಮಂಡ	24,701	498,844	14
ರಾಮನಾಡು 5	60 ಕರ್ರ್ಯಾಕುಡಿ	21,672	159,829	5
	61 ಶಿವಕಾಶಿ	15,212	43,444	4
	62 ಶ್ರೀ ವಲ್ಲಿಪುತ್ತೂರು	32,335	74,734	8
	63 ದೇವಕೋಟೆ	20,398	115,978	6
	64 ವಿರುಧನಗರ	33.081	242,849	10
ಸೇಲಂ 1	65 ಸೇಲಂ	102,179	640,928	44
ತಂಜಾವೂರು 6	66 ಕುಂಭಕೋಣಂ	62,317	335,417	28
	67 ಮನ್ನಾರುಗುಡಿ	22,764	59,448	10
	68 ಮಾಯಾವರಂ	31,887	133.678	22
	69 ನಾಗಪಟಾಂ	48,527	214,544	20
	70 ತಂಜಾವೂರು	66,889	379,235	22
	71 ತಿರುವರೂರು	20,371	770,82	8
ತಿನ್ನವೆಲ್ಲಿ 3	72 ಪಾಲಂಕೊಟ್ಟಾ	51,990	125,351	10
	73 ತಿನ್ನವೆಲ್ಲಿ	57,056	227,897	26
	74 ಟ್ಯುಟಿಕೋರಿನ್	60,395	380,11	11
ತಿರುಚಿನಾಪಳ್ಳಿ 3	75 ಶ್ರೀರಂಗಂ	24,663	106,824	11
	76 ಕಾರೂರು	19,850	157 317	10
	77 ತಿರುಚಿನಾಪಳ್ಳಿ	142,843	857,364	21
ವಿಶಾಖಪಟ್ಣಂ 5	78 ಅನಕಪ್ಪಲೆ	23,376	110,839	7
	79 ಬಿಮ್ಲಿಪಟಾಂ	9,629	42.214	7
	80 ಚಿಕಾಕೋಲೆ	16,588	87,744	12
	81 ವಿಶಾಖಪಟಂ	57,303	338,564	23
	82 ವಿಜಯನಗರಂ	44,696	248.480	15
ಜುಮ್ಲಾ	....	3,101,7 5	—	1,274

ಭೂಲೋಕದ ವಿವಿಧ ಮತಗಳೂ ಅವುಗಳ ಸಂಖ್ಯೆಯೂ

ರೋಮನ್ ಕಥೋಲಿಕರು	331.500 000
[illegible]	114,000,000
ಪ್ರೊಟೆಸ್ಟಾಂಟರು	206 900,000
ಯೆಹೂದ್ಯರು	15,315,359
ಮುಸಲ್ಮಾನರು	209,020,000
ಬೌದ್ಧರು	150.180,000
ಹಿಂದುಗಳು	230,150,000
ಕನ್ಫ್ಯೂಸಿಯನ್. ಟಾವೋಯಿಸ್ಟ್	350,600,000
ಸಂಟೊಯಿಸ್ಟ್	52,000.000
ಎನಿಮಿಸ್ಟ್	135,650,000
ವರ್ಗೀಕರಿಸಲ್ಪಡದೆ ಇದ್ದ ಮತಗಳು	50,870,000
ಜುಮ್ಲಾ	1,81 ,185,359

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾಷೆಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1931ನೇ ಖಾನೇಶುಮಾರಿಯಂತೆ, ಬೇರೆ ಬೇರೆ ಭಾಷೆಗಳನ್ನು ಮಾತಾಡುವವರು ಈ ಕೆಳಗಿನಂತಿರುವರು:—

ತಮಿಳು:	1,681
ತೆಲುಗು:	1,025
ಮಲೆಯಾಳಿ:	298,743
ಒರಿಯಾ:	7
ಕನ್ನಡ:	244.552
ಹಿಂದೂಸ್ತಾನಿ:	21.241
ಇತರ ಭಾಷೆಗಳು:	804,992
ದಕ್ಷಿಣ ಕನ್ನಡದ ಜನಸಂಖ್ಯೆ:	1,372,241

ಪ್ರಪಂಚದ ಜನಾಂಗಗಳು

ಮಾನವಕೋಟಿಯನ್ನು ಐದು ಜನಾಂಗಗಳನ್ನಾಗಿ ವರ್ಗೀಕರಿಸಿರುವರು. (1) ಕೊಕೆಸಿಯನ್ (2) ಮೊಂಗೊಲಿಯನ್ (3) ನಿಗ್ರೋ (4) ಮಲಯ (5) ಅಮೇರಿಕನ್. (ಇವು ಆಂಗ್ಲರು ನಿಶ್ಚೈಸಿದ ಜನಾಂಗಗಳಾಗಿವೆ.)

(1) ಕೊಕೆಸಿಯನ್ ಅಥವಾ ಹಿಂದೂ ಐರೋಪ್ಯ ಜನಾಂಗ:—

ಇವರು ಬಿಳಿಯ ಬಣ್ಣದವರು. ಯುರೋಪ್ ಮೂಲನಿವಾಸಿಗಳು, ಪರ್ಶಿಯನರು, ಯೆಹೂದ್ಯರು, ಅರಬಿಯವರು, ಹಿಂದುಗಳು, ಅಫಘಾನರು ಮತ್ತು ಉತ್ತರ ಆಫ್ರಿಕದ ಜನರು ಇಷ್ಟು ಜನರ ರಕ್ತಕೂಡಿ ಈ ಹೊಸ ಜನಾಂಗವು ಉಂಟಾಯಿತು. ಇವರಲ್ಲಿ ಅಮೇರಿಕ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮುಂತಾದ ಖಂಡಗಳ ಯುರೋಪಿಯಾನರ ವಂಶಜರೂ ಕೂಡಿರುತ್ತಾರೆ.

(2) ಮೊಂಗೊಲಿಯನ್ ಜನಾಂಗ:—

ಇವರು ಹಳದಿ ವರ್ಣದವರು. ಚೀನಿಯರು, ಜಪಾನಿಯರು, ಸಯಾಮಿಗಳು, ಬರ್ಮಿಯರು, ಟಿಬೇಟಿಯಾನರು ಮತ್ತು ಕೊರೆಯಾನರು, ಇವರಲ್ಲದೆ ಲೆಪ್ಲಂಡಿನವರು, ಫಿನ್ನರು, (ಮಾಗ್ಯಾರರು, (ಹಂಗೇರಿ) ಟಾರ್ಟಾರರು, ಟರ್ಕಿಯರು ಮತ್ತು ರಷ್ಯನರು. ಇವರೇ ಮೊದಲಾದ ಮೂಲ ಜನಾಂಗಗಳಿಂದ ಮೊಂಗೊಲಿಯನ್ ಜನಾಂಗವು ಹುಟ್ಟಿದ್ದಾಗಿರುತ್ತದೆ.

(3) ನಿಗ್ರೋ ಜನಾಂಗ:—

ಇವರು ಬೂದು ಬಣ್ಣದವರು. ಸಹಾರಾ ಮರುಭೂಮಿಯ ದಕ್ಷಿಣ ಭಾಗದಲ್ಲಿ ವಾಸಿಸುವ ಆಫ್ರಿಕದ ಮೂಲ ನಿವಾಸಿಗಳಿಂದ ಈ ಜನಾಂಗವು ತಲೆದೋರಿತು. ಜೊತೆಗೆ ಆಸ್ಟ್ರೇಲಿಯದ, ಟೆಸ್ಮಾನಿಯದ ಮತ್ತು ಮಲಯಾ ದ್ವೀಪಗಳ ಮೂಲನಿವಾಸಿಗಳು ಈ ಜನಾಂಗದಲ್ಲಿ ಬೆರೆದಿರುತ್ತಾರೆ.

(4) ಅಮೇರಿಕದ ರೆಡ್ ಇಂಡಿಯಾನರು:—

ಇವರು ರಕ್ತ ವರ್ಣದವರು. ಇವರು ಅಮೇರಿಕದ ಆದಿಯ ಮೂಲ ನಿವಾಸಿಗಳು.

ಮೊಂಗೊಲಿಯಾನರು	ಆಸ್ಯಾ	680,00),000
ಕೊಕೆಸಿಯಾನರು	ಯುರೋಪು ಮತ್ತು ಆಸ್ಯಾ	725,000,000
ನಿಗ್ರೋ ಜನರು	ಉತ್ತರ ಆಫ್ರಿಕಾ	100,000,000
ಸೆಮೆಟಿಕ್	ಉತ್ತರ ಅಮೇರಿಕಾ	100,000,000
ಮಲಯನ್	[illegible]ಯಾ ಮೊದಲಾದ ಕಡೆಗಳಲ್ಲಿ	104,500,000
ರೆಡ್ ಇಂಡಿಯನ್ ಮೊದಲಾದವರು	ಅಮೇರಿಕಾ	30.000,000

ನಕ್ಷತ್ರಗಳ ಸಂಖ್ಯೆ

ವಿದ್ವಾಂಸರಾದ ಜ್ಯೋತಿಷ್ಕರು ಮನುಷ್ಯರು ಸ್ವಾಭಾವಿಕ ತಮ್ಮ ದೃಷ್ಟಿಯಿಂದ ಕಾಣಬಲ್ಲ ನಕ್ಷತ್ರಗಳ ಸಂಖ್ಯೆಯು ಬರೇ 7000 ಎಂತ ನಿಷ್ಕರ್ಷೆ ಮಾಡಿರುತ್ತಾರೆ. ಆದರೆ ದೂರದರ್ಶಕ ಯಂತ್ರದಿಂದ ಪರೀಕ್ಷಿಸಿದಾಗ, ಜೆ. ಇ. ಗೋರ್ ಎಂಬ ಆಂಗ್ಲ ಪರಿಶೋಧಕರಿಗೆ 70,000,000 ನಕ್ಷತ್ರಗಳು ಕಂಡುಬಂದಿವೆ. ನ್ಯೂಕೊಂಬ್ ಮತ್ತು ಯಂಗ್ ಎಂಬ ಇನ್ನಿಬ್ಬರು ವಿಜ್ಞಾನಿಗಳಿಗೆ, 100,000,000 ಕಂಡುಬಂದಿವೆ. ಆದರೆ ಇತ್ತೀಚೆಗಿನ ಶೋಧನೆಗಳಲ್ಲಿ ನಕ್ಷತ್ರಗಳ ಸಂಖ್ಯೆಯು 1,600,000,000 ವರೆಗೆ ಮುಟ್ಟಿದೆ.

ರೈಲ್ವೆಗಳ ಐಸ್ ಉತ್ಪತ್ತಿ

ವರ್ಷ	ಉತ್ಪತ್ತಿ ರೂ.
1925—26	1,13,39,21
1926—27	1,12,35,66
1927—28	1,18,26.19
1928—29	1,18,86,82
1929—30	1,16,08,14
1930—31	1,05,57,04
1931—32	97,20,56
1932—33	96,20,56
1933—34	99,57,65
1934—35	1,02,81,07
1935—36	1,03,84,17

1938—39ರಲ್ಲಿ ಮದ್ರಾಸ್ ಸರಕಾರಕ್ಕೆ ವ್ಯಾಪಾರ ತೆರಿಗೆ (Excise) ಯಿಂದಾದ ಉತ್ಪತ್ತಿ

ಜಿಲ್ಲೆಗಳು	ವ್ಯಾಪಾರ ತೆರಿಗೆಯ ಉತ್ಪತ್ತಿ— ರೂಪಾಯಿಗಳು
ವಿಶಾಖಪಟ್ನಂ	21.68,352
ಪೂರ್ವಗೋದಾವರಿ	23,13,765
ಪಶ್ಚಿಮಗೋದಾವರಿ	14,12,140
ಕೃಷ್ಣಾ	18,87,182
ಗುಂಟೂರು	13,11,016
ನೆಲ್ಲೂರು	6,02,415
ಕಡಪ	3,05,591
ಅನಂತಪುರ	11,99,376
ಬಳ್ಳಾರಿ	10,84,614
ಕರ್ನೂಲು	13,38,521
ಮದ್ರಾಸ್	37,89,893
ಚೆಂಗಲ್ಪಟ್ಟು	18,62,523
ಚಿತ್ತೂರು	4,20,882
ಉತ್ತರ ಆರ್ಕಾಡು	21.69,966
ದಕ್ಷಿಣ ಆರ್ಕಾಡು	18,38,052
ತಂಜಾವೂರು	26.43,232
ತಿರುಚಿನಾಪಳ್ಳಿ	17,72,418
ಮಧುರಾ	13,47,061
ರಾಮನಾಡು	8,89.676
ತಿನ್ನವೆಲ್ಲಿ	12,23.181
ಕೊಯಮುತ್ತೂರು	28.86.661
ನೀಲಗಿರಿ	4.87,713
ಸೇಲಂ	19,375
ದಕ್ಷಿಣ ಕನ್ನಡ	10,09,733
ಮಲಬಾರು	12,34,793
ಜುಮ್ಲಾ	3,72,18,130
ಇತರ ಖರ್ಚುಗಳನ್ನು ಕಳೆದು ಉಳಿದ ವ್ಯಾಪಾರ ತೆರಿಗೆ	3,39,30,306

ಪ್ರಯಾಣಿಕರಿಂದ ಜಮೆಯಾದ ಉತ್ಪತ್ತಿ

ವರ್ಷ	ಉತ್ಪತ್ತಿ ರೂ.
1930—31	34,29.75
1931—32	31,35,44
1932—33	31,32,20
1933—34	30,10,90
1934—35	30,34.97

ಮತಗಳ ಪ್ರಕಾರ ಜನಸಂಖ್ಯೆ (1931ರ ಜಾನೇಶುವಾರಿಯಂತೆ)

(Hand-book of information on the Administration of Madras Presidency 1939)

ಜಿಲ್ಲೆಗಳು	ಜನಸಂಖ್ಯೆ	ಹಿಂದುಗಳು	ಹಿಂದುಳಿದವರು Depressed class	ಮಾಹಮ್ಮದೀಯರು	ಕ್ರೈಸ್ತರು	ಇತರರು
ವಿಶಾಖಪಟ್ಟಂ	3,607,948	3,400,922	362,345	25,934	34,124	146,968
ಪೂರ್ವ ಗೋದಾವರಿ	1,920,582	1,855,439	387,387	29,842	29,577	5,724
ಪಶ್ಚಿಮ ಗೋದಾವರಿ	1,223,056	1,134,560	250,476	25,602	62,661	233
ಕೃಷ್ಣಾ	1,254,208	1,089,523	202,805	63,007	101,289	389
ಗುಂಟೂರು	2,035,660	1,639 834	163,222	157,646	237,772	408
ನೆಲ್ಲೂರು	1,486,222	1,317,420	261,810	103,192	65,593	17
ಕಡಪಾ	9,49,397	788,192	111,542	124,481	36,667	57
ಕರ್ನೂಲು	1,024,961	805,032	111,730	145,561	74,255	113
ಬಳ್ಳಾರಿ	969,774	857,425	108,869	103,804	7,113	1,432
ಅನಂತಪುರ	1,050,411	943,768	141,062	98,954	6,546	1.143
ಮದ್ರಾಸ್	647,230	520,161	84,906	70,031	54,114	2,924
ಚೆಂಗಲ್ಪಟ್ಟು	1,655,115	1,576,137	467,973	37,004	40,726	1,248
ಚಿತ್ತೂರು	1,447,103	1,356,384	245,027	80,048	10,645	26
ಉತ್ತರ ಆರ್ಕಾಡು	2,266,989	2,078,222	405,130	136,035	43,117	9,615
ಸೇಲಂ	2,433,972	2,348,325	324,242	61,882	23,667	98
ಕೊಯಮುತ್ತೂರು	2,448,064	2,341,667	349,965	56,364	46,840	193
ದಕ್ಷಿಣ ಆರ್ಕಾಡು	2,454.507	2,301,513	648,467	76,050	72,007	4,937
ತಂಜಾವೂರು	2.385,920	2,148,018	523,461	145,620	91,658	624
ತಿರುಚಿನಾಪಳ್ಳಿ	1,913,245	1,737.105	331,567	72,506	103,308	326
ಮಧುರಾ	2,195,747	2,021,336	341,743	90,587	83,769	55
ರಾಮನಾಡು	1,838,955	1,619,743	268,126	121,251	97,929	32
ತಿನ್ನವೆಲ್ಲಿ	2,046,907	1,698,950	329,239	120,335	227,604	18
ನೀಲಗಿರಿ	169,330	131.053	30,363	10,958	26,601	718
ಮಲಬಾರು	3,533,944	2,303,784	359,823	1,163,453	65,894	843
ದಕ್ಷಿಣ ಕನ್ನಡ	1,372,241	1,061,187	148,850	180,210	122,216	8,628
ಮೊತ್ತ	46,740,107	41,277,370	7,268,117	3,305,937	1.774,276	382,524
ಇಡೀ ಪ್ರಾಂತ್ಯದ ಜನಸಂಖ್ಯೆಯು		88·31%		7·07%	3 80%	

ಪ್ರಪಂಚದ ಬೇರೆಬೇರೆ ರೈಲ್ವೆ ದಾರಿಗಳು ತೆರೆಯಲ್ಪಟ್ಟ ತಾರೀಕುಗಳು

ಬಿ. ಎನ್. ಡಬ್ಲ್ಯು. ಆರ್.	2— 4—1884
ಬಿ. ಎನ್. ಆರ್.	6— 4—1880
ಈ. ಬಿ. ಆರ್.	2— 1—1862
ಈ. ಐ ಆರ್.	15— 8—1854
ಜಿ. ಐ. ಪಿ. (ಇದರ ಮೊದಲನೇ ಶಾಖೆಯು ಮುಂಬಾಯಿಯಿಂದ ಥಾನೆಯ ವರೆಗೆ ಮಾತ್ರ ತೆರೆಯಲ್ಪಟ್ಟಿತ್ತು.)	18— 4—1853
ಎ. ಬಿ. ಆರ್.	1— 7—1895
ಜಿ. ಬಿ. ಸಿ. ಐ.	10— 2—1860
ಬರ್ಮಾ ರೈಲ್ವೇಸ್	1— 5 - 1877
ಜೋದಪುರ್	24— 6—1862
ಎಮ್. ಎಸ್. ಎಮ್.	1— 7—1855
ನೈಜಾಮ್	9—10—1874
ಎಸ್. ಡಬ್ಲ್ಯು. ಆರ್.	13— 5—1867
ರೋಹಿಲ್ ಖಂಡ್ ಕ್ಯುಮಾಒ	12—10—1884
ಎಸ್. ಐ. ಆರ್.	23— 5—1860

ರೈಲ್ವೆಗಳಿಂದ ಒದಗಿದ ಅಫಘಾತಗಳು

ವರ್ಷ	ಕೊಲ್ಲಲ್ಪಟ್ಟವರು	ಜಖಂಗೊಂಡವರು
1930—31	3,180	8,547
1931—32	2,888	9,200
1932—33	2,757	9,509
1933—34	2,826	10,982
1934—35	3,031	10.252

ಅಫೀಮು ಸಂಬಂಧ ಆದಾಯ ಮತ್ತು ಖರ್ಚು

ವರ್ಷ	ಆದಾಯ	ಖರ್ಚು
1925—26	ರೂ. 4,14 99.581	ರೂ. 2.11.47.144
1926—27	„ 4 33,13,748	„ 1.00,44,285
1927—28	„ 3,94.52,254	87,00,825
1928—29	„ 3,26,59,423	54,95,268
1929—30	„ 3,04.09,788	48,81.273
1930—31	„ 2,53,27.460	„ 74,36,483
1931—32	„ 2,07,41,533	79.77,226
1932—33	89,86.152	„ 83,87,479
1933—34	1,58,96,779	„ 70,81,569

ನಾಣ್ಯಗಳಾಗಿ ಮಾರ್ಪಟ್ಟ ಹಣದ ಮೌಲ್ಯ

ವರ್ಷ	ಬೆಳ್ಳಿ ರೂಪಾಯಿ	ನಿಕ್ಕೆಲ್ ರೂಪಾಯಿ	ತಾಮ್ರ ರೂಪಾಯಿ	ಸತುವು ರೂಪಾಯಿ
1925—26	64,33,512	45,13,084	2,500	6.52,970
1926—27	50,49,436	28,92,326	—	7,21,909
1927—28	10,15,926	26,[illegible]3,550	—	3,51,718
1928—29	52,76,573	32,15,475	—	7.45,490
1929—30	2,18,33,944	46,63,500	—	11,38,600
1930—31	[illegible]9,83,883	19,44,000	2,656	8,00,312
1931—32	49,00,000	—	—	1 89,700
1932—33	77,43,199	85,000	—	2,40,100
1933—34	20.28,263	18.08,000	1,520	10,27.700

ಹತ್ತು ಲಕ್ಷ ರೂಪಾಯಿಯ ಪೆನ್ಸಿಲುಗಳು

ನಮ್ಮ ದೇಶಕ್ಕೆ ವರುಷಪ್ರತಿ ಹತ್ತು ಲಕ್ಷ ರೂಪಾಯಿಗಳ ಪೆನ್ಸಿಲುಗಳು ಪರದೇಶಗಳಿಂದ ಬರುತ್ತಿವೆ.

ವೃತ್ತಿಗಳು (1931ನೆಯ ಖಾನೇಶುಮಾರಿ ಪ್ರಕಾರ)

(Hand book of information on the Administration of the Presidency of Madras 1939)

[ಎಂಬ ಪುಸ್ತಕದ ಆಧಾರದಿಂದ]

ಜಿಲ್ಲೆಗಳು	ಜನಸಂಖ್ಯೆ	ದುಡಿಯುವವರು ಮುಖ್ಯ ವೃತ್ತಿಗಳಿಂದ ಮತ್ತು ಉದ್ಯೋಗಗಳಿಂದ	ದುಡಿಯುವವರು ವೃತ್ತಿಗಳಲ್ಲಿ ಮತ್ತು ಉದ್ಯೋಗಗಳಲ್ಲಿ				
			ಕೃಷಿ	ಕೈಗಾರಿಕೆ	ವ್ಯಾಪಾರ	ಉದ್ಯೋಗ (Profession)	ಇತರ ರೀತಿಯಿಂದ
ವಿಶಾಖಪಟ್ನಂ	3,607,948	2,312,169	1,006,457	226,150	73,045	31,016	915,501
ಪೂರ್ವ ಗೋದಾವರಿ	1,920,582	1,154,265	445,510	118,554	42,278	20,860	527,003
ಪಶ್ಚಿಮ ಗೋದಾವರಿ	1,223,056	739,219	388,316	79,025	23,439	11,947	236,492
ಕೃಷ್ಣಾ	1.254,208	737,797	345,137	89 502	26,354	16,444	260.360
ಗುಂಟೂರು	2.035,660	1,219,154	579,162	145,552	43,589	23,710	427,141
ಕರ್ನೂಲು	1,024.961	533,048	334,143	52,324	19,914	10,456	116,211
ಬಳ್ಳಾರಿ	1,024.961	533,048	334,143	52,324	19,914	10,456	116.211
ಅನಂತಪುರ	1,050,411	631,371	350,326	55,786	21,360	8,844	195,055
ಕಡಪಾ	949,397	546.177	258.433	56,961	19,227	8,370	203,186
ನೆಲ್ಲೂರು	1,486,222	901,846	452,747	81,440	28,485	11,843	327,331
ಮದ್ರಾಸ್	647,230	321,889	9,008	75,350	35,049	25,329	177,163
ಚೆಂಗಲ್ಪಟ್ಟು	1,655,115	879,661	341,500	93,682	35 422	18,922	390,135
ದಕ್ಷಿಣ ಆರ್ಕಾಡು	2,454.507	1,327,482	642,167	76,495	33,574	20,539	554,707
ಚಿತ್ತೂರು	1,447,103	893.827	444,702	60 727	25,416	9,906	352,986
ಉತ್ತರ ಆರ್ಕಾಡು	2,266,989	1,712,762	552,568	98,737	41,708	21,196	458,553
ಸೇಲಂ	2,433,972	1,340,318	718,917	123,109	36,815	18,937	442,540
ಕೊಯಮುತ್ತೂರು	2.445,064	1,236,566	615,632	150,003	53,960	25,440	392,431
ತಿರುಚಿನಾಪಳ್ಳಿ	1,913,245	1,111,737	585,893	102,291	37,908	22,205	363,439
ತಂಜಾವೂರು	2,385,920	1,346,928	527,799	109,949	61,923	42,830	604,427
ಮಧುರಾ	2,195,747	1,181.069	487,642	107,772	54,452	21,996	509,207
ರಾಮನಾಡು	1,838.955	966,750	361,072	77,701	45,333	16,599	436,045
ತಿನ್ನವೆಲ್ಲಿ	2,046,907	1,081,872	474,978	134,501	53,331	25,111	393,951
ಮಲಬಾರು	3,533 944	1,372,377	456,845	227,156	99,578	52,490	536,308
ದಕ್ಷಿಣ ಕನ್ನಡ	1,372,241	773,798	381,925	65,364	35,886	16,369	274,224
ನೀಲಗಿರಿ	169,330	105.971	46,097	8,778	3,117	2,847	45,132
ಮೊತ್ತ	46,740,107	25,904,490	11,922,695	2,574,247	1022,250	516,224	9,869,074

ಪ್ರಪಂಚದ ಅತ್ಯುನ್ನತ ಪರ್ವತಗಳು

ಭೂಲೋಕದಲ್ಲಿ ಅತ್ಯುನ್ನತ ಪರ್ವತ ಮೌಂಟ್ ಎವರೆಸ್ಟ್ (29,002 ಅಡಿ ಎತ್ತರ)

ಬ್ರಿಟಿಷ್ ಐಲ್ಸ್‌ನಲ್ಲಿ	ಬೆನ್‌ನೆವಿಸ್	(4,406 ಅಡಿ ಎತ್ತರ)
ಯೂರೋಪಿನಲ್ಲಿ	ಮೌಂಟ್ ಎಲ್ಬ್ರೂಜ್ (ರಷ್ಯ)—	(18,465 ಅಡಿ ಎತ್ತರ)
ಏಷ್ಯದಲ್ಲಿ	ಮೌಂಟ್ ಎವರೆಸ್ಟ್	(29.002 ಅಡಿ ಎತ್ತರ)
ಆಫ್ರಿಕಾದಲ್ಲಿ	ಕಿಲಿಮಂಜಾರೊ	(19,700 „)
ಉತ್ತರ ಅಮೇರಿಕಾದಲ್ಲಿ	ಮೌಂಟ್ ಕಿನ್ಲಿ	(20,464 „)
ದಕ್ಷಿಣ ಅಮೇರಿಕಾದಲ್ಲಿ	ಎಕೊಂಕಾಕ್ವಾ	(23,080 „)
ಆಸ್ಟ್ರೇಲಿಯಾದಲ್ಲಿ	ಮೌನಾಕಿಯಾ	(13,953 „)

ಜಗತ್ತಿನ ಮಹಾಸಾಗರಗಳು

ಸಾಗರ	ಚದರಳತೆ	ಅತೀ ಕಡಿಮೆ ಆಳ ಇದ್ದಲ್ಲಿ	ಅತೀ ಹೆಚ್ಚು ಆಳ ಇದ್ದಲ್ಲಿ
ಅಟ್ಲಾಂಟಿಕ್ ಸಾಗರ (ಭೂಮಧ್ಯ ಸಮುದ್ರ ಕೂಡಿ)	34,301,400 ಚ. ಮೈ.	10,370 ಅಡಿ	27,971 ಅಡಿ
ಪ್ಯಾಸಿಫಿಕ್ ಸಾಗರ	67,699,630 „	12,564 „	35,400 „
ಹಿಂದೂಸಾಗರ	27,707,600 „	11,470 „	22,968 „
ಆರ್ಕಟಿಕ್ ಸಾಗರ (ಉತ್ತರ)	5,785,000 „	2 700 „	15,910 „
ದಕ್ಷಿಣ ಆರ್ಕಟಿಕ್ ಸಾಗರ	5,731,350 „	4,920 „	18,850 „

1937—38ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳೆಗಳು

ಜಿಲ್ಲೆಯ ವಿಸ್ತೀರ್ಣ (ಎಕರೆಗಳಲ್ಲಿ)	2,573,509 ಎಕರೆ
ವ್ಯವಸಾಯದ ವಿಸ್ತೀರ್ಣ	563,348
ಭತ್ತದ ಬೆಳೆ	587,971 ,,
ಧಾನ್ಯಾದಿಗಳು	52,818 ,,
ಹತ್ತಿ	190 ,,
ತೈಲ ಬೀಜಗಳು	50,940 ,,
ಇತರ ಬೆಳೆಗಳು	73,078 ,,

1931 ನೇ ಖಾನೇಶುಮಾರಿಯಂತೆ ದಕ್ಷಿಣ ಕನ್ನಡ ಜಿಲ್ಲೆಯ ಪಟ್ಟಣಗಳು ಇತ್ಯಾದಿ

ಜಿಲ್ಲೆಯ ವಿಸ್ತೀರ್ಣ	4,021 ಚದರ ಮೈಲುಗಳು
ಪಟ್ಟಣಗಳು	8
ಮುಖ್ಯ ಪಟ್ಟಣ	ಮಂಗಳೂರು
ಗ್ರಾಮಗಳು	800
ಅಕ್ಷರಜ್ಞರು ಸೇಕಡಾ	10·7
ಒಂದು ಚದರ ಮೈಲಿಗೆ ಜನರು	341

ಮಧ್ಯ ಹಿಂದೂಸ್ಥಾನದ ಸಾರ್ವಜನಿಕ ಸಾಲ

ವರ್ಷ	ರೂ.
1930	9,55,17,84,364
1031	9,95,70,96,668
1932	10,34,76,35,021
1933	10,12,61,71,595

ಮದ್ರಾಸ್ ಪ್ರಾಂತ್ಯದ ಡಿಸ್ಟ್ರಿಕ್ಟ್ ಬೋರ್ಡುಗಳು

ಜಿಲ್ಲೆಗಳು	ಡಿವಿಜನುಗಳು	ವಿಸ್ತೀರ್ಣ (ಚದರ ಮೈಲುಗಳಲ್ಲಿ)	ಜನಸಂಖ್ಯೆ 1931ನೇ ಖಾನೇಶುಮಾರಿ ಪ್ರಕಾರ	1937–38ರಲ್ಲಿ ಪಂಚಾಯ್ತು ಬೋರ್ಡುಗಳು	1937–38ರಲ್ಲಿ ಎಲಿಮೆಂಟ್ರಿ ಮತ್ತು ಸೆಕೆಂಡರಿ ಶಾಲೆಗಳು	1937–38ರಲ್ಲಿ ಟ್ರಂಕ ರೋಡಿನ ಮೈಲೇಜು	1938–39 ಉತ್ಪತ್ತಿ
						ಮೈ. ಫ.	ರೂ.
ಅನಂತಪುರ	—	6,719	1 008,481	10	592	224—7	5,07,32
ಉತ್ತರ ಆರ್ಕಾಡು	—	4,648	2,104,926	15	609	166—3	9,00,87
ದಕ್ಷಿಣ ಆರ್ಕಾಡು	ಕಡ್ಡಲೂರು	1,6^9	1,040,533	11	484	65—0	10,20,69
	ಎಲ್ಲುಪುರು	2,518	1,313,945		483	71—0	
ಬಳ್ಳಾರಿ	—	5,713	865,029	10	374	110—6	4,86,767
ಚೆಂಗಲ್ಪಟ್ಟು	—	3,07	1,655,115	16	707	126—2	7,25,77
ಚಿತ್ತೂರು	—	5,901	1,457,103	8	498	169—3	6,08,190
ಕೊಯಮುತ್ತೂರು	ಕೊಯಮುತ್ತೂರು	2,857	1,132,777	3	468	127—0	15,31.845
	ಈರೋಡು	4,229	1,165,381	6	417	87—0	
ಕಡಪಾ	—	5,892	906,671	9	469	85—7	4.15 013
ಪೂರ್ವ ಗೋದಾವರಿ	ಕೋಕನಾಡು	1,508	944,460	21	538	49—5	12,29,365
	ರಾಜಮಹೇಂದ್ರಿ	909	735,593	4	452	11—5	
ಪಶ್ಚಿಮ ಗೋದಾವರಿ	ಎಲ್ಲೋರ	1,596	562,8[illegible]5	9	295	38—3	8,30,389
	ನರಸಪುರ	831	602,819	9	387	20—0	
ಗುಂಟೂರು	ಗುಂಟೂರು	1,854	849,412	9	421	31—1	12,63,604
	ಬಂಗೋಲ್	3,909	1,035,561	10	423	83—1	
ದಕ್ಷಿಣ ಕನ್ನಡ	—	4,021	18[illegible],933	3	600	106—1	6,70,641
ಕೃಷ್ಣಾ	ಬೆಜ್ವಾಡ	2,113	617,286	7	373	104—3	11,28,851
	ಕೃಷ್ಣಾ	1,4[illegible]4	550,017		413	19—1	
ಕರ್ನೂಲು	—	7,580	967,039	12	541	195—1	5,48,197
ಮಧುರಾ	—	4,907	1.894.797	28	(98	76—5	12,34,149
ಮಲಬಾರು	—	5.758	3,287,466	3	1195	135—3	12.95,882
ನೆಲ್ಲೂರು	ಉತ್ತರ	4,760	848,033	9	307	100—0	7,21,931
	ದಕ್ಷಿಣ	3,188	638,189		245	73—1	
ನೀಲಗಿರಿ	—	982	123,099	3	82	70—0	3,05,233
ರಾಮನಾಡು	ಉತ್ತರ	2,101	797,108	16	295	....	10,10,385
	ದಕ್ಷಿಣ	2.833	1,124,246	14	300	29—5	
ಸೇಲಮ್	ಧರ್ಮಪುರಿ	4,163	1,026,072	23	417	116—0	10,52,621
	ಸೇಲಂ	2,807	1,339,681		429	39—4	
ತಂಜಾವೂರ.	ಪೂರ್ವ	1,482	1,029,735	21	518	....	17,52,019
	ಪಶ್ಚಿಮ	2,245	1,204,215		529	....	
ತಿನ್ನವೆಲ್ಲಿ	ಉತ್ತರ	2,045	862.202	8	2[illegible]9	45—7	10,11,75[illegible]
	ದಕ್ಷಿಣ	2,281	1,186,705	20	278	28—3	
ತಿರುಚಿನಾಪಳ್ಳಿ	—	4,303	1,711,972	12	747	150—3	9,06,293
ವಿಶಾಖಪಟ್ಟಂ	ಬೊಬ್ಬಿಲಿ	2,465	1,162,934	13	231	102—5	14,11,236
	ವಿಶಾಖಪಟ್ಟಂ	2 412	1,176,966		543	86—0	
	ಚಿಕಾಕೋಲೆ	1,322	612,376		261	82—4	
					16 629	3026-1	

ಹಿಂದೂಸ್ಥಾನದ ಉತ್ಪತ್ತಿಗಳು ಕಾಫಿ

ವರ್ಷ	ಬೆಳೆಯಿಸುವ ಸ್ಥಳ ವಿಸ್ತೀರ್ಣ	ಹದಗೊಳಿಸಿದ ಕಾಫಿಯ ಮೊತ್ತ
1927—28	156,176 ಎಕ್ರೆ	35,563,321 ರಾತ್ಲು
1928—29	160,667 „	27,767,035 „
1929—30	163,516 „	39,423,908 „
1930—31	160,261 ಎಕ್ರೆ	32,972,967 ರಾತ್ಲು
1931—32	172,160 „	33,613,713 „
1932—33	176,495 „	33,037,051 „
1933—34	183,978 „	34,586,658 „
1934—35	185,480 „	32,775,865 „
1935—36	188,035 „	41,162,079 „



ರಾಷ್ಟ್ರೀಯ ಸ್ವಾತಂತ್ರ್ಯಾರ್ಜನೆಯ ಕಾರ್ಯದಲ್ಲಿ ಮಹಿಳೆಯರ ಸ್ಥಾನ

(ಲೇಖಕಿ: ಕುಮಾರಿ ರತ್ನಾಬಾಯಿ.)

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬಷ್ಟು ಕಠಿನ ನಿರ್ಬಂಧವನ್ನು ನಮ್ಮ ಸನಾತನರು ಸ್ತ್ರೀ ಸ್ವಾತಂತ್ರ್ಯದ ಮೇಲೆ ಇರಿಸಿದೆ. ಅದೇಕೋ ತಿಳಿಯದು. ಆದರೂ ಪುರಾಣೇತಿಹಾಸಗಳ ಕಾಲದಿಂದ ಇಂದಿನ ವರೆಗೂ ಭಾರತದ ಮಹಿಳೆಯರು ರಾಷ್ಟ್ರೀಯ ಸ್ವಾತಂತ್ರ್ಯಾರ್ಜನೆ ಅಥವಾ ರಾಷ್ಟ್ರೀಯ ಸ್ವಾತಂತ್ರ್ಯ ರಕ್ಷಣೆಯ ಕಾರ್ಯದಲ್ಲಿ ಪುರುಷರ ಸರಿಮಿಗಿಲೆನಿಸುವಷ್ಟು ರೀತಿಯಲ್ಲಿ ಧೈರ್ಯ ಸಾಹಸಗಳನ್ನು ತೋರಿಸಿದ್ದಾರೆ.

ರಾಮಾಯಣಕಾಲಕ್ಕೆ ಮೊದಲು ದಶರಥನ ದಿನಗಳಲ್ಲಿ ಅವನೊಂದು ಸಲ ಇಂದ್ರನ ಸಹಾಯಕ್ಕೆ ರಾಕ್ಷಸರ ವಿರೋಧವಾಗಿ ಯುದ್ಧಕ್ಕೆ ಹೋಗಿದ್ದನಷ್ಟೆ. ಆ ಯುದ್ಧದಲ್ಲಿ ದಶರಥನೊಡನೆ ರಾಣಿ ಕೈಕಯಿಯೂ ಹೋಗಿದ್ದಳೆಂದು ಪುರಾಣದಲ್ಲಿ ತಿಳಿದುಬರುತ್ತಿದೆ. ಆ ಘೋರ ಯುದ್ಧದ ಸಮಯದಲ್ಲಿ ದಶರಥನ ರಥದ ಗಾಲಿಯ ಕೀಲು ತಪ್ಪಲು ರಾಣಿಯು ತನ್ನ ಕೈಬೆರಳನ್ನೇ ತಳಿಗೂಟವನ್ನಾಗಿಟ್ಟು ರಾಜನನ್ನು ರಕ್ಷಿಸಿದಳೆಂದು ಕಥೆಯಲ್ಲಿ ಉಕ್ತವಾಗಿದೆ. ರಾಕ್ಷಸರೊಡನೆ ನಡೆದ ಆ ಮಹಾಭಯಂಕರವಾದ ಕಾಳಗದ ನಡುವೆ ರಾಣಿಯು ಅಂಜುಕುಳಿಯಾಗಿದ್ದರೆ ಹೋಗಲು ಸಾಧ್ಯವಿತ್ತೇ? ಅವಳಲ್ಲಿ ಯುದ್ಧವಿದ್ಯೆ, ಧೈರ್ಯ ಸಾಹಸಗಳು ಇಲ್ಲದಿರುತ್ತಿದ್ದರೆ ಆ ರಣರಂಗದಲ್ಲಿ ವೈರಿಗಳಿಂದ ಬರುತ್ತಿದ್ದ ಬಾಣಗಳನ್ನು ತಪ್ಪಿಸಲು ಸಾಧ್ಯವಾಗುತ್ತಿತ್ತೇ? ಆಕೆಯು ಸಕಲ ಯುದ್ಧ ವಿದ್ಯೆಗಳಲ್ಲಿ ಯೋಗ್ಯ ಶಿಕ್ಷಣ ಮತ್ತು ಅನುಭವ ಪಡೆದವಳಿದ್ದಿರಬೇಕೆಂದು ಇದರಿಂದ ವ್ಯಕ್ತವಾಗುತ್ತದೆ. ರಾಜರಾಣಿಯರನ್ನು ಹೆಚ್ಚಾಗಿ ಆದರ್ಶಕವಾಗಿಟ್ಟುಕೊಳ್ಳುವುದು ಸಮಾಜದ ಒಂದು ಪದ್ಧತಿ. ಅಂದಿಗೂ ಆ ಪದ್ಧತಿ ಇದ್ದಿರಬಹುದೆಂದು ಹೇಳುವಾಗ ದಶರಥನ ಕಾಲದ ಭಾರತದ ಮಹಿಳೆಯರು ತಮ್ಮ ರಾಣಿಯಂತೆ ಯುದ್ಧ ವಿದ್ಯೆಯಲ್ಲಿ ನುರಿತವರಿದ್ದಿರಬಹುದೆಂದು ಹೇಳಬರುತ್ತದೆ. ದಶರಥನ ಜೀವ ಬದುಕಿಸಿ ಯುದ್ಧದಲ್ಲಿ ಜಯವನ್ನುಂಟುಮಾಡಲು ಕಾರಣಳಾದ ಕೈಕಯಿ ರಾಣಿಯು ಅಂದಿಗೆ ಶೌರ್ಯ ಧೈರ್ಯ ಸಾಹಸಗಳಲ್ಲಿ ಅಂದಿನ ಸ್ತ್ರೀಯರಿಗೆ ಆದರ್ಶಕಳಾಗಿದ್ದಳೆಂದು ಹೇಳಲು ಅಡ್ಡಿಯಿಲ್ಲ.

ಭಾರತದ ಕಾಲಕ್ಕೆ ಬರುವಾಗ ಸ್ತ್ರೀಯರಲ್ಲಿ ಅಸಾಮಾನ್ಯ ಶಕ್ತಿಯನ್ನು ಕಾಣಬಹುದು. ಕೌರವನೊಡನೆ ಜೂಜಾಡಿ ಸೋತು ದಾಸರಾದ ಪಾಂಡವರನ್ನು ಆ ದಾಸ್ಯದಿಂದ ಮುಕ್ತರನ್ನಾಗಿ ಮಾಡಲು ದ್ರೌಪದಿಯೇ ಕಾರಣಳು. ಅಂದು ಸಭೆಯಲ್ಲಿ ತನ್ನ ವಸ್ತ್ರಾಪಹರಣವಾಗುತ್ತಿರಲು, ಕೇಶರಾಶಿಯು ಬಿಚ್ಚಿಹೋಗಲು, "ಈ ತುರುಬನ್ನು ಬಂಧಿಸಲು ಕೌರವನ ಮಡದಿಯರ ತುರುಬು ಬಿಚ್ಚಿರಬೇಕು. ಉಪಹಾಸ್ಯವನ್ನು ಗೈಯ್ದ ಕೌರವನ ಚಪ್ಪಾಳೆಯ ಸ್ಥಾನವಾದ ಉರುಭಂಗವಾಗಬೇಕು. ದುಶ್ಶಾಸನನ ಕರುಳೇ ಮಾಲೆ, ನೆತ್ತರೇ ಎಣ್ಣೆ ಸೇರದ ಮುಡಿಯನ್ನು ಕಟ್ಟಲಾರೆ" ಎಂಬ ಪ್ರತಿಜ್ಞೆಯನ್ನು ಮೊತ್ತ ಮೊದಲು ಮಾಡಿಕೊಂಡಳು. ಇದರ ಸಾಧನೆಗಾಗಿ ಭೀಮನನ್ನು ಹೊಡೆದೆಬ್ಬಿಸಿದಳು. ಹಾಗೆ ಇಡೀ ಭಾರತದ ಕಥೆಯ ಸಾರಥಿತನವನ್ನು ವಹಿಸಿದವಳು ದ್ರೌಪದಿ. ಪ್ರತೀಕಾರವನ್ನು ಬಗೆದವಳು ದ್ರೌಪದಿ. ಐದು ಮಂದಿಗಳನ್ನು ತನ್ನ ಮನೋರಥ ಸೂತ್ರದಲ್ಲಿ ಪೋಣಿಸಿದವಳು ದ್ರುಪದರಾಜ ನಂದಿನಿ. ಕೀಚಕನ ವಧೆ, ಭೀಮನ ಉದ್ಧಟತನ ಇವುಗಳೆಲ್ಲಾ ದ್ರೌಪದಿಯ ಮೂಲಕ, ಭಾರತದ ಕದನವು ಇವಳಿಂದ ಮೊಳೆಯಿತು. ಭಾರತದ ಮಹಿಳಾ ಸಂತಾನವು ಇಂತಹ ಅಭಿಮಾನವುಳ್ಳದು. ಈ ರೀತಿಯಿಂದ ಸ್ತ್ರೀಯರು ಮುಂದುವರಿದು ಬಂದುದೂ, ಮುಂದರಿಯಲು ಮಾರ್ಗ ದರ್ಶಕರಾದುದೂ ಚೆನ್ನಾಗಿ ಕಂಡುಬರುರುತ್ತವೆ.

ಇತಿಹಾಸಾಕಾಶದಲ್ಲಿ ನೋಡಿದರೆ ಪರಾಕ್ರಮದಿಂದ ಕಾದಾಡಿ ರಾಷ್ಟ್ರಕ್ಕೆ ಬಂದ ವಿಪತ್ತನ್ನು ಪರಿಹರಿಸಿದ ಸಾಹಸಿಗಳಾದ ಸ್ತ್ರೀತಾರೆಗಳು ಅಲ್ಲಲ್ಲಿ ಅತೀ ಶುಭ್ರವಾಗಿ ಮಿನುಗುತ್ತಿವೆ. ಅಕ್ಬರ ಚಕ್ರವರ್ತಿಯ ಕಾಲದಲ್ಲಿ ಮಧ್ಯಭಾರತವನ್ನು ಆಳುತ್ತಿದ್ದ ಮಹಾರಾಣಿ ದುರ್ಗಾವತಿಯು ಅಕ್ಬರನ ಕಡೆಯ ಸೈನ್ಯವನ್ನು ಇದಿರಿಸಿ ರಾಷ್ಟ್ರದ ಸ್ವಾತಂತ್ರ್ಯವನ್ನು ರಕ್ಷಿಸಿದಳು. ಕೊನೆಗೆ ಎರಡನೆಯ ಬಾರಿ ಮಹಾ ಬಲದಿಂದ ಕೂಡಿ ದುರ್ಗಾವತಿಯ ರಾಜ್ಯದ ಮೇಲೆ ದಂಡೆತ್ತಿ ಬಂದ ಅಕ್ಬರನ ಸೈನ್ಯವನ್ನು ಕಂಡು ತನ್ನ ಸೈನ್ಯದ ಬಲವು ಕಡಿಮೆಯಾಗಿದ್ದರೂ ಹೆದರಿ ಶರಣು ಹೋಗದೆ ಯುದ್ಧವನ್ನು ನಡೆಸಿ ವೀರ ಸ್ತ್ರೀಗೆ ಯೋಗ್ಯವಾದ ರೀತಿಯಲ್ಲಿ ಶತ್ರುಗಳಿಂದ ಕೊಲ್ಲಿಸಿಕೊಳ್ಳುವುದರ ಬದಲು ತನ್ನನ್ನೇ ತಾನು ತಿವಿದುಕೊಂಡು ವೀರ ಸ್ವರ್ಗವನ್ನು ಪಡೆದಳು. ಇವಳಲ್ಲದೆ ಸ್ವಾತಂತ್ರ್ಯಕ್ಕಾಗಿ ಮಹಾರಾಣಿ ಚಾಂದ್ ಬೀಬಿ, ಅಹಲ್ಯಾಬಾಯಿ ಹೋಳ್ಕರ್ ಮೊದಲಾದವರು ಮಾಡಿರುವ ಶೂರಕೃತ್ಯಗಳು ಎಷ್ಟೆಂದು ಆಧುನಿಕ ಇತಿಹಾಸ ವಾಚಕರಿಗೆ ತಿಳಿದಿರುವ ವಿಷಯ. ಮರಾಠರ ಸಾಮ್ರಾಜ್ಯ ಸ್ಥಾಪನೆಗೆ ಕಾರಣಳು ಜೀಜಾಬಾಯಿ, ಅವಳೇ ತನ್ನ ವೀರ ಪುತ್ರನಾದ ಶಿವಾಜಿಗೆ ಸದುಪದೇಶವಿತ್ತು. ರಾಜ್ಯತಂತ್ರಗಳನ್ನು ಮೊತ್ತ ಮೊದಲು ಕಲಿಸಿದವಳು. ಅಂದಿನ ಭಾರತದಲ್ಲಿ ವೀರಪತ್ನಿಯರೂ, ವೀರಮಾತೆಯರೂ ಬಹಳ ಮಂದಿಗಳಿದ್ದುದರಿಂದಲೇ ಅಂದಿನ ವೀರ ಯುಗವು ಬೆಳೆದುದು.

1857ರ ಮೊದಲನೆಯ ಸ್ವಾತಂತ್ರ್ಯ ಸಮರದಲ್ಲಿ ಮಹಾರಾಣಿ ಝಾನ್ಸಿ ಲಕ್ಷ್ಮೀಬಾಯಿಯು ಪ್ರದರ್ಶಿಸಿದ ಸಾಹಸವು ಎಂಥಹ ಪ್ರತಾಪಿ ವೀರನನ್ನೂ ನಾಚಿಸುವ ರೀತಿಯಲ್ಲಿದೆ. ಇದೆಲ್ಲಾ ಹಿಂದಿನ ಲಲನಾಮಣಿಯರ ವಿಷಯ. ಇದರಿಂದ ಸ್ತ್ರೀಯರು ಸಬಲೆಯರು ಎಂಬುದು ವ್ಯಕ್ತವಾಗುತ್ತದೆ. ಸ್ತ್ರೀಯರ ಸ್ವಾತಂತ್ರ್ಯ ಮಾತ್ರವಲ್ಲ, ಇಡೀ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಲು, ತಮ್ಮ ಮಾನವನ್ನು, ಮಾತ್ರವಲ್ಲ ಇಡೀ ರಾಷ್ಟ್ರದ ಮಾನವನ್ನು ಕಾದಿಟ್ಟುಕೊಳ್ಳಲು ಭಾರತದ ಮಹಿಳೆಯರು ಸಮರ್ಥರಿದ್ದಾರೆಯೆಂದು ಸ್ಪಷ್ಟವಾಗುವುದು.

ಇಂದಿನ ಸ್ಥಿತಿಯಲ್ಲಿಯೂ ದೇಶದ ಸ್ವಾತಂತ್ರ್ಯ ಸಂಪಾದನೆಯ ಕಾರ್ಯದಲ್ಲಿ ಭಾರತದ ಮಹಿಳೆಯರು ತಮ್ಮ ಪಾಲಿನ ಕರ್ತವ್ಯವನ್ನು ತೃಪ್ತಿಕರವಾಗಿ ಮಾಡಿದ್ದಾರೆ. ಮಹಾತ್ಮಾ ಗಾಂಧಿಜಿಯವರು ಕೊಂಗ್ರೆಸ್ಸಿನ ಮುಂದಾಳುತನವನ್ನು ವಹಿಸಿದಂದಿನಿಂದ ಇಂದಿನ ವರೆಗೆ ಭಾರತದ ಮಹಿಳೆಯರು ಸ್ತ್ರೀ ಸಹಜವಾದ ಅಹಿಂಸಾತ್ಮಕ ಕ್ರಮದಂತೆ ಪುರುಷರನ್ನು ಮಿಗಿಲಿಸುವ ರೀತಿಯಲ್ಲಿ ಸ್ವರಾಜ್ಯ ಸಂಪಾದನೆಯ ಕೆಲಸದಲ್ಲಿ ದುಡಿದಿದ್ದಾರೆ. ಇಂದಿಗೂ ಹಾಗೆ ದುಡಿಯುತ್ತಿದ್ದಾರೆ. ಹೆಚ್ಚೇಕೆ, ಈ ಹಿಂದೂದೇಶದ ಸ್ವಾಭಿಮಾನ ಸ್ವಾತಂತ್ರ್ಯಗಳ ಕಡೆ ಹಿಂದೀಯರ ಗಮನವನ್ನು ಸೆಳೆದು ರಾಷ್ಟ್ರೀಯ ಜಾಗ್ರತಿಯನ್ನುಂಟುಮಾಡಿದ ಮಹಾತ್ಮಾ ಗಾಂಧಿಯವರನ್ನು ಲೋಕಕ್ಕೆ ಕೊಟ್ಟಿರುವ ಅವರ ತಾಯಿಯವರೂ, ಕರಮಚಂದ ಮೋಹನದಾಸನನ್ನು ಮಹಾತ್ಮನಾಗಿ ರೂಪಿಸುವ ಕೆಲಸದಲ್ಲಿ ಗಾಂಧಿಜಿಗೆ ಸಂಪೂರ್ಣ ಸಹಕಾರವನ್ನು ಒದಗಿಸಿ ಕೊಟ್ಟ ಅವರ ಧರ್ಮಪತ್ನಿ ಶ್ರೀಮತಿ ಕಸ್ತೂರಿ ಬಾಯಿಯವರೂ, ಕುಬೇರನ ಸಂಪತ್ತಿದ್ದು ಸುಖ ಭೋಗ ಭಾಗ್ಯಗಳಿಗೆ ಏನೇನೂ ಕಡಿಮೆ ಇಲ್ಲದಿದ್ದರೂ ಒಂದೇ ಒಂದು ದಿನವೂ ತನ್ನ ವಿವಾಹಿತ ಜೀವನದಲ್ಲಿ ಸುಖವನ್ನು ಕಾಣದಿದ್ದರೂ ಕೊನೆಗೆ ಸಾಯುವ ಕಾಲಕ್ಕೂ ಕೂಡ ಪತಿಯು ತನ್ನ ಬಳಿ ಇರುವುದರ ಬದಲು ದೇಶ ಸೇವೆಯಲ್ಲೇ ನಿರತನಾಗಿರುವುದು ಯೋಗ್ಯವೆಂದು ಬಯಸಿದ ವೀರರಮಣಿ ಕಮಲಾ ನೆಹರುಗಳೂ, ಭಾರತ ಮಹಿಳೆಯರ ಆದರ್ಶ ರಾಷ್ಟ್ರ ಪ್ರೇಮ ಮತ್ತು ಕಾರ್ಯದಕ್ಷತೆಯನ್ನು ಲೋಕಕ್ಕೇ ಪ್ರಕಟವಾಗಿ ಪ್ರದರ್ಶಿಸಿದ್ದಾರೆ. ಗಾಂಧಿಜೀಯ ತಾಯಿಯು ಗಾಂಧಿಜೀಯನ್ನು ಸರಿದಾರಿಯಲ್ಲಿ ನಡೆಸದಿರುತ್ತಿದ್ದರೆ, ಗಾಂಧಿಜೀಯು ತನ್ನ ದಾರಿಯಲ್ಲಿ ಮುಂದರಿದಿರುವಾಗ ಅವರ ಧರ್ಮಪತ್ನಿಯರು ಅವರಿಗೆ ಅನುಕೂಲರಾಗಿರದಿರುತ್ತಿದ್ದರೆ ಇಂದಿಗೆ ಲೋಕಕ್ಕೆ ಬುದ್ಧಿ ಹೇಳುವ ಯೋಗ್ಯತೆಯನ್ನು ಪಡೆದ ಗಾಂಧಿಜೀಯು ನಮಗೆ ಲಭಿಸುತ್ತಲೇ ಇದ್ದಿಲ್ಲ. ಕಷ್ಟ ಸಹಿಷ್ಣುತೆ, ರಾಷ್ಟ್ರಪ್ರೇಮ, ಸಹನೆ, ತ್ಯಾಗ ಇವುಗಳನ್ನು ಸ್ವರ್ಗವಾಸಿ ಕಮಲಾ ನೆಹರುರವರು, ಪಂಡಿತ ಜವಾಹರಲಾಲರಿಗೆ ಕಲಿಸದಿರುತ್ತಿದ್ದರೆ, ಇಂದು ಭಾರತಕ್ಕೆ ಜವಾಹರರು ಇಷ್ಟು ಪ್ರಭಾವ ಶಾಲಿಗಳೂ, ಕರ್ತವ್ಯ ದಕ್ಷತೆಯುಳ್ಳವರೂ ಆಗಿ ಒದಗುತ್ತಿದ್ದಿಲ್ಲ.

ಇಡೀ ಮನೆಯ ಮಂದಿಯನ್ನೆಲ್ಲ ಅವರವರಿಗೆ ಹಿತವಾಗುವ ರೀತಿ ಸಾಕಿ ಎಂಥ ಕಷ್ಟವನ್ನಾದರೂ ತನ್ನ ಮಕ್ಕಳಿಗೆ ಬೇಕಾಗಿ ಸಹಿಸುವ ಸಹನೆಯನ್ನು

ಪ್ರಾಮುಖ್ಯ ನಗರಗಳು ಮತ್ತು ಕ್ಷೇತ್ರಗಳು!

ಮದರಾಸು

ಈ ನಗರವು ಹಿಂದೂದೇಶದಲ್ಲಿ, ಜನಸಂಖ್ಯೆ ಮೊದಲಾದುವುಗಳಲ್ಲಿ ತೃತೀಯ ಸ್ಥಾನ ಪಡೆದಿದೆ. ಸುಮಾರು 7 ಲಕ್ಷ ಪ್ರಜೆಗಳಿರುವರು. ಇದೇ ಹೆಸರಿನ ಪ್ರಾಂತ್ಯದ ಮುಖ್ಯ ನಗರವಾಗಿದೆ. ನೋಡತಕ್ಕ ಪ್ರದೇಶಗಳಲ್ಲಿ ಚಾರಿತ್ರಿಕ ಮಹತ್ವದ್ದವೂ ಇವೆ. ಪ್ರಸಿದ್ಧ ವರ್ತಕರಿರುವರು. ಜೊರ್ಜ್ ಟೌನ್ ಪ್ರದೇಶವು ವ್ಯಾಪಾರದಲ್ಲಿ ಹೆಸರಾದುದು. 'ರತನ್ ಬಜಾರ್'-ಇಲ್ಲಿ ಕಟ್ಲೇರಿ ವ್ಯಾಪಾರಿಗಳೂ, ನವರತ್ನ ವ್ಯಾಪಾರಿಗಳೂ ಇರುವರು. ವಜ್ರ ವ್ಯಾಪಾರಿಗಳಿಗೆ ಹಿಂದೂದೇಶದಲ್ಲಿ ಮದರಾಸು ನಗರವೇ ಪ್ರಥಮ ಸ್ಥಾನ ಪಡೆಯುತ್ತಿದೆ. ಏಕೆಂದರೆ, ಮದರಾಸು ಪ್ರಾಂತ್ಯದಲ್ಲಿ ವಜ್ರದ ಬೆಂಡೋಲೆ ಮೊದಲಾದುವನ್ನು ಹೆಚ್ಚಾಗಿ ಧರಿಸುತ್ತಾರೆ. ಚರ್ಮ ವ್ಯಾಪಾರಿಗಳಿಗೂ ಈ ನಗರವು ಹೆಸರಾಗಿದೆ. ನೋಡತಕ್ಕ ನೋಟಗಳಲ್ಲಿ "ಮೆರಿನಾ" ಎಂಬ ಸಮುದ್ರ ಕರಾವಳಿಯ ದೀರ್ಘ ರಸ್ತೆಯು ಮುಖ್ಯವಾದುದು. ಇಷ್ಟು [illegible] ಪ್ರಪಂಚಗಳಿಗೆ [illegible] ಸುಂದರ ರಸ್ತೆಯು [illegible] ಇಲ್ಲ. ಮದರಾಸಿನ ಮತ್ಸ್ಯಾಲಯವೂ ಆಸ್ಯದಲ್ಲಿ ಪ್ರಥಮ ಸ್ಥಾನ ಪಡೆಯುತ್ತದೆ. ಹೈಕೋರ್ಟು, ಮೂರ್ ಮಾರ್ಕೆಟು, ಮೆರಿನಾ, ಸೆನೇಟ್ ಹೌಸ್, ರಿಪನ್ ಬಿಲ್ಡಿಂಗ್ಸ್ ಇವು ನೋಡತಕ್ಕದ್ದಿವೆ. ನಗರದಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ರಸ್ತೆಯು "ಮೌಂಟ್ ರೋಡ್" ಮದರಾಸು ನಗರಕ್ಕೆ ಹಿಂದೂದೇಶದ ಎಲ್ಲ ಮುಖ್ಯ ನಗರಗಳಿಂದ ರೈಲ್ವೆ ಸಂಬಂಧವಿದೆ. ಹಡಗ ವ್ಯಾಪಾರವೂ ಇದೆ. (ಕೊರ್ಪೊರೇಶನ್ ಬ್ಯಾಂಕಿನ ಶಾಖೆಯೂ ಇಲ್ಲಿದೆ.)



ಪುರಿಯ ಜಗನ್ನಾಥ ದೇವಾಲಯದ ಹೊರಗಿನ ದೃಶ್ಯ.

ಬೊಂಬಾಯಿ

ಹಿಂದೂದೇಶದ ಮೂರು ಮುಖ್ಯ ನಗರಗಳಲ್ಲೊಂದು ಜನಸಂಖ್ಯೆಯು 1931ನೇ ಖಾನೇಶುಮಾರಿಯಂತೆ 1,161,383. ಗ್ರೇಟ್ ಇಂಡಿಯನ್ ಪೆನಿನ್ಸುಲರ್ ರೈಲ್ವೆ ಮತ್ತು ಜಿ. ಬಿ ಸಿ. ಐ ರೈಲ್ವೆ ಕಂಪೆನಿಗಳ ಮುಖ್ಯ ಠಾಣ್ಯವು ಇಲ್ಲಿರು

ಹುಟ್ಟು ಗುಣವಾಗಿಯೇ ಪಡೆದ ಸ್ತ್ರೀಗೆ ಗಾಂಧಿಜೀಯ ಅಹಿಂಸೆಯೇನೂ ಹೊಸದಲ್ಲ. ಆದುದರಿಂದ ಅಹಿಂಸೆಯ ದಾರಿಯಲ್ಲಿ ದೇಶಕ್ಕಾಗಿ ದುಡಿಯಲು ಸ್ತ್ರೀಗಿರುವ ಯೋಗ್ಯತೆ ಪುರುಷನಿಗಿಲ್ಲ. 1920ರ ಚಳವಳದಲ್ಲಾಗಲೀ 30ರ ಮತ್ತು 32ರ ಚಳವಳದಲ್ಲಾಗಲಿ, ಭಾರತ ಮಹಿಳೆಯರು ಗಾಂಧಿಜೀಯ ಮುಂದಾಳುತನದಲ್ಲಿ ದೇಶಕ್ಕಾಗಿ ತುಂಬ ದುಡಿದಿದ್ದಾರೆ; ತುಂಬ ಕಷ್ಟ ಸಹಿಸಿದ್ದಾರೆ. ಕಾರಾಗೃಹ ಸೇರಿ ಶಿಕ್ಷೆಯನ್ನು ಅನುಭವಿಸಿದ್ದಾರೆ. ಅಂಥವರಲ್ಲಿ ಶ್ರೀಮತಿ ಸರೋಜಿನಿದೇವಿ ಶ್ರೀಮತಿ ಕಮಲಾದೇವಿ ಶ್ರೀಮತಿ ಮುನ್ಷಿ, ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಮೊದಲಾದ ಮಹಿಳಾಮಣಿಗಳು ಇಂದಿಗೂ ಸ್ವಾತಂತ್ರ್ಯ ಸಮರ [illegible]ಸುವ ಗಾಂಧಿಜೀಯ ಅಹಿಂಸಾತ್ಮಕ ಯೋದ್ಧರ ವರ್ಗದಲ್ಲಿ ಮೊದಲನೆಯ ಸಾಲಿನಲ್ಲಿದ್ದಾರೆ. ಹೊರಗಿನವಳೇ ಆದರೂ ತಿಯಾಸಫಿಯ ಉದ್ಧಾರಕ್ಕಾಗಿ ಹಿಂದೂದೇಶಕ್ಕೆ ಬಂದಿದ್ದರೂ ಶ್ರೀಮತಿ ಎನಿ ಬೆಸೆಂಟ್ ಅಮ್ಮನವರು'ಹೋಂರೂಲ್''ಚಳವಳವನ್ನು ನಡೆಸಿ ದೇಶದ ಹಿಂದೀಯರಲ್ಲಿ ನವಜಾಗೃತಿಯನ್ನು ಉಂಟುಮಾಡುವುದಕ್ಕೆ ಮುಖ್ಯ ಕಾರಣರಾದರು. ಹಿಂದೂದೇಶಕ್ಕೆ ಅವರು ಸಲ್ಲಿಸಿದ ಸೇವೆಗಾಗಿ ಮಹಿಳೆಯರು ಹೆಮ್ಮೆಪಟ್ಟರೆ ತಪ್ಪಾಗದು. ಹೆಂಗಸರು ಕತ್ತಿ ಎತ್ತಿ ರಣರಂಗ ಸೇರಿ ವೈರಿಗಳ ತಲೆಗಳನ್ನು ಚೆಂಡಾಡಿ ಜಯವನ್ನು ಹೊಂದಿದ ದಿನಗಳನ್ನು ಹಿಂದಿನ ಭಾರತವು ಕಂಡಿರುತ್ತದೆ. ಅಹಿಂಸೆಯ ಆಯುಧ ಪ್ರಯೋಗಿಸಿ ಸ್ವಾತಂತ್ರ್ಯ ಸಮರದಲ್ಲಿ ಭಾರತದ ಮಹಿಳೆಯರು ಕಷ್ಟ ಸಹಿಸಿ ತ್ಯಾಗ ತೋರುತ್ತಿರುವ ದಿನಗಳು ನಮ್ಮ ಕಣ್ಣಮುಂದೆ ನಡೆಯುತ್ತಾ ಇವೆ.

ಹಿಂದೂದೇಶವು ಪರದಾಸ್ಯದಿಂದ ತನ್ನನ್ನು ಬಿಡಿಸಿಕೊಳ್ಳುವುದಕ್ಕಾಗಿ ಕೊನೆಯ ಬಾರಿಯ ಪ್ರಯತ್ನದಲ್ಲಿ ಈಗ ಕೈಯಿಕ್ಕಿದೆ.

ಇಂದಿಗೂ ಭಾರತದ ಮಹಿಳೆಯರು ಗಾಂಧೀಜಿಗೆ ಎಷ್ಟು ಹೆಚ್ಚು ಬೆಂಬಲ ಕೊಡುವರೋ ಅಷ್ಟು ತ್ವರೆಯಾಗಿ ಜಯವು ನಿಶ್ಚಯವಾಗಿ ಸಿಗುವುದು. ಈ ಸಲ ಗಾಂಧೀಜಿಯವರು ರಚನಾತ್ಮಕ ಕಾರ್ಯಕ್ರಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದಾರೆ. ಜಾತೀಯ ಐಕ್ಯ, ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ ಗ್ರಾಮ ಪುನರ್ಘಟನೆ ನೂಲುವುದೇ ಮೊದಲಾದ ಕಾರ್ಯಕ್ಷೇತ್ರಗಳಲ್ಲಿ ಮಹಿಳೆಯರು ಇಂದಿಗೆ ಹೆಚ್ಚಾಗಿ ದುಡಿಯಬಹುದು.

ತ್ತದೆ. ಸಮುದ್ರ ವ್ಯಾಪಾರದಲ್ಲಿ ಬೊಂಬಾಯಿ ನಗರವು ಹಿಂದೂದೇಶದಲ್ಲಿ ಪ್ರಥಮ ಸ್ಥಾನ ಪಡೆಯುತ್ತದೆ. ಸೌಂದರ್ಯದಲ್ಲಿಯೂ ಇದು ಪ್ರಥಮವಾಗಿದೆ. ಪ್ರಪಂಚದ ಎಲ್ಲ ಜನಾಂಗಗಳ ಜನರನ್ನು ಇಲ್ಲಿ ಕಾಣಬಹುದು. ಸಾಮ್ರಾಜ್ಯದ ಪ್ರಸಿದ್ಧ ವರ್ತಕರು ಇಲ್ಲಿರುವರು. ಪಾರ್ಸಿ ಜನರ ಸಂಖ್ಯೆಯು 80 ಸಾವಿರಕ್ಕೆ ಮಿಕ್ಕದಾದರೂ ನಗರದ ಶ್ರೀಮಂತ ವರ್ತಕರಲ್ಲಿ ಪಾರ್ಸಿಗಳನೇಕರಿರುವರು. ಇವರು ಮುಖ್ಯವಾಗಿ ಅಲ್ಲಿ ಮಾದಕ ದ್ರವ್ಯಗಳ ವ್ಯಾಪಾರವನ್ನು ತಮ್ಮ ಕೈಯಲ್ಲಿಟ್ಟು ಕೊಂಡಿರುವರು. ಇವರ ಧಾರ್ಮಿಕ ಸಂಸ್ಥೆಗಳೂ ಆಸ್ಪತ್ರೆಗಳೂ ಅನಾಥಾಲಯಗಳೂ ಹಲವಿವೆ. ವರ್ತಕರಲ್ಲಿ ಹಿಂದುಗಳೂ ಮುಸಲ್ಮಾನರೂ ಪ್ರಸಿದ್ಧವಾಗಿದ್ದಾರೆ. ಮದರಾಸಿನಲ್ಲಿ ವಜ್ರಕ್ಕೆ ಪ್ರಾಧಾನ್ಯವಿರುವುದಾದರೆ ಇಲ್ಲಿ ಮುತ್ತು ಪ್ರಸಿದ್ಧವಿದೆ. ಮುಖ್ಯ ರಸ್ತೆಯು ಹೊರ್ನ್ಬಿ ರೋಡ್. 'ಕೋಟೆ' ಎಂಬ ಪ್ರದೇಶವು ಯುರೋಪಿಯನ್ ಜನಾಂಗಗಳ ವ್ಯಾಪಾರೀ ಸಂಸ್ಥೆಗಳನ್ನುಳ್ಳದು. ಇಲ್ಲಿ ಹೆಚ್ಚಾಗಿ ವಾಸಿಸುವವರು ವಿದೇಶೀಯರು. ನೋಡತಕ್ಕ ಸ್ಥಳಗಳಲ್ಲಿ ಮುಖ್ಯವಾದುವು: (1) ಬ್ರೆಬೋರ್ನ್ ಸ್ಟೆಡಿಯಮ್ (ಕ್ರಿಕೆಟ್ ರಂಗ. ಹಿಂದೂದೇಶದಲ್ಲಿ ಅತ್ಯುತ್ತಮ.) 2) ಜನರಲ್ ಪೋಸ್ಟಾಫೀಸು. (3) ರೈಲ್ವೆ ನಿಲ್ದಾಣ: ಬೆಲಾರ್ಡ್ ಪಿಯರ್) (4) ವಿಕ್ಟೋರಿಯಾ ಗಾರ್ಡನ್ಸ್. (5) ಪ್ರಿನ್ಸ್ ಒಫ್ ವೇಲ್ಸ್ ಮ್ಯೂಝಿಯಮ್. (6)ಮೆರಾಯ್ನ್ ಡ್ರೈವ್. (7)ಜನರಲ್ ಮೋಟರ್ಸ್ ಕಂಪೆನಿ. ರಸ್ತೆಗಳ ಸೌಂದರ್ಯದ ಮಟ್ಟಿಗೆ, ಪ್ರತಿಯೊಂದು ರಸ್ತೆಯೂ ನೋಡತಕ್ಕದ್ದಿದೆ. ವ್ಯಾಪಾರದಲ್ಲಿ ಮಾಂಡ್ವಿ ಎಂಬುದು ಧಾನ್ಯದವಸಗಳ ವ್ಯಾಪಾರಕ್ಕೂ, ಪ್ರಿನ್ಸೆಸ್ ಸ್ಟ್ರೀಟ್ ಔಷಧಿ ವ್ಯಾಪಾರಿಗಳಿಗೂ, ಅಬ್ದುಲ್ ರಹಿಮಾನ್—ಮುಹಮ್ಮದಾಲಿ ರಸ್ತೆ—ಮತ್ತು ನಾಗ್ದೇವಿ ಸ್ಟ್ರೀಟ್ ಇವು ಕಟ್ಲೆರಿ, ಗಾಜಿನ ಸಾಮಾನು, ಸ್ಟೇಷನರಿ ಮೊದಲಾದುವುಗಳಿಗೂ ಹೆಸರಾಗಿವೆ. ಮಂಗಳೂರಿನಿಂದ ಹೋಗಿ ನೆಲಸಿದ ಸಾಹುಕಾರರು ಹೆಚ್ಚಾಗಿ ಲೋಹರ್ ಸ್ಟ್ರೀಟಿನಲ್ಲಿರುವರು. (ಬೊಂಬಾಯಿಯಲ್ಲಿ ಕೆನರಾ ಬ್ಯಾಂಕಿನ ಐದು ಶಾಖೆಗಳೂ, ಸಿಂಡಿಕೇಟ್ ಬ್ಯಾಂಕಿನ ಒಂದು ಶಾಖೆಯೂ, ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ಶಾಖೆಯೂ ಇದೆ.)

ಕಲ್ಕತ್ತಾ

ಹಿಂದೂದೇಶದಲ್ಲಿ ವಿಸ್ತೀರ್ಣ, ಜನಸಂಖ್ಯೆ, ಭವ್ಯ ಕಟ್ಟಡಗಳು ಮೊದಲಾದುದರಲ್ಲಿ ಕಲ್ಕತ್ತವು ಪ್ರಥಮ ಸ್ಥಾನ ಪಡೆದಿದೆ. ವಿಸ್ತೀರ್ಣವು 42 ಚದರ ಮೈಲು ಇದೆ. ಜನಸಂಖ್ಯೆಯು, 1931ನೇ ಖಾನೇಶುಮಾರಿಯಂತೆ 1,485,582 ಇರುತ್ತದೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿ, ಲಂಡನಿನ ನಂತರ ಎರಡನೇ ಸ್ಥಾನವು ಕಲ್ಕತ್ತಕ್ಕೆ ಸಲ್ಲುತ್ತದೆ. ನಾರು ಗಿರಣಿಗಳಿಗೆ ಕಲ್ಕತ್ತವು ಹೆಸರಾಗಿದೆ. ಕಲ್ಕತ್ತೆಯ ಕಂಚುಪಾತ್ರೆಗಳು ದೇಶಪ್ರಸಿದ್ಧವಾಗಿವೆ. (ಕಲ್ಕತ್ತವನ್ನು ಬ್ರಿಟಿಷರು 1690ರಲ್ಲಿ ಆಕ್ರಮಿಸಿದರು.) ಹಲವು ಉತ್ತಮ ಬಜಾರುಗಳಿವೆ. ಚೌರಿಂಗಿ ರಸ್ತೆಯ ಎದುರಲ್ಲಿ ಮೈಲುಗಟ್ಲೆಗೆ ನೀಡಿದ ಮೈದಾನು ಇದೆ. ಹಿಂದೊಮ್ಮೆ ಕಲ್ಕತ್ತವು ಬ್ರಿಟಿಷರ ಹಿಂದೂದೇಶದ ರಾಜಧಾನಿಯಾಗಿತ್ತು. ನೋಡತಕ್ಕ ಸ್ಥಳಗಳಲ್ಲಿ ಕಾಳಿಘಾಟ್ ದೇವಸ್ಥಾನ, ಇಡನ್ಸ್ ಗಾರ್ಡನ್ಸ್, ಮ್ಯೂಝಿಯಮ್, ಜೈನ್ ದೇವಾಲಯ, ಡಾಕುರಿಯ ಸರೋವರ, ಮೃಗಾಲಯ, ಚಂದ್ರಕಾಂತ ಶಿಲಾ ಅರಮನೆ, ಚೌರಿಂಗಿ, ವಿಕ್ಟೋರಿಯಾ ಮೆಮೋರಿಯಲ್ ಇವು ಮುಖ್ಯವಾದುವು.



ಬುದ್ಧ ಗಯೆಯ ಮಹಾ ದೇವಾಲಯ.

ಅಯೋಧ್ಯಾ

ಕಾಶಿಯಿಂದ 117 ಮೈಲು ದೂರವಿದೆ. ಸರಯೂ (ಈಗ ಗೋಗ್ರಾ) ನದಿ ತೀರದ ನಗರ. ಶ್ರೀ ರಾಮನು ಆಳಿದ ಪಟ್ಟಣವೆನ್ನುವರು. ಅನೇಕ ದೇವಾಲಯಗಳಿವೆ. ಎಪ್ರಿಲ್ ತಿಂಗಳಲ್ಲಿ ಜರಗುವ ಶ್ರೀ ರಾಮನವಮಿ ಉತ್ಸವಕ್ಕೆ ಲಕ್ಷಗಟ್ಲೆ ಜನರು ಬಂದು ಸೇರುತ್ತಿರುವರು.



ದ್ವಾರಕೆಯ 'ಜಗನ್ಮಂದಿರ' ದೇವಾಲಯ

ಢಿಲ್ಲಿ

ಹಿಂದೂದೇಶದ ರಾಜಧಾನಿ. ಕಲ್ಕತ್ತದಿಂದ 902 ಮೈಲೂ, ಬೊಂಬಾಯಿಯಿಂದ 865 ಮೈಲೂ ದೂರವಿದೆ. ಯುಧಿಷ್ಠಿರನು ಈ ನಗರವನ್ನು ರಚಿಸಿ, ಇಂದ್ರಪ್ರಸ್ಥ ಎಂದು ಕರೆದನು. ಪ್ರಪಂಚದಲ್ಲಿ ಯಾವ ರಾಜಧಾನಿಯೂ, ಇಷ್ಟು ಪುರಾತನವಿಲ್ಲ. ಢಿಲ್ಲಿಯಲ್ಲಿ ಆಳಿಹೋದಷ್ಟು ಅರಸರು ಬೇರಾವ ರಾಜಧಾನಿಯಲ್ಲಿಯೂ ಆಳಲಿಲ್ಲ. 45ಚದರಮೈಲುಗಳಿಗೆ ಹರಡಿದ ವಿಸ್ತೀರ್ಣದಲ್ಲಿ ಬೇರೆ ಬೇರೆ ಕಾಲದಲ್ಲಿ ಆಗಿಹೋದ ರಾಜಧಾನಿಗಳ ಕುರುಹುಗಳು ಕಂಡುಬರುತ್ತಿವೆ. ನೋಡತಕ್ಕ ಸ್ಥಳಗಳು: ಕೋಟೆ, ಜುಮ್ಮಾಮಸೀದ್, ಕಲನ್ ಮಸೀದ್, ಕಾಶ್ಮೀರ್ ಗೇಟ್, ಹುಮಾಯೂನನ ಮತ್ತು ನವಾಬ್ ಸಫದರ್ ಜಂಗನ ಗೋರಿಗಳು. ಜಯಸಿಂಗನ ಕಾಲಮಾಪಕ ಯಂತ್ರಾಲಯ, ಚಾಂದ್ನಿಚೌಕ್, ಕುತುಬ್ ಮಿನಾರ್, [illegible] ಹುಮಾಯೂನನ ಗ್ರಂಥಾಲಯದ ಅವಶೇಷ, ಲೋಹ [illegible] ಅಶೋಕನ ಸ್ತಂಭ ಇವು.

ಋಷಿಕೇಶ

ಹಿಂದೂಗಳ ಒಂದು ಪುಣ್ಯಕ್ಷೇತ್ರ. ಹರಿದ್ವಾರದಿಂದ ಸಮೀಪವಿದೆ. ಭರತನ ದೇವಾಲಯವು ಮುಖ್ಯವಾದುದು. ಕೆಲವು ತರದಲ್ಲಿ 'ಲಚ್ಮನ್ ಝೂಲಾ' ಇದೆ. ಬದರಿ ಕ್ಷೇತ್ರಕ್ಕೆ ಹೋಗುವ ಯಾತ್ರಿಕರು ಇಲ್ಲಿ ಉಳಕೊಳ್ಳುತ್ತಾರೆ.

ಆಲಿಘಡ

ಢಿಲ್ಲಿಯಿಂದ 79 ಮೈಲು ದೂರವಿದೆ. ಪ್ರಸಿದ್ಧ ಅಲಿಘಡ ವಿಶ್ವವಿದ್ಯಾಲಯವು ಇಲ್ಲಿದೆ. ಸರ್ ಸಯ್ಯದ ಅಹಮದ ಖಾನರೆಂಬವರು 1864ರಲ್ಲಿ ಇದನ್ನು ಆರಂಭಿಸಿದರು.



ಮಾರ್ಕೆಟ್ ಸ್ಕ್ವಯರ್ ಮೈಸೂರು

ಆಗ್ರಾ

ಇದನ್ನು 'ಅಕ್ಬರನ ನಗರ'ವೆನ್ನುತ್ತಾರೆ. ಜಗತ್ಪ್ರಸಿದ್ಧ ತಾಜಮಹಾಲು ಇಲ್ಲಿದೆ. ಮೊಗಲ್ ರಾಜ್ಯಭಾರದ ವೈಭವದ ಕುರುಹುಗಳನ್ನು ಢಿಲ್ಲಿಯಂತೆ ಇಲ್ಲಿಯೂ ಕಾಣಬಹುದು. ನೋಡತಕ್ಕ ನೋಟಗಳಲ್ಲಿ ಮುಖ್ಯವಾದುವೆಂದರೆ ತಾಜಮಹಾಲು ಮತ್ತು ಅರಮನೆ. ಮೋತಿ ಮಸೀದಿ, ಇಥ್ಮಿಮದ್, ದೌಲನ ಗೋರಿ ಇವು ನೋಡತಕ್ಕವು. ಆಗ್ರಾದಿಂದ ಇಪ್ಪತ್ತು ಮೈಲು ದೂರದಲ್ಲಿ ಫತ್ತೇಪುರಿ-ಸಿಕ್ರಿ ಇದೆ. ಅಕ್ಬರನು ಈ ನಗರವನ್ನು ರಚಿಸಿ, ನೀರಿನ ಸರಬರಾಯಿಯಿಲ್ಲವೆಂದು ಕೆಲಕಾಲದಲ್ಲಿ ತೊರೆದನೆನ್ನುವರು.

ಕಾಶಿ

ಹಿಂದೂದೇಶದಲ್ಲಿ ಮಹಾಪುಣ್ಯ ಕ್ಷೇತ್ರ. ಕಲ್ಕತ್ತದಿಂದ 429 ಮೈಲು ದೂರವಿದೆ. ಅತೀ ಪುರಾತನ ನಗರವಿದು. ಇದನ್ನು ರಚಿಸಿದ ಕಾಲವಿನ್ನೂ ನಿರ್ಣಯವಾಗಿಲ್ಲ. ಅತಿ ವಿಚಿತ್ರವಾದ, ಅಗಲಕಿರಿದಾದ ಓಣಿಗಳೂ, ಮನೆಗಳ ಗುಂಪೂ ಈ ನಗರದಲ್ಲಿವೆ. ಮೂರು ಲಕ್ಷಕ್ಕಿಂತಲೂ ಹೆಚ್ಚು ಜನರು, ಈ ಅಗಲಕಿರಿದಾದ ಓಣಿಗಳಲ್ಲಿ ವಾಸಿಸಿರುವರು ಗಂಗಾನದಿಯ ದಡದಲ್ಲಿ ಈ ನಗರದ ನಿರ್ಮಾಣವಾಗಿದೆ. ದೇಶದ ಎಲ್ಲ ಭಾಗಗಳಿಂದ ಯಾತ್ರಿಕರು ಇಲ್ಲಿಗೆ ಬರುವರು. ನೋಡತಕ್ಕ ಸ್ಥಳಗಳಲ್ಲಿ, ಭಾರತ ಕಲಾಮಂದಿರ, ಮಾನಮಂದಿರ, ದುರ್ಗಾಕುಂಡ, ಹನುಮಾನ್ ದೇವಾಲಯ, ವಿಶ್ವನಾಥ ದೇವಾಲಯ, ದಶಾಶ್ವಮೇಧ ಘಾಟ್, ಮಣಿಕರ್ಣಿಕಾ ಘಾಟ್, ಹರಿಶ್ಚಂದ್ರ ಘಾಟ್ ಮತ್ತು ವಿಾರ ಘಾಟ್, ರಾಮನಗರದ ಅರಮನೆ, ಹಿಂದೂ ವಿಶ್ವವಿದ್ಯಾಲಯ, ಅವರಂಗಜೇಬನ ಮಸೀದಿ, ಭಾರತಮಾತಾ ದೇವಾಲಯ—ಇವು ಮುಖ್ಯವಾದುವು. ಬೌದ್ಧರ ಸಾರನಾಥವು ಐದು ಮೈಲು ದೂರದಲ್ಲಿದೆ. ಗೌತಮ ಬುದ್ಧನು ತನ್ನ ಮತವನ್ನು ಇಲ್ಲೇ ಬೋಧಿಸಿದನು.


ಸ್ವರ್ಣದೇವಾಲಯ ಕಾಶಿ.


ಮೈಸೂರು, ಚಾಮುಂಡಿ ಬೆಟ್ಟದಲ್ಲಿರುವ ನಂದಿಯ ವಿಗ್ರಹ.

ಗಯಾ

ಕಲ್ಕತ್ತದಿಂದ 292 ಮೈಲು ದೂರವಿದೆ. ಹಿಂದುಗಳ ಒಂದು ಕ್ಷೇತ್ರ. ಶ್ರಾದ್ಧಕ್ಕಾಗಿ ಹಿಂದೂಗಳು ಇಲ್ಲಿಗೆ ಬರುವರು. ಬೌದ್ಧರ ಚಟುವಟಿಕೆಗಳು ಪೂರ್ವಕಾಲದಲ್ಲಿ ಇಲ್ಲಿಯೂ ಆಸುಪಾಸಿನಲ್ಲಿಯೂ ಹರಡಿದ್ದುವು. 7 ಮೈಲು ದೂರದಲ್ಲಿ ಬುದ್ಧಗಯಾ ಇದೆ. ಅನೇಕ ದೇವಾಲಯಗಳಿವೆ.

ಹರಿದ್ವಾರ

ಮಹಾಕ್ಷೇತ್ರ. ಚಂಡೀಪಹಾರ್ ಎಂಬ ದೇವಾಲಯವು ಅತಿ ಪ್ರಸಿದ್ಧವಾದುದು. ಗಂಗಾ ನದಿಯ ತೀರದಲ್ಲಿರುವ ಒಂದು ಪಟ್ಟಣ. ವರುಷವಿಡೀ ಯಾತ್ರಿಕರು ಇಲ್ಲಿಗೆ ಬರುತ್ತಿರುತ್ತಾರೆ ಅನೇಕ ಘಟ್ಟಗಳೂ, ತೀರ್ಥಗಳೂ ಇವೆ. ಪ್ರತಿ 12 ವರುಷಕ್ಕೊಮ್ಮೆ ಕುಂಭಮೇಳವು ಇಲ್ಲಿ ಜರಗಿಸಲ್ಪಡುತ್ತಿದೆ.

ಮಥುರಾ

ಆಗ್ರದಿಂದ 30 ಮೈಲು ದೂರವಿದೆ. ಯಮುನಾ ನದಿಯ ದಡದಲ್ಲಿರುವ ಪಟ್ಟಣ. ಶ್ರೀ ಕೃಷ್ಣನು ಬಾಲ್ಯವನ್ನು ಕಳೆದ ಊರು. ಅನೇಕ ದೇವಾಲಯಗಳಿವೆ.


ರಾಮೇಶ್ವರದ ದೇವಾಲಯ

ವಿಜಯನಗರ

ವಿಜಯ ನಗರ ರಾಜ್ಯವು 1363ರಲ್ಲಿ ಸ್ಥಾಪಿಸಲ್ಪಟ್ಟಿತು. 1565ರಲ್ಲಿ ನಡೆದ ತಾಳಿಕೋಟೆಯ ಯುದ್ಧದ ವರೆಗೆ ಅದು ಪ್ರಸಿದ್ಧಿಯಲ್ಲಿದ್ದಿತು. ವಿಜಯನಗರದಲ್ಲಿ ಹೆಸರುಪಡೆದ ಸ್ಥಳವೆಂದರೆ ತುಂಗಭದ್ರಾ ನದಿ ತೀರದಲ್ಲಿ ನೆಲೆಸಿರುವ ಹಂಪಿಯು. ಇದು ವಿಜಯನಗರದ ಅರಸರ ರಾಜಧಾನಿಯಾಗಿತ್ತು. ವಿಜಯನಗರದ ಪ್ರಖ್ಯಾತ ಅರಸರು ಇಲ್ಲಿ ದೇವಾಲಯಗಳನ್ನು ಕಟ್ಟಿಸಿ, ಅಲ್ಲಿ ತಮ್ಮ ಸುಂದರ ರಾಜಭವನಗಳನ್ನೂ ಕಟ್ಟಿಸಿದ್ದರು. ಹಂಪಿಯು ಪುರಾಣ ಪ್ರಸಿದ್ಧ ಸ್ಥಳವಾಗಿರುತ್ತದೆ. ಸೀಸರ್ ಫ್ರೆಡ್ರಿಕ್ ಎಂಬ ಆಂಗ್ಲ ಪ್ರಯಾಣಿಕನೊಬ್ಬನು ಹಂಪಿಯ ಕುರಿತು ಈ ರೀತಿ ವರ್ಣಿಸಿರುತ್ತಾನೆ. "ನಾನು ಹಲವು ರಾಜ್ಯಗಳನ್ನೂ ರಾಜರನ್ನೂ ಸಂದರ್ಶಿಸಿರುತ್ತೇನೆ. ಆದರೆ ವಿಜಯನಗರದ ರಾಜಧಾನಿಯಾದ ಹಂಪಿಯಷ್ಟು ಸುಂದರ ರಾಜ್ಯವನ್ನು ಬೇರೊಂದು ಕಾಣಲಿಲ್ಲ. ರಾಜ್ಯಕ್ಕೆ ಒಂಭತ್ತು ದ್ವಾರಗಳಿವೆ. ರಾಜ್ಯದ ಹಳೆಯ ಕುರುಹುಗಳಲ್ಲಿ ನಿಗಿಲೆಂದು ಕಂಡು ಬರುವವುಗಳೆಂದರೆ ವಿಠೋಬಾ ದೇವಾಲಯ, ಅರಮನೆ, ಅಶ್ವಶಾಲೆ, ಅಂತಃಪುರ, ಸ್ತ್ರೀಯರ ಸ್ನಾನಗೃಹ ಮತ್ತು ಇನ್ನಿತರ ಶಿಲಾ ಕೆತ್ತನೆಗಳು." ನಗರ ಸಂದರ್ಶಕರ ಅನುಕೂಲಕ್ಕಾಗಿ ಪ್ರಯಾಣಿಕರ ಬಂಗ್ಲೆಯೊಂದನ್ನು ಅಲ್ಲಿ ನಿರ್ಮಿಸಿರುತ್ತಾರೆ. ಅಲ್ಲದೆ ಅದಕ್ಕೆ ಬೇಕಾದ ಅನುಕೂಲತೆಗಳನ್ನೂ ಒದಗಿಸಿರುತ್ತಾರೆ. ಹೊಸಪೇಟ್ ರೈಲ್ವೆ ಸ್ಟೇಶನಿನಿಂದ ಹಂಪಿಯ ಕುರುಹುಗಳು ಇರುವಲ್ಲಿ ಹೋಗಲು ಅನುಕೂಲವಾದ ಮೋಟಾರು ದಾರಿಯೂ ಇದೆ.


ತಿರುಪತಿ ಬೆಟ್ಟಕ್ಕೆ, ಡೋಲಿಯಲ್ಲಿ ಯಾತ್ರಿಕರನ್ನೊಯ್ಯುವ ದೃಶ್ಯ.

ಬಿಜಾಪುರ

[illegible] ಬಿಜಾಪುರವು ಆದಿಲಶಾಹಿ ವಂಶಸ್ಥರ ರಾಜಧಾನಿ. 1626ರಿಂದ 1656ರ ವರೆಗೆ ಅಲ್ಲಿ ಆಳಿದ ಮಹಮ್ಮದ ಅದಿಲ ಶಹನು ಅಲ್ಲಿ ಅನೇಕ ಪ್ರಸಿದ್ಧ ಕಟ್ಟಡಗಳನ್ನು ಕಟ್ಟಿಸಿರುತ್ತಾನೆ. ಬಿಜಾಪುರವನ್ನು ಸಂದರ್ಶಿಸುವವರಿಗೆ ಮೊದಲಾಗಿ ಕಾಣಸಿಗುವ ದೊಡ್ಡ ಕಟ್ಟಡವೆಂದರೆ ಬೋಲಿಗಂಬಜ್' ಎಂದು ಕರೆಯಲ್ಪಡುವ ಮಹಮ್ಮದ್ ಅದಿಲ್ ಶಹರ ಗೋರಿ. ಸಮಾಧಿಯ ಎತ್ತರವು 198ಅಡಿ ಬೋಲಗಂಬಜಿನ ಸರಹದ್ದಿನಲ್ಲಿ ಹಳೆಯ ವಸ್ತುಗಳನ್ನು ಸಂಗ್ರಹಿಸಿಟ್ಟ ಒಂದು ವಸ್ತುಶಾಲೆಯೂ ಇರುತ್ತದೆ. ಎರಡನೇ ಅದಿಲ್‌ಶಹರ ಗೋರಿಯೂ ಬೊಲಿಗಂಬಜಿನಷ್ಟೇ ಪ್ರಖ್ಯಾತಿಪಟ್ಟಿದೆ. ಇದು ರಾಜ್ಯದ ಬಲಭಾಗದಲ್ಲಿದೆ., ದಾತೇದ್ವಾರದ ಹತ್ತಿರ ದಕ್ಷಿಣದಲ್ಲಿ 530 ಗಜ ಉತ್ತರಕ್ಕೆ ಎಲ್ಲಾ ಕಟ್ಟಡಗಳಿಗಿಂತ ಎತ್ತರದಲ್ಲಿ ಕಟ್ಟಿಸಲ್ಪಟ್ಟ ಕೊತ್ತಳವೊಂದು ಇದೆ. ಇದನ್ನು ಜನರು "ಲಂಡ ಕಸಬ"ವೆಂದು ಕರೆಯುತ್ತಾರೆ ಇದರ ಮೇಲೆ ಬಿಜಾಪುರದ ಅತಿ ದೊಡ್ಡ ಫಿರಂಗಿಯನ್ನು ಇರಿಸಿರುತ್ತಾರೆ. ಬಿಜಾಪುರದ ಪ್ರಖ್ಯಾತ ಸ್ಥಳಗಳಲ್ಲಿ 'ಶೆರ್ಜ ಬರ್ಜ್" (ಸಿಂಹಗಳ ಕೊತ್ತಳ) ಎಂಬುದು ಮತ್ತೊಂದು. ಇಲ್ಲಿ ಮಲೀಕ್–ಈ–ಮೈದಾನ್ ಎಂಬ ಹೆಸರಿನ ಬಿಜಾಪುರದ ದೊಡ್ಡ ಫಿರಂಗಿಯೊಂದನ್ನು ಇರಿಸಿದ್ದಾರೆ. ಉಳಿದ ನೋಡಲು ಯೋಗ್ಯವಾದ ಸ್ಥಳಗಳೆಂದರೆ ಮೆಹತಾರ್ ಮಹಾಲ್ ಮತ್ತು ಜುಮಾ ಮಸಿದಿ. ಡೆಕ್ಕಾನಿನ ಅತಿ ದೊಡ್ಡ ಗೋರಿಯೆಂದು ಪ್ರಖ್ಯಾತಿಪಟ್ಟ ಜುಮಾ ಮಸಿದಿಯನ್ನು ಒಂದನೇ ಅದಿಲ್‌ಶಹನು ಕ್ರಿ. ಶ. 1527ರಲ್ಲಿ ಕಟ್ಟಿಸಿದನು.


ದ್ವಾರಕೆಯ ಒಂದು ದೃಶ್ಯ.

ಭಿಲ್‌ವಾಡಿ

ಇದು ತಸ್‌ಗಾಂ ರಾಜಧಾನಿಯ ಒಂದು ಮುಖ್ಯ ಸ್ಟೇಶನು. ತಸ್‌ಗಾಂ ರಾಜ್ಯವು ಬಹಳ ಪುರಾಣಪ್ರಸಿದ್ಧ ಸ್ಥಳವೂ, ಒಂದು ಕಾಲದಲ್ಲಿ ಪರಶುರಾಮ್ ಭಾವೂ ಪಟವರ್ಧನ ಎಂಬ ಅರಸರ ರಾಜಧಾನಿಯೂ ಆಗಿತ್ತು. ಇಲ್ಲಿಯ

ಮತ್ತೊಂದು ಪ್ರಸಿದ್ಧ ಸ್ಥಳವೆಂದರೆ ಔದಂಬರ. ಇಲ್ಲಿ ನಸೋರ್ಬವಾಡಿ, ಗಂಗಾಪುರ ಮತ್ತು ಕೋಲ್ಹಾಪುರಗಳಲ್ಲಿ ಇದ್ದಂತೆ ಪುರಾಣ ಪ್ರಸಿದ್ಧ ದತ್ತ ದೇವಾಲಯವಿದೆ. ಇದನ್ನು ಸಂದರ್ಶಿಸಲು ಪ್ರತೀ ವರ್ಷ ಸಾವಿರಾರು ಯಾತ್ರಿಕರು ಪರಊರುಗಳಿಂದ ಬರುತ್ತಾರೆ.



ಪುರಿ ಜಗನ್ನಾಥನ ರಥೋತ್ಸವ.

ವೆಲ್ಲೂರು

ಇದು ಕಾಟ್ಪಾಡಿಯಿಂದ 4 ಮೈಲು ದೂರದಲ್ಲಿದೆ. ಧಾನ್ಯದ ವ್ಯಾಪಾರದಲ್ಲಿ ಇದು ಮುಖ್ಯ ಕೇಂದ್ರ. ಇದು ಪಾಲಾರ್ ನದಿಯ ಬಲ ದಡದಲ್ಲಿ ನೆಲಸಿದ್ದು ಸುತ್ತಲೂ ಮನೋರಂಜಕ ಗುಡ್ಡ ಪ್ರದೇಶಗಳಿಂದ ಆವರಿಸಲ್ಪಟ್ಟಿರುತ್ತದೆ. ರೈಲ್ವೆ ಸ್ಟೇಶನಿನ ಒಂದು ಫರ್ಲಾಂಗು ದೂರದೊಳಗೆ ಪ್ರಯಾಣಿಕರಿಗೆ ಉಳಕೊಳ್ಳಲು ಒಂದು ಬಂಗ್ಲೆಯನ್ನು ಕಟ್ಟಿಸಿರುತ್ತಾರೆ. ಅಲ್ಲದೆ ಅದರ ಹತ್ತಿರ ಹಿಂದೂದೇಶದ ಪ್ರಯಾಣಿಕರಿಗೆ ಉಳಕೊಳ್ಳಲು ಯೋಗ್ಯವಾದ ಮುನಿಸಾಮಿ ಮುದಲಿಯಾರರಿಂದ ಸ್ಥಾಪಿತವಾದ ಮತ್ತೊಂದು ವಸತಿಯು ಇರುತ್ತದೆ. ಇಲ್ಲಿ ಒಂದೇ ಬಾರಿ ಐದು ಕುಟುಂಬಗಳು ಬಂದು ನೆಲಸುವ ಅನುಕೂಲತೆಗಳಿವೆ. ವೆಲ್ಲೂರಿನಲ್ಲಿ ಕಾಣಲಿರುವ ಮುಖ್ಯ ಸ್ಥಳಗಳೆಂದರೆ, ಸೆಂಟ್ರಲ್ ಜೈಲು, ಅಲ್ಲಿಯ ಒಂದು ಕೋಟೆ ಮತ್ತು ಅದರೊಳಗಿನ ದೇವಾಲಯ. ಈ ಕೋಟೆಯು ಕ್ರಿ. ಶ. 1274ರಲ್ಲಿ ಬೊಮ್ಮಿರೆಡ್ಡಿ ಎಂಬ ಭದ್ರಾಚಲದ ಒಬ್ಬ ಮುಖಂಡನಿಂದ ಕಟ್ಟಿಸಲ್ಪಟ್ಟಿತು ಎಂಬುದಾಗಿ ಜನರು ಹೇಳಿಕೊಳ್ಳುತ್ತಾರೆ. ಇದು 1760ರಲ್ಲಿ ಬ್ರಿಟಿಷರ ಕೈವಶವಾಯಿತು. ಇದರ ಒಳಗೆ ನೆಲಸಿರುವ ದೇವಾಲಯವು ಕೆತ್ತನೆಯ ಕೆಲಸದಲ್ಲಿ ಮಧುರೆಯ ದೇವಾಲಯಕ್ಕಿಂತ ಹೆಚ್ಚು ಪ್ರಸಿದ್ಧಿ ಹೊಂದಿದೆ.




ಗೋವಿಂದರಾಜ ಸ್ವಾಮಿ ದೇವಾಲಯ ಮತ್ತು ಕೊಳ.

ತಿರುಪತಿ

ತಿರುಪತಿಯ ಬೆಟ್ಟದ ಮೇಲಿನ ವೆಂಕಟೇಶ ದೇವಾಲಯವು ಪುರಾಣ ಪ್ರಸಿದ್ಧವಾಗಿದೆ. ದೇವಾಲಯ ಸಂದರ್ಶನಕ್ಕಾಗಿ ಹಿಂದೂದೇಶದ ಎಲ್ಲಾ ಭಾಗಗಳಿಂದ ಪ್ರತೀ ವರ್ಷ ಸಾವಿರಗಟ್ಟಲೆಯಲ್ಲಿ ಯಾತ್ರಿಕರು ಹೋಗುತ್ತಾರೆ. ಸಾಧಾರಣ ಸಪ್ಟಂಬರ ತಿಂಗಳ ಮಧ್ಯದಲ್ಲಿ "ಬ್ರಹ್ಮೋತ್ಸವ" ಎಂಬ ಭಾರಿ ಸಮಾರಂಭದ ಜಾತ್ರೆಯು ಇಲ್ಲಿ ನಡೆಯುತ್ತದೆ. ತಿರುಪತಿಯ ದೇವಾಲಯದಲ್ಲಿದ್ದಷ್ಟು ಐಶ್ವರ್ಯವು ಹಿಂದೂದೇಶದ ಬೇರಾವ ದೇವಾಲಯಗಳಲ್ಲಿಯೂ ಇರುವುದಿಲ್ಲ. ಪಟ್ಟಣಕ್ಕೆ ಒಂದು ಮೈಲು ದೂರದಲ್ಲಿ "ಕಪಿಲಾ ತೀರ್ಥ"ವೆಂಬ ಕೆರೆ ಇದೆ. ಯಾತ್ರಿಕರು ಈ ಕೆರೆಯಲ್ಲಿ ಸ್ನಾನ ಮಾಡಿಯೇ ದೇವರ ದರ್ಶನಕ್ಕೆ ಹೊರಡುತ್ತಾರೆ.

ತುಂಗಭದ್ರಾ

ಈ ಪಟ್ಟಣವು ತುಂಗಭದ್ರಾ ನದಿಯ ತೀರದಲ್ಲಿದೆ. ಕಾಶೀಯಾತ್ರೆ ಮಾಡುವ ಯಾತ್ರಿಕರು ದಾರಿಯಲ್ಲಿ ಇಲ್ಲಿ ಇಳಿದು ಪುಣ್ಯ ನದಿಯಾದ ತುಂಗಭದ್ರೆಯಲ್ಲಿ ಸ್ನಾನ ಮಾಡಿ ಮುಂದುವರಿಯುತ್ತಾರೆ. ಇಲ್ಲಿ ಎರಡು ದೊಡ್ಡ



ತಿರುಪತಿ ಬೆಟ್ಟದ ಮೇಲಿನ ದೇವಸ್ಥಾನ.

ಧರ್ಮಶಾಲೆಗಳು ಇವೆ. ಪಟ್ಟಣದ 9 ಮೈಲು ಪೂರ್ವಕ್ಕೆ ಮಂತ್ರಾಲಯ ಎಂಬಲ್ಲಿ ರಾಘವೇಂದ್ರ ಸ್ವಾಮಿಯ ಪ್ರಸಿದ್ಧ ದೇವಾಲಯವಿದೆ. ಇಲ್ಲಿ ಆಗಸ್ಟ ತಿಂಗಳಲ್ಲಿ ನಡೆಯುವ 9 ದಿವಸ ದೊಡ್ಡ ಜಾತ್ರೆಯೊಂದು ಪ್ರತೀ ವರ್ಷ ನಡೆಯುತ್ತದೆ.

ಕೋಲ್ಹಾಪುರ

ಇದು ಅದೇ ಹೆಸರಿನ ರಾಜ್ಯದ ಸಮುದ್ರ ಮಟ್ಟದಿಂದ 1800 ಅಡಿ ಮೇಲಕ್ಕಿರುವ ಮುಖ್ಯ ಪಟ್ಟಣ. ಇಲ್ಲಿ ಹೆಚ್ಚಿನ ಜನಸಂಖ್ಯೆಯು ಇರುತ್ತದೆ. ಕೋಲ್ಹಾಪುರವು ಇತಿಹಾಸಪ್ರಸಿದ್ಧ ಸ್ಥಳವಾಗಿರುತ್ತದೆ. ಇಲ್ಲಿ ಮಹಾಲಕ್ಷ್ಮಿಯ ದೊಡ್ಡ ದೇವಾಲಯವಿದೆ.

ಹಿಂದೂದೇಶದ ಕುರಿತು ಕೆಲವು ವಿವರಗಳು.

ಹಿಂದೂದೇಶವು ಉತ್ತರದಿಂದ ದಕ್ಷಿಣಕ್ಕೆ 2,000 ಮೈಲುಗಳ ವಿಸ್ತಾರಕ್ಕೂ, ಪೂರ್ವದಿಂದ ಪಶ್ಚಿಮಕ್ಕೆ ಸಾಧಾರಣ 2,500 ಮೈಲುಗಳ ದೂರಕ್ಕೂ ಚಾಚಿಕೊಂಡಿರುತ್ತದೆ. ಅದರ ಚದರಳತೆಯು ಬ್ರಿಟಿಷ್ ದ್ವೀಪಗಳಿಗಿಂತ 22 ಪಾಲು ಹೆಚ್ಚಿದೆ. ಹಿಂದೂದೇಶದಲ್ಲಿ 6,000 ಮೈಲು ನೆಲದ ಮೇರೆಯೂ, 5,000 ಮೈಲು ಸಮುದ್ರ ಕರಾವಳಿಯೂ ಹರಡಿಕೊಂಡಿದೆ. ಹಿಂದೂದೇಶದ ಸಹಜರೂಪವನ್ನು ನೋಡಿದರೆ ಅದನ್ನು ಮುಖ್ಯ ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು. (1) ಉತ್ತರದಲ್ಲಿ ಹಿಮಾಲಯ ಪರ್ವತದ ಸಾಲುಗಳು. (2) ನಡುವೆ ಸಿಂಧೂ-ಗಂಗಾ ಪ್ರದೇಶ. (3) ದಕ್ಷಿಣದಲ್ಲಿ ಡೆಕ್ಕಾನ್ ಪೀಠಭೂಮಿ. ಹಿಮಾಲಯ ಪರ್ವತದ ಸಾಲಿನಲ್ಲಿ ಎವರೆಸ್ಟ್ ಶಿಖರವು ಭೂಲೋಕದ ಅತ್ಯುನ್ನತ ಪರ್ವತ ಶಿಖರವೆಂದು ಕಂಡುಹಿಡಿಯಲ್ಪಟ್ಟಿದೆ. ಅದರ ಎತ್ತರವು 29,002 ಅಡಿ. ಎರಡನೆಯ ಪ್ರದೇಶವು ಹಿಂದೂದೇಶದ ಅತೀ ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶವಾಗಿರುತ್ತದೆ. ಮೂರನೆಯ ವಿಭಾಗವು ತ್ರಿಕೋನಾಕೃತಿಯುಳ್ಳದ್ದಾಗಿರುತ್ತದೆ.

ಹಿಂದೂದೇಶದ ಹವಾಗುಣ ಮತ್ತು ಮಳೆ

ಪರ್ವತ ಪ್ರದೇಶಗಳಲ್ಲಿ ಚಳಿಯೂ, ತಗ್ಗು ಪ್ರದೇಶಗಳಲ್ಲಿ ಸೆಖೆಯೂ ಹಿಂದೂದೇಶದ ಸಾಮಾನ್ಯ ಶೀತೋಷ್ಣಸ್ಥಿತಿ. ಹಿಂದೂಸ್ಥಾನದ ಶೀತೋಷ್ಣಸ್ಥಿತಿಯನ್ನು ಪರಿಶೀಲಿಸಿ, ವರ್ಷಕಾಲವನ್ನು ಮೂರು ಮುಖ್ಯ ಭಾಗಗಳನ್ನಾಗಿ ವಿಂಗಡಿಸಬಹುದು. 1. ಸೆಖೆಗಾಲ, 2. ಮಳೆಗಾಲ, 3. ಚಳಿಗಾಲ. ಆದರೆ ದೇಶದ ಎಲ್ಲಾ ಭಾಗಗಳಲ್ಲಿ ಕ್ರಮಪ್ರಕಾರವಾಗಿ ಈ ರೀತಿಯ ಮೂರು ಕಾಲಭೇದಗಳು ಕಂಡುಬಾರದಿದ್ದರೂ, ದೇಶದ ಈಶಾನ್ಯ ಭಾಗಗಳಲ್ಲಿ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ಇವು ಕ್ರಮ ತಪ್ಪದೆ ಸರಿಹೋಗುತ್ತವೆ. ಮಾರ್ಚಿ ತಿಂಗಳಿನಿಂದ ಮೇ ತಿಂಗಳ ವರೆಗೆ ಸೆಕೆಗಾಲವೆಂದೂ, ಜೂನ್ ತಿಂಗಳಿಂದ ಒಕ್ಟೋಬರ ತಿಂಗಳ ವರೆಗೆ ಮಳೆಗಾಲವೆಂದೂ ಉಳಿದ ತಿಂಗಳುಗಳಲ್ಲಿ ಚಳಿಯೆಂದೂ ನಿಷ್ಕರ್ಷೆಮಾಡಿರುತ್ತಾರೆ. ಪಶ್ಚಿಮ ಘಟ್ಟಗಳ ಪಶ್ಚಿಮ ಪ್ರದೇಶಗಳು ಅಸ್ಸಾಮಿನ ಗುಡ್ಡಪ್ರದೇಶಗಳು, ಪಶ್ಚಿಮ ಹಿಮಾಲಯಗಳು ಮತ್ತು ಗಂಗಾನದಿಯ ತಟಪ್ರದೇಶಗಳು, ಈ ಪ್ರದೇಶಗಳಲ್ಲಿ ಮಳೆಯು ಹೆಚ್ಚು. ಚಿರಾಪುಂಜಿ ಎಂಬಲ್ಲಿ ವರ್ಷಕ್ಕೆ ಸರಾಸರಿ 450 ಇಂಚು ಮಳೆಯು ಬರುತ್ತದೆ. ಇದು ಲೋಕದ ಅತೀ ಹೆಚ್ಚು ಮಳೆ ಬರುವ ಸ್ಥಳವಾಗಿರುತ್ತದೆ.

ಹಿಂದೂದೇಶದ ನೆಲಗುಣ

ನದಿಗಳ ತಟಪ್ರದೇಶದ ಮಣ್ಣು ಅತ್ಯಂತ ಫಲದಾಯಕವಾಗಿರುತ್ತದೆ. ಡೆಕ್ಕಾನ ಪ್ರದೇಶದಲ್ಲಿ ಹತ್ತಿಯ ಬೆಳೆಗೆ ಯೋಗ್ಯವಾದ ಕಪ್ಪುತರದ ಒಂದು ಮಣ್ಣು ದೊರೆಯುತ್ತದೆ.

ಸಮುದ್ರ ಕರಾವಳಿ

ಹಿಂದೂದೇಶದ ಕರಾವಳಿಯು ಹೆಚ್ಚು ಕಡೆಗಳಲ್ಲಿ ಕವಲೊಡೆಯಲಿಲ್ಲ. ಇದು ವ್ಯಾಪಾರದೃಷ್ಟಿಯಲ್ಲಿ ಒಂದು ಬಲವಾದ ತಡೆ. 5,000 ಮೈಲುಗಳ ಸಮುದ್ರಕರಾವಳಿಯಲ್ಲಿ ಕೇವಲ ನಾಲ್ಕು ಕಡೆಯಲ್ಲಿ ಮಾತ್ರ ಕವಲುಗಳು ಕಂಡುಬರುತ್ತವೆ. ಹಿಂದೂದೇಶದ ಸುತ್ತಲೂ ಹೆಚ್ಚಿನ ದ್ವೀಪಗಳೇನೂ ತೋರುವುದಿಲ್ಲ. ಅದಲ್ಲದೆ ಸುತ್ತಲಿನ ಸಮುದ್ರವೆಲ್ಲವೂ ಅಲ್ಪ ಆಳ ಉಳ್ಳದ್ದಾಗಿರುತ್ತದೆ.

ಹಿಂದೂದೇಶದ ವಿಸ್ತಾರ

ಹಿಂದೂದೇಶದ ಚದರಳತೆಯು 1,808,679 ಚದರ ಮೈಲುಗಳು. ಇದು ಬ್ರಿಟಿಷ್ ದ್ವೀಪಗಳಿಗಿಂತ ಸುಮಾರು 20 ಪಾಲು ಹೆಚ್ಚು. ಯುರೋಪಿನಿಂದ, ರಷ್ಯದ ಒಂದಂಶವನ್ನು ದೂರವಾಗಿರಿಸಿದರೆ ಆಗ ಮಾತ್ರ ಸಾಧಾರಣ ಹೆಚ್ಚು ಕಡಿಮೆ ಇಷ್ಟೇ ಆಗುತ್ತದೆ. ಬ್ರಿಟಿಷ್ ಹಿಂದೂಸ್ಥಾನದ ವಿಸ್ತಾರವು 1,096,171 ಚದರ ಮೈಲುಗಳು. ಉಳಿದ ಹಿಂದೂಸ್ಥಾನದ ಚದರಳತೆಯು 712,508 ಚದರ ಮೈಲುಗಳು.

ಪರ್ವತ ಕಣಿವೆಗಳು

ಹಿಂದೂದೇಶದ ಎರಡು ಮುಖ್ಯ ದ್ವಾರಗಳೆಂದರೆ ಖೈಬರ್ ಕಣಿವೆ ಮತ್ತು ಬೋಲನ್ ಕಣಿವೆ. ಇವಲ್ಲದೆ ಗೋಮುರ್ ಕಣಿವೆ ಎಂಬುದಾಗಿ ಮೂರನೇ ಒಂದು ಕಣಿವೆಯೂ ಇದೆ.

ಹಿಂದೂಸ್ಥಾನದ ನದಿಸಮುದಾಯಗಳು

(1) ಉತ್ತರ ಹಿಂದೂಸ್ಥಾನದ ನದಿಗಳು:—ಈ ನದಿಗಳೆಲ್ಲಾ ಹಿಂಬದಿಯಲ್ಲಿರುವ ಪರ್ವತಗಳ ಸಾಲುಗಳಲ್ಲಿ ಉದ್ಭವವಾಗುತ್ತವೆ. ಪರ್ವತದಲ್ಲಿ ಮುಚ್ಚಿಕೊಂಡಿರುವ ಹಿಮರಾಶಿಯು ಸೂರ್ಯನ ಬಿಸಿಲಿಗೆ ಕರಗಿ ಈ ನದಿಯ ರೂಪಗಳಲ್ಲಿ ಪ್ರವಹಿಸುತ್ತದೆ. ಅವುಗಳ ಜಲರಾಶಿಯು ಪರ್ವತದ ಹಿಮಗಡ್ಡೆಯಲ್ಲಿ ಹೊಂದಿರುವುದಲ್ಲದೆ, ಮಳೆಯ ಮೇಲೆ ಹೊಂದಿ ಇಲ್ಲ. ಉತ್ತರ ಭಾಗದಲ್ಲಿ ಹರಿಯುವ ನದಿಗಳಲ್ಲಿ ಮೂರು ಮುಖ್ಯ ನದಿಗಳಾಗಿರುತ್ತವೆ. (1) ಐದು ಉಪನದಿಗಳಿಂದ ಕೂಡಿದ ಸಿಂಧೂನದಿ. (3) ಗಂಗಾನದಿ ಮತ್ತು ಅದರ ಉಪನದಿಗಳು. (2) ಬ್ರಹ್ಮಪುತ್ರಾ ನದಿ.

(2) ದಕ್ಷಿಣ ಹಿಂದೂಸ್ಥಾನದ ನದಿಗಳು:—ಇವುಗಳಿಗೂ ಉತ್ತರ ಹಿಂದೂಸ್ಥಾನದ ನದಿಗಳಿಗೂ ಹಲವು ಭೇದಗಳಿವೆ. ದಕ್ಷಿಣ ದೇಶದ ನದಿಗಳು ಪೀಠಭೂಮಿಯಲ್ಲಿನ ಪರ್ವತಗಳಲ್ಲಿ ಹುಟ್ಟಿ, ತಮ್ಮ ಅಸ್ತಿತ್ವಕ್ಕೆ ಮಳೆಯ ಮೇಲೇ ಪೂರ್ಣ ಹೊಂದಿರುತ್ತವೆ. ಸಾಮಾನ್ಯವಾಗಿ ಈ ಎಲ್ಲಾ ನದಿಗಳು ಪಶ್ಚಿಮ ಘಟ್ಟದಲ್ಲಿ ಹುಟ್ಟಿ, ಬಂಗಾಳಕೊಲ್ಲಿಗೆ ಹೋಗಿ ಸೇರುತ್ತವೆ. ಮಹಾನದಿ,

ಬಾದಾಮಿ

ಇಲ್ಲಿಯ ಜೈನ ಶಿಲ್ಪ ಕೆಲಸ ಮತ್ತು ಗುಹೆಯೊಳಗಿನ ದೇವಾಲಯಗಳು ಬಹಳ ಪ್ರಖ್ಯಾತಿ ಪಟ್ಟಿವೆ. ಜೈನರ ಒಂದು ಗವಿಯು 31 ಅಡಿ ಉದ್ದವಿದ್ದು 19 ಅಡಿ ಆಳವಿದೆ. ಐದು ಹೆಡೆಯ ಸರ್ಪದ ಮೇಲೆ ಮಂಡಿಸಿರುವ ನರಸಿಂಹ ಅವತಾರ ಮೂರ್ತಿಯ ಒಂದು ಕೆತ್ತನೆಯ ಕೆಲಸವು ಈಗಿನ ಜನರಲ್ಲೂ ಆಶ್ಚರ್ಯವನ್ನುಂಟುಮಾಡುತ್ತದೆ. ಪಟ್ಟಣದಿಂದ 9 ಮೈಲು ದೂರದಲ್ಲಿ ಪಕೀರಗಡ ಎಂಬ ಚಿಕ್ಕ ಹಳ್ಳಿಯಲ್ಲಿ ದೇವಿ ವನಶಂಕರಿಯ ಒಂದು ಪುರಾತನ ದೇವಾಲಯವು ಈಗಲೂ ನೆಲೆನಿಂತಿದೆ. ಪ್ರತಿ ವರ್ಷ ಜನವರಿ ಮಾಸದಲ್ಲಿ ಇಲ್ಲಿ ದೊಡ್ಡ ಸಂತೆಯು ನಡೆಯುತ್ತದೆ. ಆಗ ದೇಶದ ಆಯಾಯ ಭಾಗಗಳಿಂದ ಜನರು ಇಲ್ಲಿ ಬಂದು ನೆರೆಯುತ್ತಾರೆ. ಗವಿಗಳನ್ನು ಸಂದರ್ಶಿಸಲು ಆತುರವುಳ್ಳ ಪ್ರಯಾಣಿಕರು ಸ್ಟೇಶನ್ ಮಾಸ್ತರ ಹತ್ತಿರ ತಿಳಿಸಿಬಿಟ್ಟರೆ ಬರೇ ಎಂಟು ಆಣೆ ಖರ್ಚಿನೊಳಗೆ ಎತ್ತಿನ ಗಾಡಿಯ ಮೂಲಕ ಎಲ್ಲಾ ಗವಿಗಳನ್ನು ಸಂದರ್ಶಿಸಿ ಬರಬಹುದು. ರೈಲ್ವೆ ನಿಲ್ದಾಣಕ್ಕೆ ಸಮೀಪದಲ್ಲಿಯೇ ಒಂದು ಧರ್ಮಶಾಲೆಯನ್ನು ಕಟ್ಟಿಸಿರುತ್ತಾರೆ.

ಗೋದಾವರಿ

ಈ ಪಟ್ಟಣವು ಗೋದಾವರಿ ನದಿಯ ಮೇಲೆ ಕಟ್ಟಿದ ಸಂಕದ ಉತ್ತರದಲ್ಲಿದೆ. ಗೋದಾವರಿ ನದಿಯು ಬೊಂಬಾಯಿ ಆಧಿಪತ್ಯದ ನಾಸಿಕದಲ್ಲಿರುವ ತ್ರ್ಯಂಬಕ್ ಎಂಬಲ್ಲಿ ಹುಟ್ಟಿ, ಡೆಕ್ಕಾನ ಮತ್ತು ನೈಜಾಮನ ರಾಜ್ಯಗಳ ಮೇಲಿಂದ ಹಾದು ಹೋಗುತ್ತದೆ. ಗೋದಾವರಿಯ ನದಿಯ ಮೇಲೆ $1\frac{3}{4}$ ಮೈಲು ಉದ್ದ ಇರುವ ಸಂಕವನ್ನು ಕಟ್ಟಿರುತ್ತಾರೆ. ಇದು ಹಿಂದೂದೇಶದ ಎರಡನೇ ದೊಡ್ಡ ಸಂಕವೆಂದು ಪ್ರಸಿದ್ಧಿ ಹೊಂದಿದೆ. ಹಿಂದುಗಳು ಗೋದಾವರಿಯನ್ನು ಪುಣ್ಯ ನದಿ ಎಂದು ಕರೆಯುತ್ತಾರೆ. ಪ್ರತೀ ಹನ್ನೆರಡು ವರ್ಷಕ್ಕೊಮ್ಮೆ "ಪುಷ್ಕರಮ್" ಎಂಬ ದೊಡ್ಡ ಜಾತ್ರೆಯು ನಡೆಯುತ್ತದೆ. ಆಗ ಹಿಂದುಗಳು ತಂಡೋಪತಂಡವಾಗಿ ಬಂದು ನೆರೆಯುತ್ತಾರೆ.



ತ್ರಿಚಿನಾಪಳ್ಳಿಯ ಬಂಡೆ ಮತ್ತು ದೇವಾಲಯ

ಭದ್ರಾಚಲ

ಇದು ಹಿಂದುಗಳ ಪವಿತ್ರ ಸ್ಥಳಗಳಲ್ಲಿ ಒಂದಾಗಿರುತ್ತದೆ. ಪಟ್ಟಣವು ಗೋದಾವರಿ ನದೀ ತೀರದಲ್ಲಿದೆ. ಹಿಂದುಗಳ ಪುರಾಣದಲ್ಲಿ ಶ್ರೀ ರಾಮಚಂದ್ರನು ಭದ್ರಾಚಲದ ಸುತ್ತಲಿನ ಕಾಡಿನಲ್ಲಿ ಸೀತಾದೇವಿಯ ಶೋಧನೆಗಾಗಿ ಬಂದಿದ್ದನೆಂದೂ, ಆತನು ಗೋದಾವರಿಯನ್ನು ದಾಟಿ ಅಲ್ಲಿಗೆ ಮುಟ್ಟಿದನೆಂದೂ ಹೇಳುತ್ತಾರೆ. ಭದ್ರಾಚಲದಲ್ಲಿ ಶ್ರೀ ರಾಮಚಂದ್ರ ಸ್ವಾಮಿಯ ದೊಡ್ಡ ದೇವಾಲಯವಿದೆ. ದಕ್ಷಿಣ ಹಿಂದುಸ್ಥಾನದ ದೇವಾಲಯಗಳಲ್ಲಿ ಇದು ಅತೀ ಹೆಚ್ಚು ಐಶ್ವರ್ಯವುಳ್ಳದ್ದು. ದೇವಾಲಯದ ಸುತ್ತಲೂ 24 ಚಿಕ್ಕ ಗೋಪುರಗಳಿವೆ. ಭದ್ರಾಚಲದ ದೊಡ್ಡ ಜಾತ್ರೆಯು ಎಪ್ರಿಲ್ ತಿಂಗಳಲ್ಲಿ ಜರಗುತ್ತದೆ. ಆಗ ಸಾಧಾರಣ 50,000ಕ್ಕಿಂತ ಹೆಚ್ಚಿನ ಯಾತ್ರಿಕರು ಬಂದು ಅಲ್ಲಿ ಸೇರುತ್ತಾರೆ

ಗೋದಾವರಿ, ಕೃಷ್ಣಾ ಮತ್ತು ಕಾವೇರಿ ಇವು ಈ ಭಾಗದ ಮುಖ್ಯ ನದಿಗಳು. ಪೀಠಭೂಮಿಯ ಉತ್ತರ ಭಾಗದಲ್ಲಿ ನರ್ಮದಾ ಮತ್ತು ತಪತಿ ಎಂಬ ಎರಡು ನದಿಗಳು ಪಶ್ಚಿಮಾಭಿಮುಖವಾಗಿ ಹರಿಯುತ್ತವೆ.

ಜನಸಂಖ್ಯೆ

ಹಿಂದೂದೇಶದ ಜನಸಂಖ್ಯೆಯು 352,837,778 ಎಂದು 1931ನೇ ಜನಗಣನೆಯು ಹೇಳುತ್ತದೆ. ಇದು ಭೂಲೋಕದ ಜನಸಂಖ್ಯೆಯ ಐದನೇ ಒಂದಂಶವಾಗಿರುತ್ತದೆ. ಅಂದಾಜು ಮೇರೆಗೆ ಹೇಳುವುದಾದರೆ ಬ್ರಿಟಿಷ್ ಹಿಂದೂಸ್ಥಾನದಲ್ಲಿ 100ಕ್ಕೆ 68 ಜನ ಹಿಂದುಗಳು, 22 ಮಹಮ್ಮದೀಯರು, 3 ಬೌದ್ಧರು 3 ಎನಿಮಿಸ್ಟರು, 1 ಸಿಕ್ಖ ಮತ್ತು 1 ಕ್ರೈಸ್ತ ಈ ರೀತಿಯಲ್ಲಿ ವಿವಿಧ ಮತದ ಜನರಿರುತ್ತಾರೆ. ಇನ್ನುಳಿದ 2ರಲ್ಲಿ ಒಬ್ಬ ಬೌದ್ಧ ಇಲ್ಲವೆ ಕ್ರೈಸ್ತ ಮತೀಯ ಜೈನನೆನ್ನಬಹುದು. ಜನನ ಮತ್ತು ಮರಣ ಸಂಖ್ಯೆಗಳನ್ನು ಕುರಿತು ನೋಡುವುದಾದರೆ ಹಿಂದೂದೇಶವು ಭೂಲೋಕದಲ್ಲಿ ಎಲ್ಲ ದೇಶಗಳಿಗಿಂತಲೂ ಮುಂದಾಗಿದೆ.

ಬ್ರಿಟಿಷ್ ಹಿಂದೂಸ್ಥಾನ

ಇದರ ವಿಸ್ತಾರವು 10,96,171 ಚದರ ಮೈಲುಗಳು ಮತ್ತು ಇಲ್ಲಿಯ ಜನಸಂಖ್ಯೆ 271,526,933

ಸ್ಥಾನ

61° ಯಿಂದ 101° ಪೂರ್ವ ಅಕ್ಷಾಂಶ ಮತ್ತು 8° ಯಿಂದ 37° ಉತ್ತರ ರೇಖಾಂಶದ ಮಧ್ಯದಲ್ಲಿ ಹಿಂದೂದೇಶವು ಪಸರಿಸಿರುತ್ತದೆ.

ಹಿಂದೂದೇಶದ ಸಂಸ್ಥಾನಗಳು

ಇವುಗಳಲ್ಲಿ ಪ್ರತಿಯೊಂದು ಬೇರೆ ಬೇರೆ ಅರಸರ ಆಳ್ವಿಕೆಯಲ್ಲಿದೆ. ಈ ಅರಸರ ಮೇಲೆ ಬ್ರಿಟಿಷ್ ಸರಕಾರವು ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ. ಇವುಗಳ ಸಂಪೂರ್ಣ ವಿಸ್ತಾರವು 712,508 ಚದರ ಮೈಲುಗಳು. ಹಿಂದೂದೇಶದಲ್ಲಿ ಸಾಧಾರಣ 600 ಸಂಸ್ಥಾನಗಳಿವೆ. ಇಲ್ಲಿಯ ಒಟ್ಟು ಜನಸಂಖ್ಯೆ 81,310,845. ಬ್ರಿಟಿಷ್ ಸರಕಾರಕ್ಕೂ ಈ ಸಂಸ್ಥಾನಗಳಿಗೂ ಇರುವ ಸಂಬಂಧದ ಕುರಿತು ಕರಾರುಗಳನ್ನು ಬೇರೆ ಬೇರೆ ಒಪ್ಪಂದಗಳನ್ನು ಮಾಡುವ ಸಮಯದಲ್ಲಿಯೇ ತೀರ್ಮಾನ ಮಾಡಿಕೊಂಡಿರುತ್ತಾರೆ. ಈ ಸಂಸ್ಥಾನಗಳ ಹಕ್ಕು ಬಾಧ್ಯತೆಗಳು ಈ ರೀತಿಯಾಗಿವೆ. (1) ತಮ್ಮ ರಾಜ್ಯದ ಆಡಳಿತವನ್ನು ತಾವೇ ನೋಡಿಕೊಳ್ಳಬಹುದು. (2) ತಮ್ಮ ರಾಜ್ಯದ ಕಂದಾಯವನ್ನು ತಾವೇ ವಸೂಲುಮಾಡುವ ಅಧಿಕಾರವುಳ್ಳವರಾಗಿದ್ದಾರೆ. (3) ತಮಗೆ ಬೇಕಾದ ನ್ಯಾಯಗಳನ್ನು ತಾವೇ ಮಾಡಿಕೊಳ್ಳಬಹುದು. (4) ತಮ್ಮ ರಾಜ್ಯ ರಕ್ಷಣೆಗೆ ಬೇಕಾದ ಸೈನ್ಯವನ್ನು ತಾವೇ ಇಟ್ಟುಕೊಳ್ಳಬಹುದು. ಆದರೆ ಇವರು ಪ್ರತಿಯೊಂದು ವಿಷಯದಲ್ಲಿ ಬ್ರಿಟಿಷರು ನೇಮಿಸಿದ ಪ್ರತಿನಿಧಿಗಳಿಂದ ಸಲಹೆಗಳನ್ನು ಕೇಳಬೇಕು.

ರಾಜಕೀಯ ವಿಭಾಗಗಳು

ಹಿಂದೂದೇಶವನ್ನು, ಗವರ್ನರರ ಪ್ರಾಂತ್ಯಗಳು, ಮುಖ್ಯ ಕಮಿಶನರರ ಪ್ರಾಂತ್ಯಗಳು ಮತ್ತು ಸಂಸ್ಥಾನಗಳು ಎಂಬ ಮೂರು ರಾಜಕೀಯ ವಿಭಾಗಗಳನ್ನಾಗಿ ಮಾಡಿರುವರು. ಪ್ರಾಂತ್ಯಗಳನ್ನು ಗವರ್ನರರು ಆಳುತ್ತಿರುವರು. ಹೊಸ ಆಕ್ಟಿನಂತೆ ಪ್ರಾಂತ್ಯಗಳು ಸ್ವತಂತ್ರವೆನ್ನಲಾಗಿದೆ. ಕೇಂದ್ರ ಸರಕಾರವು ಈ ಪ್ರಾಂತ್ಯಗಳ ಮೇಲೆ ಮುಖ್ಯಾಧಿಕಾರವನ್ನಿಟ್ಟುಕೊಂಡು, ವೈಸರಾಯರು ಮುಖ್ಯಾಧಿಪತಿಗಳಾಗಿ ಆಡಳಿತ ನಡೆದಿದೆ.

ಹಿಂದೂಸ್ಥಾನದ ರೈಲ್ವೆಗಳು

ದೇಶದ ರೈಲು ಮಾರ್ಗಗಳ ಒಟ್ಟು ಉದ್ದವು ಸಾಧಾರಣ 48,021 ಮೈಲು. ಈ ಮಾರ್ಗಗಳನ್ನು ರಚಿಸಲು 625,000,000 ಪೌಂಡುಗಳು ಖರ್ಚಾಗಿವೆ. ಸಾಧಾರಣ 84,503,000 ಟನ್ನುಗಳಷ್ಟು ಸಾಮಾನು ಪ್ರತಿ ವರುಷ ಈ ಮಾರ್ಗಗಳ ಮುಖಾಂತರ ಸಾಗಿಸಲ್ಪಡುತ್ತದೆ.

ದೊಡ್ಡ ಪಟ್ಟಣಗಳು

ಕಲ್ಕತ್ತವು ಅತೀ ದೊಡ್ಡ ಪಟ್ಟಣ; ಇದರ ಜನಸಂಖ್ಯೆ 1,419,321. ಎರಡನೆ ದೊಡ್ಡ ಪಟ್ಟಣವು ಬೊಂಬಾಯಿ. ಇದರ ಜನಸಂಖ್ಯೆಯು 1,157,851 ಮೂರನೇ ಪಟ್ಟಣವೇ ಮದರಾಸು. ಜನಸಂಖ್ಯೆ 647,228.

ಆಹಾರ ಸಾಮುಗ್ರಿಗಳು

ಭತ್ತವು ಹಿಂದೂದೇಶದ ಪ್ರಾಮುಖ್ಯದ ಬೆಳೆ. ದೇಶದ ಬೆಳೆಯ ⅓ ಅಂಶವು ಬಂಗಾಳದಲ್ಲಿಯೇ ಬೆಳೆಯುತ್ತದೆ. ಗೋಧಿಯು ಉಷ್ಣ ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದು ಸಂಯುಕ್ತ ಪ್ರಾಂತ ಮತ್ತು ಪಂಜಾಬದಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ಬಾರ್ಲಿಯು ಮುಖ್ಯವಾಗಿ ಸಂಯುಕ್ತ ಪ್ರಾಂತದಿಂದಲೇ ಬರುತ್ತದೆ. ರಾಗಿ ಜೋಳ ಇತ್ಯಾದಿಗಳು ಹತ್ತಿ ಬೆಳೆಯುವ ಕರಿ ಮಣ್ಣಿನಲ್ಲಿ ಬೆಳೆಯುತ್ತವೆ. ಮುಸುಕಿನ ಜೋಳವು ಉತ್ತರ ಹಿಂದೂಸ್ಥಾನದಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ತಿನ್ನುವ ಬೀಜಗಳು ನೀರು ಹೆಚ್ಚು ಇಲ್ಲದ ಸ್ಥಳದಲ್ಲಿಯೂ ಬೆಳೆಯುತ್ತವೆ. ಇವೂ ಉತ್ತರ ಹಿಂದೂಸ್ಥಾನದಲ್ಲಿ ಮುಖ್ಯವಾಗಿ ಬೆಳೆಯುತ್ತವೆ. ತರಕಾರಿಗಳು ಎಲ್ಲೆಲ್ಲಿಯೂ ಬೆಳೆಯುತ್ತವೆ. ಉತ್ತಮ ತರದ ಹಣ್ಣುಗಳು ಕಾಶ್ಮೀರದಲ್ಲಿಯೂ ಗಡಿನಾಡು ಪ್ರದೇಶದಲ್ಲಿಯೂ ಬೆಳೆಯುತ್ತವೆ.

ಮೆಣಸು ಸಾಮಾನ್ಯ ಎಲ್ಲೆಲ್ಲಿಯೂ ಬೆಳೆಯುತ್ತದೆ. ಇತರ ಸಾಂಬಾರ ಜೀನಸುಗಳಾದ ಏಲಕ್ಕಿ, ಒಳ್ಳೆಮೆಣಸು, ಶುಂಠಿ ಮುಂತಾದುವು ಮಲಬಾರದಲ್ಲಿಯೂ ತಿರುವಾಂಕೂರಿನಲ್ಲಿಯೂ ಬೆಳೆಯುತ್ತವೆ. ಕಾಫಿಯು ಮೈಸೂರಿನಲ್ಲಿಯೂ, ಕೊಡಗಿನಲ್ಲಿಯೂ, ತಿರುವಾಂಕೂರಿನಲ್ಲಿಯೂ, ಕೊಚ್ಚಿಯಲ್ಲಿಯೂ ನೀಲಗಿರಿಯಲ್ಲಿಯೂ, ಬೆಳೆಯುತ್ತದೆ. ಚೀನಾವನ್ನು ಬಿಟ್ಟರೆ, ಹಿಂದೂದೇಶವೆ, ಅತೀ ಹೆಚ್ಚು ಚಾ ಬೆಳೆಸುವ ದೇಶವೆನ್ನಬಹುದು. ಬಂಗಾಳ, ಅಸ್ಸಾಮು, ನೀಲಗಿರಿಯ ಬೆಟ್ಟಗಳಲ್ಲಿ ಇದು ಬೆಳೆಯುತ್ತದೆ.

ಹತ್ತಿಯು ಹಿಂದೂದೇಶದ ಮತ್ತೊಂದು ಪ್ರಾಮುಖ್ಯ ಬೆಳೆ. ಕಪ್ಪು ಮಣ್ಣು ಎಲ್ಲೆಲ್ಲಿ ಇದೆಯೋ ಅಲ್ಲಲ್ಲಿ ಇದು ಬೆಳೆಯುತ್ತದೆ. ಮುಖ್ಯವಾಗಿ ಕಾಥ್ಯಾವಾಡ, ಉತ್ತರ ಬೊಂಬಾಯಿ, ಮಧ್ಯ ಹಿಂದೂಸ್ಥಾನ, ಸಂಯುಕ್ತ ಪ್ರಾಂತ, ಪಂಜಾಬ. ಮದ್ರಾಸ್ ಸಂಸ್ಥಾನದ ಉತ್ತರ ಭಾಗ ಇಲ್ಲಿ ಹೆಚ್ಚಾಗಿ ಹತ್ತಿ ಬೆಳೆಯುತ್ತದೆ. ಸಂಯುಕ್ತ ಅಮೇರಿಕವನ್ನು ಬಿಟ್ಟರೆ, ಹಿಂದೂದೇಶವೆ ಹೆಚ್ಚು ಹತ್ತಿಯನ್ನು ಬೆಳೆಸುವ ದೇಶವಾಗಿದೆ. 60% ಹತ್ತಿಯು ಪರದೇಶಗಳಿಗೆ ಸಾಗಿಸಲ್ಪಡುತ್ತದೆ.

ಸಣಬಿನ ನಾರು ಹಿಂದೂದೇಶದ ಬಂಗಾಳ ಮತ್ತು ಅಸ್ಸಾಮು ಪ್ರಾಂತಗಳಲ್ಲಿ ಮಾತ್ರ ಬೆಳೆಯುತ್ತದೆ. ಜಗತ್ತಿನ ಗೋಣಿ ಚೀಲಗಳಿಗೆ ಬೇಕಾದ ನಾರು ಇಲ್ಲಿಂದಲೇ ತಯಾರಾಗುತ್ತಿದೆ.

[illegible] ಮಧ್ಯ ಪ್ರಾಂತದಲ್ಲಿಯೂ, ಬೀರಾರದಲ್ಲಿಯೂ, ಒರಿಸ್ಸಾ, ಸಂಯುಕ್ತ ಪ್ರಾಂತದಲ್ಲಿಯೂ. ಬಂಗಾಳದಲ್ಲಿಯೂ, ಅಸ್ಸಾಮುದಲ್ಲಿಯೂ. ಪಂಜಾಬದಲ್ಲಿಯೂ, ಬೀರಾರದಲ್ಲಿಯೂ. ಮದ್ರಾಸಿನಲ್ಲಿಯೂ, ಬೆಳೆಯುತ್ತದೆ.

[illegible] ಗಂಗಾನದಿಯ ತಪ್ಪಲುಗಳಲ್ಲಿಯೂ, ಪಾಟ್ನದಲ್ಲಿಯೂ ಸಂಯುಕ್ತ ಪ್ರಾಂತಗಳಲ್ಲಿಯೂ, ಮದರಾಸಿನಲ್ಲಿಯೂ ಬೆಳೆಯುತ್ತದೆ.

ಅಫೀಮನ್ನು ಸರಕಾರದವರೇ ಬೆಳೆಸುತ್ತಾರೆ. ಇದು, ಸಂಯುಕ್ತ ಪ್ರಾಂತ, ಮಧ್ಯ ಹಿಂದೂಸ್ಥಾನ, ರಜಪುತಾನ, ಬಂಗಾಳ, ಮುಂತಾದ ಪ್ರಾಂತಗಳಲ್ಲಿ ಬೆಳೆಯುತ್ತದೆ.

ತಂಬಾಕು ಬಂಗಾಳ. ಸಂಯುಕ್ತ ಪ್ರಾಂತ, ಮದ್ರಾಸ್. ತಿರುವಾಂಕೂರು ಬರ್ಮಾ ಒರಿಸ್ಸಾ, ಪಂಜಾಬ, ಮುಂತಾದಲ್ಲಿ ಬೆಳೆಯುತ್ತದೆ. ಅತ್ಯುತ್ತಮ ಸಿಗರೇಟು ಡಿಂಡಿಗಲ್ಲಿನಲ್ಲಿ ಬೆಳೆಯುವ ತಂಬಾಕಿನಿಂದಲೇ ತಯಾರಾಗುತ್ತಿದೆ. ಸಿಂಕೊನಾವು ನೀಲಗಿರಿ, ಮೈಸೂರು, ತಿರುವಾಂಕೂರು ಡಾರ್ಜಿಲಿಂಗ್ ಮುಂತಾದಲ್ಲಿ ಬೆಳೆಯುತ್ತದೆ.

ರೇಷ್ಮೆಯು, ಬಂಗಾಳ, ಕಾಶ್ಮೀರ, ಅಸ್ಸಾಮುಗಳಲ್ಲಿ ತಯಾರಾಗುತ್ತಿದೆ. ಅರಗು, ಹಿಂದೂದೇಶದ ಒರಿಸ್ಸಾ, ಬಂಗಾಳ, ಅಸ್ಸಾಮು, ಬರ್ಮಾ ಈ ಪ್ರಾಂತಗಳಲ್ಲಿ ಸಿಗುವುದಲ್ಲದೆ ಜಗತ್ತಿನ ಬೇರಾವ ಕಡೆಯಲ್ಲಿಯೂ ದೊರೆಯುವುದಿಲ್ಲ.

ರಬ್ಬರು ಮದ್ರಾಸ್, ಕೊಡಗು, ಮೈಸೂರು ತಿರುವಾಂಕೂರು ಕೊಚ್ಚಿ, ಬರ್ಮಾ ಈ ಪ್ರಾಂತಗಳಲ್ಲಿ ಬೆಳೆಯುತ್ತದೆ.

ಕಾಡುಗಳು

ಬ್ರಿಟಿಷ್ ಇಂಡಿಯದ, ⅕ ಭಾಗವು ಫೊರೆಸ್ಟ್ ಡಿಪಾರ್ಟುಮೆಂಟಿನ ಕೈ ಕೆಳಗಿದೆ. ಅಸ್ಸಾಮುದಲ್ಲಿ ಅತೀ ದೊಡ್ಡ ಕಾಡುಗಳಿವೆ. 1864 ಫೊರೆಸ್ಟ್ ಡಿಪಾರ್ಟುಮೆಂಟು ಹುಟ್ಟಿತು. ಪಶ್ಚಿಮ ಗಟ್ಟಗಳು ಹಿಮಾಲಯಗಳು, ಅಸ್ಸಾಮು, ಇಲ್ಲಿ ದೊಡ್ಡ ದೊಡ್ಡ ಕಾಡುಗಳಿವೆ. ಇಲ್ಲಿ, ಸಾಗುವಾನಿ ಮರವೇ ಅತೀ ಉತ್ತಮವಾದ ಮರವಾಗಿದೆ. ಪಶ್ಚಿಮ ಗಟ್ಟಗಳಲ್ಲಿಯೂ, ಅಸ್ಸಾಮುದಲ್ಲಿಯೂ, ಬರ್ಮಾದಲ್ಲಿಯೂ ಬೆಳೆಯುತ್ತದೆ. ಗಂಧದ ಮರವು ಮೈಸೂರು ಪ್ರಾಂತದಲ್ಲಿ ಬೆಳೆಯುತ್ತದೆ. ಬಿದಿರು ಎಲ್ಲಾ ಪ್ರಾಂತಗಳಲ್ಲಿಯೂ ಬೆಳೆಯುತ್ತದೆ. ತೆಂಗು ತಾಳೆಗಳು ಸಮುದ್ರ ಕರಾವಳಿಯಲ್ಲಿ ಬೆಳೆಯುತ್ತವೆ. ಸಿಂಧದಲ್ಲಿ ಖರ್ಜೂರ ಬೆಳೆಯುತ್ತದೆ. ಬಂಗಾಳದಲ್ಲಿ ಅಡಿಕೆ ಬೆಳೆಯುತ್ತದೆ.



ಕಾಣದ ಸ್ವರ್ಗ

(ಲೇಖಕ: ಶ್ರೀ। ಎಚ್. ಎನ್. ಶೆಟ್ಟಿ)

ನಿದ್ದೆಯ ಅಮಲಿನಿಂದ ಎಚ್ಚರ ತಪ್ಪಿದ ಮಾನವನನ್ನು ಉಷೆಯು ನಿತ್ಯ ಎಚ್ಚರಿಸುವಳು: ಅವನಲ್ಲಿ ಚೇತನವನ್ನು ತುಂಬುವಳು. ನಿಶೆಯು ಆಯಾಸ ಗೊಂಡವರನ್ನು ಸಂತಯಿಸಿ, ವಿರಾಮ ಕೊಡುವಳು. [illegible] ಪಾತವಾಗಿ ಎಲ್ಲಾ ಜೀವಿಗಳಲ್ಲಿ ಚೇತನ ತುಂಬಿಸುವ [illegible] ವರೆಗೆ ಸೂರ್ಯನು ವಿರಾಮವಿಲ್ಲದೆ ಸಂಚರಿಸುವಂತೆ [illegible] ಪ್ರಕೃತಿಯ ಮಕ್ಕಳಾದ ಎಲ್ಲಾ ಜೀವಿಗಳಿಗೆ ನೀರನ್ನು ಒದಗಿಸಿ ಕೊಡುವವು. ಪ್ರಕೃತಿಯ ಸೌಂದರ್ಯವನ್ನು ಚಿರಕಾಲ ಸಾಕಲೂ ಜಗತ್ತಿನ ವ್ಯವಹಾರಗಳನ್ನು ಚೆನ್ನಾಗಿ ಮನನಮಾಡಲೂ ಪರ್ವತ ಶಿಖರಗಳು ಅತ್ಯುನ್ನತ ಸ್ಥಾನದಲ್ಲಿ ಕುಳಿತು ಕೊಂಡಿರುವವು.

ಗಾಳಿಯು ಬೀಸುವುದು, ನದಿಗಳು ಹರಿಯುವವು, ಮುಗಿಲುಗಳು ಕವಿದು ಮಳೆಯಾಗುವುದು. ಪ್ರಾತಃಕಾಲವು ಕಳೆದು ಸಂಜೆಯಾಗುವುದು ನೆರಳಿದ್ದಲ್ಲಿ ಬಿಸಿಲು ಬರುವುದು, ಬಿಸಿಲು ಇದ್ದಲ್ಲಿ ನೆರಳು ಬರುವುದು. ಕಾಲನು ಈ ರೀತಿ ತನ್ನ ವೇಷಗಳನ್ನು ಬದಲಿಸುತ್ತ ಇರುವನು. ಇವೆಲ್ಲ ನಿತ್ಯದ ಚಿತ್ರಗಳು. ಕಣ್ತೆರೆದು ನೋಡಿದವರಿಗೆ ಮಾತ್ರವೇ ಗೋಚರಿಸುವುವು. ಪ್ರಕೃತಿಯು ಕ್ರಮವಾಗಿ ಕಾಲನ ಕುಣಿತಕ್ಕೆ ಹೆಜ್ಜೆ ಇಡುವಳು. ಎಲ್ಲವೂ ಶಿಸ್ತನ್ನು ಅನುಸರಿಸಿ ನಡೆಯುವವು.

ಆದರೆ ಎಷ್ಟು ಮಂದಿ ಮಾನವರು ಈ ಶಿಸ್ತಿಗೆ ಗಮನಕೊಟ್ಟಿರುವರು? ಮಾನವನನ್ನು ಬಿಟ್ಟು ಜಗತ್ತಿನ ಇತರ ಯಾವುದಾದರೂ ಒಂದು ಜೀವಿಗೆ ಮಾತು ಬರುತ್ತಿದ್ದರೆ ಬರೇ ಬೆರಳಿಂದ ಎಣಿಸುವಷ್ಟು ಮಂದಿ ಮಾನವರು ಮಾತ್ರ ಪ್ರಕೃತಿಯ ಈ ಶಿಸ್ತನ್ನು ದೃಷ್ಟಿಸಿರುವರು ಎಂದು ಧೈರ್ಯದಿಂದ ಅದು ಹೇಳುತ್ತಿತ್ತು.

ಜಗತ್ತಿನಲ್ಲಿ ಮಾನವನು ಮಾನವನಾಗಿ ಬಾಳಬೇಕಾದರೆ ಯಾವ ರೀತಿಯಲ್ಲಿ ಜೀವಿತ ನಡೆಸಬೇಕೆಂದು ಶಿಲ್ಪಿಯು ತನ್ನ ಶಿಲ್ಪಕಲೆಯಿಂದ ತೋರಿಸಿದನು. ಕವಿಯು ಹಾಡಿ ತೋರಿಸಿದನು. ಗ್ರಂಥಕರ್ತನು ಬರೆದು ತೋರಿಸಿದನು. ಬೋಧಕರು ಬೋಧಿಸಿ ತೋರಿಸಿದರು. ಈ ಬೆರಳಿಂದ ಎಣಿಸುವಷ್ಟು ಮಂದಿಗಳು ಮನುಷ್ಯನನ್ನು ಪಾವನನನ್ನಾಗಿ ಮಾಡಲು, ತಮ್ಮ ಜೀವಿತವನ್ನೇ ಧಾರೆ ಎರೆದಿದ್ದಾರೆ. ತಮ್ಮ ರಕ್ತವನ್ನು ಬೆವರಾಗಿ ಮಾಡಿದ್ದಾರೆ. ಹಗಲು ರಾತ್ರಿಯೆನ್ನದೆ ದುಡಿದಿದ್ದಾರೆ.

ಮನುಷ್ಯನಲ್ಲಿ ಒಗ್ಗಟ್ಟು ಹುಟ್ಟಲೆಂದು ಮತಗಳು ಜನ್ಮತಾಳಿದುವು. ಮನುಷ್ಯನು ಜಗತ್ತಿನ ಎಲ್ಲಾ ಜೀವಿಗಳನ್ನೂ ಸಮಾನ ದೃಷ್ಟಿಯಿಂದ ಕಾಣಲೆಂದು ಅವನು ದೇವನನ್ನು ಕಲ್ಪಿಸಿದನು. ಈ ಜಗತ್ತಿನಲ್ಲಿ ಮನುಷ್ಯನು ಚೆನ್ನಾಗಿ ಬಾಳಲೆಂದು ಸ್ವರ್ಗವನ್ನು ಅವನೇ ಕಲ್ಪಿಸಿದನು. ಈ ಲೋಕವು ಅಗತ್ಯವೆಂದೂ ನಶ್ವರವೆಂದೂ, ಇಲ್ಲಿಯ ಬಾಳುವೆಯು ನಿಸ್ಸಾರವಾದುದೆಂದೂ ಬೋಧಕರು ಬೋಧಿಸಿದರು. ಸ್ವರ್ಗವಿರಲಿ ಇಲ್ಲದಿರಲಿ ಆ ಪ್ರಶ್ನೆ ಬೇರೆ. ಅದರ ಚರ್ಚೆಗೆ ಇಲ್ಲಿ ಆಸ್ಪದವಿಲ್ಲ. ಆದರೆ ಮನುಷ್ಯನು ಇದನ್ನು ಯಾಕೆ ಕಲ್ಪಿಸಿದನು ಎಂಬ ಸಮಸ್ಯೆಯು ಮುಖ್ಯವಾಗಿದೆ. ಮನುಷ್ಯನಲ್ಲಿ [illegible] ಇದ್ದೇ ಇರುತ್ತದೆ. ಈ ಸ್ವಾರ್ಥದ ಬಂದಣಿಕೆಯು ಅವನಿಗೆ [illegible] ಅವನು [illegible], [illegible].

[illegible] ದುಃಖಮಯ ವಾಗಿದೆಯೆಂದು ನೆನೆಸಿ ಲೋಕ ಹಿತಸಾಧಕರು ಮನುಷ್ಯನ ಕೃತಿಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದರು. ಇವಕ್ಕೆ ಪಾಪ ಪುಣ್ಯವೆಂದು ಹೆಸರಿಟ್ಟರು. ಪಾಪ ಮಾಡಿದವರಿಗೆ ನರಕವೆಂದೂ, ಪುಣ್ಯ ಮಾಡಿದವರಿಗೆ ಸ್ವರ್ಗವೆಂದೂ ಎರಡು ಕಾಣದ ಸ್ಥಾನಗಳನ್ನು ಅವರು ಕಲ್ಪಿಸಿದರು. ಇವುಗಳ ಕಲ್ಪನೆ ಯಾದುದೇ ತಡ. ಮಾನವನು ಪುಣ್ಯ ಸಂಪಾದನೆಯ ದಾರಿಯನ್ನು ಕಂಡು ಹಿಡಿಯಲು ತೊಡಗಿದನು. ಅದಕ್ಕೆ ಧನವನ್ನು ವ್ಯಯಿಸಿದನು. ಸಾವಿರಾರು ಮೈಲುಗಳನ್ನು ದಾಟಿ ತೀರ್ಥ ಸ್ಥಳಗಳಿಗೆ ಹೋಗಲು ಅವನು ತೊಡಗಿದನು. ಯಾತ್ರೆ ಸ್ಥಳಗಳ ಧರ್ಮಾಧಿಕಾರಿಗಳು ಸ್ವರ್ಗದ ಕೀಲಿಯ ಅಧಿಕಾರವನ್ನು ತಮ್ಮಲ್ಲೇ [illegible]. ಇಲ್ಲಿಯೂ ಸ್ವರ್ಗದ ಬಲೆಯು ಮನುಷ್ಯನನ್ನು ಹಿಡಿದು ಬಿಟ್ಟಿತು.

ಇದೇನೇ ಇರಲಿ ಕಾಣದ ಸ್ವರ್ಗವನ್ನು ಪಡೆಯಲು ಹೋರಾಡಿ ಕಣ್ಣ ಮುಂದಿನ ಸ್ವರ್ಗವನ್ನು ಅವನು ಮರೆತುಬಿಟ್ಟನು. ಕೈಯಲ್ಲಿದ್ದ ತುತ್ತನ್ನು ಬಿಸುಟು ಬೇರೊಂದು ತುತ್ತಿಗೆ ಕೈಯಿಕ್ಕಿದನು.

ಸಾವಿರಾರು ಹಸಿವಿನ ಜೀವಿಗಳು ಅವನಿಗೆ ಕಾಣಲಿಲ್ಲ. ಅವರ ಬದಲು ಗುಡಿಯಿಲ್ಲದೆ ಕುಳಿತ ದೇವರ ನೆನಪು ಅವನಿಗಾಯಿತು. ಪುಣ್ಯದ ಹೆಸರಲ್ಲಿ, ಸ್ವರ್ಗದ ಲಾಲಸೆಯಿಂದ, ಅವನು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಗುಡಿ

ನೀರಾವರಿ ಉಪಯೋಗದಿಂದ ಹೆಚ್ಚು 40 ಮಿಲಿಯ ಎಕ್ಕರೆ ಸ್ಥಳಗಳಲ್ಲಿ ಕೃಷಿ ಸಾಗಿಸುವಂತಾಗಿದೆ. ಇದರಿಂದ 50 ಮಿಲಿಯ ಜನರಾದರೂ ವೃತ್ತಿ ಹಿಡಿದಿರುವರು. ದಿನನಿತ್ಯ ಹಿಂದೂದೇಶದಲ್ಲಿ ಸಾಧಾರಣ 260,000,000,000 ಗೆಲನು ನೀರು, ನೀರಾವರಿಯಿಂದ ದೊರೆಯುತ್ತದೆ.

ಕೈಗಾರಿಕೆಗಳು

ಹತ್ತಿಯ ಕೈಗಾರಿಕೆಯೇ ಅತೀ ದೊಡ್ಡದು. ಅನಂತರದ್ದೇ ಸಣಬಿನ ಕೈಗಾರಿಕೆಯು. 1885ರಲ್ಲಿ ಈ ಕೈಗಾರಿಕೆಯ ಗಿರಣಿಯು ಸ್ಥಾಪಿತವಾಯಿತು. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯೂ ಹಿಂದೂದೇಶದಲ್ಲಿ ನಡೆಯುತ್ತದೆ. ಟಾಟಾ ಕಂಪೆನಿಯು ಪ್ರಾಮುಖ್ಯವಾದುದಾಗಿದೆ. ಇದು 1907ರಲ್ಲಿ ಜನ್ಮವೆತ್ತಿತು.

ಖನಿಜಗಳು

ಚಿನ್ನವು ಮೈಸೂರಿನ ಕೋಲಾರ ಎಂಬಲ್ಲಿ ಸಿಗುತ್ತದೆ. ಜಗತ್ತಿನ ಉತ್ಪತ್ತಿಯ 3% ಮಾತ್ರ ಹಿಂದೂದೇಶದಲ್ಲಿ ದೊರೆಯುತ್ತದೆ. ಕೋಲಾರಿನಲ್ಲಿ ದೊರೆಯುವಷ್ಟು ಚಿನ್ನವು ಹಿಂದೂದೇಶದಲ್ಲಿ ಮತ್ತೆಲ್ಲಿಯೂ ದೊರೆಯುವುದಿಲ್ಲ.

ಕಲ್ಲಿದ್ದಲು, ಬಂಗಾರ, ಬಿಹಾರ, ಅಸ್ಸಾಮು, ಪಂಜಾಬ ಮತ್ತು ಮಧ್ಯ ಪ್ರಾಂತಗಳಲ್ಲಿ ಸಿಗುತ್ತದೆ. ಇಂಗ್ಲಾಂಡನ್ನು ಬಿಟ್ಟರೆ, ಹಿಂದೂದೇಶವೇ ಅತೀ ಹೆಚ್ಚಿನ ಕಲ್ಲಿದ್ದಲು ಒದಗಿಸಿ ಕೊಡುವ ಬ್ರಿಟಿಷ ದೇಶವೆನ್ನಬಹುದು. ಜೆರಿಯಾ ಎಂಬ ಗನಿಯೇ ಹಿಂದೂದೇಶದ ಅತೀ ದೊಡ್ಡ ಕಲ್ಲಿದ್ದಲ ಗನಿಯಾಗಿದೆ.

ಕಬ್ಬಿಣವು, ಬಂಗಾಳ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ದೊರೆಯುತ್ತದೆ. ಉಪ್ಪು : ಹಿಂದೂದೇಶಕ್ಕೆ ಬೇಕಾಗುವ ಉಪ್ಪಿನಲ್ಲಿ ಹಿಂದೂದೇಶದಲ್ಲಿಯೇ [illegible] ಹಿಂದೂದೇಶದಲ್ಲಿಯೇ ದೊರೆಯುತ್ತದೆ. ಪಂಜಾಬ, ರಜಪುತಾನ ಮುಂತಾದ ಕಡೆಗಳಲ್ಲಿ ಗನಿಗಳಿಂದ ಉಪ್ಪನ್ನು ತೆಗೆಯುತ್ತಾರೆ. ಸಮುದ್ರ ನೀರಿನಿಂದಲೂ ಕರಾವಳಿಯಲ್ಲಿ ಉಪ್ಪನ್ನು ತಯಾರಿಸುತ್ತಾರೆ.

ಪೆಟ್ರೋಲಿಯಮ್, ಅಸ್ಸಾಮು, ಬರ್ಮಾ—ಈ ಪ್ರಾಂತಗಳಲ್ಲಿ ದೊರೆಯುತ್ತದೆ. ಹಿಂದೂದೇಶದ ಪೆಟ್ರೋಲಿಯಮಿನಲ್ಲಿ 95% ಇಲ್ಲಿಯದೇ ಆಗಿದೆ.

ಅಭ್ರಕವು ಬಂಗಾಳ, ಬಿಹಾರ, ಮದರಾಸು—ಈ ಪ್ರಾಂತಗಳಲ್ಲಿ ದೊರೆಯುತ್ತದೆ. ಜಗತ್ತಿನ ಅಭ್ರಕ ಉತ್ಪತ್ತಿಯ 87% ಅಂಶವು ಹಿಂದೂದೇಶದ್ದಾಗಿದೆ. ವಿದ್ಯುತ್ ಕೈಗಾರಿಕೆಗಳಿಗೆ ಇದು ಮುಖ್ಯವಾಗಿದೆ.

ಮೇಂಗನಿಸ್—ಎಂಬುದು ಮಧ್ಯಪ್ರಾಂತ, ಮದರಾಸು, ಬೊಂಬಾಯಿ, ಮೈಸೂರು ಪ್ರಾಂತಗಳಲ್ಲಿ ದೊರೆಯುತ್ತದೆ. ಉಕ್ಕನ್ನು ತಯಾರಿಸಲು ಇದು ಬೇಕಾಗುತ್ತದೆ.

WHO IS WHO. . .

ದಕ್ಷಿಣ ಕನ್ನಡದ ಪ್ರಮುಖರು.



ಶ್ರೀ [illegible] ಹಿಂದೂದೇಶದಲ್ಲೆಲ್ಲ ಪ್ರಸಿದ್ಧವಾಗಿರುವ ಕೆನರಾ [illegible] ಕಂಪೆನಿ ಲಿಮಿಟೆಡ್, ಮಂಗಳೂರು, ಇದರ [illegible] ಡೈರೆಕ್ಟರರಾಗಿರು[illegible]. ಕೇವಲ ವರ್ಕ್ಸ್ ಮೆನೇಜರರಾಗಿ ಸುಮಾರು 20 ವರ್ಷಗಳ ಹಿಂದೆ ಆ ಕಂಪೆನಿಯನ್ನು ಸೇರಿದ ಇವರು ತಮ್ಮ ಅಸಾಮಾನ್ಯ ಬುದ್ಧಿಚಾತುರ್ಯ ಹಾಗೂ ಯೋಗ್ಯತೆಯಿಂದ ಜನರಲ್ ಮೆನೇಜ[illegible] ಕೊನೆಗೆ [illegible]ಜಿಂಗ್ ಡೈರೆಕ್ಟರರಾಗಿ ಆರಿಸಿ ಬಂದರು. ಇವರ [illegible] ಕಂಪೆನಿಯು ಎಂದಿಗಿಂತ ಮಿಗಿಲೆನಿಸುವಂತೆ ಅಭಿವೃದ್ಧಿಮುಖವಾಗಿ ಸಾಗಿದೆ. ಅತ್ಯಾಧುನಿಕ ಸೌಕರ್ಯಗಳನ್ನು ಪ್ರಯಾಣಿಕರಿಗೊದಗಿಸಿಕೊಡುತ್ತ ಕಂಪೆನಿಯು ಸಂಪತ್ಸಮೃದ್ಧಿಗಳಿಂದ ಹಿಂದೂದೇಶದ ಶ್ರೇಷ್ಠ ಬಸ್ ಕಂಪೆನಿಗಳಲ್ಲೊಂದೆನಿಸಿದೆ. ಕಂಪೆನಿಯಿಂದು 8000 ಮೈಲುಗಳಷ್ಟು ಬಸ್ ಸರ್ವಿಸು ನಡೆಸುತ್ತಿದೆ. ದೂರದೂರದ ಜಿಲ್ಲೆಗಳೂ ಸಂಬಂಧಿಸಲ್ಪಟ್ಟಿವೆ. ಶ್ರೀ ಕುಡ್ವರ ಅವಿಶ್ರಾಂತ ಶ್ರಮವೂ ವಿಚಕ್ಷಣತೆಯೂ ಕಂಪೆನಿಯ ಶ್ರೇಯೋಭಿವೃದ್ಧಿಯಲ್ಲಿ ಬಹು ಮುಖ್ಯ ಸಹಾಯವಾಗಿದೆ. ಶ್ರೀ ಕುಡ್ವರವರು ಈಗ ಕೇವಲ ಯಾಂತ್ರಿಕ ಸಂಸ್ಥೆಯ ಸಂಬಂಧವುಳ್ಳವರಾಗಿದ್ದರೂ ಶ್ರೇಷ್ಠ ಪತ್ರಿಕಾ ಕರ್ತರೂ ಉತ್ತಮ ಬರೆಹಗಾರರೂ ಆಗಿರುವರು. ಹಿಂದೆ "ಸತ್ಯಾಗ್ರಹಿ" ಪತ್ರಿಕೆಯನ್ನೂ, ತದನಂತರ "ಸಾರಸ್ವತ" ಪತ್ರಿಕೆಯನ್ನೂ ನಡೆಸಿದವರು. "ಸ್ವದೇಶಾಭಿಮಾನಿ" ಪತ್ರಿಕೆಗೆ ಬಹುಕಾಲ ಸಂಪಾದಕರಾಗಿದ್ದರು. ಗುಪ್ತ ನಾಮದಿಂದ ನೂರಾರು ಉತ್ತಮ ಲೇಖನಗಳನ್ನು ಬರೆದಿರುವರು. ಇವರ ಪತ್ರಿಕಾ ಅನುಭವವೂ ಪಾಂಡಿತ್ಯವೂ ಅಸಾಮಾನ್ಯವಾದುದು. ಅಂದವಾದ ಕನ್ನಡ ಲೇಖನಗಳನ್ನು ಬರೆವಂತೆ ಸುಮನೋಹರ ಇಂಗ್ಲಿಷ್ ಶೈಲಿಯನ್ನೂ ಪ್ರದರ್ಶಿಸಬಲ್ಲರು. ಆಧುನಿಕ ಕಟ್ಟಡಗಳಿಗೆ ಸಂಬಂಧಿಸಿದ ಶಿಲ್ಪದಲ್ಲಿಯೂ ಇವರಿಗೆ ಅಗಾಧ ಪರಿಜ್ಞಾನವಿದೆ. ಇವರ ವಯಸ್ಸು 40 ಮಾತ್ರ.



[illegible] ಕೆನರಾ [illegible] ಮತ್ತು ಸರ್ಜನರು. ಸುಪ್ರಸಿದ್ಧ ಕೆನರಾ ಇಂಡುಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ಇದರ ಚೆಯರ್ಮ್ಯಾನರು: ಕೆನರಾ ಲೇಂಡ್ ಇನ್ವೆಸ್ಟಮೆಂಟ್ಸ್, ಲಿಮಿಟೆಡ್ ಇದರ ಚೆಯರ್ಮ್ಯಾನರು: ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್-ಇದರ ಮೆಡಿಕಲ್ ರೆಫರಿಯಾಗಿರುವರು. ಪ್ರಸಿದ್ಧ ಕೋನ್ನೆ ರಂಗಪ್ಪೈ ಮನೆತನದವರಾಗಿರುತ್ತಾರೆ. ನಮ್ಮ ಪ್ರಾಂತ್ಯದಲ್ಲೂ ಹೊರಗೂ ಪ್ರಸಿದ್ಧ ಉದ್ಯಮಿಗಳೆಂದು ಹೆಸರಾಗಿರುವರು. ಬಹುವಿಧ ಚಟುವಟಿಕೆಯವರು; ಹಿಡಿದ ಕೆಲಸವನ್ನು ಛಲದಿಂದ ಸಾಧಿಸಿ ಯಶಸ್ಸು ಹೊಂದುವವರು. ಮೇಲಿನ ಸಂಸ್ಥೆಗಳು ಇವರ ಶ್ರಮದ ಫಲವಾಗಿವೆ. ಇವರ ಸಮರ್ಥ ಮೇಲ್ವಿಚಾರದಲ್ಲಿ ಸಿಂಡಿಕೇಟು

ಯಿಲ್ಲದ ದೇವರಿಗೆ ದೇಗುಲ ಕಟ್ಟಿಸಿದನು. ಜಗತ್ತು ಕಾಣಬಾರದೆಂದೋ ಏನೋ ಅವನು ದೇವರನ್ನು ದೇಗುಲದ ನಾಲ್ಕು ಆವರಣದೊಳಗೆ ಕುಳ್ಳಿರಿಸಿದನು. ದೇವರಿಗೆ ಜಗತ್ತಿನ ಅನ್ಯಾಯಗಳು ಕಾಣಬಾರದೆಂದೋ ಏನೋ, ಅವನ ಕಣ್ಣಿಗೆ ಚಿನ್ನವನ್ನು ತೊಡಿಸಿದನು.

ಮನೆ ಮುಂದೆ ಬಂದು ನರಳುವ ಅಂಗಹೀನರಿಗೆ ಊಟದ ಪಡಿ ದೊರೆಯಲಾರದು. ಆದರೆ ಅಲ್ಲಿಯದೇ ಧನ, ಯಾತ್ರೆಗಾಗಿ ನಡೆಯುವುದು. ಇದೆಲ್ಲ ಏಕೆ ನಡೆಯುತ್ತದೆ ಎಂದು ಪರಿಶೋಧಿಸುವವರು, ವಿಚಾರಿಸುವವರು ತೀರಾ ವಿರಳರು. ವಿಚಾರವಿಲ್ಲದೆ ಮನುಷ್ಯನು ಆಚಾರಗಳನ್ನು ಹಿಂಬಾಲಿಸುವನು! ಕುರುಡನು ಬಡಿಗೆ ಹಿಡಿದು ನಡೆದಂತೆ. ಜಗತ್ತಿನಲ್ಲಿ ದುಃಖಮಯ ಜೀವನವು ನೆಲಸಬಾರದೆಂದು ಮನುಷ್ಯನು ಬಯಸಿದನು. ಅದಕ್ಕಾಗಿ ಹೋರಾಡಿದನು. ಆದರೆ ಮನುಷ್ಯನು ಇದರಲ್ಲಿ ಸೋತುಹೋದನು.

ಮನುಷ್ಯನು ಎಂದು ಈ ಜಗತ್ತನ್ನು ಸ್ವರ್ಗವೆಂದು ತಿಳಿಯುತ್ತಾನೋ ಅಂದೇ ಅವನ ಆತ್ಮವು ದೇವತ್ವವನ್ನು ಪಡೆಯುವುದು. ನಿರ್ಜೀವವಾದ ದೇವರುಗಳ ಬದಲು ಸಜೀವವಾದ ದೇವರುಗಳು ಈ ಜಗತ್ತಿನಲ್ಲಿ ವಾಸಿಸುವರು. ಸ್ವಾರ್ಥದ ಕೂಗು ಕೇಳಲಾರದು. ಹಸಿವಿನ ರೋಧನವೇನೂ ಜಗತ್ತಿನಲ್ಲಿ ವ್ಯಾಪಿಸದು.

ಆದರೆ ಮನುಷ್ಯನು ತನ್ನ ಕರ್ತವ್ಯವನ್ನು ತಾನು ಮೊದಲು ಕಲಿಯಬೇಕು. ಪ್ರಕೃತಿಯ ಶಿಸ್ತಿನಂತೇ ತನಗೂ ಶಿಸ್ತುಗಳ ಮೇರೆಗಳನ್ನು ಹಾಕಿ ಜೀವಿಸಬೇಕು. ಅವನು ತನ್ನ ಜವಾಬ್ದಾರಿಯನ್ನು ಎಂದು ತಿಳಿಯುತ್ತಾನೋ ಅಂದೇ ಅವನು ನಿಜವಾದ ಜೀವನವನ್ನು ಕಲಿಯುವನು. ಅಂದೇ ಅವನು ಜಗತ್ತಿನ ನಿಜಸ್ವರೂಪವನ್ನು ತಿಳಿಯುವನು.

ಕಣ್ಣ ಮುಂದಿನ ಸ್ವರ್ಗದಲ್ಲಿ ವಾಸಿಸುವವರಿಗೆ, ಜಾತಿಮತಗಳ ದೇವರುಗಳೂ, ಭಿನ್ನಭಿನ್ನ ಭಾವನೆಗಳೂ, ಆಚಾರಗಳೂ, ಹೊರಗಿನ ಸೋಗುಗಳೂ, ವೇಷಭೂಷಣಗಳೂ ಅಗತ್ಯವಿಲ್ಲ. ಮಂತ್ರ ತಂತ್ರಗಳ ಅಗತ್ಯವಿಲ್ಲ. ಧರ್ಮಬೋಧಕರ ಅವಶ್ಯಕತೆಯಿಲ್ಲ; ಅವರಿಗೆ ಬೇಕಾದುದು ವಿಶಾಲ ಹೃದಯ-ನಿಸ್ಸ್ವಾರ್ಥ ಬುದ್ಧಿ, ಆತ್ಮನಂಬಿಕೆ.

ಇಷ್ಟಾದರೆ, ಸ್ವಾರ್ಥದಿಂದ ಉಂಟಾದ, ರಕ್ತದ ಹೊಳೆಗಳು ಹರಿಯಲಾರವು–ದುಃಖದ ರೋಧನಗಳು ಕೇಳಿಸವು. ಆತ್ಮಹತ್ಯೆಗಳು ಸಂಭವಿಸವು. ಹಸಿವಿನ ಜ್ವಾಲೆಯನ್ನು ತಡೆಯಲಾರದೆ ಮೊರೆಯಿಡುವ ಜೀವಿಗಳು ಕಾಣಲಾರರು. ಬೇಡುತ್ತಿರುವ ಕೈಗಳು ಅದೃಶ್ಯವಾಗುವುವು

ಮಾನವನ ಉದ್ಧಾರವು ಮಾನವನ ಮೇಲೇ ಹೊಂದಿಕೊಂಡಿದೆ. ಆದ್ದರಿಂದ ಈ ಜಗತ್ತನ್ನು ಸ್ವರ್ಗವಾಗಿ ಮಾಡುವುದು ಅವನ ಕರ್ತವ್ಯವಾಗಿದೆ.

ಸ್ವರ್ಗವನ್ನು ನಂಬುವವರಿಗೆ ಒಂದು ಮಾತಿದೆ. ಕಣ್ಣಮುಂದಿನ ಸ್ವರ್ಗದಲ್ಲಿ ಚೆನ್ನಾಗಿ ಜೀವಿಸಲು ಕಲಿತರೆ, ಕಾಣದ ಸ್ವರ್ಗದಲ್ಲಿ ನಡೆಯಲು ಕಷ್ಟವಾಗಲಾರದು. ಅದಕ್ಕಾದರೂ ತಯಾರಿ ಮಾಡಿದಂತಾಯಿತು. ಸ್ವರ್ಗದಲ್ಲಿ ನಂಬಿಕೆಯಿಲ್ಲದವರಿಗೆ—ಅಂತೂ ಈ ಸ್ವರ್ಗದಲ್ಲಿ ಸಂಪೂರ್ಣ ನಂಬಿಕೆಯಿರುವುದು. ಆದ್ದರಿಂದ ಕಾಣದ ಸ್ವರ್ಗಕ್ಕೆ ಬಾಯ್ಬಿಟ್ಟು ಕಣ್ಣಮುಂದಿನ ಸ್ವರ್ಗವನ್ನು ಕಸವಾಗಿ ಮಾಡುವುದನ್ನು ಮನುಷ್ಯನು ಇಂದೇ ಮರೆಯಬೇಕು.

ಇಲ್ಲಿಯ ಜೀವನಕ್ಕೆ ಬೆಲೆಯಿದೆ. ಇಲ್ಲಿಯ ಜೀವನವು ಸ್ವಾರಸ್ಯವಾಗಿದೆ. ಆದರೆ ಮನುಷ್ಯನು ಈ ಜೀವನವನ್ನು ಕಲಿಯಲು ಎಷ್ಟು ಯುಗಗಳನ್ನು ಕಳೆಯುವನೋ ತಿಳಿಯದು—ಅಂತೂ ಅಂತಹ ಒಂದು ಸುದಿನವೂ ಮೂಡಿಯೇ ಮೂಡುವುದು.

ಆಗಲೂ, ಸೂರ್ಯನು ಪೂರ್ವದಲ್ಲಿ ಮೂಡಿ ಆಕಾಶ ಮಾರ್ಗದಲ್ಲಿ ಸಂಚರಿಸಿ, ಪಶ್ಚಿಮದಲ್ಲಿ ಮುಳುಗುವನು. ಗಿರಿಶಿಖರಗಳು ಮುಗಿಲನ್ನು ಚುಂಬಿಸುವುವು. ನದಿಗಳು ಹರಿಯುವವು. ಮುಗಿಲುಗಳು ಕವಿದು ಮಳೆಯಾಗಿ ಬೀಳುವುವು. ಬೆಳಗು ಸಂಜೆಗಳು ಒಂದನ್ನೊಂದು ಹಿಂಬಾಲಿಸುವವು. ಕಾಲನು ತನ್ನ ವೇಷಗಳನ್ನು ಬದಲಿಸುತ್ತಲೇ ಇರುವನು. ಪ್ರಕೃತಿಯು ಅದನ್ನು ಅನುಸರಿಸುತ್ತಲೇ ಬರುವಳು. ಆದರೆ, ಮಾನವನು, ಮಾನವನಾಗಿ ಜೀವಿಸಲು ಕಲಿತುದರಿಂದ ಜಗತ್ತಿಗೆ ಹೊಸ ಕಳೆಯೊಂದು ಬರುವುದು–ಆಗಲೇ ಈ ಲೋಕವು ಸ್ವರ್ಗವಾಗುವುದು–ಇನ್ನು ಕಾಣದ ಸ್ವರ್ಗದ ಹಂಬಲವೇಕೆ?

37 ಶಾಖೆಗಳನ್ನು ಸ್ಥಾಪಿಸಿ ಹೆಸರು ಹೊಂದಿದೆ. ಅವಿಶ್ರಾಂತವಾಗಿ ಶ್ರಮಿಸುತ್ತಿರುವವರು. ಸ್ಥಳೀಯ ಸಂಪತ್ತೂ ಶ್ರಮವೂ ಸ್ಥಳೀಯ ಉದ್ಯಮಗಳಿಗೂ ಪ್ರಗತಿಗೂ ಸಾಧಕವೆಂದು ತಿಳಿದು, ತಿಳಿಸಿ, ಮಾಡಿ, ಮಾಡಿಸುವವರು. ಇವರ ಸಂಬಂಧವಿರುವ ಬ್ಯಾಂಕಿನಂತೆ ಕೆನರಾ ಮ್ಯೂಚುವಲ್ ಕಂಪೆನಿಯು ಪ್ರಸಿದ್ಧವಾಗಿದೆ. ಜಿಲ್ಲೆಯ ಪ್ರಸಿದ್ಧ ಉದ್ಯಮಿಗಳಲ್ಲಿ ಡಾ। ಮಾಧವ ಪೈಗಳವರ ಹೆಸರು ಚಿರಸ್ಥಾಯಿಯಾಗದಿರದು. ಇವರ ವಯಸ್ಸು 42 ಮಾತ್ರ.



ಶ್ರೀ। ಎಮ್. ಪದ್ಮನಾಭ ರಘುನಾಥ ಪೈ ಇವರು ಮಂಗಳೂರಿನ ಪ್ರಸಿದ್ಧ ಸಾಹುಕಾರರು. ಇವರ ಕುಟುಂಬಕ್ಕೇ "ಸಾಹುಕಾರ"ರೆಂಬ ನಾಮಧೇಯವಿದೆ. ಇವರ ಮನೆತನವು ಕಳೆದ ಒಂದೂವರೆ ಶತಮಾನಗಳಿಂದ ಮಂಗಳೂರಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಮಂಗಳೂರಿನ ಸ್ವಜಾತಿಯವರ ಎಲ್ಲ ಕಾರ್ಯಗಳಲ್ಲೂ ಈ ಮನೆತನದವರ ಕಾರ್ಯಭಾಗವಿದೆ. ಶ್ರೀ ವೆಂಕಟ್ರಮಣ ದೇವಸ್ಥಾನದ ಭಕ್ತವೃಂದದಲ್ಲಿ ಇವರು ಅಗ್ರಗಣ್ಯರೆನಿಸುವಂತೆ ಅನೇಕ ಬಗೆಯ ಸೇವೆ ಸಲ್ಲಿಸಿರುವರು. ಶ್ರೀ। ಪೈಗಳು ಧರ್ಮಬುದ್ಧಿಯವರು. ಕೆನರಾ ಬ್ಯಾಂಕಿನ ಡೈರೆಕ್ಟರರು. ಸಿ.ಪಿ.ಸಿ. ಕಂಪೆನಿಯ ಚೆಯರ್ಮ್ಯಾನರಾಗಿರುವರು. ಇಲ್ಲಿಯ "ಬರ್ಮಾ ಶೆಲ್"ಗೆ ಇವರು ಏಜಂಟರಾಗಿರುವರು. ಇದಲ್ಲದೆ ಇತರ ಅನೇಕ ವ್ಯಾಪಾರಗಳನ್ನೂ ಯೋಗ್ಯವೆನಿಸುವಂತೆ ನಡೆಸುತ್ತಿರುವರು.



ಶ್ರೀ। ಅಮ್ಮೆಂಬಳ ಶ್ರೀನಿವಾಸ ಪೈಗಳವರು. ಮಂಗಳೂರಿನ ಪ್ರಸಿದ್ಧ ಅಡ್ವೋಕೇಟರಲ್ಲೊಬ್ಬರಾಗಿದ್ದು, ಈಗ ನಿವೃತ್ತರಾಗಿರುವರು. ಇವರು ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಮುಖಂಡರಲ್ಲೊಬ್ಬರು. ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಪ್ರಾಮುಖ್ಯ ಭಾಗವಹಿಸಿದವರು. ಕೆನರಾ ಹೈಸ್ಕೂಲಿನ ಮೆನೇಜರರಾಗಿದ್ದರು. ಕೆನರಾ ಬ್ಯಾಂಕಿನ ಡೈರೆಕ್ಟರರೂ ಆಗಿದ್ದರು. ಈಗ ಕಾಸರಗೋಡಿಗೆ ಹೋಗಿ ನೆಲಸಿರುವರು.



ಶ್ರೀ। ಮಣೇಲ್ ಅಣ್ಣಪ್ಪ ನಾಯ್ಕರವರು. ಮಂಗಳೂರಿನ ಸುಪ್ರಸಿದ್ಧ ಸಾಹುಕಾರರು. 1854ರಿಂದ ವ್ಯಾಪಾರದಲ್ಲಿ ನಮ್ಮ ಜಿಲ್ಲೆಯಲ್ಲೂ ಹೊರಗೂ ಪ್ರಸಿದ್ಧವಾದ ಮಣೇಲ್ಕಾರರ ವ್ಯಾಪಾರೀ ಸಂಸ್ಥೆಯ ಮಾಲಕರಾದ ಶ್ರೀ। ಎಮ್. ಕೃಷ್ಣ ನಾಯ್ಕರ ಪುತ್ರ. ಸಮಾಜ ಧುರೀಣರಲ್ಲೊಬ್ಬರು. ಅನೇಕ ಸಂಘ-ಸಂಸ್ಥೆಗಳಲ್ಲಿ ಇವರ ಸಂಬಂಧವಿದೆ. ಶ್ರೀ। ವೆಂಕಟ್ರಮಣ ದೇವಸ್ಥಾನದ ಟ್ರಸ್ಟಿಗಳಾಗಿದ್ದರು. ಕೆನರಾ ಚೇಂಬರ್ ಓಫ್ ಕೊಮರ್ಸಿನ ಮೆಂಬರರು, ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ ಟ್ರಸ್ಟಿಗಳೂ ಆಗಿದ್ದರು. ಮಂಗಳೂರು ಸಾಹುಕಾರರ ಹೊಲಿಡೇ ಕಮಿಟಿಯ ಅಧ್ಯಕ್ಷರು. ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪಾರೋನ್ನತಿಯಲ್ಲಿ ಆಸಕ್ತಿಯಿದ್ದು, ಶ್ರಮವಹಿಸುತ್ತಿರುವವರು. ಎಮ್. ಎ. ಕೃಷ್ಣ ನಾಯಕ್ ಎಂಡ್ ಸನ್ಸ್ ಎಂಬ ಇವರ ಸಂಸ್ಥೆಯು ಜಿಲ್ಲೆಯಲ್ಲಿಯೂ ಹೊರಗೂ ಪ್ರಸಿದ್ಧವಾಗಿದೆ. ಇವರ ವಯಸ್ಸು ಸುಮಾರು 55.



ಡಾ। ಯು. ಸುಂದರ ರಾವು ಪೈ, ಎಮ್. ಬಿ. ಎಂಡ್ ಸಿ. ಎಸ್., ಉಡುಪಿ: ಇವರು ಉಡುಪಿಯ ಒಬ್ಬ ಪ್ರಸಿದ್ಧ ಡಾಕ್ಟರರಾಗಿರುವರು. ಕೆನರಾ ಬ್ಯಾಂಕಿಂಗ್ ಕೋರ್ಪರೇಶನಿನ ಚೆಯರ್ಮ್ಯಾನರು. ಕೆನರಾ ಬ್ಯಾಂಕಿಂಗ್ ಕೋರ್ಪರೇಶನು ಶೆಡ್ಯೂಲ್ಡ್ ಬ್ಯಾಂಕ್ ಆಗಿದ್ದು, ಪ್ರಾಂತ್ಯದ ಬೇರೆ ಬೇರೆ ಕಡೆಗಳಲ್ಲಿ ಒಟ್ಟು 20 ಶಾಖೆಗಳುಳ್ಳದು. ಡಾ। ಪೈಗಳವರು ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿಯ ವೈಸ್ ಚೆಯರ್ಮ್ಯಾನರು; ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್, ಕೆನರಾ ಮೆಡಿಕಲ್ ಸಪ್ಲಾಯಿಸ್ ಲಿಮಿಟೆಡ್. ಸಿಟಿ ಪ್ರೆಸ್ ಲಿಮಿಟೆಡ್ ಮತ್ತು ಸದರ್ನ್ ಲೇಂಡ್ ಟ್ರಸ್ಟ್ ಲಿಮಿಟೆಡ್—ಇದರ ಡೈರೆಕ್ಟರರು.



ಶ್ರೀ। ಎಮ್. ಸಾಂತಪ್ಪ ಲಕ್ಷ್ಮಣಪಾಕ್, ಇವರು ಮಂಗಳೂರಿನ ಪ್ರಸಿದ್ಧ ಸಾಹುಕಾರರಲ್ಲೊಬ್ಬರು; ಜಮೀನ್ದಾರರು: ವಯಸ್ಸು 69; ವೈಶ್ಯ ಬ್ರಾಹ್ಮಣ ಸಮಾಜಕ್ಕೆ ಸಂಬಂಧಿಸಿದ ಡೊಂಗರಕೇರಿ ಶ್ರೀ ವೆಂಕಟ್ರಮಣ ದೇವಸ್ಥಾನದ ಆಡಳಿತಗಾರರು. ಮಂಗಳೂರಲ್ಲಿ ಹಲವು ವರ್ಷಗಳಿಂದ ಪ್ರಸಿದ್ಧರಾಗಿರುವ ಮನೆತನದವರು. ಶ್ರಿ ಕೃಷ್ಣಾ ಮಿಲ್ಸ್ ಕಂಪೆನಿಯ ಪಾಲುದಾರರಲ್ಲೊಬ್ಬರು. ವೈಶ್ಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳೂ ಆಗಿರುತ್ತಾರೆ.



ಶ್ರೀ। ಅಮ್ಮೆಂಬಳ ದಾಮೋದರ ಪೈಗಳವರು. ಬಿ. ಎ. ಬಿ. ಎಲ್. ಮಂಗಳೂರಿನ ಪ್ರಸಿದ್ಧ ಅಡ್ವೋಕೇಟರಲ್ಲೊಬ್ಬರು. ಕೆನರಾ ಬ್ಯಾಂಕಿನ ಡೈರೆಕ್ಟರರು; ಸಿ. ಪಿ. ಸಿ. ಕಂಪೆನಿಯ ಡೈರೆಕ್ಟರರು. ಪ್ರಸಿದ್ಧ ಅಮ್ಮೆಂಬಳ ಪೈಗಳ ಮನೆತನದವರು. ಸಾರ್ವಜನಿಕ ಚಟುವಟಿಕೆಗಳಲ್ಲಿ ತುಂಬ ಆಸಕ್ತಿಯುಳ್ಳವರು.



ಶ್ರೀ। ವೆಂಕಟ್ರಾವ್ ಬಾಳಿಗ, ಬಿ. ಎ. ಬಿ. ಎಲ್. ಇವರು ಮಂಗಳೂರಿನ ಸುಪ್ರಸಿದ್ಧ ಅಡ್ವೋಕೇಟರರು. ಮುನಿಸಿಪಲ್ ಚೆಯರ್ಮ್ಯಾನರು, ಕೊಂಗ್ರೆಸ್ ಎಮ್. ಎಲ್. .ಗಳು. ಕೆನರಾ ಬ್ಯಾಂಕಿನ ಡೈರೆಕ್ಟರರಲ್ಲೊಬ್ಬರು, ಮೌನವಾಗಿ, ಶಾಂತವಾಗಿ ತಮ್ಮ ಸೇವೆ ಸಲಿಸುವವರು. ಸರಳ ಸ್ವಭಾವಿಗಳೆಂದು ಇವರಿಗೆ ಹೆಸರಿದೆ. (ಈ ತಿಂಗಳಲ್ಲಿ ಸತ್ಯಾಗ್ರಹದಲ್ಲಿ ಕಾರಾಗ್ರಹ ಸೇರಿರುವರು.) ಇವರ ವಯಸ್ಸು—49.



ಶ್ರೀ। ಸುಜೀರ ಪುಂಡಲೀಕ ನಾಯ್ಕರವರು, ಪ್ರಸಿದ್ಧ ವರ್ತಕರಲ್ಲೊಬ್ಬರು ವಯಸ್ಸು ಸುಮಾರು 35. ಶ್ರೀ। ಸುಜೀರ ರಾಮಚಂದ್ರ ನಾಯ್ಕರ ಪುತ್ರ. ಕೆನರಾ ಬ್ಯಾಂಕಿನ ಡೈರೆಕ್ಟರರು. ಬೊಂಬಾಯಿಯಲ್ಲಿ "ಕಸ್ತೂರಿ ನಾಗೇಶ ಪೈ ಎಂಡ್ ಸುಜೀರ ಪುಂಡಲೀಕ್ ನಾಯ್ಕ" ಎಂದು ಇವರ ವ್ಯಾಪಾರೀ ಸಂಸ್ಥೆ ನಡೆಯುತ್ತಿದೆ



ಶ್ರೀ। ಯು. ಎ. ಪೈಯವರು, ಉಡುಪಿಯ ಮುಖಂಡರಲ್ಲೊಬ್ಬರು ಅಸಹಕಾರ ಚಳವಳದ ದಿನಗಳಲ್ಲಿ ನೆಶನಲ್ ಎಡ್ಯುಕೇಶನ್ ಬೋರ್ಡಿನ ಕಾರ್ಯದರ್ಶಿಗಳಾಗಿದ್ದರು: ಮಣಿಪಾಲ ಅನಾಥಾಲಯದ ಕಾರ್ಯದರ್ಶಿಗಳಾಗಿಯೂ ಕೆಲಸ ಮಾಡಿದವರು. ಮನೆ ಕೈಗಾರಿಕೆಗಳಲ್ಲಿ ತುಂಬ ಆಸಕ್ತಿಯಿದ್ದು ದುಡಿವವರು. ಜಿಲ್ಲೆಯ ಧಾರ್ಮಿಕ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವರು. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಡೈರೆಕ್ಟರರು. ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಇದರ ಮೆನೇಜರರು; ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನ (ಸಿನೆಮಾಗೃಹ) ಮಾಲಕರು; ಕೊಂಗ್ರೆಸ್ ವಾದಿಗಳು. ಇನ್ನೂ ಎಷ್ಟೋ ಸಂಸ್ಥೆಗಳಲ್ಲಿ, ಸಂಘಗಳಲ್ಲಿ ಒಂದಲ್ಲ ಒಂದು ವಿಧದ ಸಂಬಂಧವಿದ್ದವರು. ಅವಿಶ್ರಾಂತವಾಗಿ ಶ್ರಮಿಸುವವರು. ಇವರ ವಯಸ್ಸು 44.



ಶ್ರೀ ಯು. ಶ್ರೀನಿವಾಸ ಮಲ್ಯರವರು. ಇವರನ್ನರಿಯದವರು ಅತಿ ವಿರಳರೆಂಬಷ್ಟಕ್ಕೆ ಇವರು ಸುಪರಿಚಿತರಿರುತ್ತಾರೆ. ವ್ಯಾಪಾರದಂತೆ, ಇತರ ಸಂಸ್ಥೆಗಳಲ್ಲೂ ಇವರ ಕಾರ್ಯಾಂಶವಿದೆ. ಕೊಂಗ್ರೆಸ್ ರಾಜಕೀಯಗಳೆಂದರೆ ಇವರಿಗೆ ಪಂಚಪ್ರಾಣ. ಸ್ಥಳೀಯ ಅಥವಾ ಪ್ರಾಂತೀಯ ಚುನಾವಣೆಗಳಲ್ಲಿ ಇವರು ಸ್ವತಃ ತಾನು ಸ್ಥಾನವನ್ನಪೇಕ್ಷಿಸದೆ, ಇತರ ಹುರಿಯಾಳುಗಳಲ್ಲಿ ಯೋಗ್ಯರಾದವರು ಆರಿಸಿ ಬರುವಂತೆ ನೋಡುವವರು. ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಗೆ ಮೂರು ವರ್ಷಗಳಿಂದ ಅಧ್ಯಕ್ಷರು. ಹಲವು ವರ್ಷಗಳಿಂದ ಪ್ರಾಂತಿಕ ಕೊಂಗ್ರೆಸ್ ಕಮಿಟಿ ಸದಸ್ಯರೂ ಎ. ಐ. ಸಿ. ಸಿ. ಮೆಂಬರರೂ ಆಗಿರುವರು. [illegible] ಪ್ರಾಂತಿಕ ಕೊಂಗ್ರೆಸ್ [illegible] ಕೆನರಾ [illegible] ಡೈರೆಕ್ಟರರು [illegible] ಡೈರೆಕ್ಟರರು [illegible] ಅಧ್ಯಕ್ಷತೆಯನ್ನು [illegible] ವರು. [illegible] ಇವರ ವಯಸ್ಸು [illegible] 3[illegible].



ಶ್ರೀ ಕೆ. ಜಿ. ಬಳ್ಳಾಲರು, ಬಿ. ಎ., ಎಲ್. ಎಲ್. ಬಿ., ಉಡುಪಿಯಲ್ಲಿ ಕಳೆದ 22 ವರ್ಷಗಳಿಂದ ಪ್ರಸಿದ್ಧ ವಕೀಲರು. ವಯಸ್ಸು 49. ಕಟಪಾಡಿಯ ಬಲ್ಲಾಳ ಮನೆತನಕ್ಕೆ ಸೇರಿದವರು. ಉಡುಪಿ ತಾಲೂಕು ಬೋರ್ಡು ಮತ್ತು ದ. ಕ. ಜಿಲ್ಲಾ ಬೋರ್ಡಿಗೆ ಹಿಂದೊಮ್ಮೆ ಎರಡು ವರ್ಷಗಳ ತನಕ ಸದಸ್ಯರಾಗಿದ್ದರು. ಟೆಂಪಲ್ ಕಮಿಟಿಗೆ ಹಲವು ವರ್ಷ ಸದಸ್ಯರಾಗಿದ್ದರು. ವಿಜಯಾ ಬೇಂಕ್ ಲಿಮಿಟೆಡ್ ಮತ್ತು ಸೌತ್ ಕೆನರಾ ಕೋಪರೇಟಿವ್ ಸೆಂಟ್ರಲ್ ಬೇಂಕ್ ಇದರ ಡೈರೆಕ್ಟರರು. ಉಡುಪಿಯ ಕೋಪರೇಟಿವ್ ಯೂನಿಯನಿನ ಅಧ್ಯಕ್ಷರು. ಉಡುಪಿ ಕರ್ಣಾಟಕ ಸ್ಟೋರ್ಸಿನ ಡೈರೆಕ್ಟರರು. ಉಡುಪಿ ಬಾರ್ ಎಸೋಸಿಯೇಶನಿನ ಅಧ್ಯಕ್ಷರು. ಇನ್ನೂ ಇತರ ಎಷ್ಟೋ ಸಂಘ—ಸಂಸ್ಥೆಗಳಲ್ಲಿ ಇವರ ಸಂಬಂಧವಿದೆ.



ಶ್ರೀ ಎನ್. ನಾರಾಯಣರಾವ್, ಇವರು ನವಭಾರತ ಇನ್ಶೂರೆನ್ಸ ಕಂಪೆನಿಯ ಸ್ಥಳೀಯ ಬ್ರಾಂಚ್ ಮೆನೇಜರರು. ವಿಮಾ ಕಾರ್ಯದಲ್ಲಿ ಅತ್ಯಂತ ನಿಪುಣರು. ಮೌನವಾಗಿ ಸೇವೆ ಸಲಿಸುವ ದೇಶಭಕ್ತರು. ಕಳೆದ ಎಂಟು ವರ್ಷಗಳಿಂದ ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಮೆನೇಜರರಾಗಿದ್ದು ಈ ವರುಷ ರಾಜೀನಾಮೆ ಕೊಟ್ಟು, ನವಭಾರತ ಇನ್ಶೂರೆನ್ಸ್ ಕಂಪೆನಿಯ ಬ್ರಾಂಚ್ ಆಡಳಿತ ವಹಿಸಿರುವರು. ನವಭಾರತ ಇನ್ಶೂರೆನ್ಸ್ ಕಂಪೆನಿಯು ದೇಶೀಯ ಕಂಪೆನಿ ಮಾತ್ರವಲ್ಲ, ತನ್ನ ಲಾಭ ಉಳಿತಾಯದಲ್ಲಿ ಒಂದಂಶ ರಾಷ್ಟ್ರೋನ್ನತಿಯ ಕಾರ್ಯಕ್ಕೆ ಮೀಸಲಾಗಿಟ್ಟ ಮೊದಲನೆ ಮತ್ತು ಏಕಮಾತ್ರ ವಿಮಾ ಸಂಸ್ಥೆಯಾಗಿದೆ.



ಶ್ರೀ ಕುಡ್ವಿ ಗೋಪಾಲ ಶೆಣೈಯವರು ಮಂಗಳೂರಿನ ಸುಪ್ರಸಿದ್ಧ ವರ್ತಕರು. ವಯಸ್ಸು ಸುಮಾರು 65. ಬಹು ವರುಷಗಳಿಂದ, ವಾಣಿಜ್ಯ ಪ್ರಪಂಚದಲ್ಲಿ ಇವರ ಹೆಸರಿದೆ. ಸಾಹುಕರರೂ, ತಾಜ್ ಮಹಾಲಿನ ಮ್ಹಾಲಕರೂ ಆಗಿರುವರು. ಅಚಲ ಧರ್ಮಶ್ರದ್ಧೆಯುಳ್ಳವರು. ಧರ್ಮಗ್ರಂಥಗಳಲ್ಲಿ ಇವರ ಪಾಂಡಿತ್ಯವು ಅಗಾಧವಿದೆ. ಗುರುದೈವ ಭಕ್ತಿಯುಳ್ಳವರು. ಅನೇಕ ಗುಪ್ತ ದಾನಗಳನ್ನು ಮಾಡಿರುತ್ತಾರೆ. ಬಡವರನ್ನು ಕರುಣೆಯಿಂದ ಕಂಡಿರುತ್ತಾರೆ.

ಶ್ರೀ। ಆರೂರು ಲಕ್ಷ್ಮೀನಾರಾಯಣರಾಯರು. ಉಡುಪಿಯ ಸುಪ್ರಸಿದ್ಧ ವಕೀಲರು. ಉಡುಪಿ ಮುನಿಸಿಪಾಲಿಟಿಯ ಅಧ್ಯಕ್ಷರು. ದ. ಕ. ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರು. ಉಡುಪಿ ಲೇಂಡ್ ಮೊರ್ಗೇಜ್ ಬ್ಯಾಂಕಿನ ಅಧ್ಯಕ್ಷರು. ಉಡುಪಿ ತಾಲೂಕು ಎಡ್ಯುಕೇಶನಲ್ ಕಮಿಟಿಯ ಸದಸ್ಯರು. ಉಡುಪಿ ಕೋಪರೇಟಿವ್ ಸ್ಟೋರ್ಸ್ ಲಿಮಿಟೆಡ್ ಇದರ ಅಧ್ಯಕ್ಷರು. ಮುನಿಸಿಪಾಲ ಅನಾಥಾಲಯದ ಅಧ್ಯಕ್ಷರು. ಶಂಕರವಿಠ್ಠಲ ಮೋಟರ್ ಕಂಪೆನಿಯ ಡೈರೆಕ್ಟರರು. ಮೂರು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿರುವರು. (ಆರೂರು ದೇವಾಲಯದಲ್ಲಿ ನಿತ್ಯವೂ ಬಡವರಿಗೆ ಅನ್ನದಾನವಾಗುತ್ತಿದೆ.) ಕೂರ್ಗ್ ಇಲೆಕ್ಟ್ರಿಕ್ ಕಂಪೆನಿಯ ಡೈರೆಕ್ಟರರು. ಆರೂರು ಮನೆತನದ ಹೆಸರಿನಲ್ಲಿ ಆರೂರು ಬ್ಯಾಂಕ್ ಎಂಬುದನ್ನು ನಡೆಸುತ್ತಿರುವರು. ಇವರ ಆಡಳಿತದಲ್ಲಿ ಉಡುಪಿ ಮುನಿಸಿಪಾಲಿಟಿಯೊಳಗೆ ವಿದ್ಯುದ್ದೀಪಗಳಲ್ಲಿ ರೇಡಿಯೋವೂ ಬಂದಿದೆ. ವಯಸ್ಸು 52.



ಶ್ರೀ। ಅಮ್ಮೆಂಬಳ ಶ್ರೀನಿವಾಸ ನಾಗಪ್ಪ ಜೂರ್ಯರು. ಇವರು ಮಂಗಳೂರಿನ ಓರ್ವ ಪ್ರಸಿದ್ಧ ಸಾಹುಕಾರರು. ಕಾಡುತ್ಪತ್ತಿ, ಸುಪಾರಿ ಮೊದಲಾದುವುಗಳ ವ್ಯಾಪಾರ ಮಾಡುತ್ತಿದ್ದಾರೆ. ಬಾಲ್ಯದಿಂದಲೂ ಕಷ್ಟ ಸಹಿಷ್ಣುಗಳಾಗಿದ್ದು, ಸ್ವಯಂ ಸಾಮರ್ಥ್ಯದಿಂದ ಜೀವನದಲ್ಲಿ ಏಳಿಗೆಯ ಸೋಪಾನವೇರಿದವರು. ಶ್ರೀಯುತರ ವಯಸ್ಸು 60. ಇವರ ಸಂಸ್ಥೆಯು 1898ರಲ್ಲಿ ಸ್ಥಾಪಿತವಾಯಿತು. ಜೂರ್ಯರವರು ಅರುವತ್ತು ವರ್ಷ ಪ್ರಾಯವಾದರೂ ತರುಣರಂತೆ ಚಟುವಟಿಕೆಯುಳ್ಳವರಾಗಿರುತ್ತಾರೆ. ಇವರ ವಹಿವಾಟು ಪರದೇಶಗಳೊಡನೆಯೂ ನಡೆಯುತ್ತಿದೆ.



ಶ್ರೀ। ಪಾಂಗಾಳ ಸರ್ವೋತ್ತಮ ನಾಯ್ಕ, ಬಿ. ಎ ಬಿ. ಎಲ್., ಎಫ್. ಐ. ಐ. ಬಿ. ಎಫ್. ಆರ್. ಇ. ಎಸ್. ಇವರು ಪ್ರಸಿದ್ಧ ಪಾಂಗಾಳ ಮನೆತನಕ್ಕೆ ಸೇರಿದವರು. ದಕ್ಷಿಣಭಾರತದ ಪ್ರಸಿದ್ಧ ಬ್ಯಾಂಕುಗಳಲ್ಲೊಂದಾದ ಕೆನರಾ ಬ್ಯಾಂಕಿನ ಜನರಲ್ ಮೆನೇಜರರು. ಇವರ ವಯಸ್ಸು ಸುಮಾರು 42. ಅಸಾಮಾನ್ಯ ಚಟುವಟಿಕೆಯವರು. ಬ್ಯಾಂಕಿಂಗ್ ವ್ಯವಹಾರದಲ್ಲಿ ಇವರ ಜ್ಞಾನವು ಅಗಾಧವಿದೆ. ಇಂಗ್ಲಾಂಡಿಗೆ ತೆರಳಿ, ಮಿಡ್‌ಲಾಂಡ್ ಬ್ಯಾಂಕಿನಲ್ಲಿ, ಬ್ಯಾಂಕಿಂಗ್ ವ್ಯವಹಾರದ ಅಪಾರ ಮಾಹಿತಿಯನ್ನು ಪಡೆದಿರುತ್ತಾರೆ. ಬಹಳ ಪ್ರಯಾಣಮಾಡಿ ಅನುಭವವುಳ್ಳವರಾಗಿದ್ದಾರೆ ಯೋಗ್ಯ ಡೈರೆಕ್ಟರರನ್ನೊಡಗೂಡಿ, ಕೆನರಾ ಬ್ಯಾಂಕನ್ನು ದಕ್ಷಿಣ ಭಾರತದ ಪ್ರಾಮುಖ್ಯ ಬ್ಯಾಂಕುಗಳಲ್ಲೊಂದೆನಿಸುವಂತೆ ಮುನ್ನಡೆಸಿ ತಂದಿರುವರು. ವ್ಯವಹಾರ ಚತುರರು.

ಶ್ರೀ। ಕೆ. ಆರ್. ಗುರು, ಇವರು, ಮಂಗಳೂರು ಪೈಮನಿ ಬೇಂಕ್ ಲಿಮಿಟೆಡ್ ಇದರ ಮೆನೇಜಿಂಗ್ ಡೈರೆಕ್ಟರರಾಗಿರುತ್ತಾರೆ. ಈ ಬ್ಯಾಂಕು ಹತ್ತು ವರ್ಷಗಳ ಕೆಳಗೆ ಸ್ಥಾಪಿತವಾಯಿತು. 1934ರಲ್ಲಿ ಬ್ಯಾಂಕು ಜ್ವೊಯಿಂಟ್ ಸ್ಟಾಕ್ ಕಂಪೆನಿಯಾಗಿ ರಿಜಿಸ್ಟರ್ ಆಯಿತು. ಬ್ಯಾಂಕು, ಇತರ ಬ್ಯಾಂಕುಗಳಂತೆ ಎಲ್ಲ ಬ್ಯಾಂಕಿನ ವಹಿವಾಟುಗಳನ್ನೂ, ವೈಶಿಷ್ಟ್ಯವಾಗಿ ಕ್ರಮವಾದ ಚಿಟ್ ಫಂಡನ್ನೂ ನಡೆಸುತ್ತಿದೆ. ಶ್ರೀ। ಗುರುಗಳವರು ಬಿಲ್ಲವ ಸಮಾಜದ ಪ್ರಮುಖರಲ್ಲೋರ್ವರಾಗಿದ್ದು, ಜಿಲ್ಲಾ ಬಿಲ್ಲವ ಯೂನಿಯನಿನ ಕಾರ್ಯದರ್ಶಿಗಳೂ ಆಗಿರುತ್ತಾರೆ. ಈ ಸಂಘವು 1920ರಲ್ಲಿ ಸ್ಥಾಪಿತವಾಗಿ, ಸಮಾಜೋದ್ಧಾರ ಸಾಧಕ ಕಾರ್ಯಗಳನ್ನು ಕೈಕೊಂಡಿದೆ. ಶ್ರೀ। ಗುರುಗಳವರ ವಯಸ್ಸು 46.

ಶ್ರೀ। ವಿಠ್ಠಲ ಶಾಂತಾರಾಮರವರು. ಮಂಗಳೂರಿನ ಓರ್ವ ಪ್ರಸಿದ್ಧ ವರ್ತಕರಾಗಿರುತ್ತಾರೆ. ಇವರ ವಯಸ್ಸು ಸುಮಾರು 39. ಸಾರ್ವಜನಿಕ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾರೆ. ಕಾರವಾರದ ಪ್ರಸಿದ್ಧ ಕುಲಕರ್ಣಿ ಮನೆತನದವರು. ಪ್ರಸಿದ್ಧ ವರ್ತಕರೂ ದಾನಿಗಳೂ ಆಗಿದ್ದ ಶ್ರೀ। ಶಾಂತಾರಾಮ ಮಂಗೇಶ್ ಇವರ ಹಿರೇ ಪುತ್ರ. ಶ್ರೀ। ವಿಠ್ಠಲರಾಯರು ಮಂಗಳೂರಿನ ಮತ್ತು ಇತರ ಊರ ಗಳ ಅನೇಕ ಸಂಸ್ಥೆಗಳಿಗೆ ದೀಪ, ಧನ ಮೊದಲಾದುವನ್ನು ದಾನಮಾಡಿ ಪ್ರಸಿದ್ಧರಾಗಿರುವರು. ಮಂಗಳೂರು ಮೈದಾನಿಗೆ ರೇಡಿಯೋ ಪೆವಿಲಿಯನ್ ಕಟ್ಟಿಸಿಕೊಟ್ಟು, ರೇಡಿಯೋ ಇರಿಸಿದವರು ಇವರು. ರಥಬೀದಿಯ ಮುನಿಸಿಪಲ್ ಶಾಲೆಗೆ ಚಿಮ್ನೇಯಿಯನ್ನು ಕೊಟ್ಟಿರುವರು. ಮಹಾಮ್ಮಾಯಿ ದೇವಾಲಯ, ಶ್ರೀ ವೆಂಕ್ರಮಣ ದೇವಾಲಯ, ರಾಧಾಸ್ಕೈರ್, ಜಿರ್ಝಿಂಟ್ ಗರ್ಲ್ ಸ್ಕೂಲ್, ಶ್ರೀ ವಿಠೋಬ ದೇವಸ್ಥಾನ, ಕೃಷ್ಣ ಮಂದಿರ ಹಂಪನಕಟ್ಟೆ— ಮೊದಲಾದ ಹಲವು ಕಡೆಗಳಲ್ಲಿ ಇವರು ದಾನಮಾಡಿದ ವಿದ್ಯುದ್ದೀಪಗಳು ಬೆಳಗುತ್ತಲಿವೆ. ಈ ದಾನಗಳಿಂದ ಇವರನ್ನು ದಾನಶೂರರೆನ್ನುತ್ತಾರೆ.



ಶ್ರೀ। ವಿಠ್ಠಲ ಶಾಂತಾರಾಮರವರು.



ಶ್ರೀ। ಸುಜೀರ ಕೇಶವ ನಾಯ್ಕರು.

ಶ್ರೀ। ಸೂಜೀರ್ ಕೇಶವ ನಾಯ್ಕರವರು. ಇವರು ಪ್ರಸಿದ್ಧ ಸೂಜೀರ್ ನಾಯ್ಕರ ಮನೆತನದವರು. ವಯಸ್ಸು ಸುಮಾರು 59. ಮಂಗಳೂರಿನ ಪ್ರಸಿದ್ಧ ಹಂಚು ಕಾರ್ಖಾನೆಗಳಲ್ಲೊಂದಾದ ಸೊವರೈನ್ ಟೈಲ್ ವರ್ಕ್ಸ್, ಇದರ ಮಾಲಕರಾಗಿರುತ್ತಾರೆ. ಇವರ ಕಾರ್ಖಾನೆಯು ಇವರೊಬ್ಬರ ಅಮಿತ ಶ್ರಮ ಹಾಗೂ ಅತ್ಯಲ್ಪ ಭಂಡವಾಲದಿಂದ 1929ರಲ್ಲಿ ಆರಂಭಿಸಲ್ಪಟ್ಟು, ಬಲು ಬೇಗನೆ ಇವರ ಕಾರ್ಯದಕ್ಷತೆಯಲ್ಲಿ ಮುಂದುವರಿದು, ಇಂದು ಪ್ರಾಮುಖ್ಯ ಕಾರ್ಖಾನೆಗಳಲ್ಲೊಂದೆನಿಸಿದೆ. ಕಾರ್ಖಾನೆಯಲ್ಲಿಂದು ಆವೆಮಣ್ಣಿನಲ್ಲಿ ಅತ್ಯಾಧುನಿಕ ತಯಾರಿಗಳಾಗುತ್ತಿವೆ. ಶ್ರೀ। ನಾಯ್ಕರ ಅನುಭವ, ಜಾಣಾಕ್ಷತೆ. ಇವು ಹೆಸರಾಗಿವೆ.

ಶ್ರೀ। ಸುಜೀರ ನಾಗಪ್ಪ ನಾಯ್ಕರವರು. ಮಂಗಳೂರಿನ ಪ್ರಸಿದ್ಧ ವರ್ತಕರಲ್ಲೊಬ್ಬರು. ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ವಾಣಿಜ್ಯ ಲೋಕದಲ್ಲಿ ಹೆಸರಾಗಿರುವರು. ಧರ್ಮ ಶ್ರದ್ಧೆಯುಳ್ಳವರು. ಮಂಗಳೂರಿನ "ಗೀತಾ ಪ್ರಚಾರ ಸಂಘ"ದ ಸದಸ್ಯರು, ಮತ್ತು ಶ್ರೀ ವಿವೇಕಾನಂದ ಸಭೆಯ ಅಧ್ಯಕ್ಷರು ಸುಜೀರ್ಕಾರ್ ಮನೆತನದವರು. ಸುಶಿಕ್ಷಿತರು. ವಯಸ್ಸು ಸುಮಾರು 68.

ಶ್ರೀ। ಕೊಂಚಾಡಿ ಕೇಶವ ಶೆಣೈಯವರು. ಮಂಗಳೂರಿನ ಪ್ರಸಿದ್ಧ ಅಕ್ಕಿ ವ್ಯಾಪಾರಸ್ಥರು. ವಯಸ್ಸು ಸುಮಾರು 43. ಸುಶಿಕ್ಷಿತರು. ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘಕ್ಕೆ ಹಲವು ವರ್ಷಗಳಿಂದ ಕಾರ್ಯದರ್ಶಿಗಳಾಗಿದ್ದಾರೆ. ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವರು. ಮಂಗಳೂರು ಮರ್ಚೆಂಟ್ಸ್ ಎಸೋಸಿಯೇಶನಿನ ಕಾರ್ಯದರ್ಶಿಗಳು; ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರು. ಇವರು ಕಾರ್ಯದರ್ಶಿಗಳಾಗಿರುವ ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘವು 1923ರಲ್ಲಿ ಬಿ. ನರಸಿಂಹ ಮರ್ತ ಭಂಡಾರಿ ಮತ್ತು ಶ್ರೀ ವಿ. ಎಸ್. ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1936ರಿಂದ ಶ್ರೀ। ಶೆಣೈಯವರು ಅದರ ಕಾರ್ಯದರ್ಶಿಗಳಾಗಿರುತ್ತಾರೆ.

ಶ್ರೀ। ಎ. ಮಾಧವ ಪೈ, ಇವರು ಕೆನರಾ ಬ್ಯಾಂಕಿನ ಕಾರ್ಯದರ್ಶಿಗಳು. ಸುಶಿಕ್ಷಿತರು, (ಬಿ. ಎ. ಬಿ. ಎಲ್.) ಬ್ಯಾಂಕಿಂಗ್ ವಹಿವಾಟಿನಲ್ಲಿ ಅತ್ಯಂತ ನಿಪುಣರು. ವಿಚಕ್ಷಣತೆಯಿಂದ ಬೇಂಕಿನ ವ್ಯವಹಾರಗಳನ್ನು ನಡೆಸುತ್ತಿರುವರು. ವಯಸ್ಸು–42.



ಶ್ರೀ। ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರವರು. ಕಟಪಾಡಿಯ ಪ್ರಸಿದ್ಧ ಪಾಂಗಾಳ ನಾಯಕ ಮನೆತನದವರು. ಕಟಪಾಡಿಯ ಸುಪ್ರಸಿದ್ಧ ಆಯುರ್ವೇದೀಯ ಔಷಧಾಲಯವಾದ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಇದರಲ್ಲಿ ಕನ್ಸಲ್ಟಿಂಗ್ ಫಿಸೀಶಿಯನರಾಗಿದ್ದಾರೆ ಇವರ ವಯಸ್ಸು ಇನ್ನೂ 36. ಇಷ್ಟರಲ್ಲೇ ಇವರು ಹಲವು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸಿರುವರು. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯ ಸದಸ್ಯರು. ಪಾಂಗಾಳ್ ನಾಯಕ್ ಬೇಂಕಿನ ಡೈರೆಕ್ಟರರು. ಅಚಲ ಕೊಂಗ್ರೆಸ್ ಭಕ್ತರು. ಕಟಪಾಡಿಯ ಹಲವು ಸಾರ್ವಜನಿಕ ಕಾರ್ಯಗಳಲ್ಲಿ ಇವರ ಕೈವಾಡವಿದೆ.

ಶ್ರೀ। ವಿ. ಆರ್ ಕಾಮತ್ ಬಿ. ಎ, ಎಲ್. ಎಲ್. ಬಿ. ಇವರು, ನಮ್ಮ ಜಿಲ್ಲೆಯ ಪ್ರಥಮ ಬ್ಯಾಂಕಿಂಗ್ ಸಂಸ್ಥೆಯಾದ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನಿನ ಮೆನೇಜರರಾಗಿರುತ್ತಾರೆ. ಇವರ ಆಡಳಿತದಲ್ಲಿ ಬ್ಯಾಂಕು ಉತ್ಸಾಹದಿಂದ ಕೆಲಸ ಮಾಡುತ್ತ, ಪ್ರಗತಿಪಥದಲ್ಲಿ ಸಾಗಿದೆ.

ಶ್ರೀ। ಪಿ. ಕೇಶವ ನಾಯ್ಕರು. ಕಟಪಾಡಿ ಭುವನೇಂದ್ರ ಪ್ರೋಡಕ್ಟ್ಸ್‌ನ ಅಧ್ಯಕ್ಷರು. ಇವರ ವಯಸ್ಸು 62. ಇವರು 1939ರ ವರೆಗೆ, ಕಟಪಾಡಿ ಮತ್ತು ಆಸುಪಾಸಿನ ಹಳ್ಳಿಗಳ ಶಿಕ್ಷಣದ ಕುರಿತು ತುಂಬ ಶ್ರದ್ಧೆ ವಹಿಸಿ ಕೆಲಸ ಮಾಡುತ್ತಿದ್ದರು. ಕಟಪಾಡಿ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ಅಧ್ಯಕ್ಷರಾಗಿ ಆ ಶಾಲೆಗಾಗಿ ತುಂಬ ಶ್ರಮವಹಿಸಿದ್ದಾರೆ. ಪಾಂಗಾಳ ನಾಯಕ್ ಬೇಂಕಿನ ಅಧ್ಯಕ್ಷರಾಗಿರುವರು. ಜಾತಿ ಮುಖಂಡರಲ್ಲೊಬ್ಬರು.



ಶ್ರೀ। ಪಿ. ವೆಂಕಟ್ರಾಯ ನಾಯ್ಕರವರು. ಈವರು ಕಟಪಾಡಿಯ ಪಂಚಾಯತ ಬೋರ್ಡಿನ ಪ್ರೆಸಿಡೆಂಟರು. ಕಟಪಾಡಿಯ ಪ್ರಸಿದ್ಧ ಪಾಂಗಾಳ ನಾಯಕ ಮನೆತನದವರು. ಕಟಪಾಡಿಯಲ್ಲಿ ಸ್ಥಾಪಿತವಾಗಿರುವ ಕೈಮಗ್ಗದ ಜವುಳಿ ಸಂಬಂಧವಾದ ಎಚ್. ಐ. ಮತ್ತು ಎಸ್. ಎಸ್. ಏಜನ್ಸಿಸ್ ಲಿಮಿಟೆಡ್, ಇದರ ಮೇನೇಜಿಂಗ್ ಡೈರೆಕ್ಟರರು. ವಯಸ್ಸು 24. ಶಿಕ್ಷಣ ಬಿ. ಎಸ್. ಸಿ.



ಶ್ರೀ। ಕೊಚ್ಚಿಕಾರ ಪದ್ಮನಾಭಪೈ. ಬಿ. ಎ. ಇವರು ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಇದರ ಮೇನೇಜಿಂಗ್ ಡೈರೆಕ್ಟರರು. ನಮ್ಮ ಜಿಲ್ಲೆಯಲ್ಲಿ ವಿಮಾ ಕಾರ್ಯವು ಶೈಶವಾವಸ್ಥೆಯಲ್ಲಿರುವಾಗ, ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್–ಇದರ ಮೂಲಕ ವಿಮಾ ಕಾರ್ಯವನ್ನು ಹರಡಿ, ತುಂಬ ಜಾಗ್ರತಿಯನ್ನುಂಟು ಮಾಡಿರುವರು. ಮದರಾಸು ಆಧಿಪತ್ಯಕ್ಕೂ ಮತ್ತೆ ಕೆಲವು ಪ್ರಾಂತ್ಯಗಳಿಗೂ ಕೊಚ್ಚಿಕಾರ್ ಬಂಧುಗಳು ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಚೀಫ್ ಏಜಂಟರಾಗಿರುವರು. ಈ ವಿಮಾ ಕಂಪೆನಿಯು ಹೇಗೆ ಬಲಾಢ್ಯ ಸಂಸ್ಥೆಯೋ ಹಾಗೆಯೇ ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಇದು ಪ್ರತಿಷ್ಠಿತ ಸಂಸ್ಥೆಯಾಗಿದೆ.



ಶ್ರೀ। ಎಮ್. ಧರ್ಮರಾಜ ಅಧಿಕಾರಿ. ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಉಪಾಧ್ಯಕ್ಷರು ಕಾರ್ಕಳ ತಾಲೂಕಿನ ಮುನಿಯಾಲ ಎಂಬಲ್ಲಿ ಜಮೀನ್ದಾರರು. ಜೈನ ಸಮಾಜದ ಕುಲೀನ ಮನೆತನಕ್ಕೆ ಸೇರಿದವರು. ಸಾರ್ವಜನಿಕ ಕಾರ್ಯಗಳಲ್ಲಿ ಚಟುವಟಿಕೆಯಿಂದ ಭಾಗವಹಿಸುವವರು. ಉತ್ಸಾಹಿ ತರುಣರು.

ಶ್ರೀ। ಬಿ. ವೈಕುಂಠ ಬಾಳಿಗಾ, ಬಿ. ಎ. ಬಿ. ಎಲ್. ಇವರು ಮಂಗಳೂರಿನ ಸುಪ್ರಸಿದ್ಧ ವಕೀಲರು. ಬಂಟವಾಳದ ಪ್ರಸಿದ್ಧ ಬಾಳಿಗಾ ಮನೆತನದವರು. ವಯಸ್ಸು ಸುಮಾರು 42. ಪಿ. ಪಿ. ಸಿ. ಕಂಪೆನಿಯ ಚೆಯರ್ಮ್ಯಾನರಾಗಿ ದಕ್ಷತೆಯಿಂದ ಆ ಸ್ಥಾನದಲ್ಲಿ ತಮ್ಮ [illegible] ಕಾರ್ಯವನ್ನು ನಡೆಸಿಕೊಂಡಿದ್ದವರು. ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನಿನ ಡೈರೆಕ್ಟರರು. ಡಿಸ್ಟ್ರಿಕ್ಟ್ ಬೋರ್ಡು ಮೆಂಬರರು. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಕೊಂಗ್ರೆಸ್ ಪಕ್ಷದ ಲೀಡರರು ಉತ್ತಮ ಇಂಗ್ಲಿಷ್ ಲೇಖಕರು. ಡೆಟ್ ರಿಲೀಫ್ ಆಕ್ಟಿನ ಕುರಿತು ಉತ್ಕೃಷ್ಟ ಗ್ರಂಥ ಬರೆದಿರುತ್ತಾರೆ. ರಾಷ್ಟ್ರಾಭಿಮಾನಿಗಳು.



ಶ್ರೀ। ಪಿ. ನಾರಾಯಣ ಪ್ರಭುಗಳವರು–ಉಡುಪಿ ಪ್ರಭಾಕರ ಪ್ರೆಸ್ ಲಿಮಿಟೆಡ್ ಇದರ ಚೆಯರ್ಮ್ಯಾನರು. ಉಡುಪಿಯಲ್ಲಿ ಮುದ್ರಣ ಕಲೆಯನ್ನು ಸುಧಾರಿತ ರೀತಿಯಲ್ಲಿ ತಂದು ಪ್ರಚಾರಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಉಡುಪಿಯ ಪಂಚಾಯತ ಬೋರ್ಡು ಪ್ರೆಸಿಡೆಂಟರು. ಲಲಿತ ಕಲೆಯನ್ನೂ ಬರೆಹಗಾರರನ್ನೂ, ಪತ್ರಿಕಾ ಕರ್ತರನ್ನೂ ತುಂಬ ಪ್ರೋತ್ಸಾಹಿಸಿರುವರು. ಉಡುಪಿಯಲ್ಲಿ, ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಮುಖಂಡರಲ್ಲೊಬ್ಬರು. ಕೆಲವು ಧಾರ್ಮಿಕ ಗೀತೆಗಳನ್ನು ಬರೆದಿದ್ದಾರೆ. ಅನೇಕ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕರ್ಣಾಟಕದಲ್ಲೆಲ್ಲ ಪ್ರಚಾರದಲ್ಲಿರುವ, ಪದ್ಯ ರತ್ನಾಕರವನ್ನು ಶ್ರಮಪೂರ್ವಕ ಸಂಪಾದಿಸಿ ಪ್ರಕಟಿಸಿದವರು ಇವರು.

ಶ್ರೀ। ಎಮ್. ನಾರಾಯಣ ಪ್ರಭು–ಇವರು ಮಂಗಳೂರು ಪ್ರೆಸ್ಸಿನ ಮಾಲಕರು. ಬಾಲ್ಯದಿಂದಲೂ ಮುದ್ರಣ ಕಲೆಯಲ್ಲೇ ಇವರ ಅನುಭವ ಬೆಳೆದು ಬಂದಿದೆ. ಮಂಗಳೂರಿನ ಎರಡು ಪ್ರಸಿದ್ಧ ಮುದ್ರಣಾಲಯಗಳಲ್ಲಲ್ಲದೆ ಬೆಂಗಳೂರಿನಲ್ಲಿಯೂ ಛಾಪಖಾನೆಯ ಆಡಳಿತ ನೋಡಿದವರು. ಮಂಗಳೂರು ಪ್ರೆಸ್ಸನ್ನು ಸ್ಥಾಪಿಸಿ ಹತ್ತು ವರ್ಷಗಳು ದಾಟಿದುವು. ಧಾರ್ಮಿಕ ಅಂತಃಕರಣದವರು. ಮುದ್ರಣ ಕಲೆಗೆ ತಮ್ಮ ಅಮಿತ ಸೇವೆ ಸಲಿಸಿರುವರು; ಸಲಿಸುತ್ತಿರುವರು. ಅನೇಕ ಪತ್ರಿಕೆಗಳು ಜನ್ಮವೆತ್ತಲು ಸಹಾಯಕರಾದವರು. "ಪ್ರಭಾತ"ವು ಜನ್ಮವೆತ್ತಲು ಸಹಾಯಕರಾದವರೇ ಶ್ರೀ। ಪ್ರಭುಗಳವರು.

ಸಿಂಡಿಕೇಟಿನ ಶೇರುಗಳ ಕಂತುಗಳು

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಈ ಸಂಸ್ಥೆಯ ಪ್ರಾರಂಭದ ಮೂಲಧನವು ನೂರು ರೂಪಾಯಿಯ ಸಾವಿರ ಶೇರುಗಳನ್ನಾಗಿ ವಿಭಾಗಿಸಿದ ಒಂದು ಲಕ್ಷ ರೂಪಾಯಿಯಾಗಿತ್ತು. ಪ್ರಥಮದಲ್ಲಿ, ಒಂದು ಶೇರಿನಲ್ಲಿ ಬರೇ ಇಪ್ಪತ್ತು ರೂಪಾಯಿಗಳನ್ನು ಮುಂಗಡವಾಗಿ ಪಾವತಿಮಾಡಬೇಕಾಗಿತ್ತು. ಕ್ಷೇಮನಿಧಿಗೆ ಹೆಚ್ಚು ಗಮನ ಕೊಟ್ಟುದರಿಂದಲೂ, ಸಂಸ್ಥೆಯು ಹೆಚ್ಚು ಪ್ರಖ್ಯಾತಿಹೊಂದಿದುದರಿಂದಲೂ ಶೇರುಗಳ ಮೌಲ್ಯಗಳನ್ನು ಪ್ರತಿ ಸರ್ತಿ ನಿಶ್ಚಿತಗೊಳಿಸಲಾಯಿತು. ಮತ್ತು ಪ್ರವೇಶ ಧನಗಳ ವಿವರಗಳನ್ನು ಬಿಟ್ಟು, ಈ ಶೇರುಗಳನ್ನು ವಿಕ್ರಯಿಸಿದ ವಿವರಗಳನ್ನು ಈ ಕೆಳಗೆ ಕಾಣಿಸಿಯದೆ:—

ಶೇರುಗಳ ಸಂಖ್ಯೆ	ದರ ಕಂತು ಸಹಿತ	ಸಂಗ್ರಹವಾದ ಧನ	ಪಾವತಿ ಧನ
5 2	ರೂ. 20	ರೂ. 59,200	ರೂ. 11,840
118	,, 22	,, 11,800	,, 2,360
290	,, 24	,, 29,000	,, 5,800
1000		ರೂ. 1,00,000	ರೂ. 20,000

1933ರಲ್ಲಿ ಈ ಬೇಂಕು ನವೀನ ಒಂದು ವೇದಿಕೆಯ ಮೇಲೆ ಕಾಲಿಟ್ಟಿತು. ಆಗ ಶೇಕಡ 6ರ ಪ್ರಿಫರೆನ್ಸ್ ಶೇರುಗಳ ನಾಲ್ಕುಲಕ್ಷ ರೂಪಾಯಿಯ ಭಂಡವಾಳವನ್ನು ಬೇಂಕಿಗೆ ಸೇರಿಸಲಾಯಿತು ಈ ಶೇರುಗಳಲ್ಲಿ ಟೇಕ್ಸ್ ವಿರಹಿತವಾದ ಶೇಕಡ 6ರ ಡಿವಿಡೆಂಟಾಗಿ ಕೊಡಲ್ಪಡುವುದು. ಪ್ರತಿಯೊಂದು-ಶೇರಿನ ಮೊಬಲಗು ರೂ. 100 ಆಗಿತ್ತು ಮತ್ತು ಶೇರಿನ ಮೊಬಲಗನ್ನು ಒಂದೇ ಗಂಟಿನಲ್ಲಿ ಕೊಡಬೇಕಾಗಿತ್ತು. ಇವುಗಳನ್ನು ಈ ಕೆಳಗಿನಂತೆ ಮಾಡಲಾಗಿದೆ.

ಶೇರುಗಳ ಸಂಖ್ಯೆ	ದರ (ಕಂತು ಸಹಿತ)	ಸಂಗ್ರಹವಾದ ಧನ	ಪಾವತಿಯಾದ ಧನ
200	ರೂ. 100	ರೂ. 20,000	ರೂ. 20,000
1476	,, 101	,, 1,47,600	,, 1,47,600
229	,, 107	,, 22,900	,, 22,900
1	,, 120	,, 100	,, 100
1906		ರೂ. 1,90,600	ರೂ. 1,90,600

ಶೇರುಗಳ ಮುಂದಿನ ಮಾರಾಟವನ್ನು ನಿಲ್ಲಿಸಲಾಗಿದೆ.

1937ರಲ್ಲಿ, ಸಾಮಾನ್ಯ ಶೇರುಗಳಿಗೆ ಗಿರಾಕಿಗಳು ಬಂದುದರಿಂದ ಪುನಃ 5 ಲಕ್ಷ ರೂಪಾಯಿಗಳನ್ನು ಸೇರಿಸಲಾಯಿತು. ಮಹಾಜನರಿಂದ ಪ್ರತಿ ಶೇರಿಗೆ ರೂ. 35 ಮುಂಗಡವಾಗಿ ಪಡೆದು ಈ ಶೇರುಗಳನ್ನು ಅವರಿಗೆ ಮಾರಾಟ ಮಾಡಲಾಗಿದೆ. ರೂ.100ರ ಪ್ರತಿಯೊಂದು ಶೇರಿನಲ್ಲಿ ಪ್ರಥಮದಲ್ಲಿ ರೂ. 30ನ್ನು ಮುಂಗಡವಾಗಿ ಪಾವತಿ ಮಾಡಬೇಕಿತ್ತು. ಅನಂತರ ರೂ. 65ಕ್ಕೆ ಈ ಶೇರನ್ನು ವಿಕ್ರಯಿಸಲಾಯಿತು. ಪ್ರತಿ ಶೇರಿಗೆ ಪ್ರವೇಶಧನವಾಗಿ ರೂ. ಒಂದನ್ನು ಇದರೊಂದಿಗೆ ತೆರಬೇಕಿತ್ತು. ಈ ಎಲ್ಲಾ ಶೇರುಗಳು ಮಾರಾಟವಾಗಿವೆ. ಕೆಲವೇ ತಿಂಗಳುಗಳಲ್ಲಿ ರೂ. 100ರ ಶೇರುಗಳು ರೂ. 75ಕ್ಕೆ ಬದಲಾವಣೆ ಹೊಂದಿದುವು. ಅನಂತರ ವಾಣಿಜ್ಯಕ್ಷೇತ್ರದಲ್ಲಿ ಹಲವು ತೊಂದರೆಗಳು ತಲೆಯೆತ್ತಿದವು. ಬೇಂಕಿನ ಡೈರೆಕ್ಟರರು ಇವೆಲ್ಲವನ್ನೂ ನೀಗಾಡಿಸಿರುವರು; ಅದಲ್ಲ ಬದಲಾವಣೆಗಳನ್ನು ಎದುರಿಸಿದರು; ಸಂಸ್ಥೆಯ ಎಲ್ಲಾ ಶಾಖೆಗಳನ್ನೂ ಬಲಪಡಿಸಿದರು: ಉದ್ಯೋಗಸ್ಥರ ಮಂಡಳಿಯಲ್ಲಿ ಧೈರ್ಯವನ್ನು ತುಂಬಿಸಿದರು. ಎಲ್ಲಾ ಆಫೀಸುಗಳು ಕಾಲದ ಬದಲಾವಣೆಗೆ ತಕ್ಕಂತೆ ಕೆಲಸವನ್ನು ನಡೆಸತಕ್ಕಂಥವಾಗಿದ್ದುವು. ಅಲ್ಲದೆ ಬೇಂಕಿಗೆ ಹೆಚ್ಚಿನ ಮುನಾಫೆಯನ್ನು ತರುವುದಕ್ಕೂ ಯೋಗ್ಯವಾಗಿದ್ದುವು. ಈ ಬೇಂಕಿನ, ಹೆಚ್ಚು ಪರಿಮಾಣದ ಮೂಲಧನವೂ, ಕ್ಷೇಮನಿಧಿಯೂ, ಬೇಂಕಿನೊಡನೆ ವ್ಯವಹಾರ ನಡೆಸುವ ಮಹಾಜನರಲ್ಲಿ ಸಂರಕ್ಷತೆಯ ನಂಬಿಕೆಯನ್ನು ಹುಟ್ಟಿಸಲು ಸಹಾಯ ಮಾಡಿದೆ. ಮಹಾಜನರಿಗೆ ಬೇಂಕಿನ ವ್ಯವಹಾರಗಳ ವಿವರಗಳನ್ನು ಚೆನ್ನಾಗಿ ತಿಳಿಯಲು ಎಡೆಯಿರುವುದರಿಂದಲೂ, ಡಿವಿಡೆಂಡು ಕ್ರಮವಾಗಿ ಅವರಿಗೆ ಪಾವತಿಯಾಗುವುದರಿಂದಲೂ, ಶೇರುಗಳ ಬೆಲೆಗಳು ಪ್ರಗತಿ ಪಥಕ್ಕೆ ಬಂದುವು. 1940ರಲ್ಲಿ ರೂ. 55 ಶೇರುಗಳು ರೂ 77ಕ್ಕೆ ಬದಲಾವಣೆ ಹೊಂದಿದುವು.ರೂ. 65ರಿಂದ ರೂ. 60ರ ವರೆಗಿನ ಶೇರುಗಳನ್ನು ಪಡೆಯಲು ಹೆಚ್ಚು ಉಮೇದ್ವಾರರಿದ್ದರು; ಮಾರಾಟ ಮಾಡುವವರು. ಸ್ವಲ್ಪ ಜನರಿದ್ದರು. ಮಾರಾಟ ಮಾಡುವವರು ರೂ. 60ರ ಶೇರನ್ನು ರೂ. 76ಕ್ಕೆ ಮಾರಲು ಇಷ್ಟಪಡುತಿದ್ದರು. ಈ ಸಂದರ್ಭದಲ್ಲಿ ಇವನ್ನು ಪಡೆಯಲು ಹೆಚ್ಚು ಕುತೂಹಲ ಕಂಡುಬರಲಿಲ್ಲ. ರೂ. 77ರಿಂದ ರೂ. 80ರ ಬರೇ ಕೆಲವು ಶೇರುಗಳು ಮಾರಾಟಕ್ಕೆ ತಯಾರಾಗಿದ್ದುವು. ಸಂಸ್ಥೆಯನ್ನೂ, ಸಂಸ್ಥೆಯ ಕೆಲಸಗಳನ್ನೂ, ತಿಳಿದವರು, ಈ ಸಂದರ್ಭದಲ್ಲಿಯೂ, ಇದು ಸಂಭವಿಸಿದುದು ಒಳಿತಕ್ಕೆಂದೇ ಭಾವಿಸಿದರು.

ಶೇಕಡಾ 5ರಂತೆ, ಈ ಟೇಕ್ಸು ರಹಿತವಾದ ಕಮ್ಯುಲೇಟಿವ್ ಡಿವಿಡೆಂಡು ಕೊಡುವ ವ್ಯವಸ್ಥೆಯಿರುವ, ರೂ. 40 ಲಕ್ಷ ರೂಪಾಯಿಯ ಹೊಸ ಭಂಡವಾಳದಲ್ಲಿ 5 ಲಕ್ಷ ರೂಪಾಯಿಯ ಶೇರುಗಳು ವಿಕ್ರಿತವಾಗಿವೆ. ಮುಂದಿನ ಸರದಿಗೆ ಪ್ರಾರಂಭವಾಗಿದೆ. ಇತಿಹಾಸವು, ಹಿಂದೆ ನಡೆದ ಕೆಲವು ವಿಷಯಗಳನ್ನು ಪುನಃ ತೋರಿಸಲಿಕ್ಕಿದೆಯೆಂದು ತೋರುತ್ತಿದೆ. 1940ನೇ ಇಸವಿ ನವಂಬರ ತಿಂಗಳ ತಾ. 30ರಲ್ಲಿ ಸೇರಿದ ಡ್ಯಾರೆಕ್ಟರರು ಪ್ರತಿ 10 ರೂಪಾಯಿಯ ಶೇರುಗಳನ್ನು ಮತ್ತು ಅವುಗಳ ಅಪವರ್ತ್ಯಗಳನ್ನು ಮಾರುವಾಗ, ರೂ. ಒಂದನ್ನು ಮುಂಗಡವಾಗಿ ಪಡೆಯಬೇಕೆಂದು ನಿರ್ಧರಿಸಿರುವರು. ಅಂದರೆ ನೂರು ರೂಪಾಯಿಯ ಶೇರುಗಳನ್ನು ಮಾರುವಾಗ ಪ್ರವೇಶಧನ ಹೊರತು 101 ರೂ. ಪಡೆಯಬೇಕಾಯಿತು. ಈ ರೀತಿಯಲ್ಲಿ ವ್ಯಾಪಾರಕ್ಕೆ ಹಾಕಿದ ಹಣಕ್ಕೆ ಟೇಕ್ಸು ರಹಿತದ ಶೇಕಡಾ 5ರ ಕಮ್ಯುಲೇಟಿವ್ ಡಿವಿಡೆಂಡು ಸಿಕ್ಕುವುದು; ಸಾಮಾನ್ಯವಾದ ಶೇರುಗಳಿಂದಲೂ, ಶೇಕಡಾ 6ರ ಪ್ರಿಫರೆನ್ಸ್ ಇರುವ ಶೇರುಗಳಿಂದಲೂ ಶೇಕಡಾ, 12½ಯಿಂದ ಶೇಕಡಾ 15%ರ ವರೆಗೂ, ಶೇಕಡಾ 6ರಂತೆ ಪ್ರಿಫರೆನ್ಸ್ ಇರುವ ಶೇರುಗಳಿಗೆ 6%ರ ಡಿವಿಡೆಂಡು ದೊರೆಯುತ್ತದೆ. ಇಂತಹ ವ್ಯವಸ್ಥೆಯುಳ್ಳ ಈ ಸಂಸ್ಥೆಯ ವ್ಯಾಪಾರ ಧನದ ನೂರು ರೂಪಾಯಿಗಳಿಗೆ 112ರಿಂದ 116ರ ಬೆಲೆ ಬರಬಹುದು. ಇನ್ನು ಮುಂದಕ್ಕೆ ಡ್ಯಾರೆಕ್ಟರರ ಈ ಶೇರುಗಳ ಬೆಲೆಯನ್ನು 110ರೂ. ಯಾ 112ಕ್ಕೆ ಏರಿಸಬಹುದು. ಅಂತಹ ಸಂದರ್ಭದಲ್ಲಿ ಉಳಿದ ಶೇರುಗಳು ಮಾರಾಟವಾಗುವುದು ಒಂದು ಆಶ್ಚರ್ಯದ ಸಂಗತಿಯಾಗಲಾರದು. ಕಡಿಮೆ ಬೆಲೆಗೆ ಈ ಶೇರುಗಳನ್ನು ಪಡೆಯಲು ಒದಗಿಸಿಕೊಟ್ಟ ಸಂದರ್ಭವನ್ನು ಮಹಾಜನರು ಕಳೆದುಕೊಳ್ಳರು. ಅವರ ದೃಢತೆಗಳನ್ನು ಕಂಪನಗೊಳಿಸದ ವಿಷಯಗಳು ಸದಾ ಬೇಂಕಿನ ಸಹಾಯಕವಾಗಿಯೇ ಪರಿಣಮಿಸಿವೆ. 15 ವರುಷಕ್ಕಿಂತಲೂ, ಹೆಚ್ಚಿನ ಸಮಯದ ಇದರ ವಿಜಯವು ಯಾವುದಾದರೂ ಒಂದು ಪಾಠವನ್ನು ಕಲಿಸುವುದಿದ್ದರೆ ಅದು, ಅದರ ಧೋರಣೆಯು ಅಚಲವಾದುದೆಂದೂ, ಭದ್ರವಾದುದೆಂದೂ ನಂಬುಗೆಯದೆಂದೂ, ಹಣದ ಚಲಾವಣೆಗಳು ಮತ್ತು ಇತರ ಕಾರ್ಯಕಲಾಪಗಳು ಸಂಸ್ಥೆಗೆ ಲಾಭವನ್ನು ತರುತ್ತವೆಂಬುದೂ, ಆಡಳಿತವು ಅತೀ ನಂಬುಗೆಯದೆಂದೂ, ತಿಳಿಸುವುದು. ಮಹಾಜನರು ಈ ಬೇಂಕಿನೊಡನೆ ವ್ಯವಹಾರವನ್ನು ಬೆಳೆಸಲು ನಿಶ್ಚಯಿಸುವಾಗ ಇಂತಹ ವಿಷಯಗಳು ಬಹಳ ಸಹಾಯಕವಾಗಿರುತ್ತವೆ. ಬೆಳೆಯುತ್ತಿರುವ ನಂಬುಗೆಯು, ಪ್ರಕೃತ, ಬೇಂಕಿನ ಅಧಿಕಾರಿಗಳಲ್ಲಿರುವ ಸಹಕಾರವನ್ನು ಇನ್ನು ವೃದ್ಧಿಸುವುದು. ಬೆಳೆಯುತ್ತಿರುವ ಸಹಕಾರವು ಶೇರುಗಳ ಬೆಲೆಯನ್ನು ಏರಿಸುವುದು. ಆಗಾಗ ಬೇಂಕಿನ ಸ್ಥಾನವನ್ನು ಗೊತ್ತು ಮಾಡುವ ಕ್ರಮವಿದೆ; ಶೇರುಗಳ ಬೆಲೆಯನ್ನು ನಿಶ್ಚಯಿಸುವ ವಿಚಾರವು ಇದೆ. ಮಹಾಜನರು ಬಹುಮಂದಿ ತಮ್ಮ ಧನವನ್ನು ಲಾಭವಿಲ್ಲದೆ ಸುಮ್ಮನೆ ಸಂಗ್ರಹಮಾಡುವವರು ಏಕೆ ಅದನ್ನು ಬೇಂಕಿನ ವ್ಯವಹಾರದಲ್ಲಿ ಉಪಯೋಗಿಸಬಾರದು? ಇದು ಹೆಚ್ಚಿನ ಲಾಭವನ್ನು ಅವರಿಗೆ ತರುವುದು. ಸಂಸ್ಥೆಯು, ನಾಳೆಯೂ ನಾಡಿದ್ದೂ ಮುಟ್ಟಲಿರುವ ಗುರಿಯನ್ನು ಇಂದೇ ಮುಟ್ಟುವಂತೆ ಇದು ಸಹಾಯಕವಾಗುವುದು.

ಧರ್ಮಛತ್ರಗಳು

ಆಗ್ರಾ:— 5 ಧರ್ಮಛತ್ರಗಳಿವೆ. ಅಲ್ಲಹಾಬಾದ್:—24 ಧರ್ಮಛತ್ರಗಳು. ಕಾಶಿ:—35; ಕಲ್ಕತ್ತಾ:—10; ಕಾನ್ಪುರ:—26; ಡಿಲ್ಲಿ:—21; ಗಯಾ:—8; ಹರಿದ್ವಾರ—94; (ಇದಲ್ಲದೆ ಬಾಡಿಗೆ ಪಡೆವ 18 ಧರ್ಮಛತ್ರಗಳಿವೆ); ಲಕ್ನೋ:—10; ಮಿರತ್:—9: ಅಯೋಧ್ಯಾ:—13.

ಪುರಿ:—ಸುಪ್ರಸಿದ್ಧ ಕ್ಷೇತ್ರ. ಮದರಾಸು ಕಲ್ಕತ್ತಾ ಲೈನಿನಲ್ಲಿದೆ. ರಥೋತ್ಸವವು ಜಗತ್ಪ್ರಸಿದ್ಧವಾದುದು. ಈ ಸಮಾರಂಭದಲ್ಲಿ ಲಕ್ಷೋಪಲಕ್ಷ ಜನರು ಭಾಗವಹಿಸುವರು.

ದ್ವಾರಕೆ:—ಶ್ರೀ ಕೃಷ್ಣನ ಚರಿತ್ರವು ದ್ವಾರಕೆಯೊಂದಿಗೆ ಪೋಣಿಸಿರುವುದನ್ನು ಹಿಂದೂಗಳೆಲ್ಲ ಬಲ್ಲರು. ಯಾತ್ರಿಕರು ಉತ್ತರ ದೇಶಕ್ಕೆ ಹೋದಾಗ, ದ್ವಾರಕೆಯನ್ನು ಮರೆಯಲಾರರು.

ಮೈಸೂರು:—ಕರ್ಣಾಟಕದ ಕೇಂದ್ರದಂತಿದೆ. ಅರಸರು ಆಳುತ್ತಿರುವರು. ನೋಡತಕ್ಕ ನೋಟಗಳಲ್ಲಿ ಅರಮನೆ, ಮೃಗಾಲಯ, ವಿವಿಧ ಉಪವನಗಳು ಮೊದಲಾದುವು. ನಗರವು ಅತ್ಯಂತ ಸುಂದರವಿದೆ, ಆಧುನಿಕವಿದೆ.

ರಾಮೇಶ್ವರ:—ಮಹಾಕ್ಷೇತ್ರ. ರಾಮಾಯಣಕ್ಕೆ ಸಂಬಂಧಿಸಿದೆ. ಹಲವು ದೇವಾಲಯಗಳಿವೆ. ಸಮೀಪವೇ ಶ್ರೀರಾಮಚಂದ್ರನು ಕಟ್ಟಿಸಿದನೆನ್ನುವ ಸೇತುವೆಯಿದೆ. ಶ್ರೀ ಕಾಶಿ ಮಠವಿದೆ.

Rapid Survey of The Madras Act IV of 1938.

(By: Sri B. Vaikunta Baliga, B. A., B. L.)

"…. ……….a bold peasantry, their country's pride,
When once destroyed, can never be supplied."

—*Oliver Goldsmith.*

"Directly or indirecIty the prosperity of all sections of the people is dependant upon the economic well-being of the agriculturist His present deplorable plight is well known. Conciliation and other voluntary methods have failed and the adoption of the principle of compulsion has become necessary."

INTRODUCTION So said Sri C. R. Rajagopalachariar the then Premier. in introducing the legislation. On first impressions, it might look that this compulsory extinction of the debt without payment is wholly foreign to the notions of the Hindu jurisprudence Manu the great law giver of the Hindus. says in chapter 8, verses 47 to 49 as follows— Whenever a a creditor sues (before the King) for the recovery of money from a debtor, let him make the debtor pay the sum which the creditor proves to be due" (47). "By whatever means a creditor may be able to obtain possession of his property even by those means may he force the debtor and make him pay" (48). "By moral suasion. by suit of law. by artful management. or by customary proceedings a creditor may properly recover; and fifthly by force" (49). Cognate to this is the idea of the doctrine of "pious obligation" and saving the soul of a deceased ancestor from being condemned of perdition by non-payment of debt. Proverb has it that the debtor should nourish the idea of the doctrine of repaying the debt in his own lifetime without fail and, should it be not possible of achievement. then atleast in his next life time. even so, by becoming a slab of stone at the door step of the creditor. The antithesis between the foregoing two classes of ideas is attributable unquestionably and indubitably to the change of circumstances. From the prosperous days when the "Wealth of Ormus and of Ind" moved the poet to a paeyan of praise of olden times. the position has degenerated into one of abject poverty. Foreign domination with unexampled burdens of excessive taxation and enormous expenditure on unremunerative projects explain the change. The abject poverty is comparable in magnitude to the collosal ignorance of the masses of their own birthrights. The disease having set in, and settled. the application of the surgeon's knife was inevitable The Madras Agriicultrists' Relief Act has come none too soon. In the succeeding paragraphs, an attempt will be made to have a rapid survey of the provisions without trenching upon contraversial matters of details or minuteness.

Four words 'Madras Agriculturists' Relief Act' constitute the epitome of ideas that can be conveniently gathered from this peice of legislative enactment. Hammed in by limitations of constitutional disabilities, the act is made to be operative within the province of Madras. It cannot carry solace or relief to an agriculturist residing outside the province Even for an agriculturist who is residing within the province of Madras, it is a matter of considerable doubt whether relief could be granted in respect of a contract entered into by him outside the province Its provisions may not have operation outside the province so as to protect the agriculturist of the province from the extra provincial consequences of the contracts that he may enter into outside the province A local legislature of a province cannot validly make any laws so as to effect the rights and properties situate not only within the boundaries of that province, but also outside its boundaries. A decree obtained against an agriculturist in any court outside the Madras province may seek to ignore the provisions of this enactment. Remedy in this direction can only be sought by joint inter-provincial legislation through the agency of Federal legislature.

The word "Agriculturist" necessarily connotes intimate connection between a person and his growing of crops on land But to limit its scope to the actual tiller of the soil and the harvester of crops would make the object futile Therefore the scope should be one of including the whole chain of human agency that will be devoting the essential period of its time to agriculture Thus every person who has saleable interest in agricutural or horticultural land not being land situated within the Municipality or Cantonment. is made to answer the definition. Such land must be assessed to land revenue by Government or should be held free of tax under a grant binding upon the Government Yet another approach for expansion is made by including the holder of any interest in such land under a land holder It is made to include even a lessee from any of the class of persons mentioned above. Ex-propriatory legislation has always to be made to be limited by making the in-roads upon the rights of parties, reducing such encroachments to the minimum. So undeserving persons have to be eliminated out of the wide number that will answer the above definition The object being to afford relief to the agriculturist, a person who has a substantial income from other sources. be it a trade profession or calling, should not obtain the benefit at the expense of the legitimate rights of the creditor. Hence an assessee to income-tax for either of the two financial years ending 31st March 1938 is disqualified Payment of income tax may be to the Indian Exchequer or native state or foreign Government. Yet another door by which the hardship is eliminated is that a person who pays profession tax on a half yearly income of more than Rs' 300/— under the District Municipalities Act or certain local bodies of any native state. or under the Local Boards Act or a Panchayat, which was a union before the 26th August 1930. Then again, if a person has a appreciable income by way of ownership of house property composed of buildings within Municipal limits, he will be disqualified if the rental value thereof is more than Rs. 600/— per annum The legislature has justly sought to disqualify a person even where his income is mainly from agriculture, in the event of his having a sufficiently large estate. A person owning an estate (under the Madras Estate Land Act) on which any sum exceeding Rs' 500/— is paid as peshkush, or any sum exceeding Rs. 100/— is paid as quit rent. or a person who is a Jenmi under the Malabar Tenancy Act. who pays any sum exceeding Rs' 500/— revenue, is disqualified. Thus persons who are entitled to the benefits are reduced to the fair and inevitable minimum under the exigencies of the case. Institutions. Trusts and Corporations are not given the benefit of the relief under the Act. Balancing is done also by weeding out the rights or the shares of the debt of a non-agriculturist. where he is jointly or jointly and severally liable with an agriculturist. It is possible that there may have been other safeguards that may have been introduced to eliminate some other cases. resulting in great hardship. That will be the matter that ought to receive the attention at the next revision of the enactment.

Having dealt with the subject from the view point of the debtor, the next approach is made from the view point of the debts and the creditors. Certain classes of debts are placed wholly beyond the purview of the Act. Sound reasons of state have exempted the debts due to the Crown from the operation of the Act. Debts due to the Co-operative Societies—an important limb of Government which discharges the good functions

calculated to achieve the affording of relief to the poor agriculturist are also not made subject to the Act. Public Limited Liability companies with more than 50 members on the roll of share-holders and Scheduled Banks carry in themselves ingrediants which place them above cavil in dealing with debtors. Ruinous rates of interest are not charged by these. Yet as a sort of a check, only debts due to such companies which do not carry interest at a rate exceeding 9 per cent alone are also placed beyond the pale of the Act Among the class af creditors may be persons who may by peculiar circumstances be not in a position to lose their claims Thus debts due to a woman who did not own any other property on the 1st October 1937, provided the principal amount of the debt or debts due to her do not exceed Rs. 3000/-. is exempted from the operation of the Act. The minor circumstances that such a woman creditor owns few utensils, wearing apparels jewellery or such like personal belongings or a house in which she resides, would not constitute property which would disqualify her from claiming her debts to be protected. Debts due by an agriculturist on account of a breach of trust is made a liability regarding which he cannot obtain relief. The claims for maintenance are also on grounds of public policy placed outside the scope of the Act. Any wages due to an agriculturist or rural labourer are also exempted Then again, where a person has bought property and augmented his estate, any liability incurred by him and for which a charge is provided for under law, is not liable to be scaled down. Where growing of crops is done by the creditor mortgagee in possession of the property and where no rate of interest is stipulated, there again his rights are not encroached upon From this long list of exemptions, it can well be gathered that every rightly available idea has been pressed into service to safeguard and protect the just rights of the creditors. Despite all these endeavours, several cases that have cropped up before the courts have shown that some hardship is worked out in unmerited cases. This is inevitable.

The relief could be granted by wiping out debts in their entirety, or in proportionate parts. Therefore the ancient principle of Damdupat that a creditor should not any time receive more than twice the amount he has lent, is placed on the statute book. Where a loan has been in continued existence without the debtor being able to repay the debt, the relief is given by ripping open the transaction and ascertaining the cash advances made actually by the creditor Any inclusion of interest at various stages of of the existence of the debt into the head of principle is ascertained and excluded.

Having thus fixed the maximum limit to which a creditor can call upon the debtor to pay in respect of the advances at any time, yet another method is also employed to scale down the debt. The scheme behind the second principle is to divide the debts into two classes taking the land-mark of the world wide unprecedented depression of 1932 In respect of debts which have been incurred prior to 1-10-1932 all outstanding interest as on 1—10—1937 is wiped out. With regard to debts incurred after 1—10—1932 having regard to the fact that advances are subsequent to the period of depression, reasonable rate of interest at 5% is allowed. Interest will have to be calculated from the date of the debt, on claims falling under this category, at 5% per annum and all payments made should be appropriated towards discharge of interest so arrived at subject to the limitation that the creditor cannot be called upon to refund any part of the payment received by him; balance, if any, alone can be recovered. The Act fixes the maximum rate of interest payable by an agriculturist at 6¼% per annum and he is not liable to pay any interest on interest.

